REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು

[illegible]

ಸ್ಥಳದವರಿಗೆ ೩ ರೂ [illegible]

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨ನೇ ಜನವರಿ ೧೯೩೫ [ಸಂಚಿಕೆ ೩೫

ಶರೀರಸಂಪತ್ತು

[illegible]

...ಗಳು ವಿಷವಂತಾಗುವಷ್ಟು [illegible] ನವತರುಣಿಯರೂ ಆದ [illegible] ಇವನ [illegible] ಸಂಗಾವ ಪ್ರಸಂಗ [illegible] ಮುಂದೆ ಉಳಿದ ಸಂಪತ್ತುಗಳನ್ನು [illegible] ಯಾವನು ಶರೀರಸಂಪತ್ತನ್ನು [illegible] ಅವನಿಗೆ ಉಳಿದ ಸಂಪತ್ತು [illegible] ವದಿಲ್ಲ [illegible] ಬಲಶಾಲಿಯಾದವನು [illegible] ನಲ್ಲಿದ್ದರೂ ಭಯಪಡುವದಿಲ್ಲ. ಅವನಿಗೆ ಊಟದ ಪದಾರ್ಥಗಳೇನಿದ್ದರೂ ಅವುಗಳನ್ನು ಜೀರ್ಣಿಸಿ [illegible] 'ಅವನೇನು? ಕಲ್ಲು ತಿಂದು ದಕ್ಕಿಸಿಕೊಳ್ಳುವನು' ಎಂಬ ಹಳೆಯ ನುಡಿಯಲ್ಲಿಯೂ [illegible] ದೇಹದ [illegible] ಬೆಳೆಯಿಸುತ್ತಿದ್ದ [illegible] ಹೊಟ್ಟೆಯ ಹೊಲದಲ್ಲಿ [illegible] ಮಾಡುವನು. ಇಹಲೋಕದ ಸುಖಭೋಗಾಪೇಕ್ಷೆಗಳನ್ನು ಅಪೇಕ್ಷಿಸುವ ದೇಹವೆಂಬ ಕಬ್ಬಿಣಪೆಟ್ಟಿಗೆಯನ್ನು ಭದ್ರವಾಗಿಟ್ಟುಕೊಳ್ಳಬೇಕು. [illegible] (ರೋಗ) [illegible] ಆಕಸ್ಮಾತ್ ಅಗ್ನಿ (ಮೃತ್ಯು) ನಾರಾಯಣನಿಗೆ ಆಹುತಿಯಾಗುವ ಪ್ರಸಂಗ [illegible] ಒಳಗಿರುವ ಜೀವರತ್ನವನ್ನು ಯಮನು ಅಪಹರಿಸಲು ಬಾರದಷ್ಟು ದೇಹಸಂಪತ್ತನ್ನು ಹೆಚ್ಚಿಸಿಕೊಳ್ಳ[illegible] ದೇಹವನ್ನು [illegible] ರೋಗೋಪ[illegible] ಪ್ರಸನ್ನತೆ ಏಕೆ? [illegible]

[illegible]

ಶ್ರೀಮದ್ಭಗವದ್ಗೀತಾ

[illegible]

ಭಗವದ್ಗೀತೆಯು [illegible] ಪಾಂಡವರಿಗೂ ಕೌರವರಿಗೂ ನಡೆದ ಮಹಾ [illegible] ಯುದ್ಧಕಾಲದಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಬೋಧಿಸಿದ ವೇದಾಂತ [illegible] ಶ್ರೀ ಕೃಷ್ಣನು [illegible] ಮಾಡಲು [illegible] ವಿಶ್ವರೂಪವನ್ನು [illegible] ಅರ್ಜುನನಿಗೆ [illegible] ನಿಲ್ಲಿಸಿದನೆಂದು [illegible]

ಮಹಾತ್ಮನ ಅವತಾರವಾದ ಶ್ರೀ ವೇದವ್ಯಾಸರು [illegible] ವಿಷಯವನ್ನೇ ಶ್ರೀ ಕೃಷ್ಣನು [illegible] ಭಗವದ್ಗೀತೆ [illegible]

ಭಾರತದ [illegible] ಬೆಲೆ ಹೆಚ್ಚಿದ

[illegible] ೨೦೦೦ [illegible]

ಸುಭಾಸ ಚಂದ್ರಬೋಸರ ತಾಯಿಯ ಮರಣ

ಕಳೆದ [illegible] ರಾತ್ರಿ [illegible] ಗಂಟೆ [illegible] ಶ್ರೀ ಸುಭಾಸ್ ಚಂದ್ರಬೋಸರ ತಾಯಿಯವರಾದ ಶ್ರೀಮತಿ [illegible] ತಮ್ಮ ಸ್ವಗೃಹದಲ್ಲಿ [illegible] ಮೃತರು [illegible] ಶ್ರೀ ಶರಚ್ಚಂದ್ರ ಬೋಸ್ [illegible] ದೇಶಾಂತರ [illegible] ಶ್ರೀ ಸುಭಾಸ್ ಚಂದ್ರಬೋಸ್ ಡಾ॥ ಸುನೀಲಚಂದ್ರಬೋಸ ಮೊದಲಾದ [illegible] ಜನ ಗಂಡುಮಕ್ಕಳಿಂದ್ದಾರೆಂದು ತಿಳಿದುಬಂದಿದೆ.

ಮಹಾಮಾನ್ಯಶ್ರೀಲಕ್ಷ್ಮೀವಿಲಾಸ ಸನ್ನಿಧಾನದವರು [illegible] ನೂರಾರು ಗೋವುಗಳನ್ನು ದಾರಿಯಲ್ಲಿ ಕಂಡ ತಕ್ಷಣ ಅವುಗಳನ್ನು ವಧಿಸ[illegible] ಆಜ್ಞೆಮಾಡಿಸಿ ಅವುಗಳ ಪ್ರಾಣದಾನಮಾಡಿ, [illegible] ತಮ್ಮ ಸಹಾಯವನ್ನಿತ್ತು [illegible] ತಿಳಿದಿದೆ.

ಪಂಚಾಚಾರ್ಯಪ್ರಭಾ.

೧೯೪೪ನೆಯ ಜನವರಿ ತಾ|| ೩ನೇ ಸೋಮವಾರ

ಗುರೂಪದೇಶ.

ನಮ್ಮ ಚಿತ್ತವು ಕಾಮಕ್ರೋಧಾದಿದುರ್ಗುಣಗಳಿಂದಲೂ ಅವಿದ್ಯಾದಿಕ್ಲೇಶಗಳಿಂದಲೂ ಎಂದು ದೂಷಿತವಾಗಿರುವುದೋ ಅಂದೇ ದುಃಖರೂಪವಾದ ಸಂಸಾರದಲ್ಲಿ ಸಿಕ್ಕಿದ ಹಾಗಾಗುವುದು. ಕಾಮಕ್ರೋಧಾದಿದುರ್ಗುಣಗಳಿಂದ ಚಿತ್ತವು ಎಂದು ಬಿಡಲ್ಪಡುವುದೋ ಅಂದೇ ಮೋಕ್ಷವು ಸಿದ್ಧವಾಗುವುದು. ಈ ಅರ್ಥದಲ್ಲಿ "ರಾಗಾದಿಮಲಿನಂ ಚಿತ್ತಂ ಸಂಸಾರಸ್ತನ್ನಿಮಿತ್ತಕಃ । ಸಂಕ್ಷೇಪಾತ್ಸ್ಯಾದ್ಧಿ ಮೋಕ್ಷಃ" ಮೊದಲಾದ ಅನೇಕ ಉಕ್ತಿಗಳಿರುತ್ತವೆ. ಇದರಿಂದ ಬಂಧಕ್ಕಾಗಲಿ ಮೋಕ್ಷಕ್ಕಾಗಲಿ ನಮ್ಮ ನಮ್ಮ ಚಿತ್ತವೇ ಮೂಲಕಾರಣವೆಂದು ಸ್ಪಷ್ಟವಾಗುತ್ತದೆ. ಇಂಥ ಬಂಧಮೋಕ್ಷಗಳಿಗೆ ಹೇತುವಾದ ಚಿತ್ತವನ್ನು ಕಾಮಕ್ರೋಧಾದಿ ದುರ್ಗುಣಗಳು ಪುನಃ ಅಂಟದಂತೆ ಪರಿಶುದ್ಧಗೊಳಿಸಿಕೊಳ್ಳಲು ಯತ್ನಿಸುವುದೇ ಮಾನವನ ಮುಖ್ಯ ಧರ್ಮವಾಗಿರುತ್ತದೆ. ಒಂದು ಹಸಿ ಮಣ್ಣಿನ ಗಡ್ಡೆಯನ್ನು ನೀರಲ್ಲಿ ಹಾಕಿದರೆ ಅದು ಆ ಕ್ಷಣದಲ್ಲಿಯೇ ಮುಳುಗಿಕೊಳ್ಳುವುದಷ್ಟೆ! ಅದೇ ಮಣ್ಣನ್ನು ಕೊಡವನ್ನು ಮಾಡಿ ಬೆಂಕಿಯಲ್ಲಿ ಸಂಸ್ಕರಿಸಿದರೆ ಅದು ನೀರಲ್ಲಿ ಮುಳುಗದೆ ಹಾಗೂ ಕರಗದೆ ತೇಲಾಡುತ್ತಿರುವುದು. ಅಲ್ಲದೆ ಅದರಲ್ಲಿ ಹಿಂದಿನ ಜಡತ್ವಾದಿಗುಣಗಳು ಹೋಗಿಹೋಗಿ ವಿಲಕ್ಷಣವಾದ ಗುಣಗಳು ಉದಯಿಸುತ್ತವೆ. ಅಲ್ಲದೆ ಇಂಥ ಕೊಡದ ಸಹಾಯದಿಂದ ಅಪಾರವಾದ ನದಿಯನ್ನು ಸಹ ದಾಟಬಹುದು. ಇದರಂತೆ ನಮ್ಮ ಚಿತ್ತಕ್ಕೆ ಕಾಮಕ್ರೋಧಾದಿದುರ್ಗುಣಗಳು ಅಂಟಿಕೊಂಡಿರುವವರೆಗೆ ಮಣ್ಣಿನ ಉಂಡೆಯಂತೆ ಸಂಸಾರಪ್ರವಾಹದಲ್ಲಿ ಮುಳುಗಿ ಪ್ರಾಣಿಗಳು ವಿನಾಶವಾಗುತ್ತವೆ. ಇಂಥ ಮಲಿನವಾದ ಚಿತ್ತವನ್ನು ಗುರುವಿನ ಮೂಲಕ ದೀಕ್ಷೆಯೆಂಬ ಅಗ್ನಿಯಿಂದ ಸಂಸ್ಕರಿಸುವಂತೆ ಮಾಡಿಕೊಂಡು, ಜಡಭೂತವಾದ ಆ ರಾಗಾದಿದೋಷಗಳನ್ನು ದೂರಮಾಡಿಕೊಂಡರೆ ಆ ಚಿತ್ತವು ಪೂರ್ವಭಾವಿಯಾದ ದುಷ್ಟಗುಣ ಸಮೂಹದಿಂದ ದೂರವಾಗಿಯೂ, ಅಪೂರ್ವವಾದ ಸರ್ವಜ್ಞತ್ವಾದಿಗುಣಗಳಿಂದ ಯುಕ್ತವಾಗಿಯೂ, ಸಂಸಾರಸಾಗರದಲ್ಲಿ ಮುಳುಗದೆಯೂ ನಿತ್ಯಸೌಖ್ಯವನ್ನು ಪಡೆಯುವುದು.

ವೀರಶೈವ ಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರು ಜಡವಾಗಿರುವ ಚಿತ್ತಶಕ್ತಿಯನ್ನು ವಿಕಸನಗೊಳಿಸುವುದಕ್ಕಾಗಿಯೇ ದೀಕ್ಷೆಯೆಂಬ ಮೊದಲ ಸಂಸ್ಕಾರವಿಶೇಷವನ್ನು ಏರ್ಪಡಿಸಿರುತ್ತಾರೆ. ಗುರುಮುಖದಿಂದ ದೀಕ್ಷಾಸಂಸ್ಕಾರವನ್ನು ಪಡೆದು ಭಕ್ತ್ಯಾದಿಷಡಂಗಯೋಗಾಭ್ಯಾಸವನ್ನು ಮಾಡಿದವನಿಗೆ ಚಿತ್ತದಲ್ಲಿ ಬಹು ಕಾಲದಿಂದ ಅಂಟಿಕೊಂಡಿರುವ ಕಾಮಕ್ರೋಧಾದಿಮಲಗಳು ದೀಕ್ಷೆಯಿಂದ ಕತ್ತರಿಸಿ ನಾಶವಾಗುವಂತೆ ನಾಶೋನ್ಮುಖಗಳಾಗುವವು. ಎಲ್ಲಿಯವರೆಗೂ ಈ ಚಿತ್ತವು ಸಂಸ್ಕೃತವಾಗಿರುವುದಿಲ್ಲವೋ ಅಲ್ಲಿಯವರೆಗೂ ಆ ಚಿತ್ತವೆಂಬ ಭವ್ಯಮಂದಿರದಲ್ಲಿ ಪರಮಾತ್ಮನು ವಾಸಮಾಡುವುದಿಲ್ಲ. ಪರಮಾತ್ಮನಿಗೆ ಬದಲು ಶಿರಾವಶಗಳಂತಿರುವ ಕಾಮಕ್ರೋಧಾದಿಗಳು ಮನ್ಯಸಾಯಿಗಳಂತೆ ಹುಚ್ಚರಂತೆ ಕುಣಿದು ಕುಪ್ಪಳಿಸಿ ಕೊನೆಗೆ ತಾವೂ ನಾಶವಾಗುವುದಲ್ಲದೆ ಪರಮಾತ್ಮನ ಸುಂದರವಾದ ಮನೆಯನ್ನು ಸಹ ಹಾಳುಮಾಡಿಬಿಡುವವು. ಜೀವರು ಶಿವನ ಅಂಶಭೂತರಾಗಿದ್ದರೂ ಅನಾದಿಮಲಗಳು ಈ ಜೀವರನ್ನು ಆಕ್ರಮಿಸಿದ್ದರಿಂದ ಜೀವರ ಸರ್ವಜ್ಞತ್ವಾದಿಶಿವಸದ್ಗುಣಗಳು ಮರೆಯಾಗಿ ಸಾಂಸಾರಿಕಗಳಾದ ಹೀನಗುಣಗಳು ತಲೆದೋರಿ ಜೀವರು ಮುಕ್ತಿಗೆ ಬದಲು ದುಃಖವನ್ನೇ ಅನುಭವಿಸುತ್ತಿರುವರು.

ಇಂಥ ಆವರಣವನ್ನು ಛೇದಿಸಬೇಕಾದರೆ ಗುರುವೇ ಮುಖ್ಯೋಪಾಯಭೂತನಾಗಿರುತ್ತಾನೆ. ಲೋಕದಲ್ಲಿ ಒಂದು ಪಕ್ಷಿಯ ಮರಿಯು ತನ್ನ ತಾಯಿತಂದೆಗಳ ಸಮಾಪದಲ್ಲಿರುವವರೆಗೂ ಸುಖವಾಗಿದ್ದು ಅಕಸ್ಮಾತ್ತಾಗಿ ತಾಯಿತಂದೆಗಳನ್ನು ಬಿಟ್ಟು ಭೂಮಿಗೆ ಇಳಿದು ಮತ್ತೊಬ್ಬ ಬಲೆಯೊಳಗೆ ಸಿಕ್ಕಿ ನರಳುತ್ತಿರುವ ಸಮಯದಲ್ಲಿ ದಯಾಳುವಾದ ಪಥಿಕನು ಆ ಬಲೆಯನ್ನು ಕತ್ತರಿಸಿ ಮರಿಯನ್ನು ಬಿಡುಗಡೆಮಾಡಲು ಅದು ತನ್ನ ತಾಯಿತಂದೆಗಳನ್ನು ಸೇರಿ ಮತ್ತೆ ಸುಖಿಸುವಂತೆ, ಶಿವಶಕ್ತಿಗಳೆಂಬ ತಮ್ಮ ತಾಯಿತಂದೆಗಳ ಬಳಿಯಲ್ಲಿ ಸುಖವಾಗಿದ್ದ ಜೀವರು ಒಂದಾನೊಂದು ಸಮಯದಲ್ಲಿ ಆ ಪವಿತ್ರ ಶಿವನ ಸ್ಥಾನದಿಂದ ಚ್ಯುತರಾಗಿ ಈ ಚಿತ್ತವೆಂಬ ಬಲೆಯೊಳಗೆ ಸಿಕ್ಕಿಬಿದ್ದು ಅನೇಕ ಕಾಮಕ್ರೋಧಾದಿಗಳೆಂಬ ಮುಳ್ಳುಗಳಿಂದ ಚುಚ್ಚಲ್ಪಟ್ಟು ತಮ್ಮ ಪೂರ್ವಸ್ಥಿತಿಯನ್ನು ಕುರಿತು ರೋಧಿಸುತ್ತಿರುವ ಈ ಹೀನಜೀವರನ್ನು ನೋಡಿ ಮಹಾದಯಾಳುವಾದ ಶ್ರೀಗುರುವು ಶಿವದೀಕ್ಷೆಯೆಂಬ ಆಯುಧದ ಸಾಧನದಿಂದ ಮಲಿನವಾದ ಚಿತ್ತವೆಂಬ ಬಲೆಯನ್ನು ಕತ್ತರಿಸುತ್ತಾನೆ. ಅಲ್ಲಿಗೆ ಬಾಧೆಯು ಸ್ವಲ್ಪ ಕಡಿಮೆಯಾಗಿ ಗುರುವಿನ ಹೇಳಿಕೆಯಂತೆ ಭಕ್ತ್ಯಾದಿಷಡಂಗಯೋಗಾಭ್ಯಾಸವನ್ನು ಮಾಡಿ ಎಂದಿನಂತೆ ತನ್ನ ತಾಯಿತಂದೆಗಳಾದ ಶಿವಶಕ್ತಿಗಳಲ್ಲಿ ಸೇರಿ ಸುಖಿಸುವರು. ಇದರಿಂದ ರೆಕ್ಕೆಗಳು ಅಧೋಮುಖಗಳಾದುದರಿಂದ ಪಕ್ಷಿಯು ಮುಕ್ತಿಭಾಗದಂತೆಯೂ, ಊರ್ಧ್ವಮುಖಗಳಾದುದರಿಂದ ಸುಖಕ್ಕಾಸ್ಪದವಾದಂತೆಯೂ, ಜೀವನು ಕೀಳುದರ್ಜೆಯನ್ನು ಅನುಭವಿಸುವುದಕ್ಕಾಗಲಿ ಮೇಲುದರ್ಜೆಯನ್ನು ಅನುಭವಿಸುವುದಕ್ಕಾಗಲಿ ಚಿತ್ತವೇ ಕಾರಣವಾಗಿದೆ. ಚಿತ್ತದಲ್ಲಿ ರಾಗಾದಿದೋಷಗಳು ಹುಟ್ಟಿದರೆ ಜೀವನು ಕೆಳಗೆ ಬೀಳುವನು. ದೀಕ್ಷಾಸಂಸ್ಕಾರದಿಂದ ಪರಿಶುದ್ಧಿಗೊಂಡು ಭಕ್ತ್ಯಾದಿಷಡಂಗಯೋಗಾಭ್ಯಾಸಬಲದಿಂದ ಆ ರಾಗಾದಿದೋಷಗಳನ್ನು ಪರಿಹರಿಸಿಕೊಂಡರೆ ಮೇಲಕ್ಕೇರುವನು. ಇಂತಹ ಉತ್ತಮಸ್ಥಿತಿಯನ್ನು ಹೊಂದಬೇಕಾದರೆ ಪ್ರಥಮತಃ ಚಿತ್ತದಲ್ಲಿ ಅಂಟಿಕೊಂಡಿರುವ ಕಾಮಕ್ರೋಧಾದಿಗಳು ನಷ್ಟವಾಗಬೇಕು. ಹೀಗೆ ಬಹುಕಾಲದಿಂದ ಬೆಳೆದುಕೊಂಡು ಬಂದಿರುವ ಕಾಮಕ್ರೋಧಾದಿ ದುರ್ಗುಣಗಳು ನಷ್ಟವಾಗಬೇಕಾದರೆ ಗುರೂಪಸದನವನ್ನು ಮಾಡಿ ದೀಕ್ಷಾಸಂಸ್ಕಾರವನ್ನು ಪಡೆದು ಮುಂದೆ ಅಭ್ಯಾಸಮಾಡುತ್ತ ಹೋಗಬೇಕು. ಹೀಗೆ ಗುರುವಿನ ಆಜ್ಞೆಯಂತೆ ಷಡಂಗಯೋಗಾಭ್ಯಾಸವನ್ನು ಮಾಡುವುದರಿಂದ ಬಹಿರ್ಮುಖವಾಗಿ ಹರಿಯುವ ಇಂದ್ರಿಯ ವ್ಯಾಪಾರವೆಲ್ಲವೂ ಅಂತರ್ಮುಖವಾಗಿ ಪರಮಾತ್ಮನ ಅಭಿಮುಖವಾಗುವದು. ಆಗ ಆತ್ಮನು ಗಟ್ಟಿಗೊಂಡು ಎಂಥ ವಿಷಯಸನ್ನಿಕರ್ಷವಿದ್ದರೂ ಮೇರುಪರ್ವತದಂತೆ ನಿಶ್ಚಂಚಲಭಾವವನ್ನು ಪಡೆಯುವನು. ಹಾಗಿಲ್ಲದೆ ಗುರುವಿನಿಂದ ಸಂಸ್ಕಾರವನ್ನು ಪಡೆಯದೆ ಮನೋನಿಗ್ರಹಸಾಧಕವಾದ ಗೂಢವೃತ್ತಿಯನ್ನವಲಂಬಿಸದೆ ಮಹಾಮಂತ್ರರಹಸ್ಯವನ್ನು ತಿಳಿಯದೆ ಭಕ್ತ್ಯಾದ್ಯೈಕ್ಯಾಂತವಾದ ಷಡಂಗಾಭ್ಯಾಸವನ್ನು ಮಾಡದೆ ಆತ್ಮನ ಮನನವನ್ನು ಮಾಡಲು ಯಾರಿಂದಲೂ ಶಕ್ಯವಿಲ್ಲ. ಹಾಗೆ ಗುರುವಿನುಪದೇಶವಿಲ್ಲದೆ ಪ್ರಯತ್ನಪಟ್ಟರೂ ಅದು ಮೇಲಕ್ಕೆಸೆದ ಮಣ್ಣಿನ ಹೆಂಟೆಯಂತೆ ಕೆಳಗೆ ಬಿದ್ದು ವಿನಾಶವಾಗುವುದು.

ಗುರೂಪದೇಶವಿಲ್ಲದೆ ಮಾನವನು ತನ್ನ ಹೀನವೃತ್ತಿಯನ್ನು ತಪ್ಪಿಸಿಕೊಳ್ಳಲಾರನೆಂಬ ವಿಷಯಕ್ಕೆ "ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ" ಎಂಬ ಮುಂಡಕಶ್ರುತಿಯೇ ಪ್ರಮಾಣವಾಗಿರುವುದಲ್ಲದೆ ಅನಾದಿಕಾಲದಿಂದಲೂ ಸಂಪ್ರದಾಯವು ಬಂದಿರುವುದು. ಹೀಗಿದ್ದರೂ ಕೆಲಜನ ಅವಿವೇಕಿಗಳು ಆತ್ಮೋತ್ಕರ್ಷೇಚ್ಛೆಯಿಂದ ಸ್ವೇಚ್ಛಾಚಾರಿಗಳಾಗಿ ಶಾಸ್ತ್ರಕ್ಕೂ ಅನಾದಿ ಸಿದ್ಧಸಂಪ್ರದಾಯಕ್ಕೂ ಹೊರತಾದ ಆ ಗುರುಗಳೇಕೆ ಬೇಕು? ನಾವು ಗುರುಗಳಾಗಲಿಕ್ಕೆ ಬರುವುದಿಲ್ಲವೇನು? ನಾವೇಕೆ ಮಂತ್ರೋಪದೇಶವನ್ನು ಮಾಡಬಾರದು? ಎಂದು ಬಡಬಡಿಸುತ್ತ ಶಾಸ್ತ್ರಕಾರರಿಗಿಂತಲೂ ಹೆಚ್ಚಾಗಿ ವರ್ತಿಸುತ್ತಿರುವರು. ಅವರ ಮಂಕುತನದ ಪ್ರಭಾವವನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ. ಮಂತ್ರೋಪದೇಶವನ್ನಾಗಲಿ, ಬ್ರಹ್ಮವಿದ್ಯೋಪದೇಶವನ್ನಾಗಲಿ ಮಾಡಲು ಗುರುಸಂಪ್ರದಾಯಪ್ರವರ್ತಕರಾದ ಗುರುವು ಸಮರ್ಥನಾದಾನಲ್ಲದೆ ಬೇರೆ ಯಾರೂ ಎಂದೂ ಸಮರ್ಥರಾಗಲಾರರು. ಒಂದು ವೇಳೆ ಆ ಮೂಢರು ಗುರುವಿನಂತೆ ನಟಿಸಿದರೆ ಅವರು ತಿಂಗಳ ಬೆಳಕನ್ನು ಧರಿಸಿಕೊಂಡ ಕತ್ತಲಿನಂತೆ ಸಮನಾಗದೆ ಅಲ್ಲದೆ ಮುಂದೆ ಭಯಂಕರವಾದ ನರಕಯಾತನೆಯನ್ನನುಭವಿಸುವರು. ಇದೇ ಧರ್ಮಶಾಸ್ತ್ರದ ಸಿದ್ಧಾಂತವು. ಈ ವಿಷಯವನ್ನು ನವೀನಶಾಸ್ತ್ರಕರು ತಿಳಿದು ಆ ಮಾರ್ಗದಲ್ಲಿ ಪ್ರವೇಶಿಸದೆ ಅನಾದಿಸಂಸಿದ್ಧವಾಗಿ ಬಂದ ಕುಲಗುರುಗಳಿಂದ ಮಹೋಪದೇಶವನ್ನು ಪಡೆದು ಜಗದಾಚಾರ್ಯರ ಕೃಪೆಗೆ ಪಾತ್ರರಾಗಿ ಧನ್ಯರಾಗಬೇಕೆಂದು ಹಾರೈಸುತ್ತೇವೆ.

ಯುದ್ಧವಾರ್ತೆ.

ಸಾರ್ಕ್ ದ್ವೀಪದ ಮೇಲೆ ಮುತ್ತಿಗೆ

ಬ್ರಿಟಿಷ್ ಯೋಧರು ಇಂಗ್ಲಿಷ್ ಕಾಲುವೆಯಲ್ಲಿರುವ ಸಾರ್ಕ್ ದ್ವೀಪದಲ್ಲಿ ಬಂದಿಳಿಯಲು ಯತ್ನಿಸಿದರೆಂದು ಫ್ರಾನ್ಸಿಗೆ ಮುತ್ತಿಗೆ ಹಾಕಲು ಈ ದ್ವೀಪ ತುಂಬಾ ಸಹಾಯಕವಾಗುವುದೆಂದೂ ಹೇಳಲಾಗಿದೆ.

ಸ್ಪೈಯಿನಲ್ಲಿ ರಾಜಕೀಯ ಬಂದಿಗಳ ಬಿಡುಗಡೆ

ಹಲವು ವರಷ್ಟುಗಳ ಮೇಲೆ ಸ್ಪೈಯಿನಿನ ೧೩೬೩ ಮಂದಿ ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಲಾಗಿದೆ ಮರಣದಂಡನೆಗೆ ಗುರಿಯಾಗಿದ್ದ ೧೦೧ ಜನರನ್ನು ಜ|| ಫ್ರಾಂಕೋರವರು ಕ್ರಿಸ್‌ಮಸ್ ದಿನ ಕ್ಷಮಿಸಿದರು.

ಅಮೆರಿಕದ ಶಸ್ತ್ರಬಲ ಹೆಚ್ಚಿದೆ

ವಿಮಾನಗಳನ್ನು ಹೊರುವಂತಹ ನೌಕೆಗಳು ಈಗ ೪೨ ಕ್ಕಿಂತ ಹೆಚ್ಚಾಗಿ ಅಮೇರಿಕದ ನೌಕಾ ಪಡೆಯಲ್ಲಿ ಇವೆಯೆಂದು ಕೆ|| ನಾಕ್ಸ್‌ರವರು ಸುದ್ದಿಗಾರರ ಸಭೆಯಲ್ಲಿ ತಿಳಿಸಿದರು. ಹೊಸ ಅಸ್ತ್ರಗಳನ್ನು ತಯಾರಿಸುವುದರಲ್ಲಿ ಸಹ ಅಮೇರಿಕನ್ ನೌಕಾ ದಳವು ಮುಂದುವರಿದಿದೆ ಎಂದರು.

ಜರ್ಮನಿಯ ಸಿದ್ಧತೆ

ಮಾ|| ರಾಮೆಲ್ಲರು ಮಾ|| ರನ್‌ಸ್ಟೆಡ್‌ರವರೊಡನೆ ದೀರ್ಘವಾಗಿ ಮಾತುಕತೆ ನಡೆಸಿದರು. ಪಶ್ಚಿಮ ಯೂರೋಪಿನಲ್ಲಿ ದಂಡಯಾತ್ರೆಯನ್ನೆದುರಿಸಲು ಸಿದ್ಧತೆಯೆಲ್ಲ ಸಂಪೂರ್ಣವಾಗಿದೆಯೆಂಬುದನ್ನವರು ಮನಗಂಡರು ಅಲ್ಲಿನ ಮಿಲಿಟರಿ ಏರ್ಪಾಟುಗಳೆಲ್ಲ ಬಹಳ ಫಲದಾಯಕ ರೀತಿಯಲ್ಲಿ ಕೆಲಸ ಮಾಡುವಂತೆ ಮಾಡಲಾಗಿದೆ. ಸ್ಥಳೀಯ ಕಮ್ಯಾಂಡರುಗಳೊಡನೆ ಜ|| ರಾಮೆಲ್ಲರು ಚರ್ಚೆ ನಡೆಸಿದರೆಂದು ಹೇಳಲಾಗಿದೆ.

ಜರ್ಮನ್ ನೌಕೆ ಮುಳುಗಿತು

ಉತ್ತರ ಕೇಪ್ ಬಳಿ ಜರ್ಮನ್ ಸಂಗ್ರಾಮ ನೌಕೆಯಾದ ಸ್ಚಾರ್ನ್ ಹಾರ್ಸ್ಟ್ ಎಂಬುದನ್ನು ಮುಳುಗಿಸಲಾಯಿತು. ಇದು ಜರ್ಮನ್ ಸಂಗ್ರಾಮ ನೌಕೆಗಳಲ್ಲೆಲ್ಲ ಸುಪ್ರಸಿದ್ಧವಾದುದು. ೧೯೩೬ ರಲ್ಲಿ ಕಟ್ಟಲಾಗಿತ್ತು ಅದರ ತೂಕ ೨೬,೦೦೦ ಟನ್. ನಾವಿಕರ ಸಂಖ್ಯೆ ೧೪೬೧. ಹನ್ನೊಂದು ಅಂಗುಲ ವ್ಯಾಸದ ೯ ಫಿರಂಗಿಗಳೂ, ಐದೂಮುಕ್ಕಾಲು ಅಂಗುಲ ವ್ಯಾಸದ ೧೨ ಫಿರಂಗಿಗಳೂ ಇನ್ನೂ ಅನೇಕ ಸಣ್ಣ ಫಿರಂಗಿಗಳೂ ಅದರಲ್ಲಿದ್ದವು.

ರಷ್ಯನರು ರೈಲ್ವೆ ಮಾರ್ಗವನ್ನು ಕತ್ತರಿಸಿದ್ದಾರೆ

ಕೊರೋಸ್ಟಿಷೇವ್ ನಗರವನ್ನು ರಷ್ಯನರು ವಶಪಡಿಸಿಕೊಂಡಿದ್ದಾರೆ. ಕೈವ್‌ಪ್ರಾಂತದಲ್ಲಿರುವ ಜರ್ಮನ್ ಸೇನೆಯ ಅವಸ್ಥೆ ಶೋಚನೀಯ. ಕೊರೋಸ್ಟೆನ್‌ಗೆ ಹೋಗುವ ಮುಖ್ಯ ರೈಲ್ವೆ ಮಾರ್ಗವನ್ನು ಕತ್ತರಿಸಿದ್ದಾರೆ. ಆಕ್ರಮಣವನ್ನು ಪೂರ್ಣಗೊಳಿಸಲು ರಷ್ಯನರು ಮುಂದೆ ನುಗ್ಗುತ್ತಿದ್ದಾರೆ. ನಾಜಿಗಳು ಬರಿ ತಪ್ಪಿಸಿಕೊಂಡು ಹೋಗಲು ಇರುವ ಒಂದು ಮಾರ್ಗವೂ ಮುಚ್ಚಿಹೋಗುವ ಹಾಗಿದೆ.

ಬ್ರಿಟಿಷ್ ಹಡಗುಗಳು ರಷ್ಯಾ ತಲಪಿದವು

ಬ್ರಿಟಿಷ್ ಸಾಮಾನು ಹಡಗುಗಳ ಸಮೂಹವೊಂದು ರಷ್ಯಕ್ಕೆ ತೆರಳುತ್ತಿದ್ದಾಗ ತುಂಬಾ ನಷ್ಟವುಂಟುಮಾಡ ಲಾಯಿತೆಂಬುದಾಗಿ ಜರ್ಮನರು ತಿಳಿಸಿರುವುದು ನಿಜ ವಲ್ಲ. ಸಾಮಾನು ಹಡಗುಗಳಿಗೆ ಸ್ವಲ್ಪವೂ ನಷ್ಟವಾಗ ಲಿಲ್ಲ. ಎಲ್ಲವೂ ಸುರಕ್ಷಿತವಾಗಿ ರಷ್ಯಕ್ಕೆ ತಲುಪಿದವೆಂದು ತಿಳಿಯುಬಂದಿರುತ್ತದೆ.

ಲೆಬಾನನ್ನಿಗೆ ಅಧಿಕಾರ ವರ್ಗ

ಸಿರಿಯಾ ಮತ್ತು ಲೆಬಾನನ್ ಸರಕಾರಗಳೊಡನೆ ಜ|| ಕ್ಯಾಟ್ರೌಕ್ಸರವರು ಒಂದು ಒಪ್ಪಂದ ಮಾಡಿ ಕೊಂಡರು. ಇದುವರೆಗೆ ಮ್ಯಾಂಡೇಟ್ ಅಧಿಕಾರ ಹೊಂದಿದ್ದ ಫ್ರೆಂಚರು ಈ ಎರಡು ದೇಶಗಳ ವಿಚಾರದಲ್ಲಿ ಇಟ್ಟುಕೊಂಡಿದ್ದ ಆಡಳಿತಾಧಿಕಾರಗಳನ್ನೆಲ್ಲ ಆಯಾ ಸರಕಾರಗಳಿಗೆ ವಹಿಸಿ ಕೊಟ್ಟಿವೆ. ಜನವರಿ ೧ರಲ್ಲಿ ಈ ಅಧಿಕಾರ ವರ್ಗ ನಡೆಯಲಿದೆ.

ರ್‍ಹೋಡ್ಸ್ ಕಡೆಗೆ ನಾಜಿ ಸೇನೆ ಧಾವಿಸುತ್ತಿದೆ

ರ್‍ಹೋಡ್ಸ್ ದ್ವೀಪಕ್ಕೆ ಜರ್ಮನರು ಬಹಳ ಆತುರ ದಿಂದ ಸೈನಿಕರನ್ನು ಕಳಿಸುತ್ತಿದ್ದಾರೆಂಬುದಾಗಿ ಇಲ್ಲಿಗೆ ಸುದ್ದಿ ಬಂದಿದೆ. ಹಡಗಿನ ಅನಾನುಕೂಲದಿಂದ ವಿಮಾನ ಗಳ ಮೂಲಕ ಆ ದ್ವೀಪಕ್ಕೆ ಸಂಗ್ರಾಮ ವಸ್ತುಗಳನ್ನು ಸಾಗಿಸುತ್ತಿರಲಾಗಿದೆ. ಅಲ್ಲಿ ಈಗ ೧೦,೦೦೦ ನಾಜಿ ಯೋಧರಿದ್ದಾರೆಂದು ಅಂದಾಜು ಮಾಡಲಾಗಿದೆ. ಅಲ್ಲಿ ಈಗಲೂ ೮೦೦೦ ಇಟಲಿಯನರು ಬಂಧನದಲ್ಲೇ ಇದ್ದಾರೆ.

ಜಪಾನ್ ವಿಮಾನಗಳ ನಾಶ

ಡಿಸೆಂಬರ್ ೨೭ನೇ ತಾ|| ದಿನ ಜಪಾನ್ ಬಾಂಬರು ಗಳೂ ಮತ್ತು ಫೈಟರುಗಳೂ ಚಿತ್ತಗಾಂಗ್ ಕ್ಷೇತ್ರದ ಮೇಲೆ ಮುತ್ತಿಗೆ ನಡೆಸಲು ಬಂದಾಗ ನಮ್ಮ ಫೈಟರು ಗಳು ಅವುಗಳನ್ನು ಎದುರಿಸಿ ಐದನ್ನು ಕೆಡವಿದವು. ಶತ್ರುವಿಮಾನಗಳು ತಂದಿದ್ದ ಬಾಂಬುಗಳನ್ನೆಲ್ಲ ಚಿತ್ತ ಗಾಂಗ್ ಕ್ಷೇತ್ರದಲ್ಲಿ ಹಾಕಿದವು. ಆದರೆ ಮಿಲಿಟರಿ ಸ್ಥಾನವಾವುದಕ್ಕೂ ಹಾನಿ ಆಗಲಿಲ್ಲ. ಎರಡು ಬಾಂಬರು ಗಳನ್ನು ಚಿತ್ತಗಾಂಗ್ ಆಗ್ನೇಯದಲ್ಲಿ ಗುಂಡಿನಿಂದ ಹೊಡೆದು ಕೆಡವಲಾಯಿತು. ಇನ್ನೊಂದು ಬಾಂಬರು ಎರಡು ಫೈಟರುಗಳೊಡನೆ ನಮ್ಮ ವಶಕ್ಕೆ ಉರುಳಿತು ಎಂದು ಹೇಳಲಾಗಿದೆ.

ಫಿನ್‌ಲೆಂಡಿನಲ್ಲಿ ಕಿಡಿ ಕೆದರುತ್ತಿದೆ

ಫಿನ್‌ಲೆಂಡಿನ ಇಂಗ್ಲೀಷ್ ಸುದ್ದಿಗಾರರು, ಈ ದಿನ ಫಿನ ಲೆಂಡಿನ ಬೀದಿ-ಬೀದಿಗಳಲ್ಲಿ ಹೊಡೆದಾಟವಾಗುತ್ತಿದೆ. ಜನರಿಗೆ ಯುದ್ಧ ಬೇಕಾಗಿಲ್ಲ. ಸರಕಾರ ಸುದ್ದಿಗಳನ್ನು ಬಚ್ಚಿಡಲು ಪತ್ರಿಕೆಗಳ ಬಾಯಿ ಮುಚ್ಚಿ ಅಪಚಾರ ಮಾಡುತ್ತಿದ್ದಾರೆ. ಇದರಿಂದ ಸುದ್ದಿಗಳು ಹರಡಲು ಅನುಕೂಲವಾಗುತ್ತದೆ; 'ಸತ್ಯ ಜೋಕಿಗೆ ಎರಡು' ಯೆಂದಿ ಗಿಂತಲೂ ಇಂದು ಏಕಮತ್ಯದ ಅಗತ್ಯ ಹೆಚ್ಚಾಗಿದೆ. 'ಹೆಚ್ಚು ಜನ ಬೆಂಬಲವಿರುವ ಅಧ್ಯಕ್ಷರು ಬರಬೇಕು' ಅಂತೂ ಫಿನ್‌ಲೆಂಡಿನ ಸರಕಾರದೊಳಗೆ ಕಿಡಿ ಕೆದರು ತ್ತಿದೆ." ಎಂದು ತಿಳಿಸಿದ್ದಾರೆ.

ಜರ್ಮನರ ಒಣಜಂಬ

ಮಿತ್ರವರ್ಗವು ದ್ವಿತೀಯ ರಣರಂಗ ತೆರೆಯಲು ನಡೆ ಸತ್ತಿರುವ ಪ್ರಯತ್ನಕ್ಕೆ ತಡೆಯಾಗಿ ದ್ವಿಗುಣವಾದ ರಣಯಂತ್ರ ರಕ್ಷಣಾ ಸಾಮಗ್ರಿಯನ್ನು ಜರ್ಮನರು ಪಶ್ಚಿಮ ಯೂರೋ ಪಿನ ತೀರದಲ್ಲಿ ಶೇಖರಿಸಿದ್ದಾರಂತೆ. ಬಾಂಬುದಾಳಿ ಯಿಂದ ಜಗ್ಗದ ಸುರಂಗಗಳನ್ನು ಸಮೀಪಗಳ ಬಂಡೆ ಗಳಲ್ಲಿ ಕೊರೆದು, ಅಲ್ಲಿ ನೆಲ ಮತ್ತು ಹಸಿರು ಗುಂಡು ಗಳನ್ನಿಟ್ಟಿರುವರಂತೆ. ಸಾಗರತೀರಗಳಲ್ಲಿ, ಕಡಿದಾದ ಕಣಿವೆ ಹಾದಿಗಳು ಇಲ್ಲೆಲ್ಲ ಸಿರಂಗಿಗಳನ್ನು ನಿಲ್ಲಿಸಿ ತಕ್ಕ ಮರೆಮಾಡಿ ಸಿದ್ಧವಾಗಿ ನಿಲ್ಲಿಸಿರುವರಂತೆ. ಸೋಡಿದರೆ ಜೀರ್ಣವಾದ ರಕ್ಷಣಾ ಭಾಗದಂತೆ ಕಂಡರೂ, ಶತ್ರುವು ಮುಳಿದೊಡನೆ ನುಂಗಿಬಿಡುವ ರಹಸ್ಯ ರಸ್ತೆಗಳಿಂದ ಸಜ್ಜಿ ತವಾದ ನೆಲೆಗಳನ್ನು ತೀರಪ್ರದೇಶದಲ್ಲಿ ಉದ್ದಕ್ಕೂ ನಿರ್ಮಿಸಿದ್ದಾರಂತೆ. ದುರ್ಗಗಳೆಲ್ಲವೂ ಬಲಯುತವಾದ ಫಿರಂಗಿಗಳೂ, ಮೆಷೀನ್‌ಗನ್‌ಗಳೇ ಮುಂತಾದವುಗಳಿಂದ ಸಿದ್ಧವಾಗಿರುವುದಾಗಿಯೂ ಹೇಳುತ್ತಿರುವರು. ಮಿತ್ರ ವರ್ಗದ ಸೇನೆಗಳಿಗೂ ಸಹ ಇವರೆಲ್ಲಾ ಜಯಿಸಿ ನುಗ್ಗುವ ಪಾಠವನ್ನು ಕಲಿಸಲಾಗುತ್ತಿದೆ.

ರೋಂ ಮಾರ್ಗ ಬಹಳ ಕಷ್ಟತಮವಾಗಿದೆ

ಮುಂದಿನ ಏಪ್ರಿಲ್‌ಗೆ ಮುಂಚೆ ಮಿತ್ರಯೋಧರು ರೋಂ ತಲುಪಲಾರರೆಂಬುದಾಗಿ ಅಮೆರಿಕನ್ ಸುದ್ದಿಗಾ ರರು ನೇಪಲ್ಸಿನಿಂದ ಬ್ರಿಸ್ಟಲ್‌ಕಾಸ್ಟ್ ಮೂಲಕ ತಿಳಿಸಿ ದ್ದಾರೆ. ಇಟಲಿಯಲ್ಲಿ ಕದನವನ್ನು ಸುಲಭವಾಗಿ ಗೆಲ್ಲಲು ಸಾಧ್ಯವಿಲ್ಲವೆಂದು ಅವರು ಹೇಳ ಕ್ಯಾಸಿನೋ ಲೆದ ಮೇಲೆ ರೋಮಿಗೆ ನಿರಾತಂಕವಾದ ಮಾರ್ಗವಿಲ್ಲ. ಕ್ಯಾಸಿನೋದಿಂದ 'ರೋಮಿಗೆ ಒಂದು ಇಕ್ಕಟ್ಟಾದ ಕಣಿವೆ ಇದೆ. ಅದನ್ನು ಅನೇಕ ಸಣ್ಣ ಪುಟ್ಟ ನದಿಗಳು ದಾಟುತ್ತವೆ. ಇಟಾಲಿಯನರನ್ನು ನಿರ್ಬಂಧವಾಗಿ ಕೆಲಸಕ್ಕೆ ನೇಮಿಸಿಕೊಂಡು ಈ ಕಣಿವೆಯನ್ನು ಜರ್ಮ ನರು ಬಲಪಡಿಸಿದ್ದಾರೆ. ರೋಮನ್ನು ಹಿಡಿಯಬೇಕಾಗಿ ದ್ದರೆ ಬ್ರಿಟಿಷ್ ಮತ್ತು ಅಮೆರಿಕನ್ ಕಾಲಾಳು ದಳದ ವರು ತುಂಬಾ ತ್ಯಾಗಮಾಡಬೇಕಾಗಿದೆ ಎಂದು ಅವರ ತಿಳಿಸಿದ್ದಾರೆ.

ಬಾಂಬು ಮುತ್ತಿಗೆಯಿಂದಲೇ ಜರ್ಮನಿಯನ್ನು ಸೋಲಿಸಲು ಸಾಧ್ಯವಿಲ್ಲ

ಪಶ್ಚಿಮ ಯೂರೋಪಿನಲ್ಲಿ ದಂಡಯಾತ್ರೆಗೆ ಸಿದ್ಧ ವಾಗಿರುವ ಮಿತ್ರ ಸೇನೆಗಳ ನಾಯಕರಾದ ಜ|| ಐಸೆನ್ ಹವರರವರು ಯೂರೋಪಿನ ಕದನವನ್ನು ನಾವು ೧೯೪೪ರಲ್ಲಿ ಜಯಿಸುವೆವು. ಯಾಗಂಗಡೇಕಾಗಿ ದ್ದರೆ ರಣರಂಗದಿಂದ ಹಿಂದಿರುಗುವ ಮೂಲಕ ಕೊಂಡೊಯ್ಯುತ್ತಿರುವ ಒಂದು ಗುಡಿಸಿಲಿನವರಿಗೆ ಪ್ರತಿಯೊಬ್ಬ ಸ್ತ್ರೀ ಪುರುಷರೂ ತಮ್ಮ ಕೆಲಸವನ್ನು ಮಾಡಬೇಕಾಗಿದೆ ಅಗತ್ಯವೆಂದು ಹೇಳಿದ್ದಲ್ಲದೆ "ಕೇವಲ ಬಾಂಬುಗಳನ್ನು ಸುರಿಸುವುದ ರಿಂದಲೇ ಜರ್ಮನಿಯನ್ನು ಸೋಲಿಸಲು ಸಾಧ್ಯವೆಂದು ನಾನು ನಂಬುವುದಿಲ್ಲ. ಬಾಂಬು ಮುತ್ತಿಗೆಯನ್ನೇನೋ ಬಲಪಡಿಸಬೇಕು. ಆದರೆ ಅದೊಂದರಿಂದಲೇ ಜರ್ಮನಿ ಯನ್ನು ಬಗ್ಗಿಸುವುದು ಅಸಾಧ್ಯ. ಯೂರೋಪಿನ ದಂಡ ಯಾತ್ರೆಯಲ್ಲಿ ಫ್ರೆಂಚರು ಭಾಗವಹಿಸುವರು. ಅವರನ್ನು ಸೇರಿಸಿಕೊಳ್ಳದೆ ದಂಡಯಾತ್ರೆಗೆ ಹೊರಡುವುದು ಮುಟ್ಟಾ ಳತನ" ರೋಂ ಕದನ ನಮ್ಮ ಜಯದ ನಿರಾಕಾರ ನಾಯಕ ನಾಗುವನೆಂದು ವಿಶ್ವಾಸವಾಗಿದೆ. ನಾವು ಬಹಳ ಇಕ್ಕಟ್ಟಿ ನಲ್ಲಿ ಬಲವಾದ ಶತ್ರುವನ್ನು ಎದುರಿಸಬೇಕಾಗಿದೆ. ಜರ್ಮನರು ಕಡೆಯವರೆಗೆ ಹೋರಾಡಲು ಎಲ್ಲರವರೆಗೆ ಹೆಚ್ಚು ಸೈನ್ಯ ಬಲವನ್ನು ಕಲೆಹಾಕುತ್ತಾರೆಂಬುದರ ಮೇಲೆ ನಮ್ಮ ಜಯದ ನಿಂತಿದೆ" ಎಂದು ತಿಳಿಸಿದರು.

ಜರ್ಮನರ ಪ್ರತಿ ಮುತ್ತಿಗೆ!

ಮೆಡಿಟರೇನಿಯನ್ ನದಿ ಮುಖದಲ್ಲಿ ಜರ್ಮನರು ಆರಂಭಿಸಿರುವ ಪ್ರತಿ ಮುತ್ತಿಗೆಯನ್ನು ಹಿಮ್ಮೆಟ್ಟಿಸಲು ಎಂಟನೇ ಸೇನೆಯ ಯೋಧರು ಅತ್ಯುಗ್ರವಾಗಿ ಹೋರಾ ಡುತ್ತಿದ್ದಾರೆ. ಕಾಂಟ್ರಾಕ್ಟ್ರಾಮ್ ಎಂಬಲ್ಲಿರುವ ಬ್ರಿಟಿಷ್ ಸ್ಥಾನದ ಮೇಲೆ ಶತ್ರುಗಳು ಬಿದ್ದರು. ಜರ್ಮನರು ನ್ಯೂ ಜಿಲೆಂಡ್‌ನ ಮೇಲೆ ಅನೇಕ ಮುತ್ತಿಗೆಯನ್ನು ಆರಂಭಿ ಸಿದ್ದಾರೆ. ಸಾಗರಗಳಿಗೆ ಈಗ ಫ್ರಾನ್ಸ್ ಕಾರಣವಾಗುತ್ತಿದೆ. ಆಗ ರೈಲ್ವೆ ನಾಶವಾಗಿದೆ. ಈ ಭಾಗದಲ್ಲಿ ಸರಿಯಾದ ಪತ್ರಿಕೆ ಇರಲಿಲ್ಲ. ಎಲ್ಲೆಯ ಕಡೆ ರಷ್ಯ ಸೈನ್ಯವು ಜರ್ಮನರು ಧಾಳಿ ಆರಂಭಿಸಿದರು. ಎಂಟನೇ ಸೇನೆಯು ಇಪ್ಪತ್ತು ಮೈಲಿ ಉದ್ದದಲ್ಲಿ ಆಕ್ರಮಣದಿಂದ ಆಕ್ರಮಕ್ಕೆ ನುಗ್ಗುತ್ತಿದೆ. ಬಿರುಗಾಳಿಯು ಮತ್ತು ಹಿಮದ ಕಾಟ ಅಸಾಧ್ಯವಾಗಿದೆ. ಒಂದು ಕೊಟ್ಟಿ ರಕ್ತವಿರುವವರಿಗೆ ಹೋರಾಡಬೇಕೆಂದೂ, ಒಂದು ಅಂಗುಲವೂ ಹಿಮ್ಮೆಟ್ಟ ಬಾರದೆಂದೂ ದಕ್ಷಿಣ ಇಟಲಿಯಲ್ಲಿರುವ ಜರ್ಮನ್ ಯೋಧರಿಗೆ ಆಜ್ಞೆ ಮಾಡಲಾಗಿದೆಯೆಂದು ಜರ್ಮನ್ ಸುದ್ದಿಗಾರರು ರೇಡಿಯೋ ಮೂಲಕ ತಿಳಿಸಿದರು.

ಜರ್ಮನಿ ಹೆಚ್ಚುಕಾಲ ಉಳಿಯಲಾರದು

ಮಿತ್ರ ಸೇನೆಗಳು ಇಂಗ್ಲಿಷ್ ಕಡಲ್ಗಾಲುವೆಯನ್ನು ದಾಟಿ ಯೂರೋಪಿಗೆ ಮುತ್ತಿಗೆ ಹಾಕಿದ ಕೆಲವು ತಿಂಗಳುಗಳೊಳಗಾಗಿ ಜರ್ಮನಿಯು ಸಂಗ್ರಾಮ ಬಲ ಮುರಿದು ಬೀಳುವುದೆಂಬುದಾಗಿ ಅಮೆರಿಕದ ಉಪಾಧ್ಯಕ್ಷ ರಾದ ಹೆನ್ರಿ ವ್ಯಾಲೇಸ್‌ರವರು ತಿಳಿಸುತ್ತ ಪಶ್ಚಿಮದಿಂದ ಮಿತ್ರ ಸೇನೆಗಳ ದಂಡಯಾತ್ರೆ ಆರಂಭವಾಗಿ ಪೂರ್ವ ದಿಂದ ರಷ್ಯನರೂ, ಇಟಲಿಯಲ್ಲಿ ಮಿತ್ರಸೇನೆಗಳೂ ಉಗ್ರ ಧಾಳಿ ಆರಂಭಿಸಿದರೆ ಜರ್ಮನರ ಪರಿಸ್ಥಿತಿ ಉಗ್ರವಾಗು ತ್ತಾಗುವುದು, ಶತ್ರುಗಳನ್ನು ಪೂರ್ಣ ಸಂಪೂರ್ಣವಾಗಿ ಸೋಲಿಸಬೇಕು. ಅಲ್ಲದೆ, ಯುದ್ಧ ಮುಗಿದ ನಂತರ ಪ್ರಪಂಚದ ಜನರ ಹಸಿವು, ರೋಗ ಮತ್ತು ನಿರುದ್ಯೋಗ ವನ್ನು ಎದುರಿಸಲು ಸಹ ನಾವು ಸಹಾಯ ಮಾಡ ಬೇಕು ಎಂದು ತಿಳಿಸಿದರು.

ಬಾಲ್ಕನ್ನಿನ ಪ್ರಾಮುಖ್ಯತೆ

ಜರ್ಮನಿಗೆ ಮೃತ್ಯುಕಾರಕವಾದ ಪ್ರಹಾರ ಬೀಳ ಬೇಕಾಗಿದ್ದರೆ ಪಶ್ಚಿಮದಿಂದಲೇ-ಎಂದು ಈಗಲೂ ಮುಖ್ಯ ಪ್ರಾಂತದ ವಿಮರ್ಶಕರು ಹೇಳುತ್ತಿದ್ದಾರೆ. ಈಗ ಜರ್ಮನಿಯು ನಾಲ್ಕು ಸಂಭವಗಳನ್ನು ವಿಚಾರಮಾಡ ಬೇಕಾಗಿದೆ. ಏಡ್ರಿಯಾಟಿಕ್ ದಾಟಿ ಆಲ್ಬೇನಿಯಾ ಮುತ್ತಿಗೆ, ಮತ್ತು ಸಲೋನಿಕಾ ಕಡೆ ಮಿತ್ರ ಸೇನೆಗಳ ಏಟು; ಇದೇ ಕಾಲದಲ್ಲಿಯೇ ಮಧ್ಯ ಪೂರ್ವದಿಂದ ಏಜಿಯನ್ ದ್ವೀಪಗಳ ಮೇಲೆ ಮುತ್ತಿಗೆ; ಮತ್ತು ಮೆಡಿ ಟರೇನಿಯನ್ನಿನಲ್ಲಿರುವ ಕಾರ್ಸಿಕಾ, ಸಾರ್ಡಿನಿಯಾಗ ಳಿಂದ ದಕ್ಷಿಣ ಫ್ರಾನ್ಸಿಗೆ ಮುತ್ತಿಗೆ ಜರ್ಮನರಿಗೆ ಇಂದು ತೀರ ಚಿಂತೆಗೆ ಕಾರಣವಾಗಿರುವುದು ಬಾಲ್ಕನ್ಸ್ ಎಂ ಬುದು ವಿಮರ್ಶಕರ ಅಭಿಪ್ರಾಯ. ಶತ್ರುಗಳಿಗೆ ಕಷ್ಟ ಕಡೆ ಎಷ್ಟು ಗಣಿ ಉಳಿದಿರುವುವು ಬಾಲ್ಕನ್ಸಿನಲ್ಲೇ. ದಕ್ಷಿಣ ಇಟಲಿಗೆ ಬಾಲ್ಕನ್ಸ್ ಬಹಳ ಹತ್ತಿರವಾಗಿದೆ. ಜ|| ಅಲೆಗ್ಸಾಂಡರರವರು ಏಕಾ ಏಕಿ ಪ್ರಚಂಡ ದಾಳಿಯನ್ನು ಆರಂಭಿಸಬಹುದು.

ಕೊಲೆ-ಆತ್ಮಹತ್ಯ!

ಬೆಂಬಾಯಿನ ಚರ್ಚ್ ಗೇಟಿನ ಬಳಿಯ ಪಾರ್ಥಿವ ವಾದ ರಸ್ತೆಯಲ್ಲಿ ಎರಡು ಕೊಲೆ ನಡೆಯಿತು. ಯೂರೋಪಿಯನ್ ಮಿಲಿಟರಿ ಸಾರ್ಜೆಂಟನೊಬ್ಬನು ಒಬ್ಬ ಯೂರೋಪಿಯನ್ ಹೆಂಗಸನ್ನು ಗುಂಡಿಟ್ಟು ಕೊಂದು, ಕೂಡಲೆ ತಾನೂ ಗುಂಡಿನಿಂದ ಹೊಡೆದುಕೊಂಡು ಸತ್ತನು. ಆ ಹೆಣ್ಣುಮಗಳು ರಸ್ತೆಯಲ್ಲಿ ಮತ್ತೊಬ್ಬ ಮಹಿಳೆಯೊಡನೆ ಮಾತಾಡುತ್ತಿರುವಾಗ ಈ ಸಾರ್ಜೆಂಟ್ ಅಲ್ಲಿಗೆ ಬಂದು ಆಕೆಯ ಮೇಲೆ ಎರಡು ಸಲ ಗುಂಡು ಹಾರಿಸಿದನು. ಆಕೆ ಅಲ್ಲೇ ಸತ್ತಳು. ಇನ್ನೊಬ್ಬ ಹೆಂಗಸಿಗೂ ಗಾಯವಾಯಿತು. ಸಾರ್ಜೆಂಟ್ ಅಲ್ಲೇ ತಾನೂ ಗುಂಡಿನಿಂದ ಹೊಡೆದುಕೊಂಡು ಸತ್ತನು. ಈ ಹತ್ಯಾಕಾಂಡಕ್ಕೆ ಪ್ರಣಯ ಪ್ರಸಂಗ ಕಾರಣವೆಂದು ಹೇಳಲಾಗಿದೆ.

ಬೆಂಗಳೂರಿನಲ್ಲಿ ಜನವರಿ ಮೊದಲಿನಲ್ಲಿ ೧ನೇ ತಾರೀ ಖಿನ ರೇಷನ್ ಕಾರ್ಡಿನ ಮೇಲೆ ಕೊಡುವ ೨೦ ರಷ್ಟು ಅಕ್ಕಿ ಕಡಿತ ಮಾಡಿ ಅದರ ಬದಲು ಗೋಧಿ ಅಥವಾ ಗೋಧಿ ಸಾಮಾನು ಕೊಡಲಾಗುವುದು. ೭ನೇ ತಾರೀ ಖಿನಿಂದ ಮೇಲೆ ಅಕ್ಕಿಯನ್ನು ಪೂರ್ಣ ಕೊಡಲಾಗು ವುದು. ರಾಗಿ ಪಡಿತರದಲ್ಲಿ ಅರ್ಧವನ್ನು ಕಡಿತ ಮಾಡಿ ಅದರ ಬದಲು ಜೋಳ ಕೊಡಲಾಗುವುದೆಂದು ಹೇಳಲಾಗಿದೆ.

ಸಂಗ್ರಹಿಸಬೇಕಾದ ಫೋಟೋಗಳು.

ಶ್ರೀ [illegible]	೦—೪—೦
ಶ್ರೀ [illegible]	೧—೦
[illegible]	
[illegible] ಫೋಟೋ [illegible]	೦—೨—೦
[illegible] ೨೪×೧೦೦ ಸೈಜು	೦—[illegible]
[illegible]	೦—[illegible]
[illegible]	[illegible]—೧—೦
[illegible]	೦—೧—೦
[illegible] ಫೋಟೋ	೦—೧—೦
[illegible] ಫೋಟೋ ೧೦×೧೨	೦—೧—೦
[illegible]	೦—೧—೦
[illegible]	೦—೧—೦
[illegible] ೧೦×೧೦	೦—೪—೦
[illegible] ಫೋಟೋ	—೧—೦
[illegible] ಫೋಟೋ	೦—೧—೦
[illegible] ಶ್ರೀ ಕಾಶೀನಾಥ [illegible] ಫೋಟೋ	೦—೧—೦
[illegible] ಫೋಟೋ [illegible] ಇಂಚು	೦—[illegible]—೦
[illegible] ಇಂಚು	೦—[illegible]—೦
[illegible] ಫೋಟೋ ಇಂಚು	೦—೧—೦
ಶ್ರೀ [illegible] ಫೋಟೋ ಇಂಚು	೦—೧—೦
ಶ್ರೀ [illegible] ಫೋಟೋ	೦—೧—೦
[illegible] ಸುಂದರ ಫೋಟೋ	೦—೧—೦
[illegible] ಫೋಟೋ	೦—೧—೦
[illegible] ಫೋಟೋ	೦—೧—೦

ಮ್ಯಾನೇಜರ್— ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಸಿದ್ಧಾಂತಶಿಖಾಮಣಿ

ವೀರಶೈವರ ತತ್ವ [illegible] ಸಂಸ್ಕೃತ [illegible] ಗ್ರಂಥವು [illegible] ಶ್ರೀ [illegible] ವೀರಶೈವಸಿದ್ಧಾಂತವು [illegible] ಗ್ರಂಥದ [illegible] ೨ ಸಾವಿರ [illegible] ಶ್ರೀಶಿವಯೋಗಿಶಿವಾಚಾರ್ಯರೆಂಬ [illegible] ವೀರಶೈವಮತ [illegible] ವ್ಯಾಖ್ಯಾನ [illegible] ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ [illegible] ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, [illegible] ಈ ಗ್ರಂಥವನ್ನು [illegible] ಅನುಕೂಲ [illegible] ಈ ಗ್ರಂಥವು [illegible] ಪುಟಗಳಿಂದ ಕೂಡಿದ್ದು, [illegible] ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ [illegible] ಶ್ರೀಜಗದ್ಗುರು [illegible] ಗ್ರಂಥದ [illegible] ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ [illegible] ಬೆಲೆ ೨ ರೂಪಾಯಿ.

ಮ್ಯಾನೇಜರ್— ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಂಗ್ರಹಿಸಬೇಕಾದ ಮತಗ್ರಂಥಗಳು

[illegible] (೨ನೇಯ ಆವೃತ್ತಿ)	೧ ಆಣೆ
ಸನ್ಯಾಸ [illegible] (೨ನೇಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚಪೀಠ [illegible] (೨ನೇಯ ಆವೃತ್ತಿ)	೧ ಆಣೆ
ಶ್ರೀ [illegible] (೨ನೇಯ ಆವೃತ್ತಿ)	೧ ಆಣೆ
[illegible] (೨ನೇಯ ಆವೃತ್ತಿ)	೧ ಆಣೆ
ಶ್ರೀ [illegible] ಪಂಚಾಚಾರ್ಯರ [illegible] (೨ನೇಯ ಆವೃತ್ತಿ)	೨ ಆಣೆ
[illegible] (೨ನೇಯ ಆವೃತ್ತಿ)	೭ ಆಣೆ
ಶ್ರೀ [illegible] (೨ನೇಯ ಆವೃತ್ತಿ)	[illegible] ಆಣೆ
ಪಂಚಾಚಾರ್ಯಸ್ತೋತ್ರಾಕರ	೨ ಆಣೆ
ಶ್ರೀ [illegible]	೩ ಆಣೆ
ಶ್ರೀ [illegible] ಆಚಾರ್ಯರ	೩ ಆಣೆ
[illegible]	೩ ಆಣೆ
[illegible]	೩ ಆಣೆ
[illegible] (೨ನೇಯ ಆವೃತ್ತಿ)	೪ ಆಣೆ
ಲಿಂಗ [illegible]	೪ ಆಣೆ
[illegible] (೨ನೇಯ ಆವೃತ್ತಿ)	೪ ಆಣೆ
ಶ್ರೀ [illegible]	೪ ಆಣೆ
[illegible] (ಸಂಸ್ಕೃತ)	೪ ಆಣೆ
[illegible]	೪ ಆಣೆ
ಸನ್ಯಾಸ [illegible] (೨ನೇಯ ಆವೃತ್ತಿ)	೬ ಆಣೆ
ಸಿದ್ಧಾಂತಶಿಖಾಮಣಿ ([illegible])	೬ ಆಣೆ
ವೀರಶೈವ [illegible]	೬ ಆಣೆ
ವೀರಶೈವ [illegible]	೮ ಆಣೆ
ಬಸವ [illegible] (೨ನೇಯ ಆವೃತ್ತಿ)	೮ ಆಣೆ
[illegible]	೮ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣಗಳು (೨ನೇ ಭಾಗ)	೮ ಆಣೆ
[illegible]	೮ ಆಣೆ
[illegible]	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾನಿಧಿ (೨ನೇಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ ([illegible])	೧ ರೂ
ಸಚಿತ್ರ ರೇಣುಕವಿಜಯ (೨ನೇಯ ಆವೃತ್ತಿ)	೧ ರೂ
ವೀರಶೈವರತ್ನ (೨ನೇಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು)	೧॥ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾ ಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ [illegible])	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ ([illegible] ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life sketch of Pandit Sri Kashinatha Shatriji (English)	4 As
The Philosophical Aspect of Virasaivism (English)	8 As
Speeches by Pandit Shri Kashinatha Shastriji (English)	12 As
लिंगधारणचन्द्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (चारशैवभाष्य-संस्कृत)	१ रु
सिद्धान्तशिखामणि (मूल)	६ आ
पुरुषपराक्रमः (वीरशैवप्राचीनिभ [illegible])	४ आ
नन्दिकेश्वर [illegible] (संस्कृत)	२ आ

ಮ್ಯಾನೇಜರ್— ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು [illegible] ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible] ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸಾದದಿಂದ || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

[illegible]

[illegible]

ಸ್ಥಳದವರಿಗೆ ೩ ರೂ [illegible] ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೦ನೇ ಜನವರಿ ೧೯೪೪ [ಸಂಚಿಕೆ ೩೬

ಸ್ತ್ರೀಯರೂ, ಆರೋಗ್ಯವೂ

"ಆರೋಗ್ಯ" ವೆನ್ನುವ ಪದದ ಸಾಮಾನ್ಯ ಅರ್ಥವು "ರೋಗವಿಲ್ಲದಿರುವಿಕೆ" 'ಸ್ವಸ್ಥತೆ' ಎಂಬುದನ್ನು ಸಾಧಾರಣವಾಗಿ ಎಲ್ಲರೂ ಒಪ್ಪಿದ್ದಾರೆ. ಹಿರಿಯರಿಗೆ ನಾವು ನಮಸ್ಕಾರ ಮಾಡಿದರೆ ಅವರು "ರೋಗವಿಲ್ಲದೆ ಬಾಳು" ಎಂದು ಮೊದಲು ಹರಸಿದ ನಂತರ ಪುತ್ರಸಂತಾನ-ಸಂಪದಭಿವೃದ್ಧಿ ಮೊದಲಾದ ವಿಷಯಗಳನ್ನು ಹೇಳಿ ಹರಸುವುದು ನಮಗೆ ಗೊತ್ತಿದ್ದ ವಿಷಯ. ಪೂರ್ವಕಾಲದಲ್ಲಿ ದೇವಸ್ಥಾನಗಳಲ್ಲಿಯೂ ಕೂಡ "ಸಕಲ ಜನರಿಗೂ ಸುಖವನ್ನೂ ಆರೋಗ್ಯವನ್ನೂ ನೀಡು" ಎನ್ನುವರು. ಹಿರಿಯರು ಆಶೀರ್ವಾದ ಮಾಡುವುದು ಸಂಪ್ರದಾಯವಾಗಿ ನಮ್ಮಲ್ಲಿ ರೂಢಿಗೆ ಬಂದಿದ್ದರೂ ನಾವುಗಳು ಅದರ ನಿರ್ದಿಷ್ಟ ಕಡೆ ಲಕ್ಷ್ಯಕೊಡುತ್ತಲೇ ಇಲ್ಲ. ಮೇಲೆ ಹೇಳಿದ ಆಶೀರ್ವಾದದ ಅರ್ಥವು, ರೋಗರಹಿತರಾಗಿಯೂ ಆರೋಗ್ಯವಂತರಾಗಿಯೂ ದೃಢಕಾಯರಾಗಿಯೂ ಇರತಕ್ಕವರಿಗೆ ಮಾತ್ರವೇ ಐಶ್ವರ್ಯದಿಂದಲೂ ಪುತ್ರಪೌತ್ರಾದಿ ಅಷ್ಟಲಕ್ಷ್ಮಿಗಳಿಂದಲೂ ಪ್ರಯೋಜನವುಂಟು, ಹೊರತು ರೋಗದಿಂದಲೂ ಇತರ ಚಿಂತೆಗಳಿಂದಲೂ ನರಳತಕ್ಕವರಿಗೇನಲ್ಲ. ಆರೋಗ್ಯವೆಂಬುದಕ್ಕೆ ಪರಿಷ್ಕಾರವಾದರ್ಥವೇನೆಂಬುದನ್ನು ಹಿರಿಯರೂ ಸುಪ್ರಸಿದ್ಧ ವೈದ್ಯರೂ ಎಷ್ಟೋ ಒಗೆಯಲ್ಲಿ ಹೇಳಿರುವರು. ಆದುದರಿಂದ ಅದೇ ವಿಷಯವನ್ನು ಮತ್ತೆ ಬರೆಯುವುದಕ್ಕಿಂತ ಆರೋಗ್ಯಕ್ಕೂ ಸ್ತ್ರೀಯರಿಗೂ ಎಂತಹ ನಿಕಟ ಸಂಬಂಧವುಂಟೆಂಬ ವಿಷಯ ತಿಳಿಯತಕ್ಕದ್ದಾಗಿದೆ. ತಾಯಿಯರು ರೋಗವಿಲ್ಲದೆ ಸುಖವಾಗಿರುವುದರಿಂದ ತಂದೆಯೂ, ಮಕ್ಕಳೂ ಸುಖವೇಹಿಗಳಾಗಿರುವರೆಂಬುದು ಹಿರಿಯರ ಅಭಿಪ್ರಾಯ. ತಾಯಿಯು ಸೌಮ್ಯವಾಗಿ ಶಕ್ತಿವಂತಳಾಗಿದ್ದರೆ ಶುಚಿ ರುಚಿಯಾದ ಆಹಾರಪದಾರ್ಥಗಳನ್ನು ಸಿದ್ಧಗೊಳಿಸಿ, ಅಂಗಡಿಯಿಂದ ತಂದ ಸಾಮಾನುಗಳಲ್ಲಿ ಹುಳುಹುಪ್ಪಟೆಗಳು ಬೀಳದಂತೆ ಮುಚ್ಚಿಟ್ಟು ಮಕ್ಕಳಿಗೆ ಸ್ನಾನಮಾಡಿಸಿ ಶುಭ್ರವಾದ ಬಟ್ಟೆಬರೆಗಳನ್ನುಡಿಸಿ, ಪತಿಯ ದೇಹಾರೋಗ್ಯವನ್ನು ಪರಾಂಬರಿಸುವುದು ಸಾಧ್ಯವೆಂಬುದು ನಮ್ಮ ಹಿರಿಯರ ಅಭಿಪ್ರಾಯವು. ಆದರೆ ನಾಗರೀಕತೆಯ ವಾತಾವರಣದಲ್ಲಿ ಬೆಳೆದ ಈಗಿನಕಾಲದ ಸ್ತ್ರೀಯರಿಗೆ ಅಡಿಗೆಮಾಡಿ ಮನೆಯವರಿಗೆ ಬಡಿಸುವುದೆಂದರೆ ಅಗೌರವವೆಂಬ, ಮಕ್ಕಳ ಪರಾಂಬರಿಕೆಯು ಹೀನಾಯವೆಂಬ ಭಾವನೆಯು ವಿಶೇಷವಾಗುಂಟಾಗಿರುವುದು. ಇದು ಪಾಶ್ಚಾತ್ಯರನ್ನನುಕರಣ ಮಾಡಿದುದರ ಫಲ. ಮಕ್ಕಳಿಗೆ ಆಹಾರ ಕೊಡಲೂ ನಿದ್ರೆ ಮಾಡಿಸಲೂ ಆಳುಕಾಳುಗಳ ಅವಲಂಬನವಿಲ್ಲದಿದ್ದರೆ ಸಾಗುವುದೇ ಇಲ್ಲ. ಅಡಿಗೆಯವನಿಗೇ ಸಂಸಾರದ ಸಕಲ ಸ್ವಾತಂತ್ರ್ಯವನ್ನೂ ವಹಿಸಿ, ಅವನು ಹೇಗೆ ಮಾಡಿಟ್ಟಿದ್ದರೆ ಅದನ್ನೇ ಉಣ್ಣುವುದೂ ಕೂಡ ಅಭ್ಯಾಸವಾಗಿ ಹೋಗಿದೆ. ಇವೆಲ್ಲಕ್ಕೂ ಕಾರಣವು ನಾಗರೀಕತೆಯ ಅರ್ಥವನ್ನು ತಪ್ಪಾಗಿ ಮಾಡಿಕೊಂಡು ತಮ್ಮ ಮಕ್ಕಳ ಪರಾಂಬರಿಕೆ ಮಾಡದಿರುವುದು [illegible] ಕತೆಯ [illegible] ಸರಿಯಲ್ಲ [illegible] ಈ ರೀತಿ ಮನೆ ಕೆಲಸಗಳನ್ನು ಆಳುಗಳಿಗೆ ಒಪ್ಪಿಸಿ [illegible] [illegible] ಅನೇಕ [illegible] ಕಾರ್ಯಗಳು ಕಾಲಾನುಗುಣವಾಗಿ ನಿಯಮಿಸಲ್ಪಟ್ಟಿರುವವು. ಅವುಗಳನ್ನೆಲ್ಲವನ್ನೂ ಪ್ರಕೃತಿವಿರೋಧವೂ ಅಕ್ರಿಯಸ್ಕರವೂ ಆದುದು. ಸಾಧಾರಣವಾಗಿ [illegible] ದಲ್ಲಿ ಮೊದಲಿಗಿಂತ ನೂತನವಾದ ಅನೇಕ ವ್ಯಾಧಿಗಳು [illegible] ಶಿಶುಮರಣವು ಹೆಚ್ಚುತ್ತಿರುವುದು [illegible] ವಿಷಯವೇ. [illegible] ನಮ್ಮಂತೆ [illegible] ರೋಗ [illegible] ಲಿಲ್ಲ. ಶಿಶುಮರಣವು ಅಕಾಲಮರಣವು [illegible] ಅದಕ್ಕೆ ಕಾರಣವು [illegible] ನೀತಿ [illegible] ಇಂದಿನವರಾದ ನಾವು ಬಿಟ್ಟುಬಿಟ್ಟಿರುತ್ತೇವೆ!

ಹಿಂದಿನಕಾಲದಲ್ಲಿ ರಮಣಿಯರು ಕುಟುಂಬ ನಿರ್ವಾಹಕ್ಕೆ ಸಂಬಂಧಪಟ್ಟ ಎಲ್ಲ ಕಾರ್ಯಗಳನ್ನೂ ಅಂದರೆ ಮಕ್ಕಳ ಪೋಷಣೆ, ಅತಿಥಿ ಸತ್ಕಾರ, ಪೂಜಾಪುನಸ್ಕಾರ, ಗುರುಹಿರಿಯರ ಸೇವೆ, ಮೊದಲಾದವುಗಳನ್ನು ಶ್ರದ್ಧೆಯಿಂದ ಮಾಡುತ್ತಿದ್ದರು. ಪ್ರಕೃತ [illegible] ಎಲ್ಲ ಕಲಸಗಳನ್ನೂ ಕೂಲಿಕೊಟ್ಟು ಮಾಡಿಸಬೇಕಾದ ಸ್ಥಿತಿಯಲ್ಲಿ ಇಂದಿನ ವಾತಾವರಣವಿರುವುದು ಇದಕ್ಕೆ ಆಗಿನ್ದು "ಅನಾಗರೀಕತೆಯ ಕುರುಹಾದ [illegible]" ಎಂದು ನಾವು ಸಮಾಧಾನ [illegible] ಬರೆದು [illegible] ಅತ್ಯಲ್ಪವೇತನಕ್ಕೆ [illegible] ನಾಗಿ ಸ್ವತಃ ಮಾಡಿಕೊಳ್ಳಬಹುದಾದ ಕೆಲಸಗಳನ್ನು ಅಥವಾ ಸಾಧನಗಳನ್ನು ನಗರವಾಸವು ಹಿತವೆಂದು ಎಂದೂ ಹೇಳುವುದಿಲ್ಲ. ರಸ್ತೆಯಲ್ಲಿ ಸದಾ ಸಂಚಾರ ಮಾಡುತ್ತಿರುವ ಮೋಟಾರು ಬಂಡಿಗಳ [illegible] ಯಿಂದುಂಟಾಗುವ ಧೂಳು, ಜನಬಾಹುಳ್ಯದಿಂದುಂಟಾಗುವ ಕಶ್ಮಲ ವಾಯು ಸಂಚಾರವೂ ಇನ್ನೂ ಅನೇಕ ವಿಧವಾದ ಅಸೌಕರ್ಯಗಳು ಪಟ್ಟಣವಾಸದಿಂದುಂಟಾದುವೆಂದು ಒಪ್ಪಿಕೊಳ್ಳಬಹುದಾದರೂ ನಮ್ಮ ಮಕ್ಕಳ ಆರೋಗ್ಯರಕ್ಷಣೆಗೆ, ಮನೆಯಲ್ಲಿರುವ ಪಾತ್ರೆ ಪದಾರ್ಥಗಳನ್ನು ಶುಚಿಯಾಗಿಡುವಿಕೆ, ಬಟ್ಟೆಬರೆಗಳನ್ನು ಶುಭ್ರವಾಗಿ ಒಗೆದಿಡುವಿಕೆ—ಇವೇ ಮೊದಲಾದವುಗಳಲ್ಲಿ ನಾವು ತೋರುವ ಅನಾದರಣೆಯು ಪಟ್ಟಣವಾಸದ ಕಷ್ಟಕ್ಕಿಂತಲೂ ನಮ್ಮ ಅಜಾಗರೂಕತೆಯಿಂದಲೋ ಸೋಮಾರಿತನದಿಂದಲೋ ಪದಾರ್ಥಗಳನ್ನು ಸಿಕ್ಕಿ ಸಿಕ್ಕಿದ ಕಡೆ ಎಸದಿರುವುದು, ಅಡಿಗೆಯವರು ಕೆಲಸ ಮಾಡುವ ಆತುರದಲ್ಲಿ ಸಿಕ್ಕಿದ ನೀರನ್ನು ಮಾಡುತ್ತಿರುವ ಅಡಿಗೆಯಲ್ಲಿ ಸುರಿಯುವುದು, ನುಶ್ಶು ಮೊದಲಾದ ಕಾಯಿಪಲ್ಯಗಳಲ್ಲಿರತಕ್ಕ ಹುಳು ಹುಪ್ಪಟೆಗಳನ್ನು ನೋಡದೆ ಹೆಚ್ಚಿ ಪಲ್ಯ ಮಾಡುವುದು, ಇನ್ನೂ ಅನೇಕ ಅಕ್ರಮಗಳನ್ನು ಅಡಿಗೆಯವರು ಮಾಡಲವಕಾಶಕೊಟ್ಟು ಅದನ್ನು ನಾವು ಸ್ವಲ್ಪವೂ ಗಮನಿಸದಿರುವುದು ಇವುಗಳಲ್ಲಿ [illegible] ಹೇಳಬಾರದೇ? [illegible] ಈಗ [illegible] ಸಂಧ್ಯಾಸಮಯಗಳಲ್ಲಿ [illegible] ಗಾಡಿಯಲ್ಲಿ ಹೊರಟು [illegible] ಗಾಡಿಯಲ್ಲಿ ಮನೆಗೆ [illegible] ಪ್ರಯೋಜನವನ್ನು ತಾನೇ [illegible]

ನಾವು [illegible] 'ಕಂದಾಚಾರ' [illegible] ಅಹ್ಲಿಗೆ [illegible] ಆ ಪದ್ಧತಿಗಳಲ್ಲಿ [illegible] ಶಾಸ್ತ್ರ [illegible] ಕಣ್ಣಿಗಾನಂದ ಪ್ರದವಾಗುವ [illegible] ಕುಂಕುಮ [illegible] ಮಾಡ [illegible] ದವರಿಂದ [illegible] ಅರಿಶಿನ ಹಚ್ಚುವುದೂ ಕೂಡ [illegible] ಇದರಿಂದಲೇ ಇರಬಹುದೇನೋ? [illegible] ಪಟ್ಟಿ [illegible] ನಮ್ಮ ದೇಹಾರೋಗ್ಯಕ್ಕೆ ಸಂಬಂಧಿಸಿದ ವಸ್ತುಗಳನ್ನು ದೇವರಿಗೆ ಅರ್ಪಿಸಿ, ಶುಕ್ರವಾರ ಮಂಗಳವಾರಗಳಲ್ಲಿ ಕುಂಕುಮ ಅರ್ಚನೆ, ಅಭಿಷೇಕ ಪೂಜೆ ಮೊದಲಾದವುಗಳನ್ನು ಮಾಡಿಸುವುದರಿಂದ ದೇವರಿಗೆ ತೃಪ್ತಿಯಾಗುವದೆಂದು ನಾವು ನಂಬುತ್ತೇವೆ. ಹೊರತು ಅದು ಆರೋಗ್ಯಸಂಬಂಧವಾದವುಗಳೆಂಬುದನ್ನು ನಾವು ನಂಬುವದಿಲ್ಲ. ಇದರಂತೆಯೇ ನಮ್ಮ ವಿದ್ಯಾಸಂಸ್ಥೆಗಳಲ್ಲಿ ವೈದ್ಯಶಾಸ್ತ್ರವನ್ನು [illegible] ಸಿಯೇ ವಿದಿಸಲ್ಪಟ್ಟಿರುವವು. ಅವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿವರಿಸುತ್ತ ಮನೋರಂಜಕವಾದ ವಿದ್ಯಾವಂತರಾದವರು ಮಾತ್ರ ವಿದ್ಯಾರ್ಥಿಗಳಿಂದ ಗೃಹಕಾರ್ಯನಿರ್ವಾಹವಾಗುವುದಕ್ಕೆ ಒರುವುದೆಂಬ ಅಭಿಪ್ರಾಯದಿಂದ ಶಾಲೆಗಳಲ್ಲಿ "ಗೃಹಕಾರ್ಯನಿರ್ವಾಹ" (Domestic Economy) ಎಂಬ ಹೆಸರಿನಿಂದ ಗ್ರಂಥಗಳ ಮೂಲಕ ಶಿಕ್ಷಣಕೊಡುವರು. ಅವುಗಳನ್ನು ಓದಿದವರಿಗೆ ಮಾತ್ರ ಕುಟುಂಬ ನಿರ್ವಹಣೆಮಾಡಲು ಬರುವುದೆಂಬುದು ನಮ್ಮಗಳ ಅಭಿಪ್ರಾಯ. ನಮ್ಮ ಹಿರಿಯರು ಈ ವಿಷಯಕ್ಕೆ ಸಂಬಂಧಿಸಿದ ಆವಗ್ರಂಥಗಳನ್ನು ಓದಿದ್ದರು? ಅವರ ಶಕ್ತಿಯೂ, ಧೈರ್ಯವೂ ನಮಗುಂಟೇ? ಕುಟುಂಬ ನಿರ್ವಹಣೆಯು ಸ್ತ್ರೀಯರ ಹುಟ್ಟುಗುಣ, ಪಾಕಶಾಲೆಯೇ ಅವರ ವಿಶ್ವವಿದ್ಯಾನಿಲಯ, ಹಸುವಿನ ಕೊಟ್ಟಿಗೆಯೇ ಅವರಿಗೆ ಜೀವಕಾರುಣ್ಯವನ್ನು ಬೋಧಿಸುವ ಶ್ರೇಷ್ಠ ಗ್ರಂಥಭಂಡಾರ. ಅತಿಥಿಸತ್ಕಾರ, ವಿವಿಧರಂಗವಲ್ಲಿಗಳಿಂದ ಗೃಹವನ್ನಲಂಕರಿಸುವುದು, ರುಚಿರುಚಿಯಾದ ಪಾಕಗಳನ್ನು ಸಿದ್ಧಗೊಳಿಸುವುದು, ದೇವ, ದೇವರ ಇವುಗಳ ಪೂಜೆ ಇವುಗಳು ಅವರೊಪ್ಪಿಸುವ ಪಾಠಗಳು! ಇವುಗಳೆಲ್ಲವೂ ಬಾಲ್ಯದಿಂದಲೇ ಅವರಿಗಭ್ಯಾಸ

[ಆನೆಯ ಪುಟವನ್ನು ನೋಡಿ]

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನ

ಪುಷ್ಯ ಬ|| ೬ ರವಿವಾರ (೧೬—೧—೧೯೪೪)

ಯಾವ ಗುರುಸಾರ್ವಭೌಮನ ಮಹಿಮಾಪ್ರಭಾವದಿಂದ ಪಂಚಾಚಾರ್ಯರ ಧರ್ಮಪೀಠಗಳು ಪ್ರಕಾಶಕ್ಕೆ ಬಂದುವೋ, ಯಾವ ಮಹಾತ್ಮನ ಪವಿತ್ರವಾದವಿನ್ಯಾಸದಿಂದ ವೀರಶೈವಮತದ ಧ್ವಜಪಟವು ಕರ್ನಾಟಕ-ಆಂಧ್ರ-ಮಹಾರಾಷ್ಟ್ರಾದಿದೇಶಗಳಲ್ಲಿ ಪ್ರಕಾಶಿತವಾಯಿತೋ. ಯಾವ ಗುರುಪ್ರಭಾಕರನ ದಿವ್ಯತೇಜದಿಂದ ವೀರಶೈವಗುರುವರ್ಗವು ಎಚ್ಚೆತ್ತು ತನ್ನ ಕರ್ತವ್ಯಕರ್ಮದಲ್ಲಿ ನಿರತವಾಯಿತೋ, ಯಾವ ಪರಶಿವಾವತಾರಿಯ ಪಾದಾರವಿಂದವನ್ನು ಭಕ್ತವೃಂದವು ಪೂಜಿಸಿ, ಭಜಿಸಿ, ಧ್ಯಾನಿಸಿ, ನಮಿಸಿ, ಸಕಲೇಷ್ಟಾರ್ಥಸಿದ್ಧಿಗಳನ್ನು ಪಡೆಯಿತೋ, ಯಾವ ಧರ್ಮಾಚಾರ್ಯನ ಧರ್ಮಬೋಧಾಮೃತವನ್ನು ಪಾನಮಾಡಿ ಸಮಸ್ತಮಾನವರು ಸದ್ಧರ್ಮಶೀಲರಾದರೋ, ಯಾವ ಯತಿಪುಂಗವನ ಸ್ವಜನಾದ ವಿರತಿಧರ್ಮವನ್ನು ನೋಡಿ ಸಮಸ್ತಮಠೀಯ ಯತಿತತಿಯು ಮುಕ್ತಕಂಠದಿಂದ ಸ್ತುತಿಸಿತೋ, ಯಾವ ಕರುಣಾಕರನ ಕರುಣಾಕಟಾಕ್ಷವೀಕ್ಷಣದಿಂದ ಕಷ್ಟದಲ್ಲಿ ಶಿಲುಕಿ ಬಳಲುತ್ತಿದ್ದ ಭಕ್ತರ ಕಷ್ಟಗಳು ನಷ್ಟವಾದವೋ, ಯಾವ ದಯಾಸಮುದ್ರನ ದಯೆಯಿಂದ ದೀನರ ದುಃಖಗಳು ದೂರವಾದವೋ, ಯಾವ ಪುಣ್ಯಮೂರ್ತಿಯ ಪಾದಸ್ಪರ್ಶನದಿಂದ ಪಾಪಿಗಳು ಪಾಪದಿಂದ ದೂರರಾಗಿ ಪುಣ್ಯಮಯ ಶರೀರಿಗಳಾದರೋ, ಯಾವ ಮಂತ್ರಮೂರ್ತಿಯ ಮಂತ್ರೋಪದೇಶದಿಂದ ಶಿಷ್ಯವೃಂದವು ಮಂತ್ರಮಯವಾಗಿ ವಿರಾಜಿಸಿತೋ, ಯಾವ ಮಹಿಮನ ಮಹಿಮಾತಿಶಯದಿಂದ ಶ್ರೀಜಗದ್ಗುರು ಪಂಚಾಚಾರ್ಯರ ಪವಿತ್ರಾಭಿಧಾನವು ಪ್ರತಿಯೊಬ್ಬರ ಮುಖಮಂಟಪದಲ್ಲಿ ನರ್ತನಮಾಡಲು ಪ್ರಾರಂಭಿಸಿತೋ, ಯಾವ ಧರ್ಮಾವತಾರಿಯ ದಿವ್ಯ ಪ್ರಭಾವದಿಂದ ಉಜ್ಜಯಿನೀ ಸದ್ಧರ್ಮಸಿಂಹಾಸನವು ಜಗತ್ತಿನಲ್ಲಿ ಪ್ರಜ್ವಲಿತವಾಯಿತೋ, ಅಂತಹ ಸಾಕ್ಷಾತ್ ಪರಶಿವಾವತಾರಿಗಳಾದ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಲಿಂಗೈಕ್ಯರಾಗಿ ಪುಷ್ಯ ಬ|| ೬ ರತಿಗೆ ೮ ವರ್ಷಗಳು ಪೂರ್ತಿಯಾಗುವುವು. ಆ ದಿವಸ ಭರತಖಂಡದಲ್ಲಿರುವ ಸಮಸ್ತ ಗುರುಭಕ್ತರೂ ಶ್ರೀಜಗದ್ಗುರುಗಳವರ ಪುಣ್ಯದಿವಸವನ್ನು ವಿಶೇಷ ಭಕ್ತಿಯಿಂದ ಆಚರಿಸಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಯುದ್ಧವಾರ್ತೆ

ಯುಗೊಸ್ಲೇವಿಯಾದಲ್ಲಿ ಸಂಗ್ರಾಮ

ಜರ್ಮನರು ಮತ್ತೆ ಎರಡು ಡಿವಿಜನ್‌ಗಳನ್ನು ಉತ್ತರದ ಮೂಲಕ ಯುಗೊಸ್ಲೇವಿಯಾಕ್ಕೆ ಕರೆತಂದಿದ್ದಾರೆ. ಸಮುದ್ರತೀರಕ್ಕೆ ಹೋಗುವ ಮೂರು ಮುಖ್ಯ ರಸ್ತೆಗಳನ್ನು ರಕ್ಷಿಸುವುದೇ ಇದರ ಉದ್ದೇಶ. ಯುಗೊಸ್ಲೇವಿಯಾದಲ್ಲಿ ಕರ್ನಲ್ ಜೋಸೆಫ್ ಸೆಂಟ್ರಲ್ ಬೋಸ್ನಿಯಾದಲ್ಲಿ ಜರ್ಮನರನ್ನು ಸದೆಬಡಿದು ಕೈತಪ್ಪಿದ್ದ ಪ್ರದೇಶವನ್ನು ದೇಶಭಕ್ತರು ಮತ್ತೆ ಹಿಡಿದಿದ್ದಾರೆಂದು ಹೇಳಲಾಗಿದೆ

ಜರ್ಮನರ ಹೊಸಧಾಳಿ

ಬ್ರಿಟಿಷ್ ರೇಡಿಯೋ ಮಿಲಿಟರಿ ವಿಮರ್ಶಕರು ಮಾತನಾಡುತ್ತ ಜರ್ಮನಿಯು 'ರಹಸ್ಯ ಅಸ್ತ್ರ' ವನ್ನು ತಯಾರಿಸುವ ವಿಷಯದಲ್ಲಿ ಸಂದೇಹವನ್ನು ವ್ಯಕ್ತಪಡಿಸಿದರು. ಹೊಸ ಬಗೆಯ ರಾಕೆಟ್ ಮುಂತಾದ ರಹಸ್ಯ ಅಸ್ತ್ರಗಳನ್ನು ನಾಜಿಗಳು ಸಿದ್ಧಮಾಡಿದ್ದಾರೆಂಬುದು ಬುಡವಿಲ್ಲದ ಸಮಾಚಾರವೆಂದರು. 'ಈ ವರ್ಷದಲ್ಲಿ ಜರ್ಮನ್ ಕದನ ನಿಂತು ಹೋಗುವುದೆಂದು ಮಿಲಿಟರಿ ಕ್ಷೇತ್ರಗಳಲ್ಲಿ ಹೇಳಲಾಗುತ್ತಿದೆ. ೧೯೪೪ ರಲ್ಲೇ ಜರ್ಮನ್ ಸೇನೆಗಳು ಹೊಸ ದಂಡಯಾತ್ರೆಯನ್ನು ಕೈಗೊಳ್ಳಬಹುದು. ಜರ್ಮನರು ರಹಸ್ಯ ಅಸ್ತ್ರಗಳನ್ನೂ ಪ್ರಯೋಗಿಸಬೇಕಾಗಿಲ್ಲ. ಯುಕ್ತಿಯಿಂದ ಜರ್ಮನಿಗೆ ಜಯ ದೊರೆತು ಜಯ ಪಡೆಯಬೇಕಾಗಿದ್ದರೆ ಹೋರಾಟದಿಂದ ಮಾತ್ರ' ಎಂಬುದಾಗಿ ಅವರು ತಿಳಿಸಿದರು

ಫ್ರಾನ್ಸ್ ಮೇಲೆ ಹಗಲಿನಲ್ಲೇ ಮುತ್ತಿಗೆ

ಕಳೆದ ೯ನೇ ತಾರೀಖು ಪಶ್ಚಿಮ ಜರ್ಮನಿಯಲ್ಲಿರುವ ಓಸ್ನಬ್ರೂಕ್ ಬೋರ್ಕಮ್ ದ್ವೀಪ ಮುಂತಾದ ನಗರಗಳ ಮೇಲೆ ಮುತ್ತಿಗೆ ನಡೆಸಲಾಯಿತು. ಮುತ್ತಿಗೆ ತುಂಬಾ ಪರಿಣಾಮಕಾರಿಯಾಯಿತು. ಕೀಲ್‌ನಲ್ಲಿ ಭಯಂಕರ ಬೆಂಕಿ ಹತ್ತಿಕೊಂಡಿತ್ತು. ಎಂಟು ಶತ್ರು ಫೈಟರುಗಳನ್ನು ನಾಶ ಮಾಡಲಾಯಿತು. ಫ್ರಾನ್ಸಿನ ಮೇಲೆ ಹಗಲಿನಲ್ಲೇ ಬ್ರಿಟಿಷ್ ವಿಮಾನಗಳು ಮುತ್ತಿಗೆ ನಡೆಸಿದವು. ಎಡಬಿಡದೆ ಐದು ದಿನ ಹೀಗೆ ಮುತ್ತಿಗೆ ನಡೆಸಿದಂತಾಗಿದೆ ಎಂದು ಪ್ರಕಟವಾಗಿದೆ

ಹಿಟ್ಲರನ ಕಚೇರಿ ಸುಟ್ಟಿದೆ

ಬರ್ಲಿನನ್ನು ಬಿಟ್ಟು ಬಂದ ಪ್ರಯಾಣಿಕರೊಬ್ಬರನ್ನು ಕೇಳಲಾಗಿ ಕಳೆದ ಸೋಮವಾರ ನಡೆದ ಮುತ್ತಿಗೆಯ ಫಲವಾಗಿ ಹಿಟ್ಲರನ ಕಚೇರಿ ಹತ್ತಿಕೊಂಡು ನಾಲ್ಕು ಗಂಟೆ ಉರಿಯಿತೆಂದೂ ಒಂದು ಕೋಣೆಯೂ ಉಪಯೋಗಕ್ಕೆ ಯೋಗ್ಯವಾಗಲಿಲ್ಲವೆಂದೂ ತಿಳಿಸಿದರು. ಜರ್ಮನ್ ವಿಮಾನದಳಕ್ಕೆ ಸೇರಿದ 50 ಸಾವಿರ ಗ್ಯಾಲನ್ ಎಣ್ಣೆ ಹಿಡಿಯುವ ಟ್ಯಾಂಕ್ ಸಹ ಬರ್ಲಿನ್ನಿನಲ್ಲಿ ನಾಶವಾಯಿತು. ಸುಮಾರು 2700 ಜನರು ಸತ್ತರು. 1,40,000 ಜನರು ಮನೆಮಠಗಳನ್ನು ಕಳೆದುಕೊಂಡಿದ್ದಾರೆ. ಸಿಕ್ಕಿದ ವಾಹನಗಳನ್ನೇರಿ ಜರ್ಮನರು ಬರ್ಲಿನ್ ನಗರದಿಂದ ಓಡಿಹೋಗುತ್ತಿದ್ದಾರೆ. ನಗರವು ರಣರಂಗದಂತೆ ಕಾಣುತ್ತಿದೆ. ನೂರಾರು, ಸಾವಿರಾರು ಜನ ದಿನವೂ ನಗರವನ್ನು ಬಿಟ್ಟು ಹೋಗುತ್ತಿದ್ದಾರೆ. ಅವರನ್ನು ತಡೆಯಲು ಪೋಲೀಸರು ಶಕ್ತರಾಗಿಲ್ಲ ಎಂದು ತಿಳಿಸಿದ್ದಾರೆ

ಈಗಿನ ಒಪ್ಪಂದ ಬದಲಾವಣೆ ಹೊಂದಬೇಕು

ಈಜಿಪ್ಟಿನ ಮಹಾಪ್ರಧಾನರಾದ ಶ್ರೀ ನಹಾಸ್ ಪಾಷಾರವರು ... ಮಾತನಾಡುತ್ತ ... ಬ್ರಿಟನ್ನಿನೊಡನೆ ಈಜಿಪ್ಟಿನ ಸಂಬಂಧವನ್ನು ನಿರ್ದೇಶಿಸುವುದಕ್ಕೆ ಈಗಿರುವ ಒಪ್ಪಂದವು ಬದಲಾಯಿಸಲ್ಪಡಬೇಕೆಂದು ... ಹೇಳಲಾಗಿದೆ

ಜರ್ಮನಿ ಶಾಂತಿಗೆ ಬರುವುದು ಖಂಡಿತ

ಮಿತ್ರ ಸೇನೆಗಳು ಜರ್ಮನಿಗೆ ಕಾಲಿಡುವ ಮೊದಲೇ ವಿಮಾನ ಮುತ್ತಿಗೆಗಳ ಸಲುವಾಗಿ ಜರ್ಮನಿಯು ಶಾಂತಿಗಾಗಿ ಮುಂದ ಬರುತ್ತದೆಂದು ಸುಪ್ರಸಿದ್ಧ ಲೇಖಕರಾದ ಶ್ರೀ ಎ. ಜೆ. ಕನ್‌ನಿಂಗ್ಹಾಮರವರು ಹೇಳುತ್ತಿದ್ದಾರೆ.

ಮಡೀರಾದಲ್ಲಿ ಮಿಲಿಟರಿ ಮೂಲ ದೊರೆತಿಲ್ಲ

ಅಜೋರ್ಸ್‌ನಲ್ಲಿ ಬ್ರಿಟನ್ನಿಗೆ ಪೋರ್ಚುಗಲ್ಲು ಮಿಲಿಟರಿ ನೆಲೆಗಳನ್ನು ಬಿಟ್ಟು ಕೊಟ್ಟಂತೆ ಪಶ್ಚಿಮ ಆಫ್ರಿಕಾ ತೀರದಾಚೆ ಇರುವ ಮಡೀರಾ ದ್ವೀಪದಲ್ಲಿ ಸಹ ಮಿಲಿಟರಿ ಮೂಲಗಳನ್ನು ಕೊಡಲಾಗಿದೆಯೆಂಬ ವಾರ್ತೆ ಸುಳ್ಳೆಂದು ಅಧಿಕಾರಯುತವಾಗಿ ತಿಳಿಸಲಾಗಿದೆ.

ಕವೀಂಗ್ ಮೇಲೆ ಮುತ್ತಿ

ನ್ಯೂ ಐರ್ಲೆಂಡಿನಲ್ಲಿರುವ ಜಪಾನ್ ಮೂಲದ ಕವೀಂಗ್ ಮೇಲೆ ಮಿತ್ರ ವಿಮಾನಗಳು ಮುತ್ತಿಗೆ ನಡೆಸಿದವು. ಜಪಾನಿನ ಎರಡು ದೊಡ್ಡ ಕ್ರೂಯಿಜರುಗಳಿಗೂ ಮತ್ತು ಎರಡು ಡಿಸ್ಟ್ರಾಯರುಗಳಿಗೂ ಏಟು ಬಿತ್ತು. ಎರಡು ಡಿಸ್ಟ್ರಾಯರುಗಳು ಹತ್ತಿಕೊಂಡು ಉರಿಯಲಾರಂಭಿಸಿದವು. ೧೩ ಜಪಾನ್ ವಿಮಾನಗಳನ್ನು ಹೊಡೆದು ಕೆಡವಲಾಯಿತು. ರಬೋಲ್ ಮೇಲೆ ಮುತ್ತಿಗೆ ನಡೆಸಿ, ಇನ್ನೂ ೧೯ ಜಪಾನ್ ವಿಮಾನಗಳನ್ನು ನಾಶಮಾಡಲಾಯಿತೆಂದು ಹೇಳಲಾಯಿತು.

ಜಪಾನಿನ ದೌರ್ಬಲ್ಯ

೧೯೪೪ರಲ್ಲಿ ಜಪಾನಿನ ಸಂಗ್ರಾಮ ವಸ್ತು ಸೃಷ್ಟಿ ಕಾರ್ಯಕ್ಕೆ ಅನೇಕ ಅಡಚಣೆಗಳು ಬರುತ್ತವೆ. ಎಣ್ಣೆ ಮತ್ತು ರಬ್ಬರಿನ ಅಭಾವ ಮಿತಿಮೀರಬಹುದು. ಜನಬಲದ ಕೊರತೆಯನ್ನಂತೂ ನಿವಾರಿಸಲು ಅಸಾಧ್ಯವಾಗುವುದು. ಜಪಾನು ಎಷ್ಟು ಉಕ್ಕನ್ನು ತಯಾರಿಸುವುದೆಂಬುದರ ಮೇಲೆ ಅದರ ಸಂಗ್ರಾಮ ಯಂತ್ರದ ಬಲಾಬಲ ನಿಂತಿದೆ. ಪರ್ಲ್ ಹಾರ್ಬರ್ ಘಟನೆಯಿಂದೀಚೆಗೆ ಜಪಾನು ಜಯಿಸಿರುವ ಯಾವ ಕ್ಷೇತ್ರವೂ ಉಕ್ಕಿನ ತಯಾರಿಗೆ ಸಹಾಯಕವಾಗಿಲ್ಲ ಎಂದು ಹೇಳಲಾಗಿದೆ.

ಆಸ್ಟ್ರೇಲಿಯಾ ಮಂತ್ರಿಯ ಅಭಿಪ್ರಾಯ

ಬಂಗಾಳಕ್ಕೆ ಶ್ರೀ ರಿಚರ್ಡ್ ಕೇಸಿಯವರನ್ನು ಗವರ್ನರಾಗಿ ನೇಮಿಸಿರುವ ವಿಷಯದಲ್ಲಿ ಆಸ್ಟ್ರೇಲಿಯಾದ ಮಂತ್ರಿಗಳಾದ ಎಡ್ವರ್ಡ್ ಜೆ. ವಾರ್ಡ್‌ರವರು "ಆವರ ನೇಮಕ ಕುರಿತು ಭಾರತೀಯರು ಪ್ರತಿಭಟಿಸಿರುವುದು ನ್ಯಾಯವಾಗಿಯೇ ಇದೆ. ಆ ಸ್ಥಾನಕ್ಕೆ ಬರಲು ಅವರಿಗೆ ತುಂಬಾ ಅನುಭವವಿದೆಯೆಂದು ವಾದಿಸಲಾಗುತ್ತಿದ್ದರೂ, ಭಾರತ ವಿಚಾರ ಕುರಿತು ಸದವೀಧರರಾದ ಭಾರತೀಯರಿಗಿರುವ ಜ್ಞಾನಾನುಭವಕ್ಕೆ ಅವರದು ಸರಿಹೋಗದು" ಎಂದು ತಿಳಿಸಿದ್ದಾರೆ.

ನ್ಯೂಗಿನಿಯಾದಲ್ಲಿ ಮುಂದೋಟ

ನ್ಯೂಬ್ರಿಟನ್ನಿನಲ್ಲಿಳಿದಿರುವ ಅಮೇರಿಕದ ಸೈನಿಕರು ಗ್ಲಾಸ್ಟರ್ ಕೊಲ್ಲಿಯ ಕಡೆಗೆ ನುಗ್ಗುತ್ತಿದ್ದಾರೆ. ಅಮೇರಿಕ ಟ್ಯಾಂಕುಗಳ ವಿಮಾನದಳದ ಬೆಂಬಲವಿದೆ. ಜಪಾನರ ಪ್ರತಿಭಟನೆ ಹೆಚ್ಚುತ್ತಿದೆ. ಅಮೇರಿಕನ್ ಸ್ಥಾನವೊಂದರ ಮೇಲೆ ಜಪಾನರು ತಿರುಗಿಬಿದ್ದಾಗ ಯುದ್ಧ ಆಪ್ತವಾಯಿತು. ಬಹು ನವ್ಯವಾದ ಕೇಪ್‌ಗ್ಲಾಸ್ಟರ್ ವಿಮಾನನಿಲ್ದಾಣ ಈಗ ಮಿತ್ರರ ಕೈವಶವಾಗಿದೆ. ಅದನ್ನು ವಿಸ್ತಾರಗೊಳಿಸಲಾಗುತ್ತಿದೆ. ಜಪಾನ್ ವಿಮಾನಗಳು ಹಡಗುಗಳ ಮೇಲೆ ಉಗ್ರಮುತ್ತಿಗೆ ನಡೆಸಿದವು. ನ್ಯೂ ಹ್ಯಾನೋವರ್ ದ್ವೀಪದಲ್ಲಿ ಜಪಾನ್ ಕ್ರೂಯಿಜರ್ ಒಂದಕ್ಕೆ ಏಟುಬಿತ್ತು.

ಫಾರ್ಮೋಸಾ ದ್ವೀಪವನ್ನು ಚೀಣವು ಬಿಟ್ಟುಕೊಡುವುದೇ?

ಜಪಾನರ ಮ್ಯಾಂಡೇಟ್ ಅಧಿಕಾರಕ್ಕೆ ಒಳಪಟ್ಟಿದ್ದ ದ್ವೀಪಗಳನ್ನೆಲ್ಲ ಅಮೇರಿಕವು ವಶಪಡಿಸಿಕೊಳ್ಳಬೇಕೆಂದು ಚಿಕಾಗೋ ಟ್ರಿಬ್ಯೂನ್ ಪತ್ರಿಕೆ ಸೂಚಿಸಿದೆ. ಅದಲ್ಲದೆ ಫಾರ್ಮೋಸಾ ದ್ವೀಪದಲ್ಲಿ ಒಂದು ಬಲವಾದ ಮೂಲವನ್ನು ಸ್ಥಾಪಿಸಲು ಚೀಣವು ಅವಕಾಶ ಕೊಡಬೇಕೆಂದು ಹೇಳಲಾಗಿದೆ.

ಜಪಾನ್ ಜನಾಂಗದ ಸತ್ವಪರೀಕ್ಷೆ

"ಜಪಾನ್ ಜನಾಂಗದ ಸತ್ವಪರೀಕ್ಷೆಯ ಕಾಲ ಸಮೀಪಿಸುತ್ತಿದೆ" ಎಂದು ಜಪಾನ್ ಮಹಾಸ್ವದೇಶ ಮಂತ್ರಿ ಜ|| ಟೋಜೋರವರು ಹೊಸವರ್ಷದ ಸಂದೇಶದಲ್ಲಿ ತಿಳಿಸಿದ್ದಾರೆ.

ಅಮೇರಿಕನರು ಸುತ್ತ ಪ್ರಬಲರಾಗಿ ಪ್ರತಿ ಮುತ್ತಿಗೆ ನಡೆಸುತ್ತಿರುವುದರಿಂದ ಯುದ್ಧವು ತೀವ್ರಗೊಂಡಿರುವುದನ್ನು ಮುಚ್ಚಿಡದೆ ಪೂರ್ವ ಏಷ್ಯಾದಲ್ಲಿ ನಾವು ಗಳಿಸಿದ ವಿಜಯ ಫಲಗಳ ಪರಿಣಾಮವನ್ನು ಅವಲಂಬಿಸಿದೆ. ಏಷ್ಯದ ಮುಂದಿನ ಪುನಸ್ಸೃಷ್ಟಿ ಸಹ ಅದರ ಮೇಲೆಯೇ ನಿಂತಿದೆ. ಶತ್ರುಬಲವನ್ನು ಸಂಪೂರ್ಣವಾಗಿ ಮುರಿಯಲು ನಾವೆಲ್ಲ ಐಕ್ಯಮತ್ಯದಿಂದ ಕೆಲಸ ಮಾಡಬೇಕು. ರಣರಂಗ, ಗೃಹರಂಗ ಎಂಬ ಭೇದ ಈಗ ಇಲ್ಲ. ಅಂತಹ ಈಗ ಪೂರ್ತಾ ಜಪಾನ್ ಸಾಮ್ರಾಜ್ಯದ ಸತ್ವಪರೀಕ್ಷೆಯಾಗುತ್ತಿದೆ ಎಂದರು.

ಶತ್ರುಗಳ ನೈತಿಕ ಬಲ ಕುಗ್ಗಿಲ್ಲ

ದೀರ್ಘಕಾಲ ಹೋರಾಡಲು ಅವಶ್ಯಕವಾದ ಶಸ್ತ್ರಸಂಪತ್ತು, ಆಹಾರ, ಕಚ್ಚಾಸಾಮಗ್ರಿಗಳು ಜರ್ಮನಿಗೆ ಇಲ್ಲದಂತೆ ಮಾಡಲಾಗಿದೆ. ಇಟಲಿ ಈಗಾಗಲೇ ಪಕ್ಷದ ಹೊರಗೆ ಬಿದ್ದಿದ್ದರೂ ಕೇವಲ ಜರ್ಮನಿ ಮತ್ತು ಜಪಾನ್ ಮಾತ್ರ ಉಳಿದಿವೆ. ಜಪಾನಿನ ಕೈಗಾರಿಕೋದ್ಯಮ ಕೇಂದ್ರಗಳ ಮೇಲೆ ವಿಮಾನ ದಾಳಿ ಇನ್ನೂ ಮುಖ್ಯವಾಗಿ ನಡೆದಿಲ್ಲ. ಜರ್ಮನರಿಗೆ ತಿನ್ನಲು ಆಹಾರ ಸಿಗುತ್ತಿದೆ. ಈ ಯುದ್ಧದಲ್ಲಿ ೧೯೧೮ರಿಂದೀಚೆಗೆ ಒಂದೂ ಇದಲ್ಲ. ಜಪಾನು ಇತ್ತೀಚಿನ ವರ್ಷದ ಒಳಗೆ ಪಡೆದ ಪ್ರದೇಶದಲ್ಲಿ ಕೇವಲ ಸ್ವಲ್ಪ ಭಾಗವನ್ನು ಮಾತ್ರ ಕಳೆದುಕೊಂಡಿದೆ. ಜನರ ನೈತಿಕ ಬಲ ಕುಗ್ಗಿಲ್ಲ. ಜಪಾನಿನ ಜನರು ಅದರ ದೀರ್ಘಕಾಲ ಯುದ್ಧ ನಡೆಸಲು ಶಕ್ತಿ ಇಲ್ಲದೆ ಇಲ್ಲ. ಜಪಾನಿನ ದೊಡ್ಡ ದೌರ್ಬಲ್ಯವೆಂದರೆ ಹಡಗುಗಳ ಕೊರತೆ—ಎಂಬುದಾಗಿ ಗೆಲುವಿನ ಸಂಗ್ರಾಮ ಸಮಿತಿಯ ವರ್ತಮಾನವು ತಿಳಿಸುತ್ತದೆ.

ಹಿಟ್ಲರನ ಸಂಗ್ರಾಮ ವಸ್ತು ಸಂಪತ್ತು

ಮಿತ್ರರೆಲ್ಲರ ಬಹುಪ್ರಬಲ ಮುತ್ತಿಗೆಗಳನ್ನು ಎದುರಿಸಿ, ಬಹುಕಾಲ ರಕ್ಷಣೆಗಾಗಿ ಹೋರಾಡಲು ಹಿಟ್ಲರನಿಗೆ ಸಾಧ್ಯವಿದೆಯೆಂದೂ ಈಗ ಜರ್ಮನರು ಆಕ್ರಮಿಸಿರುವ ಯೂರೋಪು ತಯಾರಿಸುತ್ತಿರುವ ಸಂಗ್ರಾಮ ವಸ್ತುಗಳು ಇದಕ್ಕೆ ಸಾಕೆಂದೂ ಅಮೇರಿಕನ್ ಆರ್ಥಿಕ ನಿಪುಣರು ಲೆಕ್ಕ ಹಾಕಿದ್ದಾರೆ. ಜರ್ಮನಿಯ ಆರ್ಥಿಕ ಕಷ್ಟದ ದೆಸೆಯಿಂದ ಅದರ ರಾಜಕೀಯ ಮತ್ತು ಮಿಲಿಟರಿ ಶಕ್ತಿ ಕಡಿಮೆಯಾಗಬಹುದು. ಆದರೆ ಅಷ್ಟರಿಂದಲೇ ಜರ್ಮನಿಯ ಪತನ ಆಗುವುದಿಲ್ಲ. ೧೯೪೪ರಲ್ಲಿ ಮಿತ್ರರಾಷ್ಟ್ರಗಳು ನಡೆಸುವ ಆಘಾತವನ್ನು ಎದುರಿಸಲು ಸಾಧ್ಯವಿರುವಷ್ಟು ಮಟ್ಟಿಗೆ ಜರ್ಮನಿಯ ಆರ್ಥಿಕ ಸಂಪತ್ತು ವಿಸ್ತರಿಸಲು ಸಾಧ್ಯವಿಲ್ಲ. ಇದರಿಂದ ೧೯೪೪ರಲ್ಲಿ ಅತ್ಯಂತ ಹೆಚ್ಚಿನ ಸಂಗ್ರಾಮ ವಸ್ತುಗಳು ತಯಾರಾಗವಷ್ಟು ಮಟ್ಟಿಗೆ ಜರ್ಮನಿಯು ತನ್ನ ಕಾರ್ಖಾನೆಗಳನ್ನು ವಿಸ್ತರಿಸಿ ಮಾಡಿರುವುದಿಲ್ಲ. ಈಗ ಅದು ಹೊಂದಿರುವ ಸಾಧನಗಳಿಂದ ಪೂರ್ಣ ಪ್ರಯೋಜನ ಪಡೆಯದೆ ಇರುವುದಕ್ಕೆ ಕಾರಣಗಳು ಆಗ ಕಂಡುಬರುತ್ತವೆ ಎಂದು ಹೇಳಲಾಗಿದೆ.

ಬಲ್ಗೇರಿಯಾದಲ್ಲಿ ಉಗ್ರಪರಿಸ್ಥಿತಿ

ಬಲ್ಗೇರಿಯಾ ಪರಿಸ್ಥಿತಿ ಉಗ್ರವಾಗಿದೆ. ಇದಕ್ಕೆ ನಾನಾ ಕಾರಣಗಳಿರಬಹುದು. ಆದರೆ, ಸೋಫಿಯಾ ಮೇಲೆ ಮುತ್ತಿಗೆ ನಡೆದುದು, ರಷ್ಯನರು ವಿಶೇಷತರವಾಗಿ ಮುಂದೆ ನುಗ್ಗುತ್ತಿರುವುದು ಮತ್ತು ಇತ್ತೀಚೆಗೆ ರೇಡಿಯೋ ಮೂಲಕ ಬಲ್ಗೇರಿಯಾಗೆ ರಷ್ಯವು ಕೊಟ್ಟ ಎಚ್ಚರಿಕೆ ಇವೆಲ್ಲ ಇದಕ್ಕೆ ಕಾರಣಗಳಾಗಿರಬಹುದು. ಸಮೀಪವಾಗಿ ಹೇಳಬೇಕಾದರೆ ಬಲ್ಗೇರಿಯಾ ಪ್ರದೇಶಗಳಲ್ಲಿ ಶೇಕಡ ೬೦ ರಷ್ಟರ ವರೆಗೆ ಇದ್ದಾರೆ. ಸರಕಾರದ ಅಧಿಕಾರದಲ್ಲಿರುವವರಲ್ಲಿ ಶೇಕಡ 10 ಮಂದಿ ಮಾತ್ರ ಜರ್ಮನರಿಗೆ ಅನುಕೂಲರಾಗಿದ್ದಾರೆ. ಜನರು ನಿರುತ್ಸಾಹಿಗಳಾಗಿದ್ದಾರೆ. ಕಳೆದ ಬೇಸಿಗೆಯಿಂದ ದೇಶಭಕ್ತರ ಗುಂಪಿನವರು ಚಳವಳಿ ಮಾಡುತ್ತಿದ್ದಾರೆ, ಈ ದೇಶಭಕ್ತರ ಪಡೆ ಈಗಾಗಲೇ ೬000 ದಷ್ಟು ಬೆಳೆದಿರಬಹುದು! ಈ ಚಳುವಳಿಯನ್ನು ನಿಗ್ರಹಿಸಲು ಜರ್ಮನರು ಕ್ರಿಸ್ಮಸ್ ದಿನದಲ್ಲಿ ಕಮ್ಯುನಿಸ್ಟ್ ವಿರುದ್ಧ ಕಾರ್ಯಕ್ರಮವನ್ನು ಕೈಗೊಳ್ಳುತ್ತಿದ್ದರು. ಇದರಲ್ಲಿ ೬000 ಜನರನ್ನು ಬಂಧಿಸಲಾಗಿದೆ. ಡೆಮೋಕ್ರಾಟ್ ಲಿಬರಲ್ ಕಮ್ಯುನಿಸ್ಟ್ ಪಕ್ಷಗಳ ನೇತಾರರು ಹಸ್ತಪತ್ರಿಕೆಗಳನ್ನು ಪ್ರಕಟಿಸಿದರು. ಜರ್ಮನರನ್ನು ವಶಪಡಿಸಿಕೊಂಡರು. ಬಲ್ಗೇರಿಯನರನ್ನು ಸಾರ್ವಜನಿಕರು ಅಪಾರವಾಗಿ ನಿಂದಿಸಿದ್ದಾರೆ. ಪೂರ್ವ ಮಿತ್ರರಾಷ್ಟ್ರ ವಿರುದ್ಧ ಮುಖ್ಯ ಕಡೆಗಳಲ್ಲೆಲ್ಲ ರಕ್ಷಣೆ ಸಿದ್ಧತೆಯನ್ನು ಪೂರ್ಣಗೊಳಿಸಲಾಗಿದೆಯೆಂದು ವರ್ತಮಾನ ತಿಳಿಸುತ್ತದೆ.

ಜಪಾನನ್ನು ಹೊಡೆಯಲು ತಕ್ಕ ನೌಕಾಬಲ ಬೇಕು

ಮುಂದೆ ಜಪಾನಿನೊಂದಿಗೆ ನಡೆಯಲಿರುವ ಕದನಕ್ಕಾಗಿ ತಕ್ಕ ಬ್ರಿಟಿಷ್ ನೌಕಾಬಲವನ್ನು ಕಟ್ಟಲೂ ಸಹ ತಕ್ಷಣ ಪೂರ್ಣ ಪ್ರಯತ್ನ ನಡೆಯಬೇಕಾಗುತ್ತದೆ. ಜಪಾನಿನಿಂದ ದಕ್ಷಿಣ ಪೆಸಿಫಿಕ್ ದ್ವೀಪ ೩೦೦೦ ಮೈಲಿ ಆಗುತ್ತದೆ. ಈ ದೀರ್ಘ ಜಲಪ್ರದೇಶದಲ್ಲಿ ಎಲ್ಲಿ ಬೇಕಾದರೂ ಜಪಾನಿನ ಮೇಲೆ ಕದನವು ಆದರೆ ಮುಂದೆಗೆ ನಡೆಸಲು ಅನುಕೂಲವಾದ ನೌಕಾ ಅಥವಾ ವಿಮಾನ ಮೂಲ ಮಿತ್ರರಿಗೆ ಇಲ್ಲ. ಮಾರ್ಗದಲ್ಲಿ ಮುಂದುಗಡೆ ಇರುವ ಅಮೇರಿಕ ಮೂಲಗಳನ್ನು ಜಪಾನಿನಿಂದ ವಶಪಡಿಸಿಕೊಳ್ಳಲು ಬ್ರಿಟಿಷರು ಅಮೇರಿಕನರೂ ಪ್ರಚಂಡ ನೌಕಾಬಲವನ್ನು ಗಳಿಸಬೇಕು. ಆಗ ಮಾತ್ರ ಜಪಾನಿನ ಹೃದಯಕ್ಕೆ ಏಟು ಹಾಕಲು ಸಾಧ್ಯವಾಗುತ್ತದೆಂದು ಬ್ರಿಟಿಷ್ ಅಧಿಕಾರಿಗಳೊಬ್ಬರು ತಿಳಿಸಿದ್ದಾರೆ.

ಕಲಿಕತ್ತಾ ಪೌರಸಭೆಯ ಪ್ರತೀಕಾರ

ದಕ್ಷಿಣ ಆಫ್ರಿಕೆಯ ಡರ್ಬನ್ ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ಭಾರತೀಯರ ವಿಚಾರದಲ್ಲಿ ಪಕ್ಷಪಾತದಿಂದ ತೋರಿರುವುದರಿಂದ ಕಲಿಕತ್ತೆಯ ಮ್ಯುನ್ಸಿಪಲ್ ಕಾರ್ಪೊರೇಷನ್ ದಕ್ಷಿಣ ಆಫ್ರಿಕೆಯ ಯೂರೋಪಿಯನರಿಗೆ ಯಾರಿಗೂ ತಮ್ಮಲ್ಲಿ ಹುದ್ದೆ ಕೊಡಕೂಡದೆಂದೂ, ಕಾರ್ಪೊರೇಷನಿನ ಒಳಗಾದ ಯಾವ ಸೂಕ್ತ ಸ್ಥಾನಲಿ, ನೆಲವನ್ನು ಅವರಿಗೆ ಮಾರಾಟಕ್ಕೆ ಕೊಡುವುದಾಗಲೀ ವಿಕ್ರಯಿಸುವುದಾಗಲೀ ಕೂಡದೆಂದೂ ತೀರ್ಮಾನಿಸಿ ಈ ನಿರ್ಣಯವನ್ನು ಬಂಗಾಲದ ಸಕಲ ಮುನಿಸಿಪಾಲಿಟಿಗಳಿಗೂ ಕಳುಹಿಸಿ ಇದೇ ನಿರ್ಧಾರವನ್ನು ಅಂಗೀಕರಿಸುವಂತೆ ಮಾಡುವಂತೆ ಕೇಳಿಕೊಳ್ಳಲು ಕಾರ್ಪೊರೇಷನ್ ನಿರ್ಧರಿಸಿತು. ಮುಸ್ಲಿಂ ಲೀಗ್ ನಾಯಕರಾದ ಶ್ರೀ ಎ. ಆರ್. ಸಿದ್ದಿಕ್ಕಿಯವರು ಈ ನಿರ್ಣಯವನ್ನು ಕಾರ್ಪೊರೇಷನ್ ಮುಂದಿಡುತ್ತಾ ದಕ್ಷಿಣ ಆಫ್ರಿಕೆಯಲ್ಲಿ ನಡೆಯುತ್ತಿರುವ ಅನ್ಯಾಯ ನಿವಾರಣೆ ವಿಷಯದಲ್ಲಿ ಇಂಡಿಯಾ ಸರ್ಕಾರವಾಗಲಿ, ಬ್ರಿಟಿಷ್ ಪ್ರಭುಗಳೂ ಏನಾದರೂ ಕಾರ್ಯಕ್ರಮ ನಡೆಸಬಲ್ಲರೆಂಬ ಆಶೆ ಅಳಿದಿದೆ. ಅವರನ್ನು ರಕ್ಷಿಸಿ ಉಳಿಸುತ್ತಿರುವವರೆಂದರೆ ನಮಗೇ ಯುದ್ಧದಲ್ಲಿಯೂ ಬಂಧಿಸಿಡಲು ಹಿಂಜರಿಯುತ್ತಿರುವವರು. ಬ್ರಿಟನ್ನಿಗೆ "ಸರಿಯಾದ ನೀತಿಯಲ್ಲ" ಎಂದರು, ಕಡೆಗೆ ಅಂಗೀಕಾರವಾಯಿತು.

(೧ನೆಯ ಪುಟದ ಮುಂದರಿದ ಭಾಗ)

ಹಾಗೆ ತಿಳಿಯದರಿಂದಲೂ, 'ಆರೋಗ್ಯ ಮತ್ತು ಧರ್ಮ' ವೆನ್ನುವ ಲೇಖನದ ಮೂಲ್ಯಾಚರಣದ ಕೃಪದಿಂದಲೂ ಅವರ ಪರಿವಾರದವರನ್ನು ಬೆಚ್ಚಿಸಿ ಕೀರ್ತಿವಂತರಾಗಿಯೂ, ತೇಜಸ್ವಿಗಳಾಗಿಯೂ ಬೆಳಗುತ್ತಿದ್ದರು ಅವರ ಹಿಂದೂ ಧಾರ್ಮಿಕವಾದ ಅನೇಕಗಳಲ್ಲಿ ರಾಮಾಯಣ ಭಾರತಾದಿ ಗ್ರಂಥಗಳಲ್ಲಿ ಕೂಡ ಆಗಿನ ಕಾಲದ ಸ್ತ್ರೀಯರ ಕುಟುಂಬಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಗಳನ್ನು ಸ್ವತಃ ಮಾಡುತಿದ್ದರೆನ್ನುವುದಕ್ಕೆ ಸಾಕಾದಷ್ಟು ನಿದರ್ಶನಗಳಿವೆ ಹೀಗೆ ಬರೆಯುವುದರಿಂದ ದಾದಿಯರನ್ನು ಅವನಿಗಾಗ್ರಹಿಸಿಕೂಡುವ ವೈದ್ಯರನ್ನು ಅವಹೇಳನಮಾಡಿದ್ದಾಗಿ ನನ್ನ ಸಹೋದರಿಯರು ತಿಳಿಯಬಾರದು ಅಂತಹ ಎಷ್ಟೋ ಅನುಕೂಲಗಳನ್ನು ಭಗವಂತನು ಕೊಟ್ಟಿದ್ದಾಗ್ಗ್ಯೂ ದೇಹಾರೋಗ್ಯವನ್ನು ಕೊಡುವಷ್ಟು ಕೆಲಸಗಳನ್ನು ಸ್ವತಃ ಮಾಡಿದರೂ ವೈದ್ಯರಿಂದ ವೈದ್ಯರಿಗೆ ತೆರುವ ಹಣವಲ್ಲಿ ಬಹುಭಾಗ ಉಳಿಯುವುದು ಆರೋಗ್ಯಭಾಗ್ಯವನ್ನು ಪಡೆದು ವೃಥಕಾಯರಾದ ಸಂತಾನದಿಂದಕೂಡಿದ ನವ ಚೈತನ್ಯಪರಿಪೂರ್ಣ ನೂತನ ಜನಾಂಗದ ಸಿದ್ಧತೆಯನ್ನು ಮಾಡುವುದು ಪ್ರತಿಯೊಬ್ಬ ತಾಯಿಯರ ಪವಿತ್ರವಾದ ಕರ್ತವ್ಯವಾಗಿರಬೇಕೆಂಬ ಉದ್ದೇಶದಿಂದಲೇ ಇಷ್ಟನ್ನೆಲ್ಲ ಬರೆದಿರುವ ಆದುದರಿಂದ ಅನುಕೂಲತೆಯುಳ್ಳ ನನ್ನ ಪ್ರತಿ ತಂಗಿಯರ ಕ್ಷಮೆಯನ್ನು ನಾನು ಕೇಳಿಕೊಳ್ಳುವನು ಇಂತಹ ತಾಯಿತಂಗಿಯರ ಅನುಕರಣವು ಇತರ ಹೆಂಗಸರಲ್ಲಿಯೂ ಧಾರಾಳವಾಗಿ ಪ್ರವೇಶಿಸಿ ಜನಾಂಗದ ಆರೋಗ್ಯವನ್ನು ಕಾಳಜಿಮಾಡುತ್ತಿವ ಸಿಸ್ಸತ್ರಿಯ ಬ್ಲಾಸವರು ನಮ್ಮಿಂತ ಅನುಕೂಲತೆಯನ್ನು ಪೇಕ್ಷಿಸಿ ದರೂ ಜನಪ್ರಿಯವಾದ ದೇಹಾರೋಗ್ಯವಿಡುವವರೂ ... ಅನುಸರಿಸುವದು ಹುಚ್ಚುತನ ನಾಗರಿಕತೆಯ ಅನುಕರಣವು ಅನುಕೂಲಸ್ಥರಿಗೆ ಅವರನುಕರಣವು ಮಧ್ಯಮವರ್ಗದವರಿಗೆ ಈ ಅನುಕರಣದಿಂದಲೇ ನಾವು ಹಾಳಾಗುತ್ತಿದ್ದೇವೆ ಕುಟುಂಬದ ಆರೋಗ್ಯವು ಬಹುಮಟ್ಟಿಗೆ ತಾಯಿತಂಗಿಯರಾದ ನಿಮ್ಮನ್ನೇ ಅವಲಂಬಿಸಿರುವುದರಿಂದ ನೀವು ಎಷ್ಟೇ ಕಷ್ಟಪಟ್ಟಾದರೂ ಅದನ್ನು ರಕ್ಷಿಸುವ ಪ್ರಯತ್ನಮಾಡಬೇಕಾದುದು ನಿಮ್ಮ ಕರ್ತವ್ಯವು ಅಮೇರಿಕೆಯ ಸುಪ್ರಸಿದ್ಧ ಕ್ಷಯರೋಗ ವೈದ್ಯರಾದ ಡಾಕ್ಟರ್ "ಮುತ್ತು" ಎಂಬವರು "ದೇಶದ ಕುಟುಂಬದ ಆರೋಗ್ಯರಕ್ಷಣದ ಕಡೆಗೆ ನನ್ನ ತಾಯಿತಂಗಿಯರು ಪೂರ್ಣಗಮನಕೊಡಲ್ಪಟ್ಟರೆಂದರೆ ಆಗಿನಿಂದ ವೈದ್ಯರಾದ ನಮ್ಮ ಅವಶ್ಯಕತೆಯೇ ಇಲ್ಲದಂತಾಗಿ ನಮಗೆ ಕೆಲಸವೇ ಇಲ್ಲದೇ ಹೋಗುವುದು ಅಂತಹ ದಿನವನ್ನು ಬಹುಬೇಗ ಬರಮಾಡಬೇಕೆಂದು ತಾಯಿತಂಗಿಯರನ್ನು ಕೈಜೋಡಿಸಿ ಬೇಡುವನು" ಎಂದು ಹೇಳಿರುವರು ಅವರ ಉದ್ದೇಶವನ್ನು ಜನಾಂಗದ ತಾಯಿತಂಗಿಯರಾದ ನೀವು ಸಫಲಗೊಳಿಸುವ ಸುದಿನವನ್ನು ಜಗಚ್ಛಕ್ತಿಯು ಬೇಗ ಕೊಡಲೆಂದು ಪ್ರಾರ್ಥಿಸುವೆನು

(ಸರಸ್ವತಿ)

ಲಂಡನ್ ಸಮ್ಮೇಳನದ ನಿರ್ಣಯ

ಲಂಡನ್ ನಗರದಲ್ಲಿ ನಡೆದ ವಿಶ್ವವಿದ್ಯಾನಿಲಯದ ಲೇಬರ್ ಪೆಡರೇಷನ್ನಿನ ಸಮ್ಮೇಳನದಲ್ಲಿ ಭರತಖಂಡದ ವಿಚಾರದಲ್ಲಿ ಅನುಸರಿಸುತ್ತಿರುವ ನೀತಿ ಬದಲಾವಣೆಯಾಗಬೇಕೆಂಬುದಾಗಿ ಒತ್ತಾಯಪಡಿಸಲಾಯಿತು ಭಾರತದ ವಿಚಾರದಲ್ಲಿ ಬ್ರಿಟಿಷ್ ಸರಕಾರದವರು ಅನುಸರಿಸುತ್ತಿರುವ ಅಪ್ರಗತಿದಾಯಕ ನೀತಿಗಾಗಿ ಸರಕಾರವನ್ನು ಖಂಡಿಸುವ ನಿರ್ಣಯವಾಯಿತು ಶ್ರೀ ಅಮೇರಿಯನ್ನು ಭಾರತ ಕಾರ್ಯದರ್ಶಿಯ ಸ್ಥಾನದಿಂದ ನಿವೃತ್ತಿಗೊಳಿಸಬೇಕೆಂದೂ ರಾಜಕೀಯ ಬಂದಿಗಳನ್ನೆಲ್ಲ ಬಿಡುಗಡೆ ಮಾಡಬೇಕೆಂದೂ ಕೋರಲಾಯಿತೆಂದು ತಿಳಿದು ಬರುತ್ತದೆ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜಗತ್ಪ್ರಸಿದ್ಧವಾದ ಶ್ರೀಮದ್ವೀರ ಸಿದ್ಧಾಂತಶಿಖಾಮಣಿ ಎಂಬ ಪ್ರಾಚೀನತಮವಾದ ಈ ಮಹಾಗ್ರಂಥವು ಶ್ರೀಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸರ್ವಮಾನ್ಯವಾದ ಗ್ರಂಥಗಳಲ್ಲೆಲ್ಲ ಇದು ಬಹು ಪ್ರಾಚೀನಗ್ರಂಥವೆಂದು ತಿಳಿಯತಕ್ಕದ್ದು. ಈ ಗ್ರಂಥವು ಈಗ್ಗೆ ಸುಮಾರು ೭ ಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥಕ್ಕೆ ವೀರಶೈವಮಾರ್ಗದರ್ಶಕ ವೃತ್ತಿಯಿಂದ, ಇದಕ್ಕೆ ಈ ದಿನದವರೆಗೆ ಅನೇಕ ವಿದ್ವಾಂಸರು ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಇದು ಒಂದು ವ್ಯಾಖ್ಯಾನವಲ್ಲದಿರುವುದರಿಂದ ಇದರ ಅರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ಪರಿಹರಿಸುವ ಸಲುವಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡದಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವು ಹಿಂದೆ ಕೇವಲ ಸಂಸ್ಕೃತ ಭಾಷೆಯ ಜ್ಞಾನವುಳ್ಳವರಿಗೆ ಮಾತ್ರ ಉಪಯೋಗವಾಗುತ್ತಿದ್ದು ಈಗ ಕನ್ನಡದ ಅನುಕೂಲ್ಯದಿಂದ ಬಹುಜನರಿಗೆ ಉಪಯುಕ್ತವಾಗುವಂತಾಗಿದೆ ವಿಷಯಾನುಕ್ರಮಣಿಕೆಯನ್ನೂ ಶ್ಲೋಕಾನುಕ್ರಮಣಿಕೆಯನ್ನೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿದೆ ಈ ಗ್ರಂಥವು ಒಟ್ಟು ೬೪೩ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ.**

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್,**
ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಮತಸಿಂಧು ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೩ ಆಣೆ
ಶ್ರೀಗುರುತತ್ವದರ್ಶನ	೩ ಆಣೆ
ಶ್ರೀಮದ್ಪಂಡಿತಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ಬಿಲ್ವಮಾಹಾತ್ಮ್ಯ	೩ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ಶಿವ ಮಹಿಮ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೮ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮಾನುಷ್ಠಾನತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವ ಅಂತ್ಯೇಷ್ಟಿ ಶ್ರಾದ್ಧವಿಧಿ	೬ ಆಣೆ
ವೀರಶೈವಮಹಾತ್ರಯ	೬ ಆಣೆ
ಶಿವಸಿದ್ಧಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	**೮ ಆಣೆ**
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ವಾಲ್ಯೂಮ್ ೧)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವಪರತ್ವ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು)	೧|| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಟೀಕಾಸಹಿತ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shatriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (सस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-सस्कृत)	१ रु
सिद्धांतशिखामणि (मूल)	६ आ.
पुरुषसूक्तम् (वीरशैवप्राचीनभाष्योपेतम्)	४ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M 2266 — ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ — REGISTERED No. M 226

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾಂತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ — ಪರಸ್ಥಳದವರಿಗೆ ೩ ರೂ ೧೨ ಆಣೆ ವಿ. ಪಿ. ಖರ್ಚು ಸೇರಿ ೪ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ನೇ ಜನವರಿ ೧೯೪೪ [ಸಂಚಿಕೆ ೩೭

ಶ್ರೀಮಜ್ಜಗದ್ಗುರು ಪಂಡಿತಾರಾಧ್ಯ ಮೂರ್ತಿಸ್ಥಾಪನಾಮಹೋತ್ಸವ

ಸೋಲಾಪುರ

ಇದೇ ೧೮೬೫ನೆಯ ಸ್ವಭಾನು ನಾಮ ಸಂವತ್ಸರದ ವೈಶಾಖ ಶುದ್ಧ ಅಕ್ಷಯ ತೃತೀಯಾ ಶುಭದಿವಸ ಮೊದಲ್ಗೊಂಡು ಶ್ರೀ||ಷ||ಬ್ರ|| ಬಾಲತಪಸ್ವಿ ಚನ್ನವೀರ ಶಿವಾಚಾರ್ಯ ಬೃಹನ್ಮಠ ತೋಟಗಿ ಶ್ರೀಗಳವರು ಇದೇ ಊರಲ್ಲಿರುವ ತಮ್ಮ ಬಾಲತಪಸ್ವಿ ಬೃಹನ್ಮಠದಲ್ಲಿ ಶ್ರೀಮಜ್ಜಗದ್ಗುರು ಪಂಡಿತಾರಾಧ್ಯ ಮೂರ್ತಿ ಸ್ಥಾಪನೆಗಾಗಿಯೂ ಆ ಮೂರ್ತಿಯ ಸ್ಥಲಶುದ್ಧಿಗಾಗಿಯೂ ಒಂದು ಕೋಟಿ ಶಿವ ಪಂಚಾಕ್ಷರೀ ಮಂತ್ರದ ಜಪಸಂಕಲ್ಪವನ್ನು ಇಟ್ಟುಕೊಂಡಿರುವರು ಮತ್ತು ಇಲ್ಲಿಯವರೆಗೆ ಆ ಶ್ರೀಗಳವರು ಅನುಷ್ಠಾನವನ್ನು ಗೈದುದು ಸರ್ವರಿಗೂ ತಿಳಿದಿದೆಯಷ್ಟೆ. ಈಗ ಶ್ರೀ ೧೦೮ ಜಗದ್ಗುರು ಶಿವಾನಂದ ರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರ ಅಮೃತ ಹಸ್ತದಿಂದ ಶ್ರೀಪಂಡಿತಾರಾಧ್ಯಮೂರ್ತಿಸ್ಥಾಪನಾಕಾರ್ಯವು ಇದೇ ಮಾಘ ಶುದ್ಧ ತ್ರಯೋದಶಿ ರವಿವಾರ (ತಾ|| 6–2–44) ದಿವಸ ನೆರವೇರುವದಿದೆ. ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರ ಮುಕ್ಕಾಮವೂ ಇಲ್ಲಿಯೇ ಇರುವದು.

ಶ್ರೀಜಗದ್ಗುರುಪಂಡಿತಾರಾಧ್ಯಮೂರ್ತಿಪ್ರತಿಷ್ಠಾಮಂಡಳಿ
ಸೋಲಾಪುರ

ಆರೋಗ್ಯದಿಂದ ಜೀವಿಸುವ ಕ್ರಮಗಳು

ಶ್ವಾಸೋಚ್ಛ್ವಾಸಕ್ರಮ

ನೀವು ಸರಿಯಾಗಿ ಶ್ವಾಸಿಸುವಿರೋ? ಆರೋಗ್ಯದಿಂದ ಜೀವಿಸುವುದಕ್ಕೆ ಕ್ರಮವಾಗಿ ಶ್ವಾಸಿಸುವುದೇ ಮೂಲಾಧಾರವೆಂಬುವದನ್ನು ತಿಳಿದುಕೊಂಡಿರುವಿರೋ? ಮೂಗಿನ ಮೂಲಕವಾಗಿ ಶ್ವಾಸವನ್ನು ಎಳೆಯುವಾಗ, ಆ ಗಾಳಿಯು ಶ್ವಾಸನಾಳಕ್ಕೆ ಹೋಗಿ ಸೇರುವುದಕ್ಕೆ ಮೊದಲು, ಮೂಗಿನ ರಂಧ್ರಗಳು ಹೊರಗಿನ ಗಾಳಿಯಲ್ಲಿರುವ ಧೂಳು ಮುಂತಾದ ಕೆಟ್ಟ ವಸ್ತುಗಳನ್ನೆಲ್ಲಾ ತಡೆದಿಟ್ಟು, ಶುದ್ಧವಾದ ಗಾಳಿಯನ್ನು ಮಾತ್ರ ಒಳಕ್ಕೆ ಬಿಡುವುವು. ಹಾಗಿಲ್ಲದೆ ಬಾಯಿಂದ ಶ್ವಾಸವನ್ನೆಳೆಯುವುದಾದರೆ, ಅವಶ್ಯವಕಾಶವಿಲ್ಲದೆ ಅನೇಕ ಕಶ್ಮಲಗಳು ಶ್ವಾಸಕೋಶಗಳಿಗೆ ಹೋಗಿ ಸೇರಿ ಅಪಾಯಕ್ಕೆ ಕಾರಣವಾಗುವುದು. ಈ ಅಂಶವನ್ನು ನೀವು ಗಮನಿಸಿರುವಿರೋ? ಅನೇಕರು ಬಾಯಿಂದಲೇ ಉಸಿರಾಡುತ್ತಿದ್ದರೂ, ಆ ತಪ್ಪನ್ನು ತಾವು ತಿಳಿಯದೆ, ತಾವು ಯಾವಾಗಲೂ ಮೂಗಿನಿಂದಲೇ ಶ್ವಾಸಿಸುತ್ತಿರುವುದಾಗಿ ಹೇಳುವರು. ಅವರು ಹೇಳುವುದು ನಿಮಗೂ ನಿಜವೆಂದು ತೋರಬಹುದು. ನೀವು ಸೂಕ್ಷ್ಮ ದೃಷ್ಟಿಯಿಂದ ಗಮನಿಸಿ ನೋಡಿದರೆ, ಅದರ ನಿಜಾಂಶವನ್ನು ತಿಳಿಯಬಹುದು. ಇದರ ಪರೀಕ್ಷೆಗಾಗಿ ನಿಮ್ಮ ಬಾಯನ್ನು ಗಟ್ಟಿಯಾಗಿ ಮುಚ್ಚಿಕೊಂಡು, ಮೂಗಿನಿಂದ ಶ್ವಾಸಿಸುವುದಕ್ಕೆ ಪ್ರಯತ್ನಿಸಿರಿ. ಸ್ವಲ್ಪ ಹೊತ್ತಿನಲ್ಲಿಯೇ ನಿಮಗೆ ಏನೋ ಕಷ್ಟವಾಗಿ ತೋರಬಹುದು. ಆದುದರಿಂದ ಸಾಮಾನ್ಯವಾಗಿ ಅನೇಕರು ಬಾಯಿಂದ ಶ್ವಾಸಿಸುತ್ತಿರುವರೆಂದು ತಿಳಿಯಬಹುದು.

ನೀವು ಮೂಗಿನಿಂದ ಉಸಿರಾಡುವುದನ್ನೇ ಅಭ್ಯಾಸಕ್ಕೆ ತಂದರೆ ಮಾತ್ರ ಆ ಮೇಲೆ ಅದು ಸರ್ವಸಾಧಾರಣವಾಗಿ ಸುಲಭವಾಗುವುದು. ಮೂಗಿನಿಂದ ಉಸಿರಾಡತಕ್ಕವರು ಮೂಗಿನ ರಂಧ್ರಗಳನ್ನು ಆಗಾಗ ಶುದ್ಧ ಮಾಡಿಕೊಳ್ಳಬೇಕು. ಕೈಯನ್ನು ದೊನ್ನೆಯಹಾಗೆ ಮಾಡಿ ಅದರಲ್ಲಿ ನೀರು ತುಂಬಿಕೊಂಡು ಆ ನೀರನ್ನು ಮೂಗಿನ ರಂಧ್ರದ ಮೂಲಕವಾಗಿ ಮೇಲಕ್ಕೆ ಎಳೆದುಕೊಳ್ಳಬೇಕು. ಒಂದು ರಂಧ್ರದಿಂದ ನೀರನ್ನೆಳೆಯುವಾಗ ಮತ್ತೊಂದು ರಂಧ್ರವನ್ನು ಬೆರಳಿನಿಂದ ಒತ್ತಿ ಹಿಡಿದುಕೊಳ್ಳಬೇಕು. ಮೊದಮೊದಲು ಈ ಕಾರ್ಯವು ಉಸಿರಾಡಿ ಅಭ್ಯಾಸವುಳ್ಳವರಿಗೆ ಬಹಳ ಮಟ್ಟಿಗೆ ಸಾಧ್ಯವಲ್ಲವೆಂದೂ ತೋರಬಹುದು. ಇದಲ್ಲದೆ, ಮೂಗಿನಿಂದ ನೀರನ್ನೆಳೆಯುವಾಗ ಸ್ವಲ್ಪ ಕಷ್ಟವೂ, ನೋವೂ ಆಗಬಹುದು. ಇದೊಂದನ್ನೂ ಲಕ್ಷ್ಯಮಾಡದೆ ಸ್ವಲ್ಪ ದಿನಗಳವರೆಗೆ ಸಾಧನೆ ಮಾಡಿದರೆ ಆಮೇಲೆ ಅದು ಸುಲಭವಾಗುವುದು. ಹೀಗೆ ಮೂಗಿನಿಂದಲೇ ಶ್ವಾಸಿಸುವುದನ್ನು ಅಭ್ಯಾಸಕ್ಕೆ ತಂದುಕೊಂಡ ಮೇಲೆ, ದೀರ್ಘವಾಗಿ ಶ್ವಾಸವನ್ನೆಳೆದು ಬಿಡುವ ರೀತಿಯನ್ನು ಕಲಿಯಬೇಕು. ಕೆಲವರು ಸಹಜವಾಗಿಯೇ ಬೇಗ ಬೇಗನೆ ಉಸಿರು ಬಿಡುವರು. ಬೇರೆ ಕೆಲವರು ಶ್ವಾಸವನ್ನು ಅತಿ ದೀರ್ಘವಾಗಿ ಎಳೆದು ಬಿಡುವರು. ಹೊಟ್ಟೆಯ ತಳಭಾಗದಿಂದ ಶ್ವಾಸವನ್ನೆಳೆದು ಬಿಡುವುದೂ ಉಂಟು. ಅರ್ಧ ಶ್ವಾಸವನ್ನಾದರೂ ಎಳೆಯುವವರು ಅಪೂರ್ವ. ಹೀಗಿರುವಾಗ ಸರಿಯಾಗಿ ಶ್ವಾಸವನ್ನೆಳೆದು ಬಿಡುವವರಿಲ್ಲವೆಂದೇ ಹೇಳಬಹುದು.

ಜಲಪಾನಕ್ರಮ

ಗಾಳಿಯನ್ನು ಬಿಟ್ಟರೆ, ಎರಡನೆಯದು ತಣ್ಣೀರು. ನೀರನ್ನು ಹೆಚ್ಚಾಗಿ ಕುಡಿದಷ್ಟೂ ಅದು ದೇಹವನ್ನು ತೊಳೆದು ಶುದ್ಧೀಕರಿಸುವುದು. ಆದರೆ ಆ ನೀರಿಗೆ ಸ್ವಲ್ಪ ಹಣ್ಣಿನ ರಸವನ್ನು ಸೇರಿಸಿಡುವುದು ಉತ್ತಮವು. ದಿನವೊಂದಕ್ಕೆ ಎಷ್ಟು ನೀರನ್ನು ಕುಡಿಯಬೇಕೆಂಬ ಪ್ರಮಾಣವು ಮಾತ್ರ ಆಯಾ ಮನುಷ್ಯನ ದೇಹಪ್ರಕೃತಿಯನ್ನು ಅನುಸರಿಸಿದೆ.

ಸ್ನಾನಕ್ರಮ

ದೇಹಾರೋಗ್ಯಕ್ಕೆ ಪ್ರತಿದಿನವೂ ಸ್ನಾನಮಾಡಬೇಕಾದುದು ಮುಖ್ಯ. ತಣ್ಣೀರಿನಲ್ಲಿಯೇ ಸ್ನಾನಮಾಡಬೇಕೆಂಬ ವಿಧಿಯಿಲ್ಲ. ಅವರವರ ದೇಹಕ್ಕೆ ಅನುಕೂಲಿಸುವಂತೆ ತಣ್ಣೀರಿನಲ್ಲಿಯೋ, ಅಥವಾ ಬಿಸಿನೀರಿನಲ್ಲಿಯೋ ಸ್ನಾನಮಾಡಬಹುದು. ಆದರೆ, ಸ್ನಾನದ ಶೀತೋಷ್ಣಸ್ಥಿತಿಯು ಅವರವರ ದೇಹದಲ್ಲಿ ರಕ್ತದ ಉಷ್ಣಾಂಶಕ್ಕೆ ಹೊಂದಿದಂತಿರಬೇಕಾದುದವಶ್ಯ. ಇದನ್ನು ಅವರವರೇ ತಮ್ಮ ದೇಹಾನುಗುಣವಾಗಿ ಗಮನಿಸಿ ತಿಳಿದುಕೊಳ್ಳಬೇಕು. ಸ್ನಾನಮಾಡುವುದಕ್ಕೆ ಮೊದಲು ದೇಹವನ್ನು ಗಟ್ಟಿಯಾಗಿ ಉಜ್ಜಿ, ರಕ್ತಸಂಚಾರಕ್ಕೆ ಉತ್ತೇಜನವುಂಟಾಗುವಂತೆ ಮಾಡಬೇಕು. ಹೀಗೆ ಮೈಯನ್ನು ಉಜ್ಜುವುದರಲ್ಲಿ ದೇಹದೊಳಗೆಲ್ಲಾ ರಕ್ತಸಂಚಾರದಿಂದ ಒಂದು ಹೊಸ ಕಾಂತಿಯುಂಟಾಗುವಂತಿರಬೇಕು. ಕೊನೆಯಪಕ್ಷ ವಾರಕ್ಕೆ ಎರಡು ಬಾರಿ ಮಲಗುವುದಕ್ಕೆ ಮುಂಚೆ ಬಿಸಿನೀರಿನ ಸ್ನಾನವನ್ನು ಮಾಡಬೇಕು. ಇದರಿಂದ ಚರ್ಮರಂಧ್ರಗಳೊಳಗಿನ ಕಶ್ಮಲಗಳೆಲ್ಲಾ ಹೊರಬೀಳುವವು. ನಿಮ್ಮ ಮೈಗೆ ಹೊಸ ಕಾಂತಿ ಬರಬೇಕಾದರೆ, ಚರ್ಮವು ಶುದ್ಧವಾಗಿ, ಮಲಕೋಶವು ಚೆನ್ನಾಗಿ ಕೆಲಸಮಾಡತಕ್ಕವುಗಳಾಗಿಯೂ ಜೀರ್ಣಾಂಗಗಳು ಒಳ್ಳೆಯ ಆರೋಗ್ಯಸ್ಥಿತಿಯಲ್ಲಿಯೂ ಇರಬೇಕು.

ಪ್ರತಿಮನುಷ್ಯನಿಗೂ ತಾನು ಸುಖವಾಗಿಯೂ, ಇತರರ ಕಣ್ಣಿಗೆ ಅಂದವಾಗಿಯೂ ಇರಬೇಕೆಂಬ ಅಭಿಪ್ರಾಯವೇನೋ ಇದ್ದೇ ಇರುವುದು. ಆ ಇಷ್ಟವು ಕೈಗೂಡಬೇಕಾದರೆ, ಮೇಲೆ ಹೇಳಿದ ಸ್ನಾನ, ಪಾನ, ಶುಚಿತ್ವ ಮೊದಲಾದ ನಿಯಮಗಳಲ್ಲಿ ತಪ್ಪದೆ ನಡೆಯುತ್ತಿರಬೇಕಲ್ಲದೆ, ಆರೋಗ್ಯಜೀವನಕ್ಕೆ ಅಂಗಸಾಧನೆಯನ್ನು ಕೂಡ ಮುಖ್ಯವೆಂದು ಭಾವಿಸಬೇಕು.

ಆಹಾರಕ್ರಮ

ಮಾಂಸಹಾರವು ಮೈಗೆ ಬಲಕಾರಿಯೆಂದು ಅನೇಕರು ಕೇಳಿ ಅದನ್ನೇ ನಂಬುವರು. ಇದು ಸರಿಯಲ್ಲ. ಏಕೆಂದರೆ, ಶಾಕಾಹಾರಿಗಳಿಗೂ ತಮ್ಮ ಪದ್ಧತಿಯೇ ಉತ್ತಮವೆಂಬ ನಂಬಿಕೆಯುಂಟು. ಅವರು ಹಾಗೆಯೇ ನಡೆದು ಒಳ್ಳೇ ದೃಢಾಂಗರಾಗಿರುವುದುಂಟು. ಆದುದರಿಂದ ನಿಮ್ಮ ನಿಮ್ಮ ಮೈಗೆ ಅನುಕೂಲಿಸುವ ಆಹಾರವೆಂತಹದೆಂಬುದನ್ನು ನೀವೇ ನಿರ್ಧರಿಸಕೊಳ್ಳಬೇಕು. (ಈ ಭಾಗದಲ್ಲಿ ಹೊರೇಸ್ ಫ್ಲೆಟ್ಚರ್ ಎಂಬವರ 'ನ್ಯೂಟ್ರಿಷನ್' ಮುಂತಾದ ಪುಸ್ತಕಗಳನ್ನೋದಿ ಅವರ ಸೂಚನೆಗಳನ್ನು ತೆಗೆದುಕೊಂಡರೆ ಬಹಳ ಗುಣವುಂಟು.) ಎಷ್ಟೇ ಪ್ರಿಯವಸ್ತುವಾಗಿದ್ದರೂ ಮಿತಿಮೀರಿ ಭುಂಜಿಸಬಾರದು. ಅಧಿಕ ಭೋಜನವೇ ಅಪಾಯಗಳಿಗೆಲ್ಲಾ ಮೂಲಕಾರಣ.

ಒಳ್ಳೇರುಚಿಕೊಡುವ ಆಹಾರವನ್ನು ಚೆನ್ನಾಗಿ ಅಗಿದು ನುಂಗುವುದನ್ನು ಕಲಿತುಕೊಳ್ಳಬೇಕು. ಪ್ರತಿದಿನ ಸ್ನಾನದಿಂದಲೂ, ವ್ಯಾಯಾಮದಿಂದಲೂ ಯಾವಾಗಲೂ ಮೈಯನ್ನು ಶುದ್ಧವಾಗಿಡಬೇಕು. ಎಂದಾದರೂ ನಿಮ್ಮ ಮನಸ್ಸಿಗೆ ಬೇಸರವೂ, ಮೈಗೆ ಶ್ರಮವೂ ಕಂಡುಬಂದರೆ, ಅದಕ್ಕೆ ಆಹಾರದೋಷವೇ ಕಾರಣವಾಗಿರಬೇಕು. ಇಲ್ಲವೆ ಆ ದಿನ ನೀವು ತಕ್ಕಷ್ಟು ನೀರನ್ನು ಕುಡಿಯದಿರಬೇಕು. ಇವೆರಡರಲ್ಲಿ ಯಾವುದೋ ಒಂದು ಕಾರಣ.

[೬ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೪ನೆಯ ಜನವರಿ ತಾ|| ೧೭ನೇ ಸೋಮವಾರ

ಸಂಸ್ಕೃತಭಾಷೆ

ಈಶ್ವರನಿಂದ ನಿರ್ಮಿತವಾದೀ ಪ್ರಪಂಚದಲ್ಲಿ ಆಯಾ ಜಗತ್ಸೃಷ್ಟಿಯ ಪ್ರಾರಂಭದಿಂದ ಆಯಾ ದೇಶಗಳಲ್ಲಿ ಅನಂತ ಭಾಷೆಗಳು ಉತ್ಪನ್ನಗಳಾಗಿರುತ್ತವೆ. ಈ ಭಾಷೆಗಳಿಗೆಲ್ಲಾ ಸಂಸ್ಕೃತಭಾಷೆಯೇ ಮೂಲಾಧಾರವಾಗಿರುತ್ತದೆ. ಇತಿಹಾಸ ಶೋಧಕರಿಂದ ಕನ್ನಡ, ತಮಿಳು, ಆಂಧ್ರ ಮರಾಠಿ, ಇಂಗ್ಲೀಷ್ ಮುಂತಾದ ಭಾಷೆಗಳಿಗೆಲ್ಲಾ ಒಂದೊಂದು ಕಾಲನಿರ್ಣಯಮಾಡಲ್ಪಟ್ಟಿದ್ದರೂ, ಸಂಸ್ಕೃತಭಾಷೆಗೆ ಮಾತ್ರ ಇದುವರೆಗೂ ಯಾರಿಂದಲೂ ಕಾಲನಿರ್ಣಯವು ಮಾಡಲ್ಪಟ್ಟಿಲ್ಲವು. ಈ ಚರಾಚರಾತ್ಮಕವಾದ ಜಗತ್ತು ಎಂದು ಉತ್ಪತ್ತಿಸಿತೋ ಅಂದಿನಿಂದಲೂ ಈ ಸಂಸ್ಕೃತವಾಣಿಯು ಅನುಸ್ಯೂತವಾಗಿ ಬಂದಿರುವುದರಿಂದ ಎಲ್ಲ ಭಾಷೆಗಳಿಗಿಂತಲೂ ಈ ಸಂಸ್ಕೃತಭಾಷೆಯೇ ಅನಾದಿ ಭಾಷೆಯೆಂದು ಹೇಳಲ್ಪಡುವಂತಾಗಿದೆ. ಆದರೆ ಸಂಸ್ಕೃತ ವಿಷಯಾಭಿಜ್ಞರ ಸಂಖ್ಯೆಯು ಒಂದೊಂದು ಕಾಲದಲ್ಲಿ ಕಡಿಮೆಯಾಗುವುದೂ ಒಂದೊಂದು ಕಾಲದಲ್ಲಿ ಹೆಚ್ಚುವುದೂ ಸ್ವಭಾವವಾದುದರಿಂದ, ಆ ಭಾಷೆಯ ಪ್ರಚಾರವು ಕೆಲವು ಕಾಲದಲ್ಲಿ ಹ್ರಾಸವಾಗುತ್ತಲೂ, ವೃದ್ಧಿಯಾಗುತ್ತಲೂ ಬಂದಿದ್ದರೂ ಒಂದು ಕಾಲದಲ್ಲಿಯೂ ಸಮೂಲವಾಗಿ ನಾಶವಾಗದೆ ಒಂದಿಲ್ಲ ಒಂದು ಕಡೆಯಲ್ಲಿ ಜೀವಿಸಿಕೊಂಡು ಬಂದಿರುವುದಲ್ಲದೆ, ಮುಂದಕ್ಕೂ ಸಹ ಜೀವಿಸಿಕೊಂಡು ಬರುತ್ತದೆಂದು ಹೇಳಲು ಯಾವ ಆಕ್ಷೇಪವೂ ಇಲ್ಲ. ನಮ್ಮ ಭಾರತೀಯರಿಗಂತೂ ಈ ಸಂಸ್ಕೃತಭಾಷೆಯು ಅತ್ಯಂತ ಪೂಜ್ಯವಾದ ಭಾಷೆಯಾಗಿ ಪರಿಣಮಿಸಿರುತ್ತದೆ. ನಮ್ಮ ಜನ್ಮಸಾರ್ಥಕವಾದವರನೇಕರಿಂದ ರಚಿತವಾದ ವೇದಶಾಸ್ತ್ರ ಪುರಾಣೇತಿಹಾಸಗಳು, ಸ್ಮೃತಿ ಆಗಮಗಳು, ಭಾರತಾದೀತಿಹಾಸಗಳು ಮೊದಲಾದ ಗ್ರಂಥಗಳೆಲ್ಲವೂ ಸಂಸ್ಕೃತಭಾಷೆಯಲ್ಲಿಯೇ ಇರುತ್ತವೆ. ಅವು ಇತ್ತೀಚೆಗೆ ಸಂಸ್ಕೃತಬಾಹ್ಯಭಾಷೆಗಳಲ್ಲಿ ಪರಿಭಾಷೆಯಿಂದ ವಿಲೇಖಿಸಲ್ಪಟ್ಟು ಸ್ವಲ್ಪ ಸ್ವಲ್ಪವಾಗಿ ಭಾಷಾಂತರ ಪಡೆದು ಇತರ ಭಾಷೆಗಳಲ್ಲಿ ಪರಿವರ್ತಿಸಲ್ಪಟ್ಟಿದ್ದರೂ ಅವಕ್ಕೆ ಸಂಸ್ಕೃತಭಾಷೆಯಲ್ಲಿರುವಷ್ಟು ಸೌಷ್ಠವವಾಗಲೀ ಗುಣಗಳಾಗಲೀ ಇಲ್ಲವು. ನಮ್ಮ ಹಿಂದಿನ ಆರ್ಯರು ಈ ಭಾಷೆಯನ್ನು ದೇವಭಾಷೆಯೆಂದು ಕರೆಯುವರು.

ಜಗನ್ನಿಯಾಮಕನಾದ ಪರಮೇಶ್ವರನು ತಾನು ಸೃಷ್ಟಿಸಿರುವ ಜಗತ್ತಿನ ಸ್ವರೂಪವನ್ನೂ, ಆತ್ಮನು ಪರಮಾತ್ಮನನ್ನು ಸೇರುವ ರೀತಿಯನ್ನೂ ಸಂಸ್ಕೃತ ಭಾಷೆಯಿಂದಲೇ ಬೋಧಿಸಿರುವನು. ಅವುಗಳ ಜ್ಞಾನಕ್ಕೋಸ್ಕರ ಆಗಮಗಳು ವೇದಗಳು ಹೇಳಲ್ಪಟ್ಟಿರುವುದು. ಆ ವೇದಾಗಮಗಳು ಸಂಸ್ಕೃತಭಾಷೆಯಲ್ಲಿದ್ದರೂ ಅವುಗಳ ಅರ್ಥವನ್ನು ತಿಳಿಯುವುದು ಬಹಳ ದುಸ್ತರವಾದುದರಿಂದ ಪರಮಾತ್ಮ ಸಾಕ್ಷಾತ್ಕಾರವನ್ನು ಪಡೆದ ಅನಂತಮಹರ್ಷಿಗಳು ಲೋಕೋಪಕಾರಕ್ಕಾಗಿ ವೇದಗಳ ಅರ್ಥವನ್ನು ಸಂಸ್ಕೃತಭಾಷೆಯಿಂದಲೇ ಸುಲಭಶೈಲಿಯಲ್ಲಿ ಬರೆದಿಟ್ಟಿರುವರು. ಅವುಗಳಲ್ಲಿ ವ್ಯಾಸಮಹರ್ಷಿಗಳು ಹದಿನೆಂಟು ಪುರಾಣಗಳನ್ನೂ ಭಾರತಾದೀತಿಹಾಸಗಳನ್ನೂ ಬರೆದರು. ಮನುಷ್ಯರ ಚರಿತ್ರೆ ಭಗವಂತನ ಸೃಷ್ಟಿ ಕ್ರಮ ಮೊದಲಾದವುಗಳು ಜಲಸ್ಥಿತಿಯಾದ ಮತ್ಸ್ಯ ಮುದ್ರಿಕೆಯಲ್ಲಿರುವ ನೀರನ್ನು ಅಲ್ಪ ಸ್ವಲ್ಪವಾಗಿ ಎತ್ತಿಕೊಂಡು ಹೋಗಿ ಪ್ರಪಂಚದ ಎಲ್ಲಾ ಭಾಗಗಳಲ್ಲಿ ಸುರಿಸುವಂತೆ ಈ ಸರ್ವಜ್ಞ ಶಿರೋಮಣಿಗಳಾದ ಮಹರ್ಷಿಗಳೂ, ಆಚಾರ್ಯಭಗವತ್ಪಾದರೂ ಚತುಸ್ಸಮುದ್ರಗಳಂತಿರುವ ಚತುರ್ವೇದಗಳ ಅಲ್ಪಸ್ವಲ್ಪ ಅರ್ಥವನ್ನು ತಮ್ಮ ಶಕ್ತ್ಯನುಸಾರವಾಗಿ ತೆಗೆದುಕೊಂಡು ಅನೇಕ ಗ್ರಂಥಗಳನ್ನು ರಚಿಸಿ ಪ್ರಪಂಚದ ಜನಗಳನ್ನು ಉಪಕೃತರನ್ನಾಗಿ ಮಾಡಿರುವರು. ಹೀಗೆ ಆ ಮಹರ್ಷಿಗಳು ರಚಿಸಿದ ಗ್ರಂಥಗಳನ್ನು ಸುಲಭರೀತಿಯಿಂದ ಎತ್ತಿ ತೋರಿಸಿ ಇದ್ದರೂ ಅವುಗಳು ಎಲ್ಲರಿಗೂ ಮರಣಾಂತರದಲ್ಲಿ ಪ್ರಪಂಚಕ್ಕೆ ಯಾವ ವಿಧವಾದ ಪದ ದಾಟ್ಲಾಗದೆ ಅವನೇ ಲೀಲಾಶರೀರ ತಪ್ಪಿ ಹೋಗಿ ಕೇವಲ ಅಜ್ಞಾನ ಅಂಧಕಾರಮಯವಾಗಿ ಹೋಗುತ್ತಿತ್ತು. ಹೀಗೆ ಈ ದಿವ್ಯಗ್ರಂಥನಾದಿಗಳಲ್ಲಿ ಶಾಸ್ತ್ರ ಆಚಾರಗಳು ದ ಸತ್ಯೆಕಾಲದ ಪರು ಗಳಂತೆ ಈ ಮನುಷ್ಯಪ್ರಾಣಿಗಳೂ ಇಂದಿನ ಗಿಡ್ಡ ಆಯುಷ್ಯದಿಂದ ಪೇಳಿಕ ತಿನಿಸಿನ ಪರ್ಯಾವಸಾನದ ತತ್ತರ ಪ್ರಪಂಚದಲ್ಲಿ ಪರ್ಯಟನ ಮಾಡಿ ದಲ್ಲಿಯೂ ಮತ್ತಷ್ಟು ಪರ ರಾಜ ಊಜ ಪ ಕಾವ್ಯಗಳಲ್ಲಿಯೂ ಮಾಡಿರುವ ರಾದ ಸಾಧುಗಳ ಶರೀರ ಪ್ರಪಂಚದಲ್ಲಿ ಅದರ ಒಳ್ಳೆಯ ಪಂಡಿತರ ಜೀವನ ತತ್ವ ಭಾಷಾ, ವಂತಲೂ ಸ್ವಾರ್ಥ ಪರೋಪಕಾರ ಪರವಾಗಿ ವಿಂಗಡಿಸಲ್ಪಟ್ಟಿರುವುದು. ಮನುಷ್ಯನ ಸ್ವಾರ್ಥಕ್ಕೆ ಸೌಖ್ಯಗಳನ್ನು ಇಚ್ಛಿಸುವ ಎಂಟು ಪರ ಅಕ್ಷರಗಳ ಸ್ವಾರ್ಥ ಜ್ಯೋತಿಷ್ಯವಿದ್ಯೆ ಕಲಿಯಲು ಅದರ ಶಿಕ್ಷಣವು ಬೇಕು. ಯಾವ ಲೋಕದಲ್ಲಿ ಆರೋಗ್ಯದ ಸಂಪತ್ತನ್ನು ನಮ್ಮ ಪೂರ್ವಿಕರು ಸ್ವಾಧೀನ ಪಡಿಸಿಕೊಳ್ಳಲು ಅವನ್ನು ಇಚ್ಛಿಸುವ ಆಪತ್ತನ್ನು ಅಗಲಿಸಿ ಭೋಗಗಳನ್ನು ಅನುಭವಿಸುವ ವಿಧಾನವನ್ನು ತಿಳಿಸುವ ಮಾರ್ಗಗಳೂ ಸಂಸ್ಕೃತ ಭಾಷೆಯಲ್ಲಿಯೇ ಹೇಳಲ್ಪಟ್ಟಿದ್ದರೂ ಅವುಗಳನ್ನು ಸ್ವಭಾವ ಸರಿಪಡಿಸುವುದಕ್ಕಾಗಿ ಜೈಮಿನ್ಯಾದಿಗಳು ಪೂರ್ವಮೀಮಾಂಸೆಯನ್ನೂ, ವ್ಯಾಸಮಹರ್ಷಿಗಳು ಉತ್ತರ ಮೀಮಾಂಸೆಯನ್ನೂ ರಚಿಸಿರುವರು. ಇವುಗಳು ಅನೇಕರಿಗೆ ಅರ್ಥವಾಗದೆ ಸುಲಭವಾಗಿ ಮಾಡಲ್ಪಟ್ಟಿದ್ದರೂ ಅನೇಕ ಗ್ರಂಥಗಳ ಸಹಾಯದಿಂದ ಅರ್ಥ ಮಾಡಿಕೊಳ್ಳಬೇಕಾಗಿರುವುದರಿಂದ ಸುಗುಣವಾಗಿ ಅನುಷ್ಠಾನಮಾಡಿ ಪುರುಷಾರ್ಥ ಪಡೆಯಬಹುದು. ಎಲ್ಲರಿಗೂ ಸ್ವರ್ಗ ಸ್ತ್ರೀ ಪುತ್ರಾದಿ ಸೌಖ್ಯಗಳನ್ನು ಅನುಭವಿಸುವ ವಿಧಾನವೂ, ಕೇವಲ ಮೋಕ್ಷವನ್ನು ಹೊಂದುವ ವಿಧಾನವೂ ಮೊದಲಾದವುಗಳು ಪ್ರತಿಪಾದಿಸಲ್ಪಟ್ಟಿವೆ. ಹೀಗೆ ಸಕಲ ಪುರುಷಾರ್ಥ ಸಾಧನವಾಗಿರುವ ವಿಧಾನಗಳಲ್ಲಿ ವೇದ ಪಠನವು ಚಿರಕಾಲದಿಂದಲೂ ನಿರಂತರವಾಗಿರುವ ಪಾರಮಾರ್ಥಿಕ ನೀಡಿರುವ ವೇದಗಳ ಅರ್ಥವನ್ನು ಶೈವ ದಿವ್ಯ ಜ್ಞಾನ ಸಾಮರ್ಥ್ಯದಿಂದ ಉತ್ತರ ಮೀಮಾಂಸೆಯನ್ನು ರಚಿಸಿ ಬ್ರಹ್ಮ ಸ್ವಾತಿಶಯವನ್ನೂ ವಿಶದೀಕರಿಸುತ್ತದೆ.

ವ್ಯಾಸಸೂತ್ರಾಣಿ ಶ್ರುತಿ ಪ್ರಮಾಣ ಪದಾನಿ |
ವೇದಾನ್ತ ತತ್ತ್ವ ಪ್ರತಿಪಾದಕಾನಿ ||

ಬ್ರಹ್ಮಾನಂದವೆಂಬ ಅಪ್ಪಯ್ಯ ವ್ಯಾಸಸೂತ್ರವು ಶಾಸ್ತ್ರಯಂತೆ ಉಭಯ ಮಾರ್ಗದಿಂದ ಸಂಪ್ರದಾಯ ತತ್ತ್ವವನ್ನು ಬೋಧಿಸುವನೆಂದು ವಿದ್ಯಾವಂತರು ಗ್ರಂಥಗಳಲ್ಲಿ "ಕ್ರಿಯಾಸಾರ"ದಲ್ಲಿ ಹೇಳಲ್ಪಟ್ಟಿರುತ್ತದೆ.

ಇಂತಹ ವ್ಯಾಸ ಪ್ರಣೀತವಾದ ಸೂತ್ರಗಳ ಭಾಷ್ಯಗಳನ್ನು ಪ್ರತಿಪಾದಿಸುವ ಗ್ರಂಥಗಳು ಸಂಸ್ಕೃತಭಾಷೆಯಲ್ಲಿಯೇ ಇರುವುದರಿಂದ ಸ್ಥಿರವಾಗಿರುವವು. ಪ್ರಥಮತಃ ಸಂಸ್ಕೃತಭಾಷೆಯನ್ನು ಅಭ್ಯಾಸಮಾಡದಿದ್ದರೆ ಅವರಿಗೆ ವ್ಯಾಸಾದಿ ಋಷಿಪ್ರಣೀತವಾದ ಸಾಮರ್ಥ್ಯವು ಹುಟ್ಟಲಾರದು. ವೇದ ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿರುವ ಗ್ರಂಥಗಳ ಅರ್ಥವನ್ನು ತಿಳಿಯಲು ಸಾಧ್ಯವಿಲ್ಲ. ಆದುದರಿಂದ ಸಂಸ್ಕೃತಭಾಷೆಯನ್ನು ಆವಶ್ಯಕವಾಗಿ ಕಲಿಯಬೇಕು. ಇತ್ತೀಚೆಗೆ ಜನರು ಈ ಪವಿತ್ರ ಭಾಷೆಯನ್ನು ಬಿಟ್ಟು ಅನ್ಯಭಾಷೆಗಳನ್ನು ಓದುವುದರಲ್ಲಿ ಆಸಕ್ತರಾದುದರಿಂದ ಗುರುದೇವರ ವಿಷಯದಲ್ಲಿ ಅಶ್ರದ್ಧೆ ಹುಟ್ಟಿ ಭಕ್ತಿ ಶ್ರದ್ಧೆಗಳು ಕಡಿಮೆಯಾಗುತ್ತಿವೆ. "ಆರ್ಯಧರ್ಮಸಂಪ್ರದಾಯ" ಎಂಬ ಜಗದ್ಗುರುಗಳಿಂದ ಪ್ರಣೀತವಾದ ಗ್ರಂಥದಲ್ಲಿ ಹೇಳಿರುವಂತೆ ಮಹತ್ತರವಾದ ಈ ಸಂಸ್ಕೃತಭಾಷೆಯು ಮಹತ್ತ್ವಪೂರ್ಣವಾದ ವಿಷಯವು ಎಲ್ಲರಲ್ಲಿಯೂ ಅಭಿವೃದ್ಧಿಹೊಂದಬೇಕೆಂದು ಸದ್ಭಾವನೆಯಿಂದ ಶ್ರೀ ಜಗದ್ಗುರು ಪಂಚಾಚಾರ್ಯರು ಈ ಸಂಸ್ಕೃತಭಾಷೆಯಲ್ಲಿ ಅಭಿಮಾನ ಹುಟ್ಟಿಸುವ ಕಾರ್ಯವನ್ನು ಜನರಿಗೆ ಸುಲಭವಾಗುವಂತೆ ಅನುಗ್ರಹಿಸಲಿ.

ಯುದ್ಧವಾರ್ತೆ.

ನೈಋತ್ಯ ಪೆಸಿಫಿಕ್‍ನಲ್ಲಿ ಮಿತ್ರ ವಿಮಾನ ಬಲ

ಜಪಾನು ಆಕ್ರಮಿಸಿರುವ ಪ್ರದೇಶಗಳನ್ನು ಕುರಿತು ಟೋಕಿಯೋ ರೇಡಿಯೋ ಮೂಲಕ ಜಪಾನ್ ಅಧಿಕಾರಿಗಳು ಮಾತನಾಡುತ್ತ 'ಜಪಾನ್ ವಿಮಾನಗಳಿಗೆ ಎದಿರೇ ಇಲ್ಲದಿದ್ದ ಕಡೆ ಈಗ ಶತ್ರುವಿಮಾನಗಳ ಚಟುವಟಿಕೆ ಅಸಾಧ್ಯವಾಗಿದೆ. ಸೋಗನ್‍ವಿಲೆ, ಮತ್ತು ನ್ಯೂಗಿನಿಗಳಲ್ಲಿ ಮಿತ್ರರಿಗೆ ವಿಮಾನಗಳು ಹೆಚ್ಚಿರುವುದರಿಂದ ರಬೂಲ್ ಮೇಲೆ ಎಲ್ಲಾ ವಿಧವಾದ ಮುತ್ತಿಗೆಗಳನ್ನು ನಡೆಸುವುದು ಸಾಧ್ಯವಾಗಿದೆ' ಎಂದು ತಿಳಿಸಿರುವರು.

ಸಂಗ್ರಾಮದ ಇತ್ಯರ್ಥ ಪೂರ್ವರಂಗದಲ್ಲಿ

'ಸಂಗ್ರಾಮದ ಸೋಲು ಗೆಲುವು ಇತ್ಯರ್ಥವಾಗಲಿರುವುದು ಪೂರ್ವರಂಗದಲ್ಲಿ. ನಾವು ಈಗ ಎಲ್ಲ ಬಗೆಯಲ್ಲಿಯೂ ಎಂದೆ ನಡೆಯುತ್ತಿದ್ದೇವಷ್ಟೆ? ಮುಂದೆ ಇನ್ನೂ ಹೆಚ್ಚಿನ ಬಗೆಯ ಎಂದಷ್ಟು ಸಿದ್ಧತೆ ಬೇಕಾಗಿರುವುದು. ಶತ್ರುವಿನ ಶಕ್ತಿ ಬಹಳ ಇರುವ ಸ್ಥಳದಲ್ಲಿಯೂ ರಣರಂಗ ಏರ್ಪಡುವುದಾದರೆ ಬಳಿ ಎಲ್ಲಾ ಗಳ್ಳತನದಷ್ಟೆ ಎಲ್ಲ ಅವುಗಳ ಶತ್ರುವನ್ನು ಸಂಪೂರ್ಣವಾಗಿ ನಿರ್ನಾಮಗೊಳಿಸುವುದು ನಮ್ಮ ಸಂಕಲ್ಪ. ಎಂದು' ಒಬ್ಬ ಅಮೆರಿಕನ್ ಅಧಿಕಾರಿ ತಿಳಿಸಿರುವರು.

ಪೋಲೆಂಡ್ ಗಡಿ ಕುರಿತು ರಷ್ಯದ ಸಲಹೆ ಉತ್ತಮವಾಗಿದೆ.

ಪೋಲೆಂಡ್ ಗಡಿ ಕುರಿತು ರಷ್ಯವು ಮಾಡಿರುವ ಸಲಹೆ ಎಲ್ಲ ಬಗೆಯ ಹಿತದಿಂದ ಕೂಡಿರುವುದೆಂದು ಬ್ರಾಡ್‍ಕಾಸ್ಟಿಂಗ್ ಕಂಪನಿಯ ವಿಮರ್ಶಕರು ತಿಳಿಸುತ್ತ ಪೂರ್ವ ಪ್ರಶ್ಯವನ್ನು ಕಿತ್ತುಕೊಳ್ಳುವುದನ್ನು ಜರ್ಮನರು ಸಹಿಸಲಾರರು. ಆ ಪ್ರಾಂತ್ಯದಲ್ಲಿ ಅವರು ತಮ್ಮ ಸೈನ್ಯದ ಬಲವನ್ನು ಸೇರಿಸಿ, ಅವರ ಜನರಿಗೆ–ಮುಖ್ಯವಾಗಿ ಪೋಲೆಂಡಿನಲ್ಲಿ ಹುಟ್ಟಿರುವ ಜನರಿಗೆ, ಸಹಜವಾಗಿ ಯಾರೂ ಜರ್ಮನರ ವಿಷಯದಲ್ಲಿ ಸಹಾನುಭೂತಿ ತೋರಿಸಲಾರರು. ರಷ್ಯದ ಸಲಹೆಯಂತೆ ಪರ್ಯಾಯವಾಗಿ ಪೋಲೆಂಡಿಗೆ ಬಾಲ್ಟಿಕ್ ಸಮುದ್ರಕ್ಕೆ ದೊಡ್ಡ ಮಾರ್ಗ ವಿರುವುದರಿಂದ, ಪೋಲೆಂಡಿಗೂ–ಜರ್ಮನಿಗೂ ಹಗೆತನ ಬೆಳೆಯದಂತೆ ನೋಡುವ ಅವಶ್ಯಕತೆ ಇದೆ' ಎಂದು ಅಭಿಪ್ರಾಯ ಪಟ್ಟಿದ್ದಾರೆ.

ದಂಡಯಾತ್ರೆಯ ಯೋಜನೆ ಮುಂದುವರಿದಿದೆ

ಯುರೋಪು ಮತ್ತು ಪೆಸಿಫಿಕ್‍ಗಳಲ್ಲಿ ದಂಡಯಾತ್ರೆಯ ಯೋಜನೆ ಬಹಳ ದೂರ ಮುಂದುವರಿದಿದೆ. ದೀರ್ಘಕಾಲದಿಂದ ನಿರೀಕ್ಷಿಸಿರುವ ದಂಡಯಾತ್ರೆಗಾಗಿ ಬೇಕಾದ ಸಿದ್ಧತೆಗಳನ್ನು ಮಾಡಲಾಗಿದೆ. ಇದಕ್ಕಾಗಿ ಸಮುದ್ರದ ಮೇಲೆ ಹೋಗಿ ಇಳಿಯಲು ಸಾಧಕವಾಗುವ ಹಡಗುಗಳನ್ನು ಹೆಚ್ಚಾಗಿ ಕಟ್ಟಬೇಕು. ಅಮೆರಿಕದವರು ಹಂಚಿಕೆ ಮಾಡಿರುವ ೫೦೦೦ ಮಿಲಿಯನ್ ಪೌಂಡು ವೆಚ್ಚದ ಹಡಗಿನ ನಿರ್ಮಾಣ ಯೋಜನೆಯನ್ನು ಎಷ್ಟು ಬೇಗ ಮುಗಿಸುವರೋ ಅಷ್ಟು ಬೇಗ ೧೯೪೪ರ ಇರುವ ನಡೆಯಲಿರುವ ಯುದ್ಧದ ಎಂಬ ೫೦,೦೦೦ ದಂಡಯಾತ್ರೆ ಹಡಗುಗಳನ್ನು ಸಿದ್ಧಪಡಿಸುವುದು ಯುರೋಪು ಪೆಸಿಫಿಕ್‍ಗಳ ಕಡೆಯ ಸಮರದ ಗತಿ ನಿರ್ಣಯದಲ್ಲಿ ಮುಖ್ಯ. ಇಂಗ್ಲೆಂಡಿನ ದಂಡಯಾತ್ರೆಯ ವಿಷಯದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಿರುವ ಬ್ರಿಟಿಷ್ ನೌಕಾ ಸೈನ್ಯದ ಮುಖ್ಯ ಕಾರ್ಯದರ್ಶಿ ಶ್ರೀ ಜೇಮ್ಸ್ ಫೋರ್‍ಸ್ಟಾಲ್‍ರವರು ತಿಳಿಸಿದ್ದಾರೆ

ಜರ್ಮನ್ ಮಿಲಿಟರಿ ನಿಪುಣರ ಅಭಿಪ್ರಾಯದಲ್ಲಿ ಏಪ್ರಿಲ್ ತಿಂಗಳೇ ಮುತ್ತಿಗೆಗೆ ಬಹಳ ಅನುಕೂಲವಾದ ಸಮಯ. ಏಪ್ರಿಲ್ ವೇಳೆಗೆ ಮಿತ್ರದೇಶಗಳು ೪೦ ಮಿಲಿಯನ್ ಟನ್‌ಗಳಷ್ಟು ಹಡಗುಗಳನ್ನು ಸಿದ್ಧಮಾಡಿಕೊಳ್ಳುವುವು ಎಂಬುದ ಜರ್ಮನ್ ಯೋಧರಿಗೆ [illegible] ಅನಂತರ ಯುರೋಪಿನ ಮೇಲೆ ಪ್ರಚಂಡ ಸೇನೆಯನ್ನು ಕಳುಹಿಸಲು ಮಿತ್ರದೇಶಗಳು ಶಕ್ತವಾಗುವುವು ಎಂಬುದಾಗಿ ಸ್ವೀಡಿಷ್ ನೌಕಾ ಕಾಲೇಜಿನ ಮಾಜಿ ಮುಖ್ಯಾಧಿಕಾರಿಗಳಾದ ಎಂಕ್ ಒಯೆನ್‌ಬರ್ಗ್ ಎಂಬವರು ತಿಳಿಸಿದ್ದಾರೆ.

ರುಮೇನಿಯನರ ಭೀತಿ

ಕಳೆದ ೬-೭ ವಾರಗಳಿಂದ ಜರ್ಮನ ಪಡೆಗಳು ಏಕಪ್ರಕಾರವಾಗಿ ರುಮೇನಿಯಕ್ಕೆ ಬರುತ್ತಿವೆ. ನೀಸ್ಟರ್ ನದೀ ವ್ಯೂಹವನ್ನು ಕಾಯಲು ಅವು ಬರುತ್ತಿವೆಯೆಂದು ಕಾಣಬರುತ್ತದೆ. ನೀಸ್ಟರ್ ನದಿಯ ತಿರುವಿನಲ್ಲಿರುವ ಜರ್ಮನ್ ಸೇನೆಯ ಸ್ಥಿತಿ ಚಿಂತಾಜನಕವಾಗಿದೆಯಷ್ಟೆ? ಅದಕ್ಕೆ ಸಹಾಯ ಮಾಡುವುದು ಕೂಡ ಈ ಹೊಸ ಪಡೆಗಳ ಉದ್ದೇಶ. ರಷ್ಯನರು ಪಶ್ಚಿಮಕ್ಕೆ ಬಹಳ ವೇಗವಾಗಿ ಮುಂದುವರಿಯುತ್ತಿರುವುದನ್ನು ಕಂಡು ರುಮೇನಿಯನರಲ್ಲಿ ವಿಶೇಷ ಭಯವುಂಟಾಗಿದೆ. ಬೆಸ್ಸರೇಬಿಯಾದಿಂದ ಜನರನ್ನೆಲ್ಲ ಹಿಂದಕ್ಕೆ ಕರೆಸುವ ಕಾರ್ಯವು ಬಹು ಚುರುಕಿನಿಂದ ನಡೆಯುತ್ತಿದೆ. ಅಧಿಕಾರಿಗಳಾಗಲಿ, ಪತ್ರಿಕೆಗಳಾಗಲಿ ಏನೂ ಹೇಳದೆ ತೆಪ್ಪಗಿರುವುದರಿಂದ ಜನರ ಭಯವು ಹೆಚ್ಚಲು ಕಾರಣವಾಗಿದೆ. ಕರ್ಚ್ ಪರ್ಯಾಯದ್ವೀಪದ ಉತ್ತರಭಾಗದಲ್ಲಿ ನಿನ್ನೆ ರಷ್ಯನರ ಹೊಸಪಡೆಗಳು ಬಂದಿಳಿದವು. ಈಗ ಅತ್ಯುಗ್ರ ಹೋರಾಟವು ನಡೆಯುತ್ತಿದೆ. [illegible] ನದಿಯನ್ನು ರಷ್ಯನ್ ಸೇನೆ [illegible] ನಾಜಿಗಳು ಉಗ್ರ ಪ್ರತಿಭಟನ [illegible] ರಷ್ಯನರೀಗ ನದಿಯಿಂದ ಕೇವಲ [illegible] ಮೈಲಿ ದೂರದಲ್ಲಿದ್ದಾರೆಂದು ಹೇಳಲಾಗಿದೆ.

ಬಾಲ್ಕನ್ಸ್ ಪರಿಸ್ಥಿತಿ

ಬಾಲ್ಕನ್ಸ್ ಪ್ರದೇಶ, ರುಮೇನಿಯಾ ಮತ್ತು ಬಲ್ಗೇರಿಯಾಗಳಲ್ಲಿ ನಡೆಯುತ್ತಿರುವ ಘಟನಾವಳಿಗಳನ್ನು ಲಂಡನ್ ತುಂಬಾ ಎಚ್ಚರಿಕೆಯಿಂದ ನೋಡುತ್ತಿದೆ. ಅವೆರಡರಲ್ಲೂ ಅತೃಪ್ತಿ ಅಸಮಾಧಾನ ತುಂಬಿ ತುಳುಕುತ್ತಿವೆ. ಭಯ ಸಂದೇಹಗಳು ಬೆಳೆಯುತ್ತಿವೆ. ಆದರೂ ಇದುವರೆಗೆ ಒಂದಿರುವ ನಂಬಿಕೆಗರ್ಹವಾದ ವರದಿಗಳ ಪ್ರಕಾರ ಆ ಎರಡು ದೇಶಗಳ ಮೇಲೆ ನಾಜಿಗಳ [illegible] ಎಂದಿನಂತೆ ಬಲವಾಗಿಯೇ ಇದೆ. ಆದುದರಿಂದ ರುಮೇನಿಯಾದ ಗಲಿ, ಬಲ್ಗೇರಿಯದ [illegible], ಇಟಲಿಯು ಇಟಲಿಯನ್ನು ಹಿಂಬಾಲಿಸುವುದೆಂದು [illegible] ವುದು ಕೇವಲ ಆತುರವಾಗಿಯೇ [illegible] ವಿಮರ್ಶಕರು ಹೇಳುತ್ತಿದ್ದಾರೆ. ಎರಡು [illegible] ಸ್ಥಿತಿ [illegible] ಸಮನಾಗಿಲ್ಲ. [illegible] ಯುದ್ಧದಿಂದ ದೂರವಾಗಬೇಕೆಂಬುದು [illegible] ಈ ಸಂಗ್ರಾಮದಲ್ಲಿ ಜರ್ಮನಿಯ ಸೋಲು ಖಂಡಿತ ಎಂಬುದು ರುಮೇನಿಯಾ ಮತ್ತು ಬಲ್ಗೇರಿಯದ ಅನೇಕ ಮಂದಿ ಜನರಿಗೆ ಸ್ಪಷ್ಟವಾಗಿದೆ. ತಮ್ಮ ದೇಶ ಮತ್ತು ತಮ್ಮವರಡನ್ನೂ ಜರ್ಮನಿಗೆ ವಿಕಾರಿಕೊಂಡಿರುವ ಕೆಲವು ಜನರಿಗೆ ಮಾತ್ರ ಬೇರೆ ಅಭಿಪ್ರಾಯವಿದೆ. ಆದರೆ ಈ ದೇಶಗಳಲ್ಲಿರುವ ಜರ್ಮನ್ ಕೈಗೊಂಬೆ ಸರಕಾರಗಳನ್ನು ಎದುರಿಸುತ್ತಿರುವ ಗುಂಪಿನ ಶಕ್ತಿ ಕೇವಲ [illegible] ರಾಜಕೀಯ ಕ್ರಾಂತಿಯನ್ನೆಬ್ಬಿಸಲು ಅದು ಅಶಕ್ತವಾಗಿದೆ. ಬಲ್ಗೇರಿಯಾದಲ್ಲಿ ದೇಶಭಕ್ತರಿಗೆ ಮಾರ್ಗ [illegible] ಸಲು ಸರಿಯಾದ ನಾಯಕರಿಲ್ಲ. ರುಮೇನಿಯಾದಲ್ಲಿ ಸ್ವತಂತ್ರ ನಾಯಕರಾದ ಡಾ|| ಜೂಲಿಯೋ ಮೇನಿಯೇ [illegible] ವಿದ್ದಾರೆ [illegible] [illegible] ಅನೇಕ ಅನುಯಾಯಿಗಳು [illegible] [illegible] ಅವರು [illegible] ಮುಂಕ್ಯದಲ್ಲಿ [illegible] ರುಮೇನಿಯಗೆ [illegible] ಅನುಭವ [illegible] [illegible] ಇದ್ದಾರೆ [illegible] ರುಮೇನಿಯದ [illegible] ಇಲ್ಲ [illegible] ಸಂಗ್ರಾಮ ಯಂತ್ರವನ್ನು ಕೆಡಿಸಲು [illegible] ಅದನ್ನು [illegible] ಕೊಳ್ಳಲು ಅವರು ಎಂತಹ ತ್ಯಾಗಕ್ಕಾದರೂ ಸಿದ್ಧ

ರುಗಿದ್ದಾರೆ. ರುಮೇನಿಯದ ಸೇನೆಗೆ ರಷ್ಯಾದಲ್ಲಿ ತುಂಬಾ ನಷ್ಟವಾಗಿದೆ. ಯುದ್ಧಾರಂಭದಲ್ಲಿ ರಷ್ಯದಿಂದ ಕಿತ್ತುಕೊಂಡ ಬೆಸ್ಸರೇಬಿಯಾ ಮತ್ತು ಮೊಲ್ಡೇವಿಯಾಗಳನ್ನು ಉಳಿಸಿಕೊಳ್ಳುವ ಆಸೆಯೇ ರುಮೇನಿಯನ್ನರಿಗ ಇಲ್ಲವಾಗಿದೆ. ಬಲ್ಗೇರಿಯಾದಲ್ಲಿ ಮಾತ್ರ ಗಳಿಸಿರುವುದನ್ನು ಉಳಿಸಿಕೊಳ್ಳುವ ಹಂಬಲ ಬಲವಾಗಿದೆ. ಜನರಿಗೆ [illegible] ಮತ್ತು ಗ್ರೀಸ್‌ಗಳಿಂದ ಕಿತ್ತುಕೊಂಡ ಭಾಗಗಳನ್ನು ಬಲ್ಗೇರಿಯಾ [illegible] [illegible] ಅದನ್ನು [illegible] ಬಲ್ಗೇರಿಯಾದಲ್ಲಿ [illegible] [illegible]

ಸಿಪಾಯಿಗಳನ್ನು ಗುಂಡಿಟ್ಟು ಕೊಂದರು

[illegible]

ಡೊನಾಲ್ಡ್ ಫರ್ಗುಸನ್‌ರ ಭಾರತ ಪ್ರವಾಸ

ಲಂಡನ್ನಿನ [illegible] ಪತ್ರಿಕೆಯ ಸಂಪಾದಕರಾದ [illegible] [illegible] ಪತ್ರಿಕೆಗೆ [illegible] ಒರೆಯುವವರು [illegible] ರಾಜಕೀಯ [illegible] ಕ್ರಮಗಳ [illegible] ಉದ್ದೇಶದಿಂದ ಇಲ್ಲ [illegible] ಈ ಭೇಟಿ [illegible] ಗಿಯಾಗಿ ಅವರು [illegible] ವು ಗಿದೆ [illegible] ಇಂಡಿಯಾ [illegible] ಶ್ರೀ ಫರ್ಗುಸನ್‌ರು [illegible] ಪ್ರಶ್ನೆಯನ್ನು [illegible] ಇಂಡಿಯಾ [illegible] ವಸ್ತು [illegible] ಅಭಿಪ್ರಾಯ [illegible] ಅವರು [illegible] ಭಾವನೆ ಅವರಿಗಿದೆಯೆಂದು ಹೇಳಲಾಗಿದೆ.

ಭಾರತದಿಂದ ಆಹಾರ ವಸ್ತುಗಳು ರಫ್ತಾಗುತ್ತಿಲ್ಲ

[illegible] ರಫ್ತು ಮಾಡು [illegible] ಹಲವು ಪತ್ರಿಕೆಗಳಲ್ಲಿ [illegible] [illegible] [illegible] ಆಹಾರ [illegible] ಮಾಡಿಲ್ಲವೆಂದು [illegible] ರಫ್ತು [illegible] ಸರ್ಕಾರ [illegible] ಪಡಿಸಿದೆ.

ಭಾರತವನ್ನು ವಿಭಾಗಿಸುವುದೇ?

[illegible] ಶ್ರೀ ಜಿನ್ನಾರವರು ಬ್ರಿಟನ್ನಿಗೆ [illegible] ಭಾರತ [illegible] ವಿಭಾಗಿಸ [illegible] ಅವಕಾಶವನ್ನು [illegible] ಬ್ರಿಟನ್ನು [illegible] ಭಾರತವನ್ನು [illegible] ಸೂಚಿಸಿದ

ನಾಂಗ್‌ಚಾ ಹಿಡಿದರು

[illegible] ಮಾಡಿದ್ದಾರೆ [illegible] ಮುತ್ತಿಗೆ [illegible]

ಧಾನ್ಯದ ಕೊರತೆ

[illegible] ಈ ರೀತಿ ತಿಳಿಸುತ್ತಾರೆ—

[illegible]

ಸ್ವೀಕಾರ

[illegible] 1 [illegible] 13 [illegible] 2 [illegible]

[illegible]

(೧೦ನೇ ಪುಟದಿಂದ ಮುಂದುವರಿದುದು)

ಏರಬೇಕೆಂದು ತಿಳಿದು, ಒಂದು ದಿನದ ಮಟ್ಟಿಗೆ ಉಪವಾಸವಿದ್ದು, ಅಧಿಕವಾಗಿ ನೀರನ್ನು ಕುಡಿದು, ಶುದ್ಧವಾದ ಗಾಳಿಯನ್ನು ಸ್ವೀಕರಿಸಿರಿ! ನಾಲ್ಕೈದು ಸಲದ ಭೋಜನಗಳನ್ನು ಬಿಟ್ಟುಬಿಟ್ಟರೂ ಅದರಿಂದ ಗುಣವೇ! ಆಗಲೂ ನಿಮ್ಮ ದೇಹಾರೋಗ್ಯವು ತೀರದಿದ್ದರೆ, ಒಳ್ಳೇ ಚಿಕಿತ್ಸಕರಾದವರು ಹೇಳುವ ಹಾಗೆ ಕೆಲಸಮಾಡಿರಿ. ಅನಾರೋಗ್ಯವೆಂಬುದು ಸೋಂಕುರೋಗದಂತೆ ಸಾಂಕ್ರಾಮಿಕವೇ! ಆದುದರಿಂದ ನಾವು ಆರೋಗ್ಯವನ್ನು ಸಂಪಾದಿಸಬೇಕಾದರೆ, ಆರೋಗ್ಯವಂತರೊಡನೆ ಕೂಡಾಡುತ್ತ ಆರೋಗ್ಯವಿಧಾನಗಳನ್ನು ಗ್ರಹಿಸಬೇಕು.

ದುಃಖವಾರ್ತೆ

ಧಾರವಾಡ ಹಾವೇರಿಪೇಟೆಯ ಮ|| ರಾ|| ಶ್ರೀ|| ಚೆನ್ನಬಸಪ್ಪನವರ ತುರಮರಿ ಇವರು ತಾ|| ೨೫-೧೨-೪೫ ರಲ್ಲಿ ತಮ್ಮ ೫೦ನೇ ವರ್ಷ ವಯಸ್ಸಿನಲ್ಲಿ ಶಿವಲೋಕವನ್ನು ಹೊಂದಿದರು. ಇವರು ಚಿಕ್ಕವಯಸ್ಸಿನಿಂದಲೂ ವೀರಶೈವ ಧರ್ಮದ ಆಚರಣೆಯನ್ನು ಒಳ್ಳೇ ಶ್ರದ್ಧಾಭಕ್ತಿಗಳಿಂದ ಆಚರಿಸುತ್ತಿದ್ದರು. ಅಂತ್ಯಕಾಲ ಸಮೀಪಿಸಲು ತಮ್ಮ ಕುಲಗುರುಗಳನ್ನು ಕರೆಸಿಕೊಂಡು ಗುರುಸನ್ನಿಧಿಯಲ್ಲಿಯೇ ಅವರ ಆಜ್ಞಾಪ್ರಕಾರ ಪರಮಾತ್ಮನ ಧ್ಯಾನ ಮಾಡುತ್ತ ಲಿಂಗೈಕ್ಯರಾದರು. ಇಂಥ ಗುರುಭಕ್ತಿಶೀಲರ ಮರಣವು ಮಾದರಿಯಾಗಿ ಜನರಿಗೆ ಮಾರ್ಗದರ್ಶಿಯಾಗಿತ್ತು. ಅವರ ನಿಧನದಿಂದ ವೀರಶೈವಸಮಾಜದ ಒಂದು ದಿವ್ಯ ಜ್ಯೋತಿಯು ಕಣ್ಮರೆಯಾದಂತಾಯಿತು. ಪರಶಿವನು ಮೃತರ ಆತ್ಮಕ್ಕೆ ಚಿರಶಾಂತಿಯನ್ನೂ ಅವರ ಬಂಧುವರ್ಗಕ್ಕೆ ಸಮಾಧಾನವನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ದುಃಖಭಾಗಿ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೨ × ೧೪ ಬೆಲೆ ೧ಕ್ಕೆ	೦—೪—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಕರರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೨ × ೧೪ ಬೆಲೆ	೦—೨—೦
ಸನ್ಮಾ|| ಶಿವಾನೋಹರಾಮೂರ್ತಿಗಳ್ ನವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೨ ಬೆಲೆ	೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೧—೦
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೦
ಶ್ರೀಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ ...	೦—೧—೬
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೦
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೧—೦
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೦
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು.

ಗೋತ್ರಸೂತ್ರಪಟ (೨ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಚಾರ (೨ನೆಯ ಆವೃತ್ತಿ ಸಂಸ್ಕೃತ) ...	೧ ಆಣೆ
ಪಂಚಪೀಠ ಪ್ರಶ್ನಪ್ರಕಾಶ (೨ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ) ...	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ). ...	೨ ಆಣೆ
ಬಸವಾದಿಪ್ರಮಥತತ್ತ್ವದರ್ಪಣ (೨ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪರಾಗ	೨ ಆಣೆ
ಶ್ರೀಪಂಚಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ) . .	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೪ ಆಣೆ
ಶ್ರೀಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವಪೂಜಾಪದ್ಧತಿಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಚಾರತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಭ್ರಾಂತಿನಿವಾರಕ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಸಂಭಾಷಣಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಪಟ್ಟೋದ್ಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ಶ್ಲೋಕಗಳ ವಿಮರ್ಶೆವುಳ್ಳ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ವೀರಶೈವಸರಸ್ವ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು)	೧॥ ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾಸಹಿತ)	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shatriji (*English*)	4 As
The Philosophical Aspect of Virasaivism (*English*) ...	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत) ...	१ रु
सिद्धांतशिखामणि (मूल)	६ आ
पुरुषसूक्तम् (वीरशैवप्राचीनभाष्योपेतम्)	४ आ
नंदिकेश्वरकारिका (संस्कृत)	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸರಸ್ವತೀಪುರದ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಲ್ಪಟ್ಟು ಪ್ರಕಟಿಸಲ್ಪಟ್ಟಿತು.

REGISTERED No. M. 2266

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ । ಪಂಚಕ್ಲೇಶವಿನಾಶಕಾನ್ ಪರತರಾನ್ ಪಂಚಲಿಂಗೋದ್ಭವಾನ್ ॥
ಪಂಚಾಚಾರನಿಯಾಮಕಾನ್ ಸವಿಹಸತ್ಪಂಚಾಕ್ಷರೀಬೋಧಕಾನ್ । ಪಂಚಾಚಾರ್ಯಜಗದ್ಗುರೂನ್ [illegible] ॥

ಸ್ಥಳದವರಿಗೆ ೨ ರೂ.

ಪರಸ್ಥಳದವರಿಗೆ ೨ ರೂ. ೧೨ ಆಣೆ. ವಿ. ಪಿ. ಖರ್ಚು ಸೇರಿ ೩ ರೂಪಾಯಿ.

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೪ನೇ ಜನವರಿ ೧೯೪೪ [ಸಂಚಿಕೆ ೩೮

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯತಿಥಿಮಹೋತ್ಸವಗಳು

ಸೊಲ್ಲಾಪುರ

ತಾ|| ೧೪-೧-೪೪ ನೆಯ ಶುಕ್ರವಾರ ಸೊಲ್ಲಾಪುರ ಶ್ರೀ ಬಾಲತಪಸ್ವಿ ಬೃಹನ್ಮಠದಲ್ಲಿ ಶ್ರೀಮಜ್ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಪುಣ್ಯತಿಥಿಮಹೋತ್ಸವವು ಬಹಳ ವೈಭವದಿಂದ ಮಾಡಲ್ಪಟ್ಟಿತು. ಆ ದಿವಸ ಬೆಳಿಗ್ಗೆ ಶ್ರೀಮದ್ವೀರಶೈವ ಗುರುಕುಲದ ವಿದ್ಯಾರ್ಥಿಗಳಿಂದ ಶ್ರೀ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕವು ಜರುಗಿ ಗಣಾರಾಧನೆಯು ಮಾಡಲ್ಪಟ್ಟಿತು. ಆಮೇಲೆ ಶ್ರೀ|| ಷ|| ಬ್ರ|| ಬಾಲತಪಸ್ವಿ ಚೆನ್ನಬಸವಶಿವಾಚಾರ್ಯರು ತಮ್ಮ ಶಿವಲಿಂಗಾನುಷ್ಠಾನವನ್ನು ಪೂರೈಸಿ ಮಧ್ಯಾಹ್ನ ನಾಲ್ಕು ಘಂಟೆಗೆ ಪಾದ... ದಯಮಾಡಿಸಿದ ಮೇಲೆ ಶ್ರೀ ಶಿವಯೋಗಿ ಸಾರ್ವಭೌಮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಭಾವಚಿತ್ರಕ್ಕೆ ವೇದೋಕ್ತ ಷೋಡಶೋಪಚಾರ ಪೂಜೆಯಾಗಿ ಸೊಲ್ಲಾಪುರ ವೀರಶೈವ ಸದಾಚಾರ ಸ್ತ್ರೀ ಸಮಾಜದ ಕುಮಾರಿಯರಿಂದಲೂ ಶ್ರೀ ಲಿಂಗಪ್ಪ ಮಾಸ್ತರರ, ಶ್ರೀ ಗುರುಕುಲದ ವಿದ್ಯಾರ್ಥಿಗಳಿಂದಲೂ ಮಹಾಸ್ವಾಮಿಗಳವರ ಸ್ತೋತ್ರ ಪದ್ಯಗಳು ಪಠಿಸಲ್ಪಟ್ಟವು. ಸಭಿಕರ ಮನಃಪಾತ್ರಗಳು ಧಾರವಾಗಿ ಹರಿಯುತ್ತಿದ್ದವು. ಆ ಮೇಲೆ ಶ್ರೀ ಬಾಲತಪಸ್ವಿಗಳು ಮಹಾಸ್ವಾಮಿಗಳ ಲೀಲಾ ವಿಷಯವಾಗಿ ಎಲ್ಲರಿಗೂ ಉಪದೇಶಿಸಿದರು. ಆ ದಿವಸ ಗ್ರಾಮದೇವತೆಯಾದ ಶ್ರೀ ಸಿದ್ಧರಾಮೇಶ್ವರ ಯಾತ್ರಾ ಮಹೋತ್ಸವವಿದ್ದುದರಿಂದ ಸ್ವಲ್ಪದರಲ್ಲಿಯೇ ಸಮಾಪ್ತಿಗೊಳಿಸಿ ಮಹಾಸ್ವಾಮಿಗಳ ಭಾವಚಿತ್ರಕ್ಕೆ ಮಂಗಳ ಮಾಡಿದರು. ಮಾರನೆಯ ದಿವಸವೂ ಇದೇ ರೀತಿ ಕಾರ್ಯಕ್ರಮವು ಜರುಗಿ ತಾ|| ೧೭-೧-೪೪ ನೆಯ ಸೋಮವಾರ ರಾತ್ರಿ ಒಂಭತ್ತು ಘಂಟೆಗೆ ಪುಣ್ಯತಿಥಿ ಪ್ರೀತ್ಯರ್ಥವಾಗಿ ಸಭೆಯು ಪ್ರಾರಂಭವಾಯಿತು. ಸಾಹಿತ್ಯ ವಿಶಾರದ ಶ್ರೀ ವೇ|| ಪಂ|| ಜಗದೀಶಶಾಸ್ತ್ರಿಗಳವರು ರಚಿಸಿದ್ದ ಶ್ರೀ ಮಹಾಸ್ವಾಮಿಗಳವರ ಶ್ಲೋಕಗಳು ಶ್ರೀ ಹಳದೂರು ಶಾಸ್ತ್ರಿಗಳಿಂದ ಓದಲ್ಪಟ್ಟು ಶ್ರೀ ವೇ|| ಪಂ|| ಬಸವಲಿಂಗಶಾಸ್ತ್ರಿ ಪುರಾಣಿಕ ಸೊಲ್ಲಾಪುರ ಇವರು ಆ ಶ್ಲೋಕಗಳ ಅರ್ಥವನ್ನು ಎಲ್ಲರಿಗೂ ತಿಳಿಯುವಂತೆ ಪ್ರತಿಪಾದಿಸಿದರು. ಆ ಮೇಲೆ ಸ್ತ್ರೀ ಸಮಾಜದ ಬಾಲಿಕೆಯರು "ಶ್ರೀ ಜಗದಾಚಾರ್ಯರ ಸಂದೇಶ" ಎಂಬ ಪದ್ಯವನ್ನು ಹಿಂದಿ ಭಾಷೆಯಲ್ಲಿ ಹಾಡಿ ಎಲ್ಲರನ್ನೂ ಆನಂದಗೊಳಿಸಿದರು. ತರುವಾಯ ಕು|| ಇಂದುಕಲಾ ಜೋಡಭಾವಿ ಈ ಕುಮಾರಿಯು, ಮಹಾಸ್ವಾಮಿಗಳವರ ಲೀಲಾ ಮಧ್ಯದಲ್ಲಿ ಒಬ್ಬ ಹುಡುಗನಿಗೆ "ಜೀವದಾನ" ಈ ವಿಷಯವಾಗಿ ಕೀರ್ತನೆ ಮಾಡಿ ಸಭಿಕರನ್ನು ಆನಂದಗೊಳಿಸಿದಳು. ಅನಂತರ ಶ್ರೀ ಷ|| ಬ್ರ|| ಪಟ್ಟಾಧ್ಯಕ್ಷ ಹುಣಸಿಗಿ ಇವರು ತಾವು ರಚಿಸಿದ ಒಂಭತ್ತು ಪದ್ಯ ಶ್ಲೋಕಗಳನ್ನು ಓದಿ ತೋರಿಸಿದರು. ಹಾಗೂ ಸೌ|| ಭಾಗೀರಥಿಬಾಯಿ ಕಟಾಪ, ಶ್ರೀ ಗುರಪ್ಪ ಮಠಪತ್ತಿ ಇವರೂ ಮಹಾಸ್ವಾಮಿಗಳವರ ಲೀಲಾ ಗುಣವರ್ಣನೆ ಮಾಡಿದಮೇಲೆ, ಪಂಚಾಚಾರ್ಯರ ಸಂಬಂಧ ಆರತಿ ಹಾಡಿ ಶ್ರೀ ಕುಮಾರಿಯರಿಂದಲೂ ಸಭ್ಯರ ನಾನಾ ತರಹದ ಕಲಿಸಾಗಿ ಪರಮಾತ್ಮನ ಪ್ರಾರ್ಥನಾರೂಪದ ಗಾನ ಆರಾಧನೆಯು ಶ್ರೀ ರುದ್ರಮುನಿ ಮಠರಿಗೆ ಈ ಕುಮಾರಿಯರಿಂದಲೂ ಪ್ರಸನ್ನೋತ್ತರವಾಗಿ ಮಾಡಲ್ಪಟ್ಟಿತು. ಮಹಾಸ್ವಾಮಿಗಳ ವಿಷಯವಾಗಿ ಶ್ರೀ ಮಠರಿಗೆ ಈ ಕುಮಾರನು ಮಾಡಿದ ಅಲಂಕಾರಯುಕ್ತವಾದ ಭಾಷಣವನ್ನು ಕೇಳಿ ಎಲ್ಲರೂ ತಲೆದೂಗಿ ಕರತಾಡನೆಗಳ ಮೂಲಕ ತಮ್ಮ ಆನಂದವನ್ನು ಮೇಲಿಂದ ಮೇಲೆ ವ್ಯಕ್ತಗೊಳಿಸುತ್ತಿದ್ದರು. ತರುವಾಯ ಶ್ರೀ ಬಾಲತಪಸ್ವಿಗಳು ಮಹಾಸ್ವಾಮಿಗಳ ಲೀಲಾ ವಿಷಯವಾಗಿ ಬಹಳ ಹೃದಯಂಗಮವಾಗಿ ಉಪನ್ಯಾಸಮಾಡಿದರು. ಮತ್ತು ಕೀರ್ತನೆ ಮಾಡಿದ ಕು|| ಜೋಡಭಾವಿ ಈ ಕುಮಾರಿಗೆ ಶ್ರೀ ವೇ|| ಪುರದಯ್ಯನವರು ಗವಿಗ ಇವರು ಕುಮಾರಿಯ ಚಾತುರ್ಯಕ್ಕೆ ಆನಂದಪಟ್ಟು ಐದು ರೂಪಾಯಿ ಬಕ್ಷೀಸು ಕೊಟ್ಟರು. ಮತ್ತು ಶ್ರೀ ಮಠರಿಗೆ ಇವರಿಗೂ ಒಂದು ರೂಪಾಯಿ ಬಕ್ಷೀಸು ಕೊಟ್ಟರು. ಮತ್ತು ಕುಮಾರನ ಭಾಷಣಕ್ಕೆ ಶ್ರೀ ಆನಂದಪಟ್ಟು ಶ್ರೀ ಸಿದ್ಧೇಶ್ವರ ಕಾಲೇಜ್ ಈತನು ಬಕ್ಷೀಸುಬಂದ ಮೂರು ರೂಪಾಯಿಗಳನ್ನು ನನ್ನ ಕಾಣಿಕೆಯೆಂದು ಶ್ರೀ ಗುರುಕುಲಕ್ಕೆ ಅರ್ಪಣ ಮಾಡಿದನು. ಹಾಗೂ ಶ್ರೀ ಜೋಡಭಾವಿ ಈ ಕುಮಾರಿಯು ತನಗೆ ಬಂದಂಥ ಐದು ರೂಪಾಯಿಗಳನ್ನು ಸದಾಚಾರ ಸ್ತ್ರೀ ಸಮಾಜಕ್ಕೆ ಅರ್ಪಣ ಮಾಡಿದಳು. ಇದನ್ನೆಲ್ಲ ಬಾಲಭಕ್ತಿ ಅಂಕುರ ವಲ್ಲದ ಇವರ ಗುರುಭಕ್ತಿ ಶ್ರೀ ಷ|| ಬ್ರ|| ಬಾಲತಪಸ್ವಿಗಳ ಕೃಪೆಯಿಂದ ಜನಿಸತ್ತದ್ದಾಗಿ ಇದರಿಂದ ಸಮಾಜೋದ್ಧಾರವಾಗಲು ಸಂಶಯವಿಲ್ಲ. ಆಮೇಲೆ ಶ್ರೀ ಬಾಲತಪಸ್ವಿಗಳಿಂದ ಸಮಾರೋಪವಾಗಿ ಶ್ರೀ ಜಗದಾಚಾರ್ಯರ ಶ್ರೀ ಮಹಾಸ್ವಾಮಿಗಳವರ ಭಾವಚಿತ್ರಕ್ಕೆ ಮಂಗಳವಾಗಿ ಜಯಘೋಷದೊಂದಿಗೆ ಸಭೆಯು ಮುಕ್ತಾಯವಾಯಿತು. ವಾರ್ಷಿಕ ಪದ್ಧತಿಯಂತೆ ಸದಾಚಾರ ಸ್ತ್ರೀ ಸಮಾಜದಲ್ಲಿ ತಾ|| ೧೪-೧-೪೪ನೆಯ ಶುಕ್ರವಾರ ಬೆಳಿಗ್ಗೆ ಪುಣ್ಯತಿಥಿ ಪ್ರೀತ್ಯರ್ಥವಾಗಿ ಶ್ರೀ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕ ಷೋಡಶೋಪಚಾರ ಪೂಜೆ ಗಣಾರಾಧನೆಗಳಾಗಿ ಸಾಯಂಕಾಲ ಆರು ಘಂಟೆಗೆ ಸಭೆ ಸೇರಿಸಲ್ಪಟ್ಟಿತು. ಅದೇ ಸಮಾಜದ ಬಾಲಿಕೆಯರಿಂದ ಸ್ತೋತ್ರಪದ್ಯಗಳು ಜರುಗಿದ ಮೇಲೆ ಶ್ರೀ ಗುರಪ್ಪಬಾಯಿ, ಸೌ|| ಭಾಗೀರಥಿಬಾಯಿಯವರ ಉಪನ್ಯಾಸಗಳಾಗಿ ಮಹಾಸ್ವಾಮಿಗಳವರ ಭಾವಚಿತ್ರಕ್ಕೆ ಮಹಾಮಂಗಳವನ್ನು ಮಾಡಿದ ಮೇಲೆ ಶ್ರೀ ಜಗದಾಚಾರ್ಯರ ಜಯಘೋಷದೊಂದಿಗೆ ಸಭೆಯು ಪರಿಸಮಾಪ್ತವಾಯಿತು.

ಉತ್ಸವಭಾಗಿ

ಹಾರನಹಳ್ಳಿ

ಶಿವಮೊಗ್ಗಾ ಜಿ|| ಹಾರನಹಳ್ಳಿಯಲ್ಲಿರುವ ವೇ|| ಗುಬ್ಬಿಯ ಶಿವಲಿಂಗಪಂಡಿತ ಶಿವರುದ್ರಶಾಸ್ತ್ರಿಗಳವರು ತಮ್ಮ ವಾಸಸ್ಥಳದಲ್ಲಿ ಇದೇ ಪುಷ್ಯ ಬ|| ೪ (ತಾ|| 14-1-1944) ಶುಕ್ರವಾರ ಪ್ರಾತಃಕಾಲ ಶ್ರೀಭಗವತ್ಪಾದರವರ ಭಾವಚಿತ್ರವನ್ನು ತಳಿರುತೋರಣ ಪುಷ್ಪಗುಚ್ಛಗಳಿಂದಲಂಕೃತವಾದ ಭವ್ಯಮಂಟಪದಲ್ಲಿ ಮೂರ್ತಗೊಳಿಸಿ ವಿಧ್ಯುಕ್ತವಾಗಿ ಪೂಜಿಸಿ, ವಂದಿಸಿ, ನಮಿಸಿ, ಸ್ತುತಿಸಿ. ಸ್ವರಚಿತವಾದ ಮಹಾಗುರು ಸಿದ್ಧಲಿಂಗಶಿವಾಚಾರ್ಯರ ಸ್ತೋತ್ರರತ್ನಗಳ ಹಾಡಿ ಕೊಂಡಾಡಿ ಜೇಡಿಪ್ರಸಾದವನ್ನು ವಿನಿಯೋಗಿಸಿದ ಬಳಿಕ ಮಾಧ್ಯಾಹ್ನ ಸಂತರ್ಪಣೆ ನಡೆದು ಸಾಯಂಕಾಲ ಜಗದ್ಗುರುವರರ ಪಾವನ ಜೀವನಚರಿತ್ರೆಯನ್ನು ಓದಿಸಿ ಪ್ರವಚನಗಳಿಂದ ಭಾವುಕರನ್ನು ಧನ್ಯರನ್ನಾಗಿ ಮಾಡಿದರು.

ಶಿವ ಗುರುಚರಣಸೇವಕ

ವಿಶೇಷಸಭೆ ಸೊಲ್ಲಾಪುರ

ಇದೇ ಜನವರಿ ೬ನೇ "ಲೋಕಸೇವಕ" ಮಾಸಿಕ ಪತ್ರಿಕೆಯಲ್ಲಿ ಶ್ರೀಭಾಸ್ಕರರಾವ್ ಜಾಧವ, ಎಂ.ಎ. ಎಲ್ ಎಲ್, ಬಿ ಇವರ "ಮಹಾದೇವ" ಎಂಬ ದೇಶ್ಯಾಗಿನ ಲೇಖನದಲ್ಲಿ. ಈಶ್ವರ. ನಂದಿ, ಬಿಲ್ವಪತ್ರೆ, ವೀರಶೈವರು ಧರಿಸುವ ಶ್ರೀಶಿವಲಿಂಗದ ವಿಷಯವಾಗಿ ಅಸಂಬದ್ಧ ಟೀಕೆ ಬರೆದದ್ದಕ್ಕಾಗಿ ಸೊಲ್ಲಾಪುರ ಶ್ರೀಬಾಲತಪಸ್ವಿ ಬೃಹನ್ಮಠದಲ್ಲಿ ಶ್ರೀಗುರುಕುಲದ ಪರಿಯಿಂದ ತಾ|| 17-1-44 ನೆಯ ಸೋಮವಾರ ರಾತ್ರಿ ಒಂಬತ್ತು ಘಂಟೆಗೆ ಶ್ರೀಮಾನ್ ಝುಂಜೆ ವಕೀಲ ಇವರ ಅಧ್ಯಕ್ಷತೆಯಲ್ಲಿ ಧರ್ಮದ್ರೋಹಪೂರ್ವವಾದ ಈ ನಿಂದ್ಯ ಲೇಖನದ ನಿಷೇಧಾರ್ಥವಾಗಿ ಸಭೆಯು ಪ್ರಾರಂಭಿಸಲ್ಪಟ್ಟಿತು. ಶ್ರೀ ಷ|| ಬ್ರ|| ಪಟ್ಟಾಧ್ಯಕ್ಷ ಹುಣಸಿಗಿ. ಇವರಿಂದ ಅಧ್ಯಕ್ಷರ ಸೂಚನೆಯಾಗಿ, ಶ್ರೀ ಷ|| ಬ್ರ|| ಕಡಪಟ್ಟಿ ಶ್ರೀಗಳಿಂದ ಅನುಮೋದನವಾಗಿ ಅಧ್ಯಕ್ಷರು ಸ್ಥಾನಾಪನ್ನರಾದರು. ಆಮೇಲೆ ಶ್ರೀಜಗದೇವರಾವ್ ಷೇಟೆ ಮುಖ ಡಾಕ್ಟರ್‌ರು ಶ್ರೀಗುರುಪಾದಸ್ವಾಮಿ ಸಾವಂತವಾಡಿ ಶ್ರೀ ವೇ|| ಪಂ|| ಸಾಹಿತ್ಯವಿಶಾರದ ಜಗದೀಶಶಾಸ್ತ್ರಿಗಳವರು ಶ್ರೀ ವೇ|| ಪಂ|| ಬಸವಲಿಂಗಶಾಸ್ತ್ರಿ ಪುರಾಣಿಕ ಇವರ ಆವೇಶಯುಕ್ತವಾದ ಚರ್ಚಾತ್ಮಕ ಭಾಷಣಗಳಾದವು. ಮತ್ತು ಶ್ರೀಭಾಸ್ಕರರಾವ್ ಜಾಧವ ಇವರ ಮೇಲ್ಕಂಡ ಲೇಖದಲ್ಲಿ ಪ್ರದರ್ಶಿಸಿರುವ ನಿಂದ್ಯ ವಿಚಾರಗಳ ಮೂಲಕವಾದ ನಿಷೇಧವು ಮಾಡಲ್ಪಟ್ಟಿತು. ಸನ್ಮಾನ್ಯ ನಾಗರಿಕ ಶ್ರೀಬಂಡಪ್ಪ ಝುಂಜೆ ಇವರ ಆಭಾರ ಮನ್ನಿಸಿ ಶ್ರೀಬಸವಲಿಂಗಶಾಸ್ತ್ರಿಗಳವರು ಆಚಾರ್ಯರ ಜಯಘೋಷದೊಂದಿಗೆ ಮುಕ್ತಾಯಗೊಳಿಸಿದರು

ಸೆಕ್ರೆಟರಿ,, ಶ್ರೀಮದ್ವೀರಶೈವಗುರುಕುಲ

ಸೊಲ್ಲಾಪುರ,

ಪಂಚಾಚಾರ್ಯಪ್ರಭಾ.

೧೯೪೪ನೆಯ ಜನವರಿ ಶಾ|| ೨೪ನೇ ಸೋಮವಾರ

ಗುರೂಪದೇಶ.

ಯಥಾ ಸಿದ್ಧರಸಸ್ಪರ್ಶಾತ್ [illegible] ತಾಮ್ರಂ ಸುವರ್ಣತಾಂ ಪ್ರಯಾಂತಿ ಸರ್ವದಾ | ತಥಾ ಗುರೂಪದೇಶಾತ್ [illegible] ಶಿಷ್ಯಃ ಪ್ರಯಾಂತಿ ತತ್ಪ್ರತ್ಯಕ್ಷಮಾಪನುಯಾತ್ ||

ಉರಿಯುತ್ತಿರುವ [illegible] ದಿನಗೆ [illegible] ಬೂದಿಯನ್ನು ಅನಂತಕಿಡಿಗಳು [illegible] ಮುತ್ತಿರುವಂತೆ ಸಚ್ಚಿದಾನಂದಮಯ [illegible] ರಿಂದ ಅನಂತಜೀವರು [illegible] ವಲ್ಲಿಯೇ ಲಯವನ್ನು ಹೊಂದುವರೆಂಬ ಶ್ರುತಿಪ್ರಮಾಣದಿಂದಲೂ, ಈ ಅರ್ಥಾನುಸಾರವಾದ [illegible] ತತ್ವವಾದ "ನಿಷ್ಕಲಲಿಂಗಾದನ್ಯೋ[illegible]" ಎಂಬ ಉಕ್ತಿಯಿಂದಲೂ, ನಮ್ಮ ಜೀವಾತ್ಮರುಗಳು ಶಿವನ ಅಂಶಗಳೆಂದು ಸ್ಪಷ್ಟವಾಗಿದ್ದರೂ, ಈ ಜೀವರು ಅನಾದಿಯಾದ [illegible] ಕೂಡಿದವರಾ[illegible] ಸರ್ವಜ್ಞತ್ವಾದಿ ಕಲ್ಯಾಣಗುಣಗಳು [illegible] ಯಾಗಿ [illegible] ಅನೇಕ [illegible] ಸ್ವಭಾವವಾಗಿ ಜೀವಾತ್ಮರು ಪರಬ್ರಹ್ಮನಂತೆ [illegible] ಚಿನ್ನದಲ್ಲಿ ಸಾಲಿನ್ಯವು [illegible] ಆಣವಾದಿ ಮಲತ್ರಯಗಳು ಜೀವರನ್ನು [illegible] ಕೊಂಡಿರುತ್ತವೆ. ಈ ಮಲಗಳು ಕಿತ್ತುಹೋಗುವವರೆಗೂ ಈ ಸಂಸಾರ ಸಮುದ್ರದಲ್ಲಿ [illegible] ಬಿಡುತ್ತಲೇ ಇರುವನು. [illegible] ನಾವು [illegible] ಗಳಿಂದ ಗಟ್ಟಿ ಕಟ್ಟಲ್ಪಟ್ಟಿರೆ ಕಪ್ಪೆಯಲ್ಲಿಯೇ [illegible] ಅಂಧಕಾರದ ನರಗಳನ್ನು [illegible] ಬಾಲಕನು [illegible] ಬಿಡುವವರೆಗೂ ಈ [illegible] ಉಂಟಾಗಲಾರದು. ನಮ್ಮ [illegible] ಅನಾದಿಯಾಗಿ ಬಂದಿರುವ ಆಣವ, ಮಾಯೀಯ, ಕಾರ್ಮಿಕ ಎಂಬ ಮೂರು ತೆರನಾದ [illegible] ದುರ್ಭೇದ್ಯವಾಗಿರುವ ಈ ಮೂಲಪಾಶದಿಂದ ಕಟ್ಟಲ್ಪಟ್ಟಿರುವುದರಿಂದ ಶಿವನಂತೆ ನಮ್ಮಲ್ಲಿ ಸ್ವಭಾವಸಿದ್ಧವಾದ ಸರ್ವಜ್ಞತ್ವಾದಿ ಸ್ವಾತಂತ್ರ್ಯಗುಣಗಳು [illegible] ಗಳಾಗಿ [illegible] ಭವಿಸುತ್ತಲಿವೆ. ಈ ಅರ್ಥದಲ್ಲಿ "ನ ಯದೂರ್ಧ್ವಭವೇತ್ [illegible]" ಎಂದು ಶಿವಾಗಮೋಕ್ತಿಯುಂಟು. ಈ ತ್ರಿವಿಧವಾದ [illegible] ಹೋಗುವವರೆಗೂ [illegible] ಅನಾದಿಕಾಲದಿಂದ ಅಂಟಿಕೊಂಡು [illegible] ಈ [illegible] ಎಂದೂ ಕಿತ್ತುಹೋಗಲಾರವು. ಕಿತ್ತುಹೋದ ಹೊರತು ಆತ್ಮನ ಸ್ವಾಭಾವಿಕಗುಣಗಳು ತಲೆದೋರಲಾರವು; ಅಲ್ಲದೆ ಮುಂದು ಮುಂದು [illegible] ಕಳೆದುಹೋದ ಹಾಗೆಲ್ಲ ಈ ಮಲಪಾಶಗಳು ದುರ್ಭೇದ್ಯಗಳಾಗುತ್ತಲೇ ಹೋಗುತ್ತವೆ. ಅದರಿಂದ ವಿವೇಕಶಾಲಿಗಳಾದವರು ತಮ್ಮ ಜೀವರನ್ನು ಬಂಧಿಸಿರುವ ಈ ಮಲಪಾಶವೆಂಬ ಸಿಗಳನ್ನು ಆದಷ್ಟು ಬೇಗನೆ ಕತ್ತರಿಸಿ ಹಾಕಲು ಪ್ರಯತ್ನಿಸಬೇಕು. ಪರಮಾತ್ಮಸ್ವರೂಪರಾದ ಆಚಾರ್ಯಭಗವತ್ಪಾದರು ವೇದಾಗಮಪ್ರಮಾಣಾನುಸಾರವಾಗಿ ಈ ಪಾಶಗಳನ್ನು ಛೇದಿಸಿ ಜೀವಾತ್ಮರನ್ನುದ್ಧರಿಸಲು ಗುರುಗಳೇ ಸಮರ್ಥರೆಂದು [illegible] ತ್ತಾರೆ. ಗುರುಗಳಲ್ಲಿ ಇಂಥ ದುರ್ಭೇದ್ಯಗಳಾದ ಪಾಶಗಳನ್ನು ಛೇದಿಸಲು ಹರಿತವಾದ ಆಯುಧಗಳುಂಟು. ಕ್ರಿಯಾದೀಕ್ಷಾ, ಮಂತ್ರದೀಕ್ಷಾ, ವೇಧಾದೀಕ್ಷಾ ಎಂದು ಮೂರು ವಿಧಗಳಾದ ದೀಕ್ಷೆಗಳೇ ಇಲ್ಲಿ ಮಲಪಾಶಚ್ಛೇದಕಗಳಾದ ಆಯುಧಗಳಾಗಿರುತ್ತವೆ. ಕ್ರಿಯಾದೀಕ್ಷೆಯು ಸ್ಥೂಲಶರೀರದಲ್ಲಿರುವ ಕರ್ಮಫಲಪಾಶವನ್ನೂ, ಮಂತ್ರದೀಕ್ಷೆಯು ಸೂಕ್ಷ್ಮಶರೀರದಲ್ಲಿರುವ ಮಾಯಾಮಲಪಾಶವನ್ನೂ, ವೇಧಾದೀಕ್ಷೆಯು ಜೀವನನ್ನಾವರಿಸಿದ ಆಣವ ಮಲಪಾಶವನ್ನೂ ಛೇದಿಸುವುದು. ಜೀವನಿಗೆ ಆವರಿಸಿದ ಉಪಾಧಿಗಳು ನಷ್ಟವಾದ ಹೊರತು ನಮ್ಮ ಆತ್ಮರು ಶಿವನಲ್ಲಿ ಅಭೇದಾಕಾರದಿಂದ ಬೆರೆಯಲಾರರು. ತೆಂಗಿನಕಾಯಿಯೊಳಗಿರುವ ನೀರು ಸಮುದ್ರಜಲದಲ್ಲಿ ಬೆರೆಯಬೇಕಾದರೆ ಆ ತೆಂಗಿನಕಾಯಿಯನ್ನೇ ನೀರಿಗೆ ಹಾಕಿದರೆ ಬೆರೆಯಲಾರದು. ಅದಕ್ಕೆ ಮೂರು ವಿಧಗಳಾದ ಉಪಾಧಿಗಳುಂಟು. ಮೇಲ್ಭಾಗದಲ್ಲಿ ಆವರಿಸಿರುವ ಸಿಪ್ಪೆಯನ್ನೂ, ಅದರೊಳಗಿರುವ ಚಿಪ್ಪನ್ನೂ, ಅದರೊಳಗಿರುವ ಕೊಬ್ಬರಿಯನ್ನೂ ಆಯುಧದಿಂದ ತೆಗೆದುಹಾಕಿದ ಮೇಲೆ ಒಳಗಿರುವ ಸ್ವಚ್ಛವಾದ ನೀರು ಸಮುದ್ರದಲ್ಲಿ ಬೆರೆತು ಅಭೇದಾಕಾರವನ್ನು ಹೊಂದುವಂತೆ ಮಹತ್ತರ ಸಮುತ್ಪನ್ನತ್ವಾದಿ ಅಸಾಧಾರಣ ಲಕ್ಷಣವುಳ್ಳ ಗುರುವೆಂಬಾತನು ತನ್ನ ಅಧೀನದಲ್ಲಿರುವ ದೀಕ್ಷಾಯುಧವಿವೇಕದಿಂದ ತೆಂಗಿನ ಸಿಪ್ಪೆಯಂತಿರುವ ಸ್ಥೂಲದೇಹದಲ್ಲಿರುವ ಕಾರ್ಮಿಕಮಲಪಾಶವನ್ನೂ, ಚಿಪ್ಪಿನಂತಿರುವ ಸೂಕ್ಷ್ಮದೇಹದ ಮಾಯೀಯ ಮಲಪಾಶವನ್ನೂ, ಕಾರಣದೇಹದ ಆಣವಮಲಪಾಶವನ್ನೂ ಛೇದಿಸಿದನಂತರವೇ ಜೀವಾತ್ಮರು, ತಮ್ಮ ತಿರೋಹಿತಗಳಾದ ಸರ್ವಜ್ಞಕಲ್ಯಾಣಗುಣಗಳು ಪ್ರಾದುರ್ಭವಿಸಿ, ಪರಶಿವನೆಂಬ ಮಹಾಸಮುದ್ರದಲ್ಲಿ ಬೆರೆದು ಅಭೇದಾಕಾರವನ್ನು ಪಡೆದು ಅನಂದಾನುಭವ ಮಾಡುವರು. ಇಲ್ಲಿ ಆಯುಧಗಳು ಅಚೇತನಗಳಾದುದರಿಂದ ಛೇದಿಸಲು ಕಾರಣಗಳಾಗುವುವೇ ಹೊರತು ಛೇದನಕರ್ತೃಗಳಾಗಲಾರವು. ಈ ಸಾಧನದಿಂದ ಛೇದಿಸಲು ಇನ್ನೊಬ್ಬ ಚೇತನನು ಕರ್ತೃವಾಗಬೇಕಾಗುವುದು. ಇಲ್ಲಿ ದೀಕ್ಷೆಯು ಪಾಶವನ್ನು ಛೇದಿಸಲು ಕಾರಣವಾಗುವುದರಿಂದ ತಾನಾಗಿಯೇ ಪಾಶಗಳನ್ನು ಛೇದಿಸಲಾರದು. ಇದಕ್ಕೆ ಒಬ್ಬ ಕರ್ತೃವು ಇರಬೇಕಾಗುವುದು. ಅವನನ್ನೇ ಗುರುವೆಂದು ವೇದಾಗಮಗಳು ಅಪ್ಪಣೆಮಾಡಿರುವುವು. ಗುರುವಿನ ಕಟಾಕ್ಷವು ಎಂದು ಶಿಷ್ಯನ ಮೇಲೆ ಬೀಳುವುದೋ ಅಂದಿನಿಂದಲೂ ಶಿಷ್ಯನು ಪ್ರಸನ್ನನಾಗಿ ಶುದ್ಧಾತ್ಮನಾಗುತ್ತ ಹೋಗುವನು. ದೀಕ್ಷಾರೂಪವಾಗಿ ಆಯುಧಪ್ರಯೋಗದಿಂದ ಮಲಪಾಶ ಗ್ರಂಥಿಯು ಬಿಚ್ಚುವುದು.

"[illegible] ಪ್ರಾಪ್ನೋತಿ [illegible] |
[illegible] ಶಿಷ್ಯಸ್ತೇನೈವ [illegible] ||"

ಸ್ಪರ್ಶರಸ ಸಂಬಂಧದಿಂದ ತಾಮ್ರವು ತನ್ನಲ್ಲಿರುವ ಮಾಲಿನ್ಯವನ್ನು ಬಿಟ್ಟು ಸುವರ್ಣಭಾವವನ್ನು ಹೊಂದುವಂತೆ ಗುರುಕೃಪಾಪಾತ್ರನಾದ ಜೀವನು ತನ್ನಲ್ಲಿರುವ ಮಾಲಿನ್ಯವನ್ನು ಬಿಟ್ಟು ಪರಶಿವಸ್ವರೂಪನಾಗುವನು—ಎಂದು ಅದೇ ಅರ್ಥವನ್ನು ಶಿವಾಗಮಗಳು ಉದ್ಘೋಷಿಸುತ್ತಲಿವೆ. ಹೀಗೆ ಗುರುವೆಂಬವನೇ ದೀಕ್ಷಾಪ್ರಯಸಾಧನದಿಂದ ಶಿಷ್ಯನ ತ್ರಿವಿಧಮಲಪಾಶವನ್ನು ಛೇದಿಸಲು ಸಮರ್ಥನಾದುದರಿಂದ ಪ್ರತಿಯೊಬ್ಬ ಆತ್ಮನೂ ದೀಕ್ಷೆಯಿಂದ ಗುರೂಪದೇಶವನ್ನು ಪಡೆಯುತ್ತೆ ಮುಕ್ತಾತ್ಮನಾಗಬೇಂಬುದೇ ಆಚಾರ್ಯಪಾದರ ಆಜ್ಞೆಯು. ಹೀಗಿದ್ದರೂ ಇತ್ತೀಚೆಗೆ ಕಲಿಮಲದೂಷಿತಚಿತ್ತರಾದ ಕೆಲ ಜೀವರು ಗುರುಭಕ್ತಿಶೂನ್ಯರಾಗುತ್ತ ದೀಕ್ಷಾಸಂಸ್ಕಾರವಿಲ್ಲದವರೂ ಪತಿತರಾಗದೆ ಅಸತ್ಯಮತಿಗಳಾಗಿ ಗುರುವೆಲ್ಲಿ? ದೀಕ್ಷೆಯೆಲ್ಲಿ? ಪರಮಸ್ವಾಧ್ಯರಾರು? ಪರಮಸ್ವಾದನೆಂದರೇನು? ಎಂದು ಸ್ವೈರಿಣಿಯರಂತೆ ಸ್ವೇಚ್ಛಾಚಾರಿಗಳಾಗಿ, ನಾಸ್ತಿಕವಾದಗಳೆಂಬ ವಿಷಬೀಜಗಳನ್ನು ಬಿತ್ತುತ್ತಬರುವುದು ಶೋಚನೀಯವಾದ ವಿಷಯವಾಗಿದೆ. ಇಂತಹ, ವಿಷಮತಾವರಣದಿಂದ ಅನಾದಿಕಾಲದಿಂದ ಬಂದ ಕೋಮಲವಾದ ಜ್ಞಾನೋಪದೇಶವಿಧಿಯೆಂಬ ಸ್ವನುಲತೆಯು ತಲ್ಲಣಿಸುತ್ತಿದೆ. ಆದರೆ "ಶ್ರೇಯಾಂಸಿ ಬಹುವಿಘ್ನಾನಿ" ಎನ್ನುವಂತೆ ಆತ್ಮಾಭ್ಯುದಯಸಾಧಕವಾದ ಆಸ್ತಿಕಮಾರ್ಗಕ್ಕೆ ಪ್ರತಿಬಂಧಕ ರೂಪವಾದರೂ ಪರಮಾತ್ಮನ ಕೃಪೆಯಿಂದ ಈ ತೆರನಾದ ವಿಘ್ನಗಳು ಪರ್ವತಕ್ಕೆ ತಗಲಿದ ಮೇಘವುಂಡಲದಂತೆ ಎಂದಾದರೂ ಜರ್ಜರಿತವಾಗದೆ ಇರಲಾರವು. ಪ್ರಸಂಚವು ಉತ್ಪನ್ನವಾದಂದಿನಿಂದ ಮಿಣುಕುಹುಳಗಳಂತೆ ಇಂತಹ ನಾಸ್ತಿಕವಾದಗಳು ತಲೆದೋರಿ ಅಲ್ಲಲ್ಲಿಯೇ ನಾಮಾವಶೇಷಗಳಾಗುತ್ತ ಬಂದಿರುತ್ತವೆ. ಈಶ್ವರಪ್ರಣೀತಗಳಾದ ವೇದಾಗಮಗಳೆಂಬ ದಿವ್ಯಜ್ಯೋತಿಯಿಂದ ಬೆಳಗುತ್ತಿರುವ ಪರಮಾಸ್ತಿಕ್ಯನೆಂಬ ಸೂರ್ಯೋದಯದ ಮುಂದೆ ಇಂತಹ ನಾಸ್ತಿಕಾಂಧಕಾರವು ಪ್ರತಿಭಟಿಸವೆಂದು ಜಗನ್ನಿಯಾಮಕನಾದ ಪರಮೇಶ್ವರನ ಸತ್ಯಸಂಕಲ್ಪವಾಗಿರುತ್ತದೆ. ಆದುದರಿಂದ ಶ್ರುತಿಸಮ್ಮತವಾದ ವೀರಶೈವಮತವೆಂಬ ಅಚ್ಛಸರೋವರದಲ್ಲಿ ಸುಗ್ಗಿರುವ ನಾಸ್ತಿಕರೆಂಬ ಮೊಸಳೆಗಳು ಆ ಪರಮಾತ್ಮನ ಶಕ್ತಿಯಿಂದ ಕ್ಷಣದಲ್ಲಿ ನಷ್ಟಗಳಾಗಿ, ಯಥಾಪ್ರಕಾರ ವೀರಶೈವಸಮಾಜರಂಗದಲ್ಲಿ ಶ್ರುತಿದೇವಿಯು ತಾಂಡವನೃತ್ಯಯನ್ನುವಂತೆ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ರಾಜಧಾನಿಗೆ ತಿರುವಾಂಕೂರು ಮಹಾರಾಜರ ಆಗಮನ

ತಿರುವಾಂಕೂರು ಮಹಾರಾಜರೂ ಅವರ ಮಾತೃಶ್ರೀಯವರಾದ ಮಹಾರಾಣಿ ಸೇತುಪಾರ್ವತೀಬಾಯಿಯವರೂ, ಸಹೋದರರಾದ ಎಳೆಯರಾಜರವರೂ, ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರೂ ಮತ್ತು ಪರಿವಾರದವರೂ 21ನೆಯ ತಾರೀಖು ಮಧ್ಯಾಹ್ನ 1 ಗಂಟೆಗೆ ಸ್ಪೆಷಲ್ ರೈಲಿನಲ್ಲಿ ರಾಜಧಾನಿಗೆ ಆಗಮಿಸಿದರು. ರೈಲ್ವೆಸ್ಟೇಷನ್ನಿನಲ್ಲಿ ನಮ್ಮ ಪ್ರಭುಗಳು ತಿರುವಾಂಕೂರು ಮಹಾರಾಜರಿಗೆ ಆದರಪೂರ್ವಕವಾದ ಸ್ವಾಗತ ನೀಡಿದರು. ಹೌಸಧಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಜೋಂಧೋಳೆಯವರು ಹಾರಗಳನ್ನು ಅರ್ಪಿಸಿದರು. ಅನಂತರ ಅಲ್ಲಿ ನೆರೆದಿದ್ದ ರಾಜಕುಮಾರ್ ಜೇಕರಾಜ ಅರಸ್, ಪ್ರೈವೇಟ್ ಸೆಕ್ರೆಟರಿ, ದಿವಾನರು, ಸಚಿವರುಗಳೇ ಮೊದಲಾದ ಮುಖ್ಯ ಮುಖ್ಯ ಅಧಿಕಾರಿಗಳನ್ನು ಶ್ರೀಮನ್ಮಹಾರಾಜರು ಪರಿಚಯಮಾಡಿಕೊಟ್ಟರು. ತಿರುವಾಂಕೂರು ಮಹಾರಾಜರು ತಮ್ಮ ಅಧಿಕಾರಿಗಳನ್ನು ನಮ್ಮ ಪ್ರಭುಗಳಿಗೆ ಪರಿಚಯಮಾಡಿಕೊಟ್ಟರು. ಬಳಿಕ ಗಾರ್ಡ್ ಆಫ್ ಆನರ್ ಸ್ವೀಕರಿಸಿ ನಾಲ್ಕು ಅಶ್ವಗಳು ಕಟ್ಟಿದ್ದ ಲ್ಯಾಂಡೋವಿನಲ್ಲಿ ತಿರುವಾಂಕೂರು ಮಹಾರಾಜರವರೂ, ನಮ್ಮ ಪ್ರಭುಗಳೂ ಕುಳಿತರು. ಎದುರಿನಲ್ಲಿ ಮಿ|| ಹಂ ಮತ್ತು ಸರ್ದಾರ್ ಮಹಸಗೋಪಾಲ ರಾಜೆ ಅರಸರವರೂ ಕುಳಿತರು. ಮೆರವಣಿಗೆಯು ಅರ್ವಿನ್ ರಸ್ತೆ, ಸಯ್ಯಾಜಿರಾವ್ ರಸ್ತೆ, ಆಲ್ಬರ್ಟ್ ವಿಕ್ಟರ್ ರಸ್ತೆ, ಹಾರ್ಡಿಂಜ್ ಸರ್ಕಲ್ ಮೂಲಕ ಲಲಿತಮಹಲ್ ಭವನವನ್ನು ತಲುಪಿತು. ರಾಜ ಅತಿಥಿಗಳ ಸಂದರ್ಶನಕ್ಕಾಗಿ ಮೈಸೂರು ನಾಗರಿಕರು ದಾರಿಯುದ್ದಕ್ಕೂ ನೆರೆದು ಹರ್ಷಧ್ವನಿಗೈದರು.

ತಿರುವಾಂಕೂರು ಮಹಾರಾಜರವರು ಇಲ್ಲಿ ಇರುವವರೆಗೂ ಸ್ಟ್ಯಾಫ್ ಸೆಕ್ರೆಟರಿ ಶ್ರೀ ಕೆ. ಗುರುನಾಥ್‌ರವರು ಅಲ್ಲಿನ ಎಲ್ಲ ಏರ್ಪಾಡನ್ನೂ ನೋಡಿಕೊಳ್ಳಲು ವಿಶೇಷಾಧಿಕಾರಿಯಾಗಿ ನೇಮಿಸಲ್ಪಟ್ಟಿರುವರು.

ರೂಜ್‌ವೆಲ್ಟರ ಪತ್ನಿಯ ಭಾರತ ಪ್ರವಾಸ

ಅಮೆರಿಕದ ಅಧ್ಯಕ್ಷರ ಪತ್ನಿ ಎಲಿಯನಾರ್ ರೂಜ್‌ವೆಲ್ಟರು ಭಾರತಕ್ಕೆ ಬರಲಿರುವರೆಂದು ಅಮೆರಿಕಾ ಪತ್ರಿಕೆಯೊಂದು ತಿಳಿಸಿದೆ.

ಹಗಲಲ್ಲಿ ಬ್ಯಾಂಕ್ ಲೂಟಿ

ಬೆಳಗಾಂ ಬ್ಯಾಂಕಿನ ೭೫ ಸಾವಿರ ರೂ. ಸಿಪಾಯಿ ರಾಯಿಗೆ ಸಾಗಿಸಲ್ಪಡುತ್ತಿದ್ದಾಗ, ಅದು ಹಗಲಲ್ಲೇ ಲೂಟಿಯಾಗಿದೆ. ದರೋಡೆಗಾರರು ಹಣ ಸಾಗಿಸುತ್ತಿದ್ದ ಬಸ್ಸನ್ನು ನಿಲ್ಲಿಸಿ, ಹಣವನ್ನು ಒಯ್ದರು. ಆ ಸಂದರ್ಭದಲ್ಲಿ ಬೇರೆ ಎರಡು ಬಸ್ಸುಗಳು ಬಂದದ್ದರಿಂದ ಒಬ್ಬ ದರೋಡೆಗಾರನು ಸೆರೆಯಾಗಿದ್ದಾನೆ. ಉಳಿದವರು ಪರಾರಿಯಾಗಿದ್ದಾರೆಂದು ತಿಳಿದುಬರುತ್ತದೆ.

ಭಾರತ ರಕ್ಷಣೆಗೆ ವೆಚ್ಚವಾದ ಹಣ

ಭಾರತವು ಕಳೆದ ೫ ವರ್ಷಗಳಲ್ಲಿ ಎಂದರೆ ೧೯೩೮-೩೯ ರಿಂದ ೧೯೪೩-೪೪ ನೆಯ ಮಾರ್ಚಿ ವರೆಗೆ ರಕ್ಷಣೆ ಮತ್ತು ಸಿದ್ಧತೆಗಾಗಿ ವೆಚ್ಚವಾದ ಹಣ ೭೧೫ ಕೋಟಿ ರೂಪಾಯಿಗಳು. ಇದೇ ಸಂದರ್ಭದಲ್ಲಿ ಈ ಕಾರ್ಯಕ್ಕಾಗಿ ಬ್ರಿಟಿಷ್ ಸರ್ಕಾರವು ಇತ್ತ ಸಹಾಯ ವೆಂದರೆ ಬ್ರಿಟನ ವೆಚ್ಚ ೯೩೬ ಕೋಟಿ ರೂ. ಅಂತೂ ರಕ್ಷಣೆಗಳಿಗಾಗಿ ಒಟ್ಟು ವೆಚ್ಚ ೧೬೫೧ ಕೋಟಿ ರೂ. ಆಗಿದೆಯೆಂದು ಹೇಳಲಾಗಿದೆ.

ಯುದ್ಧವಾರ್ತೆ.

ರೋಂ ಹಿಡಿಯುವುದೇ ಈಗಿನ ಗುರಿ

ಮೆಡಿಟರೇನಿಯನ್ನಿನಲ್ಲಿರುವ ಮಿತ್ರ ಬಲದ ಮುಖ್ಯ ದಂಡನಾಯಕರಾದ ಸರ್ ಹೆನ್ರಿ ಮೈಟ್ಲೆಂಡ್ ವಿಲ್ಸನರು 'ದಕ್ಷಿಣ ಫ್ರಾನ್ಸಿನಲ್ಲಿ ಇಳಿಯುವ ಆಕ್ರಮಣ ಮೊದಲಾದ ಖಂಡಿತ ಬರುವ ವರ್ಷದಲ್ಲಿ ಫ್ರಾನ್ಸಿನ ಸರಕಾರ ತಲೆಕೆಳಗಾಗುವ ಸಂಭವವುಂಟು' ಎಂದರು. ಇಟಲಿಯಲ್ಲಿ ಈಗ ನಡೆಯುತ್ತಿರುವ ಕದನದ ಗುರಿ ರೋಂ ನಗರವನ್ನು ಹಿಡಿಯುವುದೇ ಆಗಿದೆಯೆಂದು ಅವರು ಹೇಳಿದರು. ಮುಂದಿನ ದಾಳ್ವಳಿಯ ವೇಳೆಗೆ ಮಿತ್ರರು ರೋಮ್ ನಗರದಲ್ಲಿರುವರೆಂದು ಭವಿಷ್ಯನುಡಿದಿರುವರು.

ಶತ್ರುಗಳು ಇನ್ನೂ ಬಲಾಢ್ಯರಾಗಿದ್ದಾರೆ

"ಯುದ್ಧವು ಬೇಗನೇ ಮುಗಿದುಹೋಗುವುದೆಂದು ಪ್ರಚಾರ ಮಾಡುತ್ತಿರುವವರು ಯುದ್ಧ ಪ್ರಯತ್ನಗಳಿಗೆ ತುಂಬಾ ಅಪಕಾರ ಮಾಡುತ್ತಿದ್ದಾರೆ. ಜರ್ಮನರು ಇನ್ನೂ ಹತ್ತಿರವಿಲ್ಲ. ನಾವು ಈಗ ತಾನೇ ಜಪಾನೀಯರ ವ್ಯೂಹವನ್ನು ಭೇದಿಸಲು ಪ್ರಯತ್ನಿಸುತ್ತಿದ್ದೇವೆ. ಜಪಾನರು ಹಿಮ್ಮೆಟ್ಟುತ್ತಿರುವುದು ಭೀತಿಯಿಂದಲ್ಲ. ಈಗ ನಮ್ಮ ಮೇಲೆ ಬಲವನ್ನು ಪ್ರಯೋಗಿಸುವುದು ವಿವೇಕವಲ್ಲವೆಂದು ಅವರು ತಿಳಿದಿರುವುದರಿಂದ" ಎಂದು ಜ: ನಾಕ್ಸರು ಎಚ್ಚರಿಕೆ ಕೊಟ್ಟಿದ್ದಾರೆ.

ಬ್ರಿಟಿಷ-ಅಮೆರಿಕಾಗಳ ಸಿದ್ಧಾಂತಭೇದ

ಅಮೆರಿಕಾದಿಂದ ಈಗತಾನೆ ಹಿಂತಿರುಗಿದ ಪತ್ರಿಕಾ ಸಂಪಾದಕರೊಬ್ಬರು "ಬ್ರಿಟಿಷ-ಅಮೆರಿಕಾಗಳು ತಮ್ಮ ತಮ್ಮ ಆರ್ಥಿಕ ಸಿದ್ಧಾಂತಗಳಲ್ಲಿ ದೊಡ್ಡ ಭೇದಭಾವನೆಯನ್ನು ತೋರಿಸುತ್ತಿವೆ—ಎಂಬ ಅಭಿಪ್ರಾಯವು ಪ್ರಚಾರದಲ್ಲಿ ಮೂಡಿದೆ. ಯುದ್ಧದ ನಂತರ ಎರಡು ರಾಷ್ಟ್ರಗಳೂ ಸಹಕರಿಸಬೇಕಾಗಿದೆ. ಅಮೆರಿಕದಲ್ಲಿ ಸಹಕಾರಿತೆಯೂ ಸ್ವಾತಂತ್ರ್ಯವೂ ಅಧಿಕವಾಗಿದ್ದರೆ ಇಂಗ್ಲೆಂಡಿನಲ್ಲಿ ಬಿಗಿಯಾದ ನಿಯಂತ್ರಣವನ್ನು ಅಂಗೀಕರಿಸಲಾಗಿದೆ. ಸ್ವಾತಂತ್ರ್ಯ ಮತ್ತು ನಿಯಂತ್ರಣದ ಬಂಧನಗಳನ್ನು ಸಮತೂಗಿಸಬೇಕಾಗುತ್ತದೆ" ಎಂದು ತಿಳಿಸಿದರು.

ಜರ್ಮನಿಯು ಕಡೆಯವರೆಗೆ ಹೋರಾಡುವುದು

ಅಮೇರಿಕದ ಭೂ ಸೇನೆಗೆ ಸೇರಿದ ವಿಮಾನ ಬಲದ ದಂಡನಾಯಕರಾದ ಜನರಲ್ ಹೆನ್ರಿ ಆರ್ನಾಲ್ಡರವರು, ಇಟಲಿಯಿಂದ ಹೊರಟ ವಿಮಾನಗಳು ಜರ್ಮನಿಯ ಮೇಲೆ ಮುತ್ತಿಗೆ ನಡೆಸಿ ರಷ್ಯಕ್ಕೆ ಹೋಗಿ ಇಳಿಯುವವೆಂದೂ ಜರ್ಮನಿಯು ಕೊನೆಯವರೆಗೆ ಹೋರಾಡುವುದೆಂದೂ ತಿಳಿಸುತ್ತ "ಜರ್ಮನಿಯ ರಕ್ಷಣಾವಿಮಾನಬಲ ಹಿಂದಿಗಿಂತ ಈಗ ದುರ್ಬಲವಾಗಿದೆ. ಜರ್ಮನಿಯು ಹೊಸ ರಹಸ್ಯ ಅಸ್ತ್ರಗಳನ್ನು ತಯಾರಿಸುವುದರಲ್ಲಿ ಸ್ವಲ್ಪವೂ ಅನುಮಾನವಿಲ್ಲ. ಈಗ ಒಂದು ಕಡೆ ಜರ್ಮನ್ ವಿಜ್ಞಾನಿಗಳೂ ಮತ್ತೊಂದು ಕಡೆ ಅಮೇರಿಕನ್ ವಿಜ್ಞಾನಿಗಳೂ ತಮ್ಮ ಪ್ರಯೋಗಾಲಯಗಳಲ್ಲಿ ಕುಳಿತು ಹೆಚ್ಚು ವಿನಾಶಕರವಾದ ಅಸ್ತ್ರಗಳನ್ನು ಕಂಡು ಹಿಡಿಯುವುದರಲ್ಲಿ ನಿರತರಾಗಿದ್ದಾರೆ. ಈ ಆಧುನಿಕ ಕಾಲಕ್ಕೆ ಸರಿ ಅದ್ಭುತವೆಂದು ತೋರುವಂಥ ಅಸ್ತ್ರವೊಂದನ್ನು ಜರ್ಮನರು ಕಂಡು ಹಿಡಿಯಬಹುದೆಂಬ ಭೀತಿ ಮಾತ್ರ ನಮಗೆ ಇದ್ದೇ ಇದೆ." ಎಂದರು.

ಪೋಲೆಂಡಿಗೆ ರಷ್ಯದ ಖಂಡಿತವಾದ ಉತ್ತರ

"ಪೋಲಿಷ್ ಸರಕಾರವು ಹೊರಡಿಸಿದ ಹೇಳಿಕೆಯು ಅಸಂಬದ್ಧ ಮತ್ತು ಅಸತ್ಯಗಳನ್ನು ಒಳಕೊಂಡು ಮುಖ್ಯಮುಖ್ಯವಾದ ಸಮಸ್ಯೆಗಳನ್ನು ಬಹಿಷ್ಕರಿಸಿದೆ. ಕರ್ಜನ್ ಗಡಿಯ ವಿಷಯವನ್ನು ಪೋಲಿಷ್ ಸರಕಾರದ ಹೇಳಿಕೆಯು ಪ್ರಸ್ತಾಪಿಸಿಯೇ ಇಲ್ಲ. ಎಂದರೆ ಅದರ ಅರ್ಥ, ರಷ್ಯಾ ಪೋಲಿಷ್ ಸರಕಾರದ ವಿರುದ್ಧ ಮನೋಭಾವವನ್ನು ಸೂಚಿಸಿದಂತೆ ಸಂಬಂಧತ್ಯಾಗ ಮಾಡಿರುವಾಗ ಲಂಡನ್ನಿನಲ್ಲಿರುವ ಪೋಲಿಷ್ ಸರ್ಕಾರವು ಜನಗಳಲ್ಲಿ ತಪ್ಪು ಅಭಿಪ್ರಾಯವನ್ನು ಹರಡಲು ಈ ರೀತಿ ಹೇಳಿಕೆಯನ್ನು ಮತ್ತೆ ಹೊರಡಿಸಿದೆ. ಪೋಲಿಷ್ ಸರಕಾರವು ಉದ್ದೇಶಪೂರ್ವಕವಾಗಿ ರಷ್ಯಾವಿರುದ್ಧ ಪ್ರಚಾರವನ್ನು ಮಾಡುತ್ತ ಜರ್ಮನ್ ಆಕ್ರಮಣಕಾರರ ಕೈಯಲ್ಲಿ ಬೊಂಬೆಗಳಂತೆ ಕುಣಿಯುತ್ತಿದೆ. ರಷ್ಯಾ ಪೋಲಿಷ್ ಸರ್ಕಾರದ ಸಂಬಂಧತ್ಯಾಗದ ಅನಂತರವೂ ಪೋಲಿಷ್ ಸರಕಾರವು ಕುತ್ಸಿತ ಮನೋಭಾವದಿಂದ ಕೂಡಿರುವುದೆಂದು ಸಿದ್ಧವಾಗಿ ತೋರುತ್ತಿದೆ. ಮೊದಲನೆಯದಾಗಿ, ಪೋಲಿಷ್ ಸರಕಾರವು ರಷ್ಯಾ ಸರಕಾರದ ಜೊತೆ ಮಾತನಾಡಲು ಇಚ್ಛಿಸುವುದಿಲ್ಲವೆಂದು ಆ ಪತ್ರಿಕೆಯು ಸ್ಪಷ್ಟಪಡಿಸಿದೆ. ಹೀಗೆಯೇ ನಾವಿಗ ರಷ್ಯಾ ಅಧಿಕಾರ ಆ ರೀತಿಯ ಪೋಲಿಷ್ ಸರಕಾರದೊಡನೆ ವ್ಯವಹರಿಸುತ್ತದೆ"

ಲೆನಿನ್‌ಗ್ರಾಡ್ ರಂಗದಲ್ಲಿ ಮತ್ತೆ ಹೋರಾಟ

ನೋವ್-ಗೊರೋಡ್ ನಗರವನ್ನು ಜರ್ಮನರು ಸ್ವಾಧೀನಪಡಿಸಬಾರದ ಸುತ್ತ ಬಂದಿದೆ. ಲೆನಿನ್‌ಗ್ರಾಡ್ ರಂಗದಲ್ಲಿ ಕೆಂಪು ಸೇನೆ ಹೊಸ ಮುತ್ತಿಗೆಯನ್ನು ಆರಂಭಿಸಿದೆ. ಜರ್ಮನ್ ರಕ್ಷಣೆಯ ವ್ಯೂಹವನ್ನು ಭೇದಿಸಿ, ಕ್ರಾಸ್ನೊಯೆಸೆಲೋ ಮತ್ತು ಪೀಟರ್ ಹಾಫ್ ಎಂಬ ಎರಡು ಊರುಗಳನ್ನು ಹಿಡಿದಿದೆ. ೬೦೦೦ ಜರ್ಮನರು ಹತರಾದರು! ಅನೇಕ ದಿವಸಗಳಿಂದ ಜರ್ಮನರು ಕಟ್ಟಿದ್ದ ರಕ್ಷಣಾ ವ್ಯೂಹದ ಪ್ರತಿಭಟನೆಯನ್ನು ಮೆಟ್ಟಿ ನಾಲ್ಕು ದಿನ ನಡೆದ ಕದನದಲ್ಲಿ ಓರಾನಿಯನ್‌ಬಾಮ್ ಪ್ರದೇಶದ ಮೇಲೆ ಮುನ್ನುಗ್ಗಿ ನಗರಕ್ಕೆ ಸಮೀಪ ತಲುಪಿದೆ. ಲೆನಿನ್‌ಗ್ರಾಡ್ ರಂಗದಲ್ಲಿ ಆರಂಭವಾಗಿರುವ ಹೊಸ ಕದನವು ಈ ಸಂಗ್ರಾಮದಲ್ಲಿ ಅತಿ ಭಯಂಕರವಾದುದು. ೨೦೦ ಮೈಲಿ ಉದ್ದದ ಈ ರಂಗದಲ್ಲಿ ಎರಡು ಕಡೆಗಳಲ್ಲಿ ರಷ್ಯರು ಮುಂದೆ ಸಾಗುತ್ತಿದ್ದಾರೆ. ಕ್ರೂರ ಹೋರಾಟವು ನಡೆಯುತ್ತಿದೆ. ಲೆನಿನ್‌ಗ್ರಾಡ್ ನಗರವು ಇದೀಗ ರಷ್ಯರ ಗಡಿಯನ್ನು ಸೇರಿದೆ. ಅಲ್ಲಿ ೧೦ ಲಕ್ಷ ಪ್ರಜೆಗಳು ಜೀವಂತರಾಗಿ ಹೋರಾಡುತ್ತ, ಅನುಪಮವಾದ ಶೌರ್ಯದಿಂದ ರಷ್ಯ ನಗರವನ್ನು ೨॥ ವರ್ಷಗಳಿಂದ ರಕ್ಷಿಸಿಕೊಂಡು ಬಂದಿದ್ದಾರೆ. ಕಳೆದ ೧೩ ತಿಂಗಳಲ್ಲಿ ಆ ನಗರಕ್ಕೆ ಭೇಟಿ ಕೊಟ್ಟವರು ಸಮಾಚಾರವನ್ನು ಪ್ರಕಟಿಸುವುದರಿಂದ ಅಲ್ಲಿನ ಜನರ ಕಷ್ಟ ಕೊಂಚ ಕಡಿಮೆಯಾಗಿತ್ತು. ಆದರೂ ನಾಗರಿಕರು ಕರುಣೆ ಕೊಡುವುದೇ ದುಸ್ತರ.

ರಷ್ಯನರ ತೀವ್ರ ಮುಂದೋಟ

ಬಿಳಿಯ ರಷ್ಯದಲ್ಲಿರುವ ಮೋಜಿರ್ ನಗರವನ್ನು ರಷ್ಯನರು ಬಹು ಉತ್ಸಾಹದಿಂದ ವಶಪಡಿಸಿಕೊಂಡರು. ಈ ನಗರದ ಪ್ರಜಾ ಸಂಖ್ಯೆ ೧೧೦೦೦. ಪ್ರಿಪೆಟ್ ಜೌಗು ಪ್ರದೇಶದ ಪೂರ್ವದ ಹೆದ್ದಾರಿಯಂತಿದ್ದ ಈಗ ರಷ್ಯನರಿಗೆ ಪೂರ್ವದ ದಾರಿಯು ತೆರೆದಂತಾಯಿತು. ಮೋಜಿರ್ ಹಿಂದೆ ಪಶ್ಚಿಮಕ್ಕೆ ಕಡೆಗೆ ಹೋಗುವ ರೈಲು ಮಾರ್ಗವು ರಷ್ಯರ ಕೈವಶವಾಯಿತು. ಪಿನ್ಸ್ಕ್ ಅಭಿಮುಖವಾಗಿ ಮುಂದೆ ಸಾಗಲು ರಷ್ಯನರು ಹೊರಟಿದ್ದಾರೆ. ಕರ್ಜ್ ಪ್ರದೇಶದಲ್ಲಿ ಜರ್ಮನ್ ಪ್ರಬಲ ಸೈನ್ಯ ಬಂದಿದ್ದಾಗ ಜರ್ಮನ್ ಸೈನಿಕರು ಕಾಲಿಂಕೋವಿಚಿಯ ವಾಯುವ್ಯದಲ್ಲಿ ಜರ್ಮನರು ತಮ್ಮ ಸೇನೆಯನ್ನು ಮತ್ತೆ ಸಜ್ಜುಗೊಳಿಸಲು ಪ್ರಯತ್ನಿಸಿದರು. ಆದರೆ ರಷ್ಯನರ ತೀವ್ರ ಮುಂದೋಟದಿಂದ ಅದು ಸಾಧ್ಯವಾಗಲಿಲ್ಲ. ಮೋಜಿರ್‌ನಲ್ಲಿ ನೋವೆ ಸಾಹಸಗಳು ನಿರಂತರವಾಗಿ ನಡೆಯುತ್ತಿವೆ. ರಷ್ಯನರು ನಗರವನ್ನು ದಾಟಿ ಪಶ್ಚಿಮಕ್ಕೆ ಬಂದಿದ್ದಾರೆ. ಕಾಲಿಂಕೋವಿಚಿ ನಗರದ ವಾಯುವ್ಯಕ್ಕೆ ೧೫ ಮೈಲಿ ದೂರದಲ್ಲಿರುವ ಇಪಾ ನದಿಯನ್ನು ದಾಟಿದ್ದಾರೆ.

ಭಾರತವೂ ಲಂಡನ್ ಚಳವಳಿಯೂ

ಭಾರತದ ಬಿಗಿಕಟ್ಟನ್ನು ಕೊನೆಗಾಣಿಸಿ ಒಂದು ಒಪ್ಪಂದವನ್ನುಂಟುಮಾಡಿಸುವ ಸಲುವಾಗಿ 'ಇಂಡಿಯಾ ಲೀಗ್'ನವರು ಆಯೋಜಿಸುವ ಬಹಿರಂಗ ಸಭೆಗಳ ಕ್ಷೇತ್ರದಲ್ಲಿ ಭಾರತ ಸಮರವನ್ನು ಆಹ್ವಾನಿಸುವ ಮೂಲಕ ಪ್ರಚಂಡ ಚಳವಳಿ ನಡೆಸುತ್ತಿದ್ದಾರೆ. ಈಗ ನಡೆಯುವ ಚಳವಳಿಯ ಕಾರ್ಯಕ್ರಮ "ರಾಜಕೀಯ ಬಂದಿಗಳ ಬಿಡುಗಡೆ, ಸಂಧಾನದ ಆರಂಭ, ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ಸಾಮ್ರಾಜ್ಯಕ್ಕೆ ನೆರವಾಗುವ ಪ್ರಯತ್ನ ಮತ್ತು ಕ್ಷಾಮ ನಿವಾರಣೆ" ಎಂಬುದಾಗಿ ಲೀಗಿನ ಬಿಷಪ್ ಬ್ರಾಡ್ ಕೌನ್ಸಿಲಿನ ಕಾರ್ಯದರ್ಶಿಗಳು ತಿಳಿಸಿದ್ದಾರೆಂದು ಹೇಳಲಾಗಿದೆ.

ಭಾರತಕ್ಕೆ ಪಂಚವಾರ್ಷಿಕ ಯೋಜನೆ

ಭಾರತದ ಆರ್ಥಿಕ ಪ್ರಗತಿಯನ್ನು ಸಾಧಿಸಿ ಜನ ಜೀವನದಲ್ಲಿ ಕ್ರಾಂತಿಯನ್ನುಂಟುಮಾಡಲು ಪ್ರಮುಖ ವ್ಯಾಪಾರಿಗಳಾದ ೧೫ ಜನ ಆರ್ಥಿಕ ತಜ್ಞರು ಒಂದು ಯೋಜನೆಯನ್ನು ಸಿದ್ಧಗೊಳಿಸಿದ್ದಾರೆ. ಯೋಜನೆಯಲ್ಲಿ ೩ ಪಂಚವಾರ್ಷಿಕಯೋಜನೆಗಳನ್ನು ಅಳವಡಿಸಿದ್ದಾರೆ. ಇದರ ಮೂಲಕ ಭಾರತದ ರಾಷ್ಟ್ರೀಯ ಆದಾಯವು ಮೂರು ಪಟ್ಟು ಹೆಚ್ಚುವುದು. ಜನಸಂಖ್ಯೆ ಹೆಚ್ಚಾಗುವುದರಿಂದ ಒಬ್ಬನ ಆದಾಯವು ಒಂದಕ್ಕೆ ಎರಡರಷ್ಟಾಗುವುದು. ರಾಷ್ಟ್ರೀಯ ಅವಶ್ಯಕತೆಗಳಾದ ಆಹಾರ, ಬಟ್ಟೆ, ಮನೆ, ವಿದ್ಯೆ, ವೈದ್ಯಕೀಯ ಸಹಾಯಗಳಿಗೆ ಪ್ರಾಶಸ್ತ್ಯ ಕೊಡಲಾಗಿದೆ. ಭಾರತವು ಮುಖ್ಯವಾಗಿ ವ್ಯವಸಾಯ ಪ್ರಧಾನ ದೇಶ. ಈಗಿನ ಉತ್ಪನ್ನವನ್ನು ಹೆಚ್ಚಿಸಲು ವ್ಯವಸಾಯದಿಂದ ಶೇಕಡಾ ೧೩೦, ಕೈಗಾರಿಕೆಯಿಂದ ಶೇಕಡಾ ೫೦೦, ಇತರ ಮೂಲಗಳಿಂದ ಶೇಕಡಾ ೨೦೦ ಆದಾಯ ಹೆಚ್ಚಾಗುವುದು. ಬಹು ಕಾಲದಿಂದ ಅವಗಣನೆಗೊಳಗಾದ ವ್ಯವಸಾಯ ಕ್ಷೇತ್ರದಲ್ಲಿ ವಿಶೇಷ ಸುಧಾರಣೆಗಳನ್ನು ಯೋಜಿಸಿರುವುದಲ್ಲದೆ ದೇಶವು ಸ್ವಯಂಪೂರ್ಣವಾಗುವಂತೆ ಮಾಡಲಾಗುವುದು. ಭಾರೀ ಕೈಗಾರಿಕೆಗಳ ಅಭಿವೃದ್ಧಿ ಯೋಜನೆಯಲ್ಲಿ ಅಡಕವಾಗಿದೆ. ಒಟ್ಟು ೧೫ ವರ್ಷದ ವ್ಯಯ ೧೦ ಸಾವಿರ ಕೋಟಿ ಆಗುವುದೆಂದು ಅಂದಾಜು ಮಾಡಲಾಗಿದೆ. ವ್ಯಾಪಾರಿಗಳು ಯೋಜನೆಯನ್ನು ಭಾರತೀಯರ ಮುಂದಿಡುತ್ತ, ಇದು ಜನಪ್ರಿಯವಾಗಬೇಕಾದರೆ ಸರಕಾರಕ್ಕೆ ಮತ್ತು ಪ್ರಜೆಗಳಿಗೆ ಸಂಪೂರ್ಣ ಸಹಕಾರ ಬೇಕಾಗುವುದೆಂದೂ, ಇದು ರಾಷ್ಟ್ರೀಯ ಪ್ರಜಾಪ್ರಭುತ್ವ ಸರಕಾರದಿಂದ ಮಾತ್ರ ಸಾಧ್ಯವೆಂದೂ ಮನದಟ್ಟು ಮಾಡಿದ್ದಾರೆ. ಇದಕ್ಕೆ ಶ್ರೀಗಳಾದ ಬಿರ್ಲಾ, ಪುರುಷೋತ್ತಮದಾಸ ಠಾಕೂರ್‌ದಾಸ್, ಮತ್ತು ಇನ್ನೂ ೧೩ ಜನ ಪ್ರಮುಖರು ಸಹಿ ಹಾಕಿದ್ದಾರೆ.

ವೈಸರಾಯರ ಸಂಚಾರ

ಬಂಗಾಳದಲ್ಲಿ ಆಹಾರವನ್ನು ಹಂಚಲು ವಿಶಾಲವಾದ ವ್ಯವಸ್ಥೆಯನ್ನು ಮಾಡುವುದರಿಂದಲೂ, ಕಲ್ಕತ್ತಾ ಮತ್ತು ಅದರ ಸುತ್ತಮುತ್ತಲ ಊರುಗಳಲ್ಲಿ ರೇಷನಿಂಗ್ ಆಚರಣೆಗೆ ಬರುತ್ತಿರುವುದರಿಂದಲೂ, ಇನ್ನು ಮುಂದೆ ವೈಸರಾಯರಾದ ಲಾರ್ಡ್ ವೇವಲ್ಲರು ಭಾರತದ ರಾಜಕೀಯ ಸಮಸ್ಯೆಗೆ ಗಮನಕೊಡುವರೆಂದು ತಿಳಿಯಬಂದಿದೆ. ಮುಂದೆ ವೈಸರಾಯರು ಹಲವು ಪ್ರಾಂತ್ಯಗಳಲ್ಲಿ ಸಂಚರಿಸುವರೆಂದೂ, ಕಾಂಗ್ರೆಸ್ಸೇತರ ನಾಯಕರುಗಳನ್ನು ಕಂಡು ರಾಜಕೀಯ ಪರಿಸ್ಥಿತಿ ಕುರಿತು ಚರ್ಚೆ ನಡೆಸುವರೆಂದೂ ತಿಳಿಯಬರುತ್ತದೆ. ಕಳೆದ ವಾರದಲ್ಲಿ ಲಾರ್ಡ್ ವೇವಲ್ಲರು ಅಸ್ಸಾಮಿನಲ್ಲಿ ಸರ್ [illegible] ರವರನ್ನು ನೋಡಿದರು. ಈ ವಾರ ಮುಂಬಯಿಯಲ್ಲಿ ಶ್ರೀ ಜಿನ್ನಾ, ಶ್ರೀ ಜಯಕರ್ ಮೊದಲಾದವರನ್ನು ಕಾಣುವರು. ಫೆಬ್ರವರಿ ೧೭ನೆಯ ತಾ|| ಕೇಂದ್ರ ಶಾಸನ ಸಭೆಯಲ್ಲಿ ವೈಸರಾಯರು ಭಾಷಣ ಮಾಡುವಾಗ, ರಾಜಕೀಯ ವಿಚಾರವನ್ನು ಎತ್ತಬಹುದೆಂದು ಹೇಳಲಾಗಿದೆ.

ಮನೋಹರವಾದ [illegible]

[illegible]

ಸಿಗುವ ಸ್ಥಳ — ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಸಿದ್ಧಾಂತಶಿಖಾಮಣಿ

[illegible] ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರ [illegible]

ಸಿಗುವ ಸ್ಥಳ — ಪಂಚಾಚಾರ್ಯಪ್ರಭಾ ಆಫೀಸ್ ಮೈಸೂರು

[illegible] ಮತಗ್ರಂಥಗಳು

[illegible]

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣಗಳು [illegible]

[illegible]

A brief life sketch of Pandit Sri Kashinatha Shastriji [illegible] 4 As

The Philosophical Aspect of Virasaivism [illegible] 8 As

Speeches by Pandit Shri Kashinatha Shastriji [illegible] 12 As

लिंगधारणचन्द्रिका (संस्कृत) ३ [illegible]

वीरशैवरत्न (मराठी) १ [illegible]

महानारायणोपनिषत् (वीरशैवभाष्य संस्कृत) [illegible]

सिद्धान्तशिखामणि (मूल) [illegible] आ

पुरुषसूक्तम् (वीरशैवभाष्योपेतम्) ४ आ

नन्दिकेश्वरकारिका (संस्कृत) [illegible] आ

ಸಿಗುವ ಸ್ಥಳ — ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

[illegible] ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ [illegible] ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M ...   ॥ ಶ್ರೀಜಗದ್ಗುರು ಪಂಚಾಚಾರ್ಯ ಪ್ರಸನ್ನ ...   REGISTERED No. M ...

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ...

ಸ್ಥಾಪಕರು ...

ಸಂಪುಟ ೧೭ | ಪಂಚಾಚಾರ್ಯಪ್ರಭಾ ಸೋಮವಾರ ತಾ|| ... ಜನವರಿ ... [ಸಂಚಿಕೆ ...

ಶ್ರೀ ಗಿರಿಜಾ ... ಪ್ರತಿಷ್ಠಾ ...

ಧಾರವಾಡ ... ಒಂದು ದಿವ್ಯ ... [illegible]

ಸಾಯಿಸಲ್ಲಿ ... ?

ಸಾಯಿಸು ವೃದ್ಧಿಯಿಂದ ... [illegible]

... ವಿಜ್ಞಾನ ... [illegible]

... [illegible]

... ಗಾಂಧಿಯವರ ... ದಿನ

... [illegible]

ರಷ್ಯಾ ... ಒಪ್ಪಂದ

ರಷ್ಯಾ ... [illegible]

ಪಂಚಾಚಾರ್ಯಪ್ರಭಾ.

೧೯೪೪ನೆಯ ಜನವರಿ ತಾ ೧೭ನೇ ಸೋಮವಾರ

ಜಾತಿಸಾಂಕರ್ಯವು ನಾಶಹೇತುವು.

ಶ್ರುತಿಸ್ಮೃತಿಪುರಾಣೋಕ್ತಗಳಾದ ವರ್ಣಾಶ್ರಮ ಧರ್ಮಗಳಲ್ಲಿ ಹೇಳಿರುವಂತೆ ವರ್ಣಾಶ್ರಮಗಳು ಈ ಭಾರತಭೂಮಿಯಲ್ಲಿ ಎಂದು ಹುಟ್ಟಿದುವೆಂದು ಹೇಳಲು ಪೂರ್ವವೇದವಚನಗಳು ಸಾರುತ್ತಿರುವವು. ಅವರವರ ವರ್ಣಾಶ್ರಮ ಪಾಲನೆಯಿಂದಲೇ ಐಹಿಕಸಂಪತ್ತಾಗಲಿ ಆಮುಷ್ಮಿಕಸಂಪತ್ತಾಗಲಿ ದೊರೆಯುತ್ತವೆಯೆಂದು ವೇದಾಗಮಗಳು ಮುಕ್ತಕಂಠದಿಂದ ಸಾರುತ್ತಿವೆ. ಪ್ರಾಚೀನ ಕಾಲದಿಂದ ವ್ಯವಹಾರದಲ್ಲಿಯೂ ಬಂದಿರುತ್ತವೆ. ಇದಕ್ಕೆ ವಿರುದ್ಧವಾಗಿ ವರ್ಣಸಾಂಕರ್ಯವನ್ನು ಮಾಡುವುದರಿಂದ ಕುಲಧರ್ಮಗಳು ನಷ್ಟವಾಗಿ ಅವರು ನರಕಗಾಮಿಗಳಾಗಬೇಕಾಗುವುದು.

> ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ ।
> ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ ॥

ಯಾರು ಕುಲಗಳನ್ನು ಸಂಕರಗೊಳಿಸುವರೋ ಅಂಥ ಕುಲಘಾತಕರಿಗೆ ನರಕವು ತಪ್ಪುವುದಿಲ್ಲ. ಅವರ ಪಿತೃಗಳು ಪಿಂಡೋದಕಕ್ರಿಯಾಶೂನ್ಯರಾಗಿ ಪಿತೃಲೋಕದಿಂದ ಪತಿತರಾಗುವರು ಎಂದು ವರ್ಣಸಾಂಕರ್ಯವನ್ನು ಗೀತೆಯು ಖಂಡಿತವಾಗಿ ಹೇಳುತ್ತದೆ. ಈ ವಿಷಯದಲ್ಲಿ ಉಪನಿಷತ್ತುಗಳು ಶ್ರುತಿಸ್ಮೃತಿಪುರಾಣ ಇತಿಹಾಸಾದಿ ಧರ್ಮಶಾಸ್ತ್ರಗಳೆಲ್ಲ ವರ್ಣಸಾಂಕರ್ಯವನ್ನು ಏಕಕಂಠದಿಂದ ಖಂಡಿಸುತ್ತಿರುವವು. ಆದರೆ ಕೇವಲ ಐಹಿಕಸೌಖ್ಯಸಾಧನವಾದ ರಾಜಕೀಯಾಂದೋಲನದಲ್ಲಿ ನಿರತ ಕೆಲವರಾದ ಮುತ್ಸದ್ದಿಗಳು ದೇಶದ ಉದ್ಧಾರಕ್ಕಾಗಿ ಕೈಕೊಂಡಿರುವ ಸ್ವರಾಜ್ಯಾಂದೋಲನದ ಧ್ಯೇಯವನ್ನು ಸಾಧಿಸಿಕೊಳ್ಳುವದಕ್ಕಾಗಿ ವರ್ಣಧರ್ಮವಿರೋಧಿತವಾದ ವಿಚಾರಗಳನ್ನು ಪ್ರಕಟಿಸುತ್ತಿರುವರೇಸೋ. ಸ್ವತಂತ್ರವಾಗಿ ಜೀವನವನ್ನು ನಡೆಸಲು ಇದೊಂದೇ ಮುಖ್ಯವೆಂದು ತಿಳಿದು ಇವರಿಗೆ ಐಹಿಕಸೌಖ್ಯ ಮುಂದಾಗಿ ಪಾರಮಾರ್ಥಿಕ ಶ್ರೇಯಸ್ಸಿನ ಕಡೆಗೆ ಲಕ್ಷ್ಯವಿಲ್ಲದಂತಾಗಿದೆ. ಇವರು ಆಚರಿಸುವ ಸ್ವಾತಂತ್ರ್ಯವೊಂದೇ ಪರಮಧ್ಯೇಯವಾದ ಇಹಲೋಕದ ಸುಖವಿದ್ದು ಮುಕ್ತಿಯುಂಟೆಂಬುದೊಂದೇ ಶಾಶ್ವತವಾದುದೆಂದು ತಿಳಿದಿರುವರು. ಅಂತಹ ಮುಕ್ತಿಗೆ ಧರ್ಮ, ಅರ್ಥ, ಕಾಮಗಳು ಅಂಗಗಳೆಂದೂ ಶಾಸ್ತ್ರವು ಹೇಳುತ್ತಿರುವುದರಿಂದ ಮಾನವನಿಗೆ ಮುಖ್ಯ ಪುರುಷಾರ್ಥವೆನಿಸಿದ ಮೋಕ್ಷಕ್ಕೆ ಪ್ರತಿಬಂಧಕವಿಲ್ಲದಂತೆ ಯಾವ ಐಹಿಕಸೌಖ್ಯವನ್ನಾದರೂ ಪಡೆಯಬೇಕಲ್ಲದೆ ಕೇವಲ ಸ್ವರಾಜ್ಯಲಾಭಾದಿ ಐಹಿಕಸೌಖ್ಯವೊಂದರಲ್ಲಿಯೇ ವಿಶ್ರಾಂತರಾಗಿ ಮುಕ್ತ್ಯಂಗವಾದ ಕುಲಗಳನ್ನು ಸಾಂಕರ್ಯಗೊಳಿಸುವುದು ಉಚಿತವಾಗಿ ಕಾಣುವದಿಲ್ಲ. ಲೋಕದಲ್ಲಿ ತನ್ನ ಗೃಹಕೃತ್ಯದ ಅಭಿವೃದ್ಧಿಗಾಗಿ ತನ್ನ ಗೃಹದಲ್ಲಿರುವ ಚಿಕ್ಕವರು ದೊಡ್ಡವರೆಲ್ಲರೂ ಏಕಸೂತ್ರದಿಂದ ಕೆಲಸಮಾಡುವುದು ಅವಶ್ಯಕವಾಗಿದ್ದರೂ ಇವನು ಚಿಕ್ಕವನು, ಇವನು ದೊಡ್ಡವನು, ಇವನು ಯಜಮಾನನು, ಇವನು ಭೃತ್ಯನು, ಇಕೆಯು ಪತ್ನಿಯು ಮುಂತಾದ ಪೂಜ್ಯಪೂಜಕ ಭಾವನೆಗಳು ಅವಶ್ಯಕವಾಗಿ ಇರುವಂತೆ, ನಮ್ಮ ಭಾರತವರ್ಷವೆಂಬ ಮಹಾಮಂದಿರದಲ್ಲಿ ವಾಸಮಾಡಿರುವ ಭಾರತೀಯ ಸಹೋದರರೆಲ್ಲರೂ ಏಕಮುಖದಿಂದ ದೇಶೋದ್ಧಾರ ಕಾರ್ಯದಲ್ಲಿ ತೊಡಗುವುದು ಉಚಿತವಾದರೂ ಅನಾದಿಕಾಲದಿಂದ ಬಂದ ಭಾರತದೇಶವೆಂಬ ಮಹಾಮಂದಿರಕ್ಕೆ ತಳಹದಿಯಾಗಿರುವ ಪೂಜ್ಯಪೂಜಕ ಭಾವವನ್ನು ಪ್ರತಿಪಾದಿಸುತ್ತಿರುವ ವರ್ಣಧರ್ಮಗಳನ್ನು ನಾಶಪಡಿಸುವುದರಿಂದ ಈ ಮಹಾಮಂದಿರವು ನಿಲ್ಲುವ ಬಗೆ ಹೇಗೆ? ಮಂದಿರವೇ ನಷ್ಟೋನ್ಮುಖವಾದ ಮೇಲೆ ಸ್ವರಾಜ್ಯವು ಪರರಾಜ್ಯವು ಎಂಬ ಭೇದವೇ ಇಲ್ಲದಂತಾಗಿ ಎಲ್ಲವೂ ಸ್ವರಾಜ್ಯವೇ ಆಗಿಹೋಗುವುದು. ರಾಜಕೀಯದೃಷ್ಟಿಗೂ ಧಾರ್ಮಿಕದೃಷ್ಟಿಗೂ ಮೇರುಸರ್ಷಪದಷ್ಟು ಅಂತರಾಳವಿರುವುದರಿಂದ ಇವೆರಡನ್ನೂ ಏಕತ್ರ ಉಪಯೋಗಿಸುವುದರಿಂದ ವಿಷವಿಶ್ರವಾದ ಅನ್ನದಂತೆ ಅನರ್ಥಕಾರಿಯಾಗಿ ಪರಿಣಮಿಸುವುದೆಂಬುದರಲ್ಲಿ ಸಂಶಯವಿಲ್ಲ. ರಾಜಕೀಯದೃಷ್ಟಿಯು ದೇಶೋದ್ಧಾರಸಾಧಕವು. ಧಾರ್ಮಿಕದೃಷ್ಟಿಯು ಆತ್ಮೋದ್ಧಾರಸಾಧಕವು. ಇವೆರಡು ದೃಷ್ಟಿಗಳನ್ನು ಒಂದರಲ್ಲಿ ಯೋಜಿಸಲು ಬರುವುದಿಲ್ಲ. ಆದರೂ ಕೆಲವರಲ್ಲಿ ಸಂಗತಿ ಏನಿದ್ದರೂ ಕೆಲವರಲ್ಲಿ ಧರ್ಮವಿಧ್ವಂಸನಬುದ್ಧಿ ಇದ್ದು ಈ ವರ್ಣಸಾಂಕರ್ಯವನ್ನು ಅದುದಾರಪ್ರಚಾರಮಾಡಿ ಯಾವ ಭಾಗದಲ್ಲಿ ರಾಜಕೀಯ ಧಾರ್ಮಿಕಗಳೆರಡನ್ನೂ ಒಂದು ಮಾಡಬೇಕೋ ಆ ಭಾಗದಲ್ಲಿ ಒಂದುಮಾಡದೇ ಒಂದುಮಾಡಬೇಕಿಲ್ಲದ ಎಲ್ಲವನ್ನೂ ಒಂದುಗೂಡಿಸುವ ತಲೆಗಳು ಒಂದೇ ಶಾಸ್ತ್ರವೆಂಬಂತೆ ಹೊಸ ಅನರ್ಥವನ್ನು ಸೃಷ್ಟಿಸಬೇಕಾಗಿದೆ. ಈ ವಿಸಾಂಕರ್ಯದ ಬಗೆ ನಮ್ಮ ಭಾರತೀಯರಲ್ಲಿ ಅನೇಕರು ಧರ್ಮವಿರಕ್ತರು. ಕೋಲಾಹಲವನ್ನೆಬ್ಬಿಸುತ್ತಿರುವುದು ಖೇದಾಸ್ಪದ ವಿಷಯವಾಗಿದೆ. ಆದರೆ ಈಗ ಪಂಚಸಹಸ್ರ ವರ್ಷಗಳ ಹಿಂದಿನ ಆಯತ ವರ್ಣಾಂತರ ಎಂದು ಸೂಚಿಸುವ ವರ್ಣಸಾಂಕರ್ಯವನ್ನು ಅಸಿಕ್ನ್ಯಾಕ್ಯ ಧರ್ಮ ಶಾಸ್ತ್ರದ ಸುಸಂಗತ ವಾಕ್ಯವನ್ನು ಸರ್ವ್ಯಾಂಗ ಚಿಂತಿಸಿದರೆ ಇಂದು ಕಾಲಸರಣಿಯಿಂದ ಒದಗಿದ ಸನ್ನಿವೇಶವಾದ ಪಾಶ್ಚಾತ್ಯ ಯುರೋಪ್ ಇಂಥಹ ಆಚಾರಗಳಲ್ಲಿಕತ್ತು ಈ ನಮ್ಮ ಆಂಗ್ಲವಿದ್ಯಾಭ್ಯಾಸವೇ ಇದು ಸೃಷ್ಟಿಗೆ ಕಾರಣವೆಂದು ಹೇಳಬೇಕಾಗಿದೆ. ಇದರಿಂದ ನಮ್ಮ ದೇಶದಲ್ಲಿ ಬಂದಿರುವ ಇಂಗ್ಲೀಷ್ ವಿದ್ಯಾಭ್ಯಾಸದಿಂದ ರೂಪುಗೊಳ್ಳುತ್ತಿರುವ ಪ್ರಾಚೀನಕಾಲದಿಂದ ಭಾರತೀಯರ ಹೃದಯದಲ್ಲಿ ಶಾಸ್ತ್ರೋಕ್ತವಾಗಿರುವ ಧರ್ಮನಿಷ್ಠೆಯ ಬೇರನ್ನು ಒದೆದು ಬಿಸ್ರಗೊಳಿಸುತ್ತಿರುವುದನ್ನು ನೋಡಿದರೆ ಪ್ರತಿಯೊಬ್ಬ ಆಸ್ತಿಕನ ಮನೋಭಾವವು ಚಿಂತೆಯಿಂದ ಕಲುಷಿತವಾಗಿ ಹೋಗುತ್ತಲಿದೆ. ಜನರು ಎಷ್ಟು ಎಷ್ಟು ಆಂಗ್ಲವಿದ್ಯಾವಿಶಾರದರಾಗುತ್ತ ಬರುವರೋ ಅಷ್ಟು ಅಷ್ಟು ಬಾಹ್ಯವಿಷಯಸೌಖ್ಯಾಭಿಲಾಷೆಯೊಂದರಲ್ಲಿಯೇ ಆಸಕ್ತಿಯು ಹೆಚ್ಚಿ ಅತ್ಯವಶ್ಯವಾದ ಆಮುಷ್ಮಿಕ ಸೌಖ್ಯಾಭಿಲಾಷೆಯಲ್ಲಿ ಪ್ರವೃತ್ತಿಯು ಕಡಿಮೆಯಾಗುತ್ತ ತಮ್ಮ ಸ್ವೇಚ್ಛಾವಿಹಾರಕ್ಕೆ ಪ್ರತಿಕೂಲವಾದುದನ್ನೆಲ್ಲಾ ಅಧರ್ಮವೆಂದೂ ಅನುಕೂಲವಾದುದನ್ನೆಲ್ಲಾ ಧರ್ಮವೆಂದೂ ತಿಳಿಯುತ್ತ, ಧರ್ಮದಲ್ಲಿ ಅಧರ್ಮಬುದ್ಧಿಯೂ ಅಧರ್ಮದಲ್ಲಿ ಧರ್ಮಬುದ್ಧಿಯೂ ಬಲಗೊಳ್ಳುತ್ತ ಎಲ್ಲಿನೋಡಿದರೂ ಪುನರ್ವಿವಾಹ, ಪ್ರೌಢಾವಿವಾಹ, ಭಿನ್ನಕುಲವಿವಾಹ, ಅಸ್ಪೃಶ್ಯತಾನಿವಾರಣೆ, ಅಸ್ಪೃಶ್ಯಸಹಭೋಜನ ಮುಂತಾದ ಧರ್ಮವಿರುದ್ಧಕಾರ್ಯಗಳು ನಡೆಯಲವಕಾಶವಾಯಿತು. ಈ ವಿಕಟಪಿಶಾಚಿಯ ನರ್ತನದಲ್ಲಿ ಧರ್ಮಸ್ಥಾಪನೆಗಾಗಿ ಅವಕಾಶಮಾಡಿರುವೆವೆಂದು ಹೇಳಿಕೊಳ್ಳುತ್ತಿರುವ ಪ್ರಖ್ಯಾತಕರ್ಮಠಶ್ರೇಷ್ಠಗಳಾದ ಕೆಲಜನರು ಆ ನರ್ತನಾನುಗುಣವಾಗಿ ಅನುಮೋದಿತವೆಂಬ ಮೃದಂಗವನ್ನು ಬಾರಿಸಲಿಕ್ಕೆ ಹತ್ತಿದರು. ಇದರಿಂದ ಪ್ರಪಂಚದಲ್ಲಿ ಕುಲಧರ್ಮಗಳು ನಾಮಾವಶೇಷವಾಗಿ ನಾಸ್ತಿಕನರ್ತನವು ವಿಶ್ವರೂಪವನ್ನು ಧರಿಸಿ ಎಲ್ಲಿ ನೋಡಿದರೂ ಇದರ ಶಬ್ದವೇ ಕೇಳಿಬರುತ್ತ ಕಿವಿಗಳೆಲ್ಲಾ ಕಿವುಡಾಗಿಹೋಗಿವೆ.

> ದೋಷೈರೇತೈಃ ಕುಲಘ್ನಾನಾಂ ವರ್ಣಸಂಕರಕಾರಕೈಃ ।
> ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ ।
> ಉತ್ಸನ್ನಕುಲಧರ್ಮಾಣಾಂ ಮನುಷ್ಯಾಣಾಂ ಜನಾರ್ದನ ।
> ನರಕೇ ನಿಯತಂ ವಾಸೋ ಭವತೀತ್ಯನುಶುಶ್ರುಮ ॥

ಎಂಬ ಗೀತಾಪ್ರಮಾಣದಂತೆ ಕುಲಘಾತಕಿಗಳ ವರ್ಣಸಂಕರ ಕಾರಕಗಳಾದ ಇಂತಹ ದೋಷಗಳಿಂದ ಜಾತಿಧರ್ಮಗಳೂ ಕುಲಧರ್ಮಗಳೂ ನಾಶವಾಗುತ್ತವೆ. ಕುಲಧರ್ಮಗಳನ್ನು ನಾಶಮಾಡಿಕೊಂಡ ಮಾನವರಿಗೆ ಯಾವಾಗಲೂ ನರಕದಲ್ಲಿ ವಾಸವು ತಪ್ಪುವುದಿಲ್ಲ. ಆದ್ದರಿಂದ ಭಾರತಭೂಮಿಯಲ್ಲಿ ಜನ್ಮವೆತ್ತಿದವರೆಲ್ಲರೂ ಯಾವ ಲೌಕಿಕ ವಿದ್ಯೆಯನ್ನು ಕಲಿತರೂ ಅದರಿಂದ ತಮ್ಮ ಐಹಿಕ ಸೌಖ್ಯವನ್ನು ಪಡೆಯುವುದರಲ್ಲಿ ಆ ಪಾಂಡಿತ್ಯವನ್ನು ಉಪಯೋಗಿಸಬೇಕಲ್ಲದೆ ಆತ್ಮೋದ್ಧಾರಶೂನ್ಯವಾದ ಧರ್ಮಸಾಂಕರ್ಯದಲ್ಲಿ ಪರಿವರ್ತಿಸಬಾರದು. ಶ್ರೀಪರಮೇಶ್ವರನು ಇಂತಹ ಧರ್ಮಸಂಕರಕಾರಿಗಳಿಗೆ ಸದ್ಬುದ್ಧಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಈಗ ಕಾಗದವು ದುರ್ಭರವಾಗುತ್ತಿರುವುದರಿಂದ ಇದನ್ನು ತಪ್ಪಿಸಲು ಇನ್ನುಮೇಲೆ ಆಹ್ವಾನ ಪತ್ರಿಕೆಗಳನ್ನು ೧೦ ಚದರ ಅಂಗುಲ, ಮತ್ತು ವಿಸಿಟಿಂಗ್ ಕಾರ್ಡುಗಳನ್ನು ೬ ಚದರ ಅಂಗುಲಗಳಿಗೆ ಮೀರಿ ಮುದ್ರಿಸಲಾಗದೆಂದು ಇಂಡಿಯಾ ಸರಕಾರದ ಪ್ರಕಟಣೆ ತಿಳಿಸುತ್ತದೆ.

ಯುದ್ಧವಾರ್ತೆ.

ಕೈಗಾರಿಕ ಕ್ಷೇತ್ರಗಳನ್ನು ಬರಿದುಮಾಡಬೇಕೆಂದು ಜಪಾನಿನ ಆಜ್ಞೆ

ಟೋಕಿಯೋವಿನ ೧೫ ಜಿಲ್ಲೆಗಳನ್ನೂ ಕೈಗಾರಿಕಾ ನಗರವಾದ ನಾಗೋಯಾದ ಎಂಟು ಜಿಲ್ಲೆಗಳನ್ನೂ ಬರಿದುಮಾಡಬೇಕೆಂದು ಜಪಾನು ಆಜ್ಞೆಮಾಡಿದೆಯೆಂದು ಜರ್ಮನ ವಾರ್ತಾ ಸಂಸ್ಥೆ ತಿಳಿಸಿದೆ.

ನೀಪರ್ ತಿರುವಿನಲ್ಲಿ ಉಗ್ರ ಸಂಗ್ರಾಮ

ರಷ್ಯನರು ಕ್ರೀಮಿಯಾದಲ್ಲಿ ಕೆರ್ಚ್ ಆಗ್ನೇಯದಲ್ಲಿ ಬಂದಿಳಿದರು. ಇದಕ್ಕೆ ಮುನ್ನ ಕೆರ್ಚ್ ಮೇಲೆ ಉಗ್ರವಾಗಿ ತೋಪ್ ಹಾರಿಸಲಾಯಿತು. ದಕ್ಷಿಣ ರಷ್ಯದ ಕಿರೋವ್ ಗ್ರಾಡ್ ರಂಗದಲ್ಲಿ ಮಾತ್ರ ಕದನ ಕೆರಳಿದೆ. ಪ್ರಿಪೆಟ್ ಮತ್ತು ಬರಿಸಿನಾ ನದಿಗಳ ಮಧ್ಯೆ ಉಗ್ರ ರಕ್ಷಣೆ ಕದನ ಹೋರಾಗಿದೆಯೆಂದು ಜರ್ಮನ್ ವರ್ತಮಾನ ಸಂಸ್ಥೆ ತಿಳಿಸುತ್ತದೆ. ಇಲ್ ಮೆನ್ ಸರೋವರದ ಉತ್ತರದಲ್ಲಿ ರಷ್ಯನರ ಮುತ್ತಿಗೆ ಮುಂದುವರಿಯುತ್ತಿದೆ.

ಇಟಾಲಿಯನರ ಆಸೆ

ನೆಟ್ಟನೋದಲ್ಲಿ ಮಿತ್ರಸೇನೆಗಳು ಇಳಿದುದರಿಂದ ರೋಂ ಪ್ರಜೆಗಳ ಮೇಲೆ ತುಂಬಾ ಪರಿಣಾಮವುಂಟಾಗಿದೆ. ಜನರು ಬೀದಿಗಳಲ್ಲಿ ಸಂತೋಷದಿಂದ ಈ ವಿಚಾರವಾಗಿ ಮಾತನಾಡುತ್ತಿದ್ದಾರೆ. ಬೇಗನೆ ರೋಂ ನಗರವು ಮಿತ್ರರ ವಶವಾದೀತೆಂದೂ, ಇಟಲಿ ಕದನ ಕೊನೆಗಂಡೀತೆಂದೂ ಅವರು ನಂಬಿದ್ದಾರೆ.

ರೋಂಗೆ ೨೫ ಮೈಲಿ ದೂರದಲ್ಲಿ ಮಿತ್ರಯೋಧರಿದ್ದಾರೆ

ಐದನೆ ಸೇನೆಗೆ ಸೇರಿದ ಅಮೆರಿಕ ಯೋಧರು ಇಟಲಿಯಲ್ಲಿ ಮಾಂಟೆ ಸರಾಕ್ರೋಲಿ ಎಂಬುದನ್ನು ಹಿಡಿದಿದ್ದಾರೆ. ಕಾಸಿನೋ ಉತ್ತರದಲ್ಲಿ ಅಮೇರಿಕನರು ರಾಪಿಡೋ ನದಿಯನ್ನು ದಾಟಿದ್ದಾರೆ. ಲಿಟ್ಟೋರಿಯಾ ಮತ್ತು ಏಪ್ರಿಲಿಯಾಗಳ ಆಕ್ರಮಣಕ್ಕಾಗಿ ಉಗ್ರ ಹೋರಾಟವು ನಡೆಯುತ್ತಿದೆ. ಮಿತ್ರಯೋಧರ ಮುಂಗಾವಲು ಪಡೆ ರೋಂ ನಗರದಿಂದ ೨೫ ಮೈಲಿ ದೂರದಲ್ಲಿದೆ. ಒಂದು ಗಡೆಯಿಂದ ತನಗೆ ವಿಪತ್ತು ಸಂಭವಿಸುತ್ತಿರುವುದನ್ನು ಕಂಡು ಮಾ॥ ಕೆಸೆಲ್ ರಿಂಗರು ದಕ್ಷಿಣದಲ್ಲಿರುವ ತನ್ನ ಸೇನೆಯನ್ನು ಹಿಂದಕ್ಕೆ ಕರೆಯುವ ಸನ್ನಾಹದಲ್ಲಿರುವರೆಂದು ಹೇಳಲಾಗಿದೆ.

ರೋಂ ನಗರದಲ್ಲಿ ಕರ್ಫ್ಯೂ ಆಜ್ಞೆ

ರೋಂ ನಗರದಲ್ಲಿ ದೌರ್ಜನ್ಯ ಕೃತ್ಯಗಳು ನಡೆದ ಕಾರಣ ಬೆಳಿಗ್ಗೆ ೬ ಗಂಟೆಯಿಂದ ಸಾಯಂಕಾಲ ೬ ಗಂಟೆವರಗೆ ನಗರದಲ್ಲಿ ಕರ್ಫ್ಯೂ ಆರ್ಡರನ್ನು ಜಾರಿ ಮಾಡಲಾಗಿದೆ ಎಂದು ಜರ್ಮನ್ ಅಧಿಕಾರಕ್ಕೆ ಒಳಪಟ್ಟ ರೋಂ ರೇಡಿಯೋವು ತಿಳಿಸಿದೆ.

ಭೀಕರ ಕದನದ ನಿರೀಕ್ಷೆ

ಮೆಡಿಟರೇನಿಯನ್ ಕ್ಷೇತ್ರದಲ್ಲಿ ಮಿತ್ರಸೇನೆಗಳ ದಂಡನಾಯಕರಾದ ಸರ್ ಹೆನ್ರಿ ಮೈಟ್ ಲ್ಯಾಂಡ್ ರವರು ಇಟಲಿಗೆ ಒಂದಿಬಾರಿ ಹೊಸದಾಗಿ ಮಿತ್ರಸೇನೆಗಳು ಬಂದಿಳಿದ ಸ್ಥಳದಲ್ಲಿ ಬೇಗನೆ ಭಯಂಕರ ಕದನ ನಡೆದೀತೆಂದು ಅವರು ತಿಳಿಸುತ್ತ "ಇದುವರೆಗೆ ಎಲ್ಲ ಚೆನ್ನಾಗಿದೆ. ಹವೆಯೊಂದು ಚೆನ್ನಾಗಿದ್ದರೆ ಮುಂದೆ ಸಂಭವಿಸುವ ಕದನದಲ್ಲಿ ನಮ್ಮ ಭೂ, ಜಲ, ವಿಮಾನದಳ ಶತ್ರುವಿನದಕ್ಕಿಂತ ಮುಂದೆಂಬುದನ್ನು ಚೆನ್ನಾಗಿ ತೋರಿಸುವುದು. ಅಂತೂ ಮುಂದಿನ ಹಲವು ದಿನಗಳಲ್ಲಿ ನಡೆಯಲಿರುವ ಘಟನೆಗಳು ತುಂಬಾ ಮುಖ್ಯವಾದ್ದು" ಎಂದರು.

ರಷ್ಯನರ ಮುಂದೋಟ

೧,೦೦,೦೦೦ ರಿಂದ ೧,೩೦,೦೦೦ ಯೋಧರವರೆಗಿರುವ ಜರ್ಮನ್ ಸೇನೆ ಲೆನಿನ್‌ಗ್ರಾಡ್ ಬಳಿ ಎರಡು ಭಾಗವಾಗಿ ಕತ್ತರಿಸಲ್ಪಟ್ಟು ಸುತ್ತುವರಿಯಲ್ಪಡುವ ಸಂಭವವಿದೆ. ಶತ್ರುಸೇನೆಯ ಹಿಂದೆ ಎರಡು ರಷ್ಯನ್ ಪಡೆಗಳು ಸಂಧಿಸುವುದರಲ್ಲಿವೆ. ಪೂರ್ವಭಾಗದಲ್ಲಿ ನವ್‌ಗೊರೋಡಿನಿಂದ ಲೆನಿನ್‌ಗ್ರಾಡಿನವರೆಗಿರುವ ರಸ್ತೆ ಮಾರ್ಗದಿಂದ ಜರ್ಮನರನ್ನು ಓಡಿಸಿ, ಮಾಸ್ಕೋ ಮಾರ್ಗದ ಮುಖ್ಯ ರೈಲು ಸಂಬಂಧವನ್ನು ಪುನಃ ಕಲ್ಪಿಸಿದ್ದಾರೆ. ಕ್ರಾಸ್ನೋಯೆ ಸೆಲೋ ಕ್ಷೇತ್ರದಲ್ಲಿ ೪೦ ಕ್ಕಿಂತ ಹೆಚ್ಚು ಊರುಗಳು ರಷ್ಯನರ ವಶವಾದವು. ಲೆನಿನ್‌ಗ್ರಾಡ್ ರಂಗದಲ್ಲಿ ಜರ್ಮನ್ ಸೇನೆ ಹಿಮ್ಮೆಟ್ಟಿರುವುದೆಂದು ಜರ್ಮನರೇ ಒಪ್ಪಿಕೊಂಡಿದ್ದಾರೆ.

ರಷ್ಯವು ಅಮೆರಿಕದ ಸಲಹೆಯನ್ನು ತಿರಸ್ಕರಿಸಿತು

ಪೋಲೆಂಡ್ ರಷ್ಯಾ ಜಗಳ ಪರಿಹಾರಕ್ಕಾಗಿ ತಾನು ಸಂಧಾನ ನಡೆಸಲು ಸಿದ್ಧನಿರುವುದಾಗಿ ಅಮೆರಿಕವು ಮಧ್ಯಸ್ಥಗಾರಿಕೆ ವಹಿಸಿ ಸಂಧಾನ ನಡೆಸಲು ಮುಂದೆ ಬಂದುದನ್ನು ರಷ್ಯವು ಮೆಚ್ಚುವುದಾದರೂ, ಅಮೆರಿಕದ ಮಧ್ಯಸ್ಥಗಾರಿಕೆಯಿಂದ ಪ್ರಯೋಜನ ಹೊಂದುವಷ್ಟುಮಟ್ಟಿಗೆ ರಷ್ಯಾ-ಪೋಲೆಂಡು ಸಂಬಂಧವು ಇನ್ನೂ ಹಾಳಾಗಿ ಹೋಗಿಲ್ಲವೆಂದು ಉತ್ತರ ಕೊಡಲಾಗಿದೆ.

ಬರ್ಮಿಂಗ್‌ಹಾಂ ಸಭೆಯಲ್ಲಿ ಬ್ರಿಟಿಷ್ ವರ್ತನೆಯ ಟೀಕೆ

ಇಂಡಿಯಾ ಲೀಗಿನ ಮಿಸ್ ಬ್ಲ್ಯಾಂಡ್ ಕೌನ್ಸಿಲ್ ವರದಿ. ಭಾರತ ಕುರಿತು ಏರ್ಪಡಿಸಿದ್ದ ಚಿತ್ರಾವಳಿ ಪ್ರದರ್ಶನವು ಬರ್ಮಿಂಗ್‌ಹಾಮಿನಲ್ಲಿ ನಡೆಯಿತು. ರಾಜಕೀಯ ಬಂದಿಗಳನ್ನು ಬಿಡಬೇಕು, ಭಾರತೀಯರೊಂದಿಗೆ ಸಂಧಾನವಾರಂಭಿಸಬೇಕು, ಭಾರತದಲ್ಲಿ ಹರಡಿರುವ ಕ್ಷಾಮವನ್ನು ನೀಗಲು ಭಾರತೀಯರಿಗೆ ಸಹಕಾರ ನೀಡುವಂತೆ ಪ್ರಯತ್ನ ಮಾಡಬೇಕು—ಇವೇ ಸಭೆಯ ಮುಖ್ಯ ಉದ್ದೇಶ. ಲಾರ್ಡ್ ಸ್ಟೇಬೊಲ್ಗಿರವರು ಅಧ್ಯಕ್ಷರಾಗಿದ್ದರು. ಅವರು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾ ಯುದ್ಧ ಮುಗಿದ ಮೇಲೆ ಇಂಗ್ಲೆಂಡಿನಲ್ಲಿ ಸರ್ವರಿಗೂ ಉದ್ಯೋಗ ದೊರಕಬೇಕಾಗಿದ್ದರೆ ಭಾರತದ ಜೀವನ ಶಕ್ತಿಯನ್ನು ವೃದ್ಧಿಪಡಿಸಬೇಕು. ಭಾರತವು ಬ್ರಿಟನ್ನಿನ ಹಿಡಿತದಲ್ಲಿರುವವರೆಗೆ ಈ ಕಾರ್ಯವಾಗದು. ಭಾರತೀಯರೇ ಆ ಕೆಲಸ ಮಾಡಬೇಕು. ಈಗಿನ ಸ್ಥಿತಿ ಬ್ರಿಟಿಷ್ ಸಂಪ್ರದಾಯಕ್ಕೆ, ನಮ್ಮ ಆಶಯಕ್ಕೆ ವಿರುದ್ಧವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಭಾರತವು ನಮ್ಮ ನಾಜಿಯತ್ವವನ್ನು ಧ್ವಂಸಮಾಡುವ ಯಾವ ಪವಿತ್ರ ಉದ್ದೇಶಕ್ಕಾಗಿ ಅನೇಕ ಜನ ಆತ್ಮಾರ್ಪಣೆ ಮಾಡಿದರೋ ಆ ಉದ್ದೇಶವನ್ನು ಈಡೇರಿಸಿ ಕೊಡುವ ಅಪೂರ್ವ ಅವಕಾಶ ಬ್ರಿಟನ್ನಿಗಿತ್ತು. ವಿಪ್ಲವದಲ್ಲಿ ಗೌರವಕ್ಕೆ ಪಾತ್ರವಾಗಿರುವುದೆಂದರೆ ಬ್ರಿಟನ್ನಿನ ನ್ಯಾಯ ಮತ್ತು ನೌಕಾಬಲ. ಭಾರತದ ನ್ಯಾಯಕ್ಕೆ ನಾವು ಬೆಲೆ ಕೊಟ್ಟಿವೇನು? ಭಾರತೀಯ ಸ್ತ್ರೀಯರಿಗೆ ಕಲ್ಲಿದ್ದಲು ಗಣಿಯಲ್ಲಿ ಕೆಲಸ ಮಾಡಲು ಅವಕಾಶ ಕೊಟ್ಟುದು ಅಂತರ ರಾಷ್ಟ್ರೀಯ ನಿಯಮಕ್ಕೆ ವಿರುದ್ಧವಾಗಿದೆಯೆಂದು ನಂಬುತ್ತೇನೆ. ಇದರಿಂದ ನಿಜವಾಗಿ ಸಂಗ್ರಾಮ ಪ್ರಯತ್ನಕ್ಕೆ ಸಹಾಯವಾಗುವುದೇ? ಈ ದೇಶದಲ್ಲಿರುವಂತೆ ಭಾರತದಲ್ಲಿಯೂ ಒಂದು ಸಂಗ್ರಾಮ ಮಂತ್ರಿಮಂಡಲ ಸ್ಥಾಪನೆಯಾಗಬೇಕು. ಭಾರತದ ಅವಶ್ಯಕತೆಗಳನ್ನೆಲ್ಲ ಪೂರೈಸುವ ಜವಾಬ್ದಾರಿಯನ್ನು ಭಾರತದ ನಾಯಕರಿಗೇ ವಹಿಸಿ, ಅವರ ಕೈಗೆ ಇದಿರೇ ಇಲ್ಲದಂತೆ ಮಾಡಬೇಕು' ಎಂದು ತಿಳಿಸಿದರು.

ಸ್ಪೈಯಿನ್‌ನಲ್ಲಿ ಪಿತೂರಿ

ಸ್ಪೈಯಿನ್‌ನಿನ ಎಲ್ಲ ಪಕ್ಷಗಳೂ ಈಗ ರಾಷ್ಟ್ರೀಯ ಮಂಡಲಿಯೊಂದನ್ನು ಸ್ಥಾಪಿಸಿ ಫೆಲಾಂಜಿಸ್ಟರನ್ನು ಎದುರಿಸಲು ಎಲ್ಲರ ಸಹಕಾರ ಕೋರಿವೆ. ಅವರು ಸ್ಪೈಯಿನ್ ಪ್ರಜೆಗಳಿಗಾಗಿ ಘೋಷಣೆಯೊಂದನ್ನು ಹೊರಡಿಸಿ ಅದರಲ್ಲಿ "ಫ್ರಾಂಕೋ ಅಧಿಕಾರದಲ್ಲಿರುವವರೆಗೆ ಸ್ಪೈಯಿನ್‌ಗೆ ನಾಶ ಖಂಡಿತ. ಫ್ರಾಂಕೋ ಪತನವಾದಂದು ಸ್ಪೈಯಿನ್ನಿನ ಮುಕ್ತಿಯ ದಿನ ಉದಯಿಸುವುದು. ಈ ಸಂದರ್ಭದಲ್ಲಿ ರಿಪಬ್ಲಿಕನರು, ಸೋಷಿಯಲಿಸ್ಟರು ಕಮ್ಯೂನಿಸ್ಟರು, ಫ್ರೀ ಡೆಮೊಕ್ರಾಟಿಕ್ ಪ್ರತಿನಿಧಿಗಳೇ ಮುಂತಾದವರೆಲ್ಲ ಸ್ಪೈಯಿನ್ ಜನಾಂಗವನ್ನೆಲ್ಲ ಸಧ ಸೇರಿ ಸ್ಪೈಯಿನ್ ನನ್ನು ಅರಾಜಕತೆಯಿಂದ ಬಿಡಿಸಿಯೂದ ಮತ್ತು ನಾಶದಿಂದ ಕಾಪಾಡಬೇಕೆಂದು ಸಂಕಲ್ಪಮಾಡಿದ್ದಾರೆ. ನಾವು ಮಹಾ ಕದನ ನಡೆಸುವುದರಲ್ಲಿದ್ದೇವೆ. ಸ್ಪೈಯಿನ್ ನಿವಾಸಿಗಳ ಈ ನಾನಾ ರಾಜಕೀಯ ಪಕ್ಷಗಳು ಬಿಡಿ ಬಿಡಿಯಾಗಿ ಏನು ಮಾಡುವುದಿಲ್ಲ. ಜನಾಂಗವಲ್ಲ ಒಂದಾಗಿ ರಣ ರಂಗಕ್ಕೆ ಇಳಿಯಲಿ. ಸ್ಪೈಯಿನ್ನಿನ ಪ್ರತಿಯೊಬ್ಬ ಪ್ರಜೆಯ ಸ್ವಾತಂತ್ರ್ಯವನ್ನು ಮತ್ತು ಫೆಲಾಂಜಿಸ್ಟರ ಪತನಕ್ಕೆ ನ್ಯಾಯ ದೊರಕಬೇಕು. ಮುಂದೆ ಹೇಳುವ ಉದ್ದೇಶ ಸಾಧನೆಗಾಗಿ ರಾಷ್ಟ್ರೀಯ ಸರಕಾರದ ಸ್ಥಾಪನೆಯಾಗಬೇಕು. ಸ್ಪೈಯಿನ್ನನ್ನು ಕಟ್ಟಿಹಾಕಿರುವ ಹಿಟ್ಲರನ ಬಂಧನವನ್ನು ಕಡಿದುಹಾಕಬೇಕು. (೨) ಸರಕಾರದಿಂದ ನ್ಯಾಯಬದ್ಧ ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕು. (೩) ಚುನಾವಣೆ ನಡೆಸುವುದು. ಭಾಷಣ ಸ್ವಾತಂತ್ರ್ಯ, ಪತ್ರಿಕಾಸ್ವಾತಂತ್ರ್ಯಗಳನ್ನು ನೀಡುವುದು. (೪) ಅಪ್ಪಣೆ ಪ್ರಕಾರವೇ ಬದಲಾವಣೆಗಳನ್ನು ನಡೆಸುವುದು. ಈ ಧ್ಯೇಯಗಳ ಸಾಧನೆಗಾಗಿ ಮುಖ್ಯರುಗಳು ಹಿಟ್ಲರನಿಗಾಗಿ ಫ್ರಾಂಕೋ ಕಳುಹಿಸಿದ ನಾನಾ ಸೈನ್ಯಗಳನ್ನು ಹಿಂದಕ್ಕೆ ಕರೆಸುವುದು. ಫೆಲಾಂಜಿಸ್ಟರನ್ನು, ನಾಜಿಗಳನ್ನು ನಾಶಮಾಡುವುದು. ಈ ಕಾರ್ಯಗಳನ್ನು ಕೈಕೊಳ್ಳಬೇಕು. ಸ್ಪೈಯಿನ್ನಿನ ಸಿಂಹಾಸನಕ್ಕೆ ತಾನು ಉತ್ತರಾಧಿಕಾರಿಯೆಂದು ವಾದಿಸುತ್ತಿರುವ ಡಾನ್ ಜಾನ್‌ರವರು ಫೆಲಾಂಜಿಸ್ಟರು ಉಳಿದರೆ ತಾವು ಸಿಂಹಾಸನವೇರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದಂತೆ. ಜರ್ಮನಿಗೆ ಜಯವಾಗುವುದೆಂಬ ನಂಬಿಕೆ ಫೆಲಾಂಜಿಸ್ಟರಿಗಿನ್ನೂ ಇದ್ದರೂ ಇದೆ. ರಾಜಪ್ರಭುತ್ವವಾದಿಗಳಾದರೋ ಯುದ್ಧಾನಂತರ ಮಿತ್ರ ದೇಶಗಳ ಮುಂದೆ ತಮ್ಮ ವಾದವನ್ನಿಟ್ಟು ಗೆಲ್ಲಬಹುದೆಂದು ಎಣಿಸಿದ್ದಾರೆ. ಆದುದರಿಂದ ಇವರು ರಾಜಪ್ರಭುತ್ವವಾದಿಗಳಿಗೆ ಈಗ ವಿರೋಧಿಗಳಾದ ಫೆಲಾಂಜಿಸ್ಟ್ ಪಕ್ಷ ರದ್ದಾದರೆ ಪ್ರಜಾಪ್ರಭುತ್ವ ಬರುವುದು ಖಂಡಿತ. ಫೆಲಾಂಜಿಸ್ಟರು ಈಗ ರಾಜಪ್ರಭುತ್ವವಾದಿಗಳ ಸಿಂಹಾಸನ ದೊರಕುವ ಆಸೆಯೇ ಇಲ್ಲ. ಇವರ ಪಕ್ಷ ಮತ್ತು ನಾಜಿಯವರ ಸಾಮ್ರಾಜ್ಯವನ್ನು ಕಂಡು ಬೆದರಿಸಲು ಫ್ರಾಂಕೋ ಯತ್ನಿಸುತ್ತಿದ್ದಾನೆ. ಅವನಿಗೆ ಜಯವಾಗುವುದು ಅನುಮಾನ ಎಂದು ತಿಳಿಸಿದೆ.

ಶತ್ರು ವ್ಯೂಹದ ಹಿಂದುಗಡೆ ಮಿತ್ರ ಸೇನೆ ಬಂದಿಳಿಯಿತು

ಜ|| ಕ್ಲೇರ್ಕನ ಐದನೇ ಸೇನೆಗೆ ಸೇರಿದ ಬ್ರಿಟಿಷ್ ಮತ್ತು ಅಮೆರಿಕನ್ ಪಡೆಗಳು ೨೨ ನೆಯ ತಾರೀಖು ಶನಿವಾರ ಬೆಳಗಿನ ಜಾವ ಇಟಲಿಯ ಪಶ್ಚಿಮ ತೀರದಲ್ಲಿ ಈಗಿನ ಶತ್ರು ವ್ಯೂಹದ ಹಿಂದೆ ಬಹು ದೂರದಲ್ಲಿ ಬಂದಿಳಿದರು. ರಾಪಿಡೋ ನದಿಯನ್ನು ದಾಟ ಬಂದಿರುವ ಬ್ರಿಟಿಷ್ ಅಮೆರಿಕನ್ ಸೈನಿಕರು ದಾಟಿದರು. ಶತ್ರು ಸೈನ್ಯಗಳ ಪ್ರತಿಭಟನೆ ಜೋರಾಗಿತ್ತು. ರೋಂ ದಕ್ಷಿಣದಲ್ಲಿ ಬಂದಿಳಿದ ಮಿತ್ರ ಸೇನೆ ಅನರ್ಥ ಒಂದು ದೇಶಕ್ಕೆ ಮಾಡಿದ ಮೊದಲ ಗುರಿಯು ಕಡೆಗೆ ಮಿತ್ರ ಪಡೆ ಸಾಗುತ್ತಿದೆ. ಇದುವರೆಗೆ ಅಲ್ಲಲ್ಲಿ ಹಲವು ಜರ್ಮನ್ ಯೋಧರ ಗುಂಪುಗಳನ್ನು ಮಾತ್ರ ಎದುರಿಸಬೇಕಾಯಿತು. ಅವುಗಳನ್ನು ಮಿತ್ರ ಯೋಧರು ಸುಟ್ಟು ಹಾಕಿದರು. ಇತ್ತೀಚಿನ ವರ್ತಮಾನದ ಪ್ರಕಾರ, ಅಪಾರ ಸಂಖ್ಯೆಯ ಮಿತ್ರ ಯೋಧರು ರೋಂ ದಕ್ಷಿಣದಲ್ಲಿ ನೆಲಸೇರಿ, ತಾವು ಇಳಿದ ಸ್ಥಾನವನ್ನು ಭದ್ರಪಡಿಸಿಕೊಂಡು, ಕೆಲವು ಕಡೆ ಒಳಗೆ ಹಲವು ಮೈಲಿ ಒಳಹೊಕ್ಕಿದ್ದಾರೆ. ಐದನೇ ಸೇನೆಯ ಮುಂದೋಟವನ್ನು ತಡೆಯಲು ಜರ್ಮನರು ಈಗ ಸರ್ವ ಶಕ್ತಿಯನ್ನು ಉಪಯೋಗಿಸುತ್ತಿದ್ದಾರೆ. ಆದರೂ ಸಾಧ್ಯವಾಗಿಲ್ಲ. ರಾಪಿಡೋ ನದಿಯನ್ನು ದಾಟಿರುವ ಅಮೆರಿಕನರು ತಮ್ಮ ಸ್ಥಾನವನ್ನು ವಿಸ್ತರಿಸಿಕೊಳ್ಳುತ್ತಿದ್ದಾರೆ. ಇಟಲಿ ಪಶ್ಚಿಮ ತೀರದಲ್ಲ ನೆಟುನೋ ನಗರಕ್ಕೂ ಮತ್ತು ಟೈಬರ್ ನದಿಯ ಮುಖಕ್ಕೂ ನಡುವೆ ಮಿತ್ರ ಸೇನೆಗಳು ಬಂದಿಳಿದಿವೆಯೆಂದು ಜರ್ಮನ್ ವಾರ್ತಾ ಸಂಸ್ಥೆ ಒಪ್ಪಿಕೊಂಡಿದೆ. ನೆಟ್ಟುನೋ ಬಂದರನ್ನು ಮಿತ್ರ ಸೈನಿಕರು ಆಕ್ರಮಿಸಿದ್ದಾರೆ. ನೆಟ್ಟುನೋ ನಗರ ಸಮುದ್ರ ತೀರದಲ್ಲಿದ್ದು ರೋಂ ದಕ್ಷಿಣಕ್ಕೆ ೩೦ ಮೈಲಿ ದೂರದಲ್ಲಿದೆ. ಗ್ಯಾರಿಗ್ಲಿಯಾನೋ ನದಿ ಉತ್ತರದಲ್ಲಿರುವ ಕಡೆ ಮಿತ್ರ ಸೇನೆಗಳು ಸ್ಥಾಪಿತವಾದ ವ್ಯೂಹದಿಂದ ಸುಮಾರು ೬೦ ಮೈಲಿ ದೂರದಲ್ಲಿದೆ. ರೋಂ ಪ್ರದೇಶದಲ್ಲಿರುವ ಎಲ್ಲ ವಿಮಾನ ನಿಲ್ದಾಣಗಳನ್ನೂ ಬಂದು ದಾರಿಗಳೂ ಶತ್ರುಗಳ ಹತೋಟಿಯಿಂದ ತಪ್ಪಿಸಲಾಗಿದೆ ಎಂದು ವರದಿ ಬಂದಿದೆ.

ಯೂರೋಪು ಸಂಗ್ರಾಮವು ಬೇಗನೆ ಮುಗಿಯುವುದೇ ?

ಸಂಗ್ರಾಮವು ಬೇಗನೆ ಕೊನೆಗಾಣುವುದೋ ಎಂಬಾ ಇನ್ನೆಷ್ಟು ಕಾಲ ಎಳೆಯುವುದೋ ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ ಈ ವರ್ಷದೊಳಗಾಗಿ ಯೂರೋಪಿನ ಕದನವು ನಿಲ್ಲುವುದೆಂದು ೨೦ನೇ ಜನವರಿ ನಡೆದ ಪಾರ್ಲಿಮೆಂಟಿನ ಕ್ಷೇತ್ರಗಳಲ್ಲಿ ನಡೆದ ಈ ಭಾಷಣದಲ್ಲಿ ಸೂಚನೆಗಳು ಕಾಣಬರುತ್ತವೆ. ಈ ವಾರದಲ್ಲಿ ಬ್ರಿಟನಿನ ಪಾರ್ಲಿಮೆಂಟ್ ಸಭೆಯು ಒಂದು ವಾರದ ಮಟ್ಟಿಗೆ ಮುಂದಿರುವುದು. ಯುದ್ಧಾನಂತರದ ಪ್ರಶ್ನೆ ಮರ್ಗೇ ಮಾಡಿದ ಪಾರ್ಲಿಮೆಂಟಿನ ಈ ಬದಲಾವಣೆ ಕಡಿಯುವೆಂದು ನಂಬಲು ಅವಕಾಶವಿದೆ. ದೇಶಸ್ತುತಿಯಾದ ಎಂದರೆ ಕ್ರಿಸ್‌ಮಸ್‌ಗೆ ಮುಂಚೆ ಹೊಸ ಚುನಾವಣೆ ನಡೆಯುವುದೆಂದು ಹೇಳಿದ ಶ್ರೀ ಗ್ರೀನ್‌ವುಡ್ಡರು ಯೂರೋಪಿನ ದಂಡಯಾತ್ರೆ ಮುಗಿಯುವ ಪೂರ್ವದಲ್ಲಿ ಈ ನಿರೀಕ್ಷೆಗಳು ಹಿಂದೆ ಸರಿಯುವುದು. ಅದರ ದಂಡಯಾತ್ರೆ ಸಫಲಕಾರಿಯಾದರೆ ಹಾಲೀ ಪಾರ್ಲಿಮೆಂಟಿನ ಚುನಾವಣೆ ಖಂಡಿತ. ಕನ್ಸರ್‌ವೇಟಿವ್ ಗಳು ಸಹ ಮಾತ್ರ ಈಗಿನ ಸರಕಾರವೇ ಮುಂದೆ ಪರಿಣಾಮ ಸಾಧಿಸುತ್ತಿದ್ದಾರೆ. ಹೇಗಾದರೂ ಇಲ್ಲ. ಪಾರ್ಲಿಮೆಂಟ್ ಮತ್ತು ಸ್ಥಳೀಯ ಕ್ಷೇತ್ರಗಳ ಚುನಾವಣೆಯ ಸಲಹೆಗಳನ್ನು ನೋಡಿದರೆ ಒಟ್ಟಾರರು ಸಹ ಚುನಾವಣೆಯನ್ನು ಬಯಸುತ್ತಿದ್ದಾರೆಂಬುದು ವ್ಯಕ್ತವಾಗುತ್ತದೆ. ಹಿಟ್ಲರನಿಗಿನ್ನು ವಿಜಯವು ಕನಸಿನ ಮಾತು. ಸಣ್ಣ ಬ್ರಿಟಿಷ್ ದ್ವೀಪಗಳು ಡೋಡೆಕೆನೀಸ್ ಕೋಸ್ ಮತ್ತು ಕಾಕಸಸ್ ಈ ಮುಖ್ಯ ಕ್ಷೇತ್ರಗಳು ಅವನಿಗಿನ್ನು ಲಕ್ಷ್ಯಭಾವವು. ಅವರ ಬನಾಗು ಸ್ಟಾಲಿನ್ ತಪ್ಪಲು ಹಾನ್ಸೋ ನದೀ ಕ್ಷೇತ್ರ ಮತ್ತು ನೆಡ್ಡಾ ನದಿಯ ಮೈದಾನ ಇವುಗಳನ್ನು ತನ್ನ ಕೈಯಲ್ಲಿಟ್ಟುಕೊಂಡಿದ್ದಾನೆ. ಇವುಗಳಲ್ಲಿ ಒಂದನ್ನಾದರೂ ಮಿತ್ರರು ಕಿತ್ತುಕೊಳ್ಳುವವರೆಗೆ ಅವನನ್ನು ಸೋಲಿಸಿದಂತಾಗುವುದಿಲ್ಲ. ೧೯೪೪ ರ ಮಿಲಿಟರಿ ಕಾರ್ಯಾಚರಣೆಗೆ ಜರ್ಮನಿಯ ಕೆಳಗೆ ಹೇಳಿದ ಗುರಿಗಳನ್ನು ಮುಖ್ಯಾಧಾರವಾಗಿಟ್ಟುಕೊಂಡಿದೆಯೆಂದು ಹೇಳಲಾಗಿದೆ—

(೧) ಕೇವಲ ವಿಮಾನ ಮುತ್ತಿಗೆಗಳಿಂದ ಜರ್ಮನಿ ಸೋಲದು (೨) ಪಶ್ಚಿಮದಿಂದ ದಂಡಯಾತ್ರೆ ನಡೆಸುವುದು ತೀರ ಕಷ್ಟ (೩) ಪೂರ್ವತೀರದಲ್ಲಿ ರಷ್ಯನರು ಜಯಭೇರಿ ಬಾರಿಸುತ್ತಿದ್ದರೂ ರಷ್ಯಾ ಒಡೆಸ್ಸಾ ಪ್ರದೇಶದಲ್ಲಿ ಅವರನ್ನು ತಡೆಯಬಹುದು. (೪) ದಕ್ಷಿಣದ ದಂಡಯಾತ್ರೆಯನ್ನು ಇಟಲಿಯ ಮತ್ತು ಬಾಲ್ಕನ್ಸ್ ಪ್ರದೇಶದ ಬೆಟ್ಟಗುಡ್ಡಗಳಲ್ಲಿ ತಡೆಯಬಹುದು. ಇವೇ ಮೊದಲಿನ ಮೂರು ಅಂಶಗಳಿಗೆ ನಿರ್ಧಾರವಾಗಿ ಉತ್ತರ ಹೇಳುವುದು ಕಷ್ಟ.

ಸ್ವೀಕಾರ

ನವನಗರದ ನಿವಾಸಿಗಳಾದ ವೇ|| ಶಿವಲಿಂಗಾರ್ಯ ಪಂಚಾಚಾರ್ಯ ಗುರುಸ್ವಾಮಿಮಠ ಇವರ ಪುತ್ರ ಚಿ|| ಶ್ರೀಕಂಠನಿಗೆ ಇದೇ ಮಾಘ ಶು|| ೧ ಕ್ಕೆ ೧೬ ವರುಷಗಳು ಮುಗಿದು ೧೭ನೇ ವರುಷ ಪ್ರಾರಂಭವಾದ ಒಳ್ಳೆ ನೆರವೇರಿಸಿದ ಜನ್ಮೋತ್ಸವದಲ್ಲಿ ಪ್ರಭಾಪ್ರೋತ್ಸಾಹನಾರ್ಥ ಶ್ರೀಶಿವಲಿಂಗಾರ್ಯರ ಧರ್ಮಪತ್ನಿಯವರಾದ ವೀರಮ್ಮನವರು ಭಕ್ತಿಪುರಸ್ಸರವಾಗಿ ಸಲ್ಲಿಸಿದ 2 ರೂ ಗಳನ್ನು ವೇ|| ಕೋಟಯ್ಯನವರು ಗುಡ್ಡಿಮಠ ಇವರ ಮೂಲಕ ತಲ್ಪಿರುತ್ತವೆ.

ಈ ಮೋತ್ತಿಂದ ಸುಮಾರಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಏಂಥತ್ತು ಅಮೃತಶಿಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ... ೦—೪—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೫ × ೧೦ ಬೆಲೆ ೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಶಿಷ್ಠ, ವ್ಯಾಸ, ಸನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ .... ೦—೨—೦
ಸದ್ಯ ಲೋಕಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ ೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ .... ೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ ... ೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .. ೦—೧—೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .. ೦—೧—೦
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ ೦—೧—೦
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೦
ಶ್ರೀಕಾಶೀಕ್ಷೇತ್ರನಿವಾಸರಾದ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಸಿಂಹಾಸನದ ಫೋಟೋ .... ೦—೧—೦
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೫ × ೧೦ .. ೦—೩—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ... ೦—೧—೦
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .. ೦—೧—೦
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೧—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ ೦—೬—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ ೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ .... ೦—೧—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ .. ೦—೧—೦
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ... ೦—೧—೦
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .... ೦—೧—೦
ಶ್ರೀರಂಭಾಪುರೀ ಜಗದ್ಗುರುಗಳವರ [illegible]ಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ .... ೦—೧—೦
ಹೊಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ ೦—೧—೦

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಸಿದ್ಧಾಂತಶಿಖಾಮಣಿ

ಜಮಖಂಡಿಯಲ್ಲಿ [illegible] ಪ್ರಸಿದ್ಧ [illegible] ಸಂಪ್ರದಾಯದ [illegible] ಹಿರೇಮಠವು ಬಹು ಪ್ರಾಚೀನ ಕಾಲದಿಂದ ಪ್ರಸಿದ್ಧವಿದ್ದು ಈ ಮಠದ ಗುರುಪಟ್ಟಾಧಿಕಾರಿಗಳು [illegible] ಪಟ್ಟಾಧಿಕಾರಿಗಳು ಇಲ್ಲದ್ದರಿಂದ ಇದೇ ಮಠದ ಚರಪಟ್ಟಾಧಿಕಾರಿಗಳಾದ ಶ್ರೀ [illegible] ಶಿವಾಚಾರ್ಯರು ಪಂಚಜಗದ್ಗುರುಗಳ ಆಜ್ಞೆ ಪಡೆದು ಪ್ರಸ್ತುತ ಮಠಾಧಿಕಾರಿ [illegible], ಇದೇ ಮಾಘ ಶು ೫ ರವಿವಾರ (ತಾ॥ ೨೮-೧-೪೮ ನೇ) ದಿವಸ ಮಾಹೇಶ್ವರ ದೀಕ್ಷಾ ಮತ್ತು ಗುರುಪಟ್ಟಾಧಿಕಾರವನ್ನು ನಡೆಸಲು ನಿಶ್ಚಯಿಸಿದರು ಈ ಕಾರ್ಯಕ್ಕೆ ಬೀಳಗಿ ಬನಹಟ್ಟಿ, ಸಾವಳಗಿ, ಸೂಡಿ, ಗಿರಿಸಾಗರ ಮುಧೋಳ ಕೆರೂರ, ಹುಲ್ಯಾಳ ಮೊದಲಾದ ಪಟ್ಟಾಧಿಕಾರಿಗಳನ್ನು ಬರಮಾಡಿಕೊಂಡರು ವೇ॥ ಚೆನ್ನಬಸವ [illegible] ಇವರ ವೈದಿಕತ್ವದಲ್ಲಿ ಮಾಘ ಶು॥ ೩ ರವಿವಾರ ದಿವಸ ಪೂರ್ವ ಕ್ರಿಯೆಗಳನ್ನು ನೆರವೇರಿಸಿದರು. ಇದರಲ್ಲಿ [illegible] ವಹಿಸಿದ್ದ ಶ್ರೀ ಕಾಶೀ ಜ್ಞಾನಸಿಂಹಾಸನ ದೀಕ್ಷಿತ ಶ್ರೀ ೧೦೮ ಜಗದ್ಗುರು ಪಂಚಾಕ್ಷರ ಶಿವಾಚಾರ್ಯಮಹಾಸ್ವಾಮಿಗಳವರು ಇಲ್ಲಿಗೆ ದಯಮಾಡಿಸಿದ್ದರು ಇದರಿಂದ ಸರ್ವರಿಗೂ ಸಂತೋಷವಾಯಿತು ಮಾಘ ಶು॥ ೫ ಭಾನುವಾರ ದಿನ ಇದೇ ಮಠದ ವೇ॥ ಪಂಚಾಕ್ಷರಯ್ಯನವರ ಪುತ್ರರಾದ ಸಂಗನ ಬಸಪಯ್ಯ ಮತ್ತು ಮಲ್ಲಿಕಾರ್ಜುನಯ್ಯ ಈ ಉಭಯರಿಗೆ ಮಾಹೇಶ್ವರ ದೀಕ್ಷಾಸಂಸ್ಕಾರವು ನಡೆಯಿತು ನಂತರ ಶ್ರೀ ಕಾಶೀ ಜಗದ್ಗುರುಗಳವರ ಸಮಕ್ಷಮದಲ್ಲಿ ಸದರಿ ಸಂಗನ ಬಸವಯ್ಯನೆಂಬ ವಟುವಿಗೆ ಈ ಮಠದ ಸಂಪ್ರದಾಯದಂತೆ ಶಾಸ್ತ್ರ ಪದ್ಧತಿಯನ್ನನುಸರಿಸಿ ಪಟ್ಟಾಭಿಷೇಕ ಕಾರ್ಯವು ಜರುಗಿತು. ಅದನಂತರ ನೂತನಾಧಿಕಾರಿಗಳಿಗೆ ಶ್ರೀ ಜಗದ್ಗುರುಗಳವರು ಶ್ರೀ ನೀಲಕಂಠ ಶಿವಾಚಾರ್ಯರೆಂಬ ಅಭಿಧಾನವನ್ನಿಟ್ಟರು ಆ ಮೇಲೆ ಪಂ॥ ಹಿರೇಹ್ವರಿಶಿ [illegible] ಪಂಚಪೀಠಗಳಿಂದ ಅನುಗ್ರಹಿಸಲ್ಪಟ್ಟ ಹುಕುಮುಗಳು ಓದಲ್ಪಟ್ಟವು. ಶ್ರೀ ಜಗದ್ಗುರುಗಳವರು ನೂತನಾಧಿಕಾರಿಗಳಿಗೆ ಸೂತನಾಂಬರ ಮೊದಲಾದವುಗಳನ್ನು ಅರ್ಪಿಸಿದನಂತರ ಅಧಿಕಾರ ಪತ್ರಕ್ಕೆ ಸರ್ವರು ಒಪ್ಪಿಗೆ ಇತ್ತು (ಸೈ ಹಾಕಿ) ಕಳೆಯನ್ನರ್ಪಿಸಿದರು ಆಮೇಲೆ ಜಗದಾಚಾರ್ಯರ ಜಯಘೋಷದೊಡನೆ ಕಾರ್ಯವು ಸಮಾಪ್ತಿಗೊಂಡು ಭೂರಿಭೋಜನವು ನಡೆಯಿತು ಸಂಸ್ಥಾನ ಕಾರ್ಯಬಾಹುಳ್ಯದಿಂದ ಶ್ರೀ ಸನ್ನಿಧಿಯವರು ಮರುದಿನ (ತಾ॥ ೩೧-೧-೪೮ ಸೋಮವಾರ) ವೇ॥ ಕಾಶಿಗೆ ಪ್ರಯಾಣ ನಿಶ್ಚಯಿಸಿದರು ಅದೇ ದಿನ ನೂತನಾಧಿಕಾರಿಗಳ ಅಂದೋಲಿಕೋತ್ಸವವು ಬಹು ವೈಭವದಿಂದ ನಡೆಯಿತು ಸದರಿ ಮಠದ ಚರಮೂರ್ತಿಸ್ವಾಮಿ

(೪ ನೆಯ ಪುಟವನ್ನು ನೋಡಿ)

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ.

ಫಾಲ್ಗುನ ಶುದ್ಧ ಚತುರ್ದಶಿ (8-3-44) ಬುಧವಾರ

ಶ್ರೀಕುಲ್ಯಪಾಕಕ್ಷೇತ್ರದ ಸೋಮನಾಥಲಿಂಗದಿಂದ ಶ್ರೀಜಗದ್ಗುರು ರೇಣುಕಾಚಾರ್ಯರ ಅವತಾರ.

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುನ ಶುದ್ಧ ಚತುರ್ದಶಿ ಬುಧವಾರ (೮-೩-೪೪) ದಿವಸ ಭರತ ಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತಭಕ್ತಿಯಿಂದ ನೆರವೇರಿಸಬೇಕು. ಶ್ರೀರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾಪ್ರಭಾವದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಜ್ಞಾನನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲ ಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀಕ್ಷೇತ್ರದಲ್ಲಿರುವ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಯುದ್ಧವಾರ್ತೆ.

ಲಂಡನ್ನಿನ ಮೇಲೆ ಮುತ್ತಿಗೆ

ಈ ತಿಂಗಳ ೨೦ನೆಯ ತಾ। ರಾತ್ರಿ ಲಂಡನ್ ಪ್ರಾಂತ್ಯದಲ್ಲಿ ಮುತ್ತಿಗೆ ನಡೆಯಿತು. ವಿಮಾನ ಧ್ವಂಸಕ ತೋಪುಗಳ ಆರ್ಭಟವು ಅಸಾಧ್ಯವಾಗಿತ್ತು. ಒಂದು ಕ್ಷೇತ್ರದಲ್ಲಿ ಅನೇಕ ಬಾಂಬುಗಳು ಬಿದ್ದವು. ಕಿಟಕಿಗಳು ಧ್ವಂಸವಾದವು. ೩ ಶತ್ರು ವಿಮಾನಗಳನ್ನು ಕೆಡವಲಾಯಿತು.

ಜರ್ಮನ್ ನಗರಗಳ ಮೇಲೆ ಮುತ್ತಿಗೆ

ಕಳೆದ ೨೦ನೆಯ ತಾರೀಖಿನ ದಿನ ಹಗಲಿನಲ್ಲಿ ಅಮೇರಿಕದ ಬಲಯುತ ಬಾಂಬರುಗಳು ಜರ್ಮನಿಯ ವಿಮಾನ ಕಾರ್ಖಾನೆಗಳ ಮೇಲೆ ಮುತ್ತಿಗೆ ನಡೆಸಿದವು. ಈ ಯುದ್ಧದಲ್ಲಿ ಇದುವರೆಗೆ ಇಂತಹ ದಾಳಿ [illegible] ನಡೆದಿರಲಿಲ್ಲ. ಸುಮಾರು ೨೦೦೦ ಅಮೇರಿಕನ್ ವಿಮಾನಗಳು ಮುತ್ತಿಗೆಯಲ್ಲಿ ಭಾಗವಹಿಸಿದ್ದವು. ಈ ಮುತ್ತಿಗೆಯ ಫಲವಾಗಿ ಜರ್ಮನಿಯ ಫೈಟರ್ ವಿಮಾನ ದಳದಲ್ಲಿ ಮೂರನೆಯ ಒಂದರಷ್ಟನ್ನು ನಾಶಮಾಡಿದಂತಾಯಿತು. ೧೦೦ ಜರ್ಮನ್ ವಿಮಾನಗಳನ್ನು ನಾಶಮಾಡಲಾಯಿತು. ಲೀಪ್ಸಿಗ್ ಮೇಲೆ ೨,೦೦೦ ಟನ್ನುಗಳಿಗಿಂತ ಹೆಚ್ಚು ಬಾಂಬುಗಳನ್ನು ಹಾಕಲಾಯಿತು. ಇದು ಜರ್ಮನಿಯ ದೊಡ್ಡ ನಗರಗಳಲ್ಲಿ ಐದನೆಯದು ಮತ್ತು ವಿಮಾನ ಕೈಗಾರಿಕೆ ಕೇಂದ್ರ ಎಂದು ಲಂಡನ್ ನುಡಿಯಿಂದ ತಿಳಿಯಬಂದಿದೆ.

ಭಾರತ ಭೂಮಿಯಲ್ಲಿ ಇಳಿಯಲು ಜಪಾನ್ ಪ್ರಯತ್ನ

ಫೆಬ್ರವರಿ ೫ನೆಯ ತಾ। ಆರಾಕಾನ್ ರಂಗದಲ್ಲಿ ಕದನವು ಉಗ್ರವಾಗಿತ್ತು. [illegible] ನದಿಯಲ್ಲಿ ಭಾರತದ ನೌಕೆಗಳು ಕಾವಲು ತಿರುಗುತ್ತಿರೆ ಈ ನದಿಯನ್ನು ದಾಟಿ ಭಾರತ ಭೂಮಿಯಲ್ಲಿ ಸೈನ್ಯವನ್ನಿಳಿಸಲು ಜಪಾನು ಯತ್ನಿಸಿತು. ಆದರೆ ಕೊಂಚ ಮುಂದೆ ನುಗ್ಗಲು ಸಮರ್ಥರಾದರೂ ಮಿತ್ರ ಸೇನೆಯನ್ನಲ್ಲಿ ಹಿಂದಕ್ಕೆ ತಳ್ಳಲು ಸಮರ್ಥರಾಗಲಿಲ್ಲವೆಂದು ತಿಳಿಸಲಾಗಿದೆ.

ಉಕ್ರೇನಿನಲ್ಲಿ ರಷ್ಯನ್ ಸೇನೆ ನೆರೆಯುತ್ತಿದೆ

ರೆಪಬೋರ್ಕಾದಿಂದ ಹೊರಡು (೧೯೩೯ಕ್ಕೆ ಮೊದಲಿನ ಪೋಲೆಂಡ್ ಗಡಿಯ ಒಳಗೆ ಇದೆ) ಫೋರ್ಸ್ ಎನ್ನುವ [illegible] ಸ್ಲೆವರ್ ನದಿಯ ದಡದವರೆಗೆ ರಷ್ಯನರು ಪ್ರಚಂಡ ಸೇನೆಯನ್ನು ಕೂಡಿಸುತ್ತಿದ್ದಾರೆ. ಕಬ್ಬಿಣದ ಅದಿರಿನ ಕೇಂದ್ರವಾದ ಕ್ರಿವಾಯ್‌ರಾಗ್‌ನಿಂದ ಜರ್ಮನರನ್ನು ಓಡಿಸುವುದು ಖಂಡಿತ. ನ್ಯಕೋಲ್ ಕಡೆಗೆ ನುಗ್ಗುತ್ತಿರುವ ಎರಡು ರಷ್ಯನ್ ಸೇನೆಗಳು ಮುಂದೆ ಸಾಗಿವೆ. ಅಲ್ಲಿನ ಫೈಟ್ ಪೂರ್ಣ ಅತ್ಯವನ್ನು ಕೂಡಿದ ರಷ್ಯನ್ ವಿಮಾನಗಳ ಮುತ್ತಿಗೆ ಅನಾವೃತವಾಗಿದೆ ಎಂದು ಹೇಳಲಾಗಿದೆ.

ಕ್ಯಾಸಿನೋ ದಕ್ಷಿಣದ ಪರಿಸ್ಥಿತಿ

ಆಸ್ಟಿಯೋ ಸಮುದ್ರ ತೀರದಲ್ಲಿ ಮಿತ್ರಸೇನೆಗಳ ಸ್ಥಾನವು ಉತ್ತಮವಾಗಿದೆ. ಐದನೆಯ ಸೇನೆಯು ಮೂಲರಂಗಕ್ಕೆ ಸೇರಿದ ಕ್ಯಾಸಿನೋ ರಂಗದಲ್ಲಿ ಉಗ್ರವಾದ ಹೋರಾಟವಾಗುತ್ತಿದೆ. [illegible] ಮೊದಲಲ್ಲಿ ಇದ್ದ ಕೆಲವು ಸ್ಥಾನಗಳನ್ನು ಬಲಪಡಿಸಲಾಗಿದೆ. ದಕ್ಷಿಣದಲ್ಲಿ ಮಿತ್ರ ಸೇನೆಗಳು ರೈಲ್ವೆ ಸ್ಟೇಷನ್ ಒಂದರಿಂದ ಹಿಂದಕ್ಕೆ ಸರಿಯಬೇಕಾಯಿತು. ಕ್ಯಾಸಿನೋ ಹೋರಾಟವು ಈಗ ರಕ್ತಸ್ನಾನ ಭೀಕರ ಹೋರಾಟವಾಗಿ ಪರಿಣಮಿಸಿದೆ. ಮುಂದಿನ ರಕ್ಷಣೆಗಾಗಿ ಜರ್ಮನರು ಕ್ಷೇತ್ರ ಸಿದ್ಧತೆ ನಡೆಸಿದ್ದಾರೆ. ನೂರಾರು ಮೈನ್‌ಗಳನ್ನು ನೆಲದೊಳಗೆ ಹೂತಿಟ್ಟಿದ್ದಾರೆ. ಈಗ ಜರ್ಮನರು ತುಂಬಾ ಪ್ರಬಲವಾಗಿ ಹೋರಾಡುತ್ತಿದ್ದಾರೆ. ಜರ್ಮನ್ [illegible] ಫಿರಂಗಿ [illegible] ಮೈನ್‌ಕ್ಷೇತ್ರಗಳಿಂದ [illegible] ಸೇರಿದ [illegible] ೨೦೦ [illegible] ಕಾಣಿಸಿಕೊಂಡಿವೆ. [illegible] ವಿಮಾನಗಳು [illegible] ೨೦೦ [illegible] ಕಾಣಿಸಿಕೊಂಡವು [illegible] ಪರಿಣಾಮವಾಗಿ.

ಮಿತ್ರಬಲವು ಶತ್ರುಬಲವನ್ನು ನಿವಾರಿಸಿದೆ

[illegible] ಜಪಾನ್ [illegible] ಮಾಡಿದ [illegible] ಪಕ್ಷದ [illegible] ನಷ್ಟವನ್ನು [illegible] ಸಾಧಿಸಿ [illegible] ಕರ್ನಲ್ [illegible] ಸಮಾಚಾರ [illegible] ಜಪಾನ್ ಪಕ್ಷದವರ [illegible] ಮಾಡಿಕೊಂಡ [illegible] ಕೇಂದ್ರೀಕರಿಸಲ್ಪಟ್ಟಿದ್ದ [illegible] ಶತ್ರುಪಕ್ಷದ ಸೈನ್ಯ [illegible].

ಹೊಸ ಬೀಜದ ಬತ್ತ

ಮೈಸೂರು ವ್ಯವಸಾಯ ಇಲಾಖೆಯ [illegible] ರವರು ಈ ರೀತಿ ತಿಳಿಸುತ್ತಾರೆ —

ನಾಲೆ ಬಯಲಿನ [illegible] ಹೊಸ ಬತ್ತವನ್ನು ವ್ಯವಸಾಯದ ಇಲಾಖೆಯವರು [illegible] ಬೆಳೆಸಿಕೊಟ್ಟಿದ್ದಾರೆ. ಈ ಪ್ರಾಂತ್ಯದಲ್ಲಿ [illegible] ಬೆಳೆಯುವುದಕ್ಕೆ [illegible] ಅನುಕೂಲವಾದದ್ದು. [illegible] ಸಣ್ಣ [illegible] ಎಸ್ [illegible], ಎಸ್ ೭೧ ಎಂಬ [illegible] ಎರಡು ಬತ್ತಗಳಿಗೆ ಮಧ್ಯಸ್ಥವಾಗಿ [illegible] ರತ್ನಚೂಡಿ ತಳಿ [illegible] ಕಾಯಿಸುತ್ತಾರೆ. ಸಣ್ಣಕ್ಕಿಂತ [illegible] ಸಣ್ಣಕ್ಕಿಂತ [illegible] ಬತ್ತವೆ [illegible] ಕೊಯಿಲಿಗೆ [illegible] ಮಂಡ್ಯ [illegible] ನಾಗಮಂಗಲ, ಹೊಸಹಳ್ಳಿ, ಹಾರೋಹಳ್ಳಿ ಪ್ರಾಂತ್ಯದ [illegible] ಈ ಬತ್ತವನ್ನು ಹೆಚ್ಚು [illegible] ಬತ್ತವನ್ನು ೧೩ ಎಕರೆಯಲ್ಲಿ [illegible] ಬತ್ತ [illegible] ಎಕರೆಗೆ [illegible] ಅದೇ ಪಕ್ಕದ ಜಮೀನಿನಲ್ಲಿ ಎಕರೆಗೆ ೧೮ ಪಲ್ಲ [illegible] ಹೊಸ ಬತ್ತ [illegible] ಮಿಲ್ಲಿಗೆ ಕೊಟ್ಟು [illegible] ೧೦೦ ಸೇರು ಬತ್ತಕ್ಕೆ [illegible] ಅನುಭವದಲ್ಲಿ ಬತ್ತದ [illegible] ತಿಳಿಸಿದ್ದಾರೆ. [illegible] ಬತ್ತದಲ್ಲಿ [illegible] ಸಣ್ಣ [illegible], ಸಣ್ಣ [illegible] ಬತ್ತಗಳ [illegible] ಗೊಬ್ಬರ, [illegible] ಮೊದಲು [illegible] ಬೀಜವನ್ನು [illegible] ೨೦೦೦ [illegible] [illegible] ಪ್ರಾಂತ್ಯದ [illegible].

ಸ್ವೀಕಾರ

ಗದಗ ಒಕ್ಕಲಿಗರಲ್ಲಿ ನಡೆದ ಮುನಿಸಿಪಲ್ ಕೌನ್ಸಿಲ್ [illegible] ಚುನಾವಣೆಯಲ್ಲಿ [illegible] ಶ್ರೀ [illegible] ಪುಸ್ತಕ [illegible] ಪ್ರಭಾ ಪ್ರಕಟಣೆಗೆ ಸಮರ್ಪಿಸಿದ 15 ರೂ. [illegible] ಇವರು ಸಮರ್ಪಿಸಿದ 10 ರೂ. [illegible] ಇವರು ಸಮರ್ಪಿಸಿದ 5 ರೂ. [illegible] ಶ್ರೀ [illegible] ಇವರು ಸಮರ್ಪಿಸಿದ 10 ರೂ. [illegible] 40 ರೂ [illegible] ಮೂಲಕ ತಲುಪಿರುತ್ತವೆ.

[illegible] ಶ್ರೀ [illegible] ಇವರ [illegible] ಪ್ರಭಾ [illegible] ೧೧ ದಿವಸ [illegible] ಕಾಲದಲ್ಲಿ ಪ್ರಭಾ ಪ್ರಕಟಣೆಗಾಗಿ [illegible] ಸಂಗನಬಸಪ್ಪ [illegible] ಇವರಿಂದ [illegible] 5 ರೂ. [illegible] ಇವರ [illegible] ಮತ್ತು ಗಂಗವ್ವ [illegible] ವಿವಾಹಕಾಲದಲ್ಲಿ ಪ್ರಭಾ ಪ್ರಕಟಣೆಗಾಗಿ [illegible] ಕಡೆಯಿಂದ ಸಮರ್ಪಿಸಲ್ಪಟ್ಟ 3 ರೂ. [illegible] 8 ರೂಪಾಯಿಗಳು [illegible] ಇವರ ದ್ವಾರಾ ತಲುಪಿರುತ್ತವೆ.

ಹೊಸಪೇಟೆ [illegible] ಇವರ [illegible] ಸಭೆಯಲ್ಲಿ ಪ್ರಭಾ ಪ್ರಕಟಣೆಗಾಗಿ ಸಮರ್ಪಿಸಲ್ಪಟ್ಟ 5 ರೂಪಾಯಿಗಳು [illegible] ಇವರ ದ್ವಾರಾ ತಲುಪಿರುತ್ತವೆ.

[illegible] ತಾ। [illegible] ಪ್ರಭಾ ಪ್ರಕಟಣೆಗಾಗಿ ಸಮರ್ಪಿಸಿದ 2 ರೂ. [illegible] ಇವರ ದ್ವಾರಾ ತಲುಪಿರುತ್ತವೆ.

[illegible] ಶ್ರೀ [illegible] ತಾ। [illegible] ಸಭೆಯಲ್ಲಿ ಪ್ರಭಾ ಪ್ರಕಟಣೆಗಾಗಿ ಸಮರ್ಪಿಸಲ್ಪಟ್ಟ 1 ರೂಪಾಯಿಯು ಶ್ರೀಮಂತ [illegible] ಇವರ ದ್ವಾರಾ ತಲುಪಿರುತ್ತದೆ.

[illegible] ಪ್ರಭಾ ಪ್ರಕಟಣಾ [illegible] 1 ರೂ. ಯನ್ನು ಕಳುಹಿಸಿದ್ದಾರೆ.

ಈ ಸದ್ಭಕ್ತ [illegible] ಪಂಚಾಚಾರ್ಯರು [illegible] ಹಾರೈಸುತ್ತೇವೆ.

ಪಂಡಿತರ ಆಗಮನ

[illegible] ಶ್ರೀ [illegible] ಕಾರ್ಯಕ್ಕಾಗಿ [illegible] ತಿಂಗಳಿಂದ [illegible] ಗಮ್ಮು? ಕಳೆದ [illegible] ದಿವಸ [illegible] ರಾಜಧಾನಿಗೆ [illegible] ಬಂದಿರುವರು.

(೧ನೆಯ ಪುಟದ ಮುಂದುವರಿದುದು)

ಗಳವರು ನೂತನಾಧಿಕಾರಿಗಳಿಗೆ [illegible] ಸ್ವಾಮಿಗಳು ಇತರ ಸ್ಥಳಗಳಿಂದ [illegible] ರಿಗೂ ಕಾಣಿಕೆಯನ್ನಿತ್ತು [illegible] ಕಾರ್ಯಕ್ಕೆ ಪ್ರಮುಖ [illegible] ತೇರದಾಳ, ಬನಹಟ್ಟಿ, [illegible] ಮೊದಲಾದ ಕಡೆಗಳಿಂದ ಬಂದ ವಸ್ತ್ರಸಾಮಗ್ರಿಗಳ ವಿಶ್ವಾಸ [illegible] ಜಗದ್ಗುರುಗಳವರನ್ನು ಒಪ್ಪಿ ಅನಂತರ [illegible] ಅದೇ ಸಮಯದಲ್ಲಿ ಜಗದ್ಗುರು [illegible] ಗಳಿಗೆ ಕಾಣಿಕೆಯನ್ನರ್ಪಿಸಿ ಪಂಚ [illegible] ಪಾದುಕೆಯ ತುಲಾಭಾರ [illegible] ಯಿತು. [illegible] ಸಮಯಕ್ಕೆ ೨೦೦೦ ಜನ ಪಟ್ಟಣಿಗರೆ ಬಿಟ್ಟು ಕೂಡ ದರ್ಶನಾರ್ಥಿಗಳಾಗಿ ಬಂದಿದ್ದರು. ಇದರಲ್ಲಿ ದಾಮೋದರ, ಕವಟಗಿ, ಜನವಾಡ ಜನರು ಒಳ್ಳೆ ಶ್ರದ್ಧೆಯಿಂದ ಗುರುಸೇವೆಯನ್ನು ಸಲ್ಲಿಸಿದರು. ಈ ಸೇವಾರ್ಥಿಗಳಿಗೆ ಜಗದ್ಗುರುಗಳು ಮಂಗಳವ ನ್ನೀಯಬೇಕು ಪ್ರಾರ್ಥಿಸುವೆ.

ಒಬ್ಬ ಉಪಸ್ಥಿತನಾಗಿ

ನಿಷೇಧನಪತ್ರ

ಕಾಶೀಕ್ಷೇತ್ರ

ಶ್ರೀ ಭಾಸ್ಕರರಾವ್ ಜಾಧವ ಎಂ. ಎ., ಎಲ್. ಎಲ್. ಬಿ ಇವರು ಕಳೆದ ತಿಂಗಳ 'ಕರ್ಮವೀರ' ಸಾಪ್ತಾಹಿಕ ಪತ್ರಿಕೆಯಲ್ಲಿ 'ಮಹಾದೇವ' ಎಂಬ ಶಿರೋನಾಮೆಯುಳ್ಳ ಲೇಖನದಲ್ಲಿ ಈಶ್ವರ, ನಂದಿ, ಬಿಲ್ವಪತ್ರ, ಲಿಂಗ ಈ ಸಂಬಂಧವಾಗಿ ಅಸಂಬದ್ಧ ಹಾಗೂ ಆಧಾರರಹಿತವಾದ ವಿಷಯಗಳನ್ನು ಪ್ರಕಟಪಡಿಸಿರುವದನ್ನು ಖಂಡಿಸುವದಕ್ಕಾಗಿ ಶ್ರೀ ಕಾಶೀ ಪೀಠಸ್ಥರ ವಿದ್ಯಾಸಂಘದಲ್ಲಿ ಪಂ|| ಚನ್ನಬಸವಶಾಸ್ತ್ರಿಗಳು ಇಟಗಿ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೇಲ್ಕಂಡ ಲೇಖನಕಾರರ ಲೇಖನವನ್ನು ಏಕವಾಕ್ಯತೆಯಿಂದ ನಿಷೇಧಿಸಲಾಯಿತು. ಶ್ರೀ|| ವ|| ಬ್ರ|| ಗುರುಪಾದಶಿವಾಚಾರ್ಯ ಮುಕ್ತೂರು. ಶ್ರೀ ಗುರುಸಿದ್ಧ ಸ್ವಾಮಿಗಳು ಮುದೇನೂರು ಮೊದಲಾದವರ ಹಿಂದೆ ನಾಲ್ಕು ಭಾಷಣಗಳಾದ ಮೇಲೆ ಆಚಾರ್ಯ ಜಯ ಘೋಷಪೂರ್ವಕ ಸಭೆಯು ಮುಕ್ತಾಯವಾಯಿತು.

ಸೆಕ್ರಿಟರಿ, ವೀರಶೈವ ವಿದ್ಯಾರ್ಥಿಸಂಘ, ಕಾಶಿ

ಹೋಣರಂಜೇರಿ

ಕಳೆದ ತಿಂಗಳು "ಕರ್ಮವೀರ" ಎಂಬ ವಾರಪತ್ರಿಕೆಯಲ್ಲಿ ಪ್ರಕಟವಾದ ಶ್ರೀ ಭಾಸ್ಕರರಾವ ಜಾಧವ ಎಂ. ಎ., ಎಲ್. ಎಲ್. ಬಿ. ಇವರು "ಮಹಾದೇವ" ಎಂಬ ಲೇಖನದಲ್ಲಿ ಇಡೀ ವೀರಶೈವಸಮಾಜಕ್ಕೆ ಪೂಜ್ಯವೂ ಮೋಕ್ಷಸಾಧನವೂ ಆದ ಶ್ರೀ ಶಿವಲಿಂಗ, ನಂದಿ, ಬಿಲ್ವಪತ್ರಸಂಬಂಧವಾಗಿ ನಿಂದಾಸ್ಪದವಾದ ಅಬದ್ಧ ವಾಕ್ಯಗಳನ್ನು ಪ್ರಕಟಿಸಿರುವದನ್ನು ಖಂಡಿಸಲು ನಿಜಾಮ ಇಲಾಖೆ ಹೋಣರಂಜೇರಿಯಲ್ಲಿರುವ ಪಾದುಕಶಾಖಾ ಮಠದಲ್ಲಿ ಸದರಿ ಮಠಾಧ್ಯಕ್ಷರಾದ ವೇ|| ಸಿದ್ಧಲಿಂಗಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆಗೂಡಿತು. ಸಭೆಗೆ ಶ್ರೀಮಂತ ಮಡಿವಾಳಪ್ಪನವರೇ ಮೊದಲಾದ ಅನೇಕರು ಆಗಮಿಸಿದ್ದರು. ಶ್ರೀ ಭೀಮಸೇನ ಚನ್ನಮಲ್ಲಪ್ಪ ಮತ್ತು ಶ್ರೀ ಶಿವಲಿಂಗಪ್ಪ ಗದಗ ಮೊದಲಾದವರು ಸದಸ್ಯರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಸದರಿ ಲೇಖಕರ ಅಭಿಪ್ರಾಯವನ್ನು ಶಾಸ್ತ್ರಯುಕ್ತಿಗಳಿಂದ ಖಂಡಿಸಿದರು. ಅನಂತರ ಅಧ್ಯಕ್ಷರು ಪ್ರಮಾಣಪುರಸ್ಸರವಾಗಿ ಸದರಿ ಲೇಖಕರ ದುರಭಿಪ್ರಾಯವನ್ನು ಆಮೂಲಾಗ್ರವಾಗಿ ಖಂಡಿಸಿ ಸರ್ವಸಭಿಕರನ್ನೂ ಸಂತೋಷಭರಿತರನ್ನಾಗಿ ಮಾಡಿದರು. ಅನಂತರ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಸಭಿಕ

ಗದಗ ಬೆಟಗೇರಿ ನಗರಸಭಾ ಮೆಂಬರರ ಅಭಿನಂದನ

[illegible] ಗದಗ ಪಟ್ಟಣವು ಕರ್ನಾಟಕ ಪ್ರಾಂತದ ವ್ಯಾಪಾರೋದ್ಯೋಗಗಳಲ್ಲಿಯೂ ಕಲಾಕೌಶಲ್ಯಗಳ [illegible] ಕೇಂದ್ರಸ್ಥಾನವೆನಿಸಿ ಅತ್ಯಂತ ಪ್ರಖ್ಯಾತಿ ಪಡೆದಿರುವದಷ್ಟೆ. ಬಹುಜನ ಸಂಖ್ಯೆಯಿಂದ ಕೂಡಿದ ಗದಗ ಬೆಟಗೇರಿ ನಗರಸಭಾ (ಮುನಿಸಿಪಾಲಿಟಿ) [illegible] ಪ್ರತಿನಿಧಿತ್ವವನ್ನು ಮಾಡಲು ಕೆಲವರು ಉಮೇದುವಾರರಾಗಿ ನಿಂತು ತಾ|| [illegible] ನೇ ದಿವಸ ನಡೆದ ಚುನಾವಣೆಯಿಂದ ಸಮರ್ಥರಾದ [illegible] ಗಳು [illegible] ಬಂದರು. ಇವರುಗಳಲ್ಲಿ ಪ್ರಿ|| ವೇ|| ಚನ್ನಬಸಯ್ಯನವರು ರಾಚಯ್ಯನವರ ಬಿ. ಎ., ಎಲ್. ಎಲ್. ಬಿ. ವಕೀಲ ಇವರು ದರ್ಶನಾರ್ಥಿಗಳಿಗೂ ಸುಶೀಲರೂ ವ್ಯವಹಾರ ಚತುರರೂ ಜನಸೇವೆಯಲ್ಲಿ ಮುಂತಾದವರು ಸರಳ ಹಾಗೂ ಶಾಂತಸ್ವಭಾವದವರೂ ಬಡಜನ ಹಿತ ಚಿಂತಕರೂ ಪರೋಪಕಾರಿಗಳೂ ಮುತ್ತು ತಮ್ಮ ಪಕ್ಷಿಗಾರರ [illegible] (ವ್ಯಾಜ್ಯ)ಗಳನ್ನು ಬಹುದಕ್ಷತೆಯಿಂದ ವಕ್ತಾರ ಸ್ಪರ್ಧೆ ನಡೆಸಿ ಜಯಹೊಂದುವವರಲ್ಲಿ ಪ್ರಮುಖರಾದವರು ಮತ್ತು ಕಳೆದ [illegible] ವರ್ಷಗಳಿಂದ ಇವರ ನಗರಸಭೆಯ ಸದಸ್ಯರಾಗಿಯೂ ೩ ಸಾರಿ ಪ್ರೆಸಿಡೆಂಟರಾಗಿಯೂ [illegible] ಬಹುಜನಪ್ರಿಯರಾಗಿರುವರು [illegible] ವರ್ಷ ಜಿಲ್ಲಾ ಲೋಕಲ್ ಬೋರ್ಡಿನ ಸದಸ್ಯರಾಗಿಯೂ ಮತ್ತು [illegible] ವರ್ಷಗಳಿಂದ ಗದಗ ಕರ್ನಾಟಕ ಸೆಂಟ್ರಲ್ ಬ್ಯಾಂಕಿನ ಡಾಯರೆಕ್ಟರ್ ಮತ್ತು ಶ್ರೀ [illegible] ಸಕಲಜನಪ್ರಿಯರಾಗಿರುವರು. ಈ ವರ್ಷವಾದರೂ [illegible] ನೇ ವಾರ್ಡಿನ ಸಮಸ್ತ ಮತದಾರರಿಂದ ಇವರು ತಮ್ಮ ಸರ್ವ ಮನಸ್ಸಿನಿಂದ ಇವರಿಗೆ ಮತಗಳನ್ನು ಕೊಟ್ಟದ್ದು ಅಭಿನಂದನೀಯವಾಗಿದೆ. ಇವರಾದರೂ ಮುಂದೆ ನಿಷ್ಪಕ್ಷಪಾತದಿಂದ ಪ್ರಜಾಹಿತಕಾರ್ಯಗಳನ್ನು ಮಾಡಿ ಸರ್ವಜನಾನುರಾಗವನ್ನು ಸತ್ಕೀರ್ತಿಯನ್ನು ಸಂಪಾದಿಸಲೆಂದು ಕೋರಲಾಗಿದೆ.

ಗದಗ ಬೆಟಗೇರಿ ಮುನಿಸಿಪಾಲಿಟಿಯ [illegible] ನೇ ವಾರ್ಡಿಗೆ ತಾ|| [illegible] ರಲ್ಲಿ ಉಮೇದವಾರರಾಗಿ ಜಯಪಡೆದವರ ಪೈಕಿ ಶ್ರೀಯುತ ಮಲ್ಲಿಕಾರ್ಜುನಪ್ಪನವರು ಬೇಟೇರಿ ಇವರೊಬ್ಬರು — ಇವರು ಆಗರ್ಭ ಶ್ರೀಮಂತರೂ ವ್ಯವಹಾರ ಚತುರರೂ ಆಗಿದ್ದು ಬಡವರ ಕುಂದು ಕೊರತೆಗಳನ್ನು ನಿವಾರಿಸಲು ಅರ್ಬನ್ ಬ್ಯಾಂಕಿನಲ್ಲಿ ಮೆಂಬರರಾಗಿ ಕೆಲಸ ಕಾರ್ಯಗಳನ್ನು ಬಹು ಶ್ರದ್ಧೆಯಿಂದ ಮಾಡಿದವರು. ಇದಲ್ಲದೆ ಕಳೆದವರ್ಷ ಬಂಗಾಲದಿಂದ ಬಳಲಿ ಬಂದ (ಗುಳೇಕಾರ) ಜನರಿಗೆ ಕೆಲವು ದಿವಸ ಪ್ರತಿಯೊಬ್ಬರಿಗೂ ಅರ್ಧಸೇರಿನಂತೆ ಅಕ್ಕಿಯನ್ನು ಕೊಟ್ಟು ಗದಗ ಬೆಟಗೇರಿಗೆ ಪ್ರಥಮ ಮಾರ್ಗದರ್ಶಕರಾದವರು. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರಲ್ಲಿ ಅಸಾಧಾರಣವಾದ ಭಕ್ತಿಯನ್ನಿರಿಸಿ ಧರ್ಮಕಾರ್ಯ ಧುರೀಣರೆನಿಸಿದ್ದಾರೆ. ಬಲಿಷ್ಠರಾದ ಎದುರಾಳಿಗಳಲ್ಲಿ ಮುಂಪರಿದು ಬಂದದ್ದು ಇವರಲ್ಲಿರುವ ಸ್ವಜನಾದ ಜನಾಂಗದ ಪ್ರೇಮವನ್ನು ವ್ಯಕ್ತಗೊಳಿಸುತ್ತದೆ. ಇವರು ಮುಂದಾದರೂ ಸರ್ವ ರೀತಿಯಿಂದಲೂ ಪ್ರಜಾಹಿತ ಕಾರ್ಯಗಳನ್ನು ಮಾಡುತ್ತ ಸನ್ಮಾನ್ಯರಾಗಲೆಂದು ಹಾರೈಸಲಾಗಿದೆ.

ಗದಗ ಬೆಟಗೇರಿ ಮುನಿಸಿಪಾಲಿಟಿ [illegible] ನೇ ವಾರ್ಡಿನಲ್ಲಿ ಉಮೇದವಾರರಾಗಿ ನಿಂತ ವೇ|| ಕರಬಸಯ್ಯನವರು ಕಟ್ಟಿಮಠ ಇವರು ಬಹುಮತದಿಂದ ಆರಿಸಿ ಬಂದರು. ಇವರಾದರೂ ಪರೋಪಕಾರಿಗಳೂ ಬಡಜನರ ಹಿತದ ಸಲುವಾಗಿ ಅವಿಶ್ರಾಂತ ಶ್ರಮಪಡತಕ್ಕವರೂ ಹತ್ತಿ ಅರಳೆ ಮತ್ತು ಧಾನ್ಯಾದಿ ವ್ಯಾಪಾರದಲ್ಲಿ ಮುಂದಾಳುಗಳೂ ಆಗಿದ್ದಾರೆ. ಇವರ ಶಾಂತ ಸ್ವಭಾವದಿಂದಲೇ ಕಳೆದ ೧೧ ವರ್ಷಗಳಿಂದ ತಪ್ಪದೇ ಮುನಿಸಿಪಾಲಿಟಿಗೆ ಆರಿಸಿ ಬಂದಿರುವದಲ್ಲದೆ ಶ್ರೀ ಕೋಟಿವಾಯ್ ಶ್ರೀ ಬೋರ್ಡಿಂಗಿಗೆ ಮೆಂಬರರಾಗಿಯೂ ಗದಗ ಬೆಟಗೇರಿ ಮುನಿಸಿಪಾಲಿಟಿಯ ಆಯುರ್ವೇದ ದವಾಖಾನೆಯ ಚೇರಮನ್ನರಾಗಿಯೂ ಇದ್ದು ಬಹುಶ್ರದ್ಧೆಯಿಂದ ಕೆಲಸಮಾಡಿ ಗೌರವ ಪಡೆದವರು. ಇವರಲ್ಲಿರುವ ಸದ್ಗುಣಗಳ ಪ್ರಸಿದ್ಧಿಯಿಂದಲೇ ಈ ವರ್ಷವಾದರೂ ಸಮಸ್ತ ಮತಬಾಂಧವರು ತಮ್ಮ ಅನೇಕವಾದ ಮತಗಳನ್ನು ಕೊಟ್ಟು ತಮ್ಮ ನಿಜವಾದ ಪ್ರೇಮವನ್ನು ವ್ಯಕ್ತಗೊಳಿಸಿದರು. ಇವರಾದರೂ ಮುಂದೆ ಉನ್ನತೋನ್ನತ ಪ್ರಜಾಹಿತ ಕಾರ್ಯಗಳನ್ನು ಮಾಡಿ ಕೀರ್ತಿಶಾಲಿಗಳಾಗಬೇಕೆಂದು ಹಾರೈಸಲಾಗಿದೆ.

ಗದಗ ಬೆಟಗೇರಿ ಮುನಿಸಿಪಾಲಿಟಿ ೨ ನೇ ವಾರ್ಡಿಗೆ ತಾ|| [illegible] ನೆ ದಿವಸ ನಡೆದ ಚುನಾವಣೆಯಲ್ಲಿ ಪ್ರಸಿದ್ಧರಾದ ಆಯಿಲ್ ಮಿಲ್ಲಿನ ಮಾಲಿಕರಾದ ಶ್ರೀಯುತ ಬಸಪ್ಪನವರು ಅಬ್ಬಿಗೇರಿ ಇವರ ಅಳಿಯಂದಿರಾದ ಶ್ರೀಮಾನ್ ಚನ್ನಪ್ಪನವರು ಹೊಸಗುಡಿ ಇವರು ಮೆಂಬರರಾಗಿ ಸರ್ವಾನುಮತದಿಂದ ಆರಿಸಿ ಬಂದರು. ಇವರು ತರುಣರು. ಕುಶಲಮತಿಗಳು. ಕಬ್ಬಿಣದ ದೊಡ್ಡ ವ್ಯಾಪಾರಿಗಳು. ಕಾರ್ಯದಕ್ಷತೆಯುಳ್ಳವರಿದ್ದುದರಿಂದಲೇ ಬಹು ಜನರ ಸಮ್ಮತಿಯಿಂದ ಆರಿಸಿ ಬಂದದ್ದು ಸಂತೋಷದಾಯಕವಾಗಿದೆ. ಮುಂದೆ ಇವರಾದರೂ ಪ್ರಜಾಹಿತ ಕಾರ್ಯಗಳನ್ನು ಮಾಡುತ್ತಾ ಅಭಿವೃದ್ಧಿಹೊಂದಲೆಂದು ಕೋರುತ್ತೇವೆ.

ಶ್ರೇಯೋಭಿಲಾಷಿ

ದುಃಖವಾರ್ತೆ

ಹೂಸಪೇಟೆ ಕಸಕೇರಿ ಮಠದ ವೇ|| ಕಡ್ಲಿ ಶಾಂಭಯ್ಯನವರ ಮಗನಾದ ಚಂಬಯ್ಯನು ತಾ|| [illegible] ನೇ ದಿವಸ ಮೃತನಾದನೆಂದು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ. ಈ ಬಾಲಕನು ಬಹಳ ಚಿಕ್ಕವಯಸ್ಸಿನವನಿದ್ದಾಗ್ಯೂ ಶ್ರೀಶ್ವ ಶಿವಭಕ್ತಿಯುಳ್ಳವನಾಗಿ ಸರ್ವದಾ ಸರಮಾತ್ಮನ ನಾಮಸ್ಮರಣೆಯನ್ನು ಮಾಡುತ್ತ ಸುಶೀಲಾದಿ ಗುಣಗಳಿಂದ ಕೂಡಿ ಜ್ಞಾನವೃದ್ಧನಾಗಿದ್ದನು. ಇಂಥ ಬಾಲಕನನ್ನು ಕಳೆದುಕೊಂಡ ಬಂಧುವರ್ಗದವರಿಗೆ ದುಃಖಶಮನವನ್ನೂ ಮೃತನ ಆತ್ಮಕ್ಕೆ ಶಾಂತಿಯನ್ನೂ ಇತ್ತು ಕಾಪಾಡಲೆಂದು ಈಶ್ವರನನ್ನು ಪ್ರಾರ್ಥಿಸುತ್ತೇನೆ.

ದುಃಖಭಾಗಿ

ಹಾನಗಲ್ಲ ತಾ|| ಮುಳವಳ್ಳಿ ವೇ|| ಸಂ|| ಕೊಟ್ಟೂರೇಶ್ವರ ಶಾಸ್ತ್ರಿಗಳ ಮಾತೃಶ್ರೀಯವರಾದ ಚನ್ನಬಸಮ್ಮನವರು ತಾ|| [illegible] ರಲ್ಲಿ ಶಿವೈಕ್ಯರಾದರೆಂದು ತಿಳಿಸಲು ವಿಷಾದವೆನಿಸುತ್ತದೆ. ಇವರು ಶಾಂತಸ್ವಭಾವದವರೂ ಆಚಾರಶೀಲರೂ ಧರ್ಮನಿಷ್ಠರೂ ಆಗಿದ್ದರು. ಮೃತರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ.

ದುಃಖಭಾಗಿ.

ಟ್ರುಕ್ ಮೇಲೆ ಮುತ್ತಿಗೆ

ಟ್ರುಕ್ ಎಂಬುದು ಕೆರೋಲೈನ್ ದ್ವೀಪಸ್ತೋಮದ ನಡುವೆ ಇರುವ ಭಾರಿ ಜಪಾನ್ ನೌಕಾ ಮೂಲ. ಇದರ ಮೇಲೆ ಮುತ್ತಿಗೆ ೩ ನೆಯ ತಾ|| ಬೆಳಗಿನ ಝಾವದಲ್ಲಿ ಮೊದಲಾಯಿತು. ವಿಶ್ವದಲ್ಲೆಲ್ಲ ಅತಿ ಬಲಯುತವೆನಿಸಿದ ನೌಕಾ ಮೂಲಗಳಲ್ಲಿ ಇದೂ ಒಂದು. ಈ ನೌಕಾ ಮೂಲದಲ್ಲಿ ೧೯ ಜಪಾನ್ ಹಡಗುಗಳು ಮುಳುಗಿದವೆಂದು ಪ್ರಕಟನೆ ಹೊರಟಿದೆ. ೨೦೧ ಜಪಾನ್ ವಿಮಾನಗಳನ್ನು ನಾಶಮಾಡಲಾಯಿತು. ಬಹುಶಃ ಇನ್ನೂ ಹಲವು ಜಪಾನ್ ಹಡಗುಗಳು ಮುಳುಗಿಸಲ್ಪಟ್ಟಿರಬಹುದು. ೫೦ ಕ್ಕಿಂತ ಹೆಚ್ಚು ವಿಮಾನಗಳು ನಷ್ಟಹೊಂದಿದವು. ಅಮೆರಿಕದ ಬಲವು ಅಲ್ಲಿಗ ಬರುವುದೆಂದ ಜಪಾನರು ಊಹಿಸಿಯೇ ಇರಲಿಲ್ಲ. "ತಾ|| ೨-೧೩-೪ ನಯ ದಿನ ಜಪಾನ್ ನೌಕಾದಳವು ಪರ್ಲ್ ಬಂದರಲ್ಲಿ ಮಾಡಿದ ಅನಾಮತ್ತಿನ ಧಾಳಿಗೆ ಟ್ರುಕ್‌ನಲ್ಲಿ ಪ್ರತೀಕಾರವೆಸಗಿದೆವು. ಜಪಾನರು ನಮ್ಮ ಮೇಲೆ ಹೊರಿಸಿದ ಸಾಲದಲ್ಲಿ ಸ್ವಲ್ಪ ಭಾಗವನ್ನು ತೀರಿಸಿದ್ದೇವೆ" ಎಂದು ಈ ಪ್ರಕಟನೆ ತಿಳಿಸುತ್ತದೆ. ಮುತ್ತಿಗೆಯಲ್ಲಿ ೧೭ ಅಮೆರಿಕನ್ ವಿಮಾನಗಳು ಮಾತ್ರ ಹಾಳಾದವು. ಒಂದು ಹಡಗಿಗೆ ಸ್ವಲ್ಪ ನಷ್ಟವಾಯಿತು ಎಂದು ಹೇಳಲಾಗಿದೆ.

ಮೈಸೂರು ಸಂಯ್ಯಾ ಕಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ರಾಚೋಟೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯರು ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಾಕ್ಷರರಸಾಕರರ್ ಸತತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿರೂಪಕರ್ ಸಕಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸ್ಥಳದವರಿಗೆ ೨ ರೂ. ಪರಸ್ಥಳದವರಿಗೆ ೩ ರೂ ೧೨ ಆಣೆ ವಿ. ಪಿ. ಖರ್ಚು ಸೇರಿ ೩ ರೂಪಾಯಿ

ಸಂಪುಟ ೧೪] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೬ನೇ ಮಾರ್ಚಿ ೧೯೪೪ [ಸಂಚಿಕೆ ೪೪

~~ಶ್ರೀ ಜಗದ್ಗುರು~~ ಪಂಡಿತಾರಾಧ್ಯಲಿಂಗೋದ್ಭವ ಮೂರ್ತಿಸ್ಥಾಪನಾ ಮತ್ತು ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಶುಭಾಗಮನ ಸೊಲ್ಲಾಪುರ

ಹೋಟಗೀ ಬೃಹನ್ಮಠಾಧ್ಯಕ್ಷ ನಿರತತಪಸ್ವೀ ಶ್ರೀ|| ಷ|| ಬ್ರ|| ಚನ್ನವೀರಶಿವಾಚಾರ್ಯಸ್ವಾಮಿಗಳವರು ~~[illegible]~~ ಶ್ರೀ ಜಗದ್ಗುರು ಪಂಡಿತಾರಾಧ್ಯರ ಲಿಂಗೋದ್ಭವಮೂರ್ತಿಯ ಸ್ಥಾಪನೆಯನ್ನು ~~[illegible]~~ ಶ್ರೀಮದ್ರಂಭಾಪುರೀ ಜಗದ್ಗುರುಗಳ ಅಮೃತಹಸ್ತದಿಂದ ನೆರವೇರಿಸಬೇಕೆಂಬ ಶ್ರೀಗಳ ಸಂಕಲ್ಪ ~~[illegible]~~ ಕಸಬಾ ಪೇಟೆಯ ವೀರಶೈವ ಪ್ರಮುಖ ಪಂಚಮಂಡಳಿಯವರು ಶ್ರೀರಂಭಾಪುರೀ ಜಗದ್ಗುರುಗಳನ್ನು ಅತ್ಯಂತ ಭಕ್ತಿಪೂರ್ವಕವಾಗಿ ಈ ಮಂಗಲಕಾರ್ಯವನ್ನು ನೆರವೇರಿಸಿಕೊಡಬೇಕೆಂದು ಬಿನ್ನವಿಸಿಕೊಂಡ ಮೇರೆಗೆ ಭಕ್ತರ ಬಿನ್ನಹವನ್ನು ಮಹಾ ಸನ್ನಿಧಿಯು ಅತ್ಯಂತ ಆನಂದದಿಂದ ಸ್ವೀಕರಿಸಿ ಮಿತ ಪರಿವಾರದೊಡನೆ ದಾವಣಗೆರೆ ಹುಬ್ಬಳ್ಳಿ ಮಾರ್ಗವಾಗಿ ಸೊಲ್ಲಾಪುರಕ್ಕೆ ತಾ|| ೩೦-೧-೪೪ ನೇ ಭಾನುವಾರ ಸಾಯಂಕಾಲ ಶ್ರೀ ರೇವಣಸಿದ್ಧೇಶ್ವರ ದೇವಾಲಯಕ್ಕೆ ಆಗಮಿಸಿದರು. ಅಲ್ಲಿ ರಾವಬಹದ್ದೂರ್ ನಾಗಪ್ಪಣ್ಣಾ ಅಬ್ದುಲ್ ಪೂರಕರ, ಶ್ರೀಮಂತ ಮಲ್ಲಿಕಾರ್ಜುನಪ್ಪ ಗಂಭೀರ, ಶ್ರೀಮಂತ ಮುತ್ತೆಪ್ಪ ಮೇಂಗಾಣೆ, ಶ್ರೀಮಂತ ಸಿದ್ಧರಾಮಪ್ಪ ವಾಕಳೆ, ರೇವಣಸಿದ್ಧಪ್ಪ ಹಿರೇಹಬ್ಬು, ಸಿದ್ದರಾಮಪ್ಪ ಬುಗುಡೆ ಇವರೇ ಮೊದಲಾದ ಪ್ರಮುಖರು ಶ್ರೀ ಮಹಾಸನ್ನಿಧಿಯನ್ನು ಸ್ವಾಗತಿಸಿದರು. ಅನಂತರ ಸಿದ್ಧರಾಮೇಶ್ವರನ ದೇವಸ್ಥಾನಕ್ಕೆ ದಯಮಾಡಿಸಿ ಮಂಗಲವಾಗಿ ಮಹಾಸವಾರಿಯು ಧೋಬಡೆಯವರ ಗೃಹದಲ್ಲಿ ಸಿದ್ಧಪಡಿಸಿದ್ದ ತಮ್ಮ ಬಿಡಾರಕ್ಕೆ ಮಂಗಲ ವಾದ್ಯಗಳೊಡನೆ ಬಿಜಯಂಗೈದರು.

ತಾ|| ೩-೨-೪೪ ನೇ ಪರಮ ಗುರುವಾರ ಪ್ರಾತಃಕಾಲ ಮೂರ್ತಿಯ ಸ್ಥಾಪನಾ ಕಾರ್ಯಕ್ರಮವು ಪ್ರಾರಂಭವಾಯಿತು. ಶ್ರೀ ಮಹಾಸನ್ನಿಧಿಯು ಪ್ರಾತಃಕಾಲದ ಅನುಷ್ಠಾನವನ್ನು ಪೂರೈಸಿಕೊಂಡು ಮೇಣಾದಲ್ಲಿ ವಾದ್ಯಗಳೊಡನೆ ಗುರುಕುಲಕ್ಕೆ ಆಗಮಿಸಿದರು. ಶ್ರೀ ವೀರಶೈವ ಗುರುಕುಲ ಪ್ರಧಾನಾಧ್ಯಾಪಕರಾದ ಸಾಹಿತ್ಯ ರತ್ನ ವೇ|| ಮ|| ಜಗದೀಶಶಾಸ್ತ್ರಿಗಳವರ ನೈತೃತ್ವದಲ್ಲಿ ಹೋಮ, ಶ್ರೀ ರುದ್ರ, ಲಿಂಗಸಂಸ್ಕಾರಾದಿ ಕಾರ್ಯಗಳು ವೇದೋಕ್ತವಾಗಿ ನೆರವೇರಿದನಂತರ ಶ್ರೀ ಮಹಾಸನ್ನಿಧಿಯವರು ಮಹಾ ಮಂತ್ರಪೂರ್ವಕ ಲಿಂಗೋದ್ಭವಮೂರ್ತಿಗೆ ಶಿವಕಳೆಯನ್ನು ತುಂಬಿ ಸ್ಥಾಪನೆಗೆ ಅಪ್ಪಣೆಯಿತ್ತರು. ಮೂರ್ತಿಸ್ಥಾಪನಾ ಕಾಲದಲ್ಲಿ ಒಂದು ವರ್ಷಪರ್ಯಂತರ ಸ್ವಹಸ್ತಾಕ್ಷರಗಳಿಂದ ಶ್ರೀಸ್ವರೂಪರು ಬರೆದ ಶ್ರೀ ಶಿವಪಂಚಾಕ್ಷರೀ ಮಂತ್ರದ ಪ್ರತಿಗಳನ್ನು ಆಯಾ ಯೋಗ್ಯತೆಗನುಸಾರವಾಗಿ ಸಮರ್ಪಿಸಲಾದ ಒಂದು ಸಾವಿರದ ನೂರೈವತ್ತು ಸುವರ್ಣ ನಾಣ್ಯಗಳನ್ನು ಭೂನ್ಯಾಸ ಮಾಡಿ ಅದರ ಮೇಲೆ ವಿದ್ಯಾರ್ಥಿಗಳ ವೇದಘೋಷದೊಡನೆಯೂ, ಜಗದಾಚಾರ್ಯರ ಜಯಕಾರದೊಡನೆಯೂ ಬಾಲಿಕೆಯರ ಮಂಗಲಾರತಿಯೊಡನೆಯೂ ಮೂರ್ತಿ ಸ್ಥಾಪನಾ ಕಾರ್ಯವು ನಿರ್ವಿಘ್ನವಾಗಿ ನೆರವೇರಿತು. ~~[illegible]~~ ಮಠದ ಮೂರು ಅಂತಸ್ತುಗಳಲ್ಲಿಯೂ ಮಂಗಲಮೂರ್ತಿಯ ಸ್ಥಾಪನೆಗಾಗಿ ಕುತೂಹಲರಾಗಿ ಜನರು ಕಿಕ್ಕಿರಿದು ನಿಂತಿದ್ದರು. ಇಲ್ಲಿಯ ಸದ್ಭಕ್ತರ ಭಕ್ತಿಗೆ ಮೆಚ್ಚಿದ ಶ್ರೀ ಜಗದ್ಗುರು ಪಂಡಿತಾರಾಧ್ಯರು ಮೂರ್ತಿಮತ್ತರಾಗಿ ಬೃಹನ್ಮಠದಲ್ಲಿ ಪ್ರತ್ಯಕ್ಷರಾದಂತೆ ತೋರುತ್ತಿತ್ತು. ಸರ್ವರೂ ಅತ್ಯಾನಂದದಿಂದ ಮೂರ್ತಿಯನ್ನು ಪೂಜಿಸಿ ಧನ್ಯರಾದರು.

೫ ನೆ ತಾರೀಖು ಶನಿವಾರ ಸಾಯಂಕಾಲ ಶ್ರೀ ಮಹಾಸನ್ನಿಧಿಯು ಗುರುಕುಲ ಸಂಚಾಲಕರ ಬಿನ್ನಹದ ಮೇರೆಗೆ ಮಂಗಲವಾದ್ಯದೊಡನೆ ಮಠಕ್ಕೆ ಆಗಮಿಸಿದರು. ಸೋಮವಾರ ಪ್ರಾತಃಕಾಲ ಶ್ರೀ ಹೋಟಗಿ ಶ್ರೀಗಳವರು ಶ್ರೀ ಜಗದ್ಗುರು ಮಹಾಸನ್ನಿಧಿಯ ಪಾದಪೂಜೆಯನ್ನು ಅತ್ಯಂತ ವೈಭವದಿಂದ ನೆರವೇರಿಸಿ ತೀರ್ಥಪ್ರಸಾದ ಸ್ವೀಕರಿಸಿದರು ~~[illegible]~~. ಆ ದಿನ ಸಾಯಂಕಾಲ ಎರಡು ತಿಂಗಳಿಂದಲೂ ಅವಿಚ್ಛಿನ್ನವಾಗಿ ನಡೆಯುತ್ತಿದ್ದ ಶ್ರೀ ಸಿದ್ಧರಾಮೇಶ್ವರ ಪುರಾಣಪ್ರವಚನವು ಸಮಾಪ್ತಿಗೊಂಡಿತು. ಬೆಂಗಳೂರು ಮಹಾಂತಿನ ಮಠಾಧ್ಯಕ್ಷ ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯಸ್ವಾಮಿಗಳವರ ಭಾಷಣವು ನಡೆಯಿತು. ಅನಂತರ ಶ್ರೀ ಭಗವತ್ಪಾದರು ಸದುಪದೇಶದ ಮೂಲಕ ಆಶೀರ್ವಾದವನ್ನಿತ್ತರು. ಅನಂತರ ಶ್ರೀ ಹೋಟಗಿ ಶ್ರೀಗಳು ಗುರುಕುಲದ ಪರಿಯಿಂದ ೫೦೧ ರೂಪಾಯಿಗಳ ಕಾಣಿಕೆಯನ್ನಿತ್ತರು. ಶ್ರೀ ರಂಭಾಪುರೀ ಪೀಠದ ಜೀರ್ಣೋದ್ಧಾರದ ಸಲುವಾಗಿ ವಾಕಳೆ ಸಿದ್ಧರಾಮಪ್ಪನವರು ಐದು ಸಹಸ್ರ ರೂಪಾಯಿಗಳನ್ನು ಕೊಡುತ್ತೇವೆಂದು ಇಪ್ಪತ್ತೈದು ಸಹಸ್ರ ರೂಪಾಯಿಗಳನ್ನು ಶ್ರೀಮದ್ವೀರಶೈವ ಗುರುಕುಲಕ್ಕೂ, ಮುತ್ತೆಪ್ಪ ಮೇಂಗಾಣೆಯವರು ಮೂರು ಸಹಸ್ರ ರೂಪಾಯಿಗಳನ್ನು ಅತ್ಯಂತ ಭಕ್ತಿಪೂರ್ವಕವಾಗಿ ಅರ್ಪಿಸಿದರು. ಅನಂತರ ಮಂಗಲವಾಗಿ ಅಂದಿನ ಕಾರ್ಯಕ್ರಮವು ಮುಕ್ತಾಯವಾಯಿತು.

ತಾ|| ೭ನೇ ಸೋಮವಾರದಿಂದ 9 ನೇ ಬುಧವಾರದವರೆಗೆ ಮೂರು ದಿನ ಅವಿಚ್ಛಿನ್ನವಾಗಿ ಪ್ರತಿನಿತ್ಯ ಸಾಯಂಕಾಲ ಮಠದ ಮುಂಭಾಗದಲ್ಲಿ ಹಾಕಿದ ಭವ್ಯ ಮಂಟಪದಲ್ಲಿ ಸಭಾಕಾರ್ಯಾದಿಗಳು ಅತ್ಯಂತ ವೈಭವದಿಂದ ನೆರವೇರಿದವು. ಬೆಂಗಳೂರು ಮಹಾಂತಿನ ಮಠಾಧ್ಯಕ್ಷ ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯಸ್ವಾಮಿಗಳು, ಹೋಟಗೀ ಬೃಹನ್ಮಠಾಧ್ಯಕ್ಷ ಶ್ರೀ|| ಷ|| ಬ್ರ|| ಚನ್ನವೀರಶಿವಾಚಾರ್ಯಸ್ವಾಮಿಗಳು, ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯ ಹೊರಬ, ಶ್ರೀ|| ಷ|| ಬ್ರ|| ಗುರುಸಿದ್ಧಶಿವಾಚಾರ್ಯ ಬೂದಿಹಾಳ, ರಾವ್ ಬಹದ್ದೂರ್ ನಾಗಪ್ಪಣ್ಣ ಅಬ್ದುಲ್ ಪೂರಕರ, ಶ್ರೀ ಭಾಸ್ಕರ ಜಯದೇವರಾವ ಪಂಡಿತರು ಇವರೇ ಮೊದಲಾದವರು ಗುರು, ಜಗದ್ಗುರು, ವೀರಶೈವ ಮತಸ್ಥಾಪಕರು, ಭಕ್ತಿ, ಧರ್ಮ ಇವೇ ಮೊದಲಾದ ಧಾರ್ಮಿಕ ವಿಷಯಗಳ ಮೇಲೆ ಭಾಷಣಮಾಡಿದರು. ಶ್ರೀ ಜಗದ್ಗುರು ಭಗವತ್ಪಾದರು ಲೌಡಸ್ಪೀಕರ ಮೂಲಕ ದಿವ್ಯ ಅಮೋಘ ವಾಗ್ಝರಿಯಿಂದ ಧರ್ಮೋಪದೇಶಮಾಡಿದರು. ಈ ದಿನಗಳ ಶಬ್ದವು ಪರ ದಿಕ್ಕುಗಳನ್ನು ವ್ಯಾಪಿಸಿತ್ತು. ದೂರದಲ್ಲಿ ನಿಂತುಕೊಂಡು ಕೇಳುತ್ತಿದ್ದ ವಿರೋಧಿಗಳು ಸಹ ತಾವು ಧರ್ಮ ವಿರೋಧವಾಗಿ ನಡೆಯುತ್ತಿರುವುದು ಬಹು ತಪ್ಪೆಂದು ಹೃದಯದಲ್ಲಿಯೇ ನೊಂದುಕೊಂಡು ಮಹಾ ಸನ್ನಿಧಿಯ ದರ್ಶನಾಶೀರ್ವಾದವನ್ನು ಹೊಂದಿ ಹೋಗುತ್ತಿದ್ದರು. ನಾಸ್ತಿಕರು ಆಸ್ತಿಕರಾಗುತ್ತಿದ್ದರು. ಮಹಾತ್ಮರ ದರ್ಶನದ ಪ್ರಭಾವವೇ ಇಂಥಾದ್ದು. ಇಂಥಾ ಧರ್ಮೋಪದೇಶದ ಮಂಗಲಕಾರ್ಯವು ಬಹು ಅತ್ಯುಹಾಸದಿಂದ ನೆರವೇರಿತು.

೧೦ನೇ ತಾರೀಖು ಗುರುವಾರ ಶ್ರೀ ಸಿದ್ಧರಾಮೇಶ್ವರಪುರಾಣ ಸಮಾಪ್ತಿಯು, ೧೨ನೇ ಶನಿವಾರ ಅದೇ ಭವ್ಯಮಂಟಪದಲ್ಲಿ ಶ್ರೀ ಮಹಾಸನ್ನಿಧಿಗೆ ಶ್ರೀ ಗುರುಕುಲ ಸಂಚಾಲಕರಾದ ಶ್ರೀ ರಾವ್ ಬಹದ್ದೂರ್ ನಾಗಪ್ಪಣ್ಣನವರು ವಿಜ್ಞಾಪನಾ ಪತ್ರಿಕೆಯನ್ನು ಓದಿ ಬೆಳ್ಳಿಕರಂಡದಲ್ಲಿ ಅರ್ಪಿಸಿದರು. ಸೌ|| ಮಾತೃಶ್ರೀ ಭಾಗೀರಥಿಬಾಯಿಯವರು ಗುರೂಪದೇಶದ ಆವಶ್ಯಕತೆಯ ಮೇಲೆ ಭಾಷಣ ಮಾಡಿದರು. ವೀರಶೈವ ಸದಾಚಾರ ಶ್ರೀ ಸಮಾಜದ ಬಾಲಿಕೆಯರಾದ ಕು|| ಗೌರೀಬಾಯಿ ಕಟಾಪ ಕು|| ಶಾಂತಾಬಾಯಿ ಮೊಳಗೆ ಇವರು ವೀರಶೈವ ಧರ್ಮದ ಬಗ್ಗೆ ತತ್ವಗಳಿಂದ ಕೂಡಿದ ಸಂವಾದವನ್ನು ಮಾಡಿದರು. ಶ್ರೀ ರಾವ್ ಬಹದ್ದೂರ್ ನಾಗಪ್ಪಣ್ಣನವರು ಪ್ರತಿಯೊಬ್ಬ ಬಾಲಿಕೆಯರಿಗೆ ಐವತ್ತೊಂದು ರೂಪಾಯಿಗಳನ್ನು ಕೊಟ್ಟರು. ಅನಂತರ ಚಿತ್ರಕಲಾಕುಶಲರಾದ ಬಾಬೂರಾವ್ ಚಾಲಕೇರಿ ಇವರಿಂದ ನಿರ್ಮಿಸಲ್ಪಟ್ಟ ಶ್ರೀ ಜಗದ್ಗುರು ರೇಣುಕಮೂರ್ತಿಯನ್ನು ಶ್ರೀ ಮಹಾ ಸನ್ನಿಧಿಗೂ, ಶ್ರೀ ಸಿದ್ಧರಾಮೇಶ್ವರ ಮೂರ್ತಿಯನ್ನು ರಾವ್ ಬಹದ್ದೂರ್ ನಾಗಪ್ಪಣ್ಣನವರಿಗೂ, ಅರ್ಪಿಸಿದ ಮೇಲೆ ಶ್ರೀಭಗವತ್ಪಾದರು ವಿಜ್ಞಾಪನಾ ಪತ್ರಿಕೆಗೆ ಉತ್ತರವನ್ನಿತ್ತು ಆಶೀರ್ವದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

(೨ನೇ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೪ನೆಯ ಮಾರ್ಚಿ ತಾ|| ೬ನೇ ಸೋಮವಾರ

ಮನೋನಿಗ್ರಹ

ಈಶ್ವರನಿಂದ ಸೃಷ್ಟವಾದ ಪ್ರಪಂಚದಲ್ಲಿರುವ ಲಕ್ಷೋಪಲಕ್ಷ ಪ್ರಾಣಿಗಳಲ್ಲಿ ಮಾನವನೇ ಶ್ರೇಷ್ಠನೆಂದು ಅನುಭವದಿಂದಲೂ ಶಾಸ್ತ್ರದಿಂದಲೂ ಗೊತ್ತಾಗುತ್ತದೆ. ಮನುಷ್ಯನಿಗೆ ಪುಣ್ಯಪಾಪಗಳ ವಿಚಾರವಿರುವಂತೆ ಇತರ ಯಾವ ಪ್ರಾಣಿಗೂ ಇರುವುದಿಲ್ಲ ಇದು ಪುಣ್ಯಕಾರ್ಯವು ಇದು ಪಾಪಕಾರ್ಯವು ಎಂಬ ವಿಭಾಗವನ್ನೂ ಇವುಗಳ ಫಲಾಫಲಗಳನ್ನೂ ಈಶ್ವರನೇ ತೋರಿಸಿರುತ್ತಾನೆ. ರಾಜನು ಪ್ರಜಾಸೌಕರ್ಯಕ್ಕಾಗಿ ಮಾಡಿರುವ ಶಾಸನಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಶಿಕ್ಷೆಯನ್ನು ವಿಧಿಸುವಂತೆ ದೇವರು ಮಾನವೋದ್ಧಾರಕ್ಕಾಗಿ ನಿರ್ಮಿಸಿದ ಪುಣ್ಯಪಾಪಮಾರ್ಗವನ್ನತಿಕ್ರಮಿಸಿ ನಡೆಯುವವರನ್ನು ಶಿಕ್ಷಿಸುವನು. ಈ ಪುಣ್ಯಪಾಪಮಾರ್ಗಗಳೆರಡೂ ಈಶ್ವರೋಕ್ತಗಳಾದ ವೇದಗಳಲ್ಲಿ ವಿಶದವಾಗಿ ಹೇಳಲ್ಪಟ್ಟಿರುತ್ತವೆ ಈ ಎರಡು ಮಾರ್ಗಗಳಲ್ಲಿ ಪುಣ್ಯಮಾರ್ಗದಲ್ಲಿ ಪ್ರಯಾಣಮಾಡುವವನು ಪುಣ್ಯಲೋಕವನ್ನೂ, ಪಾಪಮಾರ್ಗದಲ್ಲಿ ಪ್ರವೇಶಿಸುವವನು ಪಾಪಲೋಕವನ್ನೂ ಸೇರುವನೆಂದೂ, ಪುಣ್ಯಲೋಕವು ಸುಖಕರವೆಂದೂ, ಪಾಪಲೋಕವು ದುಃಖಕರವೆಂದೂ, ಪ್ರತಿಯೊಬ್ಬ ಮನುಷ್ಯನು ತಿಳಿದಿದ್ದರೂ ಮನಸ್ಸು ಪಾಪಮಾರ್ಗದಲ್ಲಿ ಪ್ರವೇಶಿಸದಿರಬೇಕೆಂಬ ಇದರ ಕಾರಣವೇನೆಂದು ನಾವು ಆಲೋಚಿಸಬೇಕಾಗಿರುತ್ತದೆ. ಬಹುಕಾಲದಿಂದ ನಮ್ಮ ಮನಸ್ಸು ಚಕ್ಷುರಾದಿ ಇಂದ್ರಿಯಗಳೊಡನೆ ಸೇರಿಕೊಂಡು ಲೌಕಿಕವಿಷಯಗಳನ್ನು ಅನುಭವಿಸಿಕೊಂಡು ಬಂದಂತೆ ಪಾರಮಾರ್ಥಿಕ ವಿಷಯವನ್ನು ಅನುಭವಿಸಿಕೊಂಡು ಬಂದಿರುವುದಿಲ್ಲ. ಮನಸ್ಸಾದರೂ ನೀರಿನಂತೆ ಬಹು ಹಗುರವಾದ ವಸ್ತುವಾಗಿರುತ್ತದೆ ನೀರು ಯಾವ ಯಾವ ಸ್ಥಳದಲ್ಲಿ ಬೀಳುವುದೋ ಆಯಾಯ ಆಕಾರದಿಂದಲೇ ಕಂಡುಬರುವಂತೆ ನಮ್ಮ ಅಂತರಿಂದ್ರಿಯವು ಬಹಿರಿಂದ್ರಿಯ ದ್ವಾರಾ ಯಾವ ಯಾವ ಪದಾರ್ಥಗಳ ಮೇಲೆ ಬೀಳುವುದೋ ಆಯಾಯ ಪದಾರ್ಥಗಳ ಆಕಾರವಾಗಿಯೇ ಪರಿಣಮಿಸುತ್ತದೆ. ನಮ್ಮ ಹೃದಯವೆಂಬ ಸ್ವಚ್ಛ ಸರೋವರದಲ್ಲಿ ತುಂಬಿರುವ ಜ್ಞಾನವೆಂಬ ನೀರು ಹೊರಗೆ ಹರಿದುಹೋಗಲು ಕಣ್ಣು, ಮೂಗು, ಬಾಯಿ, ಚರ್ಮ, ಕಿವಿ ಎಂಬ ಐದು ಬಹಿರಿಂದ್ರಿಯಗಳು ಕಾಲುವೆಗಳಾಗಿರುತ್ತವೆ. ಈ ಇಂದ್ರಿಯಗಳೆಂಬ ಕಾಲುವೆಗಳ ಪ್ರಜ್ಞಾಶಕ್ತಿಯು ನಷ್ಟವಾಗುತ್ತ ಬಂದ ಹಾಗಲ್ಲಾ ಹೃದಯವು ಬರಿದಾಗುತ್ತ ಬರುತ್ತದೆ.

ಇಂದ್ರಿಯಾಣಾಂತು ಸರ್ವೇಷಾಂ ಯದ್ಯೇಕಂ ಕ್ಷರತೀಂದ್ರಿಯಂ |
ತೇನಾಸ್ಯ ಕ್ಷರತಿ ಪ್ರಜ್ಞಾ ದೃತೇಃ ಪಾದಾದಿವೋದಕಂ ||

ಚರ್ಮದ ತಿತ್ತಿಯಲ್ಲಿ ತುಂಬಿದ್ದ ನೀರು ಆ ಚರ್ಮದ ತಿತ್ತಿಯ ಯಾವುದಾದರೊಂದು ಭಾಗದಲ್ಲಿ ಸೂಜಿಯ ಮೊನೆಯಷ್ಟು ತೂತುಬಿದ್ದರೂ ಸಹ ಆ ತೂತಿನಿಂದ ಒಳಗೆ ತುಂಬಿದ ನೀರೆಲ್ಲಾ ಕ್ರಮವಾಗಿ ಸೋರಿಹೋಗಿ ಚರ್ಮದ ಚೀಲವು ಬರಿದಾಗುವಂತೆ, ಇಂದ್ರಿಯಗಳಲ್ಲಿ ಯಾವುದಾದರೊಂದು ಇಂದ್ರಿಯವು ವಿಷಯಕ್ಕೆರಗಿದರೂ ನಿಸ್ಸಾರನಾಗಿ ಹೋಗುತ್ತಾನೆ ಎಂದು ಧರ್ಮಶಾಸ್ತ್ರವು ಇಂದ್ರಿಯದೌರ್ಬಲ್ಯದಿಂದಾಗುವ ಅನರ್ಥವನ್ನು ಚನ್ನಾಗಿ ಪ್ರತಿಪಾದಿಸಿರುತ್ತದೆ. ಆದ್ದರಿಂದ ಜ್ಞಾನಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂಬವನು ಆದಷ್ಟುಮಟ್ಟಿಗೆ ಅಂತರಿಂದ್ರಿಯ ಬಹಿರಿಂದ್ರಿಯಗಳನ್ನು ದುರ್ವಿಷಯಗಳಲ್ಲಿ ಪ್ರವೇಶವಾಗದಂತೆ ನೋಡಿಕೊಳ್ಳುವುದೊಂದು ಮಾನವನ ಮುಖ್ಯ ಕರ್ತವ್ಯವಾಗಿರುತ್ತದೆ "ಜ್ಞಾನಾದೇವ ತು ಕೈವಲ್ಯಂ" ಎಂಬುಕ್ತಿಯಂತೆ ಮೋಕ್ಷಕ್ಕೆ ಜ್ಞಾನವೇ ಸಾಕ್ಷಾತ್ ಕಾರಣವು ಈ ಶರೀರವೆಂಬ ಘಟದಲ್ಲಿ ಜ್ಞಾನವೆಂಬ ಸ್ವಚ್ಛನೀರು ಎಷ್ಟರಮಟ್ಟಿಗೆ ತುಂಬುತ್ತ ಬರುವುದೋ ಅಷ್ಟರಮಟ್ಟಿಗೆ ಬಹುಕಾಲದಿಂದ ಸುವರ್ಣದಲ್ಲಿ ಮಾಲಿನ್ಯವು ಸೇರಿರುವಂತೆ ಆತ್ಮನನ್ನು ಆವರಿಸಿರುವ ಮಲಗಳು ದೂರವಾಗಿ ಪರಮಾತ್ಮನಂತೆ ಆತನೂ ಕೂಡ ಸರ್ವಜ್ಞತ್ವಾದಿ ಗುಣಗಳಿಂದ ಪ್ರಕಾಶಿಸುವನು. ಇಂಥ ಮೋಕ್ಷಸಾಧಕವಾದ ಜ್ಞಾನಾಭಿವೃದ್ಧಿಗೆ ಮನಸ್ಸಂಯಮನವೇ ಕಾರಣವು ಆ ಮನಸ್ಸಂಯಮನಕ್ಕಾದರೂ ಚಕ್ಷುರಾದಿ ಬಾಹ್ಯೇಂದ್ರಿಯಗಳ ನಿಗ್ರಹವೇ ಕಾರಣವು ಬಾಹ್ಯೇಂದ್ರಿಯಗಳ ನಿಗ್ರಹಮಾಡದವನು ಮನೋನಿಗ್ರಹ ಮಾಡಲಾರನು. ಮನೋನಿಗ್ರಹ ವಿಲ್ಲದವನು ಜ್ಞಾನಶೂನ್ಯನಾಗುವನು ಜ್ಞಾನಶೂನ್ಯನಾದವನಿಗೆ ಮೋಕ್ಷವೆಂಬುವುದು ಗಗನಕುಸುಮವೇ ಸರಿ

ವಶೇ ಕೃತ್ವೇಂದ್ರಿಯಗ್ರಾಮಂ ಸಂಯಮ್ಯ ಚ ಮನಸ್ತಥಾ |
ಸರ್ವಾನ್ ಸಂಸಾಧಯೇದರ್ಥಾನ್ ಕ್ಷಿಣ್ವನ್ ಯೋಗತಸ್ತನುಂ |

ಎಂದು ಧರ್ಮಶಾಸ್ತ್ರವು ಸಕಲ ಪುರುಷಾರ್ಥಗಳ ಸಿದ್ಧಿಗೂ ಇಂದ್ರಿಯವಶೀಕರಣವೇ ಸಾಧನವೆಂದು ಸ್ಪಷ್ಟಪಡಿಸಿರುತ್ತದೆ ಮತ್ತು

ಇಂದ್ರಿಯಾಣಾಂ ವಿಚರತಾಂ ವಿಷಯೇಷ್ವಪಹಾರಿಷು |
ಸಂಯಮೇ ಯತ್ನಮಾತಿಷ್ಠೇತ್ ವಿದ್ವಾನ್ ಯಂತೇವ ವಾಜಿನಾಂ ||

ಯಜಮಾನನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ರಥವನ್ನು ನಡೆಸುವ ಜವಾನನು ರಥಕ್ಕೆ ಕಟ್ಟಿದ ಅಡ್ಡಡ್ಡವಾಗಿ ಎಳೆಯುತ್ತಿರುವ ಮದಿಸಿದ ಕುದುರೆಗಳನ್ನು ಎಳೆದು ಹಿಡಿದು ಹಾಗೆ ತಂಮ ರಥದಲ್ಲಿರುವ ಒಡೆಯನನ್ನು ರಕ್ಷಿಸಿಕೊಳ್ಳುವಂತೆ ಯಾವಾಗಲೂ ವಿಷಯಗಳಲ್ಲಿ ಲೋಲುಗಳಾಗಿ ಧರ್ಮಮಾರ್ಗವನ್ನು ಬಿಟ್ಟು ಅಡ್ಡವಾಗಿ ನುಗ್ಗುತ್ತ ಬಂದಿರುವ ಈ ಇಂದ್ರಿಯಗಳನ್ನು ತಡೆದು ಧರ್ಮಮಾರ್ಗದಲ್ಲಿ ಹೋಗುವಂತೆ ಮಾಡಿ ಶರೀರದಲ್ಲಿರುವ ಆತ್ಮನನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುವುದೇ ಬುದ್ಧಿಶಕ್ತಿಯ ಕರ್ತವ್ಯವಾಗಿದೆ

ಇಂದ ಆತ್ಮನ ಪವಿತ್ರತೆಗೆ ಸಾಧಕಗಳಾದ ಚಕ್ಷುರಾದಿ ಜ್ಞಾನೇಂದ್ರಿಯಗಳು ಆದಷ್ಟುಮಟ್ಟಿಗೆ ದುರ್ವ್ಯಾಪಾರಗಳಲ್ಲಿ ಪ್ರವೇಶಿಸದೆ ಸದ್ವ್ಯಾಪಾರದಲ್ಲಿ ಪ್ರವೇಶಿಸುವ ಮೂಲಕ ಆತನು ತನ್ನ ಪಾವಿತ್ರ್ಯವನ್ನು ತಿಳಿದುಕೊಳ್ಳುವುದಕ್ಕಾಗಿ ಈಶ್ವರಾಜ್ಞೆಯನ್ನು ಅನುಸರಿಸಿ ಒಬೊಬ್ಬ ಪೂರ್ವಾಚಾರ್ಯರು ಒಂದೊಂದು ಉಪಾಸ್ಯಮೂರ್ತಿಯನ್ನು ಕಲ್ಪಿಸಿಕೊಟ್ಟಿರುತ್ತಾರೆ.

ಪ್ರಪಂಚದಲ್ಲಿರುವ ಪ್ರತಿಯೊಬ್ಬ ಮಾನವನೂ ತಮ್ಮ ತಮ್ಮ ಪೂರ್ವಾಚಾರ್ಯರು ಹಾಕಿಕೊಟ್ಟಿರುವ ಸಂಪ್ರದಾಯವನ್ನು ಅನುಸರಿಸುತ್ತಾನಲ್ಲದೆ ಯಾವುದೊಂದು ಸಂಪ್ರದಾಯವನ್ನೂ ಅನುಸರಿಸದ ಮಾನವನು ಲೋಕದಲ್ಲಿ ಕಂಡುಬರುವುದೇ ಇಲ್ಲ. ಪ್ರತಿಯೊಬ್ಬ ಪೂರ್ವಾಚಾರ್ಯರೂ, ದೇವರುಂಟೆಂದೂ, ಪುಣ್ಯ ಪಾಪಗಳುಂಟೆಂದೂ, ಪಾಪಾಚರಣೆಯಿಂದ ದೇವರು ಪ್ರೀತಿಸುವುದಿಲ್ಲವೆಂದೂ, ಪುಣ್ಯಾಚರಣೆಯಿಂದ ದೇವರು ಪ್ರೀತಿಸುತ್ತಾನೆಂದೂ ಹೇಳಿದ್ದರೂ ಪತಂಗವು ಹಣ್ಣೆಂದು ಭ್ರಮಿಸಿ ದೀಪದ ಮೇಲೆ ಬಿದ್ದು ನಾಶಹೊಂದುವಂತೆ ಪರಿಣಾಮದಲ್ಲಿ ದುಃಖಕರವೆಂದು ತಿಳಿಯದೆ, ಸುಖದಂತೆ ತೋರಿಬರುವ ದುಷ್ಟವಿಷಯಗಳನ್ನು ಕಣ್ಣಿನಿಂದ ನೋಡಿ ಕಿವಿಯಿಂದ ಕೇಳಿ ಮನಸ್ಸನ್ನು ತದಾಕಾರವನ್ನಾಗಿ ಮಾಡಿಕೊಂಡಿರುವುದರಿಂದ ಆತ್ಮನು ಪರಮಾತ್ಮಚಿಂತನೆಗೆ ಬದಲಾಗಿ ದುರ್ವಿಷಯಚಿಂತನೆಯಲ್ಲಿಯೇ ಲೋಲನಾಗಿರುತ್ತಾನೆ. ಇದರಿಂದ ತನ್ನಲ್ಲಿರುವ ಸ್ವಾಭಾವಿಕವಾದ ಆಧ್ಯಾತ್ಮಿಕಶಕ್ತಿಯು ಮುದುಗಿಹೋಗಿ ಕೇವಲ ಲೌಕಿಕ ಪುರುಷನೆನಿಸಿಕೊಂಡಿರುತ್ತಾನೆ. ಇಂಥ ಆಧ್ಯಾತ್ಮಿಕಶಕ್ತಿಯನ್ನು ಕಳೆದುಕೊಂಡ ಪುರುಷರ ಸಂಖ್ಯೆಯೇ ಹೆಚ್ಚಾಗಿ ಕಂಡುಬರುತ್ತದೆ ಇಂಥವರಿಗೆ ದೇವರನ್ನು ಕಂಡರಾಗುವುದಿಲ್ಲ ದೇವರ ಆಜ್ಞಾರೂಪಗಳಾದ ವೇದಗಳನ್ನೂ ಅವುಗಳನ್ನು ಉಪದೇಶಿಸುತ್ತಿರುವ ಗುರುಗಳನ್ನೂ ಕಂಡರಂತೂ ಆಗುವುದೇ ಇಲ್ಲ ಸಂಪ್ರದಾಯ ನಿಬಂಧನೆಗಳನ್ನು ಪಿಶಾಚಗಳನ್ನು ಕಂಡಂತೆ ಕಾಣುವರು. ಇಂಥ ವಿಪರೀತ ವರ್ತನೆಗಳಿಗೆ ಈಗಿನ ವಿಷಯವ್ಯಾಮೋಹದಿಂದ ಮನಸ್ಸಂಯಮನಶಕ್ತಿಯು ಕುಂಠಿತವಾಗಿರುವುದೇ ಕಾರಣವೆಂದು ಸ್ಪಷ್ಟವಾಗುತ್ತದೆ

ಯುದ್ಧವಾರ್ತೆ.

ಜಪಾನು ಶರಣಾಗತವಾಗುವುದೇ

ಜಪಾನು "ಕಟ್ಟಕಡೇ ಯೋಧನು ಉಳಿದಿರುವವರೆಗೆ" ಕಾದುವುದಿಲ್ಲ, ೧೯೪೬ರ ಕಡೆಯವರೆಗೋ ೧೯೪೭ರ ನೊವೆಂಬರಲ್ಲೋ ಶರಣಾಗತವಾಗುತ್ತದೆ ತೀರ ಅನಿರೀಕ್ಷಿತವಾದದ್ದೇನೂ ನಡೆಯದೇ ಹೋದರೆ, ಜಪಾನರು ಶರಣಾಗತವಾಗಬಹುದಾದ ತೀರ ಹತ್ತಿರದ ದಿನವೆಂದರೆ ೧೯೪೬ರ ಅಂತ್ಯ. ಅದರೆ ಜಪಾನರು ಮೊದಲು ಶಾಂತಿಸಂಧಾನ ನಡೆಸುವುದರ ಮೂಲಕ ಯುದ್ಧದಿಂದ ಪಾರಾಗಲು ಪ್ರಯತ್ನಿಸುವರು ಎಂಬುದಾಗಿ ದೂರ ಪೂರ್ವ ವಿಚಾರಗಳಲ್ಲಿ ನಿಪುಣರಾದ ಡಾ|| ವಿಲಿಯಂ ಜಾನ್‌ಸನ್‌ರವರು ತಿಳಿಸಿದ್ದಾರೆ

ನಾರ್ವಾ ಬಳಿ ರಷ್ಯನರು ಶತ್ರು ವ್ಯೂಹ ಭೇದಿಸಿದಾರೆ

ಬಾಲ್ಟಿಕ್ ತೀರದ ದೇಶಗಳ ಆಕ್ರಮಣಕ್ಕಾಗಿ ಇಂದು ಚುರುಕಿನಿಂದ ಕದನ ನಡೆಯುತ್ತಿದೆ ರಷ್ಯನರು ೨೦೦ ಮೈಲಿ ಅಗಲದಲ್ಲಿ ಮುಂದೆ ನುಗ್ಗುತ್ತಿದ್ದಾರೆ. ಎರಡು ಬಲಯುತವಾದ ಸೇನೆಗಳು ನಾರ್ವಾ ಮತ್ತು ಪ್ಸಕೋವ್ ನಗರಗಳನ್ನು ಮುತ್ತಿವೆ. ಮೂರನೆಯದು ಲಟ್ವಿಯಾ ಗಡಿ ಕಡೆ ನುಗ್ಗುತ್ತಿದೆ. ಈಗ ಗಡಿಯಿಂದ ಕೇವಲ ೩೦ ಮೈಲಿ ದೂರದಲ್ಲಿದೆ. ನಾರ್ವಾ ನಗರದ ಸ್ನೀಗ ರಷ್ಯನರು ಸುತ್ತುವರಿದಿದಾರೆ. ಸಮುದ್ರ ತೀರದ ದಾರಿಯೊಂದೇ ಅಲ್ಲಿನ ಜರ್ಮನ್ ಸೇನೆಗೆ ಹಿಮ್ಮೆಟ್ಟಲು ಇರುವ ದಾರಿ ಬಿಳಿ ರಷ್ಯದಲ್ಲಿ ಜರ್ಮನರ ಮುಖ್ಯ ಮೂಲವಾಗಿರುವ ವೈಟಿಪ್ಸ್ಕನಲ್ಲಿ ಶತ್ರುಗಳ ಸ್ಥಿತಿ ಕ್ರೂರವಾಗುತ್ತಿದೆ

ಹಗಲಲ್ಲೇ ಲಂಡನ್ ಮೇಲೆ ಮುತ್ತಿಗೆ

7 ತಿಂಗಳ ನಂತರ ಮೊಟ್ಟಮೊದಲು ಕಳೆದ ೨೪ ನೆಯ ತಾರೀಖು ಲಂಡನ್ ಮೇಲೆ ಹಗಲಲ್ಲಿ ಮುತ್ತಿಗೆ ನಡೆಯಿತು ಎರಡು ವಿಮಾನಗಳು ಬಹಳ ಎತ್ತರದಲ್ಲಿ ಹಾರುತ್ತಿದ್ದುದು ಕಾಣಬಂತು. ಅನೇಕ ಅಗ್ನಿವರ್ಧಕ ಬಾಂಬುಗಳು ಬಿದ್ದವು. ಹಲವೆಡೆ ಬೆಂಕಿ ಹತ್ತಿಕೊಂಡಿತು. ಫಿರಂಗಿಗಳ ಏಟಿನಿಂದ ನಾಶವಾದ ವಿಮಾನವೊಂದರಿಂದ ಶತ್ರು ವೈಮಾನಿಕನೊಬ್ಬ ಪ್ಯಾರಾಚೂಟ್ ಸಹಾಯದಿಂದ ಇಳಿಯುತ್ತಿದ್ದುದು ಕಾಣಬಂತು. ಲಂಡನ್ನಿನ ಒಂದು ಜಿಲ್ಲೆಯಲ್ಲಿ ಪ್ರಪಂಚದ ಮೂಲೆ ಮೂಲೆಯಿಂದ ತರಿಸಿ ಸಂಗ್ರಹಿಸಿದ್ದ ಕಲಾವಸ್ತುಗಳೂ ಸ್ಮಾರಕಗಳೂ ನಾಶವಾದವು ಕೂಲಿಗಾರರ ನಿವಾಸ ಕ್ಷೇತ್ರವೊಂದಕ್ಕೆ ಬಾಂಬು ಬಿದ್ದು ತುಂಬಾ ಹಾನಿಯಾಯಿತು. ಅನೇಕ ಮಂದಿ ನಾಶವಾದ ವಸ್ತುಗಳ ಅಡಿ ಹೂತು ಹೋದರು. ಮರುದಿವಸ ಜೆಲ್ಲಿಗೆ ರಾಶಿ ಬಿದ್ದಿದ್ದ ವಸ್ತುಗಳನ್ನು ತೆಗೆವಾಗ ಅನೇಕರು ಜೀವಂತವಾಗಿಯೇ ಇದ್ದರು ಗುರುವಾರ ರಾತ್ರಿ ಬ್ರಿಟನ್ನಿನಲ್ಲಿ ಒಂಬತ್ತು ಶತ್ರು ವಿಮಾನಗಳನ್ನು ನಾಶಮಾಡಲಾಯಿತು ಲಂಡನ್ ಜಿಲ್ಲೆಯಲ್ಲಿ ಒಂದು ಕಡೆ ಭಯಂಕರ ಬೆಂಕಿ ಆರಂಭವಾಗಿತ್ತು. ಶ್ರೀ ಚರ್ಚಿಲ್ಲರು ಅಲ್ಲಿಗೆ ಭೇಟಿ ಕೊಟ್ಟರು.

ಗೋಥಾ ಮೇಲೆ ಮುತ್ತಿಗೆ

ಕಳೆದ 24 ನೆಯ ತಾರೀಖು ಹಗಲಿನಲ್ಲಿಯೇ ಅಮೆರಿಕನ್ ವಿಮಾನಗಳು ಜರ್ಮನಿಯ ಮೇಲೆ ಮುತ್ತಿಗೆ ನಡೆಸಿ, ಗೋಥಾದಲ್ಲಿರುವ ವಿಮಾನ ನಿರ್ಮಾಣ ಕಾರ್ಖಾನೆ ಮೇಲೆ ಬಾಂಬಿನ ಮಳೆ ಸುರಿಸಿದವು ಒಂದು ಜೆಲ್ಲಿಗೆ ಉತ್ತರ ಫ್ರಾನ್ಸಿನಲ್ಲಿರುವ ಮಿಲಿಟರಿ ಸ್ಥಾನಗಳ ಮೇಲೆ ಸಹ ಮುತ್ತಿಗೆ ನಡೆಸಲಾಯಿತು. ಅಂತೂ ಈಗ ನಾಲ್ಕು ದಿನಗಳಿಂದ ಎಡಬಿಡದೆ ಜರ್ಮನ್ ಫೈಟರ್ ವಿಮಾನ ಕಾರ್ಖಾನೆಗಳ ಮೇಲೆ ಪ್ರಹಾರ ನಡೆಸಲಾಯಿತು. ಇಂದು ಗೋಥಾಮೇಲೆ ಮುತ್ತಿಗೆ ನಡೆಸಿದ 49 ಅಮೆರಿಕನ್ ಬಾಂಬರುಗಳು ಪತ್ತೆಯಿಲ್ಲ.

ಇಟಲಿಯಲ್ಲಿ ಕದನ ಇಳಿಮುಖವಾಗಿದೆ

ಐದನೇ ಸೇನೆಯ ಆನ್ಜಿಯೋ ರಂಗದಲ್ಲಿ ಹಲವೆಡೆ ಉಗ್ರ ಘರ್ಷಣೆಯಾಯಿತು. ಐದನೇ ಸೇನೆಯ ಮೂಲ ರಂಗ ಪ್ರಶಾಂತವಾಗಿದೆ. ೮ ನೇ ಸೇನೆಯ ಮುಂಗಾವಲು ಪಡೆಗಳವರು ಅಲ್ಲಲ್ಲಿ ಶತ್ರುಗಳನ್ನು ಎದುರಿಸಿ, ನಷ್ಟವುಂಟು ಮಾಡಿದರು. ಆನ್ಜಿಯೋ ರಂಗದಲ್ಲಿ ಹೋರಾಟ ಇಳಿಮುಖವಾಗುತ್ತಿರುವುದನ್ನು ಕಂಡರೆ ಕಳೆದ ಶನಿವಾರ ಜರ್ಮನರಿಗೆ ಆದ ಸೋಲು ನಾವೆಲ್ಲ ಊಹಿಸಿದ್ದಕ್ಕಿಂತ ಉಗ್ರವಾಗಿಯೇ ಇದೆಯೆಂದು ತಿಳಿದುಬಂದಿದೆ. ಈಚೆಗೆ ದೊಡ್ಡ ಘಟನೆ ಏನೂ ನಡೆದಿಲ್ಲ.

ರೈಲು ಉರುಳಿ ೪೦೦ ಜರ್ಮನರು ಸತ್ತರು

ಜರ್ಮನಿಯಲ್ಲಿ ನಡೆಯಲಿದ್ದ ಬಹು ಮುಖ್ಯವಾದ ಸಮ್ಮೇಳನವೊಂದಕ್ಕೆ ಯೋಧರು ತುಂಬಿದ್ದ ರೈಲೊಂದು ಚಲಿಸುತ್ತಿದ್ದಾಗ ಬ್ರಿಟಿಷ್ ಸೇನಾನಿಯೊಬ್ಬರು ಹಲವು ಮಂದಿ ಸೈನಿಕರೊಡನೆ ಕಾದಿದ್ದು ರೈಲನ್ನು ಉರುಳಿಸಿದರು. ಇದರಿಂದ ೪೦೦ ಕ್ಕಿಂತ ಹೆಚ್ಚು ಜರ್ಮನರು ಸತ್ತರಾದರೆಂದೂ, ಒಬ್ಬ ಜರ್ಮನ್ ಜನರಲ್ ಆತನ ಸಿಬ್ಬಂದಿಸಮೇತ ಪ್ರಾಣಬಿಟ್ಟನೆಂದೂ ತಿಳಿದುಬಂದಿದೆ. ಸಿನಿಯಾಸ್ ನದಿಯನ್ನು ದಾಟುತ್ತಿದ್ದಾಗ ದುರ್ಘಟನೆ ನಡೆದು ರೈಲು ನದಿಯೊಳಕ್ಕೆ ಬಿತ್ತು! ಹಿಂದುಗಡೆ ಉಳಿದ ಹಲವು ಗಾಡಿಗಳಲ್ಲಿದ್ದ ಸೈನಿಕರನ್ನು ಮುತ್ತಿ ಅವರಿಗೂ ಅಪಾರ ನಷ್ಟವುಂಟು ಮಾಡಲಾಯಿತು. ಅಂತೂ ೮೦೦ ಕ್ಕಿಂತ ಹೆಚ್ಚು ಮಂದಿ ಜರ್ಮನರು ಮಡಿದರೆಂದೂ ಗಾಯಗೊಂಡರೆಂದೂ ಅಂದಾಜು ಹಾಕಲಾಗಿದೆ.

ಫಿನ್‌ಲೆಂಡ್ ಸರ್ಕಾರದ ನಿರ್ಧಾರ

"ರಷ್ಯವು ಮುಂದಿಟ್ಟಿರುವ ಶಾಂತಿ ಷರತ್ತುಗಳನ್ನು ಈಗಿನ ರೂಪದಲ್ಲಿ ಅಂಗೀಕರಿಸಲು ಸಾಧ್ಯವಿಲ್ಲ' ಎಂಬುದಾಗಿ, ಫಿನ್‌ಲೆಂಡ್ ಸರಕಾರ ನಿರ್ಧರಿಸಿದೆಯೆಂದು ಸಾಮಾನ್ಯವಾಗಿ ನಂಬಿಕೆಗೆ ಅರ್ಹವಾದ ಮೂಲದಿಂದ ತಿಳಿದುಬಂದಿದೆ. ಈ ಸುದ್ದಿ ಮತ್ತಾವ ಕಡೆಯಿಂದಲೂ ದೃಢಪಟ್ಟಿಲ್ಲ. ಫಿನ್‌ಲೆಂಡ್ ರೇಡಿಯೋ ಮೂಲಕ ರಷ್ಯನರ ಶಾಂತಿ ಷರತ್ತುಗಳನ್ನು ಪ್ರಜೆಗಳಿಗೆಲ್ಲ ತಿಳಿಸಲಾಗಿದೆ. 'ರಷ್ಯದೊಂದಿಗೆ ಸಂಧಾನವೇನೂ ನಡೆದಿಲ್ಲ. ಡಾ|| ಪಾಸ್ಸಿಕಿವಿ ಮೂಲಕ ರಷ್ಯದ ಷರತ್ತುಗಳನ್ನು ನಾವು ಪಡೆದಿದ್ದೇವೆ" ಎಂದು ತಿಳಿಸಲಾಯಿತು. ಈ ಷರತ್ತುಗಳನ್ನು ಪಾರ್ಲಿಮೆಂಟಿನ ವಿಮರ್ಶೆಗೆ ಒಪ್ಪಿಸಲಾಯಿತು. ರಷ್ಯದ ಷರತ್ತುಗಳನ್ನು ಫಿನ್‌ಲೆಂಡು ಅಂಗೀಕರಿಸಿದರೆ ಜರ್ಮನರು ತಮ್ಮ ಸೇನೆಗಳನ್ನು ಫಿನ್‌ಲೆಂಡಿನಿಂದ ಹಿಂದಕ್ಕೆ ಕರೆಸಬಹುದು ಯಾಕೆಂದರೆ ಇತರ ರಂಗಗಳಲ್ಲಿ ಜರ್ಮನಿ ಉಗ್ರ ಹೋರಾಟ ನಡೆಸಬೇಕಾಗಿರುವಾಗ ಫಿನ್‌ಲೆಂಡಿನ ಕದನದಲ್ಲೂ ಅದು ಭಾಗವಹಿಸಲಾರದು

ತುರ್ಕಿ ಹಿಂದೇಟು ಹಾಕುತ್ತಿರುವುದೇಕೆ ?

ಇಂಗ್ಲೆಂಡ್ ತುರ್ಕಿ ಒಪ್ಪಂದದಂತೆ ತುರ್ಕಿಯು ನಡೆದುಕೊಳ್ಳುತ್ತಿಲ್ಲವೆಂಬುದಾಗಿ ಮಾಡಿರುವ ಆಪಾದನೆಗೆ ಅಂಕಾರಾ ರೇಡಿಯೋ ಉತ್ತರಕೊಡುತ್ತ, ಸಂಗ್ರಾಮವನ್ನು ಸರಬರಾಯಿ ವಿಚಾರದಲ್ಲಿ ಮಿತ್ರರಾಷ್ಟ್ರಗಳು ಕೊಟ್ಟಿರುವ ಮಾತನ್ನು ಪೂರೈಸುವವರೆಗೆ ತುರ್ಕಿಯು ಯುದ್ಧಸ್ಥಿತಿಯುಂಟಾಗಲು ನಿರೀಕ್ಷಿಸಲು ಸಾಧ್ಯವೇ ಇಲ್ಲ. ಜರ್ಮನಿಯು ತುರ್ಕಿಯನ್ನು ತನ್ನ ಕಡೆಗೆ ಎಳೆದುಕೊಳ್ಳಲು ವಿಶ್ವಪ್ರಯತ್ನ ಮಾಡಿದರೂ ಸಹ ಈ ಸಂಗ್ರಾಮದ "ಅತಿ ಕ್ರೂರ ಸಮಯ" ದಲ್ಲಿ ತುರ್ಕಿಯು ಬ್ರಿಟನ್ನಿನ ಕಡೆ ಸೇರಲು ಒಂದುಮುಂದಾ ನೋಡಿಲ್ಲವೆಂದು ಸೂಚಿಸಿ "ಸಾಕಾಗುವಷ್ಟು ಸಂಗ್ರಾಮ ವಸ್ತುಗಳನ್ನು ತುರ್ಕಿಯಲ್ಲಿ ತಂದು ರಾಶಿ ಹಾಕುವವರೆಗೆ ನಾವು ಯುದ್ಧಸ್ಥಿತಿಯಲ್ಲಿಯಬೇಕೆಂದು ಕೇಳುವ ಹಕ್ಕು ಬ್ರಿಟನ್ನಿಗಿಲ್ಲ. ಅಲ್ಲದೆ ಈಗಾಗಲೇ ಬಾಲ್ಕನ್ಸ್ಸಿನಲ್ಲಿ ಜರ್ಮನಿ ದುರ್ಬಲವಾಗಿರುವಾಗ ಅದಕ್ಕೆ ತುರ್ಕಿ ಬೆದರಬೇಕಾಗಿಲ್ಲವೆಂದು ಪತ್ರಿಕೆಯೊಂದು ಬರೆದಿರುವ ರೀತಿಯನ್ನು ಕಂಡರೆ ಇಟಲಿ ರಂಗದಲ್ಲಿಯೂ, ಪೆಸಿಫಿಕ್ ಕ್ಷೇತ್ರದಲ್ಲಿಯೂ ನಡೆಯುತ್ತಿರುವ ಘಟನಾವಳಿ ನಮ್ಮ ಕಣ್ಣು ಮುಂದಿದೆ" ಎಂದು ರೇಡಿಯೋ ತಿಳಿಸಿತು.

ಭಾರತದಲ್ಲಿ ಭೂಕಂಪ

ಮಧುರದಲ್ಲಿ ಕಳೆದ ೨೪ ನೆ ತಾರೀಖು ರಾತ್ರಿ ೧೦. ೪೫ ರಲ್ಲಿ ಒಂದು ವೇಳೆಯಲ್ಲಿ ೩ ಸಲ ಭೂಮಿ ಅದುರಿತು. ನಗರದ ಆಸ್ಪತ್ರೆಯೊಂದರಲ್ಲಿ ಬೆಡಗಿ ?ಗಳು ಮತ್ತು ಕೆಲವು ಮನೆಗಳಲ್ಲಿ ಅಡಿಗೆ ಪಾತ್ರೆಗಳು ಉರುಳಿಬಿದ್ದವು. ತೆರೆದಿದ್ದ ಬಾಗಿಲುಗಳು ಇದ್ದಕ್ಕಿದ್ದಂತೆ ಮುಚ್ಚಿಕೊಂಡವು. ನಷ್ಟವೇನೂ ಸಂಭವಿಸಲಿಲ್ಲ. ಮಧುರದಲ್ಲಿ ಹಿಂದೆ ೧೯೩೮ರಲ್ಲಿ ಒಂದು ಸಲ ಭೂಕಂಪವಾಗಿತ್ತು. ಬೊಂಬಾಯಿನಲ್ಲಿ ೯೦೦ ಮೈಲಿ ದೂರದಿಂದ ಸುಮಾರು ಮೂಡಣ ದಿಕ್ಕಿನಿಂದ ಜೋರಾಗಿ ಭೂಮಿ ನಡುಗಿದ್ದನ್ನು ಕೋಲ್ಬಾ ಭೂಕಂಪಶೋಧನ ಶಾಲೆಯಲ್ಲಿ ಗುರುತಿಸಲಾಯಿತು. ಕಲ್ಕತ್ತದಲ್ಲಿ ೮೦೦ ಮೈಲಿ ಆಚೆಯಿಂದ ಭೂಮಿ ಅಲುಗಾಡಿದ್ದನ್ನು ಅಲಿಪೂರ್‌ನಲ್ಲಿ ಯಂತ್ರದಲ್ಲಿ ದಾಖಲೆ ಮಾಡಿಕೊಳ್ಳಲಾಯಿತು. ವೇಳೆ ೧೧-೩ ರಾತ್ರಿ ಕನೂರ್‌ನಲ್ಲಿಯೂ ಕೂಡಾ ಸುಮಾರು ೧೧-೩೦ ಗಂಟೆ ರಾತ್ರಿ ವೇಳೆಯಲ್ಲಿ ಭೂಮಿ ಅಲುಗಾಡಿತೆಂದು ವರದಿಯಾಗಿದೆ. ಸುಮಾರು ೩೦ ಸೆಕೆಂಡುಗಳು ಆದುದೆಂದು ಗೊತ್ತಾಗಿದೆ. ಬೆಂಗಳೂರಿನಲ್ಲೂ ಅದೇ ವೇಳೆಯಲ್ಲಿ ೨೫ ನೇ ತಾ| ಮಧ್ಯರಾತ್ರಿಯಲ್ಲಿ ಭೂಮಿ ನಡುಗಿತೆಂದು ಮೊನ್ನೆ ವಿಶ್ವಕರ್ನಾಟಕ ಪತ್ರಿಕೆಯಲ್ಲಿ ಶ್ರೀ ವಿ ಎಸ್. ನಾರಾಯಣರಾಯರ ಅನುಭವಗಳನ್ನು ತಿಳಿಸಿದ್ದಾರೆ. ಭಾರತದ ಇತರ ಮೂಲೆಗಳಿಂದ ಅನಂತರ ಬಂದ ವರದಿಗಳನ್ನು ನೋಡಿದ್ದಲ್ಲಿ ಬೆಂಗಳೂರಿನಲ್ಲೂ ಅದೇ ವೇಳೆಯಲ್ಲಿ ಭೂಕಂಪವಾಗಿರಬೇಕೆಂಬ ಊಹೆ ಬಲವಾಗುತ್ತದೆ

ಸ್ವೀಕಾರ

ಸೊಲ್ಲಾಪುರದ ಶ್ರೀಮಂತ ಮಲ್ಲಿಕಾರ್ಜುನಪ್ಪ ಕಟಿ ಇವರು ಶ್ರೀಜಗದ್ಗುರು ಸಿದ್ಧಲಿಂಗರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳನ್ನು ತಮ್ಮ ಮನೆಗೆ ಬಿಜಯಂಗೈಸಿಕೊಂಡು ತಮ್ಮ ಪತ್ನಿ ಕುಂ|| ಸೌ|| ವೀರಭದ್ರಾಯಿಯವರ ಗರ್ಭಕ್ಕೆ ಲಿಂಗಧಾರಣೆಮಾಡಿಸಿ ಪಾದಪೂಜೆಯನ್ನು ಮಾಡಿದ ಸುಸಮಯದಲ್ಲಿ ಪ್ರಭಾಪ್ರೋತ್ಸಾಹಕ್ಕಾಗಿ ಸಮರ್ಪಿಸಿದ 1 ರೂಪಾಯಿ ಮತ್ತು ಬೇರೆ ಜಿಲ್ಲಾ ಮಸ್ಕಿ ಆಶಿವರ್ಣಕೇರಿ ಪಂಪನ ಸೆಕ್ರೆಟರಿ ಶ್ರೀ|| ವೇ|| ಮಹಂತಯ್ಯ ಇವರು ಬಾನಾವತಿಯಿಂದ ಬಹಳ ಸೀರಿಯಸ್ಸಾಗಿದ್ದು ಶ್ರೀಜಗದ್ಗುರು ಕೃಪೆಯಿಂದ ನಿವಾರಣೆಯಾದ ಸಂತೋಷಕ್ಕಾಗಿ ಶ್ರೀ|| ಷ|| ಬ್ರ|| ಸಿದ್ಧಲಿಂಗಶಿವಾಚಾರ್ಯ ದಾರುಕರಾಜಾಮಠ ಇವರ ಮೂಲಕ ಪ್ರಭಾಪ್ರೋತ್ಸಾಹಕ್ಕಾಗಿ ಸಮರ್ಪಿಸಿದ 1 ರೂಪಾಯಿ ಒಟ್ಟು 2 ರೂ. ಗಳು ಶ್ರೀಮಠ ಬಾಗೇವಾಡಿ ಬಾಯಿ ಕೆವಾತ್ ಇವರ ದ್ವಾರಾ ತಲ್ಪಿರುತ್ತದೆ

ವಿಜಯನಗ್ರಾ. ಡಿ| ಸೊಂಡೂರು ತಾಲೂಕು ಜಡೆ ಹೋಬಳಿ ಚಿಗಟೇರಿಗ್ರಾಮದ ಗೌ| ಕೊಟ್ರೈಸ್ವಾಮಿ ಬಾಯಿಸ್ ಸ್ಕೂಲ್ ಮಾಸ್ತರರಾದ ಕೆ. ಸಿ ರುದ್ರಾರಾಧ್ಯರ ಕುಟುಂಬ ಕುಂ|| ಸೌ| ಸಿದ್ಧರಾಮಾಯಿಯವರ ಲಿಂಗಧಾರಣದ ಉತ್ಸವ ಮನೆಯಲ್ಲಿ ನಡೆಯಿಸಿದ ಗುರುಪೂಜಾ ಸಮಾರಂಭದ ಕಾಲದಲ್ಲಿ ಪ್ರಭಾಪ್ರೋತ್ಸಾಹಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಧಾರವಾಡ ಜಿ|| ನಾಗೇಂದ್ರಗಡದಲ್ಲಿ ನಡೆದ ಶ್ರೀ ರೇಣುಕರ ಲಿಂಗೋದ್ಭವ ಸಮಾರಾಧನೆ ಉತ್ಸವದ ಕಾರ್ಯದಲ್ಲಿ ಅಬ್ಬಿಗೇರಿ ಅಂಬಲಿ ಮಠದ ಶ್ರೀಗಳವರ ಅಪ್ಪಣೆಯ ಮೇರೆಗೆ ಪ್ರಭಾಪ್ರೋತ್ಸಾಹಕ್ಕಾಗಿ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿದ್ದಾರೆ

ಈ ಪೋಷಕ ಮಹಾಶಯರಿಗೆಲ್ಲ ಶ್ರೀಜಗದ್ಗುರು ಪಂಚಾಚಾರ್ಯರ ಶ್ರೀಮಂಗಳವನ್ನೀಯಲೆಂದು ಹಾರೈಸುತ್ತೇನೆ.

ಶ್ರೀಜಗದ್ಗುರು ಪಂಚಾಚಾರ್ಯ ತಾರಣಸಂವತ್ಸರದ ಪಂಚಾಂಗ.

ಚರಾಚರಾತ್ಮಕ ಭುವನಗಳ ಉತ್ಪತ್ತಿ ಸ್ಥಿತಿಲಯಗಳಿಗೆ ಕಾರಣೀಭೂತನಾದ ಕಾಲಪುರುಷನ ಅಂಗಭೂತಗಳಾದ ಸೂರ್ಯಚಂದ್ರಾದಿಗಳ ಚಲನವಲನಗಳನ್ನು ಅವುಗಳಿಂದುಂಟಾಗುವ ಫಲಾಫಲಗಳನ್ನು ತಿಳಿಸುವ ವೇದಾಂಗವಾದ ಜ್ಯೋತಿಷ್ಯಶಾಸ್ತ್ರದ ಆಧಿಗಳೆಂತಿರುವ ತಿಥಿ ವಾರ, ನಕ್ಷತ್ರ, ಯೋಗ, ಕರಣಗಳೆಂಬ ಕಾಲಪುರುಷನ ನಡೆಯನ್ನೂ ಸ್ವಭಾವವನ್ನೂ ಗುರುತಿಸುವ ಐದು ವಿಷಯಗಳನ್ನು ಪ್ರಪಂಚದಲ್ಲಿನ ವೈದಿಕ ಲೌಕಿಕಾದಿ ವಿಷಯಗಳಿಗೆ ಸರ್ವರೂ ತಿಳಿದು ಅದಕ್ಕೆ ಅನುಗುಣವಾಗಿ ವರ್ತಿಸುವುದು ಶ್ರೇಯಸ್ಕರವೆಂದು ನಮ್ಮ ಪೂರ್ವಜರಾದ ಋಷಿಗಳು ತಮ್ಮ ತಪೋಮಹಿಮೆಯಿಂದ ತಿಳಿದು ಸಿದ್ಧಾಂತ ಪಡಿಸಿರುತ್ತಾರೆ. ಹೀಗೆ ನೋಡುವಿಕೆಯ ೫ ಎಂದು ಕಾಲಮಾನಗಳನ್ನು ತಿಳಿಸುವ ಗ್ರಂಥಕ್ಕೆ ಪಂಚಾಂಗವೆಂದು ಹೆಸರು. ವೈದ್ಯಭೂಷಣ ಜ್ಯೋತಿರ್ವಿದ್ಯಾಪಂಡಿತ ವೇ|| ಕೋಟಿಸ್ವಯ್ಯಶಾಸ್ತ್ರಿಗಳು, ದಂಬ್ರಹಳ್ಳಿ ತಗಿ ಸಕರಿ ಚಿಕೇಮಠ, ಗದಗ ಇವರು, ಮುಂದಿನ ತಾರಣಸಂವತ್ಸರದ ಪಂಚಾಂಗವನ್ನು ಶ್ರೀಜಗದ್ಗುರು ಪಂಚಾಚಾರ್ಯ ಪಂಚಾಂಗ ವೆಂಬ ಹೆಸರಿನಿಂದ ಒಳ್ಳೆ ಶ್ರಮವಹಿಸಿ ಅತ್ಯಂತ ಸುಂದರವಾಗಿ ಮುದ್ರಿಸಿರುತ್ತಾರೆ. ಈ ಪಂಚಾಂಗವು 172 ಪುಟಗಳಿಂದ ಕೂಡಿ ವೈದಿಕ ಲೌಕಿಕಾದಿಯಾಗಿ ಸಾರ್ವಜನಿಕರೆಲ್ಲರೂ ಅವಶ್ಯಕವಾಗಿ ತಿಳಿದಿರಬೇಕಾದ ಅತ್ಯಂತ ಉಪಯುಕ್ತ ವಿಷಯಗಳನ್ನೊಳಗೊಂಡಿದೆ. ಇದರಲ್ಲಿ ಇತರ ಪಂಚಾಂಗಗಳಲ್ಲಿರುವ ವಿಷಯಗಳು ಮಾತ್ರವಲ್ಲದೆ 12 ತಿಂಗಳುಗಳಲ್ಲಿ ಒದಗುವ 12 ರಾಶಿಗಳವರ ಮಾಸಫಲಗಳೂ ತಿಳಿಸಲ್ಪಟ್ಟಿರುತ್ತವೆ ಮುಖಪತ್ರದಲ್ಲಿ ಮುದ್ರಿಸಲ್ಪಟ್ಟಿರುವ ಈಗಿನ ಪಂಚಜಗದ್ಗುರು ಪೀಠಾಧಿಪತಿಗಳ ಭಾವಚಿತ್ರಗಳಿಂದ ಪುಸ್ತಕದ ಅಂದವು ಮತ್ತಷ್ಟು ಹೆಚ್ಚಿರುತ್ತದೆ. ಒಟ್ಟಿನಲ್ಲಿ ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ಉತ್ತಮ ಪಂಚಾಂಗಗಳಲ್ಲಿ ಇದಕ್ಕೆ ಅಗ್ರಸ್ಥಾನವನ್ನು ಕೊಡಬಹುದೆಂದು ಹೇಳುವಂತಿದೆ. ಈ ಪಂಚಾಂಗಕ್ಕೆ ಬೆಲೆ 1 2 0 ಇಟ್ಟಿರುತ್ತಾರೆ. ಪಂಚಾಂಗಕರ್ತರಾದ ಪಂಡಿತ ವೇ|| ಕೋಟಿಸ್ವಯ್ಯಶಾಸ್ತ್ರಿಗಳು ದಂಬ್ರಹಳ್ಳಿ ತಗ್ಗಿನಕೇರಿ ಗದಗ ಈ ವಿಳಾಸದಲ್ಲಿ ದೊರೆಯುತ್ತದೆ. ಸರ್ವರೂ ಇದನ್ನು ಉಪಯೋಗಿಸಿ ಪಂಚಾಂಗಕರ್ತರ ಶ್ರಮವನ್ನು ಸಾರ್ಥಕಗೊಳಿಸಬೇಕೆಂದಾಶಿಸುತ್ತೇವೆ.

(೧ನೆಯ ಪುಟದಿಂದ ಮುಂದುವರಿದುದು)

೨೧ ನೇ ಸೋಮವಾರ ಸಮಾಜಕಾರ್ಯ ಧುರೀಣರಾದ ಶ್ರೀ ರಾವಬಹದ್ದೂರ್ ನಾಗಪ್ಪಣ್ಣನವರಿಂದ ನೂತನವಾಗಿ ನಿರ್ಮಿತವಾದ "ಸಿದ್ಧರಾಮೇಶ್ವರ ಕಾಟನ ಮಾರ್ಕೆಟ್ಟಿಗೆ ಶ್ರೀಮಂತ ಶಿವಣ್ಣ ರಾಜೋಳೆ ಇವರೇ ಮೊದಲಾದವರು ಶ್ರೀ ಮಹಾ ಸನ್ನಿಧಿಯನ್ನು ಬಿಜಯಂಗೈಸಿಕೊಂಡು ಹೋಗಿ ಶ್ರೀ ಸನ್ನಿಧಿಗೆ ಹಾರಾರ್ಪಣೆಯಾದೊಡನೆ ೨೫೧ ರೂಪಾಯಿಗಳನ್ನು ಕಾಣಿಕೆಯಾಗಿ ಸಮರ್ಪಿಸಿ ಸಂಘದ ಪರಿಯಿಂದ ರಾವಬಹದ್ದೂರ್ ನಾಗಪ್ಪಣ್ಣನವರು ಅರ್ಪಿಸಿದ ಮೇಲೆ ಶ್ರೀ ಸನ್ನಿಧಿಯು ಈ ಮಾರ್ಕೆಟು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲೆಂದು ಆಶೀರ್ವದಿಸಿದರು. ಇಂದಿಗೆ ಇಲ್ಲಿಯ ಪಟ್ಟದ ಸರ್ವಕಾರ್ಯಗಳು ನಿರ್ವಿಘ್ನವಾಗಿ ನೆರವೇರಿದಂತಾಯಿತು. ಈ ಮಹೋತ್ಸವವನ್ನು ನಡೆಸುವ ಸುಸಂದರ್ಭವನ್ನು ತಂದುಕೊಟ್ಟ ಶ್ರೀ ಹೋಟಗಿ ಪೂಜ್ಯರವರಿಗೂ, ಈ ಕಾರ್ಯದಲ್ಲಿ ಅತ್ಯಂತ ಶ್ರದ್ಧೆಯಿಂದ ಕೆಲಸಮಾಡಿದ ಸಮಾಜ ಸೇವಕರು ಮಹಾಜನರೆಲ್ಲರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಭಾಗ್ಯವನ್ನೀಯಲೆಂದು ಹಾರೈಸುತ್ತೇನೆ.

ವಿರೂಪಾಕ್ಷಶರ್ಮ ದಾವಣಗೆರೆ

ಶ್ರೀ ವೀರಶೈವ ಗುರುಕುಲ

ಸೊಲ್ಲಾಪುರ

ಜಯಂತೀ ಮಹೋತ್ಸವಗಳು

ಸೊಲ್ಲಾಪುರ

ಪ್ರತಿವರ್ಷದ ಪದ್ಧತಿ [illegible] ಜಗದ್ಗುರು ಪಂಡಿತಾರಾಧ್ಯರ [illegible] ಜಯಂತೀ [illegible] ಶಿವರಾತ್ರಿ [illegible] ದಿವಸ ಬೃಹನ್ಮಠ [illegible] ಸೋಮವಾರ [illegible] ನೆರವೇರಿತು. ಪ್ರಾತಃಕಾಲ [illegible] ಶ್ರೀ ಜಗದ್ಗುರು ಪಂಡಿತಾರಾಧ್ಯರ [illegible] ಮೂರ್ತಿಗೆ ಗುರುಕುಲ ವಿದ್ಯಾರ್ಥಿಗಳ [illegible] ರುದ್ರಾಭಿಷೇಕ [illegible] ಬಿಲ್ವಾರ್ಚನೆಯೂ ಶ್ರೀ ಪಂಡಿತಾರಾಧ್ಯರ [illegible] ಶತನಾಮಾವಳಿ ಪಠನವೂ ನಡೆದು ಮಧ್ಯಾಹ್ನ [illegible] ಸಾಯಂಕಾಲ ೪ ಘಂಟೆಗೆ ಲಿಂಗೋದ್ಭವಮೂರ್ತಿಯ ಫೋಟೋ ಮೆರವಣಿಗೆಯೂ ವಾದ್ಯ ವೈಭವಸೂಚನೆಯೂ ವಿದ್ಯಾರ್ಥಿಗಳ ವೇದ ಘೋಷವಾದನೆಯೂ ಅತಿ ವೈಭವದಿಂದ ಹೊರಟು ೩ ಘಂಟೆಗೆ ಮಠವನ್ನು ತಲ್ಪಿತು. ರಾತ್ರಿ ೭ ಘಂಟೆಗೆ [illegible] ವೇ|| ಪಂಚಾಕ್ಷರ ಗವಾಯಿಗಳು [illegible] ಇವರಿಂದ ಸಾಸಂಗ ಮಹಿಮೆಯು ತಮ್ಮ ಪ್ರಭಾವದಿಂದ ಶ್ರೀಜಗದ್ಗುರು ಪಂಡಿತಾರಾಧ್ಯರಿಂದ ಪಂಚಾಕ್ಷರೀ ಮಹಾಮಂತ್ರದ ಉಪದೇಶವನ್ನು ಪಡೆದ ಸರ್ವಾಂಗಿಗಳಾದ ಜೇನಿಗಳನ್ನುದ್ಧರಿಸಿದ ವಿಷಯವನ್ನು ಕೀರ್ತನರೂಪವಾಗಿ ಬಹು ಸೊಗಸಾಗಿ ಮಾಡಿದರು. ಅನಂತರ ರೇವಣಸಿದ್ಧಕಟಾಪ, ರುದ್ರ ಪಂಚಿ ಮಠದ [illegible] ಕು|| ಗೌರಾಬಾಯಿ ಕಟಾಪ, ಕು|| [illegible] ಸೌ|| ಸುಗ್ಗಲಾದೇವಿ ತಮ್ಮ ನಟ್ಟಿ ಇವರ ಸಂವಾದ ಆಕಾಶವಾಣಿಯಾದ ಮೇಲೆ ವೇ|| [illegible] ಶಾಸ್ತ್ರಿಗಳು ಅನುಗೊಂಡ ಸೌ|| ಮಾತೃಶ್ರೀ [illegible] ಗೀರದೀಬಾಯಿ ಕಟಾಪ ಶ್ರೀ|| ಷ|| ಬ್ರ|| ವೀರತಪಸ್ವಿ ಚನ್ನವೀರಶಿವಾಚಾರ್ಯ ಬೃಹನ್ಮಠ [illegible] ಇವರಿಂದ 'ಜಯಂತಿ' 'ಮಹಾಶಿವರಾತ್ರಿ' ಈ ವಿಷಯವಾಗಿ ಭಾಷಣಗಳಾದನಂತರ ಮಂಗಳದೊಂದಿಗೆ ಮಹಾಶಿವರಾತ್ರಿಯ ಕಾರ್ಯಕ್ರಮವು ಪೂರ್ಣಗೊಂಡಿತು.

ಗುರುಪಾದಕಮಲ ಸೇವಕ
ಶ್ರೀ ವೀರಶೈವ ಗುರುಕುಲ
ಸೊಲ್ಲಾಪುರ

ಬಸವಾಪಟ್ಟಣ

ಶಿವಮೊಗ್ಗ ಡಿ|| ಚನ್ನಗಿರಿ ತಾ|| ಬಸವಾಪಟ್ಟಣದಲ್ಲಿ ಪ್ರತಿವರ್ಷ ಪದ್ಧತಿಯ ಪ್ರಕಾರ ಶ್ರೀಜಗದ್ಗುರು ವಿಶ್ವಾರಾಧ್ಯ ಹಾಗೂ ಪಂಡಿತಾರಾಧ್ಯರ ಜಯಂತೀ ಮಹೋತ್ಸವವು ವೇ|| ಹಾಲಸ್ವಾಮಿ ಮಠದ ಶಿವಲಿಂಗಪ್ಪಯ್ಯನವರ ಸ್ವಗೃಹದಲ್ಲಿ ಮಹಾಶಿವರಾತ್ರಿಯ ದಿವಸ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಶ್ರೀ ಜಗದಾಚಾರ್ಯರ ಲಿಂಗೋದ್ಭವ [illegible] ಪಟಚಿತ್ರಗಳಿಗೆ ಷೋಡಶೋಪಚಾರ ಪೂಜೆ [illegible] ರಾತ್ರಿ ೧೨ ಘಂಟೆಯಿಂದ ಜಗದಾಚಾರ್ಯರ ಉತ್ಸವವು ಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲಿ [illegible] ಹಾಲಸ್ವಾಮಿಯ ಮತ್ತು ದುರ್ಗಮ್ಮನ ದೇವಸ್ಥಾನಗಳಲ್ಲಿ ಮಂಗಳಾರತಿಯಾಗಿ ಪುನಃ ಶಿವಲಿಂಗಯ್ಯನವರ ಗೃಹಕ್ಕೆ ಬಂದು ಕಾಯಿ ಕರ್ಪೂರ ಮಂಗಳಾರತಿಯಾಗಿ ಪರಮಾತ್ಮನ [illegible] ಜಗದಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿ ಮೂರ್ತಗೊಳಿಸಿದರು. ಆಮೇಲೆ [illegible] ಹಾಲಪ್ಪನವರು ಸಮಸ್ತ ಭಕ್ತಾದಿಗಳನ್ನು ಕುಳ್ಳಿರಿಸಿ ೧ ಘಂಟೆಯಿಂದ [illegible] ಶಿವರಾತ್ರಿ ಮಹಿಮೆಯನ್ನು [illegible] ಮಠದ ವೇ|| ಮಾಚಿದೆ ಪಯ್ಯನವರು ಪರಮಾತ್ಮನ ಪಂಚ ವಿಂಶತಿಲೀಲೆಗಳನ್ನು ಸದರಿ ಗ್ರಾಮದ ಸ್ಕೂಲ್ ಮಾಸ್ಟರಾದ ಸಿ. ಕಾಳಪ್ಪ ಅರಸರವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಪುರಾಣವನ್ನೂ [illegible] ಘಂಟೆಯವರೆಗೆ ಹೇಳಿ ಎಲ್ಲರಿಗೂ ಆನಂದವನ್ನುಂಟುಮಾಡಿದರು. ಆ ದಿಂದ ೮ ರವರೆಗೆ ಪುನಃ ಜಗದಾಚಾರ್ಯರ ಪಲ್ಲಕ್ಕಿ ಉತ್ಸವವು ಪಟ್ಟಣದಲ್ಲಿ ನಡೆದು ಮೊದಲಿನ ಸ್ಥಳಕ್ಕೆ [illegible] ಪ್ರಸಾದ ಸ್ವೀಕಾರವಾದ [illegible] ಜಗದಾಚಾರ್ಯರ [illegible] ಅಂದಿನ ಕಾರ್ಯಕ್ರಮವು ಮುಕ್ತಾಯಗೊಂಡಿತು.

[illegible] ಎಂ ಹಾಲಸಿದ್ದಯ್ಯ

ಗುರುವಿನ ಮಹಿಮೆ ಮತ್ತು ರೇಣುಕಾಚಾರ್ಯರ ಮೂರ್ತಿಪ್ರತಿಷ್ಠಾ ಮಹೋತ್ಸವ

ನಾಗೇಂದ್ರಗಡ

ಧಾರವಾಡ ಜಿಲ್ಲಾ ರೋಣ ತಾಲೂಕು ನಾಗೇಂದ್ರಗಡದಲ್ಲಿ ತಾ|| [illegible] ನೇ ಮಂಗಳವಾರ ಜಗದ್ಗುರು ರೇಣುಕಾಚಾರ್ಯರ ದಿವ್ಯಮೂರ್ತಿಪ್ರತಿಷ್ಠಾ ಸಮಾರಂಭವು ಅತಿ ವೈಭವದಿಂದ ಆರಳೆ ಮಠದ ಶ್ರೀ [illegible] ವೈದಿಕತ್ವದಲ್ಲಿ ನಾಗೇಂದ್ರಗಡಾ ಹೊಸ ಮಠದಲ್ಲಿ ನೆರವೇರಿಸಲ್ಪಟ್ಟಿತು. ಸದರಿ ಮಹೋತ್ಸವಕ್ಕೆ ಅನೇಕ [illegible] ಮಠಾಧಿಕಾರಿಗಳು ಭಕ್ತರು ಆಗಮಿಸಿ ಸದರಿ ಸಮಾರಂಭವನ್ನು ನಡೆಸಿದರು. ಕಲವು ಜನರು ಮನಸ್ತಾಪದಿಂದ ಉತ್ಸವಕ್ಕೆ ಅಡ್ಡಿ ತಂದು ಉತ್ಸವವು ನಿಂತುಹೋಗುವ ಸಮಯವು ಒದಗಿತ್ತು. ಅಂಥಾ ಪ್ರಸಂಗದಲ್ಲಿ ವೇ|| ಅಂದಾನಯ್ಯನವರು "ಗುರುವೇ ನಿನ್ನ ಕಲಸಕ್ಕೆ ಈ ಪರಿ ವಿಘ್ನಗಳು ಬಂದೊದಗಿದವು. ಯಾವತ್ತರ ಕೂಡಿ ನಿನ್ನ ಸಮಾರಂಭ ಕಾರ್ಯವನ್ನು ನೆರವೇರಿಸುವಂತೆ ಅವರಿಗೆ ಪ್ರೇರಣೆಯನ್ನು ಮಾಡು" ಎಂದು ಸಂಕಲ್ಪವನ್ನು ಮಾಡಿಕೊಂಡು ಆ ಕಲಸಕ್ಕೆ ಕೈ ಹಾಕಿದರು. ಮರುದಿವಸವೇ ಜಗದಾಚಾರ್ಯರ ಮಹಿಮೆಯಿಂದಲೂ ಮತ್ತು ಶ್ರೀ ಪಟ್ಟದ ಸ್ವಾಮಿಗಳ ಅಭಿಪ್ರಾಯದ ಮೇರೆಗೆ ಯಾವತ್ತರು ಕಾರ್ಯತತ್ಪರರಾಗಿ ಈ ಕಾರ್ಯವನ್ನು ನಭೂತೋನಭವಿಷ್ಯತಿ ಎಂಬಂತೆ ನಡೆಯಿಸಿ ಜಗದಾಚಾರ್ಯರ ಅನುಗ್ರಹಕ್ಕೆ ಪಾತ್ರರಾದರು. ಆವತ್ತಿನ ದಿವಸ ಯಾವತ್ತು ವೀರಶೈವರ ಆನಂದಕ್ಕೆ ಪಾರವೇ ಇಲ್ಲದಂತೆ ಆಗಿತ್ತು. ಮತ್ತು ಸದರಿ ಅಂದಾನಯ್ಯನವರಿಗೆ ಈಗ್ಗೆ ೩ ೪ ತಿಂಗಳಿಂದ ವಿಶೇಷ ಕಾಯಿಲೆ ಆಗಿ ೨೪ ತಾಸು ಪ್ರಜ್ಞೆಯಿಲ್ಲದಂತೆ ಆಗಿತ್ತು ಮತ್ತು ಡಾಕ್ಟರರು ಕೂಡಾ ಪ್ರಾಣಾಪಾಯವೊದಗಬಹುದೆಂದು ಹೇಳಿದ್ದರು. ಅಂಥಾ ಪ್ರಸಂಗದಲ್ಲಿ ಗುರುವೇ ನನ್ನನ್ನು ಸಂರಕ್ಷಿಸಬೇಕೆಂದು ಸಂಕಲ್ಪ ಮಾಡಿ ಆಚಾರ್ಯರ ಪಾದೋದಕವನ್ನು ಸ್ವೀಕಾರ ಮಾಡಲಿಕ್ಕೆ ಹತ್ತಿದರು. ಆವತ್ತಿನ ದಿವಸವೇ ಸ್ವಲ್ಪ ಗುಣವಾಗಿ, ಕಡಿಮೆಯಾಗುತ್ತ ೭-೮ ದಿವಸದಲ್ಲಿ ಗುಣಮುಖರಾಗಿ ಆರೋಗ್ಯ ಹೊಂದಿದರು. ಹೀಗೆ ಪ್ರಾಣಾಪತ್ತಿನಿಂದ ಪಾರಾದುದಕ್ಕಾಗಿ ಮಹೇಶ್ವರರಿಗೆ ಅನ್ನಸಂತರ್ಪಣಾ ಕಾರ್ಯವನ್ನು ನೆರವೇರಿಸಿ ಆಚಾರ್ಯರ ಕೃಪೆಗೆ ಪಾತ್ರರಾದರು ಮತ್ತು ಸದರಿಯವರು ಬಡವರಿದ್ದು ಈ ದುಃಸ್ಥಿತಿ ಕಾಲದಲ್ಲಿ ಈ ಕಾರ್ಯ ಪೂರೈಸಿದರೆಂದಮೇಲೆ ಅದಕ್ಕೆ ಆಚಾರ್ಯರ ಕೃಪಾಶೀರ್ವಾದವೇ ಹೊರತು ಬೇರೆ ಗತ್ಯಂತರವಿಲ್ಲ. ಇನ್ನು ಮುಂದೆಯೂ ಜಗದಾಚಾರ್ಯರು ಅವರಿಗೆ ಸಕಲ ಸಂಪದಭಿವೃದ್ಧಿಯನ್ನು ಕೊಟ್ಟು ಅವರನ್ನು ಉದ್ಧರಿಸಬೇಕೆಂದು ಜಗದಾಚಾರ್ಯರನ್ನು ಅನನ್ಯಭಕ್ತಿ ಭಾವದಿಂದ ಬಜಿಸುತ್ತೇನೆ.

ಉತ್ಸವಭಾಗಿ

ಗರ್ಭದೀಕ್ಷಾ ಮಹೋತ್ಸವ

ಚಗಟೂರು

ಸ್ವಭಾನು ಸಂ|| [illegible] ಶ್ರೀ (೧೩) ಶುಭ ದಿವಸದಲ್ಲಿ ಶಿವಮೊಗ್ಗಾ ಡಿ|| ಸೊರಬ ತಾಲೂಕು ಚಗಟೂರು ಗ್ರಾಮದಲ್ಲಿರುವ, ಕೆ. ಪಿ. ರುದ್ರರಾಜಗೌಡ ಬಿನ್ ಚನ್ನವೀರಪ್ಪಾಜಿ ಒಡೆಯರ್ ಇವರು ತಮ್ಮ ಕುಟುಂಬ [illegible] ಪಿನಾಕಿನಿಯವರು ಎಂಟು ತಿಂಗಳು ಗರ್ಭಿಣಿಯರಾಗಿರುವುದರಿಂದ ಶಾಸ್ತ್ರೋಕ್ತ ವಿಧಿ ಪ್ರಕಾರ ಶ್ರೀ ರೇಣುಕಾರಾಧ್ಯಾನುವರ್ತಿಗಳಾದ ಸುರಗಿ ಮಠದ ವೇದಮೂರ್ತಿ ಗುರುಲಿಂಗಸ್ವಾಮಿಗಳವರನ್ನು ತಮ್ಮ ಮನೆಗೆ ದಿನ್ನೈಸಿಕೊಂಡು ಮಧ್ಯಾಹ್ನ ಲಿಂಗಧಾರಣ ವಿಧಿಯನ್ನು ಜರುಗಿಸಿದರು. ಸಾಯಂಕಾಲ ಶ್ರೀ ಜಗದ್ಗುರು ಪಂಚಾಚಾರ್ಯರವರ ಫೋಟೋಗಳನ್ನು ಗೃಹದಲ್ಲಿರಿಸಿ ಅರ್ಘ್ಯಪಾದ್ಯಾದಿಗಳಿಂದ ಪೂಜೆಯಂ ಗೈದು ಶ್ರೀ ಮಲ್ಲಿಕಾರ್ಜುನಸ್ವಾಮಿಯ ದೇವಾಲಯಕ್ಕೆ ಹೋಗಿ ಶ್ರೀಶೈಲ ಲಿಂಗೋದ್ಭವನಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಪೂಜೆಯಂ ಪೂರೈಸಿ ಶ್ರೀ ರೇಣುಕವಿಜಯ ಪುರಾಣಶ್ರವಣವನ್ನು ಮಾಡಿದರು. ಇವರು ಗುರುಭಕ್ತಿಯುಳ್ಳವರು. ಇವರ ಮೊದಲನೆ ಭಾರ್ಯೆ ನಾಗಲಾಂಬಿಕೆಯವರು ಪ್ರಥಮಪುತ್ರನನ್ನು ಪ್ರಸವಿಸಿ ಶಿವಾಧೀನರಾದಾಗ್ಯೂ ೧೫ ರೂ [illegible] ಉಪಾಧ್ಯಾಯರು ಎರಡನೆ ಲಗ್ನವಾಗ ಪೂರ್ವ ಕಷ್ಟವಾಯಿತು. ಆ ಕಾಲಕ್ಕೆ ರಂಭಾಪುರಿ ಪೀಠದ ಶ್ರೀಸ್ವಾಮಿಗಳವರು ಜಡೆಪ್ರಾಂತಕ್ಕೆ ದಯಮಾಡಿಸಿದಾಗ್ಗ ಇವರನ್ನು ಕಾಣಿಕೆ ಸಮರ್ಪಿಸಲು ಹೇಳಿದರು. ಇವರು ಸನ್ನಿಧಿಯಲ್ಲಿ 'ನಾನು ಬಡವನು ಕುಟುಂಬ ತೀರಿಕೊಂಡಿದ್ದ ಬಹಳ ಕಷ್ಟದಲ್ಲಿದ್ದೇನೆ' ಎಂದು ಬೇಡಿಕೊಂಡರು. ಶ್ರೀ ಸ್ವಾಮಿಗಳು ಬಡವನ ಸ್ಥಿತಿಯನ್ನು ದಿವ್ಯದೃಷ್ಟಿಯಿಂದ ತಿಳಿದು "ರೇಣುಕನು ನಿನ್ನ ಲಗ್ನವನ್ನು ಮಾಡುತ್ತಾನೆ" ಎಂದು ಅಮೃತವಾಣಿಯಿಂದ ನುಡಿದರು. ಮಹಾತ್ಮರ ಮಾತು ಮಹತ್ವ ಉಳ್ಳದ್ದು ಎಂದು ಅರಿತುಕೊಂಡು ಆಗಾಗಾಯಿತು ಇವರು ಪಂಚಾಚಾರ್ಯರಲ್ಲಿ ಭಕ್ತಿಯನ್ನಿಟ್ಟು ಶ್ರೀ ಪಂಚಾಚಾರ್ಯ ಅಷ್ಟೋತ್ತರಗಳನ್ನು ಪಠಿಸುವುದು ಪುರಾಣಶ್ರವಣಮಾಡುವುದು ಇದರಲ್ಲಿಯೇ ಮಗ್ನರಾಗಿರುತ್ತಿದ್ದರು. ಕೆಲಕಾಲಾನಂತರ ಆನವಟ್ಟಿ ಹೋಬಳಿ ಕೋಡಿಹಳ್ಳಿ ಪಾಟೀಲ್ ಶಿವರುದ್ರಪ್ಪಗೌಡರು ಇವರನ್ನು ವತ್ತು ಮಗನನ್ನು ಮಾಡಿಕೊಂಡರು. ಇವರಿಗೆ ಎರಡನೆ ಲಗ್ನವಾಯಿತು. ಇವರ ಎರಡನೆ ಭಾರ್ಯೆ ಪಿನಾಕಿನಿಬಾಯಿಯವರು ಎರಡು ಹೆಣ್ಣು ಒಂದು ಗಂಡು ಮಕ್ಕಳ ತಾಯಿಯಾಗಿ ಈಗ ಚತುರ್ಥ ಗರ್ಭವನ್ನು ಧರಿಸಿರುವರು. ಶ್ರೀಗುರುಭಕ್ತಿ ಮಹಿಮೆಯನ್ನು ಅರಿಯಲು ಯಾರಿಂದಲೂ ಸಾಧ್ಯವಿಲ್ಲ. ಗುರುಭಕ್ತಿಯೇ ಮುಕ್ತಿಗೆ ಕಾರಣ. ಪ್ರತಿಯೊಬ್ಬ ಮಾನವನು ಗುರುಭಕ್ತಿಯುಳ್ಳವನಾಗಿ ಗುರುಕೃಪೆಗೆ ಪಾತ್ರನಾಗಿ ಗುರುವಿನ ಆಶೀರ್ವಾದವನ್ನು ಪಡೆದು ಗುರುವಿನಿಂದ ಮೋಕ್ಷಮಾರ್ಗವನ್ನು ಹೊಂದಬೇಕಾಗಿ ಅಪೇಕ್ಷಿಸುವ

ಓರ್ವ ಗುರುಭಕ್ತ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣವಾದವ ಪ್ರತಿಯೊಬ್ಬನೂ [illegible] ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು [illegible] ದ್ವಿಜ್ಞಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು [illegible] ಪಂಡಿತರ ವ್ಯಾಖ್ಯಾನದ [illegible] ಅನುಕೂಲಕ್ಕಾಗಿ ಬಹು ಶ್ರಮವಹಿಸಿ [illegible] ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ [illegible] ರೇಣುಕಾಚಾರ್ಯರ ಲೀಲಾ [illegible] ಚಿತ್ರಗಳು ಜೋಡಿಸಲ್ಪಟ್ಟಿದ್ದು ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯ ಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ವಿಳಾಸ:— **ಪಂಚಾಚಾರ್ಯಪ್ರಭಾ ಆಫೀಸ್,**
ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪ|| ಗ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M. 2266 || ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ । ಪಂಚಾಕ್ಷರಪವಿನಾಶಕಾನ್ ಜಿತತರಪ್ರೀಪಂಚಲಿಂಗೋದ್ಭವಾನ್ ॥
ಪಂಚಾಚಾರನಿಯಾಮಕಾನ್ ಪರಶಿವಸ್ಥಾನಾನ್ ಸ್ವಬೋಧಕಾನ್ । ಪಂಚಾಚಾರ್ಯಜಗದ್ಗುರೂತ್ತಮವರಾನ್ ಪಾಲಿಷ್ಟಮೀಶೋಽಕಮಂ ॥

ಸ್ಥಳೀಯವರ್ಗಕ್ಕೆ ೩ ರೂ

ಪರಸ್ಥಳದವರಿಗೆ ೩ ರೂ ೧೩ ಆಣೆ ವಿ ಪಿ ಖರ್ಚು ಸೇರಿ ೪ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೩ನೇ ಮಾರ್ಚಿ ೧೯೪೪ [ಸಂಚಿಕೆ ೪೫

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವಗಳು

ಬೆಂಗಳೂರು ಸಿಟಿ

ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯವರ್ಯರಾದ ಶ್ರೀಜಗದ್ಗುರು ರೇಣುಕಭಗವತ್ಪಾದಾಚಾರ್ಯರ ಜಯಂತೀಮಹೋತ್ಸವವು ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಶ್ರೀಮಹಾಂತಿನ ಮಠದಲ್ಲಿ ಪ್ರತಿ ವರ್ಷದ ಪದ್ಧತಿಯಂತೆ ತಾ|| ೮-೩-೪೪ ನೇ ಸ್ವಭಾನು ಸಂವತ್ಸರ ಫಾಲ್ಗುಣ ಶು ೧೪ ಬುಧವಾರ ಅತಿ ವೈಭವದಿಂದ ಆಚರಿಸಲ್ಪಟ್ಟಿತು ಆದಿನ ಪ್ರಾತಃಕಾಲ ೬ ಘಂಟೆಯಿಂದ ಶ್ರೀ ಮಹಾಂತಿನಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ಏಕಾದಶವಾರ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನ ಮಂಗಲಪುಷ್ಪಾಂಜಲಿಗಳು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತ ಮತ್ತು ವೇದ ಪಾಠಶಾಲಾ ವಿದ್ಯಾರ್ಥಿಗಳಿಂದ ಭಕ್ತಿಪೂರ್ವಕವಾಗಿ ಆಚರಿಸಲ್ಪಟ್ಟವು ಅನಂತರ ಮಧ್ಯಾಹ್ನ ೧೨ ಘಂಟೆಗೆ ಮಹಾಗಣಸಂತರ್ಪಣೆಯು ಮಾಡಲ್ಪಟ್ಟಿತು ತರುವಾಯ ಸಾಯಂಕಾಲ ೬ ಘಂಟೆಗೆ ಶ್ರೀ ಮಹಾಂತಿನ ಮಠದ ಮೇಲ್ಭಾಗದಲ್ಲಿ ನಿರ್ಮಿಸಿದ ಜಯಂತೀಮಹೋತ್ಸವ ಮಂಟಪದಲ್ಲಿ ಸಭೆಯು ಸೇರಿತು ಶ್ರೀಮಾನ್ ರಾಜಧರ್ಮಪ್ರವೀಣ ದಿವಾನ್‌ಬಹದ್ದೂರು ರಿಟೈರ್ಡ್ ಚೀಫ್ ಜಸ್ಟೀಸ್ ಸಿ ಮಹಾದೇವಯ್ಯನವರು ಅಧ್ಯಕ್ಷಸ್ಥಾನವನ್ನಲಂಕರಿಸಿದರು ಮೊದಲು ಸಭೆಯಲ್ಲಿ ವಿದ್ಯಾರ್ಥಿಗಳಿಂದ ವೇದಘೋಷ ಆಚಾರ್ಯರ ಸ್ತೋತ್ರಗಳು ಮಾಡಲ್ಪಟ್ಟವು ತರುವಾಯ ಶ್ರೀಮಾನ್ ಯನ್ ರುದ್ರಯ್ಯನವರು ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೀಮಹೋತ್ಸವ ಫಂಡಿನ ವಾರ್ಷಿಕ ವರದಿಯನ್ನು ಮತ್ತು ಶ್ರೀ ಜಗದ್ಗುರು ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತ ಮತ್ತು ವೇದ ಪಾಠಶಾಲಾ ಬೋರ್ಡಿಂಗಿನ ಗ್ರಂಥಾಲಯದ ವಾರ್ಷಿಕ ವರದಿಯನ್ನು ಓದಿ ಹೇಳಿದರು ಅನಂತರ ಪರಮ ತಪೋನಿಧಿಗಳೂ ವೀರವೈರಾಗ್ಯಮೂರ್ತಿಗಳೂ ಮಹಾಂತಿನಮಠಾಧ್ಯಕ್ಷರೂ ಆದ ಶ್ರೀ|| ಸ|| ಬ್ರ|| ಸ|| ಗಂಗಾಧರಶಿವಾಚಾರ್ಯಸ್ವಾಮಿಗಳವರು "ಪರಮಶಾಂತಿ" ಎಂಬ ವಿಷಯವನ್ನು ಕುರಿತು ಮಹೋಪನ್ಯಾಸವನ್ನು ಮಾಡಿದರು ಅನಂತರ ಸಭಾಧ್ಯಕ್ಷರಾದ ಶ್ರೀಮಾನ್ ರಾಜಧರ್ಮಪ್ರವೀಣ ದಿವಾನ್‌ಬಹದ್ದೂರು ರಿಟೈರ್ಡ್ ಚೀಫ್‌ಜಸ್ಟೀಸ್ ಸಿ ಮಹಾದೇವಯ್ಯನವರು ಪರಮ ವೈದಿಕವಾದ ವೀರಶೈವಮತವನ್ನು ಶ್ರೀಪರಶಿವನ ಪಂಚಮುಖಗಳಿಂದಾವಿರ್ಭವಿಸಿದ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರು ಪ್ರತಿಯೊಂದು ಯುಗದ ಆದಿಯಲ್ಲಿ ಸ್ಥಾಪಿಸಿರುವರು ವೇದಾಗಮೋಪನಿಷತ್ತುಗಳಲ್ಲಿ ಹೇಳಿದ ಪ್ರಕಾರ ವೀರಶೈವಮತವು ಬ್ರಾಹ್ಮಣಾದಿಚತುರ್ವರ್ಣಗಳಿಂದಲೂ ಬ್ರಹ್ಮಚರ್ಯಾದಿ ಚತುರಾಶ್ರಮಗಳಿಂದಲೂ ಕೂಡಿರುವದು ಎಂಬ ವಿಷಯದಲ್ಲಿ ಶಿವಾಗಮಗಳ ಪ್ರಮಾಣ ಪುರಸ್ಸರವಾಗಿ ಮತ್ತು ಪ್ರೈವೀ ಕೌನ್ಸಿಲ್ ಮದ್ರಾಸ್ ಬೊಂಬಾಯಿ ಮೊದಲಾದ ರಾಜಧಾನಿಗಳಲ್ಲಿರುವ ಹೈಕೋರ್ಟುಗಳ ರಿಕಾರ್ಡುಗಳ ಪೂರ್ವಕ ಮೂರು ಘಂಟೆಯವರೆವಿಗೂ ಅನುಪಮವಾದ ಭಾಷಣವನ್ನು ಮಾಡಿದರು ತರುವಾಯ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ಮಹಾಮಂಗಳ ಪುಷ್ಪಾಂಜಲಿಗಳೂ ಶ್ರೀಮನ್ಮಹಾರಾಜರ ಶ್ರೇಯ ಪ್ರಾರ್ಥನೆಯೂ ನಡೆದ ತರುವಾಯ ಶ್ರೀಜಗದ್ಗುರು ರೇಣುಕಾಚಾರ್ಯರ ಪ್ರಸಾದವನ್ನು ಶ್ರೀ|| ಸ|| ಬ್ರ|| ಸ|| ಗಂಗಾಧರಶಿವಾಚಾರ್ಯಸ್ವಾಮಿಗಳವರು ಆಶೀರ್ವಾದ ಪೂರ್ವಕವಾಗಿ ಸಭಿಕರೆಲ್ಲರಿಗೂ ಅನುಗ್ರಹಿಸಿದರು. ಆಚಾರ್ಯರ ಜಯಘೋಷದೊಡನೆ ಸಭಾಕಾರ್ಯಕ್ರಮವು ಸಮಾಪ್ತಿಯಾದ ಬಳಿಕ ಪುಷ್ಪನಿರ್ಮಿತವಾದ ರಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಯನ್ನಿರಿಸಿ ಬೆಂಗಳೂರು ನಗರದ ಸಮಸ್ತ ರಾಜಬೀದಿಗಳಲ್ಲಿ ರಾತ್ರಿ 12 ಘಂಟೆಯ ವರೆವಿಗೂ ನಂದಿಧ್ವಜ ವೇದ ವಿನೋದ ವಾದ್ಯಗಳೊಡನೆ ಮೆರವಣಿಗೆಯು ಮಾಡಲ್ಪಟ್ಟಿತು ಆ ದಿನ ಮಠೆಯ ಒಂದು ಪ್ರಯುಕ್ತ ಎರಡನೇ ದಿನ ಪ್ರಾತಃಕಾಲ ೯ ಘಂಟೆಯಿಂದ ಮಧ್ಯಾಹ್ನ ಮೂರು ಘಂಟೆಯ ವರೆವಿಗೂ ಪುನಃ ಮೆರವಣಿಗೆ ಮಹೋತ್ಸವವು ಮಾಡಲ್ಪಟ್ಟಿತು ಮೆರವಣಿಗೆಯು ಶ್ರೀಮಹಾಂತಿನ ಮಠಕ್ಕೆ ತಲ್ಪಿದ ಕೂಡಲೇ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ಮಂಗಲಪುಷ್ಪಾಂಜಲಿಗಳು ನಡೆದ ತರುವಾಯ ಸರ್ವರಿಗೂ ಪ್ರಸಾದವಿನಿಯೋಗವು ಮಾಡಲ್ಪಟ್ಟಿತು ಈ ಜಯಂತೀಮಹೋತ್ಸವಕ್ಕೆ ಬೆಂಗಳೂರು ನಗರದ ಪ್ರಮುಖರಾದ ಡಿ ಹೆಚ್ ಚಂದ್ರಶೇಖರಯ್ಯನವರು ನ್ಯಾಯವಿಧಾಯಕ ಸಭಾಧ್ಯಕ್ಷರು ಕೆ ಎಂ ವಣ್ಣನವರು ರಿಟೈರ್ಡ್ ಕನ್ಸರ್ವೇಟರ್ ಫಾರೆಸ್ಟ್ಸ್ ರವರು ಹೆಚ್ ಕೆ ವೀರಬಸಯ್ಯನವರು ರಿಟೈರ್ಡ್ ಡಿಸ್ಟ್ರಿಕ್ಟ್ ಜಡ್ಜರು ಜಿ ಕೆ ರುದ್ರಾರಾಧ್ಯರು ರಿಟೈರ್ಡ್ ಇನ್‌ಕಂಟ್ಯಾಕ್ಸ್ ಅಸಿಸ್ಟೆಂಟ್ ಕಮಿಷನರು ಕೆ ಎನ್ ಗುಬ್ಬಣ್ಣನವರು ಕಂಟ್ರಾಕ್ಟರವರು ಕೆ ಎಸ್ ದರಗೇಂದ್ರಯ್ಯನವರು ಸಂಸ್ಕೃತಕಾಲೇಜು ಪ್ರಿನ್ಸಿಪಾಲರು ಡಾ|| ಓ|| ಯಸ್|| ಮೈಸೂರು ಸಿದ್ಧಪ್ಪನವರು ಇವರೇ ಮೊದಲಾದ ಪುರಪ್ರಮುಖರು ಆಗಮಿಸಿದ್ದರು ಜಯಂತೀಮಹೋತ್ಸವದ ಮಹಾಸಭೆಯಲ್ಲಿ ಶ್ರೀಮಾನ್ ಗ್ರಂಥಿಗೆ ಬುಳ್ಳಪ್ಪನವರ ಮಕ್ಕಳು ಜಿ ವಿ ಶಿವನಂಜಪ್ಪನವರು ಕೆ ನಂಜುಂಡಪ್ಪನವರ ಮಕ್ಕಳು ಕೆ ಎನ್ ಗುಬ್ಬಣ್ಣನವರು ಉಭಯರೂ ಒಳ್ಳೆ ಹಣವನ್ನು ಖರ್ಚುಮಾಡಿ ಮಹಾಂತಿನ ಮಠದ ಮೇಲ್ಭಾಗದಲ್ಲಿ ಭವ್ಯವಾದ ಸಭಾಮಂಟಪವನ್ನು ಕಟ್ಟಿಸಿಕೊಡತಕ್ಕವರೆಂದು ವ್ಯಾಖ್ಯಾನವನ್ನು ಮಾಡಿದರು ಗುರುಸೇವಾತತ್ಪರರಾದ ಉಭಯರಿಗೂ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನುಂಟುಮಾಡಲೆಂದು ಶ್ರೀಜಗದ್ಗುರು ರೇಣುಕಾಚಾರ್ಯ ಭಗವತ್ಪಾದರನ್ನು ಪ್ರಾರ್ಥಿಸುತ್ತೇನೆ ಈ ಜಯಂತೀ ಮಹೋತ್ಸವ ಸಮಾರಂಭವು ಇನ್ನೂ ಅನೇಕ ದಿನಗಳ ಪರ್ಯಂತರವಾಗಿ ನಡೆಯುತ್ತದೆ

ಆರ್. ಎಚ್. ಎಮ್. ವೇ|| ಸದಾಶಿವಶಾಸ್ತ್ರಿ

ಬಿಡದಿ

ತಾರೀಖು ೮-೩-೪೪ ನೇ ಬುಧವಾರ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಬಿಡದಿ ಗ್ರಾಮದಲ್ಲಿ "ಆಚಾರ್ಯ ತತ್ತ್ವ ಪ್ರಕಾಶಕ" ಬಿ ಸಿ. ರೇವಣ್ಣಶಾಸ್ತ್ರಿಗಳವರು "ಶ್ರೀ ಶಿವಾನಂದ ಹಾಲ್" ನಲ್ಲಿ ವಿಜೃಂಭಣೆಯಿಂದ ನೆರವೇರಿಸಿದರು ಆ ದಿವಸ ಪ್ರಾತಃಕಾಲ ಸುಂದರವಾಗಿ ಶೃಂಗರಿಸಲ್ಪಟ್ಟ ಮಂಟಪದಲ್ಲಿ ಶ್ರೀ ಜಗದ್ಗುರು ರಜತ ಮೂರ್ತಿಗೆ ಷೋಡಶೋಪಚಾರಗಳಿಂದ ವಿಧ್ಯುಕ್ತವಾಗಿ ಪೂಜೆಯು ನೆರವೇರಿಸಲ್ಪಟ್ಟಿತು ಸಾಯಂಕಾಲ ಸ್ವಾಮಿಯ ಮಹಾ ಮಂಗಳಾರತಿಗೆ ಗ್ರಾಮ ಪ್ರಮುಖರೆಲ್ಲರೂ ಆಗಮಿಸಿದ್ದರು ಪ್ರಸಾದ ವಿನಿಯೋಗವಾದಮೇಲೆ ಶ್ರೀ ಜಗದಾಚಾರ್ಯರ ಜಯಘೋಷದೊಡನೆ ಜಯಂತಿ ಮಹೋತ್ಸವ ಸಮಾಪ್ತಿಗೊಳಿಸಲ್ಪಟ್ಟಿತು.

ಓರ್ವ ಗುರುಭಕ್ತ

ಹಾರನಹಳ್ಳಿ

ಶಿವಮೊಗ್ಗಾ ಜಿ|| ಹಾರನಹಳ್ಳಿಯಲ್ಲಿರುವ ವೇ|| ಗುಬ್ಬೀ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರು ತಮ್ಮ ಗೃಹದಲ್ಲಿ ಪದ್ಧತಿಪ್ರಕಾರ ಫಾಲ್ಗುಣ ಶುದ್ಧ ೧೪ (೮-೩-೪೪) ಬುಧವಾರ ಪ್ರಾತಃಕಾಲ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರವನ್ನು ಭವ್ಯಮಂಟಪದಲ್ಲಿ ಮೂರ್ತಗೊಳಿಸಿ ಅಷ್ಟವಿಧಾರ್ಚನ ಷೋಡಶ ಪೂಜೆಗಳನ್ನು ಮಾಡಿ ಪ್ರಸಾದವನ್ನು ವಿನಿಯೋಗಿಸಿ ಮಧ್ಯಾಹ್ನ ಗಣವರ್ಯರನ್ನು ಸಂತರ್ಪಣೆಯಿಂದ ತೃಪ್ತಿಗೊಳಿಸಿ ಸಾಯಂಕಾಲ ಮಹಾ ಗುರುಗಳ ಲೀಲೆಗಳನ್ನು ಸಂಕ್ಷೇಪವಾಗಿ ವಿವರಿಸಿ ಬೋಧಿಸಿ ಸರ್ವರನ್ನೂ ಆನಂದಗೊಳಿಸಿದರು

ಓರ್ವ ಉತ್ಸವಭಾಗಿ

ಬೆಳಗಾಂವ

ಬೆಳಗಾಂವ ಹಿರೇಬಜಾರ ಉಪಾಸ್ತಿ ಹಿರೇಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ಇದೇ ಫಾಲ್ಗುಣ ಶು ೧೪ ಬುಧವಾರ ಈ ಶುಭದಿವಸ ಬ್ರಾಹ್ಮೀಮುಹೂರ್ತದಲ್ಲಿ ಶ್ರೀಜಗದ್ಗುರು ಮೂರ್ತಿಗೆ ರುದ್ರಾಭಿಷೇಕವು ಸಹಸ್ರ ಪುಷ್ಪಾರ್ಚನೆಯೂ, ಶಾಸ್ತ್ರೋಕ್ತ ಅನುಷ್ಠಾನ ಜಪತಪಾದಿಗಳು ಬಹು ಸಂಭ್ರಮದಿಂದ ಶೃಂಗರಿಸಿದ ಸ್ವಂತ ಮಠದಲ್ಲಿ ಪಂಡಿತ ಶ್ರೀ ಕೈಲಾಸನಾಥಶಾಸ್ತ್ರಿಗಳವರಿಂದ ಜರಗಿತು ಕುಂ|| ಸೌ|| ಪಾರ್ವತಾದೇವಿಯವರು ಬಹು ಭಕ್ತಿಯಿಂದ ೧೧೧ ಆರತಿ ಮಂಗಲಕರವಾದ ಚಿನ್ನದ ಆರತಿಮಾಡಿದರು ಪಂಡಿತರ ಪುತ್ರರಾದ ಕಾಶೀನಾಥಶಾಸ್ತ್ರಿಗಳು, ವಿಶ್ವನಾಥಶಾಸ್ತ್ರಿಗಳು, ಸದಾಶಿವಶಾಸ್ತ್ರಿಗಳು ಇವರುಗಳಿಂದ ನಡೆದ ವೇದಘೋಷವು

(೩ನೆಯ ಪುಟವನ್ನು ನೋಡಿ).

ಪಂಚಾಚಾರ್ಯಪ್ರಭಾ.

೧೯೪೪ನೆಯ ಮಾರ್ಚಿ ತಾ ೧೩ನೇ ಸೋಮವಾರ

ತ್ರಿವಿಧಲಿಂಗೋಪಾಸನೆ

ಲಿಂಗತ್ರಯಂ ... [illegible] |

ಲಿಂಗಮಿತ್ಯುಚ್ಯತೇ ... [illegible] ||

ಸ್ಥಾವರಜಂಗಮ ... ಯಾವ ವಸ್ತುವಿನಲ್ಲಿಯೇ ... ಅಡಕವಾಗುತ್ತದೆಯೋ ಆ ... ಲಿಂಗವೆಂದು ಹೇಳಿಸಿಕೊಳ್ಳುತ್ತದೆ. ... ಲಿಂಗದ ಉಪಾಸನೆಯ ... ಶಿವನು ಜಗದ್ ... ನಿಷ್ಕಲರೂಪನಾಗಿಯೂ ಸಕಲನಿಷ್ಕಲರೂಪನಾಗಿಯೂ ತೋರುತ್ತಿರುವನು. ಕೇವಲ ನಿಷ್ಕಲರೂಪವಿರುವ ಕಾಲದಲ್ಲಿ ಭಾವಲಿಂಗವೆಂದೂ, ಸಕಲನಿಷ್ಕಲರೂಪದಿಂದಿರುವ ಕಾಲದಲ್ಲಿ ಪ್ರಾಣಲಿಂಗವೆಂದೂ ಕೇವಲ ಸಕಲರೂಪದಿಂದಿರುವ ಕಾಲದಲ್ಲಿ ಇಷ್ಟಲಿಂಗವೆಂದೂ ಮೂರು ಬಗೆಯಾಗುವನು. ಇವುಗಳಲ್ಲಿ ಭಾವಲಿಂಗವೆಂಬುದು ಅತಿಸೂಕ್ಷ್ಮವಾದುದರಿಂದ ಭಾವದಿಂದ ಗ್ರಹಿಸಲ್ಪಡಲು ಯೋಗ್ಯವಾದುದು, ಪ್ರಾಣಲಿಂಗವು ಸೂಕ್ಷ್ಮವಾದುದರಿಂದ ಮನಸ್ಸಿನಿಂದ ಗ್ರಹಿಸಲ್ಪಡಲು ಯೋಗ್ಯವಾದುದು. ಇಷ್ಟಲಿಂಗವು ಸ್ಥೂಲವಾದುದರಿಂದ ನೇತ್ರದಿಂದ ಗ್ರಹಿಸಲ್ಪಡಲು ಯೋಗ್ಯವಾದುದು. ಲೋಕದಲ್ಲಿ ಯಾವ ಪದಾರ್ಥವು ಕಣ್ಣಿನಿಂದ ನೋಡಲ್ಪಡುವುದೋ ಆ ವಸ್ತುವಿನಲ್ಲಿಯೇ ಮನಸ್ಸು ... ಪ್ರವರ್ತಿಸುತ್ತದೆ. ಯಾವ ಪದಾರ್ಥವು ನೇತ್ರಗೋಚರವಾಗುವುದಿಲ್ಲವೋ ಅದು ಮನಸ್ಸಿಗೆ ಗೋಚರವಾಗುವುದಿಲ್ಲ. ಯಾವುದು ಮನಸ್ಸಿಗೆ ಗೋಚರವಾಗುವುದಿಲ್ಲವೋ ಆ ಪದಾರ್ಥವು ಭಾವಕ್ಕೂ ಗೋಚರವಾಗುವುದಿಲ್ಲ. ಭವರೋಗವನ್ನು ನಾಶಮಾಡುವ ಶಿವಲಿಂಗವನ್ನು ನಾವು ಪ್ರಥಮತಃ ನಮ್ಮ ನೇತ್ರಗೋಚರವಾಗುವಂತೆ ಇಟ್ಟು ಆರಾಧಿಸಬೇಕಲ್ಲದೆ ಸೂಕ್ಷ್ಮರೂಪದಿಂದಾಗಲಿ ಅತಿಸೂಕ್ಷ್ಮರೂಪದಿಂದಾಗಲಿ ಆರಾಧಿಸಲು ಶಕ್ಯವಿಲ್ಲ. ಚಿತ್ರಕಾರನು ಅತಿ ಸೂಕ್ಷ್ಮವಾದ ಚಿತ್ರವನ್ನು ಬರೆಯಬೇಕಾದರೆ ಮೊದಲು ಸ್ಥೂಲವಾದ ಅನೇಕ ಚಿತ್ರಗಳನ್ನು ಬರೆಯಬೇಕಾಗುತ್ತದೆ. ಹೀಗೆ ಬರೆಯುತ್ತಾ ಬಂದಲ್ಲಿ ಅವನ ಕೈಗಳು ಪಳಗಿ ಆ ಬಳಿಕ ಸೂಕ್ಷ್ಮವಾದ ಚಿತ್ರಗಳನ್ನು ಬರೆಯುವ ಯೋಗ್ಯತೆಯನ್ನು ಪಡೆಯುತ್ತಾನೆ. ಹೀಗಲ್ಲದೆ ತನ್ನ ಕೈಗಳಿಂದಲೂ ದೃಷ್ಟಿಯಿಂದಲೂ ಯಾವುದೊಂದು ಅಭ್ಯಾಸವಾಗದಿದ್ದವನಿಗೆ ಆತ್ಮದಲ್ಲಾಗಲಿ ಮನಸ್ಸಿನಲ್ಲಾಗಲಿ ಯಾವುದೊಂದು ವಿಶೇಷಾಂಶವೂ ತೋರುವುದೇ ಇಲ್ಲ. ಇದರಿಂದ ಪ್ರತಿಯೊಂದು ಪದಾರ್ಥಾನುಭವವೆಂಬುದು ಮೊದಲು ನೇತ್ರಕ್ಕಾದ ಮೇಲೆ ಅನಂತರ ಮನಸ್ಸಿನಿಂದಲೂ ಭಾವದಿಂದಲೂ ಗ್ರಾಹ್ಯವಾಗುವುದೆಂಬುದು ಸರ್ವಾನುಭವಸಿದ್ಧವಾಗಿರುತ್ತದೆ. ಅದರಂತೆ ಸೂಕ್ಷ್ಮಾತ್ ಸೂಕ್ಷ್ಮತರವಾದ ಶಿವಲಿಂಗಸ್ವರೂಪವು ತನಗೆ ಸಾಕ್ಷಾತ್ಕಾರವಾಗಬೇಕಾದರೆ ಮೊದಲು ಸ್ಥೂಲಾಕಾರದಲ್ಲಿರುವ ಇಷ್ಟಲಿಂಗವನ್ನು ಆರಾಧಿಸಬೇಕು. ಈ ಇಷ್ಟಲಿಂಗವನ್ನು ಆರಾಧಿಸದಿದ್ದವನು ಪ್ರಾಣಲಿಂಗಾರಾಧನೆಗೆ ಅರ್ಹನೆನಿಸಲಾರನು. ಪ್ರಾಣಲಿಂಗಾರಾಧನೆಯನ್ನು ಮಾಡದವನು ಭಾವಲಿಂಗಾರಾಧನೆಗೆ ಅರ್ಹನೆನಿಸಲಾರನು. ಇಷ್ಟಲಿಂಗವು ಸ್ಥೂಲಾಕಾರವಾದುದರಿಂದ ನೇತ್ರಗ್ರಾಹ್ಯವಾದುದು. ಪ್ರಾಣಲಿಂಗವು ಸೂಕ್ಷ್ಮಾಕಾರವಾದುದರಿಂದ ಕೇವಲ ಮನೋಗ್ರಾಹ್ಯವಾದುದು. ಭಾವಲಿಂಗವು ಅತಿ ಸೂಕ್ಷ್ಮಾಕಾರವಾದುದರಿಂದ ಕೇವಲ ಭಾವಗ್ರಾಹ್ಯವಾದುದು.

ಸ್ಥೂಲಂ ಬಾಹ್ಯಮಿತಿಪ್ರೋಕ್ತಂ ಸೂಕ್ಷ್ಮಮಾಭ್ಯಂತರಂ ಸ್ಮೃತಂ||

ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಎಂಬೀ ಮೂರು ಲಿಂಗಗಳಲ್ಲಿ ಇಷ್ಟಲಿಂಗವೇ ಸ್ಥೂಲವು, ಉಳಿದ ಎರಡು ಲಿಂಗಗಳು ಸೂಕ್ಷ್ಮಗಳು. ಸೂಕ್ಷ್ಮಗಳಾದ ಪ್ರಾಣಲಿಂಗ ಭಾವಲಿಂಗಗಳೇ ಅಭ್ಯಂತರಲಿಂಗಗಳು. ಇಷ್ಟಲಿಂಗವೇ ಬಾಹ್ಯಲಿಂಗವು. ಇವುಗಳಲ್ಲಿ ಇಷ್ಟಲಿಂಗವನ್ನು ವೇದೋಕ್ತನಿಯಮದಿಂದ ಆರಾಧಿಸದಿದ್ದವನಿಗೆ ಪ್ರಾಣಲಿಂಗಾರಾಧನೆಯು ಮತ್ತು ಭಾವಲಿಂಗಾರಾಧನೆಯು ಸಿದ್ಧಿಸುವುದಿಲ್ಲ. ಹೃದಯಾಕಾಶದಲ್ಲಿ ಸ್ವ ... ಪ್ರಕಾಶಿಸುವ ಜ್ಯೋತಿರ್ಲಿಂಗದ ದರ್ಶನವು ... ಇಷ್ಟಲಿಂಗಾರಾಧನೆಯನ್ನು ಮಾಡದ ಯಾವನು ಜ್ಯೋತಿರ್ಲಿಂಗಸಾಕ್ಷಾತ್ಕಾರವನ್ನು ಪಡೆಯಬೇಕೆಂದು ಬಯಸುತ್ತಾನೆಯೋ, ಅವನು ಬೀಜವನ್ನು ಬಿತ್ತದೆ ಫಲವನ್ನು ಅಪೇಕ್ಷಿಸುವ ಮೂಢನಂತೆ ಹಾಸ್ಯಾಸ್ಪದನಾಗುವನು. ಆದ್ದರಿಂದಲೇ ವೀರಶೈವಸಿದ್ಧಾಂತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರು, ಸರ್ವರೂ ಆ ಕರುಣಾಳುವಿನ ಕರುಣೆಯನ್ನು ಪಡೆದು ಭವಬಂಧದಿಂದ ಬಿಡುಗಡೆಯಾಗಲೆಂಬ ವಿಶಾಲ ದೃಷ್ಟಿಯಿಂದ ಸ್ಥೂಲವಾಗಿ ಇಷ್ಟಲಿಂಗಧಾರಣರೂಪ ಸಿದ್ಧಾಂತವನ್ನು ಮಾಡಿದ್ದಾರೆ. ವೀರಶೈವ ಮತಸ್ಥನಾಗಿ ಯಾವನದೇಹದಲ್ಲಿ ಇಂಥ ಇಷ್ಟಲಿಂಗವಿರುವುದಿಲ್ಲವೋ ಅವನ ದೇಹವು ಪಾಳುಬಿದ್ದ ಕ್ಷೇತ್ರದಂತೆ ವ್ಯರ್ಥವಾಗುವುದು. ಈ ಇಷ್ಟಲಿಂಗವೆಂಬುದು ಮೋಕ್ಷಸಾಧನೆಯಲ್ಲಿ ಪ್ರಧಾನಸೋಪಾನವಾದುದರಿಂದ ಇದನ್ನು ಸಿದ್ಧಾಂತಕಾರರು ವಿಶೇಷವಾಗಿ ಸ್ತುತಿಸಿರುತ್ತಾರೆ.

ಇಷ್ಟಪ್ರಾಪ್ತಿಕರಂ ಸಾಕ್ಷಾದನಿಷ್ಟಪರಿಹಾರಕಂ |
ಇಷ್ಟಿಪೂಜಾ ... ಪೂಜಿತಮಾದರಾತ್ ||
ಇಷ್ಟಲಿಂಗಮಿತಿ ಖ್ಯಾತಂ ... ಜ್ಯೋತಿರ್ಲಿಂಗಪೂಜಕೈಃ |
ಇಷ್ಟಸಂಪರಂ ಸ್ವಭಕ್ತಾನಾಂ ಸುಯುಜ್ಯತೇ ... |
ತದಿಷ್ಟಲಿಂಗಮಿತ್ಯುಕ್ತಂ ... ||

ಈ ಇಷ್ಟಲಿಂಗವೆಂಬುದು ಭಕ್ತರಿಗೆ ಇಷ್ಟಾರ್ಥಗಳನ್ನುಂಟುಮಾಡುತ್ತದೆ. ಅನರ್ಥಪರಂಪರೆಗಳನ್ನೆಲ್ಲಾ ಹೋಗಲಾಡಿಸುವುದು. ಇಷ್ಟಿಯೆಂದರೆ ಪೂಜೆಯು. ಇಂಥ ಪೂಜೆಯಿಂದ ಯಾವ ಲಿಂಗವು ಭಕ್ತಿಯಿಂದ ಪೂಜಿಸಲ್ಪಡುವುದೋ ಅದೇ ಇಷ್ಟಲಿಂಗವೆಂದು ಲಿಂಗಪೂಜಕರಾದ ಮಹಾಚಾರ್ಯರು ಅಭಿಪ್ರಾಯಪಡುತ್ತಾರೆ. ತನ್ನ ದೇಹದಲ್ಲಿ ಧರಿಸಿಕೊಂಡು ಅನವರತವೂ ಪೂಜಿಸುತ್ತಿರುವ ಭಕ್ತರುಂಟೋ ಅಂತಹ ಭಕ್ತರ ಇಷ್ಟಾರ್ಥಗಳನ್ನುಂಟುಮಾಡುವದರಿಂದ ಇದು ಇಷ್ಟಲಿಂಗವೆಂಬ ಹೆಸರನ್ನು ಪಡೆಯಿತೆಂಬ ಆದರ್ಶಣ ಪ್ರತಿವಾಕ್ಯಗಳ್ ... ಈ ವಿಷಯದಲ್ಲಿ ಜಾಗರೂಕರನ್ನಾಗಿ ಮಾಡುತ್ತವೆ. ಆದುದರಿಂದ ಅವಶ್ಯವಾಗಿ ಇಷ್ಟಲಿಂಗವನ್ನು ಧರಿಸಿ ಪೂಜಿಸಬೇಕು. ಸ್ಥೂಲಶರೀರದಲ್ಲಿ ಇಷ್ಟಲಿಂಗಾರಾಧನಸಿದ್ಧಿಯನ್ನು ಪಡೆದವನಿಗೆ ಸೂಕ್ಷ್ಮಶರೀರದಲ್ಲಿ ಮುಂದಿನ ಪ್ರಾಣಲಿಂಗಾರಾಧನೆಯು ಸುಲಭವಾಗುವದು. ಪ್ರಾಣಲಿಂಗಾರಾಧನೆಯ ಸಿದ್ಧಿಯನ್ನು ಪಡೆದವನಿಗೆ ಕಾರಣಶರೀರದಲ್ಲಿ ಭಾವಲಿಂಗಾರಾಧನೆಯು ಸುಲಭವಾಗುವುದು. ಯಾವ ವೀರಶೈವನು ಶ್ರೀ ಗುರುವಿನಿಂದ ಇಷ್ಟಲಿಂಗವನ್ನು ಪಡೆದು ಕ್ರಮವರಿತು ಪರಿಶುದ್ಧಾತ್ಮನಾಗಿ ಅರ್ಚಿಸುವುದಿಲ್ಲವೋ ಅವನು ಮನೋಗ್ರಾಹ್ಯವೂ, ಆತ್ಮಗ್ರಾಹ್ಯವೂ ಆದ ಪ್ರಾಣಲಿಂಗ ಭಾವಲಿಂಗಾರಾಧನೆಗಳಿಗೆ ಅರ್ಹನಾಗುವುದಿಲ್ಲ. ಕೆಳಗಿನ ತರಗತಿಯಲ್ಲಿ ತಕ್ಕಷ್ಟು ಜ್ಞಾನವನ್ನು ಪಡೆಯದಿದ್ದವನು ಮೇಲುತರಗತಿಗೆ ಪ್ರವೇಶಿಸಲು ಅರ್ಹತೆಯುಂಟಾಗುವುದಿಲ್ಲವೆಂಬುದು ಸರ್ವಾನುಭವಸಿದ್ಧವಾಗಿರುತ್ತದೆ. ಹೀಗೆ ಸ್ಥೂಲ ಸೂಕ್ಷ್ಮಕಾರಣಗಳೆಂಬ ಮೂರು ಶರೀರಗಳಲ್ಲೂ ಕ್ರಮವಾಗಿ ಇಷ್ಟ ಪ್ರಾಣ ಭಾವಗಳೆಂಬ ಮೂರು ಲಿಂಗಗಳನ್ನು ಧರಿಸಿ ಆರಾಧಿಸುವ ಶಕ್ತಿಯನ್ನು ಪಡೆದವನೇ ಜೀವನ್ಮುಕ್ತನೆಂಬ ಹೆಸರನ್ನು ಪಡೆಯುವನು. ಈ ರೀತಿಯಾಗಿ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಸಿದ್ಧಾಂತ ನಿಯಮಗಳನ್ನೆಲ್ಲಾ ಸಾಂಗವಾಗಿ ಪರಿಪಾಲಿಸಿದವರಲ್ಲಿ ಪರಮಾತ್ಮನು ಸಂಪೂರ್ಣ ಕೃಪಾಕಟಾಕ್ಷವನ್ನಿರಿಸಿ ಮೋಕ್ಷರೂಪವಾದ ನಿತ್ಯಪದವಿಯನ್ನನುಗ್ರಹಿಸುವನು. ಇಂಥವರಲ್ಲಿಯೇ ವೀರಶೈವ ಎಂಬ ಅಭಿದಾನವು ಅನ್ವರ್ಥಕವಾಗುವುದು. ಇವರ ಜನ್ಮವೇ ಸಾರ್ಥಕವು!

ಉರಿಗಾಂ ಸಬ್‌ಇನ್ಸ್‌ಪೆಕ್ಟರು ವೆಂಕಪ್ಪಯ್ಯನವರು ಒಂದು ಎತ್ತನ್ನು ಕೊಲ್ಲುತ್ತಿದ್ದ ೮ ಜನರ ಮೇಲೆ ಮೊಕದ್ದಮೆ ಹೂಡಿದ್ದರು. ೮ ಅಪರಾಧಿಗಳಿಗೂ ತಲಾ ೧೫ ರೂ ದಂಡ ತಪ್ಪಿದಲ್ಲಿ, ೧ ತಿಂಗಳು ಕಠಿಣ ಶಿಕ್ಷೆ ವಿಧಿಸಲಾಯಿತು.

ಯುದ್ಧವಾರ್ತೆ.

ಯುಗೋಸ್ಲೇವಿಯಾದಲ್ಲಿ ಕದನ

ಯುಗೊಸ್ಲೇವಿಯಾದಲ್ಲಿ ಗಣಿಯೊಂದರ ಆಕ್ರಮಣಕ್ಕಾಗಿ ಜರ್ಮನರಿಗೂ ಮತ್ತು ಯುಗೊಸ್ಲೇವಿಯಾ ದೇಶಭಕ್ತರಿಗೂ ಉಗ್ರಕದನವಾಗುತ್ತಿದೆ. ಗಣಿಗಳು ತಮ್ಮ ವಶವಾದರೆ ಸಾಕೆಂದು ನಾಜಿಗಳು ನಷ್ಟವನ್ನು ಲಕ್ಷಿಸದೇ ಕಾದುತ್ತಿದ್ದಾರೆ. ಆದರೂ ಸಾರ್ಥಕನಾಗಿಲ್ಲ. ಯುಗೊಸ್ಲೇವಿಯದಲ್ಲಿರುವ ಜರ್ಮನ್ ಕೈಗೊಂಬೆ ಮಹಾಪ್ರಧಾನರ ಆಪ್ತಕಾರ್ಯದರ್ಶಿಗಳನ್ನು ಯಾರೋ ಗುಂಡಿನಿಂದ ಕೊಂದರೆಂದು ತಿಳಿದುಬಂದಿದೆ.

ಬ್ರಿಟನ್ನಿನ ಸಂಗ್ರಾಮವಸ್ತು ನಿರ್ಮಾಣಶಕ್ತಿ

ಸಂಗ್ರಾಮ ಮೊದಲಾದಂದಿನಿಂದ ಬ್ರಿಟನ್ನು ಇದುವರೆಗೆ ೮೩೦೦೦ ಟ್ಯಾಂಕುಗಳು ಮತ್ತು ಶಸ್ತ್ರ ಬಂಡಿಗಳನ್ನೂ, ೯೦೦೦೦ ವಿಮಾನಗಳನ್ನು, ೧,೧೫೦೦೦ ಬಂದೂಕುಗಳನ್ನೂ ತಯಾರಿಸಿದೆ. ನೌಕಾ ನಿರ್ಮಾಣವು ಸಹ ಸಂಗ್ರಾಮದಲ್ಲಿ ಆದ ನಷ್ಟಕ್ಕಿಂತ ಅಧಿಕ ಪ್ರಮಾಣದಲ್ಲೇ ನಡೆದಿದೆ. ೧೯೪೩ ನೇ ವರ್ಷದ ಅಂತ್ಯದಲ್ಲಿ ಬ್ರಿಟನ್ನಿನ ನೌಕಾಬಲವು ಯುದ್ಧಾರಂಭದಲ್ಲಿದ್ದುದಕ್ಕಿಂತ ಅಧಿಕವಾಗಿಯೇ ಇತ್ತೆಂದು ಹೇಳಲಾಗಿದೆ.

ಬರ್ಲಿನ್ ಮೇಲೆ ಬೆಂಕಿಯ ಮಳೆ

ಕಳೆದ ೮ ನೆಯ ತಾರೀಖು ಅಮೆರಿಕದ ಬಲಯುತ ಬಾಂಬರುಗಳು ಬರ್ಲಿನ್ನಿನಲ್ಲಿ ಕಾರ್ಖಾನೆಗಳ ಮೇಲೆ ಮುತ್ತಿಗೆ ನಡೆಸಿದವು. ೩,೫೦,೦೦೦ ಕ್ಕಿಂತ ಹೆಚ್ಚು ಅಗ್ನಿವರ್ಧಕ ಬಾಂಬುಗಳನ್ನೂ, ೧೦,೦೦೦ ಕ್ಕಿಂತ ಹೆಚ್ಚು ಸಿಡಿತದ ಬಾಂಬುಗಳನ್ನೂ ಹಾಕಲಾಯಿತು. ಇದು ಎರಡನೇ ಪ್ರಚಂಡ ಹಗಲು ಮುತ್ತಿಗೆ. ಒಟ್ಟು ೧೦೦೦ ಬಾಂಬರು ವಿಮಾನಗಳು ಮುತ್ತಿಗೆಯಲ್ಲಿ ಭಾಗವಹಿಸಿದ್ದವೆಂದು ಇಂದಿನ ವಿಮಾನ ಕದನದಲ್ಲಿ ಒಟ್ಟು ೭ ಲಕ್ಷ ಮಂದಿ ಭಾಗವಹಿಸಿದ್ದಿರಬಹುದೆಂದು ಊಹಿಸಲಾಗಿದೆ.

ಜರ್ಮನ್ ವ್ಯೂಹವನ್ನು ಭೇದಿಸಿದೆ

ಕ್ರಿವಾಯ್‌ರಾಗ್ ದಕ್ಷಿಣದಲ್ಲಿ ಬಲಯುತ ರಷ್ಯನ್ ಪಡೆಗಳು ಜರ್ಮನ್ ವ್ಯೂಹದೊಳಕ್ಕೆ ನುಗ್ಗಿ ಹೋಗಿವೆ. ಪಶ್ಚಿಮ ಉಕ್ರೇನಿನಲ್ಲಿ ನಾಜಿಗಳು ಆರಿಸಿದ ಸೈನಿಕರೊಂದಿಗೆ ಪ್ರತಿಭಟನೆಯನ್ನು ಹೆಚ್ಚಿಸಿದರೆಲ್ಲ ಕದನ ಜೋರಾಗುತ್ತಿದೆ. ಕಳೆದ ೨೪ ಗಂಟೆಗಳಲ್ಲಿ ರಷ್ಯನರು ಹಲವು ಊರುಗಳನ್ನು ಮುತ್ತಿದಾರೆ. ಫೀಲೆಂಡ್‌ಕೊಲ್ಲಿ ತೀರದಲ್ಲಿ ಉಗ್ರಕದನವಾಗುತ್ತಿದೆ. ನಾರ್ವಾ ನದಿ ಪಶ್ಚಿಮ ದಡದಲ್ಲಿ ರಷ್ಯನರು ಹಿಡಿದಿರುವ ಸ್ಥಾನದಿಂದ ಅವರನ್ನು ಓಡಿಸಲು ನಾಜಿಗಳು ವಿಶ್ವಪ್ರಯತ್ನ ನಡೆಸುತ್ತಿದ್ದಾರೆ. ನಾರ್ವಾ ಕೋಟೆಯಲ್ಲಿ ಕೈತಪ್ಪಿ ಹೋಗುವುದೋ ಎಂದು ಜರ್ಮನರು ನಡುಗುತ್ತಿದ್ದಾರೆ.

ಇಂಗ್ಲೆಂಡ್-ತುರ್ಕಿ ಸಂಧಾನದ ಸ್ಥಿತಿ

ತುರ್ಕಿ-ಇಂಗ್ಲೆಂಡ್ ಸಂಧಾನ ಮುರಿದುಬಿತ್ತು. ತುರ್ಕಿಗೆ ಹೋಗುತ್ತಿದ್ದ ಸಂಗ್ರಾಮವಸ್ತುಗಳಿಗೆ ತಡೆ ಹಾಕಿದ್ದೂ ಆಯಿತು. ಈಗುಂಟಾಗಿರುವ ಪರಿಸ್ಥಿತಿ ತುಂಬಾ ನಿರಾಶಾಯುತವಾಗಿದೆ. ತುರ್ಕಿಯವರಿಂದಲೇ ತೃಪ್ತಿಕರವಾದ ಸಲಹೆ ಬಂದ ಹೊರತು ಮಾತುಕತೆಗಳು ಮತ್ತೆ ಮುಂದುವರಿಯುವ ಸಂಭವನೇ ಇಲ್ಲ. ತುರ್ಕಿಯವರಿಗೂ ಬ್ರಿಟಿಷ್ ಮಿಲಿಟರಿ ಗೋಷ್ಠಿಗೂ ಸಂಧಾನ ನಡೆಯುತ್ತಿದ್ದಾಗ, ಹಿಂದೆ ಒಪ್ಪಿಕೊಂಡಿದ್ದಂತೆ ಸಂಗ್ರಾಮವಸ್ತುಗಳನ್ನು ಕಳಿಸಬೇಕೆಂದು ತುರ್ಕಿಯವರು ಒತ್ತಾಯಪಡಿಸಿದರು. ಜರ್ಮನರು ಅನಾಟೋಲಿಯ ಕಡೆಗೆ ಮುಂದೊತ್ತಿ ಬಂದು, ಸಿರಿಯಾ ಮತ್ತು ಪರ್ಷಿಯನ್

ಕೊಳ್ಳಿ ನೇಲೆ ಬೀಳುವನೆಂಬ ಹೆದರಿಕೆಯಿದ್ದಾಗ ಇಂತಿಂತಹ ವಸ್ತುಗಳನ್ನು ಇಷ್ಟು ಪ್ರಮಾಣದಲ್ಲಿ ತುರ್ಕಿಗೆ ಕಳಿಸುವುದಾಗಿ ಬ್ರಿಟಿಷರು ಒಪ್ಪಿಕೊಂಡಿದ್ದರು. ಜರ್ಮನ್ ವಿಮಾನಗಳು ತುರ್ಕಿಯಮೇಲೆ ಮುತ್ತಿಗೆ ನಡೆಸುವ ಭೀತಿಯಿದೆಯೆಂದೇನೋ ಬ್ರಿಟಿಷರು ಒಪ್ಪಿದರು. ಆದರೆ ತುರ್ಕಿಯವರು ಬೇಡುತ್ತಿರುವಷ್ಟು ಮಟ್ಟಿಗೆ ನಾಜಿ ವಿಮಾನ ಮುತ್ತಿಗೆ ಭಯಂಕರವಾಗಿರುವುದೆಂದು ಬ್ರಿಟಿಷರು ನಂಬಲಿಲ್ಲ. ಜಲಸಂಧಿಯನ್ನು ಹಿಡಿಯುವ ಬುದ್ಧಿಯಿಂದ ಜರ್ಮನರು ಅಧಿಕಬಲದೊಂದಿಗೆ ತುರ್ಕಿಯನ್ನು ಮುತ್ತುವರೆಂದೂ, ಅಲ್ಲದೆ ಜರ್ಮನ್ ವಿಮಾನಗಳ ಮುತ್ತಿಗೆ ಬ್ರಿಟಿಷರು ನಿರೀಕ್ಷಿಸಿರುವುದಕ್ಕಿಂತ ೧೦ ರಷ್ಟು ಉಗ್ರವಾಗಿರುವುದೆಂದೂ ತುರ್ಕಿ ವಾದಿಸಿತು. ತುರ್ಕಿ ಕೇಳುವ ಸಕಲ ವಸ್ತುಗಳನ್ನೂ ಕಳಿಸುವವರೆಗೆ ಬ್ರಿಟಿಷರು ತುರ್ಕಿಗೆ ಬಂದು ವಿಮಾನನಿಲ್ದಾಣಗಳನ್ನು ಮತ್ತು ಬಲಿಷ್ಠ ಠಾಣೆಗಳನ್ನು ರಚಿಸಲು ಅವಕಾಶಕೊಡಲು ಸಾಧ್ಯವಿಲ್ಲವೆಂದು ತುರ್ಕಿ ತಿಳಿಸಿದ್ದರು. ತುರ್ಕಿಯನ್ನು ಯಾವ ಜವಾಬ್ದಾರಿಗೂ ಗಂಟುಹಾಕದ ಅದನ್ನು ಹೆಚ್ಚಿನ ಸಂಗ್ರಾಮ ವಸ್ತುಗಳನ್ನು ಪಡೆಯಬೇಕೆಂದು ತುರ್ಕಿ ರಾಜಕಾರಣಿಗಳು ಸಂಧಾನ ನಡೆಸಲು ಯತ್ನಿಸಿದ್ದೇ ಅದು ಮುರಿದು ಬೀಳಲು ಕಾರಣ. ಜರ್ಮನರ ಮುತ್ತಿಗೆಯ ಪ್ರಮಾಣವನ್ನು ತುರ್ಕಿಯವರು ತುಂಬಾ ಉತ್ಪ್ರೇಕ್ಷೆ ಮಾಡುತ್ತಾ ಬಂದರು. ೫೦೦ ಟ್ಯಾಂಕುಗಳೂ ಸೇರಿ ತಮಗೆ ಒಂದು ಪ್ರಮಾಣದ ಸಂಗ್ರಾಮ ವಸ್ತುಗಳು ಬೇಕಾಗಿದೆಯೆಂದೂ ಅದನ್ನು ಕಡಿಮೆಮಾಡಲು ತಾವು ಖಂಡಿತ ಸಿದ್ಧರಾಗಿಲ್ಲವೆಂದೂ ಸೂಚಿಸಿದರು. ಅದರಿಂದ ಬಿಕ್ಕಟ್ಟು ತಲೆ ಹಾಕಿತು.

ಇಟಲಿ ಹಡಗುಗಳ ಹಂಚಿಕೆ

ಇಟಲಿ ಸಂಗ್ರಾಮ ನೌಕೆಗಳನ್ನು ರಷ್ಯ ನೌಕಾಬಲಕ್ಕೆ ವರ್ಗಾಯಿಸಲಾಗಿದೆಯೆಂದು ರೂಜ್‌ವೆಲ್ಟರು ಪ್ರಕಟಿಸಿದ್ದಾರೆ. ಇಟಲಿಯ ನೌಕಾ ಬಲದಲ್ಲಿ ಮೂರನೇ ಒಂದು ಭಾಗವನ್ನು ವರ್ಗಾಯಿಸಿಕೊಡುವ ವಿಚಾರದಲ್ಲಿ ಸಂಧಾನ ಅರೆಬರೆ ಮುಗಿದಿದ್ದ ಈಗಾಗಲೇ ಬ್ರಿಟನ್ ಮತ್ತು ಅಮೇರಿಕಗಳು ಇಟಲಿಯ ಹಲವು ಹಡಗುಗಳನ್ನು ಉಪಯೋಗಿಸುತ್ತಿವೆ. ಅವುಗಳಲ್ಲಿ ಎಷ್ಟನ್ನು ರಷ್ಯಾಕ್ಕೆ ಕೊಡಬಹುದೆಂಬ ವಿಚಾರ ಪರ್ಯಾಲೋಚನೆಯಲ್ಲಿದೆ. “ಸಂಗ್ರಾಮ ಮುಗಿಯುವವರೆಗೆ ಎಲ್ಲ ಹಡಗುಗಳನ್ನೂ ಜಪಾನ್ ಮತ್ತು ಜರ್ಮನಿಗಳಿಗೆ ವಿರುದ್ಧವಾಗಿ ಉಪಯೋಗಿಸಲಾಗುವುದು. ರಷ್ಯಕ್ಕೆ ವರ್ಗಾಯಿಸುವ ಹಲವು ಹಡಗುಗಳನ್ನು ಇಟಾಲಿಯನರೇ ನಡೆಸುವರು. ಮತ್ತೆ ಹಲವನ್ನು ಬ್ರಿಟಿಷರೂ ಅಮೇರಿಕನರೂ ನಡೆಸುವರು” ಎಂದು ರೂಜ್‌ವೆಲ್ಟರು ತಿಳಿಸಿದ್ದಾರೆ.

ಫಿನ್ಲೆಂಡಿಗೆ ಅಲ್ಟಿಮೇಟಂ ಕೊಟ್ಟಿ ವಾರೆಯೇ?

ರಷ್ಯವು ಮುಂದಿಟ್ಟಿರುವ ಶಾಂತಿ ಸಲಹೆಗಳನ್ನು ಕುರಿತು ಫಿನ್‌ಲೆಂಡು ಇನ್ನೂ ನಿದಾನ ಮಾಡುತ್ತಿದೆ. ಇದರಿಂದ ಅದು ಜರ್ಮನಿಗೆ ಸಹಾಯಕವಾದ ರೀತಿಯಲ್ಲಿ ವರ್ತಿಸಿದಂತಾಗಿದೆ. ಉತ್ತರಕ್ಕಾಗಿ ರಷ್ಯವು ಅನಿಶ್ಚಿತ ಕಾಲದವರೆಗೆ ಕಾದು ಕೂರಲು ಸಾಧ್ಯವಿಲ್ಲವೆಂದು ರಷ್ಯವು ಸ್ಪಷ್ಟಪಡಿಸಿದೆ. ಷರತ್ತುಗಳನ್ನು ಅಂಗೀಕರಿಸುವ ವಿಚಾರದಲ್ಲಿ ರಷ್ಯಾವು ಆಗಲೇ ಫಿನ್ಲೆಂಡಿಗೆ ‘ಅಲ್ಟಿಮೇಟಂ’ ಕೊಟ್ಟಿವೆಯೆಂದೂ ಸೋಮವಾರ ಅದು ಕೊನೆಗಾಣುವುದೆಂದೂ ವದಂತಿ. ಆದರೆ ಅಧಿಕಾರಯುತ ಕ್ಷೇತ್ರಗಳಲ್ಲಿ ಏನೂ ತಿಳಿದುಬಂದಿಲ್ಲ. ರಷ್ಯನರ ಷರತ್ತುಗಳು ತುಂಬಾ ನ್ಯಾಯವಾಗಿವೆಯೆಂದು ಪರಿಗಣಿಸಲಾಗಿದೆ.

“ಯುದ್ಧದಿಂದ ಹೊರಗಾಗಲು ಬಲ್ಗೇರಿಯಾ ಸಂಧಾನ ನಡೆಸುತ್ತಿದೆ. ಗ್ರೀಸ್ ಮತ್ತು ಯುಗೋಸ್ಲೇವಿಯಾಗಳಲ್ಲಿ ತಾವು ಹಿಡಿದಿರುವ ಪ್ರದೇಶಗಳನ್ನು ಹಿಂದಕ್ಕೆ ಕೊಡುವ ಇಷ್ಟ ಬಲ್ಗೇರಿಯನರಿಗೆ ಇಲ್ಲ. ಈ ಪ್ರದೇಶಗಳನ್ನು ಬಲ್ಗೇರಿಯಾಕ್ಕೇ ಬಿಟ್ಟುಕೊಡುವುದಾದರೆ ಅದು ಯುದ್ಧದಿಂದ ಹೊರಗಾಗಲು ಹಿಂದುಮುಂದು ನೋಡುವುದಿಲ್ಲ” ಎಂದು ತುರ್ಕಿರೇಡಿಯೋ ತಿಳಿಸಿದೆ.

ಜಪಾನರಿಗೆ ಭಾರಿ ಸೋಲು!

ಅರಕಾನಿನಲ್ಲಿ ಇತ್ತೀಚಿಗೆ ಜಪಾನರಿಗೆ ಆದುದು ಭಾರಿ ಸೋಲೆಂದು ಮಿಲಿಟರಿ ಅಧಿಕಾರಿಗಳು ತಿಳಿಸುತ್ತಾರೆ. ಒಂದು ರೆಜಿಮೆಂಟ್ ಸಂಪೂರ್ಣವಾಗಿ ನಾಶವಾಯಿತು. ಮತ್ತೆರಡಕ್ಕೂ ಉಗ್ರ ಹಾನಿಯಾಯಿತು. ಇದುವರೆಗೆ ಸುಮಾರು ೩೮೦೦ ಜಪಾನರು ಹತರಾಗಿದ್ದಾರೆ. ಕನಿಷ್ಟಪಕ್ಷ ೪೫೦೦ ಮಂದಿ ಗಾಯಗೊಂಡಿರಬೇಕೆಂದು ಹೇಳಲಾಗಿದೆ.

ಜಪಾನ್ ನೌಕಾಬಲ ಎಲ್ಲಿ?

ಜಪಾನ್ ನೌಕಾಬಲವು ಸಿಂಗಪುರಕ್ಕೆ ಹಿಂತಿರುಗಿರಬಹುದೆಂದೂ, ಭಾರತ ಸಮುದ್ರ ತೀರದಲ್ಲಿ ಬ್ರಿಟಿಷ್ ನೌಕಾಬಲವಮೇಲೆ ಭಾರಿ ಕದನ ನಡೆಸುವ ಸಂಭವವಿದೆಯೆಂದೂ ಊಹಿಸಲಾಗಿದೆ. ಜಪಾನ್ ನೌಕಾಬಲವು ಮಧ್ಯ ಪೆಸಿಫಿಕ್‌ನಿಂದ ಅದೃಶ್ಯವಾಗಿ ಹೋಗಿದೆ. ಭಾರಿ ಸಂಗ್ರಾಮ ನೌಕೆಗಳಿಗೆ ಯಾವಾಗಲೂ ಒಳ್ಳೆಯ ನೌಕಾಸ್ಥಾನದ ಬೆಂಬಲವಿರಬೇಕು. ಜಪಾನಿನ ಹೊರಗಡೆ ಅಂತಹ ಮೂಲವಿರುವುದು ಟ್ರಕ್ ಮತ್ತು ಸಿಂಗಪುರ ಇವೆರಡರಲ್ಲೇ. ಟ್ರಕ್ಕಿನಲ್ಲಿ ಜಪಾನ್ ನೌಕಾಬಲ ಇಲ್ಲದಿರುವುದರಿಂದ ಅದು ಸಿಂಗಪುರದಲ್ಲಿರಬೇಕೆಂದು ಊಹಿಸಲಾಗಿದೆ. ಬಂಗಾಳಾಕೊಲ್ಲಿಯಲ್ಲಿ ಎಷ್ಟು ಬ್ರಿಟಿಷ್ ನೌಕೆಗಳಿವೆಯೋ ಗೊತ್ತಿಲ್ಲ. ಆದರೆ ಜಪಾನ್ ನೌಕಾಬಲ ಏಕಾಏಕಿ ಸಿಲೋನ್ ಮೇಲೋ ಅಥವಾ ಭಾರತದ ಪೂರ್ವತೀರದ ಮೇಲೋ ಬೀಳಬಹುದು. ಅಂತಹ ಕಾರ್ಯಕ್ರಮದಲ್ಲಿ ತುಂಬ ವಿಪತ್ತಿದೆ. ಆದರೆ ಟ್ರಕ್ ಬಂದರಲ್ಲಿರುವ ನೌಕೆಗಳನ್ನು ಕಳೆದುಕೊಳ್ಳುವುದಕ್ಕೆ ಬದಲು ಏನಾದರೊಂದು ಕಾರ್ಯ ನಡೆಸಿ ನಷ್ಟಕ್ಕೊಳಗಾಗುವುದು ಮೇಲೆಂದು ಜಪಾನ್ ನೌಕಾಬಲದ ಸಚಿವರು ಭಾವಿಸಿದಂತಿದೆ ಎಂದು ನ್ಯೂಯಾರ್ಕ್ ಟ್ರಿಬ್ಯೂನ್ ಪತ್ರಿಕೆಯು ತಿಳಿಸಿದೆ.

ಬ್ರಿಟನಿನ ಹೊಸ ಅಸ್ತ್ರಗಳು

ಬ್ರಿಟನ್ನು ಹೊಸ ಅಸ್ತ್ರಗಳನ್ನೂ, ಸಂಗ್ರಾಮ ಉಪಕರಣಗಳನ್ನು ಕಂಡುಹಿಡಿದಿದೆ. ಹಲವನ್ನು ಬರ್ಲಿನ್ ಕದನದಲ್ಲಿ ಆಗಲೇ ಫಲಕಾರಿಯಾಗಿ ಉಪಯೋಗಿಸಲಾಗಿದೆ.

ಸ್ಪೈಯಿನಿನೊಂದಿಗೆ ಮಿತ್ರದೇಶಗಳ ಸಂಧಾನ

ಸ್ಪೈಯಿನಿಂದ ಜರ್ಮನಿಗೆ ವಸ್ತುಗಳು ಹೋಗದಂತೆ ಮಾಡುವ ಮತ್ತು ಜರ್ಮನಿಗೆ ಸ್ಪೈಯಿನಿನಲ್ಲಿ ದೊರೆಯುವ ಇತರ ಸೌಕರ್ಯಗಳನ್ನೂ ತಪ್ಪಗೊಳಿಸುವ ವಿಚಾರ ಕುರಿತು ಸಂಧಾನ ನಡೆಯುತ್ತಿದೆ. ಈಗ ನಡೆಯುತ್ತಿರುವ ಸಂಧಾನ ಫಲಕಾರಿಯಾದೀತೆಂಬುದಕ್ಕೆ ಸೂಚನೆಗಳು ಕಾಣಬರುತ್ತಿವೆ. ಸ್ಪೈಯಿನಿನಲ್ಲಿರುವ ಇಟಲಿ ಹಡಗುಗಳನ್ನು ಬಿಡುಗಡೆ ಮಾಡಬೇಕು, ಟ್ಯಾಂಜೀರ್‌ನಲ್ಲಿ ಜರ್ಮನ್ ಏಜಂಟರನ್ನು ಹೊರಗೆ ತರಬೇಕು ಮುಂತಾಗಿ ಬ್ರಿಟನ್ನು ಮಾಡಿದ ಪ್ರಾರ್ಥನೆಗಳನ್ನು ಸ್ಪೈಯಿನು ಪಾಲಿಸಿದೆ. ಇನ್ನು ಹಲವು ಇಟಲಿ ಹಡಗುಗಳು ಸ್ಪೈಯಿನ್ ದ್ವೀಪಗಳಲ್ಲಿ ಇವೆಯೆಂದು ತಿಳಿದು ಬಂದಿದೆ.

ಯುದ್ಧಮಂತ್ರಿಮಂಡಲಕ್ಕೆ ನೇಮಕ

ಯುದ್ಧ ಕ್ಯಾಬಿನೆಟ್ ಸಭೆಗೆ ಭಾರತದ ಪ್ರತಿನಿಧಿಯಾಗಿ ಬಂದು ಭಾಗವಹಿಸಲು ಕಾಶ್ಮೀರದ ಪ್ರಭುಗಳಿಗೆ ವೈಸರಾಯರ ಆಹ್ವಾನ ಹೋಗಿದೆ.

ಸ್ವೀಕಾರ

ನಿಜಾಮ ಇಲಾಖಾ ಹುಮನಾಬಾದ ನಗರದ ಶ್ರೀಮಂತ ರೇವಣಪ್ಪಶೆಟ್ಟಿಯವರು ಶಿವಾದೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ವೇ|| ಸಿದ್ರಾಮಯ್ಯನವರು ಬಂಗಿ ಹುಮನಾಬಾದ ಇವರ ದ್ವಾರಾ ತಲ್ಪಿರುತ್ತವೆ.

(೧ನೆಯ ಪುಟದಿಂದ ಮುಂದುವರಿದುದು)

ಮಧುರವಾಣಿಯಿಂದ ತುಂಬಿ ತುಳುಕುತ್ತಿತ್ತು. ಶ್ರೀಗಳವರ ಸತ್ಪುತ್ರಿ ಅದಿಗೌರಮ್ಮಯೆಂಬ ಒಂದು ವರ್ಷದ ಕೂಸು ಪಂಚಾಚಾರ್ಯರ ಜಯಕಾರವನ್ನು ಮಾಡಿದ್ದನ್ನು ಕಂಡು ಸರ್ವರೂ ಆನಂದಪರವಶರಾದರು. ಆಚಾರ್ಯರ ಮಹಾಮಂಗಳಾರತಿಯಾದನಂತರ ಉತ್ಸವಕ್ಕೆ ಬಂದಿದ್ದ ಸ್ವಪರಮತೀಯರಿಗೂ ಅಧಿಕಾರಿ ಅನಧಿಕಾರಿಗಳಿಗೂ ಪ್ರಸಿದ್ಧ ವರ್ತಕರಾದಿಯಾಗಿ ಸುಮಂಗಲೆಯರಿಗೂ ಚಿಕ್ಕ ಬಾಲಕರಿಗೂ ಫಲ, ಪುಷ್ಪ, ಪ್ರಸಾದ ವಿನಿಯೋಗವಾಯಿತು. ಸರ್ವರೂ ಆಚಾರ್ಯರ ಸೇವೆಯಿಂದ ಧನ್ಯರಾದರು. ಪಂಡಿತರಿಗೂ ಇವರ ಕುಟುಂಬ ವರ್ಗಕ್ಕೂ ಉತ್ತರೋತ್ತರ ಶ್ರೇಯೋಭಿವೃದ್ಧಿಯನ್ನೂ ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ಕಾಪಾಡಲೆಂದು ಶ್ರೀ ಜಗದ್ಗುರುಗಳನ್ನು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಬೆಳಗಾಂವ

ತಾ|| ೮-೩-೧೯೪೪ನೇ ಇಸ್ವಿ ಬುಧವಾರ ದಿವಸ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯು ಬೆಳಗಾವಿಯಲ್ಲಿ ದಂಡಿನಮಠದಲ್ಲಿ ಜರುಗಿತು. ಆ ದಿವಸ ಮೊದಲು ಶ್ರೀ ಜಗದ್ಗುರುಗಳ ಭಾವಚಿತ್ರಕ್ಕೆ ಯಥಾಕ್ರಮವಾಗಿ ಪೂಜೆಯನ್ನು ಮಾಡಲಾಯಿತು. ಆಮೇಲೆ ಶ್ರೀ|| ಷ|| ಬ್ರ|| ಗುರುವರ್ಯ ಶಿವಾಚಾರ್ಯರು ಈ ಸಭೆಗೆ ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಶ್ರೀಮಂತ ವ್ಹಿ. ಸಿ ಕಿತ್ತೂರ ವಕೀಲರ ಸೂಚನೆ ಮತ್ತು ಹಿರೇಮಠ ಮಾಸ್ತರರ ಅನುಮೋದನೆಯ ಮೇರೆಗೆ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಆಮೇಲೆ ಹಿರೇಮಠ ಮಾಸ್ತರರು ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲೆಗಳನ್ನು ವಿವರಿಸಿ ಹೇಳಿದರು. ಮತ್ತು ಮತಾಚಾರ್ಯರ ಜಯಂತಿಯನ್ನು ಮಾಡುವುದು ಪ್ರತಿಯೊಬ್ಬ ಮತೀಯನಿಗೆ ಎಷ್ಟು ಅವಶ್ಯಕ ಎಂಬ ಬಗ್ಗೆ ವಿಶದವಾಗಿ ಭಾಷಣ ಮಾಡಿದರು. ಆಮೇಲೆ ಅಧ್ಯಕ್ಷರ ಭಾಷಣವಾಯಿತು. ಸಭೆಗೆ ಶ್ರೀಮಾನ್ ಕಿತ್ತೂರ ವಕೀಲರೂ, ಶ್ರೀಮಾನ್ ಕೆ ಎಸ್ ಪಾಟೀಲರೂ, ಶ್ರೀಮಾನ್ ಲಿಂಗಪ್ಪನವರು ಅಂಕಲಗಿ, ಹಿರೇಮಠ ಮಾಸ್ತರರು. ವೇ|| ಚನ್ನಬಸವಯ್ಯನವರು ಇವರೇ ಮೊದಲಾದ ಪ್ರಮುಖರು ಹಾಜರಿದ್ದರು. ಕಡೆಗೆ ಮಂಗಲವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು.

ಸಿ. ಎಂ. ಪಾಟೀಲ, ಲಿಂಗರಾಜ ಕಾಲೇಜ, ಬೆಳಗಾವ.

ಜೀವನ ಸಂಸಾರಸ್ಥಿತಿಯು

ಶ್ರೀ ಮಲ್ಲಿಕಾರ್ಜುನಾರಾಧ್ಯ ದಾಣೇಬೆನ್ನೂರು ಮಳೇಮಠ ಮುದೇನೂರು.

ಶಿಷ್ಯ—ಗುರುವೇ, ಸತ್ಸಮಾಗಮವಿಲ್ಲದೆ ಕೇವಲ ಸಂಸಾರಮಗ್ನರಾಗಿರುವ ಜೀವರ ಸ್ಥಿತಿಯನ್ನು ಕುರಿತು ನನಗೆ ನಿರೂಪಿಸಬೇಕು; ಯಾಕೆಂದರೆ ಆ ಭಯಂಕರ ಸ್ಥಿತಿಯನ್ನು ನಿನ್ನ ಮುಖದಿಂದ ಶ್ರವಣಮಾಡುವುದರಿಂದ ಕೇಳುವವರಿಗೆ ಸಂಸಾರಮಾಡುವ ವಿಷಯದಲ್ಲಿ ಪೂರ್ಣ ವೈರಾಗ್ಯಯುಂಟಾಗುವುದು, ಎನಲು, ಗುರುವು—ಶಿಷ್ಯೋತ್ತಮಾ, ನೀನನ್ನುವುದು ಸಹಜವು. ಸಂಸಾರಾಸಕ್ತಿಯ ಭಯಂಕರ ಸ್ಥಿತಿಯನ್ನು ವಿಚಾರಿಸುವುದರಿಂದ ವೈರಾಗ್ಯವು ಅಂಕುರಿಸುವ ಸಂಭವವಿರುತ್ತದೆ. ಆದಪ್ರಯುಕ್ತ ಹೇಳುತ್ತೇನೆ ಸಾವಧಾನಚಿತ್ತದಿಂದ ಆಲಿಸು. ಸರ್ವ ಸೃಷ್ಟಿಯ ನಿಯಮನ ಮಾಡುವ ಪರಶಿವನ ಪ್ರಕೃತಿ-ಪುರುಷಾತ್ಮಕ ಹಾಗು ತತ್ವಾತ್ಮಕ ರೂಪಕ್ಕೆ ದೈವವೆಂದು ಹೆಸರು. ಈ ದೈವ ಪ್ರೇರಣೆಯಿಂದಲೇ ಜೀವನಿಗೆ ಕರ್ಮವಶತೆಯು ಪ್ರಾಪ್ತವಾಗಿ, ಆತನಿಗೆ ನಾನಾವಿಧ ಗತಿಗಳುಂಟಾಗುವವು. ಪರಮಾತ್ಮನ ಈ ರೂಪವೇ ವಸ್ತುಗಳ ಭಿನ್ನತ್ವಕ್ಕೆ ಹೇತುವಾಯಿತೆಂದರೆ ಆ ರೂಪಕ್ಕೆ ಕಾಲವೆನ್ನುವರು. ಸಮಸ್ತವೂ ಕಾಲಾಧೀನವಾಗಿರುವದು. ಈ ಜಗತ್ತಿನಲ್ಲಿ ಓತಪ್ರೋತವಾಗಿ ವ್ಯಾಪಿಸಿಕೊಂಡಿರುವ ಸತ್ವ ರಜಸ್ತಮೋಗುಣಗಳ ನಿಯಂತೃಗಳಾದ ಬ್ರಹ್ಮ-ವಿಷ್ಣು-ಮಹೇಶ್ವರರು ಪ್ರತಿಯೊಂದು ಕಲ್ಪದಲ್ಲಿ ಈ ಜಗತ್ತಿನಲ್ಲಿ ಉತ್ಪತ್ತಿ-ಸ್ಥಿತಿ-ಲಯಗಳನು

ಮಾಡಲು ಪ್ರವೃತ್ತರಾಗುವರೂ ಸಹ ಕಾಲನ ಆಜ್ಞೆಯಿಂದಲೇ! ಅಂದ ಬಳಿಕ, ಸರ್ವವೂ ಕಾಲಾಧೀನವೆಂದು ಪ್ರತ್ಯೇಕವಾಗಿ ಹೇಳಬೇಕೆ! ಕಾಲನ ಭಯದಿಂದಲೇ ಸೃಷ್ಟಿಯ ಸಮಸ್ತ ವ್ಯವಹಾರಗಳು ನಡೆದಿರುವವು. ಈ ಪ್ರಚಂಡ ಶಕ್ತಿಯ ಕಾಲನ ಯೋಗದಿಂದಲೇ ಜೀವನಿಗೆ ಬೇರೆ ಬೇರೆ ಅವಸ್ಥೆಗಳು ಪ್ರಾಪ್ತವಾಗುತ್ತವೆ ತನಗೆ ಸುಖವಾಗಬೇಕೆಂದು ಮನುಷ್ಯನು ನಿಜ ಪ್ರಯತ್ನದಿಂದ ಸಂಪಾದಿಸುವ ವಸ್ತುಗಳನ್ನೆಲ್ಲಾ ಕಾಲವು ನಾಶಮಾಡುವದು ಅದರಿಂದ ಆ ಪದಾರ್ಥಗಳಿಗಾಗಿ ಮನುಜನು ಮೋಹಿಸತೊಡಗುವನು ಸತಿ ಸುತ ಹಿತರಿಂದ ಸಹಿತವಾದ ತನ್ನ ದೇಹವು ನಶ್ವರವಾಗಿದ್ದರೂ, ಆ ಮಂದಮತಿಯ ಮಾನವನು ತನ್ನ ದೇಹದ ಸಂಬಂಧದಿಂದ ಪ್ರಾಪ್ತವಾದ ಗೃಹ ಕ್ಷೇತ್ರ ಧನ ಕನಕ ಇತ್ಯಾದಿಗಳನ್ನು ಅಜ್ಞಾನದಿಂದ ಶಾಶ್ವತವೆಂದು ತಿಳಿಯುವನು ಈ ಸಂಸಾರದಲ್ಲಿ ಪ್ರಾಣಿಗಳಿಗೆ ತಾವು ಜನ್ಮಧಾರಣ ಮಾಡಿದ ಯೋನಿಗಳಲ್ಲಿಯೇ ಸುಖತೋರುತ್ತಿರುವದು ಪ್ರತ್ಯಕ್ಷ ನರಕದಲ್ಲಿ ಜನ್ಮ ಹೊಂದಿದ್ದರೂ ವಿಷ್ಟಾ (ನರಕ) ಭಕ್ಷಣವೇ ಅಲ್ಲಿ ಹುಟ್ಟಿದ ಪ್ರಾಣಿಗಳಿಗೆ ಸುಖಪ್ರದವಾಗಿ ತೋರುತ್ತದೆ ತನ್ನ ಆ ಸುಖದ ಪದಾರ್ಥವು ದೊರೆಯುತ್ತಿರುವವರೆಗೆ ತನ್ನ ದೇಹವನ್ನು ಬಿಟ್ಟು ಹೋಗುವ ಮನಸ್ಸು ಅದಕ್ಕಾಗುವುದಿಲ್ಲ! ಯಾಕಂದರೆ ಈಶ್ವರೀ ಮಾಯೆಯಿಂದ ಅದು ಪೂರ್ಣ ಮೋಹಿತವಾಗಿರುತ್ತದೆ ಸ್ವತಃ ತನ್ನ ದೇಹ ಸತಿ ಸುತ ಗೃಹ ಕ್ಷೇತ್ರ ಧನ ಕನಕರುಗಳು ಬಾಂಧವರು ಇವರೆಲ್ಲರ ಸಂಬಂಧದ ಬಗೆ ಬಗೆಯ ವಿಚಾರಗಳು ಮನುಷ್ಯನ ಮನಸ್ಸಿನಲ್ಲಿ ಉತ್ಪನ್ನವಾಗಿ, ಅವುಗಳಿಂದಲೇ ತಾನು ಧನ್ಯನೆಂದು ಅವನು ಭಾವಿಸುತ್ತಿರುವನು, ಮತ್ತು ಅವರೆಲ್ಲರ ಪೋಷಣೆಯ ಚಿಂತೆಯಿಂದ ಯಾವಾಗಲೂ ಪೀಡಿಸಲ್ಪಡುತ್ತಿರುವನು, ಅದ್ದರಿಂದ ಈ ಮೂಢ ಪ್ರಾಣಿಯು ಒಂದಾಗುತ್ತಲೊಂದರಂತೆ ನಾನಾ ಪಾಪಕೃತ್ಯಗಳನ್ನು ಮಾಡತೊಡಗುವನು ಮಾಯಾವೀ ಸ್ತ್ರೀಯರಿಂದಾಗುವ ಏಕಾಂತದ ಸುಖ, ಸಣ್ಣ ಮಕ್ಕಳ ಮುದ್ದು ಮಾತು ಇತ್ಯಾದಿಗಳ ಯೋಗದಿಂದ ಮಾನವನ ಅಂತಃಕರಣವೂ, ಇಂದ್ರಿಯಗಳೂ ಲೋಹ ಚುಂಬಕದಂತೆ ಆಕರ್ಷಿಸಲ್ಪಡುವುದರಿಂದ ಅವನು ದುಃಖಮಯ ಸಂಸಾರದಲ್ಲಿದ್ದುಕೊಂಡು ದುಃಖದ ಪ್ರತೀಕಾರ ಮಾಡಲು ಹೆಣಗುತ್ತ ಅದನ್ನೇ 'ಸುಖವೇ' ಎಂದು ಭಾವಿಸುವನು ಹೆಂಡಿರು ಮಕ್ಕಳ ಸಂರಕ್ಷಣಾರ್ಥಕ್ಕಾಗಿ ಧನವನ್ನು ಸಂಪಾದಿಸಲೋಸುಗ ಅವನು ಮಾಡತೊಡಗುವ ಕೊಲೆ ಸುಲಿಗೆ ಸುಳ್ಳು, ಮೋಸ ಇತ್ಯಾದಿ ಹೀನ ದೀನ ಕೃತ್ಯಗಳಿಗೆ ಕೊನೆಮೊದಲಿಲ್ಲ ಈ ರೀತಿಯಲ್ಲಿ ಅನೇಕ ಘೋರಕೃತ್ಯಗಳಿಂದ ಸಂಪಾದಿಸಿದ ಧನದಿಂದ ಕುಟುಂಬದವರು ಚಕ್ಕಂದವಾಡುವರು, ಆದರೆ ಅವನು ಮಾಡಿದ ಕ್ರೂರ ಕರ್ಮಗಳ ಫಲಕ್ಕೆ ಅವರು ಭಾಗಿಗಳಾಗುವದಿಲ್ಲ ಇವರ ಉದರಂಭರಣಕ್ಕಾಗಿ ಅವನು ಮಯಡಬಾರದ ವ್ಯವಹಾರಗಳನ್ನು ಮಾಡುವಾಗ ಪ್ರಾರಬ್ಧಕರ್ಮವಶಾತ್ ಹಾನಿಯೊದಗಿದರೆ, ಲೋಭವು ಹೆಚ್ಚಾಗಿ ಮತ್ತೂ ಅದೇ ಬಗೆಯ ವ್ಯವಹಾರಗಳನ್ನು ಅವನು ಮಾಡುವನು ಕಟ್ಟಕಡೆಗೆ ಅವನು ಸಂಪೂರ್ಣ ಲೋಭದ ಅಧೀನನಾಗಿ ಪರದ್ರವ್ಯಾಪಹಾರವನ್ನು ಮಾಡುವುದಕ್ಕೂ ಹೇಸುವುದಿಲ್ಲ: ಅವರ ಏನು ಮಾಡಿದರೂ ಆ ಮಂದಭಾಗ್ಯನ ತಾಪತ್ರಯವು ಹಿಂಗುವುದಿಲ್ಲ ಆಗ ಅವನಿಂದ ಕುಟುಂಬ ಪೋಷಣನಾಗದಿರಲು, ಕುಟುಂಬದವರು ಅವನನ್ನು ತಿರಸ್ಕರಿಸುತ್ತ, ಮುದಿಯಾದ ಎತ್ತು ಕುದುರೆಗಳಂತೆ ಇವನಂ ದುರ್ಲಕ್ಷಿಸುವರು, ಇಷ್ಟಾದರೂ ಆ ನರ ಪಶುವಿಗೆ ವೈರಾಗ್ಯ ಉತ್ಪನ್ನವಾಗುವುದಿಲ್ಲ. ಮುಂದೆ ಮುಪ್ಪಿನಿಂದ ಅವನ ಶರೀರವು ವಿಪ್ರೂಪ ಹೊಂದಿ ಜರ್ಝರವಾಗಲು, ಅವನ ಸ್ತ್ರೀಯು ಮಡದಿ ಮಕ್ಕಳು ಬೇಸತ್ತು ನಾಯಿಗೆ ರೊಟ್ಟಿಯ ತುಣುಕನ್ನೆಸೆಯುವಂತೆ ಅವನಿಗೆ ಅನ್ನವಂ ಹಾಕುವರು! ಆದರೂ ಆ ಮರಜೋನ್ಮುಖ ಪುರುಷನು ಅವಹೂನ ಪೂರ್ವಕವಾಗಿ ಅದಂ ಸ್ವೀಕರಿಸುವನು. ಇಷ್ಟು ಅವಹೇಳನಕ್ಕೊಳಗಾದರೂ ಮಡದಿ ಮಕ್ಕಳು ಹೊಲ ಮನೆ ಧನ ಇವುಗಳ ವಿಷಯದಲ್ಲಿ ಉಪೇಕ್ಷೆಯುಂಟಾಗುವುದಿಲ್ಲ! ಕೊನೆಗೆ ಅವನ ಪ್ರಾಣವಾಯುವು ದೇಹವಂ ಬಿಟ್ಟು ಹೋಗುವಾಗ ಜ್ಞಾನಶೂನ್ಯನಾಗಿ ಗಂಟಲಲ್ಲಿ ಗೊರಗುಟ್ಟುತ್ತ ವರ್ಣನಾತೀತವಾದ ಯಾತನೆಯನ್ನುಂಟುಮಾಡುತ್ತಿರಲು ಈ ದೇಹದ ಬಳಗದವರು "ಅಪ್ಪಾ! ಅಣ್ಣಾ! ಎಂದು ಕೂಗುತ್ತಿರುವಾಗ, ಅವರೊಡನೆ ಒಂದು ಶಬ್ದವನ್ನೂ ಉಚ್ಚರಿಸಲಾರದ ಕಣ್ಣು ತೆರೆದು ನೋಡಲಾರದೆ ಆ ಪ್ರಾಣಿಯು ಪರಲೋಕಕ್ಕೆ ತೆರಳುವನು!

ಪ್ರಿಯ ಶಿಷ್ಯನೇ, ಮನುಷ್ಯನು ಗಳಿಸಿದ ಗಳಿಕೆಯೆಲ್ಲವೂ ಇಲ್ಲಿಯೇ ಉಳಿದು, ಅದನ್ನು ಗಳಿಸುವಾಗ ಮಾಡಿದ ಪಾಪವು ಮಾತ್ರ ಘೋರ ನರಕಕ್ಕೂ ಭವಬಂಧನಕ್ಕೂ ಗುರಿ ಮಾಡುವುದಕ್ಕಾಗಿ ಅವನನ್ನು ಹಿಂಬಾಲಿಸುತ್ತದೆ ತನ್ನ ಜಡ ಶರೀರವನ್ನೂ ಪರಿವಾರದವರನ್ನೂ ಇಲ್ಲಿಯೇ ಬಿಟ್ಟು ಹೋಗುವಂತೆ, ಪಾಪವನ್ನು ಇಲ್ಲಿಯೇ ಬಿಟ್ಟು ಹೋಗುವುದಕ್ಕೆ ಬರುವುದಿಲ್ಲ ಅದನ್ನು ದೈವವು ಅವನ ಬಳಿಯಲ್ಲಿ ತಂದಿಡುವದು ತತ್ಪರಿಣಾಮವಾಗಿ ಮುಂದೆ ನಾನಾ ಹೀನಯೋನಿಗಳಲ್ಲಿ ಜನ್ಮವೆತ್ತಿ ಅಭಕ್ಷ್ಯ ಭಕ್ಷಣ ಅಪೇಯಪಾನ ಮಾಡುತ್ತಾ ದುರ್ಗತಿಗೀಡಾಗಿ ಭವಸಾಗರದಲ್ಲಿ ಬಿದ್ದು ಅನಂತಕಾಲ ತೊಳಲಿ ಬಳಲಬೇಕಾಗುತ್ತದೆ ಈ ಕೋಟಲೆಯಿಂದ ಮುಕ್ತನಾಗಬೇಕಾದರೆ "ಶರೀರ ಮಾದ್ಯಂ ಖಲು ಧರ್ಮಸಾಧನಂ" ಎಂಬ ವಾಕ್ಯದಂತೆ ಹಡಗಿನಂತಿರುವ ಮನುಷ್ಯ ದೇಹವು ಅತ್ಯಾವಶ್ಯಕವಾಗಿರುವದು ಜೀವಾತ್ಮನು ಪುಣ್ಯವೆಂಬ ಅಪಾರ ಧನವಂ ಕೊಟ್ಟು ಪರಮ ಕೃಪಾಳುವಾದ ಪರಮಾತ್ಮನಿಂದ ಈ ಶರೀರವೆಂಬ ಹಡಗನ್ನು ಪಡೆದಿರುತ್ತಾನೆ ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳಲ್ಲಿ ಅತಿ ದುರ್ಲಭವೂ ಅತಏವ ಮೋಕ್ಷಕ್ಕೆ ಸಹಾಯಕವೂ ಆದ ಅರುವಿನ ಈ ಮಾನವದೇಹವು ಪರಬ್ರಹ್ಮಜ್ಞಾನವನ್ನು ಒದಗಿಸಿಕೊಡತಕ್ಕದ್ದಾದ್ದರಿಂದ ನರಕವಾಸಿಗಳೂ ಸ್ವರ್ಗವಾಸಿಗಳೂ ಸಹ ನರದೇಹವನ್ನು ಇಚ್ಛೈಸುವರು! ಯಾಕಂದರೆ ಆ ಲೋಕಗಳೂ ಭಕ್ತಿ ಜ್ಞಾನ ವೈರಾಗ್ಯಗಳಂ ಒದಗಿಸಿ ಕೊಡಲಿಕ್ಕೆ ಅಪಾತ್ರವಾಗಿರುವವು. ಅಂತೆಯೇ ವಿಚಾರವುಳ್ಳವನು ನರಕದಂತೆ ಸ್ವರ್ಗವನ್ನು ತಿರಸ್ಕರಿಸತಕ್ಕದ್ದು, ಹಾಗು ಪುನಃ ನರದೇಹ ಪ್ರಾಪ್ತಿಯ ವಾಸನೆಯನ್ನು ತ್ಯಜಿಸಿ ಇದೇ ಜನ್ಮದಲ್ಲಿಯೇ ದೇಹ ಬಂಧನದಿಂದ ಮುಕ್ತನಾಗುವ ಪ್ರಯತ್ನವಂ ಮಾಡತಕ್ಕದ್ದು ಪ್ರಿಯ ಶಿಷ್ಯನೇ, ಬರಿಯ ನರಜನ್ಮಪ್ರಾಪ್ತವಾಗಿ ಪ್ರಯೋಜನವಿಲ್ಲ! ಮೋಕ್ಷವೆಂಬ ಮಹಡಿಗೆ ಹಂತಗಳಂತಿರುವ ಭಕ್ತಿ ಜ್ಞಾನ ವೈರಾಗ್ಯಗಳನ್ನು ಸಾಧಿಸದ ಮಾನವನ ದೇಹವು ವ್ಯರ್ಥವು! ವ್ಯರ್ಥವು!! ಕಸ್ಮಾತ್ ದೇಹದ ನಶ್ವರತೆಯನ್ನರಿತು ಮೃತ್ಯುವು ಪ್ರಾಪ್ತವಾಗುವುದರೊಳಗಾಗಿ ಮೋಕ್ಷಸಾಧನದ ಅವಲಂಬನವಂ ಮಾಡಿ ದೇಹದ ಸಾಫಲ್ಯ ಮಾಡುವುದು ಇಷ್ಟವಾದದು ಅಲಭ್ಯವಾದ ನರದೇಹವು ಪ್ರಾಪ್ತವಾದಾಗ ಕೇವಲ ದೇಹ ಸಂಗೋಪನದಲ್ಲಿಯೂ, ಇಂದ್ರಿಯಗಳ ತೃಪ್ತಿಯಲ್ಲಿಯೂ ಧನಸಂಗ್ರಹದಲ್ಲಿಯೂ, ಪಾತಾರಿ ಕೀರ್ತಿಗಳ ಕಾಂಕ್ಷೆಯಲ್ಲಿಯೂ ಜೀವನು ತತ್ಪರನಾಗಿದ್ದರೆ ಮೋಕ್ಷಕ್ಕೆ ವಿಘ್ನವು ಸಂಭವಿಸುವ ಸಂಭವವು ವಿಶೇಷವಾಗಿರುತ್ತದೆ! ಆದ ಪ್ರಯುಕ್ತ ಮುಮುಕ್ಷುವು ವಾಸನೆಯಂ ಪರಿತ್ಯಜಿಸಿ ಶಾಂತಿಯಂ ಪರಿಗ್ರಹಿಸಬೇಕು ಗಿಡವನ್ನು ಕಡಿಯಲು ಪ್ರಾರಂಭಿಸಿದೊಡನೆಯೇ ಅದರಲ್ಲಿ ಗೂಡು ಕಟ್ಟಿಕೊಂಡಿದ್ದ ಪಕ್ಷಿಯು ಕೂಡಲೇ ಹಾರಿಹೋಗುವಂತೆ, ಈ ದೇಹದ ಆಯುಷ್ಯವನ್ನು ಕತ್ತರಿಸಲಿಕ್ಕೆ ಹಗಲು ರಾತ್ರಿಗಳು ಉಪಕ್ರಮಿಸಿರುವವೆಂದು ತಿಳಿದು ವಿವೇಕಿಯಾದ ಪುರುಷನು ದೇಹವಂ ತ್ಯಜಿಸಲು ಸಿದ್ಧನಾಗಿರಬೇಕು! ಹೀಗೆ ಪಾರಮಾರ್ಥಸಾಧಕವಾದ ಅತ್ಯಂತ ಶ್ರೇಷ್ಠವಾದ ಮನುಷ್ಯ ದೇಹವು ದುರ್ಲಭವಾದ್ದರಿಂದ ಅದರ ನಾಶವಾಗುವುದರೊಳಗಾಗಿ ಭಕ್ತಿ ಜ್ಞಾನಾದಿಗಳ ಸಾಧನದಿಂದ ಸಂಸಾರಸಾಗರದಿಂ ಪಾರಾಗದವನು ಆತ್ಮಘಾತಕನೆನಿಸುವನು!

ಶಿಷ್ಯೋತ್ತಮನೇ, ಕದಾಚಿತ್ ಈ ದೇಹವನ್ನು ತುಚ್ಛವೆಂದು ಭಾವಿಸಿದರೂ ಅನೇಕ ಕಾಲಗಳಿಂದ ಒಳಗೆ ವಾಸಮಾಡಿಕೊಂಡಿರುವ ದಿವ್ಯಾತ್ಮದ ಸಲುವಾಗಿ ದೇಹವನ್ನು ಕಾಪಾಡಲೇಬೇಕು ದೇಹವು ದೇವರ ಮಂದಿರದಂತಿರುವದು ದೇಹದಲ್ಲಿ ದಿವ್ಯವಾದ ಆತ್ಮವೂ ವಿಶಾಲವಾದ ವಿವೇಕ ಶಕ್ತಿಯೂ, ಅಗಾಧವಾದ ಜ್ಞಾನವೂ, ಮೋಹಕವಾದ ಚಲನ ವಲನವೂ, ಅಸಾಧಾರಣವಾದ ಕ್ರಿಯಾಸಾಮರ್ಥ್ಯವೂ, ದೇವತಾ ಸದೃಶವಾದ ಬುದ್ಧಿಶಕ್ತಿಯೂ ಇರುವವು ಆದುದರಿಂದ ದೇಹದ ಬಗ್ಗೆ ಆದರವಂ ತೋರಿಸುವುದೂ, ನರ ದೇಹದ ನೆರವಿನಿಂದ ಆತ್ಮಸಾಕ್ಷಾತ್ಕಾರಮಾಡಿಕೊಳ್ಳುವದೂ ಆಸ್ತಿಕಮತಾವಲಂಬಿಗಳ ಆದ್ಯ ಕರ್ತವ್ಯವಾಗಿರುವುದು ದೇಹಕ್ಕೆ ಇಷ್ಟು ಮಹತ್ವವಿರುವುದರಿಂದಲೇ ಪೂರ್ವಿಕರು —ದೇಹೋ ದೇವಾಲಯಃ ಪ್ರೋಕ್ತೋ ಜೀವೋ ದೇವಸ್ಸದಾಶಿವಃ। ತ್ಯಜೇದಜ್ಞಾನ ನಿರ್ಮಾಲ್ಯಂ ಸೋಹಂ ಭಾವೇನ ಪೂಜಯೇತ್ ॥ ಎಂದೂ,

ಮಾನವ ಜನ್ಮ ದೊಡ್ಡದು ಇದರ। ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ ॥ಪಲ್ಲ॥ ಕಣ್ಣು ಕೈಕಾಲ್ಕಿವಿ ನಾಲಿಗೆ ಇರಲಿಕ್ಕೆ। ಮಣ್ಣು ಮುಕ್ಕಿ ಹುಚ್ಚಾಗುವರೆ?॥ ಹೆಣ್ಣು ಮಣ್ಣಿಗಾಗಿ ಶಿವನಾಮಾಮೃತ। ಉಣ್ಣದೆ ಉಪವಾಸವಿರುವರೆ ಖೋಡಿ ॥೧॥ ಕಾಲದೂತರು ಬಂದು ಕಂಪಿಡಿದೆಳೆವಾಗ। ತಾಳು ತಾಳೆಂದರೆ ತಾಳುವರೆ?॥ ದಾಳಿಬಾರದಮುನ್ನ ಧರ್ಮಗಳರಿಯೋ। ಹಾಳು ಸಂಸಾರದ ಸುಳಿಗೆ ಸಿಕ್ಕಲುಬೇಡಿ ॥೨॥ ಏನುಕಾರಣ ಪಶುಪತಿಯನು ಮರೆತಿರಿ। ಧನಧಾನ್ಯ ಪುತ್ರರು ಕಾಯುವರೆ?॥ ಇನ್ನಾದರೂ ಏಕೀಭಾವದಿ ಭಜಿಸಿರೋ। ಚೆನ್ನಾಗಿ ರಜತಾದ್ರಿವಾಸನ ನಾಮವ ಜೀಗ ॥೩॥ ಎಂದೂ ಹೇಳಿರುವರು.

ಭವರೋಗ ಭಂಜಕನಾದ ಗುರುದೇವಾ ತಮ್ಮ ಬೋಧಾಮೃತಪಾನದಿಂದೆನ್ನ ಹೃದಯವು ತಣಿಯಿತು, ಕೃತಾರ್ಥನಾದೆನು ಹೋಗಿಬರುವೆನು. ದೀರ್ಘದಂಡ ವಂದನಾಮಂಗಳು ತಥಾಸ್ತು! ನಿತ್ಯಸುಖೀಭವ!

ನಿಷೇಧಸಭೆ, ಬೆಳಗಾಂವ

ತಾ|| ೮-೩-೧೯೪೪ ಬುಧವಾರ ದಿವಸ ಬೆಳಗಾವ ಪಂಡಿತಮಠದಲ್ಲಿ ವೀರಶೈವರ ಸಭೆಯು ಶ್ರೀ ಪುತ್ರಗಟ್ಟಿ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸೇರಿ ಕೆಳಗೆ ಕಾಣಿಸಿದ ಠರಾವು ಪಾಸಾಯಿತು

ಠರಾವಿನ ಸೂಚಕರು ಪ್ರೊ. ಪಿ ಶಿಶಸ್ತ್ರರ ವಕೀಲರು, ಕಿರ್ಲೋಸ್ಕರವೆಂಬ ಮರಾಠೀ ಮಾಸಪತ್ರಿಕೆಯಲ್ಲಿ ಶ್ರೀ ಭಾಸ್ಕರರಾವ ಜಾಧವರೆಂಬವರು 'ಮಹಾಶಿವ' ಎಂಬ ಶಿರೋಲೇಖದ ಕೆಳಗೆ ಒಂದು ಲೇಖ ಬರೆದು ಅದರಲ್ಲಿ ಈಶ್ವರ, ನಂದಿ, ಬಿಲ್ವಪತ್ರ ಮತ್ತು ಲಿಂಗ ಈ ಸಂಬಂಧವಾಗಿ ಅನುಚಿತ ಮತ್ತು ಹೀನವಾದ ರೀತಿಯಲ್ಲಿ ಅರ್ಥಮಾಡಿ ತಮ್ಮ ಕುಕಲ್ಪನೆಯನ್ನು ವ್ಯಕ್ತಮಾಡಿರುವುದನ್ನು ಬೆಳಗಾವಿಯ ವೀರಶೈವರ ಈ ಸಭೆಯು ಕಡುತರವಾಗಿ ನಿಷೇಧಿಸುತ್ತದೆ,

ಇಂಥ ಟೀಕೆಗಳು ವೀರಶೈವರ ಮತ್ತು ಇತರ ಶೈವರ ಧಾರ್ಮಿಕಭಾವನೆಗಳಿಗೆ ನೋವನ್ನುಂಟುಮಾಡುವಂಥವು ಇರುವದರಿಂದ ಇವುಗಳ ವಿಷಯಕ್ಕೆ ಸರಕಾರದವರು ಯೋಗ್ಯವಿಚಾರಮಾಡಬೇಕೆಂದು ಈ ಸಭೆಯು ಬಿನ್ನವಿಸುತ್ತದೆ ಇದಕ್ಕೆ ಹಿರೇಮಠ ಶಾಸ್ತ್ರರೂ ಅನುಮೋದನವನ್ನು ಕೊಟ್ಟನಂತರ ಸರ್ವಾನುಮತದಿಂದ ಠರಾವು ಪಾಸಾಗಿ ಸಭೆಯು ಮುಗಿಯಿತು

ವಿವೇಕಾನಂದ, ಹಿರೇಮಠ

ದುಃಖವಾರ್ತೆ

ಹುಮನಾಬಾದ ಪಟ್ಟಣದಲ್ಲಿ ಶ್ರೀಮಂತ ರೇವಣಪ್ಪ ಚಿಟ್ಟಿ ಇವರು ಇದೇ ಮಾಘಮಾಸದ ಮಹಾಶಿವರಾತ್ರಿಯ ದಿವಸ ಶಿವಾಧೀನರಾದ ಸಂಗತಿ ತಿಳಿಸಲು ದುಃಖವೆನಿಸುತ್ತದೆ. ಇವರಿಗೆ ೬೦ ವಯಸ್ಸಾಗಿತ್ತು ಇವರು ಪರೋಪಕಾರ ನಿರತರೂ ಧರ್ಮಾತ್ಮರೂ ಇತರರ ಮನಸ್ಸನ್ನು ನೋಯಿಸದವರೂ ಆಗಿದ್ದರಲ್ಲದೆ ಗುರು ಜಂಗಮ ಸೇವೆಯಲ್ಲಿ ಯಾವದೇ ವಿಘ್ನ ಒದಗಿದರೂ ತಮ್ಮ ಸ್ವಂತ ಹಣವನ್ನು ಖರ್ಚುಮಾಡಿ ಕಾರ್ಯವನ್ನು ಪೂರಯಿಸುತ್ತಿದ್ದರು ಇಂಥ ಧರ್ಮಾತ್ಮರು ಮೃತರಾದದ್ದು ಸಮಾಜಕ್ಕೇ ಭಾರಿ ನಷ್ಟವಾದಂತಾಗಿದೆ. ಇವರ ವಿಯೋಗದುಃಖವನ್ನು ಸಹಿಸುವ ಶಕ್ತಿಯನ್ನು ಇವರ ಬಂಧುವರ್ಗದವರಿಗೆ ಕೊಟ್ಟು ಮೃತರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ ಇವರ ಅಂತ್ಯಕ್ರಿಯೆಯ ಕಾಲದಲ್ಲಿ ಶ್ರೀ ವೇ|| ಶಿದ್ರಾಮಯ್ಯನವರು ಬಂಗಿ ಇವರ ಹೇಳಿಕೆ ಪ್ರಕಾರ ಪ್ರಭಾಪೋಷಣಕ್ಕಾಗಿ ೨ ರೂಪಾಯಿ ಅರ್ಪಿಸಲ್ಪಟ್ಟಿರುತ್ತದೆ.

ದುಃಖಭಾಗಿ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರಾಣ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಕಲಪಕ್ಷಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ. ವಿ. ಪಿ. ಖರ್ಚು ಸೇರಿ ೩ ರೂಪಾಯಿ.

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೦ನೇ ಮಾರ್ಚಿ ೧೯೪೪ [ಸಂಚಿಕೆ ೪೬

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವಗಳು

ಸೊಲ್ಲಾಪುರ

ತಾ॥ ೮-೩-೪೪ನೇ ಬುಧವಾರ ಸೊಲ್ಲಾಪುರದಲ್ಲಿರುವ ವೀರಶೈವ ಗುರುಕುಲದಲ್ಲಿ ಪ್ರತಿವರ್ಷ ಪದ್ಧತಿಯಂತೆ ಶ್ರೀಜಗದ್ಗುರು ರೇಣುಕಭಗವತ್ಪಾದರ ಜಯಂತೀ ಮಹೋತ್ಸವವು ಒಳ್ಳೆ ವಿಜೃಂಭಣೆಯಿಂದ ನೆರವೇರಿತು. ಪ್ರಾತಃಕಾಲ ಗುರುಕುಲ ವಿದ್ಯಾರ್ಥಿಗಳಿಂದ ವೇದಘೋಷದೊಡನೆ ವಿಧ್ಯುಕ್ತವಾಗಿ ಲಿಂಗೋದ್ಭವಮೂರ್ತಿಗೆ ಮಹಾಭಿಷೇಕವು ನೆರವೇರಿತು. ಅನಂತರ ಗಣಸಂತರ್ಪಣೆಯಾಯಿತು. ಸಾಯಂಕಾಲ ೬ ಘಂಟೆಗೆ ಗುರುಕುಲದ ಸಭಾಭವನದಲ್ಲಿ ಪ್ರಚಂಡವಾದ ಸಭೆಯು ನೆರವೇರಿತು. ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಧನ್ಯವಾದ ಪೀಠವನ್ನು ಅಲಂಕರಿಸಿದಮೇಲೆ ಗುಲಬರ್ಗಾ ಶ್ರೀ ಶರಣಬಸಪ್ಪನವರ ಧರ್ಮಪತ್ನಿಯವರಾದ ಸೌ॥ ಗೋದಾವರೀಬಾಯಿಯವರು ವೀರಶೈವ ಗುರುಕುಲಕ್ಕೆ ಐದುನೂರು ರೂಪಾಯಿಗಳನ್ನು ಅರ್ಪಿಸಿದ್ದಕ್ಕಾಗಿ ಸದರಿಯವರ ಅಭಿನಂದನೆಯು ಮಾಡಲ್ಪಟ್ಟಿತು. ಅನಂತರ ವೀರಶೈವ ಸದಾಚಾರ ಸ್ತ್ರೀ ಸಮಾಜದ ಸೆಕ್ರೆಟರಿಯವರಾದ ಸೌ॥ ಭಾಗೀರಥೀಬಾಯಿ ಕಟಾಪ ಇವರು ಸಂಸ್ಥಾಪನೆಯಾದಂದಿನಿಂದ ಇಲ್ಲಿಯವರೆವಿಗೂ "ಸ್ತ್ರೀ ಸಮಾಜ" ಅಭಿವೃದ್ಧಿಗಾಗಿ ದುಡಿದವರ ವಿಷಯವನ್ನೂ ಆ ಸಮಾಜಕ್ಕೆ ಸಹಾಯ ಮಾಡುತ್ತಿರುವವರ ಹೆಸರನ್ನೂ ಉಲ್ಲೇಖಿಸಿದಮೇಲೆ ಶ್ರೀ ಸನ್ನಿಧಾನದವರು ಮಾತೃಶ್ರೀಯವರ ಕರ್ತೃತ್ವಕ್ಕೆ ಸಂತೋಷಪಟ್ಟು ಒಂದು ನೂರು ರೂಪಾಯಿಗಳನ್ನು ಸಮಾಜಕ್ಕೆ ಆಶೀರ್ವದಿಸಿದರು. ಅನಂತರ ಶ್ರೀಮಂತ ಕಂಕಣವಾಡಿ ಬಸಪ್ಪನವರು ಬೆಳಗಾಂವದಲ್ಲಿ ಆಯುರ್ವೇದ ವಿದ್ಯಾಪೀಠವನ್ನು ಸ್ಥಾಪಿಸಿ ಜನೋಪಕಾರ ಮಾಡುತ್ತಿರುವದನ್ನು ಕಂಡು ಸಂತೋಷಪಟ್ಟು ಶ್ರೀ ಮಹಾಸನ್ನಿಧಿಯವರು ನೂರು ರೂಪಾಯಿಗಳನ್ನೂ ಶ್ರೀ॥ ಪಂಚಾಕ್ಷರಗವಾಯಿಗಳು ಸಂಗಾತ ಇವರ ಗಾನಮಾಧುರ್ಯವನ್ನು ಕೇಳಿ ಆನಂದದಿಂದ ನೂರು ರೂಪಾಯಿಗಳನ್ನು ಆಶೀರ್ವದಿಸಿದರು. ಆಮೇಲೆ ಶ್ರೀ ಮಹಾಸನ್ನಿಧಿಯವರು "ಶ್ರೀರೇಣುಕರ ಪ್ರಾಚೀನತೆಯು" ಬಗ್ಗೆ ತಮ್ಮ ಅಮೃತವಾಣಿಯಿಂದ ಉಪದೇಶಿಸಿದಮೇಲೆ ಮಂಗಲವಾಗಿ ಸಭೆಯು ಮುಕ್ತಾಯವಾಯಿತು.

ಗುರುಪಾದಶರ್ಮಾ ಸೂರಕೋಡ
ವೀರಶೈವ ಗುರುಕುಲ ಸೊಲ್ಲಾಪುರ

ದರ್ಶನಾಳ

ಸೊಲ್ಲಾಪುರದ ಹತ್ತಿರ ದರ್ಶನಾಳಗ್ರಾಮದಲ್ಲಿ ಶಿವಲಿಂಗಪ್ಪ ಮಾಳಗೆ ಇವರ ಗೃಹದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವು ಪ್ರತಿವರ್ಷದ ಪದ್ಧತಿಯಂತೆ ತಾ॥ ೮-೩-೪೪ನೇ ಬುಧವಾರ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಪ್ರಾತಃಕಾಲ ಗುರುಕುಲದ ವಿದ್ಯಾರ್ಥಿಗಳಿಂದ ಲಿಂಗೋದ್ಭವಮೂರ್ತಿಗೆ ಮಹಾರುದ್ರಾಭಿಷೇಕವಾಯಿತು. ಸಾಯಂಕಾಲ ೬ ಘಂಟೆಗೆ ಅವರಮನೆಯಲ್ಲಿ ಸಭೆಯು ನೆರವೇರಿತು. ಸಭೆಯಲ್ಲಿ ವೇ॥ ಹಳಮೂರು ಗುರುಬಸವಶಾಸ್ತ್ರಿಗಳು ವೇ॥ ರೇವಣಸಿದ್ಧಯ್ಯ ಜವಳಗಿ ಇವರು ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗಕೊಟ್ಟ ವಿಷಯ ವಿಭೀಷಣನ ಪ್ರಾರ್ಥನಾನುಸಾರ ೩ ಕೋಟಿ ಲಿಂಗಗಳ ಸ್ಥಾಪನಾದಿ ಲೀಲೆಗಳನ್ನು ಬಹು ಮನೋಹರವಾಗಿ ಸರ್ವ ಜನರಿಗೂ ತಿಳಿಯುವಂತೆ ವರ್ಣಿಸಿದರು. ಅನಂತರ ಶ್ರೀ ಜಗದಾಚಾರ್ಯರ ಮಂಗಲವಾಗಿ ಸಭೆಯು ಮುಕ್ತಾಯವಾಯಿತು.

ಶಂಕರಶರ್ಮಾ ಇಲಿಹಾಳ
ವೀರಶೈವ ಗುರುಕುಲ ಸೊಲ್ಲಾಪುರ

ಸವಣೂರು

ಧಾರವಾಡ ಜಿ॥ ಸವಣೂರ ಹಿರೇನಸ್ಲಿ ನಸ್ಲೆ ವೇ॥ ಚೆನ್ನಬಸಯ್ಯನವರು ಚರಂತಿಮಠ ಇವರು ತಮ್ಮ ಮಠದಲ್ಲಿ ಪ್ರತಿವರ್ಷಪದ್ಧತಿಯಂತೆ ಇದೇ ಸ್ವಭಾನುಸಂವತ್ಸರ ಫಾಲ್ಗುಣ ಶು॥ ೧೪ (ತಾ॥ 8-3-44)ನೇ ಬುಧವಾರ ದಿವಸ ಶ್ರೀರೇಣುಕಾಚಾರ್ಯರ ಭಾವಚಿತ್ರವನ್ನು ನೂತನ ಮಂಟಪದೊಳಗೆ ಮೂರ್ತಮಾಡಿಸಿ ಅಷ್ಟವಿಧಾರ್ಚನೆಯಿಂದ ಪೂಜೆಯಂಗೈದು ಮಹಾಮಂಗಳಾರತಿಯನ್ನು ಮಾಡಿ ಅಲ್ಲಿ ನೆರೆದಿದ್ದ ಸರ್ವರಿಗೂ ತೀರ್ಥ ಪ್ರಸಾದವಿನಿಯೋಗಮಾಡಿದರು. ಪ್ರತಿಯೊಬ್ಬ ವೀರಶೈವರು ಮತಸ್ಥಾಪನಾಚಾರ್ಯರ ಜಯಂತಿಮಹೋತ್ಸವಗಳನ್ನು ತಪ್ಪದೇ ಆಚರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇನೆ.

ಗುರುಭಕ್ತ

ವೃಂದಾವನಹಳ್ಳಿ

ಅರಸೀಕೆರೆ ತಾಲ್ಲೋಕು ವೃಂದಾವನಹಳ್ಳಿ ಗ್ರಾಮದ ವೀರಶೈವ ಮಂಡಲಿಯವರು ತಾ॥ 8 3-44 ನೇ ಬುಧವಾರ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವವನ್ನು ಅತ್ಯಂತ ಭಕ್ತಿಯಿಂದ ನೆರವೇರಿಸಿದರು.

ಮೇಲ್ಕಂಡ ಜಯಂತಿಯ ದಿವಸ ಪ್ರತಿಯೊಬ್ಬರು ತಮ್ಮ ಕೆಲಸ ಕಾರ್ಯಗಳನ್ನು ನಿಲ್ಲಿಸಿ ವೀರಪ್ಪಗೌಡರ ಹೊಸಮನೆಯಲ್ಲಿ ತಳಿರುತೋರಣ ಕದಳೀಸ್ತಂಭಗಳಿಂದ ಮಂಟಪವನ್ನು ರಚಿಸಿ ಮಂಟಪದ ಮಧ್ಯ ಪೀಠದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಭಾವ ಚಿತ್ರಪಟವನ್ನು ಇರಿಸಿ ಗಂಧ, ಅಕ್ಷತೆ, ಪತ್ರ ಪುಷ್ಪಾದಿಗಳಿಂದ ಪೂಜೆಯನ್ನು ಮಾಡಿ ಮಹಾಮಂಗಳಾರತಿ ನೈವೇದ್ಯಾದಿಸೇವೆಗಳು ನಡೆದನಂತರ ಸರ್ವರೂ ಜಯಘೋಷವನ್ನು ಮಾಡಿದರು. ಬಳಿಕ ಆಚಾರ್ಯರ ಭಾವಚಿತ್ರವನ್ನು ಶ್ರೀಮಲ್ಲಿಕಾರ್ಜುನಸ್ವಾಮಿಯನ್ನು ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿ ಪುಷ್ಪಮಾಲಿಕೆಗಳಿಂದ ಅಲಂಕರಿಸಿ ವಾದ್ಯವೈಭವದೊಡನೆ ಉತ್ಸವವು ಹೊರಟಿತು. ಉತ್ಸವದ ಮುಂಭಾಗದಲ್ಲಿ ವಿದ್ಯಾರ್ಥಿಗಳು ಆಚಾರ್ಯರ ಮಂಗಲ ಸ್ತೋತ್ರಾವಳಿಗಳನ್ನು ಹಾಡುತ್ತಿದ್ದರಲ್ಲದೆ ಕ್ಷಣಕ್ಷಣಕ್ಕೂ ಜಯಘೋಷವನ್ನು ಮಾಡುತ್ತಿದ್ದರು. ವಾದ್ಯಗಾರರು ಸಹ ಆಚಾರ್ಯರ ಸ್ತೋತ್ರಗಳನ್ನೇ ತಮ್ಮ ವಾದ್ಯದಲ್ಲಿ ಬಾರಿಸುತ್ತಿದ್ದರು. ಉತ್ಸವವು ಪ್ರತಿ ಮನೆಯ ಮುಂಭಾಗಕ್ಕೆ ಬಂದ ಒಡನೆ ಮನೆಯವರು ಭಕ್ತಿಯಿಂದ ಧೂಪಾದಿಗಳನ್ನು ಬೆಳಗಿ ಕಾಯಿಗಳನ್ನು ಒಡೆಯುತ್ತಿದ್ದರು. ಈ ರೀತಿ ರಾತ್ರಿ 12 ಘಂಟೆವರೆಗೆ ಉತ್ಸವವನ್ನು ನಡೆಸಿ ಗ್ರಾಮದ ಮಧ್ಯದಲ್ಲಿರುವ ಭಾವಿ ಕಟ್ಟೆಯಮೇಲೆ ಪಲ್ಲಕ್ಕಿಯನ್ನು ಬಿಜಮಾಡಿಸಿ ಷೋಡಶೋಪಚಾರ ಮಂಗಳಾರತಿ ನಡೆದ ಮೇಲೆ ಪ್ರಸಾದ ಹಂಚಲ್ಪಟ್ಟಿತು. ಅನಂತರ ಆಚಾರ್ಯರ ಚಿತ್ರಪಟವನ್ನು ಶ್ರೀಮಲ್ಲಿಕಾರ್ಜುನ ಸ್ವಾಮಿಯನ್ನು ಸ್ವಸ್ಥಾನಕ್ಕೆ ಬಿಜಯಂಗೈಸಿ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಜಯಂತಿಯ ಪವಿತ್ರ ದಿನವನ್ನು ದೊಡ್ಡಹಬ್ಬದಂತೆ ಆಚರಿಸಿ ನಿಜವಾದ ವೀರಶೈವರೆಂಬ ಹೆಸರನ್ನು ಅನ್ವರ್ಥಪಡಿಸಿಕೊಂಡ ವೃಂದಾವನಹಳ್ಳಿ ಗ್ರಾಮಸ್ಥರೇ ಧನ್ಯರು. ಈ ಮಹನೀಯರಿಗೆಲ್ಲ ಶ್ರೀಗುರುರೇವಣಸಿದ್ಧನು ಆಯುರಾರೋಗ್ಯಭಾಗ್ಯಗಳನ್ನು ಕೊಟ್ಟು ಕಾಪಾಡಲಿ

ಓರ್ವ ಭಕ್ತ.

ಜಗಟೂರು

ಇದೇ ಸ್ವಭಾನು ಸಂ॥ ಫಾಲ್ಗುಣ ಶು॥ ೧೪ ಬುಧವಾರ 8-3-44 ನೇ ದಿವಸ ಶಿವಮೊಗ್ಗಾ ಜಿ॥ ಸೊರಬ ತಾ॥ ಜಗಟೂರು ಗ್ರಾಮದ ಗೌ॥ ರೋ॥ ತ್ರೈಮರಿ ಬಾಯ್ಸ್ ಸ್ಕೂಲ್ ಮಾಸ್ತರಾದ ಕೆ. ಪಿ. ರುದ್ರರಾಜಗೌಡರು ತಮ್ಮ ಗೃಹದಲ್ಲಿ ರೇಣುಕಾಚಾರ್ಯರ ಜಯಂತಿ ನಿಮಿತ್ತ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾವಳಿ ಭಾವಚಿತ್ರ ಪಟಕ್ಕೆ ಷೋಡಶೋಪಚಾರಗಳಿಂದಲೂ ಫಲಪುಷ್ಪಗಳಿಂದಲೂ ಪೂಜಿಸಿ ಪಂಚಾಚಾರ್ಯರ ನಾಮಾವಳಿಯನ್ನು ಪಠಿಸಿದರು ಮತ್ತು ಇಂದಿಗೆ ಮೂರು ವರ್ಷಗಳ ಹಿಂದೆ ಶ್ರೀರೇಣುಕಾಚಾರ್ಯರ ಜಯಂತಿಯ ಪವಿತ್ರ ದಿವಸದಲ್ಲಿ ಜನಿಸಿದ ಗುರುರಾಜ ಉರುಫ್ ರಾಜಶೇಖರ ಒಡೆಯನೆಂಬ ಅವರ ಪುತ್ರನಿಗೆ ಮೂರು ವರ್ಷ ತುಂಬಿದ್ದರಿಂದ ಹುಟ್ಟಿದಹಬ್ಬವನ್ನು ನಡೆಯಿಸಿದರು. ಜಗತ್ಪೂಜ್ಯರಾದ ಜಗದ್ಗುರು ಪಂಚಾಚಾರ್ಯರ ಜಯಂತಿ ಮಹೋತ್ಸವಗಳನ್ನು ಆಯಾಯ ತಿಥಿಗಳಲ್ಲಿ ಗುರುಭಕ್ತರು ನಡೆಯಿಸಬೇಕಾಗಿಯೂ ಗುರುಕೃಪೆಗೆ ಪಾತ್ರರಾಗಬೇಕಾಗಿಯೂ ಕೋರುವ,

ಓರ್ವ ಗುರುಭಕ್ತ.

ಪಂಚಾಚಾರ್ಯಪ್ರಭಾ.

೧೯೪೪ನೆಯ ಮಾರ್ಚಿ ತಾ|| ೨೦ನೇ ಸೋಮವಾರ

ವಿದ್ಯಾರ್ಥಿಗಳೂ ಧರ್ಮಾಚರಣೆಯೂ

ನಮ್ಮ ವೀರಶೈವ ಜನಾಂಗದಲ್ಲಿ ನಿತ್ಯನೈಮಿತ್ತಿಕಾದಿ ಕರ್ಮಗಳಾಗಲಿ ಆಚಾರ ವ್ಯವಹಾರಗಳಾಗಲಿ ಎಷ್ಟೋ ಕಡೆಗಳಲ್ಲಿ ಸರಿಯಾಗಿ ನಡೆಯದೆ ಮನಸ್ಸಿಗೆ ಬಂದಹಾಗೆ ನಡೆಯಿಸಲ್ಪಡುತ್ತಲಿವೆ ಒಬ್ಬರು ಲಿಂಗಪೂಜೆ ಮಾಡುವಂತೆ ಇನ್ನೊಬ್ಬರು ಮಾಡುವುದಿಲ್ಲ ಒಬ್ಬರು ಕನ್ನಡ ವಚನವನ್ನು ಹೇಳಿಕೊಂಡು ಪೂಜೆಮಾಡುತ್ತಿದ್ದರೆ, ಇನ್ನೊಬ್ಬರು ಮಹಿಮ್ನ ಮುಂತಾದವುಗಳನ್ನು ಹೇಳಿಕೊಂಡು ಪೂಜೆಮಾಡುತ್ತಾರೆ ಕೆಲವರು ಮೌನದಿಂದ ಪೂಜೆಮಾಡುತ್ತಿದ್ದರೆ, ಇನ್ನು ಕೆಲವರು ವೇದಮಂತ್ರಗಳಿಂದ ಪೂಜೆಮಾಡುತ್ತಾರ ಪೂಜೆಮಾಡದೆ ನಾಸ್ತಿಕರಾಗಿರುವವರೂ ಕೆಲವೆಡೆಯಲ್ಲಿ ಸಿಕ್ಕಬಹುದು ವೀರಶೈವಮತದ ಮುಖ್ಯ ಚಿಹ್ನವೆನಿಸಿದ ಇಷ್ಟಲಿಂಗ ಪೂಜೆಯೇ ಇಷ್ಟು ವ್ಯತ್ಯಾಸವನ್ನು ಹೊಂದಿರುವಲ್ಲಿ ಇನ್ನು ಆಯಾಯ ಕಾಲಗಳಲ್ಲಿ ಗೃಹಸ್ಥರ ಮನೆಗಳಲ್ಲಿ ನಡೆಯಬೇಕಾದ ಗರ್ಭಾದಾನಾದಿಕರ್ಮಸಂಸ್ಕಾರಗಳು ಎಷ್ಟರಮಟ್ಟಿಗೆ ನಡೆಯಬಹುದೆಂಬುದನ್ನು ವಾಚಕರೇ ಊಹಿಸಬೇಕಾಗಿವೆ "ನಿತ್ಯಂ ಸ್ವವಾಮಹಸ್ತಾಗ್ರೇ ಸಾವಧಾನೇನ ಪೂಜಯೇತ್" ಪ್ರತಿನಿತ್ಯವೂ ಗುರುವಿನ ದ ಧರಿಸಲ್ಪಟ್ಟ ಇಷ್ಟಲಿಂಗವನ್ನು ತನ್ನ ವಾಮಹಸ್ತದಲ್ಲಿರಿಸಿ ನಿಶ್ಚಲಮನಸ್ಸಿನಿಂದ ಅರ್ಚಿಸುತ್ತಿರಬೇಕೆಂದು ಧರ್ಮಗ್ರಂಥಗಳು ಸಾರುತ್ತವೆ

ಪ್ರಕಾ ಶಾಕುಶಾ ನಾವ ಶಿವಲಿಂಗಾರ್ಚನಂ ಶುಭಂ |
ಷಟ್ಕಾಲಂ ವಾ ತ್ರಿಕಾಲಂ ವಾ ಏಕಕಾಲಂ ಮಹೇಶ್ವರಂ |
ಯೋ ಪೂಜಯತಿ ವಿಪ್ರೇಂದ್ರ ಸ ಯಾತಿ ಶಿವಮಂದಿರಂ |

ಯಾರು ಈ ಶಿವಲಿಂಗವನ್ನು ಆರುಕಾಲಗಳಲ್ಲಾಗಲಿ, ಮೂರು ಕಾಲಗಳಲ್ಲಾಗಲಿ, ಒಂದು ಕಾಲದಲ್ಲಾಗಲಿ ತಪ್ಪದೆ ನಿಷ್ಠಾಯುಕ್ತವಾಗಿ ಪೂಜಿಸುವರೋ, ಅವರು ಪರಮೇಶ್ವರನೊಲುಮೆಗೆ ಪಾತ್ರರಾಗುತ್ತಾರೆಂದು ಶಿವಲಿಂಗ ಪೂಜೆಯಿಂದಾಗುವ ಮಹಾಫಲವನ್ನು ಶಿವಾಗಮಗಳು ಬಹಳವಾಗಿ ಕೊಂಡಾಡಿರುತ್ತವೆ

ಇವರು ವೀರಶೈವರೆಂಬ ಹೆಸರನ್ನು ಪಡೆದಿರುವುದಾದರೂ ಇದೇ ಶಿವಲಿಂಗದಿಂದಲೇ ಹೊರತು ಇನ್ನಾವುದರಿಂದಲೂ ಅಲ್ಲ. ಈ ಶಿವಲಿಂಗವೊಂದಿಲ್ಲದೆ ಇನ್ನಾವ ಚಿಹ್ನಗಳಿದ್ದರೂ ವೀರಶೈವರೆಂದು ಯಾರಿಂದಲೂ ಕರೆಯಲ್ಪಡುವುದಿಲ್ಲ ವೀರಶೈವಮತದ ಆದ್ಯಗುರುಗಳಾದ ರೇಣುಕಭಗವತ್ಪಾದರೂ ಸಹ ಅಗಸ್ತ್ಯಮಹರ್ಷಿಗೆ ವೀರಶೈವಸಿದ್ಧಾಂತವನ್ನುಪದೇಶಿಸುವ ಸಂದರ್ಭದಲ್ಲಿ—

ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷುಚ |
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್ ||

ಎಂದು ವೀರಶೈವನಿಗೆ ಲಿಂಗವೇ ಮುಖ್ಯವಾದ ಚಿಹ್ನವೆಂದು ಸ್ಪಷ್ಟಪಡಿಸಿರುತ್ತಾರೆ ವೀರಶೈವರಿಗೆ ಈ ಲಿಂಗಧಾರಣ ಲಿಂಗಪೂಜಾದಿಗಳೇ ನಿತ್ಯವಿಧಿಯು. "ಅಕರಣೇ ಪ್ರತ್ಯವಾಯಃ ನಿತ್ಯತ್ವಂ' ಎಂಬ ವಾಕ್ಯಪ್ರಕಾರ ಲಿಂಗವನ್ನು ಧರಿಸದೆಯೂ, ಲಿಂಗವನ್ನು ಪೂಜಿಸದೆಯೂ ಊಟವನ್ನು ಮಾಡಲಾಗದು ಹಾಗೆ ಮಾಡಿದ್ದಾದರೆ ಸಂಧ್ಯಾವಂದನಾದಿ ನಿತ್ಯಕರ್ಮವನ್ನು ಮಾಡದೆ ಯಾವನು ಊಟಮಾಡುತ್ತಾನೆಯೋ ಅವನು ಚಂಡಾಲನಾಗಿ ಹುಟ್ಟುವನೆಂಬ ಬಲವಾದ ನಿಯಮವಿರುವಂತೆ, ಲಿಂಗಧಾರಣಪೂಜಾದಿ ನಿತ್ಯಕರ್ಮಗಳನ್ನು ನಡೆಯಿಸದೆ ಊಟಮಾಡುವವನು ಮಹಾಪಾಪಿಯಾಗಿ ರೌರವ ನರಕವನ್ನು ಹೊಂದುವನೆಂದು ಬಲವಾದ ನಿಯಮವಿರುವುದರಿಂದ, ಪೂಜೆಯ ಮಹತ್ತ್ವವು ಅಷ್ಟಿಷ್ಟೆಂದು ವರ್ಣಿಸಲು ಸಾಧ್ಯವಿಲ್ಲ ಇಂಥ ಲಿಂಗಪೂಜೆಯನ್ನೂ ಲಿಂಗಧಾರಣವನ್ನೂ ಬರಬರುತ್ತ "ಅತಿಪರಿಚಯಾದವಜ್ಞಾ" ಎಂಬುವಂತೆ ಈಗಿನ ನವನಾಗರಿಕರಾದ ಕೆಲ ವಿದ್ಯಾರ್ಥಿಗಳು ಬಹು ಅಲಕ್ಷ್ಯಭಾವದಿಂದ ಕಾಣಹತ್ತಿರುತ್ತಾರ ಲಿಂಗವನ್ನು ಕಂಠಸ್ಥಾನದಲ್ಲಿ ಧರಿಸುವುದೇ ಒಂದು ಭಾರವೆಂದೂ ಲಜ್ಜಾಸ್ಪದವೆಂದೂ ಭಾವಿಸಿಕೊಂಡು ಪವಿತ್ರವಾದ ಶಿವಲಿಂಗವನ್ನು ತೆಗೆದು ತಮ್ಮ ಟ್ರಂಕುಗಳಲ್ಲಿ ಮುಚ್ಚಗುವ ನೀಚಕಾರ್ಯವನ್ನು ನಹ ಮಾಡುತ್ತಲಿದ್ದರೆ ಕೆಲಜನ ವಿದ್ಯಾರ್ಥಿಗಳು ಅಲಿಂಗಿಗಳಲ್ಲಿ ಪಕ್ವಾನ್ನ ಸ್ವೀಕಾರಮಾಡಲಾಗದ ಒ ಬಲವಾದ ನಿಯಮವನ್ನು ಮೀರಿ ಮತಾಂತರದ ಹೋಟಲ್‌ಗಳಿಗೆ ಹೋಗಿ ತಾವೂ ಭ್ರಷ್ಟರಾಗುವುದಲ್ಲದೆ ಅಲ್ಪಸ್ವಲ್ಪ ನಿಯಮದಿಂದಿರುವ ತಮ್ಮ ಮನೆಯವರನ್ನೂ ಸಹ ಭ್ರಷ್ಟಗೊಳಿಸುತ್ತಾರ ತಮ್ಮ ತಂದೆತಾಯಿಗಳು ಕಷ್ಟಪಟ್ಟು ಸಾಲಮಾಡಿ ನಮ್ಮ ಮಕ್ಕಳು ಓದಿ ಬುದ್ಧಿವಂತರಾಗಲೆಂದು ಅಭ್ಯಾಸಕ್ಕಾಗಿ ನಗರಗಳಿಗೆ ಕಳುಹಿಸಿಕೊಡುತ್ತಾರಷ್ಟೆ! ಪಿತೃಜ್ಞಾಪರಿಪಾಲಕರಾದ ಅಲ್ಪಸ್ವಲ್ಪರ ವಿದ್ಯಾರ್ಥಿಗಳು ಹಾಗೆ ನಡೆದು ತಾಯಿತಂದೆಗಳ ಪ್ರೀತಿಗೆ ಪಾತ್ರರಾದರೂ ನೂರಕ್ಕೆ ಒಂಬತ್ತು ಜನರು ಮತಭ್ರಷ್ಟರೂ ಆಚಾರಭ್ರಷ್ಟರೂ ಆಗಿ ತಾವು ಪ್ರತ್ಯಕ್ಷವಾಗಿ ಹೃದಯದಲ್ಲಿ ಧರಿಸಿದ್ದ ದೇವರಿಗ ಸಹ ಭಯಪಡದ ಸ್ವೇಚ್ಛಾಮಾರ್ಗದಲ್ಲಿ ಕಾಲಿಡುತ್ತ ಬಂದಿರುವುದು ಅತಿ ಶೋಚನೀಯವಾದ ವಿಷಯವು "ವಿನಾಯಕಂ ಪ್ರಕುರ್ವಾಣೋ ರಚಯಾಮಾಸ ವಾನರಂ" ಎಂಬಂತೆ ವಿದ್ಯೆಯನ್ನು ಕಲಿತು ಪಂಡಿತನಾಗಿ ಆಚಾರಶೀಲನಾಗಿ ಮತಕ್ಕೂ ವಂಶಕ್ಕೂ ಭೂಷಣವನ್ನುಂಟುಮಾಡಲೆಂಬ ಸಂಕಲ್ಪದಿಂದ ತಂದೆತಾಯಿಗಳು ಸಾಲಮಾಡಿ ಓದಿಸುತ್ತ ಬಂದರೆ, ಅದು ಈ ರೀತಿಯಾಗಿ ಪರಿಣಮಿಸಿತೆಂದು ಆ ತಂದೆತಾಯಿಗಳು ಕಣ್ಣೀರನ್ನು ಹಾಕುವ ಪ್ರಸಕ್ತಿಯು ಬಂದೊದಗಿದೆ ಈಗಿನ ವಿದ್ಯಾಸಂಸ್ಕಾರದ ಮಹಿಮೆಯು ನಾಸ್ತಿಕದ ಪರಾಕಾಷ್ಠದಶೆಯನ್ನು ಹೊಂದಿರುತ್ತದೆ ಇದು ಆಚಾರವನ್ನು ಕುಲಗೆಡಿಸುವದು, ಹಿರಿಯರ ನಡವಳಿಕೆಯನ್ನು ಹಾಳುಮಾಡುವದು, ಅಭಕ್ಷ್ಯದಲ್ಲಿ ಭಕ್ಷಣಾಶೆಯನ್ನೂ, ಅಗಮ್ಯದಲ್ಲಿ ಗಮನಾಶೆಯನ್ನೂ, ಅಪೇಯದಲ್ಲಿ ಪಾನಾಶೆಯನ್ನೂ ಹುಟ್ಟಿಸುವದು ನಮ್ಮ ಭಾರತಧರ್ಮಶಾಸ್ತ್ರದಲ್ಲಿ ಅಭಕ್ಷ್ಯಭಕ್ಷಣವೂ, ಅಗಮ್ಯಗಮನವೂ, ಅಪೇಯಪಾನವೂ ಅತಿನಿಷಿದ್ಧವೆಂದು ಹೇಳಲ್ಪಟ್ಟಿರುತ್ತದೆ ಅನ್ಯದೇಶೀಯ ವಿದ್ಯಾಸಂಸರ್ಗವಾದರೂ ಅಭಕ್ಷ್ಯಭಕ್ಷಣಗಳೂ, ಅಗಮ್ಯಗಮನಗಳೂ, ಅಪೇಯಪಾನಗಳೂ ಎರಡೂ ಒಂದೇ ಎಂಬ ಸಂಸ್ಕಾರವನ್ನು ಬಲವಾಗಿ ಹೆಚ್ಚಿಸುತ್ತವೆ

ತಾನು ಯಾವ ಮತದಲ್ಲಿ ಜನ್ಮವನ್ನು ಧರಿಸಿರುತ್ತಾನೆಯೋ ಆ ಮತಧರ್ಮವನ್ನು ಬಿಡದೆ ದೈವಭಕ್ತಿಯೂ ಗುರುಭಕ್ತಿಯೂ ಹೆಚ್ಚುತ್ತ ಆಚಾರನಿಷ್ಠನಾಗಿದ್ದು ಅಂಥ ಜೀವಿಕಾಸಾಧನೆಗಳಾದ ವಿದ್ಯೆಗಳನ್ನು ಕಲಿಯಬೇಕೆಂದಪೇಕ್ಷೆಯಿದ್ದಲ್ಲಿ ಕಲಿತು ಬುದ್ಧಿಕೌಶಲವನ್ನು ಪಡೆದು ಪ್ರತಿಷ್ಠಿತನಾಗಿ ಇಮ್ಮಡಿಯಾಗಿ ದ್ರವ್ಯಾರ್ಜನೆಮಾಡಿದರಂತೂ ಉತ್ತಮವೇ ಸರಿ ಹಾಗಿಲ್ಲದೆ ಇದ್ದಬಿದ್ದ ಮತಧರ್ಮಗಳನ್ನೂ ತನ್ನ ಕುಲಕ್ರಮಾಚಾರವನ್ನೂ ಹಾಳುಮಾಡಿ ತನ್ನ ಪರಿಶುದ್ಧವಾದ ವಂಶಕ್ಕೂ ಸಹ ಕುಂದಕವನ್ನುಂಟುಮಾಡುವುದು ಅತ್ಯಂತ ಪಾಪದ ಕಾರ್ಯವಾಗಿದೆ ತಮ್ಮ ಮತದ ಮುಖ್ಯಚಿಹ್ನವೆನಿಸಿದ ಲಿಂಗವನ್ನು ಉತ್ತಮಾಂಗದಲ್ಲಿ ಧರಿಸಿಕೊಂಡಿರುತ್ತ, ಯಥೋಚಿತವಾಗಿ ಪೂಜೋಚಿತ ಮಂತ್ರಗಳನ್ನು ಕಲಿತುಕೊಂಡು ಒಪ್ಪತ್ತಾದರೂ ಸ್ನಾನಾದಿಗಳಿಂದ ಪರಿಶುದ್ಧಿಗೊಂಡು, ಗುರೂಪದಿಷ್ಟವಾದ ಮಹಾಮಂತ್ರವನ್ನು ಜಪಿಸುತ್ತ ಅನಿಯತಭೋಜನಾದಿಗಳಲ್ಲಿ ಮನಗೊಡದೆ ತಮ್ಮ ಮತದ ತತ್ವವನ್ನು ತಿಳಿದು ಕೈಲಾದಮಟ್ಟಿಗೂ ಪ್ರಚಾರಮಾಡುತ್ತ ಬರಬೇಕಾದುದು ಪ್ರತಿಯೊಬ್ಬ ವಿದ್ಯಾರ್ಥಿಯ ಕರ್ತವ್ಯವು ಹಾಗೆಮಾಡದೆ ಲಗಾಮು ಕಿತ್ತುಹೋದ ಕುದುರೆಯಂತೆ ಬಾಲ್ಯದಲ್ಲಿಯೇ ಧರ್ಮಮಾರ್ಗದಿಂದ ಚ್ಯುತರಾಗುತ್ತ ಬಂದರೆ ಮುಂದೆ ಭಾರತಧರ್ಮವನ್ನು ಕಾಪಾಡುವವರಾರು? ಆದುದರಿಂದ ನಮ್ಮ ಪವಿತ್ರಸನಾತನಧರ್ಮವೃಕ್ಷಕ್ಕೆ ಬೀಜಭೂತರಾಗಿರುವ ಈಗಿನ ವಿದ್ಯಾರ್ಥಿಗಳು ತಾವು ತಮ್ಮ ಜೀವನಕ್ಕಾಗಿ ಯಾವ ವಿದ್ಯೆಯನ್ನು ಓದಿದರೂ, ಪವಿತ್ರವಾದ ತಮ್ಮ ಮತಧರ್ಮಗಳನ್ನು ಬಿಡದಿರಲೆಂದು ಆಶಿಸುತ್ತೇವೆ

ಯುದ್ಧವಾರ್ತೆ.

ಫಿನ್ಲೆಂಡಿಗೆ ಕೊನೆ ಎಚ್ಚರಿಕೆ

'ನಿಯಮಿತ ಅವಧಿಯೊಳಗೆ ಫಿನ್ಲೆಂಡು ರಷ್ಯದ ಶಾಂತಿಷರತ್ತುಗಳನ್ನು ಅಂಗೀಕರಿಸಿದರೆ ಸರಿ, ಇಲ್ಲವಾದರೆ, ಫಿನ್ಲೆಂಡಿನ ಪರಿಣಾಮ ನೆಟ್ಟಗಾಗಲಾರದು" ಎಂದು ರಷ್ಯವು ಎಚ್ಚರಿಕೆ ಕೊಟ್ಟಿದೆಯೆಂದು ವದಂತಿ ಹರಡಿದೆ! ರಷ್ಯದ ಕೊನೆ ಎಚ್ಚರಿಕೆಯನ್ನು ನೋಡಿದರೆ, ಶೀಘ್ರದಲ್ಲಿಯೇ ಅನಿರೀಕ್ಷಿತ ಘಟನೆಗಳಾಗುವ ಸೂಚನೆಯಿದೆ ಯೆಂದು ನಂಬಿದೆ

ಲಂಡನ್‌ಮೇಲೆ ಬಾಂಬುಗಳು

೧೪ ನೇ ತಾ|| ರಾತ್ರಿ ಲಂಡನಿನಮೇಲೆ ಜರ್ಮನ್ ವಿಮಾನಗಳು ಬಂದು ಬಾಂಬುಗಳನ್ನು ಸುರಿಸಿದವು ವಿಮಾನ ವಿನಾಶಕ ಫಿರಂಗಿಗಳ ಅರ್ಭಟ ಬಲವಾಗಿತ್ತು ನಿರೀಕ್ಷಕರೊಬ್ಬರ ಅಭಿಪ್ರಾಯದಂತೆ ಕಳೆದ ೧೫ ದಿನಗಳಿಂದ ನಡೆದ ಶತ್ರುದಾಳಿಯಲ್ಲಿ ಇದು ಬಲಯುತವಾಗಿತ್ತೆಂದು ಹೇಳಲಾಗಿದೆ

ರುಮೇನಿಯದಲ್ಲಿ ಹೊಸ ರಕ್ಷಣಾ ವ್ಯೂಹ

ಜರ್ಮನಿಯು ಪ್ರವೀಣ ಶಿಲ್ಪಿಗಳನ್ನು ರುಮೇನಿಯಕ್ಕೆ ರವಾನಿಸಿ, ನೀಸ್ಟರ್ ನದಿಯ ತೀರದಲ್ಲಿ ಭದ್ರವಾದ ಮಿಲಿಟರಿ ರಕ್ಷಣಾವ್ಯೂಹ ನಿರ್ಮಿಸುವಂತೆ ಆಜ್ಞೆ ಮಾಡಿರುವರೆಂದು ನಂಬಲಾಗಿದೆ ಯುಕ್ರೇನಿನಿಂದ ಮುಂದೆ ನುಗ್ಗುತ್ತಿರುವ ರಷ್ಯಸೇನೆಯನ್ನು ತಡೆಯಲು ಈ ಪ್ರಯತ್ನವೆಂದು ನಂಬಲಾಗಿದೆ.

ಇಟಲಿ ಸಂಗ್ರಾಮ

ಇಟಲಿ ಕದನ ತುಂಬಾ ನಿಧಾನವಾಗಿದ್ದರೂ, ಹೆಚ್ಚು ನಿರಾಶಾರ್ಹವಾಗೇನೂ ಇಲ್ಲ ಇಟಲಿ ಕದನದಿಂದ ಜರ್ಮನಿಗೆ ತುಂಬಾ ಕಷ್ಟವಾಗಿದೆಯೆಂದೂ ಭಾರಿ ಸೇನೆಯನ್ನು ಇಟಲಿಯಲ್ಲಿ ನಾಜಿಗಳು ಇಟ್ಟಿರಬೇಕಾಗಿದೆಯೆಂದೂ ಅಭಿಪ್ರಾಯಪಡಲಾಗಿದೆ. ಈಗ ೨೨ ಜರ್ಮ ಡಿವಿಜನ್‌ಗಳು ಇಟಲಿಯಲ್ಲಿ ಇವೆಯೆಂದು ಹಲವು ನಿಪುಣರು ಊಹಿಸಿದ್ದಾರೆ

ಜಪಾನರಿಗೆ ಸೋಲು

ಬೊಗನ್‌ವಿಲ್ಲೆಯಲ್ಲಿರುವ ಎಂಪ್ರೆಸ್ ಅಗಸ್ಟಾ ಕೊಲ್ಲಿಯನ್ನು ಹಿಡಿಯಲು ಜಪಾನರು ೩೦೦೦ ಸೈನಿಕರನ್ನು ದೂಡಿದರು ಯುದ್ಧವು ಭೀಕರವಾಗಿ ನಡೆದು ೧೦೦೦ ಜಪಾನಿಗಳು ಮಡಿದು ಹಿಮ್ಮೆಟ್ಟಿರುವರು ಅಡ್ಮಿರಾಲ್ಟಿ ದ್ವೀಪಸ್ತೋಮದ ಮತ್ತೆರಡು ದ್ವೀಪಗಳನ್ನು ಅಮೆರಿಕಾ ಸೈನಿಕರು ಆಕ್ರಮಿಸಿಕೊಂಡಿರುವರು ಶತ್ರು ಪ್ರತಿಭಟನೆ ಅಷ್ಟಾಗಿರಲಿಲ್ಲ ನೇವರ್, ವೇಕ್ ಮತ್ತು ರಾಬೂಲ್‌ಗಳ ಮೇಲೆ ವಿಶೇಷ ವಿಮಾನದಾಳಿ ಮಾಡಲಾಯಿತು ಎಂದು ಹೇಳಲಾಗಿದೆ.

ಸ್ಟಿಲ್ವೆಲ್‌ರ ಸೈನ್ಯಕ್ಕೆ ಅಮೆರಿಕಾದಿಂದ ವಿಮಾನಗಳಲ್ಲಿ ಸರಬರಾಜು

ಈಗ ಉತ್ತರ ಬರ್ಮಾ ರಣರಂಗದಲ್ಲಿ ಜನರಲ್ ಸ್ಟಿಲ್ವೆಲ್‌ರವರ ನೇತೃತ್ವದಲ್ಲಿ ಕಾದುತ್ತಿರುವ ಅಮೆರಿಕಾ ಮತ್ತು ಚೀಣಾ ಪಡೆಗಳ ಉಪಯೋಗಕ್ಕಾಗಿ ಬೇಕಾಗುವ ಶಸ್ತ್ರ ಮತ್ತು ಯೋಧರ ಸಹಾಯವನ್ನು ಅಮೆರಿಕಾದಿಂದ ವಿಮಾನಗಳು ತರುತ್ತಿವೆ ಫ್ಲಾರಿಡಾದಿಂದ ಇವು ಹಿಂದೀ ಸಹಾಯಕ ಸಾಮಗ್ರಿಗಳನ್ನು ಭಾರತದಲ್ಲಿ ತಂದಿಳಿಸಿದನಂತರ ಭಾರತದಿಂದ ಯುದ್ಧಸಾಮಗ್ರಿಗಳ ತಯಾರಿಕೆಗೆ ಬೇಕಾದ ಕಚ್ಚಾಪದಾರ್ಥಗಳನ್ನು ಅಮೆರಿಕಾಕ್ಕೆ ಒಯ್ಯುತ್ತವೆ ಈ ಕಾರ್ಯಾಚರಣೆಗೆ ಇವು ೨೪,೦೦೦ ಮೈಲಿ ಹಾರಾಡಬೇಕಾಗುತ್ತದೆಂದು ಹೇಳಲಾಗಿದೆ

ಜರ್ಮನಿ ಇನ್ನೂ ವಿಜಯಹೊಂದುವ ಆಸೆ ಇಟ್ಟುಕೊಂಡಿದೆ

"ಜರ್ಮನಿಯು ಈಗ ತೋರಿಸುತ್ತಿರುವ ಐಕ್ಯಮತ್ಯದಿಂದ ಜರ್ಮನರ ಸರ್ವತೋಮುಖವಾದ ಅಭಿವೃದ್ಧಿಗೆ ಮೂಲಕಾರಣವಾದ ಶಾಂತಿಯನ್ನು ಗಳಿಸುತ್ತೇವೆಂಬ ಭರವಸೆಯಿದೆ. ನ್ಯಾಷನಲ್ ಸೋಷಲಿಸ್ಟ್ ಕ್ರಾಂತಿಯವರಿಗೆ ಉಜ್ವಲ ಭವಿಷ್ಯವಿರುವ ಈ ಒಕ್ಕಟ್ಟಿನಲ್ಲಿ ಶಿಸ್ತಿನಿಂದ ಕೂಡಿದ ಜರ್ಮನಿಗೆ ಗೌರವಯುತವಾದ ಶಾಂತಿಯನ್ನೇ ಬಯಸುವುದು. ನಮ್ಮೆಲ್ಲರ ಕರ್ತವ್ಯವಾಗಿದೆ ಈ ಶಾಂತಿಗಾಗಿ ನಾವು ನಮ್ಮ ಶಕ್ತಿ ವಿನಿಯೋಗಿಸುವುದರಲ್ಲಿ ಕೊಂಚ ಅಶ್ರದ್ಧೆ ತೋರಿಸಿದರೂ, ಸೋಲಾಗಿ ಹೋದೇವು. ಜರ್ಮನಿಗಾಗಿ ಬಲಿದಾನ ಮಾಡಿದ ವೀರರ ಆತ್ಮಕ್ಕೆ ಅಗೌರವ ಮಾಡಿದಂತಾಗುತ್ತದೆಂದು ಅಡ್ಮಿರಲ್ ಡೋನಿಟ್ಜ್‌ರವರು ಮಾಡಿದ ಜರ್ಮನ್ ವೀರರ ಸ್ಮಾರಕ ಕಾಲದಲ್ಲಿ ಹೇಳಿದರೆಂದು ಶತ್ರುಗಳಧಿಕವಾದ ವಸ್ತು ಸಾಧನಗಳು ಮತ್ತು ಜನಬಲದ ಸಹಾಯದಿಂದ ಶತ್ರು ವರ್ಗವು ನಮ್ಮನ್ನು ತುಳಿಯಲು ಯತ್ನಿಸಿದರೂ ಫಲಿಸಲಿಲ್ಲ. ಜರ್ಮನ್ ಫ್ಯೂರರನು ಭವಿಷ್ಯವರಿತು ಹತ್ತು ವರ್ಷಗಳ ಹಿಂದೆಯೇ ಜರ್ಮನ್ ಮಿಲಿಟರಿ ಬಲವನ್ನು ಸುಸಜ್ಜಿತಗೊಳಿಸದೆ ಇದ್ದಿದ್ದರೆ ಸರ್ವನಾಶವಾಗುತ್ತಿತ್ತು. ಈಗಲೂ ಯೂರೋಪಿನ ಮೇಲೆ ನುಗ್ಗಲು ಯತ್ನಿಸುವ ಶತ್ರು ಬಲವನ್ನು ತುಳಿಯುವ ಶಕ್ತಿ ಜರ್ಮನ್ ಯೋಧವೃಂದಕ್ಕಿದೆ. ನಾವೇ ಈಗ ವಿಜಯಹೊಂದಿ ಜಯಭೇರಿ ಹೊಡೆಯಲೇಬೇಕು. ಇದಕ್ಕೆ ನಮ್ಮ ಒಳನಾಡಿನ ಸ್ಥಿತಿಯೂ ಸಹಾಯವಾಗಿರುವುದು ನಮ್ಮ ಭಾಗ್ಯೋದಯ' ಎಂಬುದಾಗಿ

ಬರ್ಮಾದಲ್ಲಿ ಶತ್ರುಗಳ ಹಿನ್ನಡೆ

ಮಾಂಗ್ಡಕ್ಕೆ ದಕ್ಷಿಣದಲ್ಲಿ ಅಂದರೆ ಸಮುದ್ರ ತೀರ ಪ್ರದೇಶದಲ್ಲಿ ಶತ್ರುಗಳ ಪ್ರತಿಭಟನೆಯನ್ನು ಮುರಿದಿರುವ ಪಶ್ಚಿಮ ಮಿತ್ರರ ಮುಂಗಾವಲು ಸೈನ್ಯಗಳು ಶತ್ರುವಿನ ಬೆನ್ನಟ್ಟಿ ಬಿದ್ದು ಅವರನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆಯಲ್ಲಿ ನಿರತರಾಗಿದ್ದಾರೆ. ಮಾಯೂ ಗುಡ್ಡ ಪ್ರದೇಶಗಳಿಗೆ ಪೂರ್ವದಲ್ಲಿ ಶತ್ರುವು ಹಿಂಡ್ಯಾಗುಡ್ಡಗಳಲ್ಲಿ ಸ್ಥಾಪಿಸಿಕೊಂಡಿರುವ ಠಾಣ್ಯಗಳನ್ನು ಬಿಟ್ಟು ಓಡುವಂತೆ ಮಾಡಲಾಗಿದೆ. ಸುತ್ತಮುತ್ತಲಿದ್ದ ಬೆಟ್ಟ ಪ್ರದೇಶಗಳಿಂದಲೂ ಅವರನ್ನು ಓಡಿಸಲಾಗಿದೆ. ಬುಥೇಡಾಂಗ್ ಕ್ಷೇತ್ರದಲ್ಲಿ ಶತ್ರು ಠಾಣ್ಯಗಳ ಮೇಲೆ ಮಿತ್ರ ಪಡೆಗಳು ಬಿದ್ದು ಅಲ್ಲಿಂದಲೂ ಅವರನ್ನು ಓಡಿಸಿರುವರು. ಈ ಕಾರ್ಯಾಚರಣೆಯಲ್ಲಿ ಶತ್ರುವಿಗೆ ಅಪಾರ ನಷ್ಟವಾಗಿರುವುದಾಗಿ ವರದಿಯಾಗಿದೆ. ಕಲಂಡಾನ್ ಕಣಿವೆಯಲ್ಲೂ ಸಹ ಶತ್ರುವಿಗೆ ಅಪಾರ ನಷ್ಟವಾಗಿದೆ. ಚೀಗುಡ್ಡ ಪ್ರದೇಶಗಳಲ್ಲಿ ಸ್ಥಾಪಿಸಿರುವ ನಮ್ಮ ಠಾಣ್ಯಗಳ ಬಲಭಾಗದಲ್ಲಿ ಶತ್ರುಸೇನೆ ಕಾರ್ಯಾಚರಣೆ ನಡೆಸಿ ಸ್ವಲ್ಪ ಮಾತ್ರ ಯಶಸ್ವಿಯಾಗಿದೆ. ಕ್ಯಾಬಾ ಕಣಿವೆಯಲ್ಲಿ ಶತ್ರು ಚಟುವಟಿಕೆಗೆ ಮಿತ್ರ ಸೈನಿಕರು ಅಡಚಣೆ ಮಾಡುತ್ತಿರುವುದರಿಂದ ಶತ್ರುವಿಗೆ ನಷ್ಟವಾಗುತ್ತಿದ್ದರೂ ಅವರು ಮುಂದುವರಿಯುತ್ತಿದ್ದಾರೆ. ಉತ್ತರ ಬರ್ಮಾದಲ್ಲಿ ಅಮೆರಿಕಾ ಮತ್ತು ಚೀಣೀ ಪಡೆಗಳು ತಾವು ಜಯಿಸಿದ ಸ್ಥಾನಗಳನ್ನು ಭದ್ರಪಡಿಸಿಕೊಳ್ಳುತ್ತಿದ್ದಾರೆ. ಈ ಪ್ರದೇಶದಲ್ಲಿ ಜಪಾನರು ಯುದ್ಧ ಮಾಡುತ್ತಾ ಹಿಂದಿಂದಕ್ಕೆ ಸರಿಯುತ್ತಿರುವರು. ಮಿತ್ರ ವಿಮಾನಗಳು ಈ ಪ್ರದೇಶದ ಭೂ ಸೈನ್ಯಗಳಿಗೆ ಬಹು ಸಹಾಯಕವಾಗಿ ಸಹಕರಿಸಿ ಶತ್ರು ವ್ಯವಹಾರ ಮಾರ್ಗಗಳ ಮೇಲೂ, ಮದ್ದು ಗುಂಡುಗಳ ಶೇಖರಣೆಗಳ ಮೇಲೂ ದಾಳಿ ಮಾಡುತ್ತಿರುವರು. ಈ ಕಾರ್ಯಾಚರಣೆಗಳಿಂದ ಮಿತ್ರವಿಮಾನಗಳು ನಷ್ಟವಾಗಿಲ್ಲವೆಂದು ಹೇಳಲಾಗಿದೆ.

ಮಾಯೂಗುಡ್ಡ ಪ್ರದೇಶಗಳ ಪಶ್ಚಿಮದಲ್ಲಿರುವ ಮಿತ್ರಪಡೆಗಳು ಮಾಂಗ್ಡ ಬುಥೇಡಾಂಗ್ ರಸ್ತೆಯಲ್ಲಿ ಸ್ವಲ್ಪ ಮುನ್ನುಗ್ಗಿವೆ. ರಾಬಿನ್ ಆಡ್ಡದಾರಿಯಲ್ಲಿ ಶತ್ರುವು ಕೆಲವು ಭಾಗಗಳಲ್ಲಿ ಇನ್ನೂ ಭದ್ರವಾಗಿ ನಿಂತಿದ್ದಾನೆ. ಹಿಂದಿನ ರಸ್ತೆಯ ಎರಡೂ ಪಾರ್ಶ್ವಗಳಲ್ಲಿ ಅಡಗಿಕೊಂಡಿರುವ ಶತ್ರು ಸೈನಿಕರನ್ನು ಹುಡುಕಿ ನಾಶಮಾಡಲಾಗುತ್ತಿದೆ. ಕಲಂಡಾನ್ ಕಣಿವೆಯಲ್ಲಿ ವೆಸ್ಟ್ ಆಫ್ರಿಕಾ ಪಡೆಗಳು ಶತ್ರುವಿನೊಡನೆ ಯಶಸ್ವಿಯಾಗಿ ಕಾದುತ್ತಿದ್ದಾರೆ. ಮಣಿಪುರ ನದಿಯ ಪಶ್ಚಿಮದಲ್ಲಿ ಮಿತ್ರ ಸೈನ್ಯಗಳ ಬಲಪಾರ್ಶ್ವಕ್ಕೆ ಶತ್ರು ಪಡೆಯೊಂದು ನುಗ್ಗಿರುವುದಾಗಿ ಗೊತ್ತಾಗಿದ್ದು ಭಾಗಿನ ಚಿನ್‌ಗುಡ್ಡ ಪ್ರದೇಶಗಳಲ್ಲೂ ಸಹ ಶತ್ರುಪಡೆಯೊಂದು ಮುಂದೆ ಬಂದಿದೆ. ಮಿತ್ರಪಡೆಗಳು ಚಿಂಡ್ವಿನ್ ನದಿಯನ್ನು ಅನೇಕ ಕಡೆಗಳಲ್ಲಿ ದಾಟಿವೆ. ಉತ್ತರ ಬರ್ಮಾದಲ್ಲಿ ಬಾಜು ಬೆಟ್ಟಗಳಿಗೆ ಹೋಗುವ ದಾರಿಯವರೆಗೂ ಚೀಣೀ ಪಡೆಗಳು ಮುನ್ನುಗ್ಗಿವೆ. ಹರ್ಟ್ಜನ ಕೋಟೆ ಪ್ರಾಂತದಲ್ಲಿ ಮಿತ್ರಪಡೆಗಳು ಕೆಲವು ಮುನ್ನುಗ್ಗುತ್ತಿದ್ದ ಶತ್ರುವನ್ನು ನಾಶಮಾಡುವ ಕಾರ್ಯಾಚರಣೆಯಲ್ಲಿವೆ. ಚಿನ್, ಚಿಂಡ್ವಿನ್ ಮತ್ತು ಸೈಗ್ವಿಂಗ್ ಜಿಲ್ಲಾ ಪ್ರಾಂತಗಳಲ್ಲಿರುವ ಶತ್ರು ಠಾಣ್ಯಗಳ ಮೇಲೆ ಮಿತ್ರ ವಿಮಾನಗಳು ದಾಳಿ ಮಾಡಲಾಗಿ ಶತ್ರುವಿನ ಮದ್ದುಗುಂಡುಗಳ ಕೇಂದ್ರಗಳಲ್ಲಿ ಪ್ರಬಲ ಜ್ವಾಲೆಗಳೆದ್ದುದನ್ನು ಕಾಣಲಾಯಿತು. ಒಂದು ಕಡೆ ಎತ್ತರಕ್ಕೆ ೧೫೦೦ ಅಡಿ ಎತ್ತರದವರೆಗೂ ಪ್ರಸರಿಸಿತು. ಮಿತ್ರ ಫೈಟರ್ ವಿಮಾನಗಳನ್ನೆದುರಿಸಿದ ಶತ್ರು ವಿಮಾನಗಳ ಪೈಕಿ ಐದನ್ನು ಉರುಳಿಸಲಾಯ್ತು. ಮಿತ್ರ ವಿಮಾನಗಳೆರಡು ಹಿಂತಿರುಗಿಲ್ಲವೆಂದು ಹೇಳಲಾಗಿದೆ.

ಕಾಗದಗಳ ಸೆನ್ಸಾರ್

ಬಂಗಾಳ ಮತ್ತು ಅಸ್ಸಾಂ ಪ್ರಾಂತಗಳಿಗೆ ಅಂಚೆ ಮೂಲಕ ಬರುವ ಮತ್ತು ಅಲ್ಲಿಂದ ಹೊರಕ್ಕೆ ಹೋಗುವ ಎಲ್ಲ ಕಾಗದಪತ್ರಗಳನ್ನೂ ಸೆನ್ಸಾರ್ ನಿಯಮಕ್ಕೆ ಮಿಲಿಟರಿ ಕಾರಣಗಳಿಗಾಗಿ ಒಳಪಡಿಸಲಾಗುತ್ತಿದೆ.

ಭಾರತವು ಈಗ ಭಾರಿ ನಿಲ್ದಾಣ

ರೂಜ್‌ವೆಲ್ಟರು ಅಮೆರಿಕಾ ಕಾಂಗ್ರೆಸ್‌ನಲ್ಲಿ ಒಂದು ಹೇಳಿಕೆ ಕೊಡುತ್ತ "ಭರತಕ್ಕೆ ಲೀಸ್ ಅಂಡ್ ಲೆಂಡ್' ಪ್ರಕಾರ ಈ ೩ ವರ್ಷಗಳಿಂದ ಭಾರಿ ಪ್ರಮಾಣದ ಸಾಮಗ್ರಿ ಕಳುಹಿಸುತ್ತಿದ್ದೇವೆ. ೧೯೪೩ ರಲ್ಲಿ ಹಿಂದಿನ ಎರಡು ವರ್ಷಗಳಿಗಿಂತ ಶೇಕಡಾ ೭೦ರಷ್ಟು ಅಧಿಕ ಮಾಡಲಾಗಿದೆ. ಭಾರತದ ಬಗ್ಗೆ ಈ ನಮ್ಮ ದೃಷ್ಟಿಯು ಅದರ ಭೌಗೋಲಿಕ ಮತ್ತು ಆಯಕಟ್ಟಿನ ದೃಷ್ಟಿಯಿಂದ ನಿರ್ಧರಿಸಲಾಗಿದೆ. ಚೀಣಾಕ್ಕೂ ಭಾರತಕ್ಕೂ ಎಲ್ಲ ದೃಷ್ಟಿಯಿಂದಲೂ ಹೆಚ್ಚು ಸಂಬಂಧವನ್ನು ಕಲ್ಪಿಸಲಾಗಿದೆ. ಈಗ ಭಾರತವು ಶತ್ರುವಿನ ಮೇಲೆ ಧಾಳಿ ನಡೆಸಲು ಭಾರಿ ಮಿಲಿಟರಿ ನಿಲ್ದಾಣವಾಗಿದೆ" ಎಂದು ಹೇಳಿದರು.

ಶತ್ರು ಶಸ್ತ್ರಾಗಾರಗಳ ನಾಶ

ಅಮೆರಿಕೆಯ ವಿಮಾನಗಳು ಕಳೆದ ೧೪ ನೆಯ ತಾರೀಖು ಹಗಲಿನಲ್ಲಿಯೇ ಜರ್ಮನಿಯಮೇಲೆ ದಾಳಿ ಮಾಡಲು ಹೋದವು. ಇವು ಮೋಡಗಳ ಮರೆಯಲ್ಲಿ ಹೋದುದಾಗಿಯೂ ಇವುಗಳನ್ನು ಎದುರಿಸಲು ಬಹಳ ಕಷ್ಟವಾದುದಾಗಿಯೂ ಈ ಬಾಂಬರ್ ವಿಮಾನಗಳು ಜರ್ಮನಿಯ ವಿಮಾನ ತಯಾರಿಕಾ ಕೇಂದ್ರವಾದ ಬರ್ನ್‌ಸ್ವಿಕ್ ಮೇಲೆ ದಾಳಿ ಮಾಡಿದವೆಂದೂ ಅಲ್ಲಿರುವ ವಿಮಾನ ಕಾರ್ಖಾನೆಗೆ ಬಹಳ ಜಖಂ ಆಗಿರುವುದಾಗಿಯೂ ಎದುರಿಸಲು ಬಂದ ಶತ್ರು ವಿಮಾನಗಳಲ್ಲಿ ೩೬ ರನ್ನು ಕೆಡವಲಾಯಿತೆಂದು ತಿಳಿದುಬಂದಿದೆ. ಮಿತ್ರರ ೫ ಬಾಂಬರ್ ವಿಮಾನಗಳೂ ೫ ಫೈಟರ್ ವಿಮಾನಗಳೂ ನಷ್ಟವಾಗಿವೆ. ಮಧ್ಯ ಜರ್ಮನಿಯ ಅನೇಕ ಶಸ್ತ್ರಾಗಾರ ಕೇಂದ್ರಗಳ ಮೇಲೆ ದಾಳಿಮಾಡಿ ಅವುಗಳನ್ನು ಧ್ವಂಸ ಮಾಡಿರುವುದಾಗಿಯೂ ಹೇಳಲಾಗಿದೆ.

ಒರಿಸ್ಸಾ ಪ್ರಾಂತದ ಚಕ್ರಧಾರಾಪುರದಲ್ಲಿ ೮-೩-೪೪ ನೇ ದಿನ ನಡೆದ ಪ್ರಕರಣವಿದು. ಸರ್ವಿಸ್ಸಿನಿಂದ ವಿಶ್ರಾಂತಿ ಹೊಂದಿದ್ದ ಡಾ॥ ಎಸ್ ದೇವ್ ಎಂಬ ವೈದ್ಯರು ೮-೩-೪೪ ನೇ ರಾತ್ರಿ ಮೃತರಾದರು. ಅವರು ಕೊನೆಯ ಉಸಿರೆಳೆಯುವವರೆಗೂ ಪತ್ನಿಯು ಹತ್ತಿರದಲ್ಲೇ ಇದ್ದರು. ಅನಂತರ ದುಃಖಭಾರದಿಂದ ಹೃದಯ ತುಂಬಿದ್ದರೂ, ಒಂದು ಮಾತನ್ನೂ ಆಡದೆ ಆಕೆಯು ಮೇಲಕ್ಕೆದ್ದು, ಪತಿಯ ಶವದ ಕಾಲಿಗೆ ನಮಸ್ಕಾರಮಾಡಿ, ಪಕ್ಕದಲ್ಲಿಯೇ ಮಲಗಿದರು! ಮರಣವು ಆಕೆಯನ್ನೂ ನಿದ್ರೆಯಂತೆ ಆವರಿಸಿತು. ಆ ಎರಡು ಶವಗಳನ್ನೂ ಒಟ್ಟಿಗೇ ಒಂದೇ ಚಿತೆಯಲ್ಲಿಟ್ಟು ಭಸ್ಮೀಭೂತಗೊಳಿಸಲಾಯಿತು.

ಸ್ವೀಕಾರ

ಚಿಕ್ಕಮಗಳೂರು ತಾಲ್ಲೂಕು ವಸ್ತಾರೆ ಹೋಬಳಿ ಪಾಳ್ಯದಲ್ಲಿರುವ ಶ್ರೀ॥ ಬೈನೂರು ರಾಮಯ್ಯನವರ ಪತ್ನಿ ಪಾರ್ವತಮ್ಮನವರು ತಮ್ಮ ಸಹೋದರಿಯ ದ್ವಿತೀಯ ಪುತ್ರ ಚಿ॥ ರಾಮಯ್ಯ ಯಾನೆ ಲಕ್ಷ್ಮಣಯ್ಯನನ್ನು ದತ್ತಕ ಪುತ್ರನನ್ನಾಗಿ ಸ್ವೀಕರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ವಸ್ತಾರ ಪಟೇಲ್ ಮ॥ ರಾ॥ ಚೌಡೇಗೌಡರ ದ್ವಾರ ತಲ್ಪಿರುತ್ತವೆ.

ಸೊಲ್ಲಾಪುರದಲ್ಲಿರುವ ಮ॥ ರಾ॥ ಕಲ್ಲಪ್ಪ ವ.ರಾ. ಪಾಟೀಲ್ ಹುಮನೆ ಇವರ ಸಹೋದರಿ ಚಿ॥ ಸೌ॥ ಮಹಾದೇವಿ ಎಂಬ ವಧುವನ್ನು ವೈರಾಗದಲ್ಲಿರುವ ಮ॥ ರಾ॥ ಮಲ್ಲಿಕಾರ್ಜುನಪ್ಪ ಏಕಾಸಾಧಪ್ಪ ಸೋಲಾಪುರ ಇವರ ಜ್ಯೇಷ್ಠ ಪುತ್ರ ಚಿ॥ ಸಿದ್ಧರಾಮಪ್ಪನಿಗೆ ಕೊಟ್ಟು ತಾ॥ ೧೮-೩-೪೪ ನೆಯ ದಿವಸ ವಿವಾಹ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಸದರಿ ಕಲ್ಲಪ್ಪನವರು ಶ್ರೀ॥ ಷ॥ ಬ್ರ॥ ಮಹಾಲಿಂಗಶಿವಾಚಾರ್ಯರು ಜೈನಾಪುರ ಬೃಹನ್ಮಠ ಇವರ ಅಪ್ಪಣೆ ಪ್ರಕಾರ ಪ್ರಭಾಪೋಷಣೆಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಅರಸೀಕೆರೆ ತಾ॥ ವೈಂದಾವನಹಳ್ಳಿ ವೀರಶೈವ ಮಂಡಲಿಯವರು ತಾ॥ ೮-೩-೪೪ ನೇ ಬುಧವಾರ ದಿವಸ ನಡೆಸಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಮ॥ ರಾ॥ ಬೈರೇಗೌಡರ ದ್ವಾರಾ ತಲ್ಪಿರುತ್ತದೆ.

ಗುಲಬರ್ಗಾ ಜಿ॥ ಜೇವರಗಿಯ "ರೇಣುಕಾಶ್ರಮ" ದಲ್ಲಿ ನೆರವೇರಿದ ಮಠಪತಿ ಬಂಡೆಯ್ಯನವರ ಪುತ್ರ ಚಿ॥ ವೀರಯ್ಯನ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಜೇವರಗಿ ಶ್ರೀಗಳವರ ಅಪ್ಪಣೆಯ ಮೇರೆ ಸಮರ್ಪಿಸಲ್ಪಟ್ಟ 1 ರೂಪಾಯಿಯು ಮ॥ ರಾ॥ ಸಿದ್ಧರಾಮಪ್ಪ ರೇವಣಸಿದ್ಧಪ್ಪ ದೇವಣಗಾವ ಇವರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಜಿಲ್ಲಾ ಕರಜಗಿ ತಾಲೂಕ ಕಲಕೋಟಿಯಲ್ಲಿ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯರ ಪುರಾಣಪ್ರವಚನ ಮತ್ತು ಜಯಂತೀಮಹೋತ್ಸವ ಸಮಯದಲ್ಲಿ ಒದಗಿದ್ದ ಮನಸ್ತಾಪವು ಆಚಾರ್ಯರ ಕೃಪೆಯಿಂದ ಪರಿಹಾರವಾದ ಸಂತೋಷಕ್ಕಾಗಿ ಪ್ರಭಾಪೋಷಣೆಗೋಸ್ಕರ ಸಲ್ಹಾರಿ ಶಾಲಾಮಾಸ್ತರ ಮ॥ ರಾ॥ ಗದಿಗ್ಯಪ್ಪ ಮಲ್ಲಾಡದ ಇವರು ಸಮರ್ಪಿಸಿದ 1 ರೂಪಾಯಿಯು ಶ್ರೀ ಶಿವಯೋಗಿ ಹಾಲಮೇಶಸ್ವಾಮಿಗಳ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಶ್ರೀ ಕೇದಾರನಾಥಮಂದಿರದ ಕವಾಟೋದ್ಘಾಟನ

ಹಿಮವತ್ಪರ್ವತದ ಮಧ್ಯದಲ್ಲಿರುವ ಶ್ರೀ ಕೇದಾರನಾಥಮಹಾಸ್ವಾಮಿಯ ಮಂದಿರದ ಬಾಗಿಲು ೩೮ ನೇ ಏಪ್ರಿಲ್ ೧೯೪೪ನೆಯ ದಿವಸ ಶುಭ ಮುಹೂರ್ತದಲ್ಲಿ ತೆರೆಯುವದಾಗಿ ನಿಶ್ಚಯಿಸಲ್ಪಟ್ಟಿದೆ. ಆ ದಿವಸ ಶ್ರೀ ಕೇದಾರಪೀಠ ಉಖಾಮಠ ಮಹಾಸಂಸ್ಥಾನದಿಂದ ಅರ್ಚಕರು ಸಂಸ್ಥಾನದ ಕಾರಭಾರಿಗಳು ಗೌರ್ನಮೆಂಟ್ ಆಫೀಸರು ಆಗಮಿಸಿ ವೇದಘೋಷದೊಡನೆ ವೈಭವದಿಂದ ಮಹಾದ್ವಾರವನ್ನು ತೆರೆಯುತ್ತಾರ. ಅನೇಕ ದೇಶಗಳಿಂದ ರಾಜಾಧಿರಾಜರು ಮಹಾತ್ಮರು ಅಸಂಖ್ಯಭಕ್ತವೃಂದವು ಸಮ್ಮಿಲಿತವಾಗುವುದು. ಶ್ರೀ ಮಹಾಜ್ಯೋತಿರ್ಲಿಂಗದ ಸಂದರ್ಶನ ಸಮರ್ಚನಾದಿಗಳು ಪ್ರಾರಂಭವಾಗುವವು. ಹನ್ನೆರಡು ತಿಂಗಳು ಕಾಲವೂ ನಂದದ ಏಕಪ್ರಕಾರ ಪ್ರಜ್ವಲಿಸುತ್ತಿರುವ ಅಖಂಡಜ್ಯೋತಿಯ ಸಂದರ್ಶನವು ಲಭಿಸುವದು. ಯಾತ್ರಿಕರು ಈ ಮಹಾದರ್ಶನವನ್ನು ಪಡೆದು ಕೃತಕೃತ್ಯರಾಗಬೇಕಾಗಿ ಸೂಚಿಸಿದೆ.

ಶ್ರೀ ಕೇದಾರಸಂಸ್ಥಾನ ಲಿಖಿವಾರ

ಹರಲಾಪೂರ

ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯರಾದ ಶ್ರೀಜಗದ್ಗುರುಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀ ಮಹೋತ್ಸವವನ್ನು ಮೀಜ ಜ್ಯೂನಿಯರ ಸ್ಟೇಟ್ ಗುಡಗೇರಿ ತಾಲ್ಲೂಕು ಪೈಕಿ ಹರಲಾಪೂರ ಗ್ರಾಮದ ಸಕಲಮತೀಯರೂ ಪ್ರತಿವರುಷ ಪದ್ಧತಿಯಂತೆ ಈ ವರುಷವೂ ಅಂದರೆ ಸ್ವಭಾನುಸಂವತ್ಸರ ಮಾಘ ಬಹುಳ ಮಹಾಶಿವರಾತ್ರಿ ಮಂಗಳವಾರ ಮಹಾವೈಭವದಿಂದ ಜರುಗಿಸಿದರು ಅವತ್ತಿನ ದಿವಸ ಸಕಲರೂ ತಮ್ಮ ತಮ್ಮ ಮನೆಗಳನ್ನು ತಳಿರುತೋರಣಗಳಿಂದಲಂಕರಿಸಿ ಮಹಾಹಬ್ಬದಂತೆ ವರ್ತಿಸಿದರು ಹಿರಿಯಮಠದಲ್ಲಿ ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಲಿಂಗೋದ್ಭವ ಮೂರ್ತಿಗಳಿಗೆ ಶಾಸ್ತ್ರೋಕ್ತ ಪೂಜೆಯಾಗಿ ತೀರ್ಥ ಪ್ರಸಾದಗಳನ್ನು ಪಡೆದು ಸರ್ವರೂ ಧನ್ಯರಾದರು ಅನಂತರ ಶ್ರೀಪಂಡಿತಾರಾಧ್ಯರ ಲಿಂಗೋದ್ಭವ ಚಿತ್ರ ಪಟವನ್ನು ಅಂದವಾಗಿ ಸಿಂಗರಿಸಿದ ಪುಷ್ಪಪಲ್ಲಕ್ಕಿಯಲ್ಲಿಟ್ಟು ಉತ್ಸವವು ನಡೆಯಿತು ಅನಂತರ ಶ್ರೀಮಾನ್ ಕೊಂಡೂರ ಕಲ್ಲಪ್ಪನವರ ಮನೆಯ ಮುಂದಿನ ಅಂಗಳದ ಬೈಲಿನಲ್ಲಿ ಸಭೆಯು ಪ್ರಾರಂಭವಾಯಿತು ಮೊದಲು ಲಕ್ಷ್ಮೇಶ್ವರದ ಹಾಳೇವಾಡೀಮಠದ ವೇ|| ಗದಿಗಯ್ಯನವರು ಶ್ರೀಜಗದಾಚಾರ್ಯರ ಜಯಂತೀಮಹತ್ವದ ಬಗೆಯೂ ಮತ್ತು ಗುಡಗೇರಿ ವೇ|| ಚನ್ನಯ್ಯನವರು ವೀರಶೈವ ಧರ್ಮದ ಬಗ್ಗೆಯೂ ಮಾತಾಡಿದನಂತರ ಇಲ್ಲಿಯ ಕೃಷಿಸಭೆಯ ಸಭಾಸದರಾದ ಯಲ್ಲಪ್ಪ ಕೊರಕೂರ ಇವರು ಸಕಲರ ಆಭಾರ ಮನ್ನಿಸಿ ಇದೇ ಪ್ರಕಾರ ಫಾಲ್ಗುನ ಶುದ್ಧ ಚತುರ್ದಶಿ ದಿನವೂ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಸರ್ವರೂ ಆಚರಿಸಬೇಕೆಂದು ಸರ್ವರಿಗೂ ಸೂಚನಾಪೂರ್ವಕ ತಿಳಿಸಿದರು ಆ ನಂತರ ಎಲ್ಲರೂ ಫಲಾಶೀರ್ವಾದಗಳನ್ನು ಪಡೆದು ತಮ್ಮ ತಮ್ಮ ಗೃಹಗಳಿಗೆ ತೆರಳಿದರು.

ಇದರಂತೆಯೇ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಇದೇ ಸ್ವಭಾನುಸಂವತ್ಸರ ಫಾಲ್ಗುನ ಶುದ್ಧ ಚತುರ್ದಶಿ ಬುಧವಾರ ದಿವಸ ಅತಿ ವೈಭವದಿಂದ ನಡೆಸಿದರು ಹಿರಿಯಮಠದಲ್ಲಿ ಶ್ರೀರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಗೆ ಶಾಸ್ತ್ರೋಕ್ತ ಪೂಜೆಯಾಗಿ ಸರ್ವರೂ ತೀರ್ಥಪ್ರಸಾದಗಳನ್ನು ಪಡೆದರು ಅನಂತರ ಶ್ರೀರೇಣುಕಾಚಾರ್ಯರ ಲಿಂಗೋದ್ಭವ ಚಿತ್ರಪಟವನ್ನು ಅಂದವಾಗಿ ಶೃಂಗರಿಸಿದ ಪುಷ್ಪ ಪಲ್ಲಕ್ಕಿಯಲ್ಲಿಟ್ಟು ವೇ|| ಪುಟ್ಟಯ್ಯನವರು ಹಿರಿಯಮಠ ಇವರ ಭಜನಾಮೇಳದೊಡನೆ ಉತ್ಸವವನ್ನು ನಡೆಸಿದರು ಬಳಿಕ ಮಠದಲ್ಲಿ ಸಭೆಯು ಪ್ರಾರಂಭವಾಯಿತು ಮೊದಲು ಸಾಮದಾರ ಯಲ್ಲಪ್ಪ ಕೊರಕೂರ ಇವರು ಪ್ರಾಸ್ತಾವಿಕ ಭಾಷಣಮಾಡಿದ ಮೇಲೆ ವೇ|| ಪುಟ್ಟಯ್ಯಸ್ವಾಮಿ ಹಿರಿಯಮಠ ಇವರು ಶ್ರೀಜಗದ್ಗುರು ರೇಣುಕಾಚಾರ್ಯರ ನವಲೀಲೆಗಳನ್ನು ಕುರಿತು ಭಾಷಣಮಾಡಿದರು ನರೇಗಲ್ಲ ಭಿಕ್ಷಾವೃತ್ತಿಮಠದ ಸ್ವಾಮಿಗಳು ಮತ್ತು ವೇ|| ವೀರಬಸಯ್ಯನವರು ಬೃಹನ್ಮಠ ವ ಲೀಕೊಪ್ಪ ಇವರೆಲ್ಲರೂ ಜಯಂತಿಯ ಮಹತ್ವ ಮತ್ತು ಗುರುವಿನ ಶ್ರೇಷ್ಠತೆ ಬಗ್ಗೆ ಒಳ್ಳೇ ಸ್ಫೂರ್ತಿದಾಯಕ ಭಾಷಣಮಾಡಿದರು

ಅನಂತರ ಶ್ರೀಜಗದಾಚಾರ್ಯರ ಮಹಾಮಂಗಳಾರತಿ ನಡೆದು ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು

ಈ ಮಹೋತ್ಸವಗಳಲ್ಲಿ ಹೆಚ್ಚಾಗಿ ತರುಣರೇ ಭಾಗವಹಿಸಿ ಒಳ್ಳೆ ದಕ್ಷತೆಯಿಂದ ಕಾರ್ಯವನ್ನು ಕೊನೆಗಾಣಿಸಿದರು. ಸದಾ ಧರ್ಮ ಜಾಗೃತಿಗಾಗಿ ತಗಲಿರುಳು ದುಡಿಯುತ್ತಿರುವ ಈ ಗ್ರಾಮದ ಸರ್ವ ತರುಣರಿಗೂ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಓರ್ವ ಗುರುಭಕ್ತ

ಕಲಬುರಗೀ

ವೀರಶೈವ ಯುವಕಸಂಘದವತಿಯಿಂದ ಬುಧವಾರ (ತಾ|| ೭ ೩ ೪೪)ನೆಯ ದಿವಸ ಮಲ್ಲಿಕಾರ್ಜುನ ಮಠದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರಮೂರ್ತಿಗೆ ಪೂಜಾದಿಗಳು ನಡೆದನಂತರ ಕನ್ನಡಸಾಹಿತ್ಯಸಂಘದ ಗೌ|| ಕಾರ್ಯದರ್ಶಿಗಳಾದ ಶ್ರೀದತ್ತಾತ್ರಯರಾಯರ ಅಧ್ಯಕ್ಷತೆಯಲ್ಲಿ ಸಭೆಸೇರಿ ಅನೇಕಪಂಡಿತರ ವ್ಯಾಖ್ಯಾನಗಳಾದವು ಶ್ರೀಕೀರ್ತಿಕಶಾಸ್ತ್ರಿಗಳು ರೇಣುಕರ ದಿವ್ಯಚರಿತ್ರೆಯನ್ನು ಕನ್ನಡಕವಿಗಳು ಹೇಗೆ ವರ್ಣಿಸಿದ್ದಾರೆಂದು ತಿಳಿಸಿಕೊಟ್ಟರು ಶ್ರೀಗುಂಡಾರಾಧ್ಯರು ಮುಖ್ಯಾಧ್ಯಾಪಕ ಇವರು ಶ್ರೀರೇಣುಕರ ದಿವ್ಯಚರಿತ್ರೆಯ ವಿಷಯವಾಗಿ ಆಧುನಿಕ ಪದ್ಧತಿಯಲ್ಲಿ ಅವರ ನಿಜವಾದ ಮಹತ್ವಾಂಶಗಳನ್ನು ತಿಳಿಸಿದ್ದಲ್ಲದೆ, ಕನ್ನಡನಾಡಿನಲ್ಲಿ ಎಲ್ಲ ವೀರಶೈವ ಕವಿಗಳು ಅವರನ್ನು ಗುರುಸ್ಥಾನದಲ್ಲಿ ಸೇರಿಸಿದ್ದರೂ, ಅವರ ಚರಿತ್ರೆಯ ವಿಷಯವಾಗಿ ಸಂಕಷ್ಟ ಸಂಶೋಧನೆ ನಡೆದಿಲ್ಲವೆಂದು ಹೇಳಿದರು ಅಮೇಲೆ ಶ್ರೀಪಾಏಕಪ್ಪೆಯವರು ರೇಣುಕರ ಚರಿತ್ರೆಯ ಸಂಶೋಧನೆಯಿಂದ ವೀರಶೈವ ಪ್ರಪಂಚಕ್ಕೆ ಹೆಚ್ಚುಬೆಳಕು ಬೀಳುವ ಸಂಭವವಿದೆಯೆಂದು ಹೇಳಿದರು ಶ್ರೀಷಡಕ್ಷರಯ್ಯನವರು ರೇಣುಕರ ಚರಿತ್ರೆಯಮೇಲೆ ಪ್ರಕಾಶವನ್ನು ಹಾಕುತ್ತ ವೀರಶೈವಧರ್ಮವನ್ನು ಅವರು ಹೇಗ ಸ್ಥಿರಗೊಳಿಸಿದರೆಂಬುದನ್ನು ವಿಸ್ತರಿಸಿದರು ಸಿದ್ಧಾಂತಶಿಖಾಮಣಿಯೆಂಬ ರೇಣುಕ ಗೀತೆಯು ಷಟ್ಸ್ಥಲ ಸಿದ್ಧಾಂತವನ್ನು ತಿಳಿಸುವ ಅತ್ಯುತ್ತಮವಾದ ಸಾಧನಗ್ರಂಥವೆಂದು ಹೇಳಿದರು ಕೊನೆಯದಾಗಿ ಅಧ್ಯಕ್ಷರು ತಮ್ಮ ಸಮಾರೋಪ ಭಾಷಣದಲ್ಲಿ ರೇಣುಕರ ಶಿರವಾಳಶಾಸನದ ಮಹತ್ವ, ಕನ್ನಡನಾಡಿನ ಮಹಾವ್ಯಕ್ತಿಗಳಲ್ಲಿ ಅವರ ಸ್ಥಾನ, ಶೈವ ವೀರಶೈವರಲ್ಲಿಯಭೇದ ಶಿವನ ಏಕನಿಷ್ಠ ಉಪಾಸನೆಯ ಬಣಿಗೆ ಕನ್ನಡನಾಡಿನ ಮಹಾಕವಿಗಳಾದ ಹರಿಹರ ರಾಘವಾಂಕರಲ್ಲಿ ರೇಣುಕರ ವಿಷಯವಾದ ಅಲೌಕಿಕ ಭಾವನೆ ಮತ್ತು ಸ್ಥಾನಮಾನ ಈ ಎಲ್ಲ ವಿಷಯಗಳನ್ನು ಕೂಲಂಕಷವಾಗಿ ವಿಸ್ತರಿಸಿ ಸಭಿಕರನ್ನು ಆನಂದಗೊಳಿಸಿದರು ಶ್ರೀರೇಣುಕರ ಜಯಕಾರದೊಡನೆ ಸಭೆಯು ಮುಕ್ತಾಯಗೊಂಡಿತು.

ಸೆಕ್ರೆಟರಿ
ವೀರಶೈವ ಯುವಕಸಂಘ
ಗುಲಬುರ್ಗಾ

ಶ್ರೀಜಗದ್ಗುರು ಮಹಿಮೆ

ಧಾರವಾಡ ಜಿಲ್ಲಾ ಕರಜಗಿ ತಾ|| ಕಲುಕೋಟೆಯ ಶ್ರೀಪಂಚಾಚಾರ್ಯ ಭಜನಾಮಂಡಲಿಯವರು ಶ್ರೀಪುರವರ್ಗ ಶಿವಪುರ ಮಠಾಧ್ಯಕ್ಷ ಶ್ರೀ ಹಾಲಮಳೆಸ್ವಾಮಿಗಳನ್ನು ಬರಮಾಡಿಕೊಂಡು ಶ್ರೀಜಗದ್ಗುರು ರೇಣುಕಾಚಾರ್ಯರ ಪುರಾಣಪ್ರವಚನವನ್ನು ನಡೆಯಿಸಿ ಅನ್ನಸಂತರ್ಪಣೆಯನ್ನು ಶ್ರೀಜಯಂತೀ ಉತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನಡೆಸಿದರು ಈ ಕಾರ್ಯವು ಸುಲಲಿತವಾಗಿ ನಡೆಯದಂತೆ ತಡೆಯಲು ಕೆಲವು ಕುಹಕಿಗಳು ಪ್ರಯತ್ನಪಟ್ಟು ಗಲಭೆಯೆಬ್ಬಿಸಿದರು ಇದರಿಂದ ಸರ್ಕಾರದವರೆಗೆ ಮೊರೆಹತ್ತಿ ಶ್ರೀಆಚಾರ್ಯರ ಮಹಿಮೆಯಿಂದ ಸದ್ಭಕ್ತರಿಗೆ ಜಯವೂ ದುರ್ಬುದ್ಧಿಗಳಿಗೆ ಅಪಜಯವೂ ಅನೇಕ ವಿಧವಾದ ಕಷ್ಟನಷ್ಟಗಳೂ ಸಂಭವಿಸಿ ಆಚಾರ್ಯರ ಉತ್ಸವವು ವೈಭವದಿಂದಲೇ ನಡೆಯಿತು.

ಓರ್ವ ಗುರುಭಕ್ತ

ಪೋಷಕ ಬೋಧಕಸಂಘ ಹಾರನಹಳ್ಳಿ

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿರುವ ಕನ್ನಡ ಪ್ರೈಮರಿ ಬಾಯ್ಸ್‌ಸ್ಕೂಲಿನಲ್ಲಿ ಪೋಷಕ ಬೋಧಕ ಸಂಘದ ಮಾಸಿಕೋತ್ಸವವು ತಾ|| 14-3-1944 ರಲ್ಲಿ ಕೀರ್ತನಕೇಸರಿ ವೇ|| ಬ್ರ|| ಶ್ರೀ|| ಗುಬ್ಬೀಶಿವರುದ್ರಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು ಬಾಲಕಿಯರಿಂದ ದೇವತಾಪ್ರಾರ್ಥನೆಯೂ ಸ್ವಾಗತಗೀತೆಯೂ ನಡೆಯಲ್ಪಟ್ಟನಂತರ ಹೆ|| ಮಾ|| ಮ|| ರಾ|| ವೀರಭದ್ರಪ್ಪನವರು ಸಂಘದ ಸ್ಥಾಪನೆಯಲಾಗಾಯಿತು ಇಲ್ಲಿಯವರೆಗೆ ನಡೆದಿರುವ ಸರ್ವ ಕಾರ್ಯಕಲಾಪಗಳ ವರದಿಯನ್ನು ಓದಿಹೇಳಿದರು. ಬಳಿಕ ಸ್ಕೂಲ್|| ಅ|| ಮಾ|| ಗಳಾದ ಮ|| ರಾ|| ಶ್ರೀ|| ಹೆಚ್. ಸಿದ್ದಯ್ಯನವರಿಂದ ದೈವಭಕ್ತಿಪ್ರಧಾನವಾದ ಕೆ ವಿ ಪುಟ್ಟಪ್ಪನವರ “ಜಲಗಾರ” ಎಂಬ ರಸಭರಿತ ಕಾವ್ಯಪಠನವೂ, ಎಂ ರಂಗರಾಯರಿಂದ ಸ್ತ್ರೀವಿದ್ಯಾಭ್ಯಾಸ ಸಂಬಂಧದ ಭಾಷಣವೂ, ಹೆಚ್ ಪಿ ಹಾಲಪ್ಪನವರಿಂದ ಆಧುನಿಕರೀತಿ ನೀತಿಗ- ಹಿಂತಸಾತ್ಮಕ ಭಾವನೆಯೂ, ಬಿ|| ಗಿರಿಯಪ್ಪನವರಿಂದ ಬಾಲಕರ ಉಪೇಕ್ಷೆ ಎಂಬ ಉಪನ್ಯಾಸವೂ. ಮ|| ರಾ|| ತೋಟಪ್ಪನವರಿಂದ ಸಂಗೀತವೂ, ಬಾಲಕಬಾಲಕಿಯರಿಂದ ನಾಟಕವೂ ನರ್ತನವೂ ಸಹ ನಡೆದ ತರುವಾಯ ಅಧ್ಯಕ್ಷರು ಪೋಷಕ ಬೋಧಕರ ಕರ್ತವ್ಯ ಎಂಬ ವಿಷಯ ಕವಾಗಿ ಸ್ಫೂರ್ತಿದಾಯಕ ದೀರ್ಘಭಾಷಣವನ್ನು ಮಾಡಿದ ಮೇಲೆ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ ನಡೆದು ಸಭೆಯು ವಿಸರ್ಜಿಸಲ್ಪಟ್ಟಿತು

ವಿವಾಹಮಹೋತ್ಸವ
ಜೇವರಗಿ

ಫೆಬ್ರವರಿ ತಾ|| 15 ೦ 44ನೇ ಮಾಘ ವದ್ಯ ೭ನೇ ಮಂಗಳವಾರ ಪ್ಯೆಂದರಿಗಿ ಕಾರ್ಯಕ್ರಮವನ್ನು ತೀರಿಸಿಕೊಂಡು ಶ್ರೀ|| ಷ|| ಬ್ರ|| ಜೇವರಗಿ ಗುರುಶಾಂತ ಶಿವಾಚಾರ್ಯರ ಆಗ್ರಹದ ಮೇರೆಗೆ ಶ್ರೀ|| ಷ|| ಬ್ರ|| ಗಂಗಾಧರ ಶಿವಾಚಾರ್ಯರು ಮಹಾಂತಿನ ಮಠಾಧ್ಯಕ್ಷರು ಮೊರಬದ ಶ್ರೀಗಳು, ಸುತ್ತಗಟ್ಟಿ ಶ್ರೀಗಳು, ಕಡಪಟ್ಟಿ ಶ್ರೀಗಳು, ಶ್ರೀರಂಭಾಪುರೀ ಮಹಾಸಂಸ್ಥಾನದ ಏಜಂಟರು ಇವರೇ ಮೊದಲಾದವರು ಮಿತಪರಿವಾರದೊಡನೆ ಸ್ಪೆಷಲ್ ಮೋಟಾರಿನಲ್ಲಿ ಆಗಮಿಸಿ “ಧೇನುಕರ್ಣಾಶ್ರಮ” ಎಂಬ ಪವಿತ್ರಾಭಿಧಾನದಿಂದಿರುವ ಬಿಲ್ವವನದಲ್ಲಿ ವಿಶ್ರಮಿಸಿದರು ಈ ಸುಸಮಯದಲ್ಲಿ ಅದೇ ಆಶ್ರಮದಲ್ಲಿ ಧರ್ಮಾರ್ಥವಾಗಿ ಶಿವರಾಯಗೌಡರು, ಮಠಪತ್ತಿ ಬಂಡಯ್ಯನವರ ಚಿ|| ವೀರಯ್ಯನವರ ವಿವಾಹವನ್ನು ನೆರವೇರಿಸಿದರು. ಆಗ್ಗೆ ಮಹಾಸಂಸ್ಥಾನದ ವತಿಯಿಂದ ಸಂಸ್ಥಾನದ ಏಜಂಟರು ಶ್ರೀ|| ಷ|| ಬ್ರ|| ಗಂಗಾಧರ ಶಿವಾಚಾರ್ಯರು ಮಹಾಂತಿನ ಮಠಾಧ್ಯಕ್ಷರ ಹಸ್ತದಿಂದ ಉಡುಗೆರೆಗಳನ್ನು ಆಶೀರ್ವದಿಸಿದರು. ವೀರಪ್ಪಪಾಟೀಲ ಚಂದ್ರಶೇಖರ ಪಾಟೀಲ, ಮಲ್ಲಿಕಪ್ಪ ಮರಡಿ ಇವರೇ ಮೊದಲಾದವರು ಅತ್ಯಂತ ಮುತುವರ್ಜಿಯಿಂದ ಕಾರ್ಯವನ್ನು ನೆರವೇರಿಸಿದರು ಈ ಸಮಯದಲ್ಲಿ ಜೇವರಗಿ ಶ್ರೀಗಳ ಆಜ್ಞೆಯ ಮೇರೆಗೆ ಪ್ರಭಾಪೋಷಣಕ್ಕೆ ೧ ರೂಪಾಯಿಯು ಸಮರ್ಪಿಸಲ್ಪಟ್ಟಿತು

ಸಿದ್ಧರಾಮಪ್ಪ ರೇವಣಸಿದ್ಧಪ್ಪ, ದೇವಣಗಾವ

ದತ್ತಕಪುತ್ರಸ್ವೀಕಾರ

ಚಿಕ್ಕಮಗಳೂರು ತಾಲ್ಲೂಕು ವಸ್ತಾರೆ ಹೋಬಳಿ ಪಾಳೆಯದಲ್ಲಿರುವ ಕೈ|| ಜೈಗೂರು ರಾಮಯ್ಯನವರ ಪತ್ನಿ ಪಾರ್ವತಮ್ಮನವರು ಗಂಡು ಹೆಣ್ಣು ಮಕ್ಕಳು ಇಲ್ಲದೆ ಇರುವುದರಿಂದ ಅವರ ಪತಿಯ ಇಷ್ಟಪ್ರಕಾರ ತಾ|| 6-3-44 ಸೋಮವಾರ ದಿವಸ ಅದೇ ಪಾಳ್ಯದಲ್ಲಿ ವಾಸವಾಗಿರುವ ತಮ್ಮ ಸಹೋದರಿಯ (ಮ|| ರಾ|| ಕಾಫಿಪ್ಲಾಂಟರ್ ತಿಮ್ಮಯ್ಯನವರ) ಎರಡನೆಯ ಮಗ ಚಿ|| ರಾಮಯ್ಯ ಯಾನೆ ಲಕ್ಷ್ಮಣಯ್ಯನನ್ನು ಗುರುಹಿರಿಯರು ಮತ್ತು ಸಮಾಜದವರು ನಾಡಿನವರು ಸೇರಿ ದತ್ತಕವಿಧಾನದಿಂದ ಪುತ್ರನನ್ನಾಗಿ ಸ್ವೀಕರಿಸುವ ಕಾರ್ಯ ನೆರವೇರಿಸಿದರು ಶ್ರೀಜಗದಾಚಾರ್ಯರು ಆ ದತ್ತಕಪುತ್ರನಿಗೆ ಆಯುರಾರೋಗ್ಯವನ್ನು ಕೊಡಲೆಂದು ಆಶೀರ್ವದಿಸಿದರು. ಈ ದತ್ತಕಪುತ್ರಸ್ವೀಕಾರಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ೨ ರೂ. ಗಳು ಸಮರ್ಪಿಸಲ್ಪಟ್ಟವು ಈ ಕಾರ್ಯವನ್ನು ಸಾಂಗವಾಗಿ ನೆರವೇರಿಸಲು ಸಹಾಯಕರಾಗಿ ನಿಂತು ನಡೆಸಿದ ಮ|| ರಾ|| ಬೈಗೂರು ಪಟೇಲ್ ಬಿ. ಲಿಂಗೇಗೌಡ್ರು, ಮ|| ರಾ|| ಪಟೇಲ್ ಅಮೃತಗೌಡರು, ಮ|| ರಾ|| ಸೈಲಿಮನೆ ಚಂದ್ರೇಗೌಡರು, ಮ|| ರಾ|| ವಸ್ತಾರೆ ಮಂಜಣ್ಣನವರು, ಮ|| ರಾ|| ವಸ್ತಾರೆ ಪಟೇಲ್ ಚೌಡೆಗೌಡ್ರು ಇವರುಗಳಿಗೆ ಶ್ರೀಜಗದ್ಗುರು ರೇಣುಕಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ

, ಕಾರ್ಯಭಾಗ.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಭಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಸಂತತಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸ್ಥಳದವರಿಗೆ ೩ ರೂ ೪ ಆಣೆ ಪರಸ್ಥಳದವರಿಗೆ ೩ ರೂ ... ಪೋಸ್ಟೇಜ ಸಹಿತ ೩ ರೂ ೪ ಆಣೆ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೭ನೇ ಮಾರ್ಚಿ ೧೯೪೪ [ಸಂಚಿಕೆ ೪೭

ಹೊಸವರ್ಷ

ಲೇ—ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ವಕೀಲರ ಪವಿತ್ರೇನಹಿರು

ವಾಚಕಮಹಾಶಯರೆ—

ಯಾವನು ಚರಾಚರಾತ್ಮಕವಾದೀ ಜಗತ್ತಿಗೆ ಮೂಲ ಕಾರಣೀಭೂತನಾಗಿಯೂ, ಪ್ರಾಣಿಗಳ ಅಜ್ಞಾನಾಂಧಕಾರನಾಶಕನಾಗಿಯೂ ಇರುವನೋ, ಯಾವನು ಸರ್ವಭೂತಗಳಲ್ಲಿಯೂ ಅಂತರಾತ್ಮನಾಗಿ ಏಕನಾಗಿದ್ದರೂ ಪ್ರತಿರೂಪದಲ್ಲಿಯೂ ಭಿನ್ನಾತ್ಮನಾಗಿ ತೋರುವನೋ, ಯಾವನ ದಿವ್ಯ ಪ್ರಕಾಶದ ಸಹಸ್ರಾಂಶದಲ್ಲೊಂದಂಶವನ್ನು ಪಡೆದ ಸೂರ್ಯ ಚಂದ್ರರು ಪ್ರದರ್ಶಿಸಲಾರದ ಅಜ್ಞಾನ ರಾತ್ರಿಗಳಲ್ಲಿ ದಣಿದು ದೃತಿಗೆಡುತ್ತಿರುವರೋ, ಯಾವನ ಅವ್ಯಕ್ತನಾಮವನ್ನು ವಿಹಂಗಮ ಗಣವೂ, ನದನದೀ ನಿರ್ಝರಗಳೂ ತಂತಮ್ಮ ಕಲಕಲ ರವದ್ವಾರಾ ಕೀರ್ತಿಸುತ್ತಿರುವವೋ, ಯಾವನ ದಿವ್ಯ ಸಂದರ್ಶನವನ್ನು ಹೊಂದುವುದಕ್ಕಾಗಿ ಮೇಘಗಳು ಅನಂತವಾದ ಆಕಾಶದಲ್ಲಿ ಅಲೆದಲೆದು ಕೊನೆಗದು ಲಭ್ಯವಾಗದಿರಲು ಗದ್ಗದ ಕಂಠದಿಂದ ಧ್ವನಿಗೈಯುತ ಅಶ್ರುಜಲವನ್ನು ವರ್ಷಿಸುವವೋ, ಯಾವನ ಚರಣಾರ್ಚನೆಗೆ ಹಂದ್ವರ್ಣವರ್ಣಗಳಿಂದ ಸಮಾಲಂಕೃತವಾದ ಕುಸುಮಲತಾನಿಕರವು ಸುಪುಷ್ಪ ಗಳನ್ನರ್ಪಿಸುತ್ತಿರುವುವೋ ಆ ಮಹಾಪುರುಷನ ಕೃಪಾಕಟಾಕ್ಷದಿಂದ ಹೊಸವರ್ಷವು ಪ್ರಾರಂಭವಾಗಿರುವುದು. ಆಹಾ! ಮನುಷ್ಯನಿಂದ ಕಲ್ಪಿತವಾದ ಸಂವತ್ಸರವೆಂಬ ಒಂದು ಬಿಂದುವು ಅನಂತಾಯಿಂತವಾದ ಕಾಲಸಾಗರದಲ್ಲಿ ವಿಲೀನವಾಯಿತು! ಮನುಷ್ಯನ ಪರಮಾಯುವಿನಲ್ಲಿ ಒಂದು ವರ್ಷವು ಕಡಿಮೆಯಾಯಿತು! ಅಯ್ಯೋ ಸಂಸಾರಸಾಗರದಿಂದ ಪಾರಾಗುವುದಕ್ಕೆ ನೌಕೆಯಂತಿರುವ ಭಗವದ್ಧ್ಯಾನವನ್ನು ಮಾಡುವುದಕ್ಕಾವಶ್ಯಕವಾದ ಒಂದು ವರ್ಷದವಕಾಶವು ನಮ್ಮ ಹಸ್ತಗಳಿಂದ ಹಾರಿಹೋಯಿತು! ಅನಂತವಾದ ಸಮಯ ಸಮುದ್ರದ ಒಂದು ತರಳತರಂಗವು ಎಲ್ಲಿ ಲೀನವಾಯಿತೋ ಯಾರೂ ತಿಳಿಯರು! ಎಷ್ಟೋ ಸಂಸಾರಗಳೂ, ಪ್ರಾಣಿಗಳೂ, ಆಶಾನಿರಾಶೆಗಳೂ, ಸುಖದುಃಖಗಳೂ, ಸುಂದರವಾದ ಸ್ವಪ್ನಗಳೂ, ಅಗಣಿತವಾದ ಘಟನಾವಳಿಗಳೂ ನಿರತಿಶಯವಾದ ಕಾಲದ ಅಂಧಕಾರಮಯವಾದ ಉದಧಿಯಲ್ಲಿ ಅಡಗಿಹೋದವು! " ಕುತಃ ಕುಶಲಮಸ್ಮಾಕಂ, ಆಯುರ್ಯಾತಿ ದಿನೇ ದಿನೇ " ಎಂಬ ಈ ಮಹಿವಾಕ್ಯವನ್ನು ಮಾಯಾವ್ಯಾಮೋಹಿತರಾದ ಮಾನವರು ಪರ್ಯಾಲೋಚಿಸದೆ ಹೊಸವರ್ಷವು ಆರಂಭವಾಯಿತೆಂಬ ಹರ್ಷದಿಂದ ಉತ್ಸಾಹಿತರಾಗುವರು! ಎಷ್ಟೋ ನವಜೀವನಗಳೂ, ನವ್ಯೋದ್ಯೋಗಗಳೂ, ನವ ವರ್ಷದ ನವ ರಂಗದಲ್ಲಿ ನರ್ತನಮಾಡುತ್ತಿರುವುವು! ಕಾಲರೂಪವಾದ ನಾಟಕಶಾಲೆಯ ರಂಗಭೂಮಿಯಲ್ಲಿ ಎಷ್ಟೋ ದೃಶ್ಯಗಳೂ, ಘಟನೆಗಳೂ ಪ್ರಕಟಿತವಾಗಿಯೂ ಹಿಂದಾಗುತ್ತಲೂ ಇರುವುವು! ಶೀತೋಷ್ಣ, ವಿಷಮಜ್ವರ, ಗ್ರಂಥಿಜ್ವರ ಮೊದಲಾದ ರೋಗಗಳೂ ಅಶನಾಭಾವ, ಧರ್ಮವಿಪ್ಲವ, ಸಮಾಜವಿಪ್ಲವ, ಗುರುದ್ರೋಹ, ಮರ್ಯಾದೆ, ದುರಿತ ಪ್ರವೃತ್ತಿ, ಅನಾಚಾರ, ಕದಾಚಾರ, ಕುಸಂಸ್ಕಾರ, ಅವಿವೇಕತೆ ಅಲ್ಲಿಯಾಯಿತ್ತಾದಿ ಅನೇಕ ವಿಪತ್ಪರಂಪರೆಗಳೂ, ಕಾಲನ ಕೃಪೆಯಿಂದ ಮಲ್ಲಿನೀಷ್ಟಿಗೆ ಉತ್ಪನ್ನವಾಗಿ ಭಾರತ ಭೂಮಾತೆಯ ಎದ್ದಿದ್ದ ಮೇಲೆ ವಿಕಟ ನರ್ತನವನ್ನು ಮಾಡುತಲಿರುವುವು! ಅಯ್ಯೋ! ವಾಚಕರೇ! ಈ ವಿಪತ್ತುಗಳಿಂದ ಪಾರಾಗುವುದಕ್ಕೆ ಪರಾತ್ಪರನಲ್ಲದೆ ಕಾಲಗತಿಯನ್ನತಿಕ್ರಮಿಸಿ ನವಜೀವನವನ್ನು ನಾವು ಹೊಂದುವುದೆಂತು?

ಆದಕಾರಣ ಜಗತ್ಪಿತನಾದ ಪರಮೇಶ್ವರನೇ ನಮ್ಮ ವಿನಾಶವನ್ನು ತಪ್ಪಿಸಿ ಸಪ್ರದಿಕ್ಷವ ಪ್ರಾರ್ಥನೆ ಮನೋರೂಪವಾದ ಆಕಾಶವನ್ನು ಬೆಳಗಿ ಅಜ್ಞಾನ, ಅಲಸ್ಯರೂಪವಾದ ಅಂಧಕಾರವು ಆವರಿಸಿಕೊಳ್ಳದ ಹಾಗೂ ವಿವೇಕರೂಪವಾದ ಸೂರ್ಯನು ಉದಯಿಸುವ ಹಾಗೆ ಭಾರತೀಯಪುತ್ರರ ಪ್ರತಿಯೊಬ್ಬರ ಹೃದಯದಲ್ಲಿಯೂ ಸುಖಶಾಂತಿಗಳ ವರ್ಷವು ವರ್ಷಿಸುವ ಹಾಗೂ ವರವನ್ನು ಅನುಗ್ರಹಿಸಲೆಂದು ಪ್ರಾರ್ಥಿಸಿ ಗತವರ್ಷವು ಶಾಂತಿಯನ್ನಪ್ಪಿಸಿ ಆಗಮಿಸುವ ವರ್ಷಕ್ಕೆ ಸ್ವಾಗತವನ್ನು ಬಯಸುವೆನು.

ಸರ್ವೇ ಜನಾಃ ಸುಖಿನೋ ಭವಂತು

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವಗಳು

ಕಾಲವಾಡ

ಧಾರವಾಡ ಜಿ|| ನವಲಗುಂದ ತಾ|| ಕೈಕಿ ಕಾಲವಾಡದಲ್ಲಿ ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು ಕಾರ್ಯವಶಾತ್ ಆಗಮಿಸಿದ ಕಾಂತ್ಯತೀರ್ಥ ಶ್ರೀ ಷ|| ಬ್ರ|| ಸಿದ್ಧರಾಮಶಿವಾಚಾರ್ಯರು ರೊಡಕುಂದಿ ಹಿರೇಮಠ ಇವರ ಉಪದೇಶದ ಮೇರೆಗೆ ಅತಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಭಗವತ್ಪಾದರ ಭಾವಚಿತ್ರ ಮಹೋತ್ಸವವು ಮುಖ್ಯ ಬೀದಿಯಿಂದಹಾಯ್ದು ಕಲವು ವಾದ್ಯಗಳಿಂದ ಅಲಂಕೃತವಾದ ಸಭಾಮಂಟಪಕ್ಕೆ ನಿಯಮಿತವೇಳೆಗೆ ತಲುಪಿತು. ಅಂದಿನ ಸಭಾಧ್ಯಕ್ಷತೆಯನ್ನು ಪ್ರಕೃತಮಹಾರಾದ ರಾ|| ರಾ|| ಶ್ರೀಮಂತ ನಾಗನಗೌಡರು ದ್ಯಾಮನಗೌಡರು ಪಾಟೀಲ ಇವರು ವಹಿಸಿದ್ದರು. ನಂತರ ಪೋ|| ಪಾ|| ಶಿವನಗೌಡರು, ಮಹಾದೇವಪ್ಪಶೆಟ್ಟರು ಅಂಗಡಿ ಅಡಿವೆಪ್ಪಶೆಟ್ಟರು ಅಂಗಡಿ, ಹಿರೇಮಠದ ಗುರುಲಿಂಗಯ್ಯನವರ, ಮಲ್ಲನಗೌಡರು ಮಲ್ಲಾಪುರ, ಶಿವಾಜಿ ಲಿಂಗೋಜಿ ಕುಲಕರಣಿ, ವೆಂಕಟೇಶಕುಲಕರಣಿ, ಚನಬಸಪ್ಪ ಕೋಳಿವಾಡ, ಲಿಂಗನಗೌಡರು ಮಾಸ್ತರ, ಗೌಡಪ್ಪಗೌಡ್ರು ಹೊಸಗೌಡ್ರ ಲಿಂಬನಗೌಡ್ರು ಪಾ|| ಬಸವನಗೌಡ್ರು ಸುಭೇದಾರ ಅಡಿವೆಪ್ಪ ಲಿಂಗರಡ್ಡಿ ಶಿವಪ್ಪಮಾಸ್ತರ ಪೀಲಗುಂದ ಮುಂತಾದ ಮುಖಂಡರು ಆಗಮಿಸಿದ್ದರಲ್ಲದೆ ಅನೇಕ ಪ್ರೇಕ್ಷಕರು ತಂಡೋಪತಂಡವಾಗಿ ನೆರೆದಿದ್ದರು. ಮೊದಲು ರಾಗವಿಶಾರದರ ಹಾರ್ಮೋನಿಯಮ್ ವಾದ್ಯದ ಗುರುಪ್ರಾರ್ಥನೆ ಜಗದಾಚಾರ್ಯ ಮಂಗಳಗೀತೆಯೂ ಆದನಂತರ ಎಸ್ಪ್ರಮಾಸ್ತರರ ಪ್ರಾಸ್ತಾವಿಕ ಭಾಷಣವಾಯಿತು. ತರುವಾಯ ಶ್ರೀಗೌಡಕುಂದಿ ಶ್ರೀಗಳು ಜಯಂತಿಯೆಂದರೇನು? ಅದನ್ನು ಏಕೆ ಆಚರಿಸಬೇಕು ಮತಸ್ಥಾಪಕರಾದ ಪಂಚಾಚಾರ್ಯರ ಜಯಂತಿ ಮಹತ್ವವೇನು? ಇತ್ಯಾದಿ ವಿಷಯಗಳನ್ನು ಸಂಕ್ಷೇಪವಾಗಿ ವಿವರಿಸುತ್ತ ಶ್ರೀರೇಣುಕ ಜಗದಾಚಾರ್ಯರ ಸವಲೀಲೆಗಳನ್ನು ಅತಿ ಲಘುತ್ತ್ವದಿಂದ ತಿಳಿಯುವಂತೆ ಬೋಧಿಸಿದರು. ನಂತರ ಅಧ್ಯಕ್ಷರಾದ ಶ್ರೀಮಾನ್ ನಾಗನಗೌಡರು ಮತದವಿಷಯಕ್ಕೆ ಅಮಗಿರುವ ಕಳಕಳಿಯನ್ನು ಪಂಚಾಚಾರ್ಯರಲ್ಲಿ ಅಸಾಧಾರಣವಾದ ಭಕ್ತಿಯನ್ನು ವ್ಯಕ್ತಪಡಿಸುತ್ತ ಬಹುಸರಸವಾಗಿ ವ್ಯಾಖ್ಯಾನವನ್ನಿತ್ತು ಸಕಲರನ್ನು ಆನಂದಗೊಳಿಸಿದರು. ಜಯಂತ್ಯುತ್ಸವದಲ್ಲಿ ಶ್ರೀಮಾನ್ ನಾಗನಗೌಡರು ಪಾಟೀಲ, ಶಿವನಗೌಡರು ಪಾಟೀಲ, ಮಹಾದೇವಪ್ಪನವರು ಅಂಗಡಿ ಇವರು ಮಾಡಿದ ಸೇವೆಯು ವರ್ಣನೀಯವಾಗಿತ್ತು. ಅಧ್ಯಕ್ಷರಾದ ನಾಗನಗೌಡರು ಟಿ ಎಲ್ ಬಿ ಮೆಂಬರರೂ, ಕಾಲವಾಡದ ಸೊಸಾಯಿಟಿ ಚೇರಮನ್ನರೂ ಇನ್ನೂ ಅನೇಕ ಸಂಸ್ಥೆಗಳ ಮೆಂಬರರಾಗಿರುವರಲ್ಲದೆ, ಪರಮದಯಾಳುಗಳೂ ದೀನಬಂಧುಗಳೂ, ಸದ್ಗುಣಶಾಲಿಗಳೂ ಗುರುಭಕ್ತಿಪರಾಯಣರೂ ಆಗಿರುವರು. ಇವರು ಮಾಡಿದ ಸಮಾಜಸುಧಾರಣೆಯಂತೂ ವರ್ಣನಾತೀತವಾಗಿದೆ, ಇಂತಹ ಸಮಾಜ ಸೇವಾಧುರೀಣರಾದ ಗುರುಭಕ್ತರಿಗೆ ಜಗದಾಚಾರ್ಯರು ಆಯುರಾರೋಗ್ಯೈಶ್ವರ್ಯಗಳನ್ನು ಇತೋಪ್ಯತಿಶಯ ಸಮಾಜಸೇವಾಬುದ್ಧಿಯನ್ನೂ ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಲಿಂಗನಗೌಡ ಶಿವನಗೌಡ ಪಾಟೀಲ

ಗದಗ-ಬೆಟಗೇರಿ.

ತಾರೀಖು ೬ ೩ ೧೯೪೪ನೇ ಬುಧವಾರ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ವೇ|| ಈಶ್ವರಯ್ಯನವರು ಹೊಸಮನಿ ಇವರ ಮುಂದಾಳ್ತನದಲ್ಲಿ ಪಂಚಾಚಾರ್ಯ ಸೇವಾಸಂಘದವರು ವಿಜೃಂಭಣೆಯಿಂದ ನೆರವೇರಿಸಿದರು. ಆ ದಿವಸ ಪ್ರಾತಃಕಾಲ ಸುಂದರವಾಗಿ ಶೃಂಗರಿಸಲ್ಪಟ್ಟ ಮಂಟಪದಲ್ಲಿ ಶ್ರೀಜಗದ್ಗುರುವಿನ ರಜತಮೂರ್ತಿಗೆ ಷೋಡಶೋಪಚಾರಗಳಿಂದ ವಿಧ್ಯುಕ್ತವಾಗಿ ಪೂಜೆನೆರವೇರಿಸಲ್ಪಟ್ಟಿತು. ಸಾಯಂಕಾಲ ಸ್ವಾಮಿಯ ಮಂಗಲಕಾರ್ಯಕ್ಕೆ ಗ್ರಾಮಪ್ರಮುಖರೆಲ್ಲರೂ ಆಗಮಿಸಿದ್ದರು. ಪ್ರಸಾದವಿನಿಯೋಗವಾದ ಮೇಲೆ ಶ್ರೀಜಗದಾಚಾರ್ಯರ ಜಯಘೋಷದೊಡನೆ ಜಯಂತಿ ಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು.

ಪಂಚಾಚಾರ್ಯರ ಸೇವಾಸಂಘ ಕಾರ್ಯದರ್ಶಿ,

ಈರಪ್ಪಾ ಮಲ್ಲಿಕಾರ್ಜುನಪ್ಪ, ಶಿಗ್ಲಿ.

ಚಂದಾದಾರರಲ್ಲಿ ವಿಜ್ಞಾಪನೆ

ಇತ್ತೀಚೆಗೆ ಪ್ರಿಂಟಿಂಗಿಗೆ ಸಂಬಂಧಪಟ್ಟ ಎಲ್ಲ ಸಾಮಾನುಗಳಿಗೂ ವಿಶೇಷಬೆಲೆಯು ಏರಿರುವುದರಿಂದ ನಮ್ಮ ಪತ್ರಿಕೆಯ ಚಂದ ಹಣವನ್ನು 4 ಆಣೆ ಹೆಚ್ಚಿಸಿರುತ್ತೇವೆ ಚಂದಾದಾರರು ಇನ್ನು ಮುಂದೆ 3 0—0 ರೂ ಗಳನ್ನು ಮನಿಯಾರ್ಡರು ಮೂಲಕ ಕಳುಹಿಸಬೇಕು ವಿ ಪಿ ಮಾಡುವನಾದರೆ 3—4 0 ರೂಗಳು ಬೀಳುವದು

ಮ್ಯಾನೇಜರ್

ಪಂಚಾಚಾರ್ಯಪ್ರಭಾ.

೧೯೪೪ನೆಯ ಮಾರ್ಚ ತಾ|| ೨೭ನೇ ಸೋಮವಾರ

ಗುರೂಪದೇಶ.

ಶಿಷ್ಯಾಣಾಂ ಹೃದಯಾಲೇಖ್ಯಂ ಪ್ರದ್ಯೋತಯತಿ ಯಃ ಸ್ವಯಂ |
ಜ್ಞಾನದೀಪಿಕಯಾನೇನ ಗುರುಣಾ ಕಸ್ಸಮೋ ಭವೇತ್ ||

ಶ್ರೀಗುರುವು ಶಿಷ್ಯರ ಹೃದಯಫಲಕದಲ್ಲಿರುವ ನಿಜಸ್ವರೂಪವೆಂಬ ಚಿತ್ರವನ್ನು ಜ್ಞಾನವೆಂಬ ದೀಪದಿಂದ ಪ್ರಕಾಶಗೊಳಿಸುವುದರಿಂದ ಗುರುವಿಗೆ ಸಮಾನವಾದ ವಸ್ತುವು ಜಗತ್ತಿನಲ್ಲಿ ಮತ್ತೊಂದಿಲ್ಲವು, ಎಂದು ಶ್ರೀರೇಣುಕಭಗವತ್ಪಾದರ ಉಕ್ತಿಯಂತೆ ಪ್ರಥಮತಃ ಗುರುವು ಶಿಷ್ಯನ ಪಕ್ವಿಪಾಕವನ್ನು ನೋಡಿಕೊಂಡು ಕಾಲವರಿತು ಶಿಷ್ಯನನ್ನು ಶಿವದೀಕ್ಷಾಸಂಸ್ಕಾರದಿಂದ ಶುದ್ಧಗೊಳಿಸಿ ಉತ್ತಮಾಂಗದಲ್ಲಿ ಶಿವಲಿಂಗವನ್ನು ಧಾರಣಮಾಡುವುದರಿಂದ ದೀಕ್ಷಾಗುರುವೆನಿಸಿಕೊಳ್ಳುತ್ತಾನೆ ಆದೇ ಗುರುವೇ ಮುಂದೆ ಶಿಷ್ಯನಲ್ಲಿ ಹುಟ್ಟುವ ಜೀವಬ್ರಹ್ಮವಿಷಯಿಕವಾದ ಶಂಕೆಗಳನ್ನೆಲ್ಲ ಶಾಸ್ತ್ರಯುಕ್ತ್ಯನುಭವಗಳಿಂದ ಪರಿಹಾರಮಾಡಿ ಅಂಗ (ಜೀವ) ಸ್ವರೂಪವನ್ನೂ, ಲಿಂಗ (ಶಿವ) ಸ್ವರೂಪವನ್ನೂ, ಇವೆರಡರ ಅವಿರಳಸಂಯೋಗವನ್ನೂ ವಿವರಿಸಿ ಶಿಷ್ಯರನ್ನುದ್ಧರಿಸುವುದರಿಂದ ಶಿಕ್ಷಾಗುರುವೆನಿಸಿಕೊಳ್ಳುತ್ತಾನೆ

ಯ ತ್ವಸ್ಯೈಕ್ತಿವರ್ಪಣಾಭೋಗೇ ನಿವ ಶಲೇ ವೃಕ್ಷತೇ ಸದಾ |
ಮೋಕ್ಷಶ್ರೀರ್ಬಿಂಬರೂಪೇಣ ಸ ಗುರುರ್ಭವತಾರಕಃ ||

ಗುರುವಿನ ಉಪದೇಶೋಕ್ತಿಯೆಂಬ ಸ್ವಚ್ಛವಾದ ಕನ್ನಡಿಯಲ್ಲಿ ಮೋಕ್ಷವೆಂಬ ಲಕ್ಷ್ಮಿಯು ಪ್ರತಿಬಿಂಬಿಸುವಳು ಎಂದು ಭಗವತ್ಪಾದರು ಉದಾಹರಿಸಿರುವಂತೆ, ಮುಂದೆ ಆ ಗುರುವಿನ ಶಿಕ್ಷೋಪದೇಶವಿಲ್ಲದೆ ದೀಕ್ಷೆಯಾದಮಾತ್ರದಿಂದ ಅನಾದಿಕಾಲದಿಂದ ಆತ್ಮನನ್ನಾವರಿಸಿದ ಮಲಗಳ ನಿವಾರಣೆಯಾಗುವುದಿಲ್ಲ ದೀಕ್ಷೆಯೂ, ಶಿಕ್ಷೆಯೂ ಮೋಕ್ಷವೂ ಪ್ರತಿಯೊಬ್ಬ ಮುಮುಕ್ಷುವಿಗೂ ಅವಶ್ಯಕಗಳಾಗಿವೆ ಈ ಮೂರೂ ಒಂದಕ್ಕೊಂದು ಸಂಬಂಧವಿರುವುದರಿಂದ ಒಂದನ್ನು ಬಿಟ್ಟು ಒಂದು ಫಲವನ್ನು ಕೊಡಲಾರವು ದೀಕ್ಷೆಯಿಲ್ಲದಿದ್ದವನು ಶಿಕ್ಷಾಯೋಗ್ಯನಲ್ಲ ಶಿಕ್ಷೆಯಿಲ್ಲದವನು ಮೋಕ್ಷಕ್ಕಧಿಕಾರಿಯಾಗುವುದಿಲ್ಲ

ಶಿವಸಂಸ್ಕಾರಸಂಪನ್ನೋ ಜ್ಞಾನಯೋಗೇನ ದೀಕ್ಷಿತಃ |
ಮುಮುಕ್ಷೋರ್ಮೋಕ್ಷದಃ ಸ್ಪಷ್ಟಂ ಸ ಜ್ಞಾನಗುರುರುಚ್ಯತೇ ||

ಗುರುವಿನಿಂದ ಸಂಸ್ಕಾರವನ್ನು ಪಡೆದು ತತ್ವವಿಚಾರವನ್ನು ಮಾಡಿದ ಬಳಿಕ ಅಂಗಲಿಂಗದ ಶಿವರೂಪಾನುಸಂಧಾನದ ತಿಳುವಳಿಕೆಯನ್ನು ಅದೇ ಗುರುವಿನಿಂದ ಪಡೆದು ಮೋಕ್ಷವನ್ನು ಹೊಂದಬೇಕೆಂದು ಆಚಾರ್ಯರು ಸ್ಪಷ್ಟವಾಗಿ ಉಲ್ಲೇಖಿಸಿರುವುದರಿಂದ ಯಾರು ದೀಕ್ಷಾಗುರುಗಳೋ ಅವರೇ ಶಿಕ್ಷಾಗುರುಗಳಾಗುತ್ತಾರೆ, ಯಾರು ಶಿಕ್ಷಾಗುರುಗಳೋ ಅವರೇ ಮೋಕ್ಷಗುರುಗಳಾಗುತ್ತಾರೆಂದು ಸಿದ್ಧವಾಗುವುದು

ದೀಕ್ಷಾಗುರುರಸೌ ಶಿಕ್ಷಾಹೇತೋ ಶಿಷ್ಯಸ್ಯ ಬೋಧಕಃ |
ಪ್ರಶ್ನೋತ್ತರಪ್ರವಕ್ತಾ ಚ ಶಿಕ್ಷಾಗುರುರಿತೀರ್ಯತೇ ||

ಇತ್ಯಾದಿ ಪ್ರಮಾಣಗಳು ಇದೇ ಅರ್ಥವನ್ನು ಪ್ರತಿಪಾದಿಸುತ್ತವೆ ಹೀಗೆ ಒಬ್ಬ ಗುರುವಿನಲ್ಲಿಯೇ ಆಯಾಯ ಕಾಲವನ್ನನುಸರಿಸಿ ತ್ರಿವಿಧಗುರುತ್ವವು ಸಂಘಟಿಸುತ್ತಿದ್ದರೂ ವೀರಶೈವರಲ್ಲಿ ಕೆಲವರು ವ್ಯಕ್ತಿಗತವಾದ ಅಭಿಮಾನವನ್ನು ಮುಂದರಿಸಿಕೊಂಡು ದೀಕ್ಷಾಗುರುಗಳೇ ಬೇರೆ, ಶಿಕ್ಷಾಗುರುಗಳೇ ಬೇರೆ, ಮೋಕ್ಷಗುರುಗಳೇ ಬೇರೆಯೆಂದು ವಾದಿಸುತ್ತಿರುವರು ಒಬ್ಬ ಶಿಷ್ಯನ ಹೃದಯಕ್ಷೇತ್ರವನ್ನು ಪರಿಶುದ್ಧಿಗೊಳಿಸಿ ಜ್ಞಾನಬೀಜವನ್ನು ಬಿತ್ತುವುದಕ್ಕೆ ಅನೇಕರು ಗುರುಗಳಾದರೆ ಆ ಜ್ಞಾನೋಪದೇಶದ ಕಾರ್ಯವು ಎಂದೂ ಫಲಕಾರಿಯಾಗಲಾರದು

ರಾಜದ್ವಯಂ ರೋಗಿನಿಪಾತಹೇತುರ್ವೈದ್ಯದ್ವಯಂ ಶಿಷ್ಯ ನಿಪಾತಹೇತು |
ವೈದ್ಯದ್ವಯಂ ರೋಗಿನಿಪಾತಹೇತುರ್ವೈದ್ಯದ್ವಯಂ ಲೋಕ ನಿಪಾತಹೇತುಃ ||

ಇಬ್ಬರು ರಾಜರು ಆಳುವ ರಾಷ್ಟ್ರವೂ, ಇಬ್ಬರು ವೈದ್ಯರುಳ್ಳ ರೋಗಿಯೂ, ಇಬ್ಬರು ದೇವರುಳ್ಳ ಲೋಕವೂ, ಇಬ್ಬರು ಗುರುಗಳುಳ್ಳ ಶಿಷ್ಯರೂ ಎಂದೂ ಉದ್ಧಾರವಾಗಲಾರರು ಎಂದು ನೀತಿಯಿರುವುದರಿಂದ ಲಿಂಗಾಂಗಿಯಾದ ಮಾನವನು ಒಬ್ಬ ಗುರುವಿಗೆ ಶರಣಾಗತನಾಗಿರಬೇಕಲ್ಲದೆ ಮನಸ್ಸಿಗೆ ಬಂದಂತೆ ಅನೇಕ ಗುರುಗಳನ್ನು ಪಡೆಯಬಾರದು ವೇದಾಗಮಗಳಲ್ಲಿ ಶ್ರದ್ಧೆಯುಳ್ಳ ಪ್ರತಿಯೊಬ್ಬ ಮಾನವನೂ ಗೋತ್ರಬದ್ಧನಾಗಿರುತ್ತಾನೆ ಗೋತ್ರಸೂತ್ರಗಳಿಲ್ಲದವನು ವೇದಾನುಯಾಯಿಯಾಗುವುದಿಲ್ಲ ವೀರಶೈವರು ಶಾಖಾನುಗುಣವಾಗಿ ತಮ್ಮ ತಮ್ಮ ಗೋತ್ರಗುರುಗಳಿಂದಲೇ ಸಂಸ್ಕಾರವನ್ನು ಪಡೆಯಬೇಕು ಹಾಗೆ ಗೋತ್ರಗುರುಗಳಿಂದ ಉಪದೇಶವನ್ನು ಪಡೆಯದಿದ್ದವನಿಗೆ ಗೋತ್ರಸೂತ್ರಾದಿ ಸಂಬಂಧವು ತಪ್ಪಿಹೋಗುವುದು ಯಾವ ಗೋತ್ರಗುರುವು ಶಿಷ್ಯನಿಗೆ ಬಾಲ್ಯದಲ್ಲಿ ಶಿವಸಂಸ್ಕಾರವನ್ನು ಮಾಡುತ್ತಾನೆಯೋ ಆ ಗುರುವೇ ಶಿಷ್ಯನ ಪ್ರೌಢ ವಯಸ್ಸಿನಲ್ಲಿ ಅವನ ಆತ್ಮನನ್ನು ಶಿಕ್ಷೆಯಿಂದ ವಿಕಸನಗೊಳಿಸಬೇಕು ಆ ಗೋತ್ರಗುರುವೇ ವಿಕಸಿತವಾದ ಆ ಆತ್ಮನಿಗೆ ವಾರ್ಧಕದಲ್ಲಿ ಮೋಕ್ಷೋಪದೇಶವನ್ನು ಮಾಡಬೇಕು ಹೀಗಿದ್ದು ಶಾಸ್ತ್ರಮರ್ಯಾದೆಯನ್ನು ಮೀರಿ ನೂರಾರು ದೀಕ್ಷೆಯನ್ನು ಮಾಡಿ ಶಿವಲಿಂಗವನ್ನು ಅನುಗ್ರಹಿಸಿದ ದೀಕ್ಷಾಗುರುವನ್ನು ಬಿಟ್ಟು ಗೋತ್ರಗುರುಸಂಪ್ರದಾಯಗಳಿಲ್ಲದ ಸ್ವೇಚ್ಛಾಗುರುಗಳನ್ನು ಆಶ್ರಯಿಸುವದು ವೀರಶೈವಧರ್ಮಕ್ಕೆ ಅತ್ಯಂತ ವಿರುದ್ಧವಾದ ನಡತೆ ವೀರಶೈವನಲ್ಲಿ ಶಿವದೀಕ್ಷಾಪೂರ್ವಕವಾದ ಮಹಾಮಂತ್ರೋಪದೇಶಕ್ಕಿಂತಲೂ ಇನ್ನೊಂದರ ಉಪದೇಶವು ಗಗನಕುಸುಮಾಯಮಾನವಾಗಿದೆ

ದೀಯತೇ ಪರಮಂ ಜ್ಞಾನಂ ಕ್ಷೀಯತೇ ಪಾಶಬಂಧನಂ |
ಯಯಾ ದೀಕ್ಷೇತಿ ಸಾ ತಸ್ಯಾಂ ಗುರುರ್ದೀಕ್ಷಾಗುರುಃ ಸ್ಮೃತಃ |

ಎಂಬ ಪ್ರಮಾಣದಂತೆ ತ್ರಿವಿಧಶರೀರಗಳನ್ನಾವರಿಸಿದ ಆಣವಾದಿ ಮಲಗಳನ್ನು ನಾಶಮಾಡಿ ಜ್ಞಾನಸಿದ್ಧಿಯನ್ನುಂಟುಮಾಡುವ ದೀಕ್ಷೆಗಿಂತಲೂ ಬೇರೆ ದೀಕ್ಷೆಯಿಲ್ಲ ಅದರೆ ಬಾಲ್ಯದಲ್ಲಿ ಮಾಡಲ್ಪಡುವ ದೀಕ್ಷಾಪೂರ್ವಕ ಮಂತ್ರೋಪದೇಶವು ಅಸ್ಪಷ್ಟವಾಗಿರುವುದರಿಂದ ಆ ಗುರುವು ಶಿಕ್ಷೆಯಿಂದ ಮನನಮಾಡಿಕೊಡುವನಲ್ಲದೆ ಮನನವಾದ ತತ್ವಾರ್ಥವನ್ನು ನಿಧಿಧ್ಯಾಸಕ್ಕೆ ತಂದುಕೊಡುತ್ತಾನೆ ಆದುದರಿಂದ ಆಚಾರ್ಯವಂಶಾನುಗುಣವಾಗಿ ಬಂದ ಕುಲಗುರುವೇ ಒಂದು ಕಾಲದಲ್ಲಿ ದೀಕ್ಷಾಗುರುವೆಂತಲೂ, ಮತ್ತೊಂದು ಕಾಲದಲ್ಲಿ ಶಿಕ್ಷಾಗುರುವೆಂತಲೂ, ಇನ್ನೊಂದುಕಾಲದಲ್ಲಿ ಮೋಕ್ಷಗುರುವೆಂತಲೂ ಹೇಳಿಸಿಕೊಳ್ಳುತ್ತಾನೆ ಪೂರ್ವಕಾಲದಿಂದಲೂ ಇದೇ ಪದ್ಧತಿಯು ವೀರಶೈವಪ್ರಪಂಚದಲ್ಲೆಲ್ಲ ನಡೆದುಕೊಂಡುಬರುವುದರಿಂದ ಒಂದೊಂದು ಮನೆತನದವರಿಗೆ ಇಂಥವರೇ ಕುಲಗುರುಗಳೆಂದು ವ್ಯವಸ್ಥೆಯಾಗಿದೆ ಒಬ್ಬ ಸ್ತ್ರೀಯಳಿಗೆ ಆದ್ಯಂತದಲ್ಲಿ ಒಬ್ಬನೇ ಗಂಡನಾಗಿರುವುದಲ್ಲದೆ ಆತನೇ ಸಾಕ್ಷಾದ್ದೇವತಾ ಸ್ವರೂಪನೆಂತಲೂ ಆತನೇ ತನ್ನ ಪ್ರಾಣಸ್ವರೂಪನೆಂತಲೂ ತಿಳಿದಿರುವದೇ ಪತಿವ್ರತಾಸ್ತ್ರೀಯ ಲಕ್ಷಣವಾಗಿರುವಂತೆ ಒಬ್ಬ ಗುರುವನ್ನು ಪಡದಿರುವುದೇ ಸಚ್ಛಿಷ್ಯನ ಲಕ್ಷಣವಾಗಿರುವುದು ಶಿಷ್ಯನ ಕೊರಳಿಗೆ ಮೋಕ್ಷಹೇತುವಾದ ಶಿವಲಿಂಗವೆಂಬ ಮಾಂಗಲ್ಯವನ್ನು ಧರಿಸಿದ ಕುಲಗುರುವನ್ನೂ ದೀಕ್ಷಾಕಾಲದಲ್ಲಿ ಉಪದೇಶಿಸಿದ ಮಹಾಮಂತ್ರವನ್ನೂ ಬಿಟ್ಟು ಕುಲಗೋತ್ರಗಳನ್ನು ಬಿಟ್ಟಿರುವ ಸನ್ಯಾಸಿಗಳಲ್ಲಿ ಹೋಗಿ ಅವರ ಮಾತಿಗೆ ಬೆರಗಾಗಿ ಅಶಾಸ್ತ್ರೀಯವಾದ ಉಪದೇಶವನ್ನು ಪಡೆದು ನಾವು ಹಸ್ತಕರಾದೆವು ನಾವು ಪ್ರಸಾದಿಕರಾದೆವು ಎಂಬುದಾಗಿ ಭ್ರಮಿಸುತ್ತ ತಮ್ಮಲ್ಲಿರುವ ನಿಜಧರ್ಮವನ್ನು ಹಾಳುಮಾಡಿಕೊಳ್ಳುವುದು ಸಚ್ಛಿಷ್ಯಂ ಕರ್ತವ್ಯವಲ್ಲ ಇಂಥ ಅಶಾಸ್ತ್ರೀಯಪದ್ಧತಿಯು ಪುರುಷರಲ್ಲಿ ಸ್ವಲ್ಪ ಸ್ವಲ್ಪವಾಗಿದ್ದರೂ ವೀರಶೈವಸ್ತ್ರೀಯರಲ್ಲಿ ಮಾತ್ರ ಬಹಳ ಹರಡುತ್ತ ಬಂದಿರುತ್ತವೆ ಪಂಚಕಳಶಸ್ಥಾಪನಪೂರ್ವಕವಾಗಿ ಶ್ರೀಪಂಚಾಚಾರ್ಯರ ಸಾಕ್ಷಿತ್ವದಲ್ಲಿ ತನ್ನ ಕುಲಗುರುವಿನಿಂದ ಎಂದು ಶಿವದೀಕ್ಷೆಯನ್ನು ಪಡೆದರೋ ಅಂದೇ ಹಸ್ತಕರೂ ಪ್ರಸಾದಿಕರೂ ಆಗಿಯೇ ಆಗುತ್ತಾರೆ

ಅಶಕ್ತಶ್ಚೇದ್ಗುರುರದೀಕ್ಷೈ ಅಷ್ಟಸಂಸ್ಕಾರವರ್ಜಿತಃ |
ದೀಕ್ಷಯಾರಹಿತಸ್ಯಾಪಿ ನಾಸ್ತಿ ಪೂಜ್ಯ ಲಿಂಗಮುತ್ತಮಂ ||

ಎಂದು ಶ್ರೀರೇಣುಕಾಚಾರ್ಯರು ಉಪದೇಶಿಸಿದ ಪ್ರಕಾರದಂತೆ ಪ್ರಥಮತಃ ಶಿವದೀಕ್ಷೆಯನ್ನು ಪಡೆದು ಕ್ರಿಯಾನಿಷ್ಠನಾಗಿ ಷಟ್‍ಸ್ಥಲಗಳ ಆಚರಣೆಯನ್ನು ನಡೆಯಿಸಬೇಕಾಗುವುದರಿಂದ ಇವೆಲ್ಲ ಆಚರಣೆಗಳೂ ದೀಕ್ಷಾಧಾರದಲ್ಲಿಯೇ ನಿಂತಿರುತ್ತವೆ ಈ ಆಧಾರವನ್ನೇ ಬಿಟ್ಟು ನಮಗೆ ಆ ಸ್ವಾಮಿಗಳು ಉಪದೇಶಮಾಡಿದರು ಈ ಸ್ವಾಮಿಗಳು ಉಪದೇಶಮಾಡಿದರೆಂದು ಹೇಳಿಕೊಳ್ಳುತ್ತ ಬಟ್ಟಲನ್ನು ತೊಡೆಯಮೇಲಿಟ್ಟುಕೊಂಡು ಊಟಮಾಡುವುದೊಂದನ್ನು ಮಾತ್ರ ಕಲಿತುಕೊಂಡರೆ ಯಾರಿಗೂ ಏನೂ ಪ್ರಯೋಜನವಾಗಲಾರದು ದೀಕ್ಷಾಕಾಲದಲ್ಲಿ ಉಪದೇಶಿಸಲ್ಪಟ್ಟ ಮಹಾಮಂತ್ರದ ರಹಸ್ಯಾಂಗಗಳನ್ನೇ ಬಿಟ್ಟು ಹೀಗೆ ಸ್ವೇಚ್ಛೆಯಾಗಿ ಅನಧಿಕಾರಿಗಳು ಉಪದೇಶಮಾಡುತ್ತ ಬಂದರೆ ಮಂತ್ರಕ್ರಮವು ತಪ್ಪಿ ಆ ಮಂತ್ರವು ನಿರ್ವೀರ್ಯವಾಗುವುದು ದೀಕ್ಷಾಕಾಲದಲ್ಲಿ ಗುರುವಿನಿಂದ ಉಪದೇಶಿಸಲ್ಪಟ್ಟ ಮಹಾಮಂತ್ರದಲ್ಲಿ ನಾಮಭೇದವಿಲ್ಲದೆ ಹೆಚ್ಚು ಅಕ್ಷರಗಳನ್ನು ಜೋಡಿಸಿ ಉಚ್ಚರಿಸುತ್ತ ಬಂದರೆ ಮಂತ್ರಾಧಿದೇವತೆಯಾದ ಪರಮೇಶ್ವರನು ಹೇಗೆ ಪ್ರೀತಿಸುವನು ? ಅಯೋಗ್ಯಮಂತ್ರೋಪದೇಶವು ಕಾಡಿನಲ್ಲಿ ಬಿದ್ದ ಚಂದ್ರಿಕೆಯಂತೆ ಯಾವ ಪ್ರಯೋಜನಕ್ಕೂ ಬರುವುದಿಲ್ಲ ಆದುದರಿಂದ ಗುರುಶಾಸ್ತ್ರಗಳಲ್ಲಿ ಆಸ್ತಿಕ್ಯವುಳ್ಳವರು ಇಂಥ ಅಯೋಗ್ಯರ ಉಪದೇಶಕ್ಕೆ ಮನಗೊಡದೆ ಗೋತ್ರಸೂತ್ರಬದ್ಧರಾದ ತಮ್ಮ ವಂಶಗುರುಗಳನ್ನಾಶ್ರಯಿಸಿ ಶಿವದೀಕ್ಷಾಪೂರ್ವಕವಾಗಿ ಶಿವಲಿಂಗ ಶಿವಮಂತ್ರೋಪದೇಶಾದಿಗಳನ್ನು ಪಡೆದು ಮೋಕ್ಷಸುಖವನ್ನನುಭವಿಸಬೇಕೆಂದಾಶಿಸುತ್ತೇವೆ

ಯುದ್ಧವಾರ್ತೆ

ಜರ್ಮನರ ಪ್ರಯತ್ನ

ಕ್ಯಾಸಿನೋ ನಗರದಲ್ಲಿ ಉಗ್ರ ಕದನವಾಗುತ್ತಿದೆ! ಕಳೆದುಕೊಂಡಿದ್ದ ಪರ್ವತ ದುರ್ಗ ಪ್ರದೇಶವನ್ನು ಜರ್ಮನರು ಪುನಃ ಹಿಡಿದು ಮುಖ್ಯ ಸ್ಥಾನಗಳಿಗೆಲ್ಲ ತಮ್ಮ ಬಲಗಳನ್ನು ತಂದು ನಿಲ್ಲಿಸುತ್ತಿದ್ದಾರೆಂದು ಲಂಡನಿಗೆ ವಂದಿ ಬಂದಿದೆ

ಬರ್ಲಿನ್ ಮೇಲೆ ಪ್ರಬಲ ಧಾಳಿ

ಬರ್ಲಿನ್ ಬಡಾವಣೆಗಳಲ್ಲಿರುವ ಕೈಗಾರಿಕಾ ಕಾರ್ಖಾನೆಗಳ ಮೇಲೂ ಮಿಲಿಟರಿ ಕೇಂದ್ರಗಳ ಮೇಲೂ ಅಮೇರಿಕನ್ ವಿವಿಧ ಬಾಂಬರ್ ವಿಮಾನಗಳು ೨೨ ನೆಯ ತಾರೀಖು ಹಗಲು ಪ್ರಬಲವಾಗಿ ದಾಳಿಮಾಡಿದುದಾಗಿ ಲಂಡನ್ನಿನಲ್ಲಿರುವ ಅಮೆರಿಕಾ ಕೇಂದ್ರ ಸೈನ್ಯಖಾತೆಯು ವರ್ತಮಾನವನ್ನು ಹೊರಡಿಸಿದೆ ಈ ಧಾಳಿಯಲ್ಲಿ ಸುಮಾರು ೭೫೦ಕ್ಕೆ ಮೇಲ್ಪಟ್ಟು ವಿಮಾನಗಳು ಭಾಗವಹಿಸಿದ್ದವು ಅಮೆರಿಕಾ ವಿಮಾನಗಳು ಮಾಡಿದ ಹಗಲು ದಾಳಿಗಳಲ್ಲಿ ಇದು ೧೨ ನೆಯದು

ದಂಡಯಾತ್ರೆಗೆ ಸಿದ್ಧತೆ

ಬ್ರಿಟನ್ನಿನ ೬ ಸಾವಿರ ಚದುರ ಮೈಲಿ ವಿಸ್ತೀರ್ಣ ಪ್ರದೇಶದಲ್ಲಿ ಸಾರ್ವಜನಿಕರಿಗೆ ಪ್ರವೇಶದ ಅವಕಾಶವಿಲ್ಲವೆಂದು ಯುದ್ಧಕಾರ್ಯದರ್ಶಿ ಗ್ರೀಗ್‍ರವರು ತಿಳಿಸಿದ್ದಾರೆ ಯುರೋಪಿನ ದಂಡಯಾತ್ರೆಗಾಗಿ ಇದು ಮೂರನೆ ಸಿದ್ಧತೆ ಏಪ್ರಿಲ್ ಮೊದಲನೇ ತಾರೀಖು

ಸಿಂದ ಆರಂಭವಾಗುವುದು ಪ್ರತಿಬಂಧಕ ತಾಕಲ್ಪಟ್ಟಿರುವ ಈ ಪ್ರದೇಶದಲ್ಲಿ ವಾಸಿಸುವವರಿಗೆ ಈ ಆಜ್ಞೆ ಇಲ್ಲ ಆದರೆ ಹೊರಗಿನವರಿಗೆ ಮಾತ್ರ ಪ್ರವೇಶಿಸಲು ಅವಕಾಶವಿಲ್ಲ ಇಲ್ಲಿ ವಾಸಿಸುವವರು ದುರ್ಬೀನ್‌ಗಳನ್ನು ಉಪಯೋಗಿಸಕೂಡದೆಂದು ನಿರ್ಬಂಧಪಡಿಸಲಾಗಿದೆ

ಜರ್ಮನರ ಹಿಮ್ಮೆಟ್ಟುವಿಕೆಯ ಅರ್ಥವೇನು?

ರಷ್ಯದಲ್ಲಿ ಜರ್ಮನರ ದಂಡನಾಯಕರಾದ ವಾನ್ ಮಾನ್‌ಸ್ಟೀನರ ಭಾರಿ ಸೇನೆಯು ಹತ್ತಾರು ಕಷ್ಟನಷ್ಟಗಳಿಗೆ ಸಿಕ್ಕಿದರೂ ಚಲ್ಲಾಪಿಲ್ಲಿಯಾಗಿ ಚೆದರಿಹೋಗದೆ ಶಿಸ್ತಿನಿಂದ ಹಿಂತಿರುಗುತ್ತಿರುವುದಲ್ಲದೆ, ಅವಶ್ಯವೆಂದು ತೋರಿದ ಕಡೆ ತನ್ನ ಪರಾಕ್ರಮವನ್ನು ತೋರ್ಪಡಿಸಿ, ಶತ್ರುವನ್ನು ತಡೆದು ನಿಲ್ಲಿಸುವ ಶಕ್ತಿಯನ್ನು ಪ್ರದರ್ಶಿಸುತ್ತಿರುವುದರ ಅಂತರ್ಯವೇನು? ಜರ್ಮನಿಯು ಸೋತು ಹೀಗೆ ಓಡುತ್ತಿದೆಯೆ? ಇಲ್ಲವೆ, ರಷ್ಯದಲ್ಲಿ ಕದನ ನಡೆಸಿ ಫಲವಿಲ್ಲವೆಂದು ತಿಳಿದು ಶಿಸ್ತಿನಿಂದ ಹಿಂತಿರುಗುತ್ತಿದೆಯೋ? ಎಂದು ಮಿತ್ರಮಿಲಿಟರಿ ಆವರಣಗಳಲ್ಲಿ ಆಲೋಚನಾ ತರಂಗಗಳು ಹರಿಯುತ್ತಿವೆ ಹೆದರಿಕೆಯಿಂದ ಜರ್ಮನರು ರಷ್ಯದಿಂದ ಹಿಂತಿರುಗಿದ್ದರೆ, ಇತಿಹಾಸದಲ್ಲಿಯೇ ಇಂತಹ ಸೋಲಾಗಿರಲಿಲ್ಲವೆಂದು ಹೇಳಬಹುದು ಜರ್ಮನರು ಹಿಂತಿರುಗಿದ್ದು ಹೆದರಿಕೆಯಿಂದಲೋ? ಅಥವಾ ಒಂದು ಯೋಜನೆಯಂತೆಯೋ? ಎಂಬುದನ್ನು ಮಿತ್ರಪ್ರವೀಣರು ಪರಿಶೀಲಿಸುತ್ತಿದ್ದಾರೆ

ಬೆಸರಬಿಯಾದೊಳಕ್ಕೆ ರಷ್ಯನರ ಪ್ರವೇಶ

ದಕ್ಷಿಣ ರಷ್ಯಾದಲ್ಲಿ ರಷ್ಯನ್ ಸೇನೆ ನೀಸ್ಟರ್ ನದಿಯನ್ನು ದಾಟಿತು ಬೆಸರಬಿಯಾವನ್ನು ಹೊಕ್ಕಿತು. ಪ್ರೂವದ-ಡೆಯಿಸ್ಲ್ ರಷ್ಯನ್ ಮಧ್ಯ ಸೇನೆ ಇದ ಜ|| ಕೊನೆವ್ ಸೇನೆ ೩೦ ಮೈಲಿ ವಿಶಾಲವಾದ ಪ್ರದೇಶದಲ್ಲಿ ನದಿಯನ್ನು ದಾಟಿ ೪೦ ಪಟ್ಟಣಗಳನ್ನೂ ಹಳ್ಳಿಗಳನ್ನೂ ಹಿಡಿಯಿತು ನದಿಯ ಆಚೆ ದಂಡೆಯಲ್ಲಿರುವ ಸೊರೋಕ್ಯಾ ಬೆಸರಬಿಯಾ ಎಂಬ ಭಾರಿ ಪಟ್ಟಣವನ್ನೂ ಹಿಡಿಯಲಾಯಿತು ರುಮೇನಿಯಾ ಗಡಿಗೆ ಕೇವಲ ೪೦ ಮೈಲಿ ಸಮೀಪದಲ್ಲಿರುವ ಮೊಹಿಲೆವ್ ಪೊಡೋಲಿಸ್ಕಿ ಎಂಬಲ್ಲಿ ಮಾರ್ಷಲ್ ಝುಕೋವ್ ಸೇನೆ ನೆಗ್ಗಿತು. ಟರ್ನಪೋಲಿಗೆ ಉತ್ತರದಲ್ಲಿ ೪೦ ಮೈಲಿ ದೂರದಲ್ಲಿರುವ ಒಂದು ಪಟ್ಟಣವನ್ನು ರಷ್ಯನರು ಹಿಡಿದಿದ್ದಾರೆ ನೆನ್ನೆ ಪಕ್ಕಕ್ಕೆ ನುಗ್ಗಿದರೆಂಬ ಜರ್ಮನ್ ವರದಿಗೆ ಮಾಸ್ಕೋವಿನಿಂದ ಸಮರ್ಥನೆ ಬಂದಿಲ್ಲ ಈ ಪ್ರದೇಶದಲ್ಲಿ ಇನ್ನೂ ಹೆಚ್ಚಾಗಿ ಪಟ್ಟಣ ಮತ್ತು ಹಳ್ಳಿಗಳನ್ನು ಹಿಡಿಯಲಾಯಿತೆಂದು ಮಿತ್ರ ಪ್ರಕಟಣೆ ತಿಳಿಸಿದೆ ನೆನ್ನೆ ಪಟ್ಟಣದ ಒಂದು ಭಾಗವು ರಷ್ಯನರ ಕೈ ಸೇರಿತೆಂದು ಜರ್ಮನ್ ವರದಿ ಹೇಳಿದೆ ಮಾಸ್ಕೋ ಪ್ರಕಟಣೆಯಂತೆ ರಷ್ಯನರಿಗೆ ಅದ್ಭುತ ವಿಜಯವುಂಟಾಯಿತು ರಷ್ಯನ್ ಸೇನೆ ಬಗ್ ಮೇಲಿರುವ ಜಿಮರಿಂಕ ಎಂಬುದನ್ನು ಹಿಡಿಯಿತು ಉಕ್ರೇನಿನಲ್ಲಿ ರಷ್ಯನ್ ಸೇನೆ ಮತ್ತೊಂದು ಮಹತ್ತರ ವಿಜಯ ಸಾಧಿಸಿತೆಂದು ಸ್ಟಾಲಿನ್ನರ ನಿರೂಪಣೆ ತಿಳಿಸಿದ ೧೦ ದಿವಸಗಳ ಕದನದಲ್ಲಿ ೬ ನೇ ಜರ್ಮನ್ ಡಿವಿಜನ್ ಸಂಪೂರ್ಣ ನಿರ್ನಾಮ ಮಾಡಲ್ಪಟ್ಟಿದೆ ೫೦ ಸಾವಿರಕ್ಕೆ ಕಡಮೆ ಇಲ್ಲದಷ್ಟು ಜನರನ್ನು ಜರ್ಮನರು ಕಳೆದುಕೊಂಡಿದ್ದಾರೆ ೩೬೮೦೦ ಜನರು ಕೊಲ್ಲಲ್ಪಟ್ಟರು ೧೧೦೦೦ ಸೆರೆ ಹಿಡಿಯಲ್ಪಟ್ಟರು ಜೊತೆಗೆ ೨೭೮ ಟ್ಯಾಂಕುಗಳೂ, ೧೨೦೦ ಬಂದೂಕಗಳೂ ಮತ್ತು ೧೬ ಸಾವಿರ ಮೋಟಾರು ವಾಹನಗಳು ರಷ್ಯನರ ವಶವಾದವು ಜರ್ಮನಿಯ ಆರನೇ ಸೇನೆ ಧ್ವಂಸಗೊಳಿಸಲ್ಪಟ್ಟಿದ್ದು ಎರಡನೇಬಾರಿ ಮೊದಲನೇ ಸಲ ಸ್ಟಾಲಿನ್‌ಗ್ರಾಡಿನಲ್ಲಿ ಅವಕ್ಕೆ ಪೆಟ್ಟು ಬಿದ್ದಿತ್ತು

ಜಪಾನರ ಮುನ್ನಡೆ ಬಗ್ಗೆ ಹೇಳಿಕೆ

"ಮಣಿಪುರದ ಗಡಿಯಲ್ಲಿ ಈಗ ಜಪಾನರು ಬೆಟ್ಟಗಳಲ್ಲಿ ಯುದ್ಧ ಹೂಡುತ್ತಿದ್ದಾರೆ ಭಾರತೀಯ ರಕ್ಷಣಾ ಕ್ಷೇತ್ರಗಳನ್ನು ನಾಶಗೊಳಿಸುವ ಉದ್ದೇಶ್ಯದಿಂದ ಶತ್ರುವು ಕಾರ್ಯಕ್ರಮವನ್ನು ನಡೆಸುತ್ತಿರುವನಂತೆ ಈ ಪ್ರಾಂತ್ಯದ ಕೆಲವು ಕಡೆಗಳಲ್ಲಿ ಶಿಖರಗಳು ೫೦೦೦ ಅಡಿ ಎತ್ತರವಾಗಿರುವುವು ಉಭಯಕಡೆಗಳವರೂ ಈಗ ಟ್ಯಾಂಕು ಯುದ್ಧವನ್ನಾರಂಭಿಸಿರುವರು ಮಿತ್ರಪಡೆಗಳು ಶತ್ರುಯೋಧರನೇಕರನ್ನು ನಾಶಮಾಡಿವೆ ಅರಕಾನಿನಲ್ಲಿ ಮಿತ್ರಸೇನೆಯು ಹೊಡೆತ ಹೆಚ್ಚಾದಾಗ, ಅದನ್ನು ಕಡಿಮೆಮಾಡಲು ಅನುಸರಿಸಿದ ಯುಕ್ತಿಯನ್ನೇ ಜಪಾನರೀಗ ಮಣಿಪುರದಲ್ಲೂ ಅನುಸರಿಸುತ್ತಿದ್ದಾರೆ ಅರಕಾನ್‌ನಲ್ಲಿ ಅವರು ಆಗ ನಡೆಸಿದ ಯುಕ್ತಿಯಿಂದ ಅಪಾರ ನಷ್ಟಕ್ಕೆ ಒಳಗಾದರು ಆ ಪ್ರದೇಶವು ಬೆಟ್ಟಗುಡ್ಡಗಳಿಂದ ನಿಬಿಡೀಕೃತವಾದ ಕಡಿದಾದ ಮತ್ತು ಕಷ್ಟತಮವಾದ ಪ್ರದೇಶ ಒಂದೇ ಸಮನಾಗಿ ರಕ್ಷಣಾ ಸಾಲಿನ ವ್ಯವಸ್ಥೆಯನ್ನು ಮಾಡಲೂ ಸಾಧ್ಯವಿಲ್ಲ ಆ ಪ್ರದೇಶದಲ್ಲಿ ಜಪಾನರು ದಾಳಿಮಾಡಲು ಪ್ರಯತ್ನಿಸುತ್ತಿದ್ದಾರೆ ಸರಬರಾಜು ಮಾರ್ಗಗಳನ್ನು ಕಡಿದುಹಾಕಿ ಆ ಮೂಲಕ ಮಿತ್ರಸೇನೆ ವಾಪಸಾಗುವಂತೆ ಮಾಡುವುದೇ ಜಪಾನರು ಮೊದಲಿಂದಲೂ ಅನುಸರಿಸಿಕೊಂಡು ಬರುತ್ತಿರುವ ನೀತಿ ಆ ನೀತಿಯನ್ನೇ ಮತ್ತೆ ಪ್ರಯೋಗಿಸಲು ಜಪಾನರೀಗ ಹೆಚ್ಚುಪಡೆಗಳನ್ನು ಹೂಡಿದ್ದಾರೆ ನಮ್ಮ ಯೋಧರ ಶಕ್ತಿ ಸಾಮರ್ಥ್ಯಗಳ ಬಗ್ಗೆ ನನಗೆ ತೃಪ್ತಿಯುಂಟಾಗಿದೆಯಲ್ಲದೆ, ಈಗ ನಮ್ಮಲ್ಲಿರುವ ಸೇನಾಬಲವು ಮುಂದೆ ಈ ಜಪಾನಿಗಳಿಗೆ ತಕ್ಕ ಪ್ರತಿಕಾರ ಮಾಡುವಷ್ಟು ಸಮರ್ಥವಾಗಿದೆ ಅಸ್ಸಾಮಿನಲ್ಲಿರುವ ಮಿತ್ರವಿಮಾನ ನೆಲೆಗಳ ಮೇಲೆ ಅಥವಾ ಮಿತ್ರ ರೈಲ್ವೆ ಮತ್ತು ವ್ಯವಹಾರ ವ್ಯವಸ್ಥೆಗಳ ಮೇಲೆ ದಾಳಿ ಮಾಡಲು ಆವಶ್ಯಕವಾದ ಗುರಿಗಳಲ್ಲಿ ಜಪಾನರು ನುಗ್ಗಿ ಅವನ್ನು ವಶಪಡಿಸಿಕೊಳ್ಳಲು ಎಲ್ಲಿಯವರೆಗೆ ಸಾಧ್ಯವಿಲ್ಲವೋ ಅಲ್ಲಿಯವರೆಗೂ ಭೀತಿಯಿಲ್ಲ ಆ ರೀತಿ ಶತ್ರುವು ನುಗ್ಗಬೇಕಾದರೆ ಮಿತ್ರ ಸೇನೆಯನ್ನು ನಾಶಪಡಿಸಬೇಕು ಅಥವಾ ಮಿತ್ರ ಸೈನಿಕರನ್ನು ವಾಪಸಾಗುವಂತೆ ಮಾಡಬೇಕು ಅದಲ್ಲದೆ ವಿಮಾನದ ಮೂಲಕ ಶತ್ರುವಿಗೆ ಸರಬರಾಜೂ ಒದಗಬೇಕು ಇವೆರಡೂ ಅಸಾಧ್ಯ ವಿಮಾನ ಮೂಲಕ ಶತ್ರುವಿಗೆ ರಕ್ಷಣಾ ದೊರೆಯಲು ಸಾಧ್ಯವಿಲ್ಲದಿರುವುದರಿಂದ ಶತ್ರುವು ಮುನ್ನುಗ್ಗಲು ಸಾಧ್ಯವೇ ಇಲ್ಲ ಈ ಕ್ಷೇತ್ರದಲ್ಲಿ ಈಗ ಪ್ರಾರಂಭವಾಗಿರುವ ಯುದ್ಧದ ಅಂತ್ಯ ಫಲವೇನೆಂಬ ಬಗ್ಗೆ ನನಗೆ ಸ್ವಲ್ಪವೂ ಸಂಶಯವಿಲ್ಲ ಅಲ್ಲಿನ ಸ್ಥಿತಿ ಹದಕ್ಕೆ ಬರಬೇಕಾದರೆ ಕೆಲ ಕಾಲ ಬೇಕಾಗಬಹುದು,' ಎಂದು ಈಗ ಭಾರತದ ದಂಡನಾಯಕ ಸರ್ ಕ್ಲಾಡ್ ಆಕಿನ್‌ಲೆಕ್‌ರು ಭಾರತ ಬರ್ಮ ಗಡಿಯನ್ನು ದಾಟಿ ಜಪಾನರೀಗ ಮಣಿಪುರ ಸಂಸ್ಥಾನಕ್ಕೆ ಪ್ರವೇಶಿಸಿರುವುದರಿಂದ ಉಂಟಾಗಿರುವ ಪರಿಸ್ಥಿತಿಯ ಮೇಲೆ ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ಹೇಳಿಕೆ ಕೊಡುತ್ತಾ ತಿಳಿಸಿದರು

ಭಾರತದ ಮೇಲೆ ಜಪಾನರ ದಂಡಯಾತ್ರೆ

"ಮಣಿಪುರ ಸಂಸ್ಥಾನಕ್ಕೆ ಪೂರ್ವ ಗಡಿಯಾಗಿರುವ ಉತ್ತರ ಚಿಂದ್ವಿನ್‌ನಲ್ಲಿ ಟಿಡ್ಡಿಂ ಬಳಿ ೩ ಜಪಾನೀ ಪಡೆಗಳು ದಾಟಿ ಸೋಮ್ರ ಕಣಿವೆ ಮಾರ್ಗವಾಗಿ ಮಣಿಪುರ ಸಂಸ್ಥಾನದ ಮೇಲೆ ಬಿದ್ದಿರುವರು ಯುದ್ಧಾರಂಭವಾದಂದಿನಿಂದ ಜಪಾನರು ಭಾರತದ ಮೇಲೆ ದಂಡಯಾತ್ರೆ ನಡೆಸಿರುವುದು ಇದೇ ಮೊದಲನೆಯದಾಗಿದೆ ಈ ಜಪಾನೀ ಪಡೆಗಳು ಎಷ್ಟು ಬಲಯುತವಾಗಿವೆ ಎಂಬುದು ಇನ್ನೂ ತಿಳಿದುಬಂದಿಲ್ಲ ಆದರೂ ಸಹ ಮಿತ್ರರ ಮುಂಗಾವಲು ಪಡೆಗಳು ಎಲ್ಲಾ ಕಾರ್ಯಕ್ರಮಕ್ಕೂ ಸಿದ್ಧವಾಗಿದ್ದವರಿಂದ ಶತ್ರು ಪಡೆಗಳನ್ನು ಈಗ ಎದುರಿಸಿವೆ ಈಗ ಟಿಡ್ಡಿಂಗೆ ೬ ಮೈಲಿ ದೂರದಲ್ಲಿ ಕಾಳಗವಾಗುತ್ತಿರುವುದಾಗಿ ಅನಧಿಕೃತ ಸಮಾಚಾರ ಬಂದಿರುತ್ತದೆ ಮಣಿಪುರದ ರಾಜಧಾನಿಯಾದ ಇಂಫಾಲ್‌ನಿಂದ ಬರ್ಮಾಕ್ಕೆ ಹೋಗುವ ರಸ್ತೆಯಲ್ಲಿ ೧೦೦ ನೇ ಮೈಲಿಯಲ್ಲಿ ಈ ಟಿಡ್ಡಿಂ ಇದೆ ಅರಕಾನ್ ಪ್ರಾಂತದಲ್ಲಿ ಕಳೆದ ೩ ವಾರಗಳಿಂದ ಕಾರ್ಯಾಚರಣೆ ನಡೆಸಿ ಪರಾಭವಗೊಂಡ ಜಪಾನರು ಈಗ ೧೩೦ ಮೈಲಿಗಳ ಉದ್ದವಿರುವ ಇಂಫಾಲ್ ಬರ್ಮಾ ರಸ್ತೆಯ ಆಕ್ರಮಣ ಕಾರ್ಯದಲ್ಲಿ ನಿರತರಾಗಿದ್ದಾರೆ ಇಂಫಾಲ್ ನಗರಕ್ಕೆ ಈಗ ಧಕ್ಕೆ ತಗಲುವಂತಿದೆ ಟಿಡ್ಡಿಂ ಮತ್ತು ಟಾಮೂ ನಗರಗಳೂ ಸಹ ಇದೇ ರೀತಿ ಆಕ್ರಮಣಕ್ಕೆ ಸಿಕ್ಕಿವೆ" ಎಂದು ಈಗ ಬರ್ಮಾ ರಣಾಂಗದಲ್ಲಿರುವ ಅಸೋಸಿಯೇಟೆಡ್ ವಾರ್ತಾ ಸಂಸ್ಥೆಯ ವಿಶೇಷ ಪ್ರತಿನಿಧಿಗಳು ತಿಳಿಸುತ್ತಾರೆ.

ಟಪಾಲು ರವಾನೆ ಇಲ್ಲ

"ಮುಂದಿನ ಸೂಚನೆ ಕೊಡುವವರೆವಿಗೂ ಜೋರಹಟ್ ಸಬ್‌ಪೋಸ್ಟ್ ಆಫೀಸಿನಲ್ಲಿ ಸರ್ಕಾರಿ ಕಾಗದ ಪತ್ರಗಳು ವಿನಹ ಇಂಫಾಲ್ ಕಡೆಗೆ ಕಳುಹಿಸುವ ಇತರ ಯಾವ ವಿಧವಾದ ಪಾರ್ಸಲುಗಳನ್ನು ಇನ್ನು ಮುಂದೆ ಕಳುಹಿಸಲಾಗುವುದಿಲ್ಲವೆಂದು ಅಂಚೆಯ ಇಲಾಖೆಯ ಪ್ರಕಟನೆಯೊಂದನ್ನು ಹೊರಡಿಸಿದೆ

ಸ್ವೀಕಾರ

ಗದಗಿನ ವೈದ್ಯಭೂಷಣ, ಜ್ಯೋತಿರ್ವಿದ್ವಾನ್ ವೇ|| ಕೋಟಿಸ್ವಾಮಯ್ಯಶಾಸ್ತ್ರಿಗಳವರು ತಂಬ್ರಹಳ್ಳಿ ಹಿರೇಮಠ ಇವರ ಜ್ಯೇಷ್ಠ ಪುತ್ರ ಚಿ|| ಶ್ರೀ ಮಹಾಂತೇಶಶಾಸ್ತ್ರಿಗಳಿಗೆ ಗದಗಿನ ವೇ|| ಸೋಮಯ್ಯನವರು ಹಿರೇಮಠ (ನರೇಗಲ್‌ಮಠ) ಇವರ ಪುತ್ರಿ ಚಿ|| ಸೌ|| ಸುಶೀಲಾತಾಯಿಯನ್ನು ಫಾಲ್ಗುನ ಶು|| ೧೨ ಸೋಮವಾರ ಶುಭದಿವಸ ನಿಶ್ಚಯಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 5 ರೂಪಾಯಿಗಳು ಗುರುಭಕ್ತಿಪರಾಯಣರಾದ ಶ್ರೀಮಾನ್ ಕೊಟ್ರಪ್ಪನವರು ಅರಳಿ ಉರ್ಫ ಶಲವಡಿ ಗದಗ ಇವರ ದ್ವಾರ ತಲ್ಪಿರುತ್ತವೆ

ಯಲ್ಲಾಪುರ ತಾಲ್ಲೂಕಿಗೆ ಸೇರಿದ ಹಲವು ಗ್ರಾಮಗಳಲ್ಲಿ ಕೇದಾರಪೀಠದ ಹೆಸರುಹೇಳಿಕೊಂಡು ಕಾಣಿಕೆಗಳನ್ನು ವಸೂಲುಮಾಡಿದ ಅನಧಿಕಾರಿಯೊಬ್ಬರು ತಮ್ಮ ತಪ್ಪನ್ನೊಪ್ಪಿ ಕ್ಷಮಾಪ್ರಾರ್ಥನೆಮಾಡಿಕೊಂಡುದಕ್ಕೆ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ಪುರವರ್ಗ ಶಿವಪುರಮಠಾಧ್ಯಕ್ಷ ಶ್ರೀ ಹಾಲಮಠಸ್ವಾಮಿಗಳ ದ್ವಾರ ತಲ್ಪಿರುತ್ತವೆ

ಚಿಕ್ಕಮಗಳೂರು ತಾಲೂಕು ಹಲಸುಮನೆ ಪ|| ಮ|| ರಾ|| ಈರೇಗೌಡರ ಪುತ್ರ ಚಿ|| ನಿರ್ವಾಣೇಗೌಡರಿಗೆ ಅದೇ ತಾಲೂಕು ಹಂಚರವಳ್ಳಿ ಕಾಫಿಪ್ಲಾಂಟರ್ ಲೇ|| ಅಣ್ಣೇಗೌಡರ ಪುತ್ರಿ ಮ|| ರಾ|| ನಂಜೇಗೌಡರ ಸಹೋದರಿ ಚಿ|| ಸೌ|| ಪುಟ್ಟಮುಂಡಮ್ಮನನ್ನು ಕೊಟ್ಟು ನಡೆಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರ ಕಡೆಯಿಂದ ತೆಗೆಯಿಸಿದ 2 ರೂ ಗಳು ಹುಲುವತಿ ಪ|| ನಿರ್ವಾಣೇಗೌಡರ ದ್ವಾರಾ ತಲ್ಪಿರುತ್ತವೆ

ನವಲಗುಂದ ತಾ|| ಕಾಲವಾಡದಲ್ಲಿ ನೆರವೇರಿಸಿದ ಜಯಂತ್ಯುತ್ಸವದಲ್ಲಿ ಶ್ರೀ|| ಷ|| ಬ್ರ|| ಸಿದ್ಧರಾಮಶಿವಾಚಾರ್ಯರು ಬೌಡಕೊಂಡಿ ಹಿರೇಮಠ ಇವರಿಂದ ಪ್ರಭಾಪೋಷಣಕ್ಕಾಗಿ ತೆಗೆಯಲ್ಪಟ್ಟ 1 ರೂ ಯು ನಿಂಗನಗೌಡ ಶಿವನಗೌಡ ಪಾಟೀಲ ಇವರ ದ್ವಾರಾ ತಲ್ಪಿರುತ್ತದೆ

ತಿಪಟೂರು ನಿವಾಸಿಗಳಾದ ಮುದೇನೂರು ರಾಣೇಬೆನ್ನೂರು ಮಳೇಮಠದ ವೇ|| ಮಲ್ಲಿಕಾರ್ಜುನಾರಾಧ್ಯರು ಶ್ರೀಜಗದ್ಗುರು ರೇಣುಕಜಯಂತಿಯನ್ನೂ ತಮ್ಮ ಪುತ್ರ ಚಿ|| ರೇಣುಕಾರಾಧ್ಯನ ಚೌಲೋಪನಯನವನ್ನೂ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಗುರುಗದಹಳ್ಳಿ ವೀರಶೈವಮಂಡಳಿಯವರು ವೇ|| ಯಜಮಾನ ದೊಡ್ಡಸಿದ್ಧಪ್ಪಯ್ಯನವರ ನೂತನ ಗೃಹದಲ್ಲಿ ಶ್ರೀಜಗದ್ಗುರು ರೇಣುಕಜಯಂತಿಯನ್ನು ನಡೆಯಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ ಶ್ರೀ|| ಮೇಗಳಮನೆ ಗುಂಡಪ್ಪನವರು ಶ್ರೀ|| ಜಿ ಎಸ್ ಸಿದ್ಧಲಿಂಗಯ್ಯನವರು ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಗದಗ

ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರವರ ಜಯಂತೀ ಮಹೋತ್ಸವವನ್ನು ಇದೇ ಫಾಲ್ಗುನ ಶು|| ೧೪ ಬುಧವಾರ (ತಾ|| ೮-೩-೪೪) ದಿವಸದಲ್ಲಿ ಗದಗಿನ ವೈದ್ಯಭೂಷಣ ಜ್ಯೋತಿರ್ವಿದ್ವಾನ್, ಪಂಡಿತ, ವೇ|| ತೋಟಪ್ಪಯ್ಯ ಶಾಸ್ತ್ರಿಗಳವರು ಶ್ರೀ ಮುಕ್ಕಾಲ ಬಸವೇಶ್ವರ ದೇವಸ್ಥಾನದ ಪಂಚರಿಂದಲೂ, ಸಮಸ್ತ ಶ್ರೀಮಂತ ವರ್ತಕರಿಂದಲೂ, ವೀರಶೈವ ಮಂಡಳಿಯವರಿಂದಲೂ ಕೂಡಿಕೊಂಡು ವಿಜೃಂಭಣೆಯಿಂದ ನೆರವೇರಿಸಿದರು. ಆ ದಿನ ಪ್ರಾತಃಕಾಲ ಶಾಸ್ತ್ರಿಗಳವರು ತಮ್ಮ ಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಲಿಂಗೋದ್ಭವ ಭಾವಚಿತ್ರವನ್ನು ಭವ್ಯವಾದ ಮಂಟಪದಲ್ಲಿ ಮೂರ್ತಗೊಳಿಸಿ ಷೋಡಶೋಪಚಾರಗಳಿಂದ ಪೂಜಿಸಿ ತಮ್ಮ ಧರ್ಮಪತ್ನಿ ಕುಂ|| ಸೌ|| ಶ್ರೀ ವಿಶಾಲಾಕ್ಷಾಂಬಾದೇವಿಯವರಿಂದಲೂ ಸುಪುತ್ರಿಯರಾದ ಕುಂ|| ಸೌ|| ಕಾಂಚಿಕೊಟ್ರಾಂಬೆ ಮತ್ತು ವೀರಪ ಹೇಶ್ವರಿಯವರಿಂದಲೂ ಪವಿತ್ರ ಚಿನ್ನದಾರುತಿ ಬೆಳಗಿಸಿ ಸುಪುತ್ರರಾದ ಚಿ|| ಜ್ಯೋತಿರ್ವೈದ್ಯರತ್ನ ಮಹಾಂತೇಶಶಾಸ್ತ್ರೀ, ಚಂದ್ರಶೇಖರಶಾಸ್ತ್ರೀ, ಮೃತ್ಯುಂಜಯಶಾಸ್ತ್ರೀ, ಸದಾಶಿವಶಾಸ್ತ್ರೀ ವಿಶ್ವನಾಥಶಾಸ್ತ್ರೀ, ಸಂಗಮನಾಥಶಾಸ್ತ್ರೀ ಇವರುಗಳಿಂದ ಕೂಡಿ ಸಿತಾರ ಹಾರ್ಮೋನಿಯಂ ಮೃದಂಗ ತಾಳಮೇಳಗಳ ಸುನಾದದೊಂದಿಗೆ ಮಂಗಲ ಹಾಡಿದರು.

ಸಂಜೆ ೬|| ಘಂಟೆಗೆ ಸಮಸ್ತ ಭಕ್ತಮಾಹೇಶ್ವರರೊಡನೆ ಶ್ರೀಮುಕ್ಕಾಲ ಬಸವೇಶ್ವರ ದೇವಸ್ಥಾನದಲ್ಲಿ ಶೃಂಗರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಆಚಾರ್ಯರ ಭಾವಚಿತ್ರವನ್ನಿಟ್ಟು ರಾಜಬೀದಿಯಲ್ಲಿ ಶ್ರೀ ಜಗದ್ಗುರು ರೇಣುಕರ ಜಯಘೋಷದೊಂದಿಗೆ, ವಾದ್ಯ ವೈಭವದೊಡನೆ ಮಹೋತ್ಸವವು ಮಂಗಲಾರುತಿ ಹಿಡಿದ ಸುವಾಸಿನಿಯರ ಸಮೇತವಾಗಿ ಹೊರಟಿತು. ಪ್ರಸಿದ್ಧ ವರ್ತಕರಾದ ಚನ್ನಪ್ಪನವರು ಹೊನಗುಡಿ, ಸೋಮಪ್ಪನವರು ಕಳಸಣ್ಣವರ, ಸಿದ್ಧಪ್ಪನವರು ಹಲವಾಗಲಿ, ವೀರಪ್ಪನವರು ಕುಂದಗೋಳ, ಮಲಿಕಾರ್ಜುನಪ್ಪನವರು ಬೇಲೇರಿ ಸಂಗನಬಸಪ್ಪನವರು ಬೇಲೇರಿ, ಬಸಪ್ಪನವರು ಹಂದಿಗೋಳ, ಫಕೀರಗೌಡ್ರು ಪಾಟೀಲ, ಬಸಪ್ಪನವರು ಅಬ್ಬಿಗೇರಿ ಇತ್ಯಾದ್ಯನೇಕ ಭಕ್ತಿಶೀಲರು ತಮ್ಮ ಅಂಗಡಿ ಮನೆಗಳ ಮುಂದೆ ಶ್ರೀ ಜಗದ್ಗುರುಗಳವರ ಭಾವಪಟಕ್ಕೆ ಹೂವಮಾಲೆಗಳನ್ನರ್ಪಿಸಿ, ಕಾಯಿಕರ್ಪೂರಾರುತಿ ಸಮರ್ಪಿಸಿದರು. ಈ ರೀತಿ ಶಾಂತರೀತಿಯಿಂದ ಮಹೋತ್ಸವವು ಸಾಗಿ ರಾತ್ರಿ ೧೦ ಘಂಟೆಗೆ ಶ್ರೀ ಮುಕ್ಕಾಲಬಸವೇಶ್ವರ ದೇವಸ್ಥಾನಕ್ಕೆ ತಲ್ಪಿತು. ತರುವಾಯ ವೇ|| ವಿರುಪಾಕ್ಷಶಾಸ್ತ್ರಿಗಳು ನೆರೆದಿದ್ದ ಸಭೆಯಲ್ಲಿ ತಮ್ಮ ಅಮೃತವಾಣಿಯಿಂದ ಶ್ರೀ ಜಗದ್ಗುರು ಪಂಚಾಚಾರ್ಯರ ಉತ್ಪತ್ತಿ ವೀರಶೈವ ಮತಕ್ಕೆ ಈ ಐವರಾಚಾರ್ಯರೇ ಮುಖ್ಯ ಗುರುಚಕ್ರವರ್ತಿಗಳು ಗುರುಮಹಿಮೆ, ಇವರ ಜಯಂತಿ ಕಾರ್ಯವನ್ನಾಚರಿಸುವುದರಿಂದಾಗುವ ಸಮಾಜ ಜಾಗೃತಿ ಐಕ್ಯ ಇತ್ಯಾದಿ ಮಹತ್ವ ವಿಚಾರಗಳ ಬಗ್ಗೆ ಭಾಷಣ ಮಾಡಿ, ಎಲ್ಲ ಭಕ್ತಮಾಹೇಶ್ವರರನ್ನು ಗುರುಭಕ್ತಿಸಾಗರದಲ್ಲಿ ಈಸಾಡಲು ಹಚ್ಚಿದರು. ಪ್ರತಿವರ್ಷವೂ ಐದೂ ಮಹಾಚಾರ್ಯರ ಜಯಂತಿಗಳನ್ನು ಇದರಂತೆಯೇ ಭಕ್ತಿಪೂರ್ವಕ ಸಡಗರದಿಂದ ಪ್ರತಿಯೊಂದು ಹಳ್ಳಿ ಪಟ್ಟಣಗಳಲ್ಲೆಲ್ಲ ಆಚರಿಸುವುದೇ ಲಿಂಗಾಂಗಿಗಳ ಮೂಲ ಧರ್ಮವೆಂಬುದಾ ಬಿಚ್ಚಿ ತಿಳಿಸಿದರು. ಅನಂತರ ಶ್ರೀ ಜಗದ್ಗುರು ಪಂಚಾಚಾರ್ಯರ ಮಂಗಲವಾಗಿ, ವೇ|| ಚನ್ನವೀರಶಾಸ್ತ್ರಿಗಳು ಹಿಡಿಕಿಮಠ ಇವರಿಂದ ಕೂಡಿದ್ದ ಸುವಾಸಿನಿಯರಿಗೂ, ಭಕ್ತಮಹೇಶ್ವರರಿಗೂ ಫಲಪುಷ್ಪ ಹಾರಗಳರ್ಪಿಸಲ್ಪಟ್ಟವೇ ಲೆ ಶ್ರೀ ರೇಣುಕರ ಜಯಜಯಕಾರದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಮತ್ತು ಇಂದು ಬೆಳಿಗ್ಗೆ ಪಂಡಿತ ತೋಟಪ್ಪಯ್ಯ ಶಾಸ್ತ್ರಿಗಳವರ ಧರ್ಮಪತ್ನಿ ಕುಂ|| ಸೌ|| ವಿಶಾಲಾಕ್ಷಾಂಬಾದೇವಿಯವರು ತಮಗೆ ಪರೀಕ್ಷಾರ್ಥವಾಗಿ ಕಾಡುತ್ತಿದ್ದ ರೋಗಪೀಡೆಯನ್ನು ಒಡಿಸುವ ಗುರುಭಕ್ತಿ ಸಂಕಲ್ಪ ಪೂರ್ವಕ ಕಟ್ಟಿದ್ದ ಗುರುಕಾಣಿಕೆಯನ್ನು ಶ್ರೀಜಗದ್ಗುರು ರಂಭಾಪುರೀ ಪೀಠಾಧಿಪತಿಗಳ ಸನ್ನಿಧಿಗೆ ೧೦೧ ರೂಪಾಯಿಗಳನ್ನೂ ಶ್ರೀಶೈಲಪೀಠಾಧಿಪತಿಗಳ ಸನ್ನಿಧಿಗೆ ೧೦೧ ರೂಪಾಯಿಗಳನ್ನು ಮನಿಯಾರ್ಡರ್ ಮೂಲಕ ಸಲ್ಲಿಸಿ, ಗುರುಕೃಪೆಯು ಸಮಸ್ತ ಭಕ್ತರಮೇಲೂ, ಭಕ್ತರ ಭಕ್ತಿಯು ಗುರುಮೂರ್ತಿಗಳಲ್ಲಿಯೂ ಸ್ಥಿರವಾಗಿ ಉಳಿದು ಸಮಾಜದ ನಿಜಶಕ್ತಿಯು ಬೆಳೆದು, ಭರತಖಂಡವಲ್ಲೆಲ್ಲ ಕಳೆಯೇರುವಂತಾಗಲೆಂದು ಆ ಗುರುರಾಯರಿಂ ಪ್ರಾರ್ಥಿಸಿಕೊಂಡರು.

ಶ್ರೀ ಮುಕ್ಕಾಲಬಸವೇಶ್ವರ ಸಂಸ್ಥೆಯ ಕಾರ್ಯದರ್ಶಿ,
ಕೊಟ್ರಪ್ಪ ಫಕೀರಪ್ಪ ಅರಳಿ ಉರ್ಫ್ ಶಲವಡಿ

ರಾಣೇಬೆನ್ನೂರು

ಧಾರವಾಡ ಜಿ|| ರಾಣೇಬೆನ್ನೂರು ರೇಣುಕ ಮಂದಿರದಲ್ಲಿ ಪ್ರತಿವರ್ಷ ಪದ್ಧತಿಯಂತೆ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಇದೇ ಫಾಲ್ಗುಣ ಶು|| ೮ ರಿಂದ ಶು|| ೧೪ ವರವಿಗೆ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಸಂಬಂಧವಾಗಿ ಏಳು ದಿವಸಗಳವರೆವಿಗೆ ಶ್ರೀ ಅನ್ನಪೂರ್ಣಾದೇವಿ ಮತ್ತು ಸರ್ವ ಈಶ್ವರದೇವರಿಗೆ ಅವಿಚ್ಛಿನ್ನವಾಗಿ ನಡೆದ ರುದ್ರಾಭಿಷೇಕಾದಿಯಾಗಿ ರಥೋತ್ಸವದವರೆಗಿನ ಎಲ್ಲ ಉತ್ಸವಗಳನ್ನೂ ಸದ್ಭಕ್ತರುಗಳು ಕೂಡಿ ಅತ್ಯಂತ ವೈಭವದಿಂದ ನಡೆಸಿ ಶ್ರೀಹರಗುರು ಕೃಪೆಗೆ ಪಾತ್ರರಾದರು.

ಉತ್ಸವಭಾಗಿ

ಮುದಗಲ್ಲ

ನಿಜಾಮ ಸ್ಟೇಟ ಲಿಂಗಸಗೂರ ತಾ|| ಕಸಬಾಮುದಗಲ್ಲ ಗ್ರಾಮದ ಗಂಗಧರ ಮಠಾಧ್ಯಕ್ಷರಾದ ವೇ|| ಸಿದ್ಧರಾಮಾರ್ಯರು ವಾರ್ಷಿಕ ಪದ್ಧತಿಯಂತೆ ಈ ವರ್ಷವಾದರೂ ಫಾಲ್ಗುನ ಶು|| ೧೪ ಬುಧವಾರದಿವಸ ಶ್ರೀಜಗದ್ಗುರು ರೇಣುಕಾಚಾರ್ಯರ ಭಾವಚಿತ್ರವನ್ನು ತಮ್ಮ ಮಠದಲ್ಲಿ ವಿದ್ಯುಕ್ತವಾಗಿ ಷೋಡಶೋಪಚಾರಾದಿಗಳಿಂದ ಪೂಜಿಸಿ ಆಚಾರ್ಯಭಗವತ್ಪಾದರ ಆಶೀರ್ವಾದಗಳಿಗೆ ಪಾತ್ರರಾದರು.

ಓರ್ವ ಆಚಾರ್ಯಪ್ರೇಮಿ

ಶಿಪಟೂರು

ಶಿಪಟೂರು ನಿವಾಸಿಗಳಾದ ಮೂಲತಃ ರಾಣೇಬೆನ್ನೂರು ಮಳೇಮಠದ ವೇ|| ಮಲ್ಲಿಕಾರ್ಜುನಾರಾಧ್ಯರು ೮-೩-1944 ರಲ್ಲಿ ಸ್ವಗೃಹದಲ್ಲಿ ಶ್ರೀಜಗದ್ಗುರು ರೇಣುಕಜಯಂತಿಯನ್ನು ವಿಶೇಷ ವೈಭವದಿಂದ ನೆರವೇರಿಸಿದರು. ಆ ದಿವಸ ಪ್ರಾತಃಕಾಲ ಜಗದಾಚಾರ್ಯರ ಸುಂದರವಾದ ಭಾವಚಿತ್ರಪಟವನ್ನು ಉನ್ನತಾಸನದಲ್ಲಿರಿಸಿ ವಿದ್ಯುಕ್ತವಾಗಿ ಪೂಜೆಯನ್ನು ನೆರವೇರಿಸಿದರು ಮತ್ತು ಈ ಶುಭದಿವಸದಲ್ಲಿ ತಮ್ಮ ಪುತ್ರ ಚಿ|| ರೇಣುಕಾಚಾರ್ಯನ ಚೌಲೋಪನಯನವನ್ನು ಮಾಡಿಸಿ ಗಣಾರಾಧನೆಯನ್ನು ನೆರವೇರಿಸಿದರು. ಈ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಒಂದು ರೂಪಾಯಿಯು ತೆಗೆಯಲ್ಪಟ್ಟಿತು. ಸದರಿ ವಟುವಿಗೂ ಮಾತಾಪಿತೃಗಳಿಗೂ ಜಗದಾಚಾರ್ಯರು ಆಯುರಾರೋಗ್ಯಾದಿಭಾಗ್ಯಗಳನ್ನೀಯಲೆಂದು ಹಾರೈಸುವ

ಪ್ರತ್ಯಕ್ಷದರ್ಶಿ

ವೀರಶೈವ ಮಹಾಜನಗಳಲ್ಲಿ ವಿಜ್ಞಾಪನೆ.

ಪುರವರ್ಗ ಶಿವಪುರ ಮಠಾಧ್ಯಕ್ಷ ಶ್ರೀಹಾಲಮಳೆಸ್ವಾಮಿಗಳು ಈಗ ಕರಜಗಿ ತಾಲೂಕು ಪ್ರಾಂತ್ಯ ಸಂಚಾರ ಮಾಡುತ್ತಿದ್ದು ಸೂಲ್ಲಾಪುರ ತಾ|| ಚಿಗಳ್ಳಿ ಗ್ರಾಮಕ್ಕೆ ದಯಮಾಡಿಸಿದಾಗ್ಗೆ, ಈ ಮೊದಲೆ ಅಲ್ಲಿಗೆ ಯಾರೋ ಕೇದಾರಪೀಠದ ಹೆಸರು ಹೇಳಿಕೊಂಡು ಬಂದು ಅಲ್ಲಿನ ಭಕ್ತರಿಂದ ಧನಸಂಗ್ರಹವಮಾಡಿದರೆಂದೂ ಅವರು ಇನ್ನೂ ಅಲ್ಲೇ ಎಲ್ಲೋ ಹತ್ತಿರದಲ್ಲೇ ಇರಬಹುದೆಂದೂ ತಿಳಿದು ಬಂದುದರಿಂದ ಸ್ವಾಮಿಗಳಿಗೆ ಮನಸ್ಸಿಗೆ ವ್ಯಾಕುಲವಾಗಿ ಈಗೆ ಪೀಠದ ಹೆಸರಿಗೆ ಕಲಂಕ ಹಚ್ಚುವದನ್ನು ತಪ್ಪಿಸಬೇಕೆಂದು ಸಂಕಲ್ಪಿಸಿ ಅದರಂತೆ ಕೆಲವು ಭಕ್ತರೊಡನೆ ಮೋಸಗಾರನಿರುವ ಸ್ಥಳವನ್ನು ಪತ್ತೆಹಚ್ಚಿ ಆತನ ಅಕೃತ್ಯವನ್ನು ಬೈಲಿಗೆಳೆಯಲು ಆತನು ಭೀತನಾಗಿ ಕ್ಷಮಾಪ್ರಾರ್ಥನೆಮಾಡಿದ್ದರಿಂದ ಮನ್ನಿಸಿ ಮುಂದೆ ಈ ರೀತಿ ಮಾಡಬಾರದೆಂದು ತಿಳಿಸಿ ಆತನನ್ನು ಪತ್ತೆಹಚ್ಚಲು ಇತರ ಭಕ್ತರು ಖರ್ಚುಮಾಡಿದ ಹಣವನ್ನು ಪ್ರಭಾಪೋಷಣಕ್ಕಾಗಿ ೩ ರೂ. ಗಳನ್ನು ಆತನಿಂದ ಕೊಡಿಸಿ ಇನ್ನು ಆ ಪ್ರಾಂತ್ಯದಲ್ಲಿರಬಾರದೆಂದು ಹೇಳಿ ಕಳಿಸಿಬಿಟ್ಟು ಇನ್ನು ಮುಂದೆ ಸಂಸ್ಥಾನದಿಂದ ಸರಿಯಾದ ಲಿಖಿತ ಮೂಲಕ ಪರವಾನಿಗಿ ಇಲ್ಲದ ಯಾರಿಗೂ ಕಾಣಿಕಾದಿಗಳನ್ನು ಕೊಡಬಾರದೆಂದು ಎಲ್ಲ ಭಕ್ತರಿಗೂ ಎಚ್ಚರಿಸಿರುತ್ತಾರೆ.

ಓರ್ವ ಗುರುಭಕ್ತ.

ವಿವಾಹಮಹೋತ್ಸವ

ಚಿಕ್ಕಮಗಳೂರು ತಾಲೂಕು ಹಲಸುಮನೆ ಪಟೇಲ್ ಮ|| ರಾ|| ಈರೇಗೌಡರ ಪುತ್ರ ಚಿ|| ನಿರ್ವಾಣೇಗೌಡರಿಗೆ ಚಿಕ್ಕಮಗಳೂರು ತಾಲೂಕು ಪಂಚರವಳ್ಳಿ ಕಾಫಿಪ್ಲಾಂಟರ್ ಲೇ|| ಅಣ್ಣೇಗೌಡರ ಪುತ್ರಿಯೂ ಮ|| ರಾ|| ನಂಜೇಗೌಡರ ಸಹೋದರಿಯಾದ ಚಿ|| ಸೌ|| ಪುಟ್ಟ ಮಂಜಮ್ಮನನ್ನು ತಂದು ತಾ|| ೧೯-೩-೪೪ ನೇ ಭಾನುವಾರದ ದಿವಸ ಮೇಲ್ಕಂಡ ವಧುಗೃಹದಲ್ಲಿ ವಿವಾಹವು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಸಮಾರಂಭಕ್ಕೆ ಅಣೂರುಮಠದ ವೇ|| ಸಿದ್ಧಪ್ಪಯ್ಯನವರು ಪ|| ಅಮೃತೇಗೌಡರು, ಹೆಡದಾಳು ಪ|| ಅಣ್ಣೇಗೌಡರು ಜೋಳದಾಳು ಪ|| ಬಿಳಿಗೌಡರು, ಶ್ರೀಮತಿ ಮಹದೇವಮ್ಮ, ಹೆಗ್ಗಡತಿಯವರೇ ಮೊದಲಾದ ಬಂಧುಬಾಂಧವರೆಲ್ಲ ಆಗಮಿಸಿ ವಿವಾಹ ಕಾರ್ಯವನ್ನು ಸುಲಲಿತವಾಗಿ ಆಗ ಮಾಡಿಸಿದರು.

ಕಾರ್ಯಭಾಗಿ

ಕಾವೇರಿಗೆ ಇನ್ನೊಂದು ಅಣೆಕಟ್ಟು

ಮೇಕೆದಾಟಿಗೆ ಮೂರು ಮೈಲಿ ದೂರದಲ್ಲಿ ಕಾವೇರಿ ನದಿಗೆ ಇನ್ನೊಂದು ಅಣೆಕಟ್ಟನ್ನು ಕಟ್ಟಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಪ್ರಯತ್ನಗಳು ನಡೆಯುತಿರುವುದಾಗಿ ಗೊತ್ತಾಗಿದೆ. ಇದು ಕನಕನಹಳ್ಳಿಗೆ ೨೪ ಮೈಲಿ ದೂರದಲ್ಲಿ ಅರ್ಕಾವತಿ ಕಾವೇರಿ ನದಿಗಳು ಸೇರುವ ಸಂಗಮ ಸ್ಥಳಕ್ಕೆ ಮೂರ ಮೈಲಿಯಲ್ಲಿರುತ್ತದೆ. ಇಲ್ಲಿ ಕಾವೇರಿಯು ಪ್ರವಾಹವೆಲ್ಲವೂ ಒಂದು ಮೇಕೆಯು ದಾಟುವಷ್ಟು ಅಗಲದಲ್ಲಿ ಹರಿಯುತ್ತದೆ. ದಿವಾನರು ಅಲ್ಲಿಗೆ ಏಪ್ರಿಲ್ ಮಧ್ಯಭಾಗದಲ್ಲಿ ಹೋಗಿ ಬರುವರೆಂದು ತಿಳಿದುಬಂದಿದೆ.

ಮಿಲಿಟೆರಿಯವರಿಂದ ಟ್ರಾಮುಗಳ ನಾಶ

ಕಲ್ಕತ್ತೆಯಲ್ಲಿ ಮಿಲಿಟರಿ ಮೋಟಾರುಗಳು ಟ್ರಾಂ ಕಾರುಗಳಿಗೆ ಢಿಕ್ಕಿ ಹೊಡೆದು ಬಹು ಸಂಖ್ಯೆಯ ಟ್ರಾಂ ಕಾರುಗಳು ನಾಶವಾಗಿವೆಯೆಂದು ಒಂದು ತಿಂಗಳಲ್ಲಿ ೨೧೭ ಟ್ರಾಂ ಗಾಡಿಗಳು ನಾಶವಾದುವೆಂದು ಹೇಳಲಾಗಿದೆ.

ಕ್ಯಾಸಿನೋಬಳಿ ಭೀಕರ ಕದನ

ಕ್ಯಾಸಿನೋವಿನ ಪಶ್ಚಿಮ ಗುಟ್ಟಸಾಲಿಯಲ್ಲಿ ಭೀಕರ ಕದನವಾಗುತ್ತಿದೆ. ಇಲ್ಲಿ ಜರ್ಮನ್ ಸೂಯಸೈಡ್ ಪಡೆಗಳು ಒಹಳ ನಿರಾಪೇಕ್ಷದಿಂದ ಕಾದುತ್ತಿವೆ. ಮಿತ್ರ ಪಡೆಗಳು ಜರ್ಮನರನ್ನು ಬಡಿದಟ್ಟುತ್ತಿವೆ ಮತ್ತು ಅನೇಕರನ್ನು ಸೆರೆ ಹಿಡಿದಿವೆ. ಅಚ್ಚೆಗುಡ್ಡ ಪ್ರದೇಶದಲ್ಲಿ ಭಾರತೀಯರು ಮತ್ತಷ್ಟು ಮುಂದುವರಿದರು. ಕೆಲವು ಗುಡ್ಡಗಳನ್ನು ಭಾರತೀಯ ಸೈನಿಕರು ಒಲವಾಗಿ ಹಿಡಿದಿದ್ದಾರೆ. ಎಂಟನೇ ಸೇನಾ ರಂಗದಲ್ಲಿಯೂ ಪಹರಿ ಚಟುವಟಿಕೆ ಸಾಗುತ್ತಿದೆ. ಮಿತ್ರ ವಿಮಾನಗಳ ಚಟುವಟಿಕೆ ಜೋರಾಗಿದೆ.

ಮೈಸೂರು ಸಂ ... ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್‌ನಲ್ಲಿ ಸಂಪಾದಕರಾದ ವೇ|| ಪಂಡಿತ ... [illegible]

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸಾದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ । ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ॥
ಪಂಚಾಚಾರವಿಧಾಯಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ । ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಸ್ತುದೀರ್ಲೋಕಮಂ ॥

ಸ್ಥಳದವರಿಗೆ ೩ ರೂ. ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩ನೇ ಏಪ್ರಿಲ್ ೧೯೪೪ [ಸಂಚಿಕೆ ೪೮

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ವೈರಾಗ್ಯದರ್ಪಣ

ಲೇ—ಮಲ್ಲಿಕಾರ್ಜುನಾರಾಧ್ಯ, ರಾಣೇಬೆನ್ನೂರು ತಾಲೂಕ, ಮುದೇನೂರು

ಜ್ಞಾನಯೋಗತರಂಗಿಣಿಯಲ್ಲಿ ಶ್ರೀ ರಾಮಚಂದ್ರನು ವಿಶ್ವಾಮಿತ್ರನ ಸಮ್ಮುಖದಲ್ಲಿ ಹೇಳಿರುವ ವಾಕ್ಯಗಳು ಬೋಧಪ್ರದಗಳಾಗಿಯೂ ಬಹು ಅರ್ಥಗರ್ಭಿತವಾದವುಗಳಾಗಿಯೂ ಇರುವುದರಿಂದ ಲೋಕಸಂಗ್ರಹಾರ್ಥವಾಗಿ ಸಂಗ್ರಹಿಸಿ ಬರೆದಿರುತ್ತೇನೆ. ಈ ಅಮೂಲ್ಯ ವಾಕ್ಯಗಳನ್ನು ಸರ್ವರೂ ಓದಿ ಮನನಮಾಡಿ ಧನ್ಯರಾಗಬೇಕೆಂದಪೇಕ್ಷಿಸುತ್ತೇನೆ.

ಮಹಾಮುನಿಯೇ! ಪ್ರಾಣಿಗಳು ಸಾಯಲೋಸುಗವೇ ಹುಟ್ಟುವವು. ಹುಟ್ಟಲೋಸುಗವೇ ಸಾಯುವುವೆಂಬ ನಿಯಮವುಳ್ಳ ಈ ಸಂಸಾರ ಪರಂಪರೆಯು, ಏನೆಂದು ಸುಖವಾಗಿ ಕಾಣುತ್ತಿರುವುದು. ಗಂಧಮಾಲ್ಯವನಿತಾದಿ ರೂಪಗಳಾದ ವಿಷಯಗಳು ಭೋಗಸ್ವಭಾವಗಳಿಗೆ ಸ್ಥಾನವಾದಾಗ್ಯೂ, ಮುಖ್ಯವಾದ ಆಪತ್ತುಗಳಾಗಿರುವವು. ಈ ವಿಷಯಗಳು ಕಬ್ಬಿಣದ ಶಲಾಕೆಗಳಂತೆ ಒಂದಕ್ಕೊಂದು ಸೇರದಿದ್ದಾಗ್ಯೂ, ಮನಸ್ಸಿನ ಕಲ್ಪನೆಯಿಂದ ಸೇರಿರುವಂತೆ ತೋರುವವು. ವಿಚಾರಿಸುವಲ್ಲಿ, ಮನಸ್ಸೇ ಶೂನ್ಯವಾಗಿ ತಿಳಿಯಲ್ಪಡುವದ್ದರಿಂದ ನಾವು ಯಾವುದರಿಂದ ಮೋಹಪಡುವೆವೋ ತಿಳಿಯಲಿಲ್ಲ. ಮರುಮರೀಚಿಕಾಜಲದಿಂದ ಮೃಗಗಳಂತೆ, ವಿಷಯಗಳಿಂದ ನಾವು ಸೆಳೆಯಲ್ಪಡುವೆವು. ಈ ಮಾಯೆಯಿಂ ತಿಳಿದಾಗ್ಯೂ ಮೂಢರಾಗಿ ವಿಕ್ರಯಿಸಲ್ಪಟ್ಟ ಪದಾರ್ಥಗಳಂತೆ ಪರಾಧೀನರಾಗಿರುವೆವು. ಈ ಪ್ರಪಂಚದಲ್ಲಿ ಭೋಗವೆನ್ನುವದು ದೌರ್ಭಾಗ್ಯರೂಪವಾದ್ದರಿಂದ ಕಷ್ಟಪ್ರದವಾಗಿರುವದು. ಆದಾಗ್ಯೂ ವ್ಯರ್ಥವಾಗಿ ನಾವು ಅವನ್ನೇ ಧ್ಯಾನಿಸುತ್ತಿರುವೆವು. ಹಳ್ಳದಲ್ಲಿ ಮೃಗಶಿಶುಗಳಂತೆ ವ್ಯರ್ಥವಾಗಿಯೇ ಈ ಭೋಗದಲ್ಲಿ ನಾವು ಬಿದ್ದಿರುವೆವು. ಹೀಗಿರುವಲ್ಲಿ ನನಗೆ ರಾಜ್ಯದಿಂದೇನು? ಭೋಗಗಳಿಂದೇನು? ನಾನು ಯಾರು? ಇದೆನಿಸಿಕೊಳ್ಳುವ ಪದಾರ್ಥವು ಯಾವದು? ಯಾವದು ಸುಳ್ಳೋ ಅದು ಸುಳ್ಳೇ ಆಗಲಿ, ಅದರಿಂದ ಯಾವನಿಗೆ ಏನು ಹೋಗುವದು? ಎಂದು ವಿಚಾರಿಸುವ ನಾನು ಮರುಭೂಮಿಗಳಲ್ಲಿ ಮಾರ್ಗಸ್ಥನಂತೆ ಭೋಗಗಳಲ್ಲಿ ನಿರಾಶೆಯಾಗಿರುವೆನು? ಎಲೈ ಮಹಾತ್ಮನೇ ಇದು ಏನಿಸಿಕೊಳ್ಳುತ್ತ, ದೃಶ್ಯವಾಗಿರುವ ಈ ಪ್ರಪಂಚವೆಲ್ಲವೂ ಇರುವಂಥಾದ್ದೋ ಇಲ್ಲದಿರುವಂಥಾದ್ದೋ, ಇದ್ದೂ ಇಲ್ಲದಂತೆ ಕಾಣಿಸಿಕೊಳ್ಳುವಂಥಾದ್ದೋ ಇಲ್ಲದಿದ್ದರೂ ಇರುವಂತೆ ಕಾಣಿಸಿಕೊಳ್ಳುವಂಥಾದ್ದೋ, ಇರುವಂಥಾದ್ದಾದರೆ ಹ್ಯಾಗೆ ನಷ್ಟವಾಗುವದು? ಇಲ್ಲದಿರುವಂಥಾದ್ದಾದರೆ ಹ್ಯಾಗೆ ಹುಟ್ಟುವುದು? ಇದ್ದೂ ಇಲ್ಲದಂಥಾದ್ದಾದರೆ ಹ್ಯಾಗೆ ದೃಶ್ಯವಾಗುವದು? ಇಲ್ಲದಿದ್ದರೂ ಇರುವಂಥಾದ್ದಾದರೆ ಹ್ಯಾಗೆ ಅದೃಶ್ಯವಾಗುವದು? ಏನು ಕಾರಣ ನಷ್ಟವಾಗುವದು? ಏನುಕಾರಣ ಪುನಃ ಹುಟ್ಟುವದು? ಏನುಕಾರಣ ಸ್ಥಿತಿಯಂ ಪಡೆದು ಸುತ್ತುತ್ತಿರುವದು? ಇದರ ಸ್ವರೂಪವಂ ನಿರೂಪಿಸುವವನಾಗು! ಜರೆಯೆಂತಲೂ, ಮರಣವೆಂತಲೂ, ಜನನವೆಂತಲೂ, ಆಪತ್ತೆಂತಲೂ, ಸಂಪತ್ತೆಂತಲೂ, ಇದರ ಅವಸ್ಥೆಗಳು, ಕಂದುಕ ಪದ್ಧತಿಯಿಂದ ಬಾರಿ ಬಾರಿಗೂ ವೃದ್ಧಿಹೊಂದುತ್ತಲಿರುವವು. ಬಿರುಗಾಳಿಯಿಂ ಬೆಟ್ಟದಮರಗಳಂತೆ ತುಚ್ಛವಾದ, ಆ ಭೋಗಗಳಿಂದಲೇ ನಾವು ಮರಳಿಮರಳಿ ಶಿಥಿಲರಾಗುವೆವು? ಪ್ರಾಣವೆಂಬ ವಾಯುವಿನಿಂದ ಬಿದರುಗಳಂತೆ ವ್ಯರ್ಥವಾಗಿ ಧ್ವನಿಗೈಯುತಲಿರುವ ಜನಗಳು, ಅಚೇತನರಂತೆ ಜಡವಾಗಿರುವರಲ್ಲದೆ, ಈ ಭೋಗಸ್ವರೂಪವಂ ವಿಚಾರಿಸುವದಿಲ್ಲ. ಈ ದುಃಖವು ಹೇಗೆ ಹೋಗುವದೆಂಬ ಚಿಂತೆಯಿಂದ ನಾವು ಪೊಟ್ಟರೆಯಲ್ಲಿರುವ ಅಗ್ನಿಯಿಂದ ಹಳೇವೃಕ್ಷದಂತೆ ಸಂತಪ್ತರಾಗುವೆವು, ಸಂಸಾರ ದುಃಖಗಳೆಂಬ ಕಲ್ಲುಗಳಿಂದ ಮುಚ್ಚಿರುವ ಹೃದಯವುಳ್ಳವರಾದಾಗ್ಯೂ ಜನಗಳ ಭಯದಿಂ ನಾವು ರೋದನವಂ ಮಾಡುವದಿಲ್ಲ. ತಾಗಲೂ ಕಣ್ಣೀರು ಸಹಾ ಇಲ್ಲದ ಈ ನಮ್ಮ ರೋದನಗಳನ್ನು ನಮ್ಮ ಹೃದಯದಲ್ಲಿರುವ ವಿವೇಕ ಒಂದೇ ನೋಡುತ್ತಿರುವದು, ದೈವವಶದಿಂ ಬಂದ ದಾರಿದ್ರ್ಯದಿಂ ದುಃಖಪಡುವ ಶ್ರೀಮಂತನಂತೆ, ಭೋಗಪದಾರ್ಥಗಳ ನಾಶವಂ ಚಿಂತಿಸುತ್ತಾ, ದೀರ್ಘವಾದ ಸಂಸಾರದ ರೀತಿಯಿಂ ದುಃಖಪಡುತ್ತಿರುವೆವು. ಅದೆಂತೆಂದರೆ:—ಈ ಸಂಸಾರದಲ್ಲಿ ಮೋಹಕರಾದ ಸ್ತ್ರೀಯರುಗಳು. ಪುರುಷರ ಮನವಂ ಮೋಹಪಡಿಸುವರು. ಧೈರ್ಯ ಸ್ಥೈರ್ಯ ಗಾಂಭೀರ್ಯ ಶೌರ್ಯ ಮೊದಲಾದ ಅವರ ಗುಣಗಳಂ ಖಂಡಿಸುವರು ಮತ್ತು ಅಸಿಲತಾವನದಂತೆ ಕಾಮಿನೀ ಸಮೂಹವು ಅವನನ್ನು ಆವರಿಸುವದು, ಕುಂತಗಳಂತೆ ಕಾಮಿನೀ ಕಟಾಕ್ಷಗಳು ಭೇದಿಸುವವು, ಕುಂಭಿಪಾಕದಂತೆ ಸ್ತ್ರೀಭೋಗವು ಸಂತಾಪವನ್ನುಂಟುಮಾಡುವದು. ಹೃದಯವಂ ಕತ್ತರಿಸುವ ಮೊನೆಗಳುಳ್ಳ ವಿಚಿತ್ರವಾದ ಚಿಂತೆಗಳೆಂಬ ಅರಗಳ ಸಮೂಹಕ್ಕೆ ಚಕ್ರವಾಗಿ ದುಃಖಮಯವಾದಾಗ್ಯೂ ಸುಖರೂಪವಾಗಿ ತೋರುತ್ತಲೂ ಸಂಸಾರವು ವೃದ್ಧಿಹೊಂದುತ್ತಲೂ, ಸಮಸ್ತವಾದ ಆಪತ್ತುಗಳಿಗೂ ಮನೆಯಾಗಿರುವ ಧನವು; ನನಗೆ ಸುಖಕರವಾಗುವದಿಲ್ಲ, ನಾನಾ ಪ್ರಕಾರವಾಗಿರುವ ಮೋಹಗಳುಳ್ಳ ಪರವಸ್ತುಗಳ ಆಲೋಚನೆಗಳಿಂದ, ನಿರರ್ಥಕವಾಗಿ ನಶ್ವರವಾದ ಕಾರಣಗಳಿಂ ಕಲ್ಪಿತವಾಗಿ, ನನ್ನ ಮನವು ಕಸ್ಸಲಿಗೆ ಬಿದ್ದ ಕಾಲಿಗೆ ಸೇರಿಸಲ್ಪಟ್ಟ ಸರಪಣಿಯುಳ್ಳ ಕಾಡಾನೆಯಂತೆ ದುಃಖಪಡುತ್ತಿರುವದು. ಅತ್ಯಂತ ಬಲಿಷ್ಠರಾಗಿ ಮೋಸವಂ ಮಾಡುವುದರಲ್ಲಿ ಚತುರರಾಗಿ ಸಹಿಸಲಶಕ್ಯವಾದ ಮಂಜಿನ ಮಳೆಯಂ ಕರೆಯುತ್ತಾ ಅಜ್ಞಾನವೆಂಬ ರಾತ್ರಿಯಲ್ಲಿ ಸಂಚರಿಸುವ ವಿಚಿತ್ರರಾದ ವಿಷಯಗಳೆಂಬ ಕಳ್ಳರು ಅನೇಕ ಪ್ರಕಾರದಿಂ ಪರಂಪರೆಯಾಗಿ ಬಂದು ವಿವೇಕವೆಂಬ ನನ್ನ ಮೂಲಧನವಂ ಕದಿಯುತ್ತಿರುವಲ್ಲಿ ನನಗೆ ಯಾವ ಸಂತೋಷವುಂಟಾದೀತು? ಎಲೈ ತಪೋನಿಧಿಯೇ ನನ್ನ ದುಃಖಗಳೆಲ್ಲವನ್ನು ಹೇಳಿಕೊಳ್ಳುವುದಕ್ಕೆ ಕಾಲದೇಶಗಳು ಸಾಲದ್ದರಿಂದಲೂ, ಮುಖ್ಯವಾಗಿ ನನ್ನ ಮಾತುಗಳೇ ಸಾಲದ್ದರಿಂದಲೂ, ಅವುಗಳಲ್ಲಿ ಕೆಲವು ಅನುಭವಕ್ಕೆ ಬರುತ್ತಿದ್ದಾಗ್ಯೂ, ಹೇಳುವುದಕ್ಕೆ ಅಸಾಧ್ಯವಾಗಿರುವುದರಿಂದಲೂ ನಾನೇ ಮಂಕಾಗಿ ಅಸಮರ್ಥನಾಗಿರುವುದರಿಂದಲೂ, ತೋರಿದಮಟ್ಟಿಗೆ ವಿವರಿಸಿರುವೆನು. ಇಂತಿರುವ ಘೋರವಾದ ಸಂಸಾರದಲ್ಲಿ, ಸಂಪತ್ತೆಂದು ಕಲ್ಪಿತವಾದ ಲಕ್ಷ್ಮಿಯು, ವರ್ಷಾಕಾಲದ ನದಿಯು ತರತರವಾದ ತೆರೆಗಳಂ ವಹಿಸುವಂತೆ ಜಾಡ್ಯಪ್ರದಗಳಾದ ಮನೋರಥಗಳಂ ವಹಿಸುತ್ತಾ, ನನಗೆ ಮೋಹವಂ ಉಂಟುಮಾಡುವಳು, ಮಹಾನದಿಗೆ ತೆರೆಗಳಂತೆ, ಅಸಹ್ಯವ್ಯಾಪಾರಗಳಂ ವೃದ್ಧಿಹೊಂದಿದಂಥಾ ಚಿಂತೆಗಳೆಂಬ ಹೆಣ್ಣುಮಕ್ಕಳು, ಪರಂಪರೆಯಾಗಿ ಈ ಲಕ್ಷ್ಮಿಯಿಂದ ಹುಟ್ಟುವದು, ಅವರು ಹುಟ್ಟುತ್ತಲೆ ಮೇಘಮಾಲೆಯಲ್ಲುದಯಿಸುವ ಮಿಂಚುಗಳಂತೆ ಚಂಚಲರಾದಾಗ್ಯೂ ನಿಜಪ್ರಕಾಶದಿಂ ಜನಗಳಿಗೆ ಕಣ್ಣುಕತ್ತಲೆಯನ್ನುಂಟುಮಾಡುವದು. ಲಕ್ಷ್ಮಿಯು ಕಾಲಕ್ರಮವನ್ನನುಸರಿಸುವಳಂತೆ ಒಂದು ಕ್ಷಣವಾದರೂ ಒಂದೆಡೆಯಲ್ಲಿ ನಿಲ್ಲದೆ, ಅತಿ ಚಪಲಳಾದ ಕಾಮಿನಿಯನ್ನನುಸರಿಸುವಳು. ಸ್ವಲ್ಪ ಕೇಳಿದಾಗ್ಯೂ ನಭದಲ್ಲಿ ಕೇಳಿದ ಶೀತದಂತೆ ಅತಿ ದಾಹವನ್ನುಂಟುಮಾಡುವಳು, ಪ್ರಕಾಶರೂಪಳಾದಾಗ್ಯೂ, ದೀಪಶಿಖೆಯಂತೆ ಧೂಮದೋಷಗಳಿಂದ ನಿರ್ಮಲವಾದ ಮನವೆಂಬ ಮನೆಯಂ ಕಪ್ಪಾಗಿಮಾಡುವಳು. ರಾಜನ ದೃಷ್ಟಿಯಂತೆಯು ಕಾಮಿನಿಯಂತೆಯು ಮೂಢಳಾದ ಇವಳು ಗುಣದೋಷಗಳಂ ವಿಚಾರಿಸದೆ ಬೇಕಾದ ಜನಗಳಂ ಹೊಂದುವಳು. ಸುಳ್ಳು, ಕಳ್ಳತನ, ಜೂಜು, ವ್ಯಾಪಾರ, ನಿಂದಾಸ್ತುತಿ, ವ್ಯಭಿಚಾರ, ಯುದ್ಧ ಮೊದಲಾದ ಮಾರ್ಗಗಳಿಂ ವೃದ್ಧಿಹೊಂದುತ್ತಾ, ಮಹತ್ತರವಾದ ಪಾಪಗಳಂ ವೃದ್ಧಿಹೊಂದಿಸುವಳು, ಗಾಳಿಯಿಂದ ಹಿಮವು ಗಟ್ಟಿಯಾಗುವಂತೆ ಈ ಲಕ್ಷ್ಮಿಯಿಂದ ಯಾವನು ಯಾವವರೆಗೆ ಕಠಿಣವಾಗಿ ಮಾಡಲ್ಪಡುವುದಿಲ್ಲವೋ, ಆ ವರೆವಿಗೆ ಆ ಪುರುಷನು ಸ್ವಜನರಿಗೂ ಸಹ ಮನೋಹರನಾಗಿರುವನು, ಈ ಲಕ್ಷ್ಮಿಯ ಸಂಬಂಧವಾದಕೂಡಲೆ ಆ ಪುರುಷನ ಪ್ರಾಜ್ಞತೆಯು ಶೌರ್ಯವು ಸಹ, ಸಂಪಾದನೆಯಲ್ಲಿಯೂ ಸಂಪಾದಿಸಿದ್ದನ್ನು ರಕ್ಷಿಸುವುದರಲ್ಲಿಯು ನಿಲ್ಲುವದು, ಉಪಕಾರಸ್ಮರಣೆಯನ್ನುಂಟುಮಾಡುವ ಕೃತಜ್ಞತೆಯ ಸ್ಥಾನದಲ್ಲಿ ಕೃತಘ್ನತೆಯು ನೆಲೆಸುವದು. ಮೃದುಮನೋಹರತ್ವವು ವಂಚನಾಪರನಾದ ಮಾತಿನಲ್ಲಿ ನಿಲ್ಲುವದು, ಆದ್ದರಿಂದ ಪ್ರಾಜ್ಞನು ಮೂಢನೆಂತಲೂ, ಶೂರನು ಭೀರುವೆಂತಲೂ, ಕೃತಜ್ಞನು ದ್ರೋಹಿಯೆಂತಲೂ, ಮನೋಹರನು ಘೋರನೆಂತಲೂ, ಮೃದುವಾದವನು ಕಾಠಿಣ್ಯನೆಂತಲೂ, ಖ್ಯಾತಿಯಂ ಪಡೆಯುವನು. ಸತ್ಯವಾದಿಗೆ ಸುಳ್ಳು, ದಾತೃವಿಗೆ ಲೋಭವು, ಕ್ಷಮೆಯುಳ್ಳವನಿಗೆ ಅಸಹನವು, ಸದಾಚಾರಿಗೆ ದುರಾಚಾರವು, ಧರ್ಮಪರನಿಗೆ ದ್ರೋಹಬುದ್ಧಿಯು, ತಪಸ್ವಿಗೆ ಭೋಗಾಸಕ್ತಿಯು, ದಯಾವಂತನಿಗೆ ಕ್ರೌರ್ಯವು, ಮೃದುಭಾಷಿಗೆ ಕಠಿನೋಕ್ತಿಯು, ಈ ಮೇರೆಗೆ ಗುಣಶಾಲಿಗಳೆಲ್ಲರಿಗೂ ದುರ್ಗುಣಗಳುಂಟಾಗುವದ್ದರಿಂದ, ಧೂಳಿಯಿಂದ ರತ್ನಗಳಂತೆ ಈ ಲಕ್ಷ್ಮಿಯಿಂದೆಲ್ಲರೂ ಪಾಪಿಷ್ಠ

(ಇನ್ನೂ ಮುಗಿದಿಲ್ಲ)

ಚಂದಾದಾರರಲ್ಲಿ ವಿಜ್ಞಾಪನೆ

ಇತ್ತೀಚೆಗೆ ಪ್ರಿಂಟಿಂಗಿಗೆ ಸಂಬಂಧಪಟ್ಟ ಎಲ್ಲ ಸಾಮಾನುಗಳಿಗೂ ವಿಶೇಷಬೆಲೆಯು ಏರಿರುವುದರಿಂದ ನಮ್ಮ ಪತ್ರಿಕೆಯ ಚಂದಾ ಹಣವನ್ನು 4 ಆಣೆ ಹೆಚ್ಚಿಸಿರುತ್ತೇವೆ ಚಂದಾದಾರರು ಇನ್ನು ಮುಂದೆ 3—0—0 ರೂ ಗಳನ್ನು ಮನಿಯಾರ್ಡರು ಮೂಲಕ ಕಳುಹಿಸಬೇಕು ವಿ ಪಿ ಮಾಡುವದಾದರೆ 3—4—0 ರೂಗಳು ಬೀಳುವವು

ಮ್ಯಾನೇಜರ್

ಪಂಚಾಚಾರ್ಯಪ್ರಭಾ.

೧೯೪೪ನೆಯ ಏಪ್ರಿಲ್ ತಾ|| ೩ನೇ ಸೋಮವಾರ

ಗುರುವು ಭವರೋಗವೈದ್ಯನು

ಮಾನವನು ಆಹಾರ ವ್ಯತ್ಯಾಸದಿಂದಾಗಲಿ, ಕಾಲವೈಷಮ್ಯದಿಂದಾಗಲಿ, ದುಷ್ಟಸಂಸರ್ಗದಿಂದಾಗಲಿ ಅನಂತ ರೋಗಗಳಿಗೀಡಾಗುವುದುಂಟು ಇಂಥ ರೋಗವಿಶಿಷ್ಟ ದೇಹ ಸಂಬಂಧದಿಂದ ಆತ್ಮನು ಅನೇಕ ದುಃಖಗಳನ್ನು ಅನುಭವಿಸುವನು ಇಂಥ ರೋಗಗಳನ್ನು ನಿವಾರಿಸಿ ಆತ್ಮನು ಸುಖದಿಂದ ದೇಹವೆಂಬ ಮನೆಯಲ್ಲಿ ವಾಸವಾಗಿರುವುದಕ್ಕಾಗಿ ಪರಮ ಕೃಪಾಳುವಾದ ಪರಮೇಶ್ವರನು ಆಯುರ್ವೇದವನ್ನು ರಚಿಸಿ, ಧನ್ವಂತರ್ಯಾದಿ ಮಹರ್ಷಿಗಳ ಮೂಲಕ ರೋಗಿಗಳಿಗೆ ವಿನಿಯೋಗಿಸುವುದಕ್ಕಾಗಿ ಅನೇಕ ಅನುಪಾನಗಳನ್ನೂ ದಿವ್ಯೌಷಧಿಗಳನ್ನೂ ಏರ್ಪಡಿಸಿರುತ್ತಾನೆ ಸಂಪದೆಯಾಗಿ ಇಂಥ ದಿವ್ಯೌಷಧಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ರೋಗಿಗಳ ರೋಗಗಳನ್ನು ಪರಿಹರಿಸುವುದರಲ್ಲಿ ನಿರತರಾದ ವೈದ್ಯರು ರೋಗವಿಧ ನಿದಾನ ಚಿಕಿತ್ಸಾ ಕ್ರಮದಿಂದ ರೋಗಗಳನ್ನು ನಿವಾರಿಸಿ ರೋಗದಿಂದ ನರಳುವ ಆತ್ಮನನ್ನು ದುಃಖದಿಂದ ಪಾರುಗಾಣಿಸುವರು ಅವರ ನಿಸ್ಸ್ವಾರ್ಥ ವಿಧಿಯಾಗಿರುತ್ತದೆ ವೈದ್ಯನು ಒಬ್ಬ ರೋಗಿಯ ರೋಗವನ್ನು ಪರಿಹರಿಸಲ್ಲಿ ಒಂದುನೂರು ಯಜ್ಞಗಳನ್ನು ಮಾಡಿದಷ್ಟು ಪುಣ್ಯಕ್ಕೆ ಭಾಗಿಯಾಗುತ್ತಾನೆಂದಮೇಲೆ ಇಂಥ ಅಸಂಖ್ಯ ರೋಗಿಗಳನ್ನು ಪ್ರತಿಕ್ಷಣದಲ್ಲೂ ದಯಾಪೂರಿತ ಹೃದಯನಾಗಿ ಗುಣಪಡಿಸುತ್ತ ಹೋದರೆ ಅಂಥ ವೈದ್ಯನ ಗುಣಗಾನವನ್ನು ಇಹಲೋಕದ ಪ್ರಜೆಗಳೂ, ಗಂಧರ್ವಾದಿದೇವತೆಗಳೂ ಮುಕ್ತಕಂಠದಿಂದ ಹಾಡಿ ಹರಸುವರೆಂಬುವಲ್ಲಿ ಸಂಶಯವಿಲ್ಲ ಈ ವೈದ್ಯನು ಸ್ಥೂಲದೇಹಕ್ಕೆ ಬಂದ ರೋಗಗಳನ್ನು ನಿವಾರಿಸಬಲ್ಲನೇ ಹೊರತು ಆ ದೇಹದಲ್ಲಿ ವಾಸವಾಗಿದ್ದ ಆತ್ಮನಿಗೆ ಬಂದ ಭವರೋಗವನ್ನು ನಿವಾರಿಸಲಾರನು ಈ ಭವರೋಗವನ್ನು ನಿವಾರಿಸುವ ಶಕ್ತಿಯಾಗಲಿ ಇದಕ್ಕೆ ತಕ್ಕ ಚಿಕಿತ್ಸಾಕ್ರಮವಾಗಲಿ ಎಲ್ಲವೂ ಗುರುಗಳ ಸ್ವಾಧೀನದಲ್ಲಿರುತ್ತದಲ್ಲದೆ ಇನ್ನಾರಲ್ಲಿಯೂ ಇರುವುದಿಲ್ಲ

ವೈದ್ಯಂ ವಿನಾ ನಿರಾತಂಕಾಃ ಕ್ಲಿಶ್ಯಂತೇ ರೋಗಿಣೋ ಯಥಾ ।
ಗುರುಂ ವಿನಾ ನಿರಾನಂದಂ ಕ್ಲಿಶ್ಯತೇ ಹಿ ಜಗತ್ತಥಾ ॥

ವೈದ್ಯರಿಲ್ಲದಿದ್ದಲ್ಲಿ ರೋಗಿಗಳು ಯಾವಾಗಲೂ ಸಂತೋಷಶೂನ್ಯರಾಗಿ ನರಳುತ್ತಿರುವಂತೆ ಗುರುವಿಲ್ಲದವನು ಬ್ರಹ್ಮಾನಂದವನ್ನು ಪಡೆಯದೆ ಯಾವಾಗಲೂ ಬಂಧನದಲ್ಲಿ ಸಿಕ್ಕಿ ನರಳಬೇಕಾಗುವದೆಂದು ಮಹಾತ್ಮರು ಗುರುಗಳಿಗೆ ವೈದ್ಯರ ಹೋಲಿಕೆಯನ್ನಿತ್ತಿರುತ್ತಾರೆ ದೇಹಕ್ಕೆ ಬರುವ ರೋಗಗಳೇ ಬೇರೆ, ಆತ್ಮನಿಗೆ ಬರುವ ರೋಗವೇ ಬೇರೆಯಾದುದರಿಂದ ದೇಹಕ್ಕೆ ಬಂದ ರೋಗವನ್ನು ಪರಿಹರಿಸಲು ಚಿಕಿತ್ಸಾಕ್ರಮಗಳೇ ಬೇರೆಯಾಗಿವೆ ಆತ್ಮನಿಗೆ ಬಂದ ರೋಗವನ್ನು ಪರಿಹರಿಸುವ ಚಿಕಿತ್ಸಾಕ್ರಮಗಳೇ ಬೇರೆಯಾಗಿವೆ ದೇಹದ ರೋಗವನ್ನು ಪರಿಹರಿಸಲು ವೈದ್ಯನು ಸಹಾಯಕನಾಗಿರುವಂತೆ ಆತ್ಮನಿಗುಂಟಾದ ಭವರೋಗವನ್ನು ನಿವಾರಿಸಲು ಗುರುಗಳೇ ಸಹಾಯಕರಾಗಿರುತ್ತಾರೆ ದೇಹದಲ್ಲಿರುವ ಆತ್ಮನು ಯದ್ಯಪಿ ಸ್ವಭಾವವಾಗಿ ನಿರ್ಮಲನಾಗಿದ್ದರೂ ದಾಸವಾಳದ ಹೂವನ್ನು ಸಮೀಪದಲ್ಲಿರಿಸುವುದರಿಂದ ಧವಳವರ್ಣದ ಸ್ಫಟಿಕಶಿಲೆಯು ಕೆಂಪುಬಣ್ಣವುಳ್ಳುದಾಗಿ ತೋರುವಂತೆ ಅನೇಕ ಜನ್ಮಗಳಲ್ಲಿ ಮಾಡಿದ ಪುಣ್ಯಪಾಪಗಳ ಸಂಬಂಧದಿಂದಲೂ ಮಲಿನವಾದ ಮತ್ತು ನಶ್ವರವಾದ ಹೇಯವಾದ ದೇಹಸಂಬಂಧದಿಂದಲೂ ತನ್ನ ಸ್ವತಂತ್ರತ್ವ ಸರ್ವಜ್ಞತ್ವ ಮುಂತಾದ ಶುಭಗುಣಗಳನ್ನು ಬಿಟ್ಟು ಅಲ್ಪಜ್ಞತ್ವ, ಅಸ್ವತಂತ್ರತ್ವ ಮುಂತಾದ ಹೇಯಗುಣಗಳನ್ನು ಪಡೆದಿರುತ್ತಾನೆ ಒಂದು ಸುಳಿಯಿಂದ ಮತ್ತೊಂದು ಸುಳಿಗೆ ಸಿಕ್ಕಿ ನರಳುತ್ತಿರುವ ಹುಳುಗಳಂತೆ ಆತ್ಮನು ಒಂದು ಯೋನಿಯಿಂದ ಮತ್ತೊಂದು ಯೋನಿಗೆ ಬೀಳುತ್ತ ಅನೇಕವಿಧ ಕಷ್ಟಗಳನ್ನು ಅನುಭವಿಸುತ್ತಿರುವನು ಇದನ್ನೇ ಭವರೋಗವೆಂದು ಹೇಳುತ್ತಾರೆ ಈ ರೋಗವನ್ನು ಹೋಗಲಾಡಿಸಿಕೊಂಡ ಹೊರತು ಆತ್ಮನಿಗೆ ವಿಶ್ರಾಂತಿ ಸೌಖ್ಯವೇ ಇಲ್ಲದಂತಾಗಿದೆ ದಯಾನಿಧಿಯಾದ ಭಗವಂತನು ಆತ್ಮನ ಉದ್ಧಾರಕ್ಕಾಗಿಯೇ ವೇದಗಳನ್ನು ಅನುಗ್ರಹಿಸಿರುತ್ತಾನೆ ಈ ವೇದಗಳಲ್ಲಿ ಭವರೋಗವನ್ನು ನಿವಾರಿಸಿಕೊಳ್ಳುವ ವಿಧಾನಗಳು ಚನ್ನಾಗಿ ಹೇಳಲ್ಪಟ್ಟಿರುತ್ತವೆ ಇಂಥ ವಿಧಾನಗಳನ್ನೆಲ್ಲ ಚನ್ನಾಗಿ ಅರಿತಿರುವುದರಿಂದಲೇ ಗುರುವು ವೈದಿಕನೆಂದೂ ಭವರೋಗವೈದ್ಯನೆಂದೂ ಹೊಗಳಿಸಿಕೊಳ್ಳುತ್ತಲಿದ್ದಾನೆ ಶ್ರೀರೇಣುಕಭಗವತ್ಪಾದರು—

ಕಟಾಕ್ಷಚಂದ್ರಮಾ ಯಸ್ಯ ಜ್ಞಾನಸಾಗರವರ್ಧನಃ ।
ಸಂಸಾರತಿಮಿರಚ್ಛೇದೀ ಸ ಗುರುರ್ಜ್ಞಾನಸಾಗರಃ ।

ಬಹಿಸ್ತಿಮಿರವಿಚ್ಛೇತ್ತಾ ಭಾನುರ್ನೇಹ ಪ್ರಕೀರ್ತಿತಃ ।
ಬಹಿರಂತಸ್ತಮಶ್ಛೇದೀ ವಿಭುರ್ದೇಶಿಕಭಾಸ್ಕರಃ ॥

ಯತ್ಸ್ವಾಕ್ತಿದರ್ಪಣೇ ಶೋಗೇ ನಿರ್ಮಲೇ ದೃಶ್ಯತೇ ಸದಾ ।
ಮೋಕ್ಷಶ್ರೀರ್ಬಿಂಬರೂಪೇಣ ಸ ಗುರುರ್ಭವತಾರಕಃ ॥

ಪರಮಾದ್ವೈತವಿಜ್ಞಾನಪರಮ ಔಷಧದಾನತಃ ।
ಸಂಸಾರರೋಗದುರ್ವಾರ ... ಲಭ್ಯತೇ ।

ಯಾವ ಮಹಾತ್ಮನ ಕಟಾಕ್ಷವೆಂಬ ಚಂದ್ರದರ್ಶನದಿಂದ ಜ್ಞಾನವೆಂಬ ಸಮುದ್ರವು ಉಕ್ಕೇರುವುದೋ ಜನನಮರಣ ರೂಪವಾದ ಸಂಸಾರವೆಂಬ ಕಗ್ಗತ್ತಲೆಯು ಹೇಳಹೆಸರಿಲ್ಲದೆ ಓಡಿಹೋಗುವುದೋ ಅವನೇ ಗುರುವೆನಿಸುವನು ಆಕಾಶದಲ್ಲಿ ವ್ಯಾಪಿಸಿದ ಕತ್ತಲೆಯೊಂದನ್ನು ನಾಶಗೊಳಿಸುವ ಸೂರ್ಯನಿಗಿಂತಲೂ ಗುರುವು ಹೃದಯಾಕಾಶದಲ್ಲಿ ವ್ಯಾಪಿಸಿದ ಅಜ್ಞಾನವೆಂಬ ಕತ್ತಲೆಯನ್ನು ನಾಶಪಡಿಸುವುದರಿಂದ ಸೂರ್ಯನಿಗಿಂತಲೂ ಕೋಟಿಪಾಲು ಸರ್ವೋತ್ತಮನಾಗಿದ್ದಾನೆ ಗುರುವಿನ ಉಪದೇಶವಾಣಿಯೆಂಬ ಕನ್ನಡಿಯಲ್ಲಿ ಮೋಕ್ಷಲಕ್ಷ್ಮಿಯ ಬಿಂಬವು ಕಂಡುಬರುವುದರಿಂದ ಗುರುವೇ ಭವರೋಗನಿವಾರಕನೆನಿಸಿಕೊಳ್ಳುತ್ತಾನೆ ಭವರೋಗದಿಂದ ನರಳುತ್ತಿರುವ ಜೀವಾತ್ಮರಿಗೆ ಪರಮಾತ್ಮಾದ್ವೈತಜ್ಞಾನವೆಂಬ ದಿವ್ಯೌಷಧವನ್ನು ಕೊಟ್ಟು ಸತ್ಯ ಶೌಚ ಯಮ ನಿಯಮ ಅಹಿಂಸಾದಿಗಳೆಂಬ ಅನುಪಾನಗಳನ್ನು ಮಾಡಿಸುತ್ತ ಕೃಪಾಳುವಾದ ವೈದ್ಯನೋಪಾದಿಯಲ್ಲಿ ಶರಣಾಗತನಾದ ಶಿಷ್ಯನನ್ನು ಜನನಮರಣರೂಪವಾದ ಘೋರವ್ಯಾಧಿಯಿಂದ ತಪ್ಪಿಸಿ ಜೀವಾತ್ಮನನ್ನು ಪರಶಿವನಂತೆ ನಿತ್ಯತೇಜಸ್ವಿಯನ್ನಾಗಿಯೂ, ನಿತ್ಯಾನಂದಪದವೀಧರನನ್ನಾಗಿಯೂ ಮಾಡುವುದರಿಂದ ಗುರುವೇ ಸರ್ವೋತ್ತಮನೆಂದು ಉಪದೇಶವನ್ನಿತ್ತಿರುತ್ತಾರೆ ಕಲಿಕಾಲ ಮಹಿಮೆಯಿಂದ ಪ್ರಪಂಚದಲ್ಲಿ ಅಂಥ ವೈದ್ಯರ ಸತ್ವವು ಕಡಿಮೆಯಾದಂತೆ ಗುರುಗಳ ಸತ್ವವೂ ಕಡಿಮೆಯಾಯಿತು ದೇಹಕ್ಕೆ ಸಂಭವಿಸಿದ ರೋಗಗಳನ್ನು ಕಂಡುಹಿಡಿದು ರೋಗಿಗಳಮೇಲೆ ಕೃಪಾದೃಷ್ಟಿಯನ್ನಿರಿಸಿ ಅನುಪಾನ ಔಷಧಸೇವನೆಗಳನ್ನು ಪೂರೈಸುತ್ತ ರೋಗಿಯ ಮನೋಲ್ಲಾಸಪಡಿಸುತ್ತ ಬಂದರೆ ವೈದ್ಯರಿಗೆ ಧನಸಮೃದ್ಧಿಯೂ ಯಶಸ್ಸೂ ಉಂಟಾಗುವಲ್ಲಿ ಸಂದೇಹವಿಲ್ಲ. ಅದರಂತೆ ಗುರುಗಳಾದರೂ ತಮ್ಮ ಜೀವಾತುವೆನಿಸಿದ ಜ್ಞಾನಭಂಡಾರವನ್ನು ಅರ್ಜಿಸುತ್ತ ಭವರೋಗತಪ್ತರಾದ ಶಿಷ್ಯ ಜನಗಳ ಶಕ್ತಿಪಾತವನ್ನರಿತು ಸಂಸ್ಕಾರಾದಿ ಸತ್ಕ್ರಿಯೆಗಳಿಂದ ಶೋಧಿಸಿ ತತ್ವೋಪದೇಶವೆಂಬ ದಿವ್ಯೌಷಧವನ್ನು ಪ್ರಯೋಗಿಸುತ್ತಾ ಬಂದಿದ್ದರೆ ಮಠವು ಇಷ್ಟು ಹೀನಾವಸ್ಥೆಗೆ ಬರುತ್ತಿದ್ದಿಲ್ಲ ಇನ್ನುಮೇಲಾದರೂ ಗುರುಗಳು ಶಿಷ್ಯೋದ್ಧಾರಕಾರ್ಯದಲ್ಲಿ ತೊಡಗಿದರೆ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಮಾನ್ಯರಾಗಿ,

ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ ।

ಇತ್ಯಾದಿ ಮಹಾವಾಕ್ಯಗಳೆಲ್ಲ ಸಫಲವಾಗುವಲ್ಲಿ ಸಂಶಯವಿಲ್ಲ. ಆದುದರಿಂದ ಗುರುಗಳು ವಿದ್ಯಾವಂತರಾಗಿ ಮಠಧರ್ಮಗಳನ್ನು ಚನ್ನಾಗಿ ತಿಳಿದುಕೊಂಡು ಶಿಷ್ಯೋದ್ಧಾರಕಾರ್ಯದಲ್ಲಿ ನಿರತರಾಗಿರಬೇಕೆಂದು ಪ್ರಾರ್ಥನೆ

ಯುದ್ಧವಾರ್ತೆ.

ಹಿಂದೂ ಸಾಗರದಲ್ಲಿ ಭಾರಿ ನೌಕಾಪಡೆಯಿದೆ

ಜಪಾನರ ದಳಗಳು ಹಿಂದೂಸಾಗರದ ಮೂಲಕ ಪಶ್ಚಿಮಭಾಗಕ್ಕೆ ಅಂದರೆ ಭಾರತದ ಕಡೆಗೆ ಬರಲು ಯತ್ನಿಸಿದರೆ, ಅವುಗಳನ್ನು ನಿರ್ನಾಮಮಾಡಲು ಭಾರಿ ನೌಕಾಪಡೆಯನ್ನು ಸರ್ ಜೇಮ್ಸ್ ಸಮರ್‌ವಿಲ್‌ರವರ ನಾಯಕತ್ವದಲ್ಲಿಟ್ಟಿದೆ ಅದರ ಕೇಂದ್ರ ಸಿಲೋನಿನಲ್ಲಿದೆ ಎಂದು ಮಹಾಪ್ರಧಾನ ಚರ್ಚಿಲ್‌ರವರು ಹೇಳಿದ್ದಾರೆ

ಅಮೇರಿಕದಲ್ಲಿ ಸೈನಿಕರ ಕೊರತೆ

ಅಮೇರಿಕದಲ್ಲಿ ಸೈನಿಕರ ಕೊರತೆ ಬಂದಿದೆ ಆದಕಾರಣ ಕೂಲಿಗಾರರನ್ನು ಸಮರ ಸೇವೆಗೆ ಕರೆಯುವ ಪ್ರಯತ್ನದಲ್ಲಿ ರೂಸ್ವೆಲ್ಟರು ಯತ್ನಿಸಿದಹಾಗಿದೆ ಆದರೆ ಕೆಲಸಗಾರರು ಸೇನೆಗೆ ಸೇರಲು ಒಪ್ಪುತ್ತಿಲ್ಲವೆಂದು ಹೇಳಲಾಗಿದೆ

ಲಂಡನ್ ಮೇಲೆ ದಾಳಿ

ಸುಮಾರು ೧೦೦ ನಾಜಿ ವಿಮಾನಗಳು ಲಂಡನ್ನಿನ ಮೇಲೆ ದಾಳಿಮಾಡಲು ೨೪-೩-೪೪ ನೇ ದಿನ ಒಂದಿದ್ದವು ಬಾಂಬುಗಳನ್ನು ಸುರಿಸಿದವು ಮನೆ ಮಠಗಳು ಶತ್ರುದಾಳಿಯಿಂದ ನಾಶವಾದವು ಹಲವು ಕಡೆ ಉರಿಯುತ್ತಿದ್ದ ಬೆಂಕಿಯನ್ನು ಬೇಗ ಆರಿಸಲಾಯಿತು ಎಂದು ಹೇಳಲಾಗಿದೆ

ಕಪ್ಪು ಸಮುದ್ರದ ರೇವುಗಳನ್ನು ವಶಪಡಿಸಿಕೊಂಡರು !

ಜರ್ಮನರು ರುಮೇನಿಯ ಮತ್ತು ಬಲ್ಗೇರಿಯ.ಗಳಿಗೆ ಸೇರಿದ ಕಪ್ಪು ಸಮುದ್ರದಲ್ಲಿರುವ ರೇವು ಪಟ್ಟಣಗಳನ್ನು ತಮ್ಮ ಹತೋಟಿಗೆ ಪಡೆದರು, ಡ್ಯಾನ್ಯೂಬ್ ನದಿಯ ಮೂಲಕ ನಡೆಯುವ ಹಡಗಿನ ಸಂಚಾರದ ಸಕಲ ಏರ್ಪಾಡುಗಳನ್ನೂ ಜರ್ಮನರೇ ತಮ್ಮ ರಕ್ಷಣೆಗೆ ಒಳಪಡಿಸಿರುವರೆಂದು ಹೇಳಲಾಗಿದೆ

ಜಪಾನರನ್ನು ತಡೆಯಲಾಗಿದೆ

ಮಣಿಪುರದಲ್ಲಿ ಇಂಫಾಲ್ ದಿಮಾಪುರ್ ರಸ್ತೆಯಲ್ಲಿರುವ ಕೊಹಿಮ ಎಂಬ ಸ್ಥಳದ ಕಡೆಗೆ ಸೊಪ್ಪು ಬೆಟ್ಟಗಳ ಕಡೆಯಿಂದ ನುಗ್ಗಿದ ಜಪಾನರ ಸೇನೆಯನ್ನು ತಡೆದು ನಿಲ್ಲಿಸಲಾಗಿದೆ ಇಖ್ರೂವಲ್ ಕ್ಷೇತ್ರದಲ್ಲಿ ಜಪಾನರ ಒತ್ತಡವನ್ನು ತಡೆದು ನಿಲ್ಲಿಸಿದೆ ಶತ್ರುವಿಗೆ ಆಗಿರುವ ನಷ್ಟವು ಊಹಾತೀತವಾಗಿದೆ ಇತರ ಕಡೆಗಳ ರಣರಂಗಗಳ ವರದಿಯಲ್ಲಿ ವಿಶೇಷವೇನೂ ಇಲ್ಲ ಟಿಡ್ಡಿಂ ಇಂಫಾಲ್ ರಸ್ತೆಯಲ್ಲಿ ಜಪಾನರ ಟ್ಯಾಂಕುಗಳು ೨೫ ನೇ ತಾ|| ದಾಳಿ ಮಾಡಲು ಯತ್ನಿಸಿದವು ಅವುಗಳಲ್ಲಿ ಹಲವು ನಾಶವಾಗಿವೆ ಈ ಪ್ರಾಂತದಲ್ಲಿ ಭಾರಿ ಕದನವಿನ್ನೂ ಆಗಿಲ್ಲ ಮಿತ್ರಪಕ್ಷದ ದಳಗಳು ಶತ್ರುವನ್ನು ಎದುರಿಸುತ್ತಿವೆ ಎಂದು ಆಗ್ನೇಯ ಏಷಿಯ ದಂಡನಾಯಕರ ಪ್ರಕಟನೆ ತಿಳಿಸುತ್ತದೆ

ಇಂಫಾಲ್ ನಗರಕ್ಕೆ ಕೂಡಲೇ ಬರಲು ಸಾಧ್ಯವಿಲ್ಲ

ಮಣಿಪುರದ ರಾಜಧಾನಿಯಾದ ಇಂಫಾಲ್ ನಗರವನ್ನು ಕೂಡಲೇ ಜಪಾನರು ಹಿಡಿಯಲು ಪ್ರಯತ್ನ ಮಾಡಿದ್ದರೂ, ಅದಕ್ಕೆ ಹೆದ್ದಾರಿಯಾದ ಎರಡು ದೊಡ್ಡ

ರಸ್ತೆಗಳೂ ಮಿತ್ರರ ವಶದಲ್ಲಿದೆ. ಟಿಡ್ಡಿಂ ಪಲೇಲ್ ಬಳಿಯಲ್ಲಿ ಈ ರಸ್ತೆಗಳನ್ನು ಜಪಾನರು ಒಡೆದಿದ್ದರೂ, ಅವರನ್ನು ಓಡಿಸಲು ತಕ್ಕಷ್ಟು ಬಲ ಮಿತ್ರರ ಬಳಿಯಲ್ಲಿದೆ. ಈಗ ಜಪಾನರು ೧೦೫೦೦ ಕ್ಕಿಂತ ಹೆಚ್ಚಾದ ಬಲವನ್ನು ಈ ರಂಗಕ್ಕೆ ತಂದಿರಬಹುದು. ಅರಕಾನ್‌ರಂಗದಲ್ಲಿ ಕೇವಲ ೭ ಚದರ ಮೈಲಿಯಲ್ಲಿ ಕದನವಾಯಿತು, ದಿನಕ್ಕೆ ೫೦೦ ಗಜ ಮುಂದುವರಿಯುವುದೂ ಸಾಹಸದ ಕೆಲಸವಾಗಿತ್ತು. ಈಗ ಹಾಗಿಲ್ಲ. ರಣರಂಗದ ಉದ್ದ ೧೫೦ ಮೈಲಿ, ಅಗಲ ೮೦ ಮೈಲಿ. ಸಂಚಾರ ಮತ್ತು ವಾರ್ತಾವಾಹಕ ಸೌಕರ್ಯಗಳು ರಣರಂಗದಲ್ಲಿವೆ. ಇಂಫಾಲ್ ಮೈದಾನವೊಂದನ್ನು ಬಿಟ್ಟರೆ ಉಳಿದುದೆಲ್ಲ ಬೆಟ್ಟಗುಡ್ಡ ಪ್ರದೇಶ. ಈ ಪ್ರದೇಶದಲ್ಲಿ ರಹಸ್ಯವಾಗಿ ಶತ್ರುವು ಮುಂದೆ ನುಗ್ಗಿ ಬಂದರೂ, ಮಿತ್ರರ ಮುಂದೆ ಮೈದಾನದಲ್ಲಿ ನಿಂತು ಕದನ ನಡೆಸುವ ಚೇತನ ಹೊಂದಿಲ್ಲ. ಜೊತೆಗೆ ಅವರಿಗೆ ತಕ್ಕ ವಿಮಾನ ಬಲವೂ ಇಲ್ಲ—ಎಂದು ಮಿತ್ರನಾಯಕರೊಬ್ಬರು ಹೇಳಿರುತ್ತಾರೆ.

ಭಾರತದ ದಂಡನಾಯಕರ ಹೇಳಿಕೆ

ಬರ್ಮಾ ರಂಗದ ಕದನ ಸ್ಥಿತಿಯನ್ನು ಕುರಿತು ಭಾರತದ ದಂಡನಾಯಕರಾದ ಸರ್ ಅಕಿನ್ ಲೆಕ್ಕರು ಕೇಂದ್ರ ಶಾಸನ ಸಭೆಯಲ್ಲಿ ದೀರ್ಘವಾದ ಹೇಳಿಕೆಯನ್ನೀಯುತ್ತ—"ಭಾರತಕ್ಕೆ ಎರಡು ಕಡೆಗಳಿಂದ ಜಪಾನರು ಬರಲು ಬರ್ಮಾ ಕ್ಷೇತ್ರವು ಅವಕಾಶಮಾಡಿಕೊಡುತ್ತದೆ. ಮೊದಲನೆಯದು ದಕ್ಷಿಣದಲ್ಲಿ ಅರಕಾನಿನಿಂದ ಚಿತ್ತಗಾಂಗ್ ಕಡೆಗೆ. ಇನ್ನೊಂದು ಉತ್ತರದಲ್ಲಿ ಮಣಿಪುರ ಮತ್ತು ಅಸ್ಸಾಂ ಕಡೆಯಿಂದ. ಅರಕಾನ್ ಕಾರ್ಯಾಚರಣೆಯಲ್ಲಿ ಜಪಾನರು ವಿಫಲರಾಗಿದ್ದಾರೆ. ಈ ರಂಗದಲ್ಲಿ ಮಿತ್ರಪಕ್ಷದವರು ಮೆಚ್ಚಿಗೆ ಎಬ್ಬಿಸುವ ಕಾರ್ಯಾಚರಣೆಯಲ್ಲಿ ನಿರತರಾಗಿದ್ದಾರೆ. ಶತ್ರುವಿನ ಅಗಾಧ ಪ್ರತಿದಾಳಿ ಇದ್ದರೂ ಲೆಕ್ಕಿಸದೆ ಮಿತ್ರಸೇನೆ ಶತ್ರುವನ್ನು ಬಡಿದಟ್ಟುತ್ತಿದೆ. ಇನ್ನು ಉತ್ತರದ ವಿಚಾರ. ಬಹು ದಟ್ಟವಾದ ಅರಣ್ಯ ಮತ್ತು ಗುಡ್ಡಗಾಡುಗಳನ್ನು ದಾಟಿಕೊಂಡು ಶತ್ರು ಸಾಗಬೇಕಾಗಿದೆ. ಚಿನ್ ಗುಡ್ಡದಿಂದ ೨೦೦ ಮೈಲಿ ಮೇಲ್ಪಟ್ಟು [illegible]ವಾಗಿದೆ. ಈ ಪ್ರದೇಶದಲ್ಲಿ ಮಿತ್ರಯೋಧರಿಗೆ ರಸ್ತೆ ಮೂಲಕ ಸರಬರಾಜನ್ನು ಒದಗಿಸಲಾಗುತ್ತಿದೆ. ಮಣಿಪುರದಿಂದ ಇಂಫಾಲಕಡೆಗೆ ಯುದ್ಧಪ್ರದೇಶದ ಮೂಲಕವೇ ಸಂಗ್ರಾಮವಸ್ತುಗಳನ್ನು ಸಾಗಿಸಲಾಗುತ್ತಿದೆ. ಈ ಕಡೆ ಇರುವ ಠಾಣೆಗಳು ಶತ್ರು ದಾಳಿಗೆ ಸಹಾಯಮಾಡುವಂತಿವೆ. ಇದನ್ನೆಲ್ಲಾ ರಕ್ಷಿಸುವ ಕಾರ್ಯದಲ್ಲಿ ತೊಡಗಿದ್ದೇವೆ. ಆದರೆ ಮಿತ್ರರ ಶಕ್ತಿಯು ಕುಗ್ಗುವದು. ಪ್ರದೇಶದಲ್ಲಿ ಶತ್ರುವು ಉತ್ತರದಲ್ಲಿ ಮಣಿಪುರದ ರಸ್ತೆಯಿಂದ ದಕ್ಷಿಣದಲ್ಲಿರುವ ಟಿಡ್ಡಿಮ್ ಮತ್ತು ಟಿ ಮುವಿಗೆ ಸಾಗಲು ಶಕ್ಯವಿದೆ. ಇಲ್ಲಿ ಈಗ ೧೭ನೇ ಮುಖ್ಯ ಕಾರ್ಯಾಚರಣೆ ನಡೆಯುತ್ತಿದೆ. [illegible] ರಕ್ಕಾಗಿ ಇಲ್ಲಿ ಶತ್ರುಸೈನಿಕರು ಕಾದಾಡುತ್ತಿದ್ದಾರೆ. ಆದರೆ ಅವರು ಮುನ್ನಡೆಸುತ್ತಿರಲಿಲ್ಲ. ಹಿಂಬದಿಯಲ್ಲಿನ ಅವರ ಸಂಚಾರ ಮಾರ್ಗಗಳಿಗೆ ಅಪಾಯವನ್ನು ಮಿತ್ರಸೇನೆಗಳು ತಂದೊಡ್ಡಿವೆ. ರೈಲ್ವೆಗಳ ನಾಶ, ನದಿ ಮೂಲಕ ಸಂಚಾರಕ್ಕೆ ಅಡಚಣೆ, ಶತ್ರು ವ್ಯವಸ್ಥೆಗೆ ಪೆಟ್ಟು ಇವನ್ನು ಮಿತ್ರಸೇನೆಗಳು ನಡೆಸುತ್ತ ಶತ್ರುಸೈನಿಕರು ಕಷ್ಟದ ಸ್ಥಿತಿಯನ್ನು ಅನುಭವಿಸುವಂತೆ ಮಾಡಿವೆ. ಶತ್ರುಸೈನಿಕರಿಗೆ ಸರಬರಾಜಿನ ಕೊರತೆಯುಂಟಾಗುವುದೆಂದು ನಂಬಲಾಗಿದೆ. ಹಾಗಾದಲ್ಲಿ ಅವರು ಹಿಂದಕ್ಕೆ ಸರಿಯುವ ಸಂಭವವಿದೆ. ಮಣಿಪುರ ಮತ್ತು ಇಂಫಾಲ್ ರಸ್ತೆಯನ್ನು ಮಿತ್ರಪಡೆಗಳು ರಕ್ಷಿಸುತ್ತಿವೆ. ಇಂಫಾಲ್ ಮತ್ತು ಕೋಹಿಮಾಗಳಲ್ಲಿ ಬುಡ ಉರುಳಲು ಶತ್ರುವು ಪ್ರಯತ್ನಿಸುತ್ತಿದ್ದಾನೆ. ಇದು ಪ್ರಮುಖ ಪ್ರದೇಶವಲ್ಲ. ಅದ್ದರಿಂದ ಅವನ್ನು ಕೈ ಬಿಡಲಾಯಿತು. ಆದಾಗ್ಯೂ ಶತ್ರು ಸೈನಿಕರನ್ನು ಹಿಂದಟ್ಟುತ್ತಿರಲಾಗಿದೆ.

"ಇಂಫಾಲ್ ಇನ್ನೂ ನಮ್ಮ ವಶದಲ್ಲಿಯೇ ಇದೆ. ಅದನ್ನು ಶತ್ರುಗಳು ಆಕ್ರಮಿಸಿಲ್ಲ. ಅದನ್ನು ಬಲವಾಗಿ ರಕ್ಷಿಸುತ್ತಿರಲಾಗಿದೆ. ಇಂಫಾಲಿಗೆ ಅಲ್ಪ ಸ್ವಲ್ಪ ಶತ್ರುಯೋಧರು ಮುನ್ನುಗ್ಗಬಹುದು. ದೇಶದ ಸ್ವಾಭಾವಿಕ ಲಕ್ಷಣದ ದೆಸೆಯಿಂದ ಇದು ಸಾಧ್ಯವಾಗಬಹುದು. ಆದರೆ ಇಂಫಾಲ್ ಪತನವು ಅಷ್ಟು ಮುಖ್ಯವಲ್ಲ" ನೆಂದು ಅಮೇರಿಕನ್ ಪತ್ರಿಕೆಯೊಂದು ಅಭಿಪ್ರಾಯಪಟ್ಟಿರುವುದು ಸರಿಯಲ್ಲ, ಇಂಫಾಲ್ ಶತ್ರುವಶವಾಗಲು ಅವಕಾಶಕೊಡುವ ಉದ್ದೇಶವೆಂದಿಗೂ ಮಿತ್ರ ಸೇನಾಧಿಕಾರಿಗಳಿಗಿಲ್ಲ. ಇಂಫಾಲ್‌ನಿಂದ ಮಣಿಪುರದ ರಸ್ತೆಯ ಉತ್ತರದಲ್ಲಿ ಜಪಾನರು ಸ್ವಲ್ಪ ಮುಂದುವರಿದಿದ್ದಾರೆ. ಈಗ ನಡೆಯುತ್ತಿರುವ ಕದನದ ಫಲಿತಾಂಶದ ಬಗ್ಗೆ ನನಗೆ ಸಂಶಯವಿಲ್ಲ. ಜಪಾನ್ ದಾಳಿಯ ಗುಂಪನ್ನು ತಡೆಯಲು ಸಾಧ್ಯವಿಲ್ಲ. ಆದ್ದರಿಂದ ತಾತ್ಕಾಲಿಕವಾಗಿ ಇವು ಕೊಂಚಮಟ್ಟಿಗೆ ಯಶಸ್ವಿಯಾಗಬಹುದು. ಭಾರತಕ್ಕೆ ಹಾಗಿರಲಿ, ಅಸ್ಸಾಂ ಪ್ರಾಂತ್ಯಕ್ಕೂ ಎಂದೂ ಅಪಾಯವಿಲ್ಲವೆಂಬುದು ನನ್ನ ನಂಬಿಕೆ. ಕೊನೆಗೆ ಶತ್ರು ಸೈನಿಕರನ್ನು ಅವರ ಸ್ವಸ್ಥಾನಗಳಿಗೆ ಅಷ್ಟೆ ಅಲ್ಲ ಹಿಂದಕ್ಕೆ ಅಟ್ಟಲಾಗುವುದು ಖಂಡಿತವೆಂದು ನಾನು ತಿಳಿದಿದ್ದೇನೆ" ಎಂದು ತಿಳಿಸಿದ್ದಾರೆ.

ಕ್ಯಾಸಿನೋ ಕದನ ಫಲಿಸಲಿಲ್ಲ

"ಕ್ಯಾಸಿನೋ ಕದನ ಫಲಿಸಲಿಲ್ಲ" ಎಂದು ಅಮೇರಿಕ ಮತ್ತು ಕೆನಡಾಗಳ ಪತ್ರಿಕೆಗಳು ಬಹಿರಂಗವಾಗಿ ಹೇಳಿವೆ. ಹನ್ನೆರಡು ದಿನಗಳಿಂದ ಕ್ರೂರ ಕದನ ನಡೆಸಿದರೂ ಕ್ಯಾಸಿನೋ ಗುಡ್ಡದಲ್ಲಿರುವ ಮಠ ಹಿಡಿಯಲು ಮಿತ್ರರಿಗೆ ಆಗದಿರುವುದು ಸೋಲಿನ ಗುರುತು ಎಂದು [illegible] ಎಂಬ ಪತ್ರಿಕೆ ಹೇಳಿದೆ. "ಆದರೂ, ಈ ಕದನದಲ್ಲಿಯೇ ಸೋಲಾಯಿತೆಂದು ಹೇಳುವಹಾಗಿಲ್ಲ" ಎಂದು ವಾದಿಸಿದೆ. ಜರ್ಮನರು ಕ್ಯಾಸಿನೋವನ್ನು ಬಲವಾದ ಮಿಲಿಟರಿ ರಕ್ಷಣಾವ್ಯೂಹ ಕೇಂದ್ರವಾಗಿ ಮಾಡಿಕೊಂಡು ವರ್ತಿಸುತ್ತಿರುವರು. ಬಹುಕಠಿಣವಾದ ಕದನ ನಡೆಸಿ ಕ್ಯಾಸಿನೋ ನಗರದ ಕೆಲವು ಭಾಗಗಳನ್ನು ಮಿತ್ರರು ಹಿಡಿದಿರುವುದನ್ನೂ ಕಸಿದುಕೊಳ್ಳಲು ಜರ್ಮನರಿಗೆ ಅವಕಾಶವಿರುವಂತೆ ಕಂಡುಬಂದಿದೆ. ಈ ಠಾಣೆಯಲ್ಲಿ ಅವರು ಬಲವಾಗಿರುವರು ಎಂದು ಕೆಲವು ಸುದ್ದಿಗಾರರು ಹೇಳುತ್ತಿದ್ದಾರೆ. ಇಂತಹ ಕ್ಯಾಸಿನೋಗಳು ಈಗ ಉತ್ತರ ಇಟಲಿ ಹಾದಿಯಲ್ಲಿ ಹತ್ತಾರಿವೆ. ಒಂದೊಂದನ್ನೂ ಇದೇ ರೀತಿ ಜರ್ಮನರು ಬಲಪಡಿಸಿ ಮಿತ್ರರವೇಗವನ್ನೇ ಕುಗ್ಗಿಸಬಹುದು. ಕ್ಯಾಸಿನೋ ಕದನವು ಈಗ ಉಭಯ ಪಕ್ಷಗಳ ಗೌರವ ಪ್ರತಿಷ್ಠೆ ಪರೀಕ್ಷಿಸುವ ಸ್ಥಿತಿಯಲ್ಲಿದೆ. ಗೌರವ ಪ್ರತಿಷ್ಠೆಗಳನ್ನುಳಿಸಿಕೊಳ್ಳಲು ಯಾವ ಕದನದಲ್ಲೂ ಇಷ್ಟೊಂದು ನಷ್ಟವಾಗಿರಲಿಲ್ಲ ಎಂದು ಮಿತ್ರಸುದ್ದಿಗಾರರು ಹೇಳಿದ್ದಾರೆ.

ಹಂಗರಿಯ ಹೊಸ ಸರಕಾರದ ಅಂಗೀಕಾರವಿಲ್ಲ

ಫಿನ್ಲೆಂಡಿನಲ್ಲಿರುವ ಹಂಗೇರಿಯ ರಾಯಭಾರ ಮಂತ್ರಿಯು ಹಂಗೇರಿಯಲ್ಲಿ ಜನರಲ್ [illegible] ಮೇಲೆ ಸ್ಥಾಪಿತವಾಗಿರುವ ಹೊಸ ಸರಕಾರವನ್ನು ಅಂಗೀಕರಿಸಲು ನಿರಾಕರಿಸಿದ್ದಾರೆಂದೂ ತಿಳಿಸಲಾಗಿದೆ. ಇದರಂತೆಯೇ ಸ್ವೀಡನ್, ಸ್ವಿಟ್ಜರ್ಲೆಂಡ್ ಮತ್ತು ಪೋರ್ಚುಗಲ್ಲಿನಲ್ಲಿರುವ ಹಂಗೇರಿ ರಾಯಭಾರಿಗಳೂ ಕೂಡ ಹಂಗೇರಿಯ ಹೊಸ ಸರಕಾರವನ್ನು ಅಂಗೀಕರಿಸಿಲ್ಲ.

ಈಜಿಪ್ಟಿನಲ್ಲಿ ಬಿರುಗಾಳಿ ಅನಾಹುತ

ಈಜಿಪ್ಟಿನಲ್ಲಿ ಈಗ ಹಿಂದೆಂದೂ ಕಾಣದಂತಹ ಅತ್ಯಂತ ಬಿರುಸಾದ ಮರಳುಗಾಳಿಯೆದ್ದಿದೆ ಎಂದು ವರದಿಯಾಗಿದೆ. ಕಳೆದ ನಾಲ್ಕು ದಿನಗಳಿಂದ ಈ ಮರಳುಗಾಳಿಯಿಂದ ಈಜಿಪ್ಟು ಹೊರ ಪ್ರಪಂಚದಿಂದ ಪ್ರತ್ಯೇಕವಾಗಿ ಬಿಟ್ಟಂತಾಗಿದೆ. ಅಲೆಕ್ಸಾಂಡ್ರಿಯಾದಲ್ಲಿಯ ಒಂದು ದೊಡ್ಡ ಕಟ್ಟಡದ ಸೂರುಹಾರಿ ಹೋಗಿದೆ. ಈಜಿಪ್ಟಿನಿಂದ ಪ್ಯಾಲಸ್ಟೈನಿಗೆ ಹೋಗುತ್ತಿದ್ದ ಎರಡು ರೈಲುಗಳು ಮರಳಿನಲ್ಲಿ ಹೂತುಹೋಗಿವೆ. ಇಷ್ಟಾದರೂ ಆರ್ ಎ ಎಫ್ ವಿಮಾನಗಳೂ ಸಾವಿರಾರು ಮಂದಿ ಸೈನಿಕರೂ ಆ ರೈಲುಗಳನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ. ರೈಲಿನಲ್ಲಿದ್ದ ಪ್ರಯಾಣಿಕರಿಗೆ ಬೇಕಾದಂತಹ ವಸ್ತುಗಳನ್ನೆಲ್ಲಾ ಒದಗಿಸುತ್ತ ಅವರಿಗೆ ಸಹಾಯಮಾಡುತ್ತಿದ್ದಾರೆ.

ವಿಸೂವಿಯಸ್ ಅಗ್ನಿಪರ್ವತ

ಇಟಲಿಯಲ್ಲಿರುವ ವಿಸೂವಿಯಸ್ ಜ್ವಾಲಾಮುಖಿಯು ಲಾವಾ ಪ್ರವಾಹ ಹರಿಸುತ್ತಿರುವುದು ಕೊಂಚ ಇಳಿದಿದೆ, ಆದರೆ, ಬೂದಿಯನ್ನು ಉಗುಳುತ್ತಿರುವುದು ಬಲವಾಗಿದೆ. ನೇಪಲ್ಸ್ ಸಲೆರ್ನೋ ರಸ್ತೆಯಲ್ಲಿ ಬಿದ್ದಿದ್ದ ಟನ್‌ಗಟ್ಟಲೆ ಬೂದಿಯನ್ನು ತೆಗೆದು ಸಂಚಾರ ಸೌಕರ್ಯವನ್ನು ಮಿತ್ರರು ಏರ್ಪಡಿಸುತ್ತಿರುವರು. ಆಕಾಶದಲ್ಲಿ ಕವಿದಿರುವ ಬೂದಿಯಿಂದ ನೆಲದ ಮೇಲೆ ಸೂರ್ಯರಶ್ಮಿ ಬೀಳದಂತಾಗಿದೆಯೆಂದು ಹೇಳಲಾಗಿದೆ.

ಚಿರತೆ ಶಿಕಾರಿ

ಕಳೆದವಾರ ರಾಜಧಾನಿಯ ಸವಾರ್‌ಲೈನ್ "ಹಾರ್ಸ್ ಗ್ರೌಂಡ್ಸ್" ನಲ್ಲಿ ಚಿರತೆ ಬಂದಿದೆಯೆಂಬ ವರ್ತಮಾನ ಬಂದ ನಿಮಿತ್ತ ಶ್ರೀ ಟಿ ಬಿ ಕೃಷ್ಣ ಅರಸ್ ಎಂಬುವರು ಭರ್ಜಿಸಮೇತ ಕುದುರೆ ಮೇಲೆ ಕುಳಿತು ಅದನ್ನು ಶಿಕಾರಿ ಮಾಡಲು ಹೋದರಂತೆ. ಕುದುರೆ ಮೇಲೆ ಅವರು ಹೋಗುತ್ತಿದ್ದಾಗ, ಆ ಚಿರತೆಯು ಅವರನ್ನು ಕುದುರೆಯಿಂದ ಕೆಳಕ್ಕೆ ಕೆಡವಿ ಪೆಟ್ಟುಕೊಡುವಷ್ಟರಲ್ಲಿ, ಗುಂಡಿನ ಏಟಿನಿಂದ ಸತ್ತಿತು. ಶ್ರೀ ಕೃಷ್ಣೆಅರಸಿನವರಿಗೆ ಬಲಗೈಗೆ ಕೊಂಚ ಪೆಟ್ಟು ತಗಲಿದೆ. ಅವರು ಈಗ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವರೆಂದು ತಿಳಿದು ಬರುತ್ತದೆ.

ಪುರಾಣಪ್ರವಚನ ಸಮಾರಂಭ, ದೇವರವಾಡಿ

ಬೆಳಗಾಂವ ಜಿ|| ದೇವರವಾಡಿ ಗ್ರಾಮದಲ್ಲಿ ದನಗಳ ಬೇನೆಯು ಹರಡುತ್ತಿದ್ದುದನ್ನು ನಿವಾರಣೆ ಮಾಡುವಂತೆ ಆ ಗ್ರಾಮದ ಭಕ್ತರು ಶ್ರೀ ವೈದ್ಯನಾಥಸ್ವಾಮಿಗೆ ಪ್ರಾರ್ಥನೆಮಾಡಿಕೊಂಡಂತೆ ರೋಗವು ನಿವೃತ್ತಿಯಾದ್ದರಿಂದ ಸಂತೋಷಗೊಂಡ ಭಕ್ತರು ಸ್ವಾಮಿಯ ಸೇವೆಯನ್ನು ನಡೆಸಲು ವೇ|| ಪಂ|| ಶ್ರೀಶೈಲನಾಥ ಶಾಸ್ತ್ರಿಗಳು ಉದಾಸ್ತಿ ಹಿರೇಮಠ, ಖಡೇಬಜಾರ ಇವರನ್ನು ಆಹ್ವಾನಿಸಿದರು. ಅದರಂತೆ ಶ್ರೀ ಶಾಸ್ತ್ರಿಗಳು ಅಲ್ಲಿಗೆ ಆಗಮಿಸಿ ಶ್ರೀ ವರದ ಶಂಕರ ಪೂಜಾ ಮತ್ತು ಪುರಾಣ ಪ್ರವಚನವನ್ನು ನೆರವೇರಿಸಿ, ವರ್ಣಾಶ್ರಮ ಸ್ಥಾಪಕರಾದ ಶ್ರೀ ಪಂಚಾಚಾರ್ಯರ ಕೃಪೆಯು ಸರ್ವರಿಗೂ ಉಂಟಾಗಲೆಂದು ಕೋರಿ ಪಂಡಿತಪಾಮರರಿಗೂ ಆಬಾಲವೃದ್ಧರಿಗೂ ತಿಳಿಯುವಂತೆ ಶ್ರೀ ಭಗವಂತನ ಕಥಾಮೃತವನ್ನು ಶ್ರವಣಮಾಡಿಸಿದರು. ಇವರ ಬೋಧೆಯನ್ನು ಕೇಳಿದ ಸ್ವಮತ ಪರಮತೀಯರೆಲ್ಲರೂ ಭಕ್ತಿಭಾವದಿಂದ ಪರವಶತೆಯನ್ನು ಹೊಂದಿ ಜಯಘೋಷ ಮಾಡುತ್ತಿದ್ದರು. ಈ ಕಾಲದಲ್ಲಿ ವೈದ್ಯನಾಥಕ್ಷೇತ್ರವು ಕೈಲಾಸದಂತೆ ಒಪ್ಪುತ್ತಿತ್ತೆಂದು ಹೇಳಿದರೆ ಅತಿಶಯೋಕ್ತಿಯೆನಿಸದು. ಪುರಾಣ ಸಮಾಪ್ತಿಯಾದನಂತರ ದೇವರವಾಡಿಯ ಭಕ್ತರು ಅನ್ನಸಂತರ್ಪಣೆಯನ್ನು ನಡೆಸಿ ಶ್ರೀ ಹರಗುರು ಕೃಪೆಗೆ ಪಾತ್ರರಾದರು.

ಉತ್ಸವಭಾಗಿ.

ಸ್ವೀಕಾರ

ಬೆಳಗಾಂವ ಜಿ| ದೇವರವಾಡಿಯಲ್ಲಿ ನಡೆದ ಶ್ರೀ ವೈದ್ಯನಾಥ ಪುರಾಣಪ್ರವಚನಸಮಾರಂಭ ಸಮಯದಲ್ಲಿ ಪ್ರಭಾ ಪೋಷಣೆಗಾಗಿ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ಮ|| ರಾ|| ಲಿಂಗನಗೌಡ ಶಿವನಗೌಡ ಪಾಟೀಲ ಇವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

(೧ನೆಯ ಪುಟದಿಂದ ಮುಂದುವರೆದುದು)

ರಾಗಿ ಮಲಿನರಾಗುವರು, ದರಿದ್ರನಿಗೆ ಕಾಮಕ್ರೋಧಾದಿಗಳಿಂದ ದುರ್ಬುದ್ಧಿ ಬಂದರೂ ಕಾರ್ಯನಡೆಯುವದಿಲ್ಲವಾದ್ದರಿಂದ ಸಕಲ ಪಾಪವರ್ಗಗಳಿಗೂ ಲಕ್ಷ್ಮಿಯೇ ಕಾರಣಳಾಗುವಳು. ಇವಳು ಹ್ಯಾಗೆ ಹ್ಯಾಗ ವೃದ್ಧಿ ಹೊಂದುವಳೋ ಹಾಗೆ ಹಾಗೆ ಮಹಾರೋಗದಂತೆ ದುಃಖವನ್ನೇ ಬೆಳಸುವಳು, ವಿಷಯಲತೆಯ ಬೀಜವಂ ಬಿತ್ತುವವನಂತೆ ಇವಳಂ ಮನೆಯಂ ಸೇರಿಸಿ ವೃದ್ಧಿಗೊಳಿಸುವವನಿಗೆ ವ್ಯತಿಯೇ ಸಂಭವಿಸುವದು, ಹೀಗಿರ ವಲ್ಲಿ ಇವಳ ಸ್ವಭಾವವನಂ ಬಣ್ಣಿಸಲಶಕ್ಯದ್ದೇನು? ಸಮುದ್ರವೃಷ್ಟಿಯು ಪ್ರಚುರ, ಪರಾಕ್ರಮವಂ ಪೇಳಿಕೊಳ್ಳುವ ಶೂರನು ಜಗತ್ತಿನ ನಿಂದೆಗೊಳಗಾದ ಧನಿಕನು ಸಹ ದುರ್ಬಲರಾಗಿರುವರು ನನ್ನವಳೆಂದು ಅಭಿಮಾನಿಸಿದ ಮಾತ್ರದಿಂದ ಮದಾದಿವಿಕಾರವನ್ನುಂಟುಮಾಡುವದ್ದರಿಂದ ಈ ಲಕ್ಷ್ಮಿಯು ವಾರುಣಿ (ಮದ್ಯ) ಕದಿಕಳೆನಿಸಿಕೊಳ್ಳುವಳು ಸರ್ಪಗಳಿಗೆ ಗುಡಿಯಾಗಿ, ಮೋಹಗಳೆಂಬ ಆನೆಗಳಿಗೆ ವಿಂಧ್ಯಗಿರಿಯಾಗಿ, ಸತ್ಕರ್ಮಗಳೆಂಬ ಕಮಲಗಳಿಗೆ ರಾತ್ರಿಯಾಗಿ ದುಷ್ಕರ್ಮಗಳೆಂಬ ನೈದಿಲೆ ಪುಷ್ಪಗಳಿಗೆ ಬೆಳ್ದಿಂಗಳಾಗಿ, ಶುಭ್ರವೃಷ್ಟಿ ಎಂಬ ದೀಪಕ್ಕೆ ಬಿರುಗಾಳಿಯಾಗಿ, ಮನೋರಥಗಳೆಂಬ ತೆರೆಗಳಿಗೆ ಮಹಾನದಿಯಾಗಿ, ಭೋಗ ವೈಭವ ಸಂತೋಷಗಳೆಂಬ ಮೇಘಗಳಿಗೆ ಗಗನವಾಗಿ, ದುರ್ವಿಚಾರಗಳೆಂಬ ವಿಷಲತೆಗಳಿಗೆ ಮಹಾರಣ್ಯವಾಗಿ, ವಿಕಲ್ಪಗಳೆಂಬ ವೈರಿಗಳಿಗೆ ಗದ್ದೆಯಾಗಿ, ಮೋಹವೆಂಬ ವಿಷಕ್ಕೆ ಸರ್ಪವಾಗಿ, ವೈರಾಗ್ಯವೆಂಬ ತಾವರೆಗೆ ಹಿಮವಾಗಿ, ವಿಚಿತ್ರವಾದ ಕಾಮಕ್ರೋಧಾದಿಗಳೆಂಬ ಗೂಗೆಗಳಿಗೆ ಕೃಷ್ಣಪಕ್ಷದ ರಾತ್ರಿಯಾಗಿ ವಿವೇಕವೆಂಬ ಚಂದ್ರನಿಗೆ ರಾಹುವಿನ ಕೋರೆದಾಡೆಯಾಗಿ, ಸದ್ಗುಣವೆಂಬ ಕಮಲಕ್ಕೆ ಚಂದ್ರಿಕೆಯಾಗಿ, ಪ್ರಕಾಶಿಸುವ ಈ ಲಕ್ಷ್ಮಿಯು ಇಂದ್ರಧನುವಿನಂತೆಯು ಸಂಗೀತ ಶಾಸ್ತ್ರದಂತೆಯು ವಿಚಿತ್ರವಾದ ರಾಗಗಳಂ ಪ್ರಕಾಶಿಸುವಳು ಬಿಸಿಲು ದೊರೆಗಿಂತಲೂ ಅಧಿಕವಾಗಿ ವಂಚನೆಯನ್ನುಂಟುಮಾಡುವಳು ಪ್ರವಾಹದಂತೆ ನಿಲ್ಲದಿದ್ದರೂ ಮುಂಗಡೆಯಲ್ಲಿ ಭಂಗ (ಪರಾಜಯ)ವನ್ನೇ ತೋರುತ್ತಿರುವಳು ಅನೇಕ ಸೇನಾಸಮೂಹದಿಂ ರಕ್ಷಿಸಲ್ಪಡುತ್ತಿದ್ದಾಗ್ಯೂ ಗಾಳಿ ಬಡಿದ ದೀಪದಂತೆ ನಿಮಿಷಮಾತ್ರದಿಂದಲ್ಲಿಗೋ ಪೋಗುವಳು ಮತ್ತಿನ ಸರದಂತೆ ಸುಖಸ್ಪರ್ಶಳಾದ ಈ ಲಕ್ಷ್ಮಿಯು ಅಗ್ನಿಯಂತೆ ತನ್ನ ಆಶ್ರಯವನ್ನೇ ನಾಶಮಾಡುವಳು; ಈ ಪಿಶಾಚಿಯಿಂದ ಆವಿಷ್ಟನಾದ ಪುರುಷನು ವಿಶಾಲಾಕ್ಷನಾದರೂ ಕಂಗಾಣನಂತೆ ಸೇವಕರ ಮಾತಿನಿಂದ ದಾರಿಯಂ ತಿಳಿದು ನಡೆವನು ಮಹಾಬಲಿಷ್ಠನಾಗಿ ದೃಢವಾದ ಸರ್ವಾಂಗವುಳ್ಳವನಾದಾಗ್ಯೂ ಏಳಲು ಹಸ್ತಲಾಘವವನ್ನಪೇಕ್ಷಿಸುವನು ಪ್ರೌಢವಾದ ಬುದ್ಧಿಯುಳ್ಳವನಾದಾಗ್ಯೂ ಬಾಲಕನಂತೆ ವೃದ್ಧರನ್ನು ಪರಿಹಾಸವಂ ಮಾಡುವನು ಕೃತಜ್ಞನಾದಾಗ್ಯೂ ಕಣ್ಣಾರಿಯುಳ್ಳವನಂತೆ ಮಿತ್ರಮಂಡಲದ ಅಭ್ಯುದಯವಂ ಸಹಿಸಲಾರನು ಸಾಧುವಾದವಲ್ಲಿ ಕಿವುಡನಂತೆಯೂ, ಮೂಗನಂತೆಯೂ ಸ್ತಬ್ಧನಾಗಿರುವನು ಶಾಸ್ತ್ರಜ್ಞನಾದಾಗ್ಯೂ ತತ್ವವಂ ವಿಚಾರಿಸದೆ ಶೂರನಾದಾಗ್ಯೂ ಮನವಂ ನಿಗ್ರಹಿಸದೆ ಧೀರನಾದಾಗ್ಯೂ ವಿಷಯಗಳಿಗೆ ಚಪಲಪಡುತ್ತಾ ಪಂಡಿತನಾದಾಗ್ಯೂ ಹಿತಾಹಿತಜ್ಞಾನವಿಲ್ಲದೆ ವಂಚಕರಾದ ಜನಗಳಿಗೆ ವಶನಾಗಿ ಹುಚ್ಚನಂತೆ ಅಲೆಯುತ್ತಿರುವನು ಎಷ್ಟು ಸತ್ಕರ್ಮಗಳಂ ಮಾಡಿದಾಗ್ಯೂ ಎಷ್ಟು ಜ್ಞಾನಿಯಾದಾಗ್ಯೂ ಎಷ್ಟು ದಾನವಂ ಮಾಡಿದಾಗ್ಯೂ ಸದ್ವಿಚಾರಪರನಾದಾಗ್ಯೂ ಮೃದುಮಧುರೋಕ್ತಿಯುಕ್ತನಾದಾಗ್ಯೂ ಜಗತ್ಕಲ್ಯಾಣದಲ್ಲಾಸಕ್ತನಾಗಿದ್ದಾಗ್ಯೂ ಯಾವದಾದರು ಒಂದು ರೀತಿಯಿಂದ ಶ್ರೀಮಂತನು ನಿಂದಿತನಾಗುವನಲ್ಲದೆ ಸರ್ವಥಾ ಸರ್ವಶ್ಲಾಘ್ಯನಾಗುವುದಿಲ್ಲ, ತನ್ನಂ ಲಕ್ಷ್ಮಿಯು ರಕ್ಷಿಸುವದಿಲ್ಲವೆಂಬ ದ್ವೇಷದಿಂ ಧಾರ್ಮಿಕರಲ್ಲಿ ಸೇರಳು ತನಗೆ ನಿರ್ಬಂಧವಂ ಮಾಡುವರೆಂಬ ಮಿಥದಿಂ ಲೋಭಿಗಳಲ್ಲಿ ನಿಲ್ಲಳು ತನ್ನಂ ಬಲಾತ್ಕಾರದಿಂ ಪಿಡಿವನೆಂಬ ಕೋಪದಿಂ ಶೂರನಲ್ಲಿ ಬಹಲವಾಗುವಳು ಅಶಕ್ತನೆಂದು ಉಪೇಕ್ಷೆಯಿಂದ ಸಾಧುಗಳಂ ಸೇರಳು ಸರ್ವಪ್ರಕಾರದಿಂದಲೂ ಅಘಟಿತಘಟನಾ ಚತುರಳಾಗಿ ವಿಚಿತ್ರವಾದ ವ್ಯಾಪಾರವುಳ್ಳ ಈ ಲಕ್ಷ್ಮಿಯು ಜೀವನಾಧಾರವಾದ್ದರಿಂದಲೂ, ಆಧಿವ್ಯಾಧಿಗಳಿಗೆ ಉತ್ಪತ್ತಿಸ್ಥಾನವಾದ್ದರಿಂದಲೂ, ಇದ್ದರೂ ಇಲ್ಲದಿದ್ದರೂ ನಿರ್ವಾಹವಿಲ್ಲದೆ ಇರುವದು ಬರುವಲ್ಲಿಯೂ, ಹೋಗುವಲ್ಲಿಯೂ ಸಹ ಬಹು ದುಃಖವಾಗ್ದರಿಂದ ದುಃಖಸ್ವರೂಪಳೇ ಇವಳೆಂದು ತಿಳಿಯುತ್ತೇನೆ ಈಪರಿಯಿಂದ ವಿಲಕ್ಷಣರೂಪಳಾದ ಇವಳಂ ಲಕ್ಷ್ಮೀ ಎಂದು ಹ್ಯಾಗೆ ಪೇಳುವರೋ ![1] ತಿಳಿಯಲಿಲ್ಲ ಇವಳ ಮಾತಂತಿರಲಿ ಆಯುಸ್ಸಾದರೋ ಅರಳಿಯೆಲೆಯ ಕೊನೆಯಲ್ಲಿ ತಗಲಿಕೊಂಡಿರುವ ಜಲಕಣದಂತೆ ಚಪಲವಾಗಿರುತ್ತಾ ಅಕಾಲದಲ್ಲಿಯೇ ಶರೀರವಂ ಬಿಟ್ಟು ಹೋಗುವದು ಯಾರು ತೀಯತಕ್ಕುದಂ ತೀರದು ದೇಶಕಾಲವಸ್ತುಭೇದವಿಲ್ಲದೆ ಪರಿಪೂರ್ಣವಾಗಿರುವ ವಸ್ತುವಿನಲ್ಲಿ ವಿಶ್ರಾಂತಿಯಂ ಪಡೆದಿರುವರೋ ಅವರಿಗೆ ಲಾಭಾಲಾಭಗಳಲ್ಲಿ ವೈಷಮ್ಯವಿಲ್ಲದ್ದರಿಂದ ಆಯುಸ್ಸು ಸುಖಸಾಧಕವಾಗುವದು. ವಿಷಯಗಳೆಂಬ ಸರ್ಪಗಳ ಸಹವಾಸದಿಂ ಭಗ್ನಮನೋರಥವುಳ್ಳವರಾಗಿ ಆತ್ಮಾನಾತ್ಮ ವಿವೇಕವಿಲ್ಲದಿರುವ ಜನರಿಗೆ ಆಯುಸ್ಸು ಆಯಾಸಕ್ಕೆ ಸಾಧಕವಾಗಿರುವದು. ಆದ್ದರಿಂದ ಶರೀರದಲ್ಲಿ ಆತ್ಮಭಾವವುಳ್ಳ ನಮಗೆ ಸಂಸಾರವೆಂಬ ಮೇಘದೊಳ್ಮಿಂಚಿನಂತಿರುವ ಆಯುಸ್ಸು ಸಂತೋಷಕಾರಿಯಾಗುವುದಿಲ್ಲ ವಾಯುವನ್ನಾದರೂ ಮೊಟ್ಟೆಯಂತೆ ಕಟ್ಟಬಹುದು. ಆಕಾಶವನ್ನಾದರೂ ಖಂಡಿಸಬಹುದು ತರಂಗಗಳನ್ನಾದರೂ ಪುಷ್ಪಗಳಂತೆ ಶೇರಿಸಬಹುದು ಆಯುಸ್ಸನ್ನು ಮಾತ್ರ ನಂಬಲಾಗದು ಶರತ್ಕಾಲದ ಮೇಘದಂತೆಯು ಎಣ್ಣೆಯಿಲ್ಲದ ದೀಪದಂತೆಯು ಈ ಆಯುಸ್ಸು ನಂಬುವುದಕ್ಕೆ ಯೋಗ್ಯವಾದದ್ದಲ್ಲ

[ಸಶೇಷ]

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ) ..	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯ ಶತಕ ..	೨ ಆಣೆ
ಶಿವಶಕ್ತಿವಿಲಾಸ ..	೨ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ಬಿಲ್ವಮಾಹಾತ್ಮ್ಯೆ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ ..	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ ...	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ..	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ ..	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕದು)	೮ ಆಣೆ
ವೀರಶೈವಮಹಾತ್ಮರು ...	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಯವರ ಭಾಷಣಮು (ತೆಲುಗು)	೮ ಆಣೆ
ಶಬ್ದೋದ್ಧರತ್ನಾವಳಿ	೮ ಆಣೆ
ಆಗಮಪರಿಜ್ಞಾನ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
* ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
* ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧ ರೂ.
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ) ..	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) ...	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳುಳ್ಳದ್ದು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾನುವಾದ) ...	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ ಕಾರಣಾಗಮ ಮುಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ ...	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ) ..	೮ ರೂ
A brief life-sketch of Pandit Sri Kashinatha Shatriji (*English*)	4 As
The Philosophical Aspect of Virasaivism (*English*)	8 As.
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	८ आ.
षट्स्थलकारिका (संस्कृत) ..	२ आ.

* ಈ ಗುರುತು ಹಾಕಿರುವ ಪುಸ್ತಕಗಳು ಮುಗಿದುಹೋಗಿರುವುದರಿಂದ ದೊರೆಯುವುದಿಲ್ಲ. ಕೆಲವು ಪುಸ್ತಕಗಳು ಮುಗಿಯುತ್ತ ಬಂದಿರುವುದರಿಂದಲೂ ಕಾಗದದ ಬೆಲೆಯು ವಿಶೇಷವಾಗಿ ಏರುವುದರಿಂದಲೂ ಅವುಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಪ್ರಕಟಿಸಿ ಮುದ್ರಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಃ ॥ ॥ ಶ್ರೀಗುರುಃ ॥ REGISTERED No. M ...

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಾಕ್ಷರ್ಯುಪದೇಶಕರ್ ಪರತರಶ್ರೀಪಂಚಲಿಂಗೋದ್ಭವರ್

ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಜಾಪಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ. ೪ ಆಣೆ

ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೦ನೇ ಏಪ್ರಿಲ್ ೧೯೪೪ [ಸಂಚಿಕೆ ೪೯

ಶ್ರೀ ಜಗದ್ಗುರು ಪಂಚಾಚಾರ್ಯಾಯ ನಮಃ

ವೈರಾಗ್ಯದರ್ಪಣ

ಲೇ.— ಮಲ್ಲಿಕಾರ್ಜುನಾರಾಧ್ಯ, ರಾಣೇಬೆನ್ನೂರು ... ಮುದೇನೂರ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಮೃಗಪಕ್ಷಿಗಳೂ ತರುಲತಾದಿಗಳೂ ಸಹ ಬಹು ಕಾಲ ಬದುಕುವದಿಲ್ಲವೆ? ಅವರಿಂದೇನು ಯಾರು ಪಡೆಯತಕ್ಕದ್ದಂ ಪಡೆದು ಮರಳಿ ದುಃಖ ಒಲವಂತೆ ಪರಮಾನಂದಭರಿತರಾಗುವರೊ? ಅಜ್ಞಾನರೂಪವಾದ ಮನವು ತತ್ತ್ವಜ್ಞಾನದಿಂ ಯಾರಿಗೆ ನಷ್ಟವಾಗುವದೊ ಅವರ ಜೀವನವೇ ಜೀವನವೆನಿಸಿಕೊಳ್ಳುವದು. ಯಾರು ತತ್ವಜ್ಞಾನದಿಂ ಪುನರ್ಜನ್ಮವಂ ಪಡೆಯುವದಿಲ್ಲವೊ? ಅವರ ಜನ್ಮವೇ ಸಾರ್ಥಕವಾದುದಾದ್ದರಿಂದ ಮುದಿ ಕತ್ತೆಗಳಂತೆ ಮೂಢರಾದವರು ಹುಟ್ಟಲೇಬಲ್ಲವೆಂದು ತಿಳಿಯತಕ್ಕದ್ದು ಅವಿವೇಕಿಗೆ ಶಾಸ್ತ್ರವು, ರಾಗಾಂಧನಿಗೆ ಜ್ಞಾನವು, ಅಶಾಂತನಿಗೆ ಮನಸ್ಸು, ಅಜ್ಞಾನಿಗೆ ಶರೀರವೂ ಸಹ ಭಾರವೆನಿಸಿಕೊಳ್ಳುವದು. ರೂಪವು, ಮನಸ್ಸು, ಬುದ್ಧಿಯು, ಅಹಂಕಾರವೂ ಸಹ ದುರ್ಬುದ್ಧಿಗೆ ಭಾರವೇ ಆಗುವಲ್ಲಿ ರೋಗಗಳಿಗೂ, ಆಪತ್ತುಗಳಿಗೂ ಆಸ್ಪದವಾಗಿರುವ ಆಯುಸ್ಸು ಆಯಾಸಕ್ಕೆ ಸಾಧನವಾಗುವುದೆನ್ನುವುದರಲ್ಲಿ ಆಶ್ಚರ್ಯವೇನು? ಈ ಆಯುಸ್ಸು ಇಲಿಯಿಂದ ಹಳೇ ಹಗ್ಗದಂತೆ ಕಾಲನಿಂ ಕತ್ತರಿಸಲ್ಪಡುವದು ಶರೀರ ಬಿಲಗಳಲ್ಲಿ ನೆಲೆಸಿರುವ ರೋಗಗಳೆಂಬ ಸರ್ಪಗಳಿಂದ ವಾಯುವಿನಂತೆ ಭಕ್ಷಿಸಲ್ಪಡುವದು; ಹುಳುಗಳಿಂದ ಹಳೇ ಮರದಂತೆ ದುಃಖಗಳಿಂ ಛೇದಿಸಲ್ಪಡುವದು, ಬೆಕ್ಕಿನಿಂದ ಇಲಿಯಂತೆ ಮೃತ್ಯುವಿನಿಂದ ನೋಡಲ್ಪಡುತ್ತಿರುವದು. ಅತ್ಯಗ್ನಿಯಾದ ಪುರುಷನಿಂದ ಅನ್ನದಂತೆ ಜರೆಯಿಂದ ಜೀರ್ಣವಾಗುವುದು ಗುಣಜ್ಞನಾದ ಸತ್ಪುರುಷನಿಂದ ದುರ್ಜನನಂತೆ ಯವ್ವನದಿಂ ಬಿಡಲ್ಪಡುವದು, ವಿಟಪುರುಷನಿಂದ ಸೌಂದರ್ಯದಂತೆ ಯಮನಿಂದ ಅಪೇಕ್ಷಿಸಲ್ಪಡುವದು, ಆದ್ದರಿಂದ ಮರಣ ಭಾಜನವಾದ ಆಯುಸ್ಸಿನಂತೆ, ದುರ್ಗುಣವಾದದ್ದು ಯಾವದೂ ಇಲ್ಲವೆಂದು ತಿಳಿಯುತ್ತೇನೆ, ಅದೂ ಅಂತಿರಲಿ, ಅಜ್ಞಾನದಿಂ ವ್ಯರ್ಥವಾಗಿ ಬೆಳ್ಳಿ ವ್ಯರ್ಥವಾಗಿಯೆ ಜೀಕೆಯುತ್ತಿರುವ ಈ ಅಹಂಕಾರನೆಂಬ ಶತ್ರುವಿನಿಂದ ಭೀತನಾದ ನಾನು ಅನ್ನೋದಕಗಳನ್ನೇ ಬಿಟ್ಟಿರುವೆನಾದ್ದರಿಂದ ಭೋಗಗಳನ್ನೂ ಹಾಗೆ ಅಪೇಕ್ಷಿಸೆನು

ಈ ಸಂಸಾರದಲ್ಲಿ ಕಿರಾತಕನಂತೆ ಮಾಯಾಮಯವಾದ ಬಲೆಯಂ ಬೀಸಿರುವ ಈ ಅಹಂಕಾರದಿಂದಲೇ ದೈನ್ಯವು, ಆಪತ್ತುಗಳು, ಮನೋವ್ಯಥೆಗಳು ರಾಗಗಳು ರೋಗಂಗಳು, ದುಃಖಗಳು ಸಹಾ ಉಂಟಾಗಿರುವವು ಶಮವೆಂಬ ಚಂದ್ರನಿಗೆ ರಾಹುವಾಗಿ ಸದ್ಗುಣವೆಂಬ ಪದ್ಮಕ್ಕೆ ಹಿಮವೃಷ್ಟಿಯಾಗಿ ಸಮಾಧಾನವೆಂಬ ಮೇಘಕ್ಕೆ ಶರತ್ಕಾಲವಾಗಿರುವ ಈ ಅಹಂಕಾರವಂ ನಾನು ಸರ್ವ ವಿಧದಿಂದಲೂ ಬಿಟ್ಟುಬಿಡುವೆನು; ನಾನು ರಾಮನೂ ಅಲ್ಲ, ನನಗೆ ಅಪೇಕ್ಷೆಯೂ ಇಲ್ಲ, ಭೋಗವಸ್ತುಗಳಲ್ಲಿ ನನ್ನ ಮನಸ್ಸು ಇಲ್ಲ, ಜೈನನಂತೆ ಅಹಂಕಾರರಹಿತನಾಗಿ ಸರ್ವತ್ರ ಆತ್ಮದೃಷ್ಟಿಯಿಂ ಇರಬೇಕೆಂದಿಚ್ಛಿಸುತ್ತೇನೆ ಅಹಂಕಾರದಿಂ ತಿಂದದ್ದು, ಕೊಟ್ಟಿದ್ದು, ಹವನವಂ ಮಾಡಿದ್ದು, ಇತ್ಯಾದಿ ಕರ್ಮವೆಲ್ಲವು ನಿಷ್ಫಲವಾದ್ದರಿಂದ ನಿರಹಂಕಾರಿಯಾಗಿರುವುದೇ ಶ್ರೇಯಸ್ಕರವೆಂದು ತಿಳಿಯುತ್ತೇನೆ, ಅಹಂಕಾರವಿದ್ದಲ್ಲಿ ನಾನು ದುಃಖಿತನೆಂಬ ಮಾತು ಉಂಟಾಗುವುದು ಅದೇ ಇಲ್ಲದಿರುವಲ್ಲಿ ದುಃಖಪ್ರಸಕ್ತಿಯೂ ಇಲ್ಲವಾದ್ದರಿಂದ ನಿರಹಂಕಾರತ್ವವೇ ಉತ್ತಮವಾದದು ಯಾವತ್ಪರ್ಯಂತರ ಅಹಂಕಾರವಿರುವದೊ ತಾವತ್ಪರ್ಯಂತರ ಮೋಹದಿಂದ ಮತ್ತೆ ಸಾರ ಕುಟಜವೃಕ್ಷದಂತೆ ಆಶೆಯು ಪ್ರಕಾಶಿಸುವದು, ಅಹಂಕಾರ ಮೇಘವು ಶಾಂತವಾಗಲು ಆಶೆಯೆಂಬ ಮಿಂಚಿನ ಬಳ್ಳಿಯು ಆರಿಹೋದ ದೀಪದ ಶಿಖೆಯಂತೆ ಮಾಯವಾಗುವುದು, ಅಹಂಕಾರವೆಂಬ ವಿಂಧ್ಯಪರ್ವತದಲ್ಲಿ ಮನವೆಂಬ ಮದ್ದಾನೆಯು ಮೇಘದಂತೆ ಗರ್ಜಿಸುತ್ತಾ ಇರುವದು ದೇಹವೆಂಬ ಅರಣ್ಯದಲ್ಲಿ ಸಿಂಹದಂತಿರುವ ಅಹಂಕಾರವೆಂಬ ರಾಜನು ಪುಣ್ಯಪಾಪಗಳೆಂದೀ ಪ್ರಪಂಚವಂ ಬೆಳೆಸಿ ಆಶೆಯೆಂಬ ತಂತುವಿನಿಂ ಪೋಣಿಸಲ್ಪಟ್ಟ ಜನ್ಮಪರಂಪರೆಗಳೆಂಬ ಮುಕ್ತಾಹಾರಗಳಂ ಧರಿಸಿಕೊಂಡಿರುವನು ಅಹಂಕಾರವೆಂಬ ಮಾಯಾವಿಯು ಮಣಿಮಂತ್ರತಂತ್ರಗಳಿಂದ ಇಲ್ಲಿ ಗೃಹ ಕ್ಷೇತ್ರ ಧನ ಪತ್ನಿ ಪುತ್ರಮಿತ್ರಾದಿಸಾಧನಗಳಿಂದಲೇ ಈ ಜಗವಂ ಸ್ವಾಧೀನದಲ್ಲಿಟ್ಟುಕೊಂಡಿರುವನು. ಅಹಂಕಾರವೆಂಬ ಸ್ಥಾನವು ಹೋದೊಡನೆಯೇ ಆ ಸ್ಥಾನದಲ್ಲಿ ಸಂಚರಿಸುವ ಮನಸ್ಸೂ ಮನೋವ್ಯಥೆಗಳೂ ಸಹ ಮಾಯವಾಗುವವು ಆದ ಪ್ರಯುಕ್ತ ಸಮಸ್ತವಾದ ಆಪತ್ತುಗಳಿಗೂ ಕಾರಣವಾದ ಅಹಂಕಾರ ಲಕ್ಷಣವಂ ನಾನು ಬಿಡುವೆನು ಎಲೈ ಮಹಾಮುನಿಯೇ! ಕ್ಷುತ್ತಿನಲ್ಲಿ ರಸಾಯನ ದೊರೆತಂತೆಯೂ, ಅಕಾಲಮರಣಾವಸ್ಥೆಯಲ್ಲಿ ಅಮೃತ ದೊರೆತಂತೆಯೂ, ಅನಾವೃಷ್ಟಿಯಲ್ಲಿ ವೃಷ್ಟಿಗರೆದಂತೆಯೂ, ಕುರುಡನಿಗೆ ಕಣ್ಣು ಬಂದಂತೆಯೂ, ಇಷ್ಟಳಾಗಿ ಸುಜಾತಿಯಾದ ಪತ್ನಿಯಲ್ಲಿ ಪುತ್ರೋತ್ಸವವಾದಂತೆಯೂ, ಸ್ವಪ್ನದಲ್ಲಿ ಕಂಡ ಇಷ್ಟವಾದ ವಸ್ತುವು ಕರಗತವಾದಂತೆಯೂ, ಪ್ರಿಯ ಜನರ ದರ್ಶನವಾದಂತೆಯೂ, ಹೋದ ಪದಾರ್ಥವು ಸಿಕ್ಕಿದಂತೆಯೂ, ತಮ್ಮ ದರ್ಶನಲಾಭವು ನನಗೆ ಸಂತೋಷಕರವಾಗಿದೆ ತಮ್ಮ ಸಾನ್ನಿಧ್ಯದಿಂ ನಾನು ಬ್ರಹ್ಮಲೋಕದಲ್ಲಿರುವಂತೆಯೂ ಚಂದ್ರಮಂಡಲದಲ್ಲಿ ನಿಂತಿರುವಂತೆಯೂ ಸಂತುಷ್ಟನಾಗಿದ್ದೇನೆ ತಪೋಬಲದಿಂ ರಾಜರ್ಷಿಭಾವವನ್ನತಿಕ್ರಮಿಸಿ, ಲೋಹವಂ ಸುವರ್ಣವಾಗಿ ಮಾಡುವ ಸಿದ್ಧರಸದಂತೆ ಶರೀರವನ್ನು ಬ್ರಹ್ಮತೇಜೋಯುಕ್ತವಾಗಿ, ಮಾಡಿಕೊಂಡ ಮಹಾತ್ಮನಾದ ನಿನ್ನ ಕೃಪಾಕಟಾಕ್ಷದಿಂ ಗಂಗಾಜಲದಿಂದಭಿಷಿಕ್ತನಾದವನಂತೆ ಪರಿಶುದ್ಧನಾಗಿರುವೆನು ಬ್ರಹ್ಮಸಾಕ್ಷಾತ್ಕಾರದಿಂ ನಿತ್ಯತೃಪ್ತನಾಗಿರುವುದರಿಂದ ಇಚ್ಛಾ ಭಯ ಕ್ರೋಧಗಳಿಲ್ಲದವನಾಗಿ, ಪರಿಪೂರ್ಣಭಾವನಿಂದ ಅಹಂಕಾರವಿಲ್ಲದೆ ಕರ್ಮಗಳಂ ಮಾಡುತ್ತಿದ್ದರೂ ನಿರ್ಲೇಪನಾಗಿ, ದೇಹಭಾವವಿಲ್ಲದ್ದರಿಂದ, ನಿರಾಮಯರಾದ ತಮ್ಮ ಆಗಮನವು ಅನಿರೀಕ್ಷಿತವಾಗಿ ಆದದ್ದರಿಂದ ಪಂಚಾಪಹರ್ಷಚಿತ್ತನಾಗಿದ್ದೇನೆ ಆರೆ ಮೇಲೆ ವಿವರಿಸಿದ ವಿಷಯಗಳನ್ನತಿಕ್ರಮಿಸಿದ ತತ್ತ್ವವನ್ನೆನಗೆ ಉಪದೇಶವಂ ಮಾಡುವವನಾಗು ಹೇ ಮಹಾನುಭಾವನೆ ಸತ್ಕಾರ್ಯ ಸಮೂಹಗಳನ್ನು ಮಾಡದ ಕಾಮ ಕ್ರೋಧಾದಿಗಳಿಂದ ಜರ್ಜರಿತವಾಗುತ್ತಿದ್ದಾಗ್ಯೂ ಆಸ್ಥೆಗಳಂ ಬಿಡದ ಈ ಮನವು ಗಾಳಿಯಲ್ಲಿರುವ ನವಿಲುಗರಿಯಂತೆ ಪ್ರಾಣಿಗಳ ಗಂಗಳಂ ಚಂಚಲವಾಗಿ ಗ್ರಾಮದಲ್ಲಿ ನಾಯಿಯಂತೆ ಜಗತ್ತಿನಲ್ಲಿ ನಿರರ್ಥಕವಾಗಿ ಸುತ್ತುತ್ತಿರುವದು ಅರಣ್ಯದಲ್ಲಿ ತೃಣಾಪೇಕ್ಷಿಯಾದ ಮೃಗದಂತೆ ವಿಷಯಾಸಕ್ತಿಯಿಂದ ಹಳ್ಳಗಳಲ್ಲಿ ಬೀಳುವುದನ್ನು ನೋಡದೆ ಅಲೆಯುತ್ತಿದ್ದಾಗ್ಯೂ ಈ ಮನವು ಕೂಸ್ಯರೂಪವಾದ್ದರಿಂದ ಯಾವ ಪದಾರ್ಥವನ್ನೂ ಪಡೆಯುವುದಿಲ್ಲ ಒಂದು ವೇಳೆ ಸ್ವಾಗಳಂ ಪಡೆದಾಗ್ಯೂ ನೀರಿನಿಂದ ಹೂವಿನ ಬುಟ್ಟಿಯಂತೆ ಪೂರ್ಣವಾಗದೆ ತೃಪ್ತಿಯಿಲ್ಲದ್ದರಿಂದ, ಮಂದರಗಿರಿಯಿಂದ ಮಥಿಸಲ್ಪಡುವ ಕ್ಷೀರಸಮುದ್ರವು ನೀರಿನಂತೆ ಹಾರಿಬೀಳುತ್ತ ವಿಷಯಾನುಸಂಧಾನದಿಂ ದಿಕ್ಕು ದಿಕ್ಕುಗಳಲ್ಲಿಯೂ ಓಡಾಡುತ್ತಿರುವದು. ಸಂಕಲ್ಪಗಳೆಂಬ ತರೆಗಳಿಂದಲೂ ಮೋಹಾಲೋಚನೆ ವಂಚನೆಗಳೆಂಬ ಮೊಸಳೆ ಮತ್ಸ್ಯಗಳಿಂದಲೂ ತುಂಬಿರುವ ಮನವೆಂಬ ಸಮುದ್ರವಂ ನಾನು ಮಥಿಸಲಾರೆನು ವಿಷಯ ವಿಷಯಗಳಿಂದ ಹಿಂಡಿಸದಾದಾಗ್ಯೂ ಸಿಂಹದಂತೆ ಹೃದಯಪಂಜರದಲ್ಲಿ ಕಟ್ಟಲ್ಪಟ್ಟದಾಗ್ಯೂ, ಕಪಿಯಂತೆ ಈ ಮನಸ್ಸು ತನ್ನ ಚಪಲವೃತ್ತಿಯಂ ಬಿಡುವುದಿಲ್ಲ ಮೋಹವೆಂಬ ರಸವನ್ನೀರಿದ ಈ ಮನವು ನೀರಿನಿಂದ ಕ್ಷೀರವಂ ಸೆಳೆವ ಹಂಸದಂತೆ ಆತ್ಮನ ಸಮಭಾವವಂ ತಪ್ಪಿಸುವದು ಕಲ್ಪನಾರೂಪವಾದ ಹಾಸಿಗೆಯಲ್ಲಿ ಮಲಗಿರುವ ಮನೋವೃತ್ತಿಗಳು ಎಂದಿಗೂ ಬೋಧವಂ ಪಡೆಯುವದಿಲ್ಲ ತಸ್ಮಾತ್ ದುಃಖಪಡುವೆನು ಆಶಾಪಾಶಸ್ವರೂಪವಾದ ಮನವೆಂಬ ಬಲೆಯಿಂದ ನಾನು ಪಕ್ಷಿಯಂತೆ ಬದ್ಧನಾಗಿರುವೆನು ಈ ಮನದಿಂದ ನಾನು ಅಗ್ನಿಯಿಂದ ತರಗೆಲೆಯಂತೆ ಸುಡಲ್ಪಡುವೆನು ಕ್ರೂರವಾದ ಶುನಕದಿಂ ಶವದಂತೆ ಭಕ್ಷಿಸಲ್ಪಡುವೆನು. ಪ್ರವಾಹದಿಂ ದಡದಲ್ಲಿರುವ ವೃಕ್ಷದಂತೆ ಸೆಳೆಯಲ್ಪಡುವೆನು. ಬಿರುಗಾಳಿಯಿಂ ತೃಣದಂತೆ ಹಾರಿಸಲ್ಪಡುವೆನು ಸ್ವರ್ಗಪಾತಾಳಗಳಿಗೆ ಹೋಗುತ್ತಿರುವ ಈ ಮನದಿಂ ನಾನು ಹಗ್ಗದಿಂ ಬಾವಿಯ ರಾಟವಾಳದಂತೆ ಬದ್ಧನಾಗಿರುವೆನು ಭ್ರಾಮಕವಾದ ಬಾಲಗ್ರಹದಿಂ ಬಾಲಕನಂತೆ ಹಿಡಿಯಲ್ಪಡುವೆನು ಅಗ್ನಿಗಿಂತಲೂ ಸಂತಾಪಕರವಾಗಿ, ಸರ್ಪಕ್ಕಿಂತಲೂ ವಿಷಮಗತಿಯಾಗಿ, ಪರ್ವತಕ್ಕಿಂತಲೂ ಕಠಿನವಾಗಿ, ಸಿಡಿಲಿಗಿಂತಲೂ ಕ್ರೂರವಾದ ಪ್ರಹಾರವೇಗವುಳ್ಳ ಈ ಗ್ರಹವು ನಿಗ್ರಹಿಸಲಶಕ್ಯವಾಗಿರ್ಪುದು ಆಡುವ ಬಾಲಕನು ಮತ್ತೊಂದಾಟದಿಂ ಮೊದಲಿನ ಆಟವಂ ಬಿಡುವಂತೆ, ಈ ಮನವು ವಿಷಯಾಂತರ ದರ್ಶನದಿಂದ ಪೂರ್ವ ವಿಷಯವಂ ಬಿಡುವದು ಅಗ್ನಿಯಂ ಭಕ್ಷಿಸುವುದಕ್ಕಿಂತಲೂ, ಮೇರುವಂ ಕೀಳುವುದಕ್ಕಿಂತಲೂ ಈ

(೩ನೆಯ ಪುಟವನ್ನು ನೋಡಿ)

ಚಂದಾದಾರರಲ್ಲಿ ವಿಜ್ಞಾಪನೆ

ಇತ್ತೀಚೆಗೆ ಪ್ರಿಂಟಿಂಗಿಗೆ ಸಂಬಂಧಪಟ್ಟ ಎಲ್ಲ ಸಾಮಾನುಗಳಿಗೂ ವಿಶೇಷಬೆಲೆಯು ಏರಿರುವುದರಿಂದ ನಮ್ಮ ಪತ್ರಿಕೆಯ ಚಂದಾ ಹಣವನ್ನು 4 ಆಣೆ ಹೆಚ್ಚಿಸಿರುತ್ತೇವೆ ಚಂದಾದಾರರು ಇನ್ನು ಮುಂದೆ 3—0—0 ರೂ ಗಳನ್ನು ಮನಿಯಾರ್ಡರು ಮೂಲಕ ಕಳುಹಿಸಬೇಕು ವಿ ಪಿ ಮಾಡುವದಾದರೆ 3—4—0 ರೂಗಳು ಬೀಳುವದು ಮ್ಯಾನೇಜರ್

ಪಂಚಾಚಾರ್ಯಪ್ರಭಾ.

೧೯೪೪ನೆಯ ಏಪ್ರಿಲ್ ತಾ|| ೧೦ನೇ ಸೋಮವಾರ

ಆರ್ಯಧರ್ಮ.

ನಮ್ಮ ಭರತಖಂಡದಲ್ಲಿ ಆರ್ಯ ಮತ್ತು ಅನಾರ್ಯ ಎಂಬ ಎರಡು ಜನಾಂಗಗಳುಂಟು ಶಾಸ್ತ್ರವನ್ನೂ ಶಾಸ್ತ್ರದಲ್ಲಿ ಹೇಳಲ್ಪಡುವ ಗುರುದೇವರನ್ನೂ ಆಚಾರಪದ್ಧತಿಗಳನ್ನೂ ಮೀರದಂತೆ ನಡೆಯುತ್ತಿರುವವರೇ ಆರ್ಯರೆನಿಸಿಕೊಳ್ಳುತ್ತಾರೆ ಇವುಗಳಿಗೆ ವಿರುದ್ಧವಾಗಿ ನಡೆಯುವವರೇ ಅನಾರ್ಯರೆನಿಸಿಕೊಳ್ಳುವುದಕ್ಕೂ ಅವರವರ ನಡತೆಗಳೇ ಕಾರಣಗಳಾಗಿರುತ್ತವೆ ಪ್ರಪಂಚದಲ್ಲಿ ಹುಟ್ಟಿದ ಮನುಷ್ಯಮಾತ್ರಕ್ಕೇನೇ ಇದು ಒಳ್ಳೆಯದು ಇದು ಕೆಟ್ಟದು ಎಂಬ ವಿವೇಕವನ್ನು ದೇವರು ಕೊಟ್ಟಿರುವುದರಿಂದ ಆ ವಿವೇಕವನ್ನು ಸರಿಯಾದ ಮಾರ್ಗದಲ್ಲಿ ಉಪಯೋಗಿಸಿಕೊಳ್ಳಬೇಕಲ್ಲದೆ ದುರ್ಮಾರ್ಗದಲ್ಲಿ ಉಪಯೋಗಿಸಿಕೊಳ್ಳಬಾರದು. ವಿವೇಕವಿಲ್ಲದ ಹುಟ್ಟಿದ ಮನುಷ್ಯಜನ್ಮವನ್ನೆತ್ತಿದ ಮೇಲೆ ವಿವೇಕಿಯಾಗಿ ನಡೆಯಬೇಕಲ್ಲದೆ ಮೂಕಪ್ರಾಣಿಗಳೆನಿಸಿದ ಪಶು ಪಕ್ಷಿಗಳಂತೆ ನಿಷಿದ್ಧಮಾರ್ಗದಲ್ಲಿ ನಡೆಯಬಾರದೆಂದು ಹಿಂದಿನ ಮಹರ್ಷಿಗಳು ಧರ್ಮಶಾಸ್ತ್ರಗಳನ್ನು ಬರೆದಿಟ್ಟಿರುತ್ತಾರೆ ಈ ಧರ್ಮಶಾಸ್ತ್ರಗಳನ್ನು ಮಹರ್ಷಿಗಳು ಸ್ವತಃ ತಮ್ಮ ಮನಸ್ಸಿಗೆ ಬಂದ ಹಾಗೆ ತಾವೇ ಕಲ್ಪಿಸಿಲ್ಲ ಅಪೌರುಷವಾಣಿಯೆನಿಸಿದ ಶ್ರುತಿದೇವಿಯು ವಿಧಿಸಿರುವ ದಿವ್ಯವಚನಗಳನ್ನೇ ಧರ್ಮಶಾಸ್ತ್ರಗಳಲ್ಲಿ ಅನುವಾದ ಮಾಡಿರುತ್ತಾರೆ ಶ್ರುತಿಯೆಂಬುದು ಜಗತ್ಕರ್ತನಾದ ಭಗವಂತನ ಆಜ್ಞಾರೂಪವಾದ ವಾಕ್ಯವು ನಮ್ಮನ್ನು ಸೃಷ್ಟಿಸಿದ ದೇವರ ಆಜ್ಞೆಯನ್ನು ನಾವು ಎಂದೂ ಮೀರಬಾರದು

ಯಸ್ಯಾಜ್ಞಯಾ ಜಗತ್ಸ್ರಷ್ಟಾ ವಿರಿಂಚಿಃ ಪಾಲಕೋ ಹರಿಃ ।
ಸಂಹರ್ತಾ ಕಾಲರುದ್ರಾಖ್ಯೋ ನಮಸ್ತಸ್ಮೈ ಪಿನಾಕಿನೇ

ಸರ್ವಸಾಕ್ಷಿಯಾದ ಆ ಪರಶಿವನ ಆಜ್ಞೆಯಿಂದಲೇ ಚತುರ್ಮುಖಬ್ರಹ್ಮನು ಜಗತ್ತನ್ನು ಸೃಷ್ಟಿಸಿದನು ವಿಷ್ಣುವು ಆ ಜಗತ್ತನ್ನು ಪಾಲಿಸುವನು ರುದ್ರನು ಸಂಹರಿಸುವನು ಎಂಬ ಆಗಮೋಕ್ತಿಯಂತೆ ತ್ರಿಮೂರ್ತಿಗಳೇ ಈಶ್ವರಾಜ್ಞೆಯನ್ನು ಒಂದು ಕ್ಷಣವೂ ಬಿಡದಂತೆ ನಡೆಸುತ್ತಿರುವರೆಂದು ಹೇಳುವಲ್ಲಿ, ಇನ್ನು ಅಲ್ಪಜ್ಞರಾದ ಮಾನವರು ಅಂಥ ಈಶ್ವರಾಜ್ಞೆಯನ್ನು ಮೀರಿ ನಡೆಯಬಹುದೇ? ಆದ್ದರಿಂದ ವೇದಾಜ್ಞೆಯೆಂಬುದು ರಾಜಾಜ್ಞೆಯಂತೆ ಬಹಳ ಬಲವತ್ತರವಾದುದು ಲೋಕದಲ್ಲಿ ರಾಜನಾದವನು ತನ್ನ ರಾಜ್ಯದ ಪ್ರಜೆಗಳ ಕ್ಷೇಮಕ್ಕೋಸ್ಕರ ಒಂದು ಶಾಸನವನ್ನು ಮಾಡುತ್ತಾನೆ ಆ ಶಾಸನವನ್ನು ಯಾರು ಅತಿಕ್ರಮಿಸಿ ನಡೆಯುವರೋ ಅವರಿಗೆ ತಕ್ಕ ಶಿಕ್ಷೆಯನ್ನು ವಿಧಿಸಲು ಒಂದೊಂದು ಭಾಗಗಳನ್ನು ನಿಯಮಿಸಿರುತ್ತಾನೆ ಆ ಶಾಸನವನ್ನು ಎಲ್ಲರೂ ಪುರಸ್ಕರಿಸಲೇ ಬೇಕು.

ರಾಜಾಜ್ಞಾಭಂಗಕರ್ತೄಣಾಂ ಯಥಾ ದಂಡೋ ಭವಿಷ್ಯತಿ ।
ಶಿವಾಜ್ಞಾಭಂಗಕರ್ತೄಣಾಂ ದಂಡೋ ಹಿ ನರಕಸ್ತಥಾ ॥

ಎಂದು ವ್ಯಾಸಮಹರ್ಷಿಗಳು ಶ್ರುತಿರೂಪವಾದ ಭಗವಂತನಾಜ್ಞೆಯು ರಾಜಾಜ್ಞೆಯಂತೆ ಬಲವತ್ತರವಾದುದೆಂದು ಶಂಕರಸಂಹಿತೆಯಲ್ಲಿ ಉಲ್ಲೇಖಿಸಿದ್ದಾರೆ ಒಂದೊಂದು ರಾಜ್ಯಕ್ಕೆ ಒಬ್ಬೊಬ್ಬ ರಾಜನು ಹೇಗೆ ನಿಯಾಮಕನಾಗಿರುತ್ತಾನೆಯೋ ಹಾಗೆಯೇ ಚತುರ್ದಶಭುವನಕರ್ತನಾದ ಭಗವಂತನು ಸರ್ವನಿಯಾಮಕನಾಗಿರುತ್ತಾನೆಂದು ತಿಳಿದು ಸರ್ವಮಾನವರೂ ಆ ಭಗವಂತನ ಆಜ್ಞಾರೂಪವಾದ ವೇದಗಳನ್ನು ಮೀರದೆ ವಿಧಿಬದ್ಧರಾಗಿ ನಡೆಯಲೇಬೇಕೆಂಬುದೇ ಮಹರ್ಷಿಗಳ ಆಶಯವಾಗಿರುವದು ಅಂಥ ಈಶ್ವರಾಜ್ಞಾರೂಪಗಳಾದ ಶಾಸ್ತ್ರನಿಯಮಗಳೆಲ್ಲವೂ ಕಾಲಮಹಿಮೆಯಿಂದ ನಶಿಸಿಹೋಗುತ್ತ ಬಂದಿರುತ್ತವೆ ಪ್ರತಿಯೊಬ್ಬ ಮನುಷ್ಯನೂ ಸ್ವತಂತ್ರನಾಗಬೇಕೆಂದು ಬಯಸಹತ್ತಿರುತ್ತಾನೆ ಅನೇಕಕಡೆಗಳಲ್ಲಿ ಪ್ರಜೆಗಳು ನಮಗೆ ರಾಜನೇ ಬೇಡ ರಾಜಶಾಸನವಂತೂ ದೂರವಾಗಿರಲಿ ಪ್ರಜಾಸತ್ತಾತ್ಮಕವಾದ ರಾಜ್ಯವೇ ಉತ್ತಮರಾಜ್ಯವೆಂಬ ಭಾವನೆಯಿಂದ ನಿಯಾಮಕನಾದ ಮಹಾರಾಜನನ್ನೂ ಮತ್ತು ಆ ರಾಜಶಾಸನವನ್ನೂ ತಳ್ಳಲು ಹವಣಿಸುತ್ತಿರುವರು ಲೋಕದಲ್ಲಿ ಹೇಗೆ ಹೇಗೆ ರಾಜಕೀಯ ಪ್ರಾಚೀನಶಾಸನನಿಯಮಗಳೆಲ್ಲ ಬದಲಾವಣೆಹೊಂದುತ್ತ ಬಂದವೋ ಹಾಗೆ ನಮಗೆ ದೇವರೂ ಬೇಡ ದೇವರ ಶಾಸನವೂ ಬೇಡ ನಮ್ಮ ನಮ್ಮ ಇಚ್ಛಾನುಸಾರವಾಗಿ ಹಳೆಯ ನಿಯಮಗಳನ್ನು ತೆಗೆದು ಹೊಸ ನಿಯಮಗಳನ್ನು ಮಾಡಿಕೊಳ್ಳುತ್ತೇವೆಂದು ಸಾರ್ವಭೌಮಿಕರಾಜ್ಯದ ಮೇಲೂ ದಾಳಿಯನ್ನೆಬ್ಬಿಸಿರುತ್ತಾರೆ ಬಾಯಲ್ಲಿ ಮಾತ್ರ ತಾವು ಭಾರತಮಾತೆಯ ಪುತ್ರರೆಂದು ಹೇಳುತ್ತ ಎಲ್ಲೆಲ್ಲಿಯೂ ವಂದೇ ಮಾತರಂ ಎಂಬ ಶಂಖನಾದವನ್ನು ಮಾಡುತ್ತಾರೆ ತಾಯಿಯಲ್ಲಿ ಮಾತಿನಿಂದ ಪೂಜ್ಯಬುದ್ಧಿಯನ್ನು ತೋರಿಸುವಂತೆ ತ್ರಿಕರಣದಲ್ಲಿಯೂ ತೋರಿಸುವದು ಉತ್ತಮರ ಲಕ್ಷಣವೆಂಬುದನ್ನು ಮಾತ್ರ ಮರೆತುಬಿಟ್ಟಿರುತ್ತಾರೆ ಸತ್ಪುರುಷರು ಮನಸ್ಸಿನಲ್ಲಿ ಯಾವುದನ್ನು ನೆನೆಸುವರೋ ಬಾಯಿಯಲ್ಲಿ ಅದನ್ನೇ ಮಾತಾಡುತ್ತಾರೆ ಬಾಯಲ್ಲಿ ಯಾವುದನ್ನು ಮಾತಾಡುತ್ತಾರೆಯೋ ಅದನ್ನೇ ಶರೀರದಿಂದಲೂ ಮಾಡುತ್ತಾರೆ ಇದಕ್ಕೆ ವಿಪರೀತವಾಗಿರುವವರು ಮಾತ್ರ ಬಾಯಲ್ಲಿ ಹೇಳುವುದು ಒಂದು, ಮನಸ್ಸಿನಲ್ಲಿ ನೆನೆಯುವುದು ಒಂದು ಶರೀರದಲ್ಲಿ ನಡೆಸುವುದೇ ಒಂದು. ಹೀಗೆ ಮಾಡುವದು ಉತ್ತಮರ ಲಕ್ಷಣವಲ್ಲ ಬಾಯಲ್ಲಿ ಭಾರತಮಾತೆಯಲ್ಲಿ ಪೂಜ್ಯಬುದ್ಧಿಯನ್ನು ತೋರಿಸಿದ ಮೇಲೆ ಆ ಮಾತೆಯ ಆಜ್ಞಾಮಾಲಿಕೆಯನ್ನು ಆದ್ಯಂತವಾಗಿ ಶಿರಸ್ಸಿನಲ್ಲಿ ಧರಿಸಬೇಡವೆ? ಆ ಆಜ್ಞೆಯಾವದೂ ಶ್ರುತ್ಯಾದ್ಯನುರೂಪವಾಗಿದೆ ಇವುಗಳ ಅರ್ಥವನ್ನೂ ಧರ್ಮಶಾಸ್ತ್ರವನ್ನೂ ತಿಳಿಯಬೇಕೆಂದು ಮಹರ್ಷಿಗಳು ತತ್ತ್ವಶಾಸ್ತ್ರವನ್ನು ಬರೆದು ಆ ತತ್ತ್ವಶಾಸ್ತ್ರಕ್ಕೂ ಧರ್ಮಶಾಸ್ತ್ರಕ್ಕೂ ಕಾರ್ಯಕಾರಣಭಾವವನ್ನು ತೋರಿಸಿ ಧರ್ಮಾನುಷ್ಠಾನವಿಲ್ಲದವನಿಗೆ ತತ್ತ್ವಶಾಸ್ತ್ರದ ನಿಜಾನುಭವನಾಗಲಾರದೆಂದು ಸ್ಪಷ್ಟಪಡಿಸಿದರು ಆದ್ದರಿಂದ ಬಾದರಾಯಣಮಹರ್ಷಿಗಳು ಸೂತ್ರರೂಪದಿಂದ ತತ್ತ್ವಶಾಸ್ತ್ರವನ್ನು ಬರೆಯಲುಪಕ್ರಮಿಸಿ ಪ್ರಾರಂಭದಲ್ಲಿ 'ಅಥಾತೋ ಬ್ರಹ್ಮಜಿಜ್ಞಾಸಾ' ಮೊದಲು ಧರ್ಮಾನುಷ್ಠಾನವನ್ನು ಮಾಡಿ ಚಿತ್ತಶುದ್ಧಿ ಪಡೆದ ಮೇಲೆ ಬ್ರಹ್ಮವನ್ನು ತಿಳಿಯಲು ಅಧಿಕಾರಿಯಾಗುವನೆಂದು ಹೇಳಿ "ಅನಾವೃತ್ತಿಃ ಶಬ್ದಾದನಾವೃತ್ತಿಃ ಶಬ್ದಾತ್" ಎಂಬ ಕೊನೆಯಸೂತ್ರದಲ್ಲಿ ಹೀಗೆ ಧರ್ಮಾನುಷ್ಠಾನಪೂರ್ವಕ ಬ್ರಹ್ಮಚಿಂತನೆಮಾಡುವವನು ಜನನಮರಣರೂಪವಾದ ಸಂಸಾರಸಮುದ್ರದಲ್ಲಿ ಬೀಳಲಾರನೆಂದು ತೀರ್ಮಾನಿಸಿರುತ್ತಾರೆ ಹೀಗೆ ಭಗವತಿಯಾದ ಶ್ರುತಿಯಲ್ಲಿ ಹೇಳಿದ ಧರ್ಮಗಳನ್ನು ಅನುಷ್ಠಿಸುತ್ತ ಆ ಶ್ರುತಿದೇವಿಯ ಕರ್ತನಾದ ಪರಮಾತ್ಮನ ಚಿಂತನೆಯಲ್ಲಿ ಕಾಲಕಳೆಯುತ್ತ ಜನ್ಮಸಿದ್ಧವಾದ ತಮ್ಮ ಆರ್ಯ ಎಂಬ ಪವಿತ್ರಾಭಿಧಾನವನ್ನು ಅನ್ವರ್ಥಕಗೊಳಿಸಿಕೊಳ್ಳುವುದೇ ಭಾರತೀಯರ ಮುಖ್ಯ ಕರ್ತವ್ಯವಾಗಿರುತ್ತದೆ ಅದನ್ನು ಬಿಟ್ಟು ಆರ್ಯಧರ್ಮವೆನಿಸಿದ ನಿತ್ಯನೈಮಿತ್ತಿಕ ಕಾಮ್ಯಪ್ರಾಯಶ್ಚಿತ್ತಾದಿ ಕರ್ಮಗಳಲ್ಲಿ ಆಸಕ್ತಿಯನ್ನಿಡದೆ ಗುರುದೇವರಲ್ಲಿ ಭಕ್ತಿಯನ್ನು ತೋರಿಸದೆ ಭಾರತೀಯರ ವಿರುದ್ಧವಾದ ಉಡಿಗೆತೊಡಿಗೆಗಳನ್ನೂ ಆಹಾರವಿಹಾರಾದಿಗಳನ್ನೂ ಮಾಡುತ್ತ "ಸತ್ಯಂವದ, ಧರ್ಮಂಚರ, ಆಚಾರ್ಯದೇವೋಭವ, ಮಾತೃದೇವೋಭವ, ಪಿತೃದೇವೋಭವ" ಇತ್ಯಾದಿ ಮಹಾವಾಕ್ಯಗಳಿಗೆ ತಿಲಾಂಜಲಿಯನ್ನು ಕೊಡುವುದರಲ್ಲಿ ತಮ್ಮ ಶಕ್ತಿಸಾಹಸಗಳನ್ನೆಲ್ಲ ಉಪಯೋಗಿಸುತ್ತ ಬಾಯಲ್ಲಿ ಮಾತ್ರ ನಾವು ವೇದಾವಲಂಬಿಗಳಾದ ಆರ್ಯವರ್ಗದವರೆಂದು ವಿಜೃಂಭಿಸುವವರು ಹೇಗೆತಾನೆ ಆರ್ಯರೆನಿಸುವರು? ಆದುದರಿಂದ ಆರ್ಯರೆನಿಸುವವರು ತಮ್ಮ ಆರ್ಯರ ಧರ್ಮಬಿಡದೆ ಆಚರಿಸಿ ನುಡಿಯಂತೆ ನಡೆದು ಪರಮಾತ್ಮನ ಪ್ರೀತಿಗೆ ಪಾತ್ರರಾಗಿ ಸದ್ಗತಿಯನ್ನು ಪಡೆಯುವ ಮಾರ್ಗವನ್ನು ಹೊಂದಬೇಕೆಂದಾಶಿಸುತ್ತೇವೆ

ಯುದ್ಧವಾರ್ತೆ

ದಂಡನಾಯಕರಿಂದ ಪರೀಶೀಲನೆ

ಕಳೆದ ೫ ನೇ ತಾ|| ಭಾರತ ದಂಡನಾಯಕ ಸರ್ ಆರ್ಚಿಲೆಕ್‌ರವರು ಮದರಾಸು ರೇವು ಪ್ರದೇಶವನ್ನೂ ಮತ್ತು ಮದರಾಸಿನಲ್ಲಿರುವ ವಿಮಾನ ವಿನಾಶಕ ಫಿರಂಗಿಗಳಿರುವ ವ್ಯೂಹದ ರೀತಿಯನ್ನೂ ಪರಿಶೀಲಿಸಿದರು. ಅಲ್ಲಿಂದ ಬೆಂಗಳೂರಿನ ಪರಿಶೀಲನೆಗಾಗಿ ರೈಲಿನಲ್ಲಿ ಪ್ರಯಾಣಮಾಡಿದರು

ಮಣಿಪುರಾಧಿಪತಿಗಳ ಸಂಕಲ್ಪ

೧೯೪೧ ರಲ್ಲಿ ಸಿಂಹಾಸನವನ್ನೇರಿದ ಮಣಿಪುರದ ರಾಜ ಬೋಧಚಂದ್ರಸಿಂಗ್‌ರವರು ಶತ್ರುಗಳ ವಿಮಾನ ದಾಳಿಗಳಿಗಂಜದೇ ರಾಜಧಾನಿಯಾದ ಇಂಫಾಲ್‌ನಲ್ಲೇ ಇರುವರು ಹಿಂದೊಂದುಬಾರಿ ದಾಳಿಕಾಲದಲ್ಲಿ ಮಿಲಿಟರಿ ಪೋಲೀಸರು ಈ ಅರಸರನ್ನು ತಡೆದು ನಿಮ್ಮ ಗುರುತೇನೆಂದು ವಿಚಾರಿಸಿದ್ದರಂತೆ ಅಂದಿನಿಂದ ಇವರು ತಮ್ಮ ಬಳಿ ರಾಜತನದ ಗುರುತಿನ ಬಿಲ್ಲೆ ಇಟ್ಟುಕೊಳ್ಳುವ ವಾಡಿಕೆ ಮಾಡಿಕೊಂಡಿರುವರಂತೆ ಪತ್ರಿಕಾ ವರದಿಗಾರನೊಬ್ಬನು ಮೊನ್ನೆ ಈ ರಾಜರನ್ನು ಭೇಟಿಮಾಡಿ ಸಂಭಾಷಿಸಿದಾಗ ಅವರು, ನನ್ನ ಪ್ರಜೆಗಳೊಂದಿಗೆ ನಾನಿರಬೇಕಾದುದು ನನ್ನ ಧರ್ಮ ನಾನು ನನ್ನ ಪ್ರಜೆಗಳನ್ನು ಕಷ್ಟಕಾಲದಲ್ಲಿ ಕೈ ಬಿಟ್ಟು ಹೋಗುವುದಿಲ್ಲ ಜಪಾನರು ಇಂಫಾಲ್ ಪ್ರವೇಶಿಸಲೆತ್ನಿಸಿದಲ್ಲಿ ನಾನೂ ನನ್ನವರೂ ಕೊನೆಯವರೆವಿಗೂ ಜಪಾನರೊಡನೆ ಹೋರಾಡುತ್ತೇವೆ ಎಂದು ತಮ್ಮ ದೃಢಸಂಕಲ್ಪವನ್ನು ತಿಳಿಸಿದ್ದಾರೆ

ಭಾರತವು ಸುರಕ್ಷಿತವಾಗಿದೆ

ಕಲ್ಕತ್ತಾದಿಂದ ಬಂಗಾಳದ ಒಳಗಡೆಗೆ ಬ್ರಹ್ಮಪುತ್ರಾ ನದಿಯ ಮಾರ್ಗದಲ್ಲೇ ನಮ್ಮ ರೈಲ್ವೆ ಮತ್ತು ನದಿ ಸಾಗಾಣಿಕೆಗೆ ಪೆಟ್ಟುಕೊಡಬೇಕೆಂದೂ, ಈ ಬೇಸಿಗೆ ಮುಗಿಯುವುದರೊಳಗೆ ಕೊಹಿಮಾ ಇಂಫಾಲ್ ಪ್ರದೇಶದಲ್ಲಿ ಬೇರೂರಬೇಕೆಂದೂ ಜಪಾನರು ಗುರಿ ಇಟ್ಟುಕೊಂಡಿರುವ ಹಾಗಿದೆ ದಕ್ಷಿಣದಿಂದ ಇಂಫಾಲನ್ನು ಮುತ್ತಲು ಶತ್ರುವಿನ ಉದ್ದಿಶ್ಯವಿರುವಂತೆ ಗೋಚರವಾಗುತ್ತಿಲ್ಲ ಟಿಡ್ಡಿಂ ಅತಿ ಮುಖ್ಯಸ್ಥಳವಲ್ಲ ಅದನ್ನು ನಾವು ಉಳಿಸಿಕೊಳ್ಳಲು ಪ್ರಯತ್ನಿಸಲಿಲ್ಲ ಯುದ್ಧೋಪಯೋಗಿ ಟಿಡ್ಡಿಂ ಅನ್ನು ಖಾಲಿಮಾಡಿದ್ದಾರೆ ಇಂಫಾಲ್ ಇನ್ನೂ ಮಿತ್ರರ ಕೈಯಲ್ಲಿ ಇದೆ ಭಾರತವು ಸುರಕ್ಷಿತವಾಗಿದೆ ಅಸ್ಸಾಂ ರಕ್ಷಣೆಗೂ ಏನೂ ಧಕ್ಕೆ ತಗಲಲಿಲ್ಲ ಮಾರ್ಚಿ ೨೭ ಕ್ಕೆ ಇಂಫಾಲ್ ಹಿಡಿಯಬಿಡುವುದಾಗಿ ಜಪಾನರು ಜಂಭಕೊಚ್ಚಿಕೊಂಡರು ೨೦ ದಿನಗಳಿಂದಲೂ ಮೂರು ದಿಕ್ಕುಗಳಿಂದ ಅವರು ನುಗ್ಗಲು ಪ್ರಯತ್ನಪಟ್ಟು ಇನ್ನೂ ಇಂಫಾಲ್ ಸಮೀಪಿಸಲಿಲ್ಲ ಉಖ್ರುಲ್ ಪ್ರದೇಶದ ಕಡೆಗೆ ಇಂಫಾಲ್‌ಗೆ ೧೯ ಮೈಲಿ ದೂರದಲ್ಲಿ ಹೋರಾಟ ನಡೆಯುತ್ತಿದೆ ಎಂದು ಭಾರತದ ದಂಡನಾಯಕರು ಕೇಂದ್ರ ಅಸೆಂಬ್ಲಿಯಲ್ಲಿ ಹೇಳಿದರು.

ಮೊಂಗ್ಡಾ-ಬುಥಿಡಾಂಗ್ ರಸ್ತೆಯಲ್ಲಿ ಕದನ

ಅರಕಾನಿನ ಮೊಂಗ್ಡಾ ಬುಥಿಡಾಂಗ್ ರಸ್ತೆಯಲ್ಲಿ ಪಂಜಾಬಿನ ಮುಸಲ್ಮಾನರೂ ಮತ್ತು ಡೋಗ್ರಾ ಸಂಗಡದವರೂ ಇರುವ ೧೩ ನೇ ಗಡಿನಾಡು ರೈಫಲ್ ದಳವು ಮಿತ್ರರ ಪ್ರಧಾನ ದಳವಿರುವ ಪ್ರದೇಶದಿಂದ ದಕ್ಷಿಣದಲ್ಲಿ ಒಂದು ಮೈಲಿ ಮುಂದೆ ಹೋಗಿದೆ. ಪ್ರಧಾನ ದಳದಿಂದ ಈ ಶಾಖಾ ದಳವಿರುವ ಸ್ಥಾನಕ್ಕೆ ಸರಬರಾಯಿಯನ್ನು ರಹಸ್ಯವಾಗಿ ಸಾಗಿಸಬೇಕಾಗಿದೆ. ಏಕೆಂದರೆ ಈ ದಾರಿಯಲ್ಲಿ ಜಪಾನರ ಕೈ ಬಲವಾಗಿದೆಯಂತೆ ಈಗ ಮುನ್ನುಗ್ಗಿರುವ ಮಿತ್ರದಳವಿರುವ ಪ್ರದೇಶಕ್ಕೆ ಅನತಿ ದೂರದಲ್ಲಿರುವ ವಾಗುನ ಎಂಬ ಊರಿನಲ್ಲಿ ಶತ್ರು ಶೇಖರಣೆ ಬಲವಾಗಿದೆಯೆಂದು ನಂಬಲಾಗಿದೆ

ಹಿಂದೂಸಾಗರದಲ್ಲಿ ಶತ್ರು ಹಾವಳಿ

ಹಿಂದೂಸಾಗರದಲ್ಲಿ ಜಪಾನರ ನೌಕೆಯು ಮಿತ್ರ ವ್ಯಾಪಾರಿ ನೌಕೆಯನ್ನು ಮುಳುಗಿಸಿತೆಂದು ವರದಿ ಬಂದಿದೆ. ಹಿಂದೂಸಾಗರ ಮತ್ತು ಬಂಗಾಳಾ ಕೊಲ್ಲಿ ಯಲ್ಲಿ ಶತ್ರು ಚಟುವಟಿಕೆ ಹೆಚ್ಚುತ್ತಿರುವುದು ಅದನ್ನು ತಡೆಯಲು ಮಿತ್ರ ನೌಕೆಗಳು ಸಿದ್ಧವಾಗಿವೆಯೆಂದು ಮಿತ್ರ ಪ್ರಕಟನೆ ತಿಳಿಸಿದೆ

೧೪ ನೆಯ ಸೇನೆಗೆ ಸಂಬಂಧ ತಪ್ಪಿತೆ?

ಉತ್ತರ ಅಸ್ಸಾಂನಿಂದ ಒಮರ್ಮಾದೇಶದೊಳಕ್ಕೆ ನುಗ್ಗಿರುವ ಮಿತ್ರರ ೧೪ ನೇ ಸೇನೆಗೆ ಸರಬರಾಯಿ ರವಾನಿಸುವ ಮಣಿಪುರ ರಸ್ತೆಯನ್ನು ಶತ್ರು ಸೇನೆಯು ನಾಗಾ ಪರ್ವತಶ್ರೇಣಿ ಪ್ರದೇಶದಿಂದ ಮುತ್ತಿ ಕತ್ತರಿಸಿದೆ ನಾಶವಾಗಿರುವ ಸೇತುವೆಯೊಂದನ್ನು ಮಿತ್ರರು ದುರಸ್ತಿಗೊಳಿಸುತ್ತಿದ್ದಾರೆ, ಈ ರಸ್ತೆಗೆ ಶತ್ರುವಿನಿಂದ ಅಪಾಯ ಬಲವಾಗಿದೆ ಇಂಫಾಲ್-ಕೊಹಿಮ ರಸ್ತೆಯಲ್ಲಿಯೂ ಪ್ರಬಲ ಕದನನಾಗುತ್ತಿದೆ! ನಾಗಾಪರ್ವತ ಭಾಗದಲ್ಲಿ ಶತ್ರುಗಳು ಹರಡಿ ಅಲ್ಲಿರುವ ಮಿತ್ರರ ಸಂಚಾರ ಮತ್ತು ವಾರ್ತಾ ಸೌಕರ್ಯಗಳಿಗೆ ತೊಂದರೆ ತರುತ್ತಿರುವರೆಂದು ಇಂಫಾಲ್ ನಗರದಿಂದ ೩೦ನೇ ತಾ|| ಬಂದ ವರದಿ ತಿಳಿಸಿದೆ ೩-೪-೪೪ ರ ವರದಿಯ ಪ್ರಕಾರ ಇಂಫಾಲ್ ಕದನ ಮೊದಲಾಗಿದೆ, ಶತ್ರುವು ನಾಗ ಬೆಟ್ಟಸಾಲು ಕಡೆಯಿಂದ ಎಲವಾಗಿ ಕೈ ಚಾಚುತ್ತಿರುವ ಹಾಗಿದೆ ಇಂಫಾಲ್ ನಗರದ ದಕ್ಷಿಣ ಭಾಗದಲ್ಲಿರುವ ಚೀ ಪರ್ವತ ಶ್ರೇಣಿಯಲ್ಲಿಯೂ ಜಪಾನರ ಮುಂದೊತ್ತುವಿಕೆಯುತ್ತ ನಡೆದಿದೆ ಥಾಂಗ್‌ಡಟ್ ಬಳಿಯಲ್ಲಿ ಚಿಂದ್ವಿನ್ ನದಿಯನ್ನು ಹತ್ತಾರು ಕಡೆ ಜಪಾನರು ದಾಟಿರುವುದರಿಂದ ಇಂಫಾಲಿಗೆ ಹೋಗುವ ಬೀಸುದಾರಿಯ ಕಷ್ಟವು ಅವರಿಗೆ ಕಡಿಮೆಯಾದಂತಾಗಿದೆಯೆಂದು ಹೇಳಲಾಗಿದೆ

ಕರ್ನಲ್ ನಾಕ್ಸರವರ ಎಚ್ಚರಿಕೆ

"ಪಸಿಫಿಕ್ ಅಟ್ಲಾಂಟಿಕ್‌ನಲ್ಲಿ ನಡೆಯುತ್ತಿರುವ ಮಿತ್ರ ನೌಕಾ ಸಂತಾಪಕ ವ್ಯವಸ್ಥೆಯನ್ನು ತುಳಿಯಲು ಶತ್ರುವು ತನ್ನ ಭಾರಿ ಯು. ಬೋಟ್ ಕದನ ಆರಂಭಿಸಬಹುದು, ಜರ್ಮನರ ಸಬ್‌ಮೆರೀನ್ ಸೃಷ್ಟಿಕಾರ್ಯವು ಕಡಿಮೆಯಾಗಿಲ್ಲ, ಅದು ನಡೆಯುತ್ತಿರುವ ಪ್ರಮಾಣವೆಷ್ಟೆಂಬುದೂ ನಮಗೆ ಗೊತ್ತಿದೆ ಶೀಘ್ರದಲ್ಲಿಯೇ ತಂಡೋಪತಂಡವಾಗಿ ಅವು ಬಯಲಿಗೆ ಬಂದೇ ಬರುತ್ತವೆ"—ಎಂದು ಅಮೆರಿಕದ ನೌಕಾ ಮಂತ್ರಿ ಕರ್ನಲ್ ನಾಕ್ಸರವರು ಹೇಳಿದ್ದಾರೆ

ರುಮೇನಿಯಾ ಆಕ್ರಮಣ

ರಷ್ಯದ ಪಡೆಗಳು ರುಮೇನಿಯವನ್ನು ಅನೇಕ ಕಡೆಗಳಿಂದ ಪ್ರವೇಶಿಸಿದರೆಂಬುದೂ, ಅಲ್ಲಿಂದ ಜರ್ಮನರನ್ನು ಓಡಿಸುವರೆ ಈ ಮುನ್ನಡೆಯು ಗುರಿಯೆಂದೂ ರುಮೇನಿಯಾದಲ್ಲಿ ಯಾವ ಪ್ರದೇಶವನ್ನೂ ಆಕ್ರಮಿಸುವ ಗುರಾಶೆ ತಮಗಿಲ್ಲವೆಂದೂ ಈ ಸಂದರ್ಭದಲ್ಲಿ ರಷ್ಯವು ಪ್ರಕಟಿಸಿದೆಯೆಂದು ಹೇಳಲಾಗಿದೆ

ಬುಖಾರೆಸ್ಟ್ ರೈಲ್ವೆನಿಲ್ದಾಣದಮೇಲೆ ವಿಮಾನದಾಳಿ

ರುಮೇನಿಯಾ ರಾಜಧಾನಿಯಾದ ಬುಖಾರೆಸ್ಟ್ ಮೇಲೆ ಅಮೆರಿಕನ್ ವಿಮಾನಗಳು ನಡೆಸಿದ ದಾಳಿಯ ಪರಿಣಾಮವಾಗಿ ನಗರದ ರೈಲ್ವೆ ನಿಲ್ದಾಣಕ್ಕೆ ವಿಪರೀತ ನಷ್ಟವಾಗಿರುವದಾಗಿ ತಿಳಿದುಬಂದಿದೆ ಮಿತ್ರ ವಿಮಾನಗಳನ್ನೆದುರಿಸಲು ಬಂದ ೨೦೦ ಜರ್ಮನ್ ವಿಮಾನಗಳೊಡನೆ ಬುಖಾರೆಸ್ಟ್ ನಗರದ ಮೇಲೆ ವಿಮಾನಕದನ ನಡೆಯಿತು ಈ ಕದನದಲ್ಲಿ ಶತ್ರುವಿನ ೩೨ ವಿಮಾನಗಳನ್ನು ಉರುಳಿಸಲಾಯಿತು

ಡಾಲ್ಮೇಷಿಯನ್ ತೀರಪ್ರದೇಶದ ಮೇಲೂ ಇಟಲಿಯಲ್ಲಿ ಶತ್ರುವಿನ ನಾನಾಕ್ಷೇತ್ರಗಳ ಮೇಲೂ ಅಮೆರಿಕ ವಿಮಾನಗಳು ದಾಳಿಮಾಡಿದವು ರುಮೇನಿಯಾ ರಾಜಧಾನಿಗೆ ಅತ್ಯಂತ ಸಮೀಪದಲ್ಲಿ ರಷ್ಯನರು ಬಂದಿರುವ ಸಮಯದಲ್ಲೇ ಅದರ ಮೇಲೆ ಮಿತ್ರವಿಮಾನಗಳು ದಾಳಿ ನಡೆಸಿರುವ ಸುದ್ದಿಯನ್ನು ರಷ್ಯಾದ ಪತ್ರಿಕೆಗಳು ಪ್ರಾಮುಖ್ಯವಾಗಿ ಪ್ರಕಟಿಸಿವೆ ಮಿತ್ರಪಕ್ಷಗಳವರ ಸುವ್ಯವಸ್ಥೆ ಮತ್ತು ಹೊಂದಾಣಿಕೆಯ ಉತ್ತಮ ನಿದರ್ಶನಗಳೆಂದು ಹೊಗಳಿವೆ

ರಷ್ಯದ ಮುನ್ನಡೆ

ಪ್ಲೋಸ್ಟಿ ಎಣ್ಣೆ ಕ್ಷೇತ್ರಕ್ಕೆ ೧೭೦ ಮೈಲಿ ಈಶಾನ್ಯದಲ್ಲಿ ಚೆಸ್ಸಿಯ ಜರ್ಮನ್ ರಕ್ಷಣೆ ಪಡೆಗಳನ್ನು ರಷ್ಯನ್ ಫಿರಂಗಿಗಳು ನಾಶಗೊಳಿಸುತ್ತವೆ ಚೆಸ್ಸಿಯು ಯಾವ ಕ್ಷಣದಲ್ಲಿಯೋ ಪತನವಾಗುವ ಸಂಭವವಿದೆ ೧೩೦ ಮೈಲಿ ಪೂರ್ವದಲ್ಲಿ ಓಡೆಸ್ಸಕ್ಕೆ ೧೪ ಮೈಲಿಯೊಳಗೆ ರಷ್ಯನ್ ಸೈನಿಕರು ಬಂದುಬಿಟ್ಟಿದಾರೆ ಈ ಪ್ರದೇಶದಲ್ಲಿ ೧೦೫ ಪಟ್ಟಣಗಳನ್ನು ಹಳ್ಳಿಗಳನ್ನು ಶತ್ರು ಹಿಡಿತದಿಂದ ಬಿಡಿಸಲಾಗಿದೆ, ಈ ರೈಲ್ವೆ ಒಂದು ಮುಖ್ಯ ರೈಲ್ವೆ ಜಂಕ್ಷನ್ ಓಡೆಸ್ಸಾದ ಬಾಗಿಲಿನಲ್ಲಿರುವ ಸ್ಥಳ ಓಡೆಸ್ಸಾದೊಳಗಿರುವ ಜರ್ಮನಿ ಸೈನಿಕರ ಸ್ಥಿತಿ ಶೋಚನೀಯವಾಗಿದೆ ಅವರು ರುಮೇನಿಯಾದೊಳಕ್ಕೆ ತಪ್ಪಿಸಿಕೊಂಡು ಹೋಗಲು ಇರುವ ಎಲ್ಲ ಮಾರ್ಗಗಳನ್ನು ರಷ್ಯನರು ಕತ್ತರಿಸಿಬಿಟ್ಟಿದ್ದಾರೆ ಆದರೆ ಈಗ ಅವರಿಗೆ ಆಗ್ನೇಯ ದಿಕ್ಕಿನಲ್ಲಿ ಮಾತ್ರ ಒಂದು ರೈಲ್ವೆ ಮಾರ್ಗ ಉಳಿದಿದೆ ಟರ್ನಪೋಲಿನಲ್ಲಿರುವ ಜರ್ಮನ್ ಪಡೆಗಳು ಹೊರಗಿನ ಸಂಪರ್ಕವು ಪೂರ್ಣ ಭೇದಿಸಲ್ಪಟ್ಟಿದೆ ಈ ಪಡೆಗಳನ್ನು ಉಳಿಸಲು ಜರ್ಮನರು ನಡೆಸಿದ ಟ್ಯಾಂಕ್ ದಾಳಿ ಎಲ್ಲ ವ್ಯರ್ಥಗೊಂಡಿತು

ಚರ್ಚಿಲರ ನಂತರ ಸ್ಮಟ್ಸರೇ

ಯುದ್ಧವು ಮುಗಿದ ಮೇಲೆ ಬ್ರಿಟಿಷ್ ಪ್ರಧಾನಿ ಚರ್ಚಿಲರು ರಾಜಕೀಯವನ್ನು ತ್ಯಜಿಸುವರು ಈ ವಿಷಯವು ಟೋರಿ ಗುಂಪಿನವರಿಗೆ ಚಿಂತೆಯನ್ನುಂಟು ಮಾಡಿದೆ ದಕ್ಷಿಣ ಆಫ್ರಿಕಾದಿಂದ ಫೀ|| ಮಾರ್ಷಲ್ ಸ್ಮಟ್ಸರನ್ನು ಈ ಸ್ಥಾನಕ್ಕೆ ತಂದ ಸ್ವಪಕ್ಷಕ್ಕೆ ಸಮಾಧಾನವನ್ನುಂಟುಮಾಡುವ ಪ್ರಯತ್ನಗಳು ನಡೆಯುತ್ತಿವೆ

ಗೌರೀಶಂಕರಕ್ಕಿಂತ ಉನ್ನತಶಿಖರ

ಎವರೆಸ್ಟ್ ಶಿಖರಕ್ಕಿಂತ ಸುಮಾರು ೨೦೦೦ ಅಡಿ ಹೆಚ್ಚು ಎತ್ತರವಾಗಿರುವ ಪರ್ವತ ಶಿಖರವೊಂದು ಟಿಂಗ್‌ಷಿಯಾಂಗ್ ಭಾಗದಲ್ಲಿದೆಯೆಂದು ಈಗ ಖಾತ್ರಿಯಾಗಿದೆ ಯುದ್ಧನಿರತ ಬಾಂಬರುಗಳನ್ನು ನಡೆಸುವ ಅಮೆರಿಕದ ವೈಮಾನಿಕರು ಈ ಭಾಗದಲ್ಲಿ ಸಂಚರಿಸುವಾಗ ಈ ಅಂಶವನ್ನು ಪತ್ತೆಹಚ್ಚಿರುವರು ಮಾರ್ಚ್ ಮಂತಲದಲ್ಲಿ ಅಡಗಿರುವ ಈ ಪರ್ವತ ಶ್ರೇಣಿಯ ಎವರೆಸ್ಟ್ [illegible] ೨೦೦೦ ಅಡಿ [illegible] ಈ ಭಾಗದಲ್ಲಿ [illegible] ವಿಮಾನಗಳನ್ನು ನಡೆಸಿರಲಿಲ್ಲ ಈ ಪರ್ವತಶಾಲಿರುವುದು ನಮಗೆ ಹಲವರಿಗೆ ತಿಳಿಯದಂತೆ

ಪೆಷಾವರ್ ಹತ್ತಿರ ಅಲೆಕ್ಸಾಂಡರ್ ಚಕ್ರವರ್ತಿಯದೆಂದು ನಂಬಬಹುದಾದ ಗ್ರೀಕ್ ಕಲೆಯಂತೆ ಕಾಣಬರುವ ಪ್ರತಿಮೆ ಮತ್ತು ಕೆಲವು ಚಿನ್ನದ ನಾಣ್ಯಗಳು ಒಬ್ಬ ರೈತನಿಗೆ ಹೊಲವುಳುತ್ತಿದ್ದಾಗ ದೊರೆತಿವೆ

ಕಳೆದ ೧ನೆಯ ತಾ || ಮೈಸೂರಿನಿಂದ 12-20ಕ್ಕೆ ಹೊರಟ ರೈಲು ಚನ್ನಪಟ್ಟಣದಿಂದ ಮುಂದೆ ಹೋದಮೇಲೆ ಇದ್ದಕ್ಕಿದ್ದಂತೆಯೇ ನಿಂತಿತು ಇಂಜಿನ್ನಿನ ಹತ್ತಿರದ ಗಾಡಿಗಳಲ್ಲಿನ ಜನರು ಧುಮುಕಿ ದಿಕ್ಕಾಪಾಲಾಗಿ ಓಡಿದರು ಇದನ್ನು ಕಂಡು ಇಡೀ ಗಾಡಿಗಳೆಲ್ಲ ಖಾಲಿಯಾಯಿತು ಎಲ್ಲರಿಗೆ ಇನ್ನೊಂದು ರೈಲು ಬಂದುಬಿಡುತ್ತದೆ ಡಿಕ್ಕಿಯಾಗಿ ಹೋಗುತ್ತದೆಂದು ಘಾಬರಿಯಿಂದ ಜನ ಓಡಿದರು ಮಕ್ಕಳು ಮರಿಗಳೂ, ಹೆಂಗಸರೂ ಪಾಪ ಪಕ್ಕದಲ್ಲಿ ಏರಿಯ ಮೇಲಕ್ಕೆ ಹತ್ತುವುದೂ, ಬೀಳುವುದೂ ಹೃದಯವನ್ನು ಕರಗಿಸುವ ದೃಶ್ಯವಾಗಿತ್ತು ಚಕ್ರದಲ್ಲಿ ಬೆಂಕಿ ಹತ್ತಿತ್ತು ಆಷ್ಟೆ ನಂತರ ಎಲ್ಲರೂ ಗಾಡಿ ಹತ್ತಿದರು ಕೆಲವು ನಿಮಿಷಗಳಲ್ಲೇ ಅಧಿಕಾರಿಗಳು ಗಾಡಿಯನ್ನು ಹೊರಡಿಸಿದರು ಆದರೂ ಸ್ವಲ್ಪಕಾಲ ದಿಕ್ಕೆಟ್ಟೋಡಿದ ಜನರು ಓಡುತ್ತಿದ್ದರು ಕೆಲವು ಮಕ್ಕಳಿಗೆ ಗಾಯವಾಯಿತು ಅಪಾಯವೇನೂ ಸಂಭವಿಸಲಿಲ್ಲ

(೧ನೆಯ ಪುಟದಿಂದ ಮುಂದುವರಿದುದು)

ಮನವಂ ನಿಗ್ರಹಿಸುವದು ಅತಿ ಕಷ್ಟವಾಗಿರುವದು ಅರ್ಥಾನರ್ಥಗಳಿಗೂ, ಸುಖದುಃಖಗಳಿಗೂ, ಜಗತ್ತಿನ ಸ್ಥಿತಿನಾಶಗಳಿಗೂ, ಕಾರಣವಾದ ಈ ಚಿತ್ತವಂ ನಿಗ್ರಹಿಸದೆ ಯಾರಿಗೂ ಅಖಂಡಸುಖವಾಗುವುದಿಲ್ಲವಾದ್ದರಿಂದ ವಿವೇಕಕ್ಕೆ ಶತ್ರುವಾದ ಈ ಮನವಂ ಜಯಿಸಲಿಚ್ಛಿಯುಳ್ಳ ನಾನು ತಮವಂ ನಿರಾಕರಿಸಲು, ಪೂರಮಟ್ಟ ಚಂದ್ರನು ಮೇಘವೃದ್ಧಿಯಂ ಸಹಿಸದಿರುವಂತೆ ಜಡಪ್ರಕಾಶವಾದ ಲಕ್ಷ್ಮಿಯಂ ಸಹಿಸುವದಿಲ್ಲ ಹೀಗೆ ನಾವಿರುವಲ್ಲಿ ಮೋಹಾಂಧಕಾರಕ್ಕೆ ಆಶ್ರಯವಾದ ಆಸೆಯೆಂಬ ರಾತ್ರಿಯು, ಜೀವನೆಂಬ ಆಕಾಶದಲ್ಲಿ ರಾಗದ್ವೇಷಗಳೆಂಬ ಗೂಬೆಗಳನ್ನಾಡಿಸುತ್ತಿರುವದು ಅದ್ದರಿಂದ ಶೀತರೋಗದಂತೆ ಅಂತರ್ದಾಹವನ್ನುಂಟುಮಾಡುವ ಚಿಂತೆಯಿಂದ ಗ್ರೀಷ್ಮಕಾಲದ ರವಿಕಿರಣದಿಂ ಶಿವ ಕಲಹಾರ ಸರಸ್ಸಿನಂತೆ, ನಾನು ದುಃಖಿನಾಗಿರುವೆನು ಮೋಹಾಂಧಕಾರದಿಂ ಪೂರ್ಣವಾದ ಚಿಂತಾರಣ್ಯದಲ್ಲಿ ಪುಟ್ಟಿದ ಆಸೆಯೆಂಬ ಪಿಶಾಚಿಯಿಂದ ನಾನು ಶಾವಮಾಳೆ ರೋಗದವನಂತೆ ಪ್ರಪಂಚವೆಲ್ಲವನ್ನು ಸುಖದೋಷ್ಯಾನವನ್ನಾಗಿ ನೋಡುವೆನು ಪ್ರಿಯೋಕ್ತಿಗಳೆಂಬ ಮಂಜುಗಳಿಂದ ಇಲ್ಲಿ ಚಿಂತೆಗಳೆಂಬ ಕಡವೆ [illegible] ಬೆಳೆಯುವವು ಜೀವನೆಂಬ ಪರ್ವತದಲ್ಲಿ ಚಿಂತೆಗಳೆಂಬ ಕರೆಗಳಿಂ ತುಂಬಿದ ರಾಗದ್ವೇಷದ ಯಮವಾದ ನದಿಯು ಹರಿಯುತ್ತಿರುವದು

(ಇನ್ನೂ)

ಮುತ್ತಲು ಗ್ರಾಮದ ಸುದ್ದಿ

ರಾಜ್ಯದಲ್ಲಿ ಮನ್ನನಿಪ್ಪಕ ಶಿಷ್ಟಪರಿಪಾಲನಕ್ಕಾಗಿ ರಾಜರೂ ಅಧಿಕಾರಿಗಳೂ ಸಂಚರಿಸುವಂತೆ ಧರ್ಮರಾಜ್ಯದಲ್ಲಿಯೂ ಸಹ ಅಜ್ಞಾನಿಗಳ ಅಂಧಕಾರವನ್ನು ದೂರಮಾಡಿ ಜ್ಞಾನವನ್ನೀಯುವದಕ್ಕಾಗಿ ಮಠಾಚಾರ್ಯರೂ, ಸತ್ಪುರುಷರೂ, ಪಂಡಿತಪ್ರಕಾಂಡರೂ, ಸಂಚರಿಸುತ್ತಿರುವುದು, ಸ್ವಾಭಾವಿಕವಾದುದು ತಾ|| ೨೪ ೩ ೪೪ ನೇ ದಿನ ಸಿಕಿಂದ್ರಾಬಾದಿನಿಂದ ವೇದ ಕಾವ್ಯ ಸ್ಮೃತಿ ತೀರ್ಥ ವಿದ್ಯಾನಿಧಿ ವಿದ್ಯಾರತ್ನ ಇತ್ಯಾದಿ ಬಿರುದಾಂಕಿತರೂ, ಚತುರ್ಭಾಷಾವಿಶಾರದರೂ, ಆದ ಪಂ|| ಚಿದರಮಠದ ಶ್ರೀ ವೀರಭದ್ರಶಾಸ್ತ್ರಿಗಳವರು ಮಡಬೂರುತಾಲ್ಲೂಕಿಗೆ ಸೇರಿದ ಮುತ್ತಲ್ ಗ್ರಾಮಕ್ಕೆ ಆಗಮಿಸಿದರು ಅದೇ ದಿನ ಗ್ರಾಮ ಪ್ರಮುಖರ ಪ್ರಾರ್ಥನೆಯಂತೆ ಸಾಯಂಕಾಲ ಸಭೆಯು ನೆರವೇರಿತು ಮೊದಲು ವೇ|| ಗಂಗಾಧರಶಾಸ್ತ್ರಿ ಹಾಲಾಮಠ ಇವರು ಮಂಗಳವನ್ನು ಹಾಡಿ ಮುಂದಿನ ಕಾರ್ಯಕ್ರಮವನ್ನು ಸೂಚಿಸಿದರು ವೇ|| ಶಿವಶಂಕರಯ್ಯ ಹಿರೇಮಠ ಮುತ್ತಲ್ ಈ ವಿದ್ಯಾರ್ಥಿಗಳು ಮಧುರವಾದ ಬಾಲಭಾಷೆಯಿಂದ ಸ್ತೋತ್ರಗಳನ್ನು ಆನಂದಗೊಳಿಸಿದರು ಅನಂತರ ಪಂ|| ಶ್ರೀವೀರಭದ್ರಶಾಸ್ತ್ರಿಗಳವರು "ಭಾಷಾವಿಜ್ಞಾನ" ಮತ್ತು ಅದರ "ಪ್ರಚಾರ" ಈ ವಿಷಯದ ಮೇಲೆ ಪಾಶ್ಚಾತ್ಯರ ಸಿದ್ಧಾಂತಗಳನ್ನು ಪೂರ್ವಪಕ್ಷತ್ವೇನ ವಿಮರ್ಶಿಸಿ, ವೇದಪ್ರಮಾಣಗಳಿಂದ ೨ ಘಂಟೆಗಳವರೆಗೆ ಬಲ್ಲವರೆಲ್ಲರೂ ಒಪ್ಪುವಂತೆ ಭಾರತೀಯ ಸಿದ್ಧಾಂತರೀತ್ಯಾ ಉಪದೇಶಿಸಿದರು ಆಮೇಲೆ ಕಿಸನ್‌ರಾವ್ ನಾಕ್ತರ ಪ್ರೋತ್ಸಾಹವನ್ನಿತ್ತು ಭಾಷಣಮಾಡಿದರು ಸಭೆಗೆ ವೇ|| ಬ್ರ|| ಶ್ರೀ|| ಬಸವಲಿಂಗಯ್ಯನವರು ಶಾಲಾ ಮಠದ ಶ್ರೀಮಾನ್ ಯಡಿ ಲಕ್ಷ್ಮಯ್ಯ ಶ್ರೀ ಕಂಡೆ ನರಸಿಂಹಲು, ಶ್ರೀ ಪಟ್ಟಂ ರಂಗಯ್ಯ ರಾಘವೇಂದ್ರಾಚಾರ್ಯ, ಶ್ರೀಮಾನ್ ಗಿದ್ದ ನಾಗಪ್ಪ, ಇತ್ಯಾದಿ ಪುರಪ್ರಮುಖರೆಲ್ಲರೂ ಆಗಮಿಸಿದ್ದರು ಭಾಷಣವಾದ ಮೇಲೆ ಜಗದಾಚಾರ್ಯರ ಜಯ ಜಯಕಾರದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ

ಗಂಗಾತೀರದಲ್ಲಿ ಮಹಾಯಾಗ

ಶತ್ಯಂಡಿ ಮಹಾಯಜ್ಞವೆಂಬ ದೊಡ್ಡ ಯಾಗ ಸಮಾರಂಭವು ಗಂಗಾನದಿಯ ಎಡದಡದಲ್ಲಿ ಕಳೆದ ಮಂಗಳವಾರ ಆರಂಭವಾಯಿತು. ಸುಮಾರು ಒಂದು ಲಕ್ಷ ಜನರು ಬಂದಿದ್ದರು ನೂರಾರುಮಂದಿ ಪಂಡಿತರೂ ಭಾಗವಹಿಸುತ್ತಿದ್ದಾರೆ

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೪—೦
ಶ್ರೀರೇಣುಕಾಚಾರ್ಯರ ಲಿಂಗೋದ್ಭವದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೨—೦
ಪಡ್ಯ ಸಿಂಹಾಸನಾಧೀಶರಾದ ಜಗದ್ಗುರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೨—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೋರ್ಘರದಿಂದ ಅವತರಿಸಿರುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೦
ಶ್ರೀಕಾಶೀಕ್ಷೇತ್ರನಿವಾಸಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೦
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೮	೦—೩—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತ ಕೊಂಡಿರುವ ಫೋಟೋ	೦—೧—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	—೧—೦
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೦
ಶ್ರೀರಂಭಾಪುರೀ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೦
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದ ಸರ್ವ ಧರ್ಮಗ್ರಂಥಗಳಲ್ಲೆಲ್ಲ ಇದೇ ಬಹು ಪ್ರಾಚೀನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೨ ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವ ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇದುವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದವರಿಗೆ ಈ ವ್ಯಾಖ್ಯಾನದ ಮಹತ್ತ್ವವು ಗೋಚರಿಸದೆ ಇರದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೭೬೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರವಾದ ಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಪೂರ್ವಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೩ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೨ ಆಣೆ
ಪಂಚಾಚಾರ್ಯ ಪ್ರಕಾಶಿಕಾ	೩ ಆಣೆ
ಬಿಲ್ವಮಾಹಾತ್ಮ್ಯ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೬ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೬ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೬ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಷಟ್ಸ್ಥಲರತ್ನಾವಳಿ	೮ ಆಣೆ
ಆಗಮಪರಿಜ್ಞಾನ	೬ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
* ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
* ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧ ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ತೆಲುಗು ಲಿಪಿ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧। ರೂ
ವೀರಶೈವರತ್ನ (೫ನೆಯ ಆವೃತ್ತಿ, ೭೦ ವ ಹತ್ತಿಗೆ ಸೇರಿ ಗಳಮಾಡಲ್ಪಟ್ಟ)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ವಚನಾನುವಾದಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಸಂಗ್ರಹಿಸಿದುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೨೪೪ ಪುಟ)	೮ ರೂ
A brief life-sketch of Pandit Sri Kashinatha Shatriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषद् (वीरशैवभाष्य-संस्कृत)	१ रु
सिद्धांतशिखामणि (मूल)	८ आ.
लिंगविवेकसारकारिका (संस्कृत)	२ आ.

* ಈ ಗುರುತು ಹಾಕಿರುವ ಪುಸ್ತಕಗಳು ಮುಗಿದುಹೋಗಿರುವುದರಿಂದ ದೊರೆಯುವುದಿಲ್ಲ. ಕೆಲವು ಪುಸ್ತಕಗಳು ಮುಗಿಯುತ್ತ ಬಂದಿರುವುದರಿಂದಲೂ ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದಲೂ ಅವುಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಮ್ಯಾನೇಜರು— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಪ್ರಕಟಿಸಿ ಮುದ್ರಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರು ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರವಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಕಾಲಿಕ್ಕೃದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೭ನೇ ಏಪ್ರಿಲ್ ೧೯೪೪ [ಸಂಚಿಕೆ ೫೦

ಶ್ರೀ ಜಗದ್ಗುರು ರೇಣುಕಭಗವತ್ಪಾದರ ಜಯಂತಿಯ ಕಾರ್ಯಕ್ರಮ

ಬೆಂಗಳೂರು ಸಿಟಿಯಲ್ಲಿ ವಿರಾಜಿಸುವ ಶ್ರೀ ಮಹಂತಿನ ಮಠದಲ್ಲಿ ಸ್ವಭಾನುನಾಮಸಂವತ್ಸರದ ಫಾಲ್ಗುನ ಶುದ್ಧ ಚತುರ್ದಶೀ ಬುಧವಾರ ದಿವಸ ಶ್ರೀಮಠದ ಅಧ್ಯಕ್ಷರೂ ಪರಮತಪೋನಿಧಿಗಳೂ ವೀರವೈರಾಗ್ಯಮೂರ್ತಿಗಳೂ ಆದ ಶ್ರೀ॥ ಷ॥ ಬ್ರ॥ ಗಂಗಾಧರಶಿವಾಚಾರ್ಯ ಸ್ವಾಮಿಗಳವರ ನೇತೃತ್ವದಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರವರ ಲಿಂಗೋದ್ಭವಮೂರ್ತಿಗೆ ವಿಧ್ಯುಕ್ತವಾಗಿ ಏಕಾದಶವಾರ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆಗಳು ನಡೆದು ಸಾಯಂಕಾಲ ೭ ಘಂಟೆಗೆ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್, ರಿಟೈರ್ಡ್ ಚೀಫ್ ಜಸ್ಟಿಸ್ ಪಿ ಮಹದೇವಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು ಪಾಠಶಾಲೆಯ ಸೆಕ್ರೆಟರಿಯವರಾದ ಎನ್ ರುದ್ರಯ್ಯನವರು ಜಯಂತಿ ಫಂಡಿನ ವಾರ್ಷಿಕ ವರದಿಯನ್ನು ಮತ್ತು ಭಗವತ್ಪಾದರವರ ಧರ್ಮಗ್ರಂಥ ಭಂಡಾರ ಪಾಠಶಾಲಾ ಫ್ರೀ ಬೋರ್ಡಿಂಗ್‌ನ ವರದಿಯನ್ನು ಓದಿದರು ತರುವಾಯ ಶ್ರೀ॥ ಷ॥ ಬ್ರ॥ ಗಂಗಾಧರಶಿವಾಚಾರ್ಯಸ್ವಾಮಿಗಳವರು "ಪರಮಶಾಂತಿ" ಎಂಬ ವಿಷಯವಲ್ಲಿ ಅಮೋಘವಾದ ಉಪನ್ಯಾಸವನ್ನು ಮಾಡಿದರು ಬಳಿಕ ರಾತ್ರಿ ೯ ಘಂಟೆಗೆ ರಾಜಬೀದಿಗಳಲ್ಲಿ ವಾದಿಧ್ವಜಸಹಿತವಾಗಿ ಜಗದಾಚಾರ್ಯರ ಪುಷ್ಪರಥೋತ್ಸವವು ಅತಿ ವಿಜೃಂಭಣೆಯಿಂದ ನಡೆಯಿತು ಉತ್ಸವವು ಮಠಕ್ಕೆ ಬಿಜಯಂಗೈದನಂತರ ಷೋಡಶೋಪಚಾರ, ರಾಜೋಪಚಾರ ಪೂಜಾಪೂರ್ವಕ ಪ್ರಸಾದವಿನಿಯೋಗವಾಯಿತು ಅನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯ ಮೂಲಕ ಆ ದಿವಸದ ಕಾರ್ಯಕಲಾಪಗಳು ನೆರವೇರಿದವು ತಾ॥ ೯-೩-೪೪ರಲ್ಲಿ ಶ್ರೀ ಭಗವತ್ಪಾದರವರ ಫ್ರೀ ಬೋರ್ಡಿಂಗಿನ ಅಧ್ಯಕ್ಷರಾದ ರಿಟೈರ್ಡ್ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜರಾದ ಹೆಚ್ ಕೆ ವೀರಬಸಯ್ಯನವರ ಅಧ್ಯಕ್ಷತೆಯಲ್ಲಿ ಪಂ॥ ಸದಾಶಿವಶಾಸ್ತ್ರಿಗಳಿಂದ "ವೈದಿಕಮತಾಚಾರ್ಯರು" ಎಂಬ ವಿಷಯದಲ್ಲಿ ಭಾಷಣವೂ, ಶ್ರೀ॥ ಷ॥ ಬ್ರ॥ ಗಂಗಾಧರಶಿವಾಚಾರ್ಯ ಸ್ವಾಮಿಗಳವರಿಂದ "ಭಗವತ್ಸಾಕ್ಷಾತ್ಕಾರ" ಎಂಬ ವಿಷಯದಲ್ಲಿ ಭಾಷಣವೂ ನಡೆದವು ತಾ॥ ೧೦-೩-೪೪ರಲ್ಲಿ ಸಂಸ್ಕೃತ ಕಾಲೇಜ್ ಪ್ರಿನ್ಸಿಪಾಲರಾದ ಕೆ ಎಸ್ ಧರಣೇಂದ್ರಯ್ಯನವರ ಅಧ್ಯಕ್ಷತೆಯಲ್ಲಿ ಮ॥ರಾ॥ ಓ ಎಸ್ ಲಿಂಗಯ್ಯ ಬಿ ಎ, ಇವರು ರೇಣುಕಭಗವತ್ಪಾದರ ಕಾಲಮಾನ ಎಂಬ ವಿಷಯವಲ್ಲಿ ಭಾಷಣವನ್ನು ಮಾಡಿದರು ಶ್ರೀ॥ ಷ॥ ಬ್ರ॥ ಗಂಗಾಧರಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸೊಲ್ಲಾಪುರದಿಂದ ಆಗಮಿಸಿದ ಕುಮಾರಿ ಗೌರಮ್ಮ ಕಟಾಪ, ಕುಮಾರಿ ಶಾಂತಮ್ಮ ಮಾಳಗೆ ಇವರುಗಳಿಂದ "ವೀರಶೈವ ಧರ್ಮ" ಎಂಬ ವಿಷಯದಲ್ಲಿ ಸಂವಾದವು ನಡೆಯಿತು ಸೊಲ್ಲಾಪುರದ ಸೌ॥ ಭಾಗೀರಥೀಬಾಯಿಯವರು ಮೂರು ದಿವಸ "ವೀರಶೈವ ಧರ್ಮ" "ಅಸ್ಪೃಶ್ಯೋದ್ಧಾರ" "ಸ್ತ್ರೀ ಜೀವನ" ಈ ಮೂರು ವಿಷಯಗಳ ಮೇಲೆ ಅಮೋಘವಾದ ಭಾಷಣ ಮಾಡಿದರು ಹೆಚ್ ಎಂ ಸೋಮನಾಥಶಾಸ್ತ್ರಿಗಳು ಇಂಪಾದ ಭಗವತ್ಪಾದರವರ ಸ್ತೋತ್ರವನ್ನು ಸಂಗೀತರೂಪವಾಗಿ ಹಾಡಿದರು ಶ್ರೀಮಾನ್ ಮಾಸ್ತಿ ವೆಂಕಟೇಶ ಐಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ರಿಟೈರ್ಡ್ ಚೀಫ್ ಜಸ್ಟೀಸ್ ಪಿ ಮಹದೇವಯ್ಯನವರು "ವೀರಶೈವ ಸನಾತನತ್ವ" ಎಂಬ ವಿಷಯವಲ್ಲಿ ಅನೇಕ ಪ್ರಮಾಣಗಳೊಡನೆ ಅಮೋಘವಾದ ಭಾಷಣವನ್ನು ಮಾಡಿದರು ಈ ಮಧ್ಯೆ ಶಿವಕಥಾವಿದ್ವಾಂಸರಾದ ಎಸ್ ಜಿ ರೇಣುಕಾರಾಧ್ಯರೂ ಕೀರ್ತನಕೇಸರಿ, ಶಿವದೇವಶಾಸ್ತ್ರಿಗಳವರೂ ರಾಮುಬಸಪ್ಪನವರೂ ಶಿವ ಕೀರ್ತನೆ ಮಾಡಿದರು ಮತ್ತು ೧೦ ವರ್ಷದ ಬಾಲಕ ಬಾಲಿಕೆಯರಿಂದ 'ಸಾವಿತ್ರೀ ಸತ್ಯಪರೀಕ್ಷೆ" ಎಂಬ ನಾಟಕವು ಅಭಿನಯಿಸಲ್ಪಟ್ಟಿತು ಮೈಸೂರು ಸಂಸ್ಥಾನದ ಗ್ರಾಮಾಭಿವೃದ್ಧಿಶಾಖೆಯ ಮುಖ್ಯಾಧಿಕಾರಿಗಳೂ ಮತ್ತು ರಾಷ್ಟ್ರೀಯ ರಕ್ಷಣಾಬಲದ ವ್ಯವಸ್ಥಾಪಕರಾದ ಶ್ರೀಮಾನ್ ಜೆ ಬಿ ಮಲ್ಲಾರಾಧ್ಯರು ಎಂ ಎ ಇವರ ಅಧ್ಯಕ್ಷತೆಯಲ್ಲಿ ಮೈಸೂರು ಆಸ್ಥಾನ ವಿದ್ವಾನ್ ಕೃ॥ ತಿ ಯಪ್ಪನವರ ಶಿಷ್ಯರಾದ ತಿರುಚನ ಪಲ್ಲಿ ವೈದ್ಯನಾಥಯ್ಯನವರ ಸಂಗೀತವೂ, ಭುವನೇಶ್ವರಯ್ಯನವರ ಪಿಟೀಲೂ, ವಿದ್ವಾನ್ ಎಸ್ ಶಂಕರಪ್ಪನವರ ಮೃದಂಗ ವಿದ್ವಾನ್ ರಾಮಪ್ಪನವರ ಖಂಜರಿ ಈ ಪಕ್ಕವಾದ್ಯಗಳೊಡನೆ ಸಂಗೀತ ಕಛೇರಿಯು ನಡೆಯಿತು ತಾರಣ ಸಂವತ್ಸರದ ಚೈತ್ರ ಶುದ್ಧ ೧ ಶನಿವಾರ ಪ್ರಾತಃಕಾಲ ೬ ಘಂಟೆಯಿಂದ ಶ್ರೀ ವಿರೂಪಾಕ್ಷಸ್ವಾಮಿ ಮತ್ತು ರೇಣುಕಭಗವತ್ಪಾದರವರ ಲಿಂಗೋದ್ಭವ ಮೂರ್ತಿಗಳಿಗೆ ಶ್ರೀ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆ ವೇದಪೂಜೆ ಮಹಾ ಮಂಗಳಾರತಿಪೂರ್ವಕ ಪುಷ್ಪಾಂಜಲಿಯೂ ೯ ಘಂಟೆಯಿಂದ ರಾಜ ಬೀದಿಗಳಲ್ಲಿ ವೇದಘೋಷದೊಡನೆ ಅತ್ಯಂತ ವೈಭವದೊಡನೆ ವೇದಗಳ ಪುಷ್ಪಕೋತ್ಸವವು ನೆರವೇರಿಸಲ್ಪಟ್ಟಿತು ಸಾಯಂಕಾಲ ಶ್ರೀ ಮಠದ ಸಭಾಮಂಟಪದಲ್ಲಿ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ರಿಟೈರ್ಡ್ ಚೀಫ್ ಜಸ್ಟೀಸ್ ಶ್ರೀಮಾನ್ ಪಿ ಮಹದೇವಯ್ಯನವರ ಅಧ್ಯಕ್ಷತೆಯಲ್ಲಿ ನೂತನ ಸಂವತ್ಸರದ ಪಂಚಾಂಗ ಶ್ರವಣವೂ, ವೇದಗಳ ವಿಷಯಕವಾದ ಭಾಷಣಗಳೂ ಎರಡುದಿವಸ ಅತ್ಯಂತ ವೈಭವದೊಡನೆ ನಡೆದವು ಆರಂಭಭಾಷಣವು ಸಂಸ್ಕೃತ ಕಾಲೇಜ್ ಪ್ರಿನ್ಸಿಪಾಲರಾದ ಕೆ ಎಸ್ ಧರಣೇಂದ್ರಯ್ಯ ಎಂ ಎ ಬಿ ಟಿ ಇವರುಗಳಿಂದಲೂ "ವೇದಗಳ ನೈತಿಕದೃಷ್ಟಿ" ಶ್ರೀಮಾನ್ ಎಸ್. ರಾಮಚಂದ್ರರಾಯರು ಎಂ ಎ ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ಅಧ್ಯಾಪಕರು "ವೇದಗಳ ಮಹಿಮೆ" ಆಸ್ಥಾನವಿದ್ವಾನ್ ಕೆ ಪಿ ನಾರಾಯಣಶಾಸ್ತ್ರಿಗಳು ಅ॥ ಪ್ರೊಫೆಸರ್ ಸಂಸ್ಕೃತ ಕಾಲೇಜು, "ವೇದಗಳಿಗೂ ಜನಜೀವನಕ್ಕೂ ಸಂಬಂಧ" ಶ್ರೀಮಾನ್ ದೇವುಡು ನರಸಿಂಹಶಾಸ್ತ್ರಿಗಳು ಎಂ ಎ ಪ್ರಿನ್ಸಿಪಾಲರು ಗಾಂಧಿನಗರ ಹೈಸ್ಕೂಲು "ಆಧುನಿಕ ಯುಗದಲ್ಲಿ ವೇದಗಳ ಪ್ರಚಾರ" ವಿದ್ವಾನ್ ಎಂ ಜಿ ನಂಜುಂಡಾರಾಧ್ಯರು, "ವೇದಗಳಲ್ಲಿ ಜೀವನ" ಜಿಲ್ಲಾಪಂಡಿತ್ ಸುಬ್ರಹ್ಮಣ್ಯ-ಶಾಸ್ತ್ರಿಗಳ ರಾಷ್ಟ್ರಭಾಷಾ ವಿಶಾರದ ಈ ರೀತಿ ಈ ಮೇಧಾವಿ ಮಹನೀಯರುಗಳಿಂದ ಭಾಷಣಗಳು ನಡೆದವು ಈ ರೀತಿಯಲ್ಲಿ ಶ್ರೀ ಜಗದ್ಗುರು ರೇಣುಕಭಗವತ್ಪಾದರವರ ಜಯಂತಿಮಹೋತ್ಸವವು ಇಪ್ಪತ್ತೊಂದು ದಿವಸ ಅವಿಚ್ಛಿನ್ನವಾಗಿ ನೆರವೇರಿತು ವೇ॥ ಎಸ್ ರುದ್ರಯ್ಯನವರು ಗಂಧಪುಷ್ಪ ತಾಂಬೂಲಪ್ರಸಾದವನ್ನು ವಿನಿಯೋಗಮಾಡಿ ಎಲ್ಲರನ್ನೂ ಸತ್ಕರಿಸಿದರು. ಶ್ರೀ ಭಗವತ್ಪಾದರವರ ಜಯಂತೀಮಹೋತ್ಸವಕ್ಕೆ ಕಂಕಣಪ್ರಾಯರಾದ ಎಸ್ ರುದ್ರಯ್ಯನವರು, ಸರಾಫ್ ಬಿ ಬಸಪ್ಪನವರು ದೇಶದ ರುದ್ರಶೆಟ್ಟರು ದೇಶದ ಶೇಷಣ್ಣಶೆಟ್ಟರು, ಯಜಮಾನ್ ಕೆಂಚಪ್ಪನವರು, ಒಳ್ಳಪ್ಪನವರ ಶಿವನಂಜಪ್ಪ ಗುಬ್ಬಣ್ಣನವರು, ಡಿ. ಬಿ ಗುರುಸಿದ್ದಪ್ಪನವರು ಇವರೇ ಮೊದಲಾದ ಮಹನೀಯರುಗಳು ಬದ್ಧಕಂಕಣರಾಗಿ ನಿಂತು ಕಾರ್ಯವನ್ನು ನೆರವೇರಿಸಿದರು ಈ ಮೇಲ್ಕಂಡ ಮಹನೀಯರುಗಳಿಗೆ ಭಗವತ್ಪಾದರವರು ಆಯುರಾರೋಗ್ಯ ಐಶ್ವರ್ಯಗಳನ್ನು ಕೊಟ್ಟು ಇನ್ನು ಮುಂದೆಯೂ ಇದೇ ರೀತಿ ಸಮಾಜಸೇವೆ ದೇವತಾ ಕಾರ್ಯಗಳನ್ನು ಮಾಡುವಂತೆ ಆಶೀರ್ವದಿಸಲೆಂದು ಬೇಡುತ್ತೇವೆ

ಎಂ ಸ ಜು-ಡಪ್ಪ
ಮ್ಯಾನೇಜರ್, ಮಹಂತಿನಮಠ

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವ, ನಿಂಬರಗಿ

ಪ್ರತಿವರ್ಷ ಪದ್ಧತಿಯಂತೆ ಶ್ರೀ ಜಗದ್ಗುರು ಪಂಚಾಚಾರ್ಯ ನವನಾಟ್ಯ ಸಂಘದವರು ಶ್ರೀ ಗದ್ದಿಗೇಶ್ವರ ಮಠದಲ್ಲಿ ಶ್ರೀ ರೇಣುಕಜಯಂತಿ ಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು ತಾ॥ ೮-೩-೪೪ ರವಿವಾರ ಪ್ರಾತಃಕಾಲ ಶ್ರೀ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕವಾಯಿತು ಅನಂತರ ಗಣಾರಾಧನೆ ನಡೆಯಿತು ಸಾಯಂಕಾಲ ೪ ಘಂಟೆಗೆ ರೇಣುಕಾಚಾರ್ಯರ ಪಾಲಿಕೆ ಮಹೋತ್ಸವವು ಒಳ್ಳೇ ವೈಭವದೊಡನೆ ನಡೆದು ಮಠಕ್ಕೆ ಬಂದು ತಲ್ಪಿತು ರಾತ್ರಿ ೮॥ ಘಂಟೆಗೆ ಸಭೆಯು ನಡೆಯಿತು ಜನರ ಪ್ರಾರ್ಥನಾನುಸಾರ ಶ್ರೀ॥ ಷ॥ ಬ್ರ॥ ಗುರುಪಾದಶಿವಾಚಾರ್ಯರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು ಗುರುಲಿಂಗಪ್ಪ ನಂದಿ ಇವರು ಶ್ರೀ ಸಿದ್ಧಲಿಂಗಶಿವಾಚಾರ್ಯ ಕೃತ, ರೇಣುಕಗೀತವನ್ನು ಹಾಡಿ ತಮ್ಮ ಮಧುರ ವಾಣಿಯಿಂದ ಸ್ತುತಿಸಿದರು. ಅನಂತರ ಚನ್ನಬಸಪ್ಪ ಮಾಳಗೆ ಇವರು ಗುರುಮಹಿಮಾ ಈ ವಿಷಯದ ಮೇಲೆ ಭಾಷಣಮಾಡಿದರು. ಅಧ್ಯಕ್ಷ ಶ್ರೀಗಳು ಭಕ್ತಿ ವಿಷಯದ ಬಗ್ಗೆ ಭಾಷಣಮಾಡಿ ಸರ್ವರನ್ನೂ ಆನಂದಗೊಳಿಸಿದರು ಅನಂತರ ಮಹಾ ಮಂಗಳಾರತಿಯು ನಡೆದು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಓರ್ವ ಗುರುಭಕ್ತ.

ಚಂದಾದಾರರಲ್ಲಿ ವಿಜ್ಞಾಪನೆ

ಇತ್ತೀಚೆಗೆ ಪ್ರಿಂಟಿಂಗಿಗೆ ಸಂಬಂಧಪಟ್ಟ ಎಲ್ಲ ಸಾಮಾನುಗಳಿಗೂ ವಿಶೇಷಬೆಲೆಯು ಏರಿರುವುದರಿಂದ ನಮ್ಮ ಪತ್ರಿಕೆಯ ಚಂದಾ ಹಣವನ್ನು ೪ ಆಣೆ ಹೆಚ್ಚಿಸಿರುತ್ತೇವೆ ಚಂದಾದಾರರು ಇನ್ನು ಮುಂದೆ ೩ ರೂ ಗಳನ್ನು ಮನಿಯಾರ್ಡರು ಮೂಲಕ ಕಳುಹಿಸಬೇಕು ವಿ ಪಿ ಮಾಡುವದಾದರೆ ೩ ರೂ ೪ ಆಣೆ ವಿಧಿಸುವೆವು

ಮ್ಯಾನೇಜರ್

ಪಂಚಾಚಾರ್ಯಪ್ರಭಾ.

೧೯೪೪ನೆಯ ಏಪ್ರಿಲ್ ತಾ|| ೧೭ನೇ ಸೋಮವಾರ

ಸಂಸ್ಕಾರಪ್ರಭಾವ

ವೀರಶೈವಮತದಲ್ಲಿ ಅನೇಕಕಡೆಗೆ ಆಯಾ ಕಾಲಗಳಲ್ಲಿ ನಡೆಯಬೇಕಾದ ಷೋಡಶಸಂಸ್ಕಾರಗಳು ಕ್ರಮವಾಗಿ ನಡೆಯುವುದಿಲ್ಲ ಸಂಸ್ಕಾರವನ್ನು ಹೊಂದದ ಪುರುಷನಿಗೆ ದೇಹಲಾವಣ್ಯವಾಗಲಿ ಪ್ರಜ್ಞಾಶಕ್ತಿಯಾಗಲಿ ಆಸ್ತಿಕಬುದ್ಧಿಯಾಗಲಿ ಯಾವುದೂ ಹುಟ್ಟುವದಿಲ್ಲ ಭೂಮಿಯಲ್ಲಿ ಸಿಗುವ ರತ್ನದಲ್ಲಿ ಥಳಥಳ್ಯವೆಂಬ ಗುಣವು ಸಹಜವಾಗಿದ್ದರೂ ಶಾಣೋಲ್ಲೇಖವೆಂಬ ಸಂಸ್ಕಾರವಿಲ್ಲದಿದ್ದಲ್ಲಿ ಆ ರತ್ನವು ದೋಷಾವೃತವಾಗಿಯೇ ಇರುತ್ತದಲ್ಲದೆ ತನ್ನ ನಿಜಪ್ರಕಾಶವನ್ನು ಹೊರಗೆಡಹುವುದಿಲ್ಲ ಅದರಂತೆ ದೇಹವೆಂಬ ಗವಿಯೊಳಗೆ ವಾಸವಾಗಿರುವ ಜೀವಾತ್ಮನು ಅನಾದಿಕರ್ಮರೂಪವಾದ ಅವಿದ್ಯೆಯಿಂದ ಆವರಿಸಲ್ಪಟ್ಟವನಾದುದರಿಂದ ಮೇಘಾವೃತನಾದ ಸೂರ್ಯನಂತೆ ಸಂಕುಚಿತಶಕ್ತಿಯುಳ್ಳವನಾಗಿರುತ್ತಾನೆ ಜೀವಾತ್ಮನು ಪರಮಾತ್ಮನಿಂದ ಹುಟ್ಟಿದವನಾದ್ದರಿಂದ ಆ ಪರಮಾತ್ಮನೇ ತಂದೆಯಾಗಿರುತ್ತಾನೆ ಅವನಲ್ಲಿರುವ ಶಕ್ತಿಯೇ ತಾಯಿಯಾಗಿರುತ್ತಾಳೆ ತಂದೆಯ ಐಶ್ವರ್ಯವು ಮಗನಿಗೆ ಅವಶ್ಯಕವಾಗಿ ದೊರೆಯಬೇಕಾಗಿರುವಂತೆ ಚರಾಚರಾತ್ಮಕವಾದೀಪ್ರಪಂಚದ ಸೃಷ್ಟಿಸ್ಥಿತಿಪ್ರಲಯತಿರೋಧಾನ ಅನುಗ್ರಹಕರ್ತನಾದ ಪರಶಿವನ ಸರ್ವಜ್ಞತ್ವಾದ್ಯಖಿಲೈಶ್ವರ್ಯವನ್ನು ಜೀವಾತ್ಮನು ಹೊಂದಬೇಕಾಗಿದ್ದರೂ ಅವಿದ್ಯಾವೃತನಾದುದರಿಂದ ಆ ಪರಶಿವನಿಂದ ವಿಭಕ್ತನಾಗಿ ಚಿತ್ತವೆಂಬ ಎಲೆಯೊಳಗೆ ಸಿಕ್ಕು ಬಹಳ ಸಂಕಟಪಡುತ್ತಿರುವನು ಜೀವನು ಕಿಂಚಿಜ್ಞನೂ ಅಸ್ವತಂತ್ರನೂ ಆಗಿರುವನು ಮಲಾವರಣದಿಂದ ಬಂದ ಕಿಂಚಿಜ್ಞತ್ವಾದಿ ಹೀನಧರ್ಮಗಳು ನಷ್ಟವಾಗಿ ಎಂದಿನಂತೆ ಸರ್ವಜ್ಞತ್ವಾದಿ ಗುಣಗಳು ಉದಯವಾದಹೊರತು ಆತ್ಮನು ಉದ್ಧೃತನಾಗುವುದಿಲ್ಲ ತಿರೋಹಿತಗಳಾದ ಈ ಗುಣಗಳು ಉದಯವಾಗಬೇಕಾದರೆ ಸಂಸ್ಕಾರವಾಗಲೇಬೇಕು ಭೂಮಿಯು ಒಳ್ಳೇ ಫಲವತ್ತಾದುದೆಂದು ತಿಳಿದಿದ್ದರೂ ಅದು ಸಂಸ್ಕಾರವಿಲ್ಲದ ಹೊರತು ಫಲವನ್ನು ಕೊಡಲಾರದು ಆದುದರಿಂದ ಹದವಂತು ನೇಗಿಲನ್ನು ಹೊಡೆದು ಗೊಬ್ಬರವನ್ನು ಹಾಕಿ ಭೂಮಿಯನ್ನು ಆಯಾಯ ಕಾಲದಲ್ಲಿ ಸಂಸ್ಕರಿಸುತ್ತ ಬಂದರೆ ಆಗ ಅದರಲ್ಲಿರುವ ಶಕ್ತಿಯು ವ್ಯಕ್ತವಾಗುವುದು ಹಾಗಿಲ್ಲದಿದ್ದರೆ ಪಾಳುಭೂಮಿಯಂತೆ ನಿಷ್ಫಲವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ

> ಆಧಾನಾದ್ ದ್ವಿಜಾತೀನಾಂ ಸಂಸ್ಕೃತಿರ್ಯಾ ಯಥಾ ಕೃತೇ ।
> ಸಂಸ್ಕಾರರಹಿತಾ ಯೇ ತು ತೇಷಾಂ ಜನ್ಮ ನಿರರ್ಥಕಂ ॥
> ಚಿತ್ರಕರ್ಮ ಯಥಾ ನೇಕೈರಂಗೈರುನ್ಮೀಲ್ಯತೇ ಶನೈಃ ।
> ಬ್ರಾಹ್ಮಣ್ಯಮಪಿ ತದ್ವತ್ಸ್ಯಾತ್ಸಂಸ್ಕಾರೈರ್ವಿಧಿಪೂರ್ವಕೈಃ ॥

ಅನೇಕ ಅಂಗಗಳಿಂದ ಚಿತ್ರಕರ್ಮವು ಮೆಲ್ಲಮೆಲ್ಲನೆ ಕಣ್ತೆರೆಯುವಂತೆ ಆಯಾಯ ಕಾಲಗಳಲ್ಲಿ ಮಾಡಬೇಕಾದ ವಿಧಿಪೂರ್ವಕವಾದ ಸಂಸ್ಕಾರಗಳಿಂದ ಬ್ರಾಹ್ಮಣ್ಯವು ಕಣ್ತೆರೆಯುವದು ಯಾವನಿಗೆ ವಿಧಿಪೂರ್ವಕ ಸಂಸ್ಕಾರಗಳಾಗುವುದಿಲ್ಲವೋ ಅವನು ಯದ್ಯಪಿ ಉತ್ತಮಕುಲದಲ್ಲಿ ಹುಟ್ಟಿದರೂ ಅವನ ಜನ್ಮವೇ ನಿರರ್ಥಕವು.

> ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ದ್ವಿಜ ಉಚ್ಯತೇ ।
> ವೇದಾಭ್ಯಾಸೇನ ವಿಪ್ರಸ್ಸ್ಯಾತ್ ಬ್ರಹ್ಮವಿದ್ ಬ್ರಾಹ್ಮಣೋ ಭವೇತ್ ॥

ಷೋಡಶ ಸಂಸ್ಕಾರಗಳಲ್ಲಿ ಒಂದಾದ ಉಪನಯನಸಂಸ್ಕಾರವು ಜನ್ಮಶೂದ್ರತ್ವವನ್ನು ಪರಿಹಾರಮಾಡಿ ದ್ವಿಜತ್ವವನ್ನುಂಟುಮಾಡುವದು ಅಲ್ಲಿಂದ ವೇದಾಭ್ಯಾಸಾಧಿಕಾರದಿಂದ ವಿಪ್ರತ್ವವನ್ನುಂಟುಮಾಡುವದು ಅಲ್ಲಿಂದ ಬ್ರಹ್ಮಸಾಕ್ಷಾತ್ಕಾರಯೋಗ್ಯತೆಯನ್ನುಂಟುಮಾಡಿ ಬ್ರಾಹ್ಮಣ್ಯವನ್ನುಂಟುಮಾಡುವದು ಎಂದು ಹೇಳುವ ಧರ್ಮವಚನಗಳನ್ನು ಪರ್ಯಾಲೋಚಿಸಿದರೆ ಬ್ರಹ್ಮಸಾಕ್ಷಾತ್ಕಾರಕ್ಕೂ ಸಂಸ್ಕಾರವು ಆವಶ್ಯವೆಂದು ಕಂಡುಬರುತ್ತದೆ ಈ ಸಂಸ್ಕಾರಗಳು ನಲವತ್ತು ವಿಧಗಳಾಗಿರುತ್ತವೆ ಇವುಗಳಲ್ಲಿ ಪೂರ್ವಸಂಸ್ಕಾರವೆಂದೂ ಉತ್ತರಸಂಸ್ಕಾರವೆಂದೂ ಎರಡು ಭಾಗಗಳಾಗಿವೆ ಗರ್ಭಾದಾನಾದಿ ವಿವಾಹಾಂತವಾದ ಹದಿನಾರುಸಂಸ್ಕಾರಗಳೇ ಪೂರ್ವಸಂಸ್ಕಾರಗಳು ಒಂದೊಂದು ಸಂಸ್ಕಾರದಲ್ಲಿ ಒಂದೊಂದು ಮಹತ್ವವನ್ನು ಮಹರ್ಷಿಗಳು ತೋರಿಸಿ ಈ ಎಲ್ಲ ಸಂಸ್ಕಾರಗಳೂ ಒಟ್ಟುಗೂಡಿ ದೇಹಬುದ್ಧಿಮೂಲಕವಾಗಿ ಜೀವಾತ್ಮನ ನಿಜಶಕ್ತಿಯನ್ನು ಪ್ರಕಾಶಗೊಳಿಸುವುದೇ ಸಂಸ್ಕಾರದ ಫಲವಾಗಿದೆ ಪ್ರಪಂಚದಲ್ಲಿ ಪ್ರತಿಯೊಂದು ಪದಾರ್ಥಗಳಿಗೂ ಸಂಸ್ಕಾರವುಂಟು ಸಂಸ್ಕರಿಸದ ವಸ್ತುಗಳಾವವೂ ತಮ್ಮ ತಮ್ಮ ಕಾರ್ಯಗಳನ್ನು ನೇರವಾಗಿ ಮಾಡಲಾರವು ಹೀಗೆ ಲೋಕದಲ್ಲಿರುವ ಜಡವಸ್ತುಗಳ ಸ್ಥಿತಿಯೇ ಹೀಗಿರುವಾಗ ಇನ್ನು ಚೇತನಾತ್ಮಕವಾದ ಆತ್ಮನನ್ನು ಸಂಸ್ಕಾರದಿಂದ ಪರಿಶುದ್ಧಿಗೊಳಿಸಬೇಕೆಂಬುದು ನಿರ್ವಿವಾದ ಮಾತಾಗಿದೆ ಆತ್ಮನು ಕಣ್ಣಿಗೆ ಕಾಣಿಸದ ದೇಹದೊಳಗಿರುತ್ತಾನೆ ಅವನನ್ನು ಸಂಸ್ಕರಿಸುವದು ಹೇಗೆಂದು ಅನೇಕರು ಸಂಶಯ ಪಡುವುದುಂಟು ಪಾತ್ರೆಯೊಳಗೆ ಧಾನ್ಯವನ್ನು ಹಾಕಿ ಒಲೆಯಮೇಲಿಟ್ಟು ಮೇಲೆ ಅಗ್ನಿಸಂಸ್ಕಾರವನ್ನು ಮಾಡುತ್ತ ಬಂದರೆ ಕ್ರಮವಾಗಿ ಒಳಗಿರುವ ಧಾನ್ಯವು ತನ್ನ ಕಠಿನಸ್ವಭಾವವನ್ನು ಬಿಟ್ಟು ಮೃದುಸ್ವಭಾವವನ್ನಂಗೀಕರಿಸಿ ಭೋಗ್ಯವಾಗುವಂತೆ ಆಯಾಯ ಕಾಲದಲ್ಲಿ ದೇಹಕ್ಕೆ ಮಾಡುವ ವಿಧ್ಯುಕ್ತ ಸಂಸ್ಕಾರಗಳಿಂದ ಆತ್ಮನು ಪರಿಪಕ್ವನಾಗಿ ಐಹಿಕ ಮತ್ತು ಪಾರಮಾರ್ಥಿಕ ವೈಭವಗಳನ್ನು ಪಡೆಯುವನು ವೈದಿಕಮತಾನುಯಾಯಿಗಳಿಗೆಲ್ಲಾ ಈ ಸಂಸ್ಕಾರಗಳು ಅತ್ಯವಶ್ಯಕಗಳಾಗಿವೆ ವೀರಶೈವಮತದಲ್ಲಿ ಅನೇಕಕಡೆಯಲ್ಲಿ ಈ ಷೋಡಶಸಂಸ್ಕಾರಗಳು ಕ್ರಮವಾಗಿ ನಡೆಯುವುದಿಲ್ಲ ಈ ಸಂಸ್ಕಾರಗಳನ್ನು ನಡೆಯಿಸತಕ್ಕ ಗುರುವಂಶೀಯರು ಅನೇಕಕಡೆಗಳಲ್ಲಿ ವೇದಾಭ್ಯಾಸ ಮಾಡಿರುವುದಿಲ್ಲ ತಂತ್ರವನ್ನು ನಡೆಯಿಸಲೂಕೂಡ ಬರುವುದಿಲ್ಲ ಭಕ್ತರಮನೆಗೆ ಹೋಗಿ ದಕ್ಷಿಣೆ ತೆಗದುಕೊಂಡು ಬರುವುದೇ ಗುರುಗಳ ಕಾರ್ಯವೆಂದು ತಿಳಿದುಕೊಂಡಿರುತ್ತಾರೆ ಇದು ಬಹಳ ತಪ್ಪು ತಿಳುವಳಿಕೆಯು ಭಕ್ತರನ್ನು ತಿದ್ದುವದು, ಅವರಿಗೆ ಅಹಿಂಸೆ, ಸತ್ಯ ಅಸ್ತೇಯ ಮುಂತಾದ ಸದ್ಗುಣಗಳನ್ನು ಉಪದೇಶ ಮಾಡುವದು ಗರ್ಭಾದಾನ, ಪುಂಸವನ, ಸೀಮಂತೋನ್ನಯನ, ಜಾತಕರ್ಮ ಮುಂತಾದ ಆಯಾಯ ಕಾಲಗಳಲ್ಲಿ ಮಾಡಬೇಕಾದ ಸಂಸ್ಕಾರಗಳನ್ನು ಕ್ರಮತಪ್ಪದೆ ಮಾಡಿಸುವದು ಇತ್ಯಾದಿ ಅನೇಕ ಜವಾಬ್ದಾರಿಯ ಕೆಲಸಗಳನ್ನು ಗುರುಗಳು ವಹಿಸಿಕೊಂಡಿರುತ್ತಾರೆ ಈ ಕೆಲಸವನ್ನು ಅವರು ಮಾಡದಿದ್ದಲ್ಲಿ ಭಕ್ತೋದ್ಧಾರಕ್ಕೆ ಬದಲಾಗಿ ಭಕ್ತವಂಚಕರೆನಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ ಈ ಗುರುವಂಶೀಯರು ವೈದಿಕವಿದ್ಯೆಯನ್ನು ಕಲಿತು ಸಂಶುದ್ಧಹೃದಯರಾಗಿ ಭಕ್ತರ ಮನೆಗಳಲ್ಲಿ ನಡೆಯುವ ಸತ್ಕರ್ಮಗಳನ್ನು ವಿಧ್ಯುಕ್ತವಾಗಿ ನಡೆಸುತ್ತಾರೆಯೇ ಅಥವಾ ಸ್ವಾರ್ಥಿಗಳಾಗಿ ವರ್ತಿಸುತ್ತಾರೆಯೇ ಎಂಬುದನ್ನು ಪೀಠಾಧಿಪತಿಗಳು ಅವಶ್ಯಕವಾಗಿ ನೋಡಿಕೊಳ್ಳಬೇಕಾಗಿದೆ. ಮೇಲಿನ ಅಧಿಕಾರಿಗಳು ಕೆಳಗಿನ ಅಧಿಕಾರಿಗಳ ಕಾರ್ಯಕ್ರಮಗಳನ್ನು ನೋಡಿಕೊಳ್ಳದಿದ್ದರೆ ಪ್ರಜಾರಕ್ಷಣೆಗೆ ಭಂಗಬರುವಂತೆ ಅನೇಕ ಕ್ರಿಯಾಲೋಪಗಳು ಸಂಭವಿಸಿ ವೀರಶೈವಮತವೆಂಬುದು ಇನ್ನೂ ಹೀನಸ್ಥಿತಿಗೆ ಬರುವುದರಲ್ಲಿ ಸಂಶಯವಿಲ್ಲ ಆದುದರಿಂದ ಗುರುವರ್ಗದವರು ವೈದಿಕವಿದ್ಯಾಪಾರಂಗತರಾಗಿ ಶಿಷ್ಯರ ಮನೆಗಳಲ್ಲಿ ನಡೆಯುವ ಗರ್ಭಾಧಾನಾದಿ ಸಂಸ್ಕಾರಗಳನ್ನು ವಿಧ್ಯುಕ್ತರೀತಿಯಿಂದ ನಡೆಯಿಸಿ ತಮ್ಮ ಗುರುತ್ವವನ್ನು ಸಫಲಗೊಳಿಸಬೇಕೆಂದು ಆಶಿಸುತ್ತೇವೆ

ಯುದ್ಧವಾರ್ತೆ.

ಸಿಲಚಾರ್-ಬಿಷೆಣಪುರ ದಾರಿಯಲ್ಲಿ ಕದನ

ಬಿಷೆಣಪುರ-ಸಿಲಚಾರ್ ರಸ್ತೆಯಲ್ಲಿ (ಅಸ್ಸಾಂ) ಜಪಾನರ ಕೆಲವು ದಳಗಳೊಂದಿಗೆ ಮಿತ್ರರು ಹೋರಾಡಿದರು ಎಂದು ವರದಿ ಬಂದಿದೆ. ಸಿಲಚಾರ್ ಎಂಬ ಊರು ಅಸ್ಸಾಂ ಬಂಗಾಳಾ ರೈಲ್ವೆಯಲ್ಲಿದೆ

ಶತ್ರುವಿನ ನೌಕೆಗಳು ಭದ್ರವಾಗಿವೆ

ಜಪಾನರ ಯೋಧಬಲದಲ್ಲಿ ಕೇವಲ ಶೇಕಡ ೫ ಭಾಗ ಮಾತ್ರ ಈಗ ಬ್ರಿಟಿಷ್, ಅಮೇರಿಕನ್ ಮತ್ತು ಆಸ್ಟ್ರೇಲಿಯನ್ ಯೋಧರೊಂದಿಗೆ ಹೋರಾಡುತ್ತಿವೆ. ಜಪಾನರ ನೌಕಾದಳವು ಕೊಂಚವೂ ಅಲುಗದೆ ಭದ್ರವಾಗಿದೆ ಈಗ ನಡೆಯುತ್ತಿರುವುದು ಸತ್ವಪರೀಕ್ಷೆ ಮಾಡುವ ಸಂಗ್ರಾಮ—ಎಂದು ಆಸ್ಟ್ರೇಲಿಯ ಸೈನ್ಯಶಾಖೆ ಮಂತ್ರಿಗಳಾದ ಫ್ರಾನ್ಸಿಸ್ ಫೋರ್ಡ್‌ರವರು ಹೇಳಿದ್ದಾರೆ.

ಅಸ್ಸಾಂ ಯುದ್ಧರಂಗ

ಬಂಗಾಳಾ ಅಸ್ಸಾಂ ರೈಲ್ವೆಯನ್ನು ಕತ್ತರಿಸುವ ಗುರಿಯನ್ನು ಜಪಾನರು ಇನ್ನೂ ಸಾಧಿಸಲಾಗಿಲ್ಲವಾದರೂ ಇನ್‌ಫಾಲ್ ಹಾದಿಯನ್ನು ಕತ್ತರಿಸಿಬಿಟ್ಟಿದ್ದಾರೆ ಮುಖ್ಯ ರೈಲ್ವೆ ನೆಲೆಯಾದ ಕೊಹಿಮ ದಿಮಾಪುರಗಳು ಅಪಾಯಕ್ಕೆ ಸಿಕ್ಕಿವೆ! ಶತ್ರುವನ್ನು ತಡೆದು ನಿಲ್ಲಿಸಲು ಇನ್ನೂ ತಕ್ಕ ಪ್ರಯತ್ನ ನಡೆದಿಲ್ಲ ಮಿತ್ರರ ಅನುಭವ ದೃಷ್ಟಿಯಲ್ಲಿ ಜಪಾನರ ಈ ದಂಡಯಾತ್ರೆಯು ಎದುರಾಳಿಗಳ ಲಕ್ಷ್ಯವನ್ನು ಬೇರೆಕಡೆ ತಿರುಗಿಸುವುದಕ್ಕಾಗಿ ಮಾತ್ರ ನಡೆದುದು ಎಂದು ತೋರಿದರೂ, ಅದಕ್ಕಿಂತ ಹೆಚ್ಚಿನ ಉದ್ದೇಶ ಇದರಲ್ಲಿದೆ ಎಂದು ಈಗ ಯೋಚಿಸಲಾಗಿದೆ ಜಪಾನರು ಈಗ ಭಾರತದಲ್ಲಿ ಕಾಲಿಟ್ಟಿರುವುದು ರಾಜಕೀಯ ಮತ್ತು ಮಿಲಿಟರಿ ದೃಷ್ಟಿಯಿಂದ ಸಾಧುವಲ್ಲ. ಅವರನ್ನು ಆದಷ್ಟು ಬೇಗ ಹಿಮ್ಮೆಟ್ಟಿಸುವುದು ಮಿತ್ರರಿಗೆ ಕ್ಷೇಮ—ಎಂದು ಅಮೇರಿಕದ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಮಿಲಿಟರಿ ಸಂಪಾದಕರು ಬರೆದಿರುವರು

ಅಸ್ಸಾಂ ಗಡಿನಾಡು ಕದನ

ಇನ್‌ಫಾಲ್ ನಗರಕ್ಕೆ ವಾಯುವ್ಯದಲ್ಲಿ ನೂತನ ರಣರಂಗದಲ್ಲಿ ಜಪಾನರು ಈಗ ಕೈ ಕೈ ಕದನಕ್ಕೆ ನಿಂತಿದ್ದಾರೆ ಇಲ್ಲಿ ಮಿತ್ರರು ಹೊಸ ಸ್ಥಾನವನ್ನು ಆಕ್ರಮಿಸಿದರು ಉತ್ತರದಲ್ಲಿ ಇನ್‌ಫಾಲ್ ಬಯಲಿನಲ್ಲಿ ಕದನವಾಗುತ್ತಿದೆ ಇನ್‌ಫಾಲ್ ನಗರದ ವಾಯುವ್ಯ ಮತ್ತು ನೈಋತ್ಯದಲ್ಲಿ ಜಪಾನರ ಸೈನ್ಯಕೇಂದ್ರೀಕರಣ ಆಗುತ್ತಿದೆಯಂತೆ ೭೦೦ ಮೈಲಿ ವಿಸ್ತಾರವಾದ ಇನ್‌ಫಾಲ್ ಮೈದಾನದ ಸುತ್ತ ಜಪಾನರು ವ್ಯೂಹಕಟ್ಟಿ ಕದನ ನಡೆಸುವ ಲಕ್ಷಣಗಳು ಕಂಡುಬರುತ್ತಿವೆ ಇನ್‌ಫಾಲ್ ಹಿಡಿಯುವುದು ಶತ್ರುವಿನ ಗುರಿಯಾದರೂ ಇಲ್ಲಿ ಮಿತ್ರರ ಕೈಬಲವಾಗಿರುವುದರಿಂದ ಅವರು ಕೊಂಚ ಯೋಚಿಸಿಯೇ ಮುಂದುವರಿಯಬೇಕಾಗಿದೆ ಕೊಹಿಮರಂಗದ ಸ್ಥಿತಿಯು ಮಿತ್ರರಿಗೆ ಅನುಕೂಲವಾಗಿದೆ ಮೊಗಾಂಗ್ ಕಣಿವೆಯಲ್ಲಿ ಶತ್ರುಗಳ ಮರ್ದನವಾಗುತ್ತಿದೆ, ಎಂದು ತಿಳಿದುಬರುತ್ತದೆ

ಇಂಫಾಲ್ ಸುತ್ತುವರಿಯಲು ಪ್ರಯತ್ನ

ಇಂಫಾಲ್ ನ ದಕ್ಷಿಣದಲ್ಲಿರುವ ಸರಬರಾಯಿ ಹಾದಿಯನ್ನು ಬಿಷೆಣಪುರದ ಬಳಿಯಲ್ಲಿ ಕತ್ತರಿಸಲು ಜಪಾನರು ಯತ್ನಿಸಿದರು ಇಂಫಾಲ್ ಕೊಹಿಮ ಮಧ್ಯೆ ತಣ್ಣಗಿದ್ದ ರಣರಂಗವು ಈಗ ಬಿಸಿಗೊಳ್ಳುತ್ತಿದೆ ಜಪಾನರು ಕೊಹಿಮ ಮತ್ತು ಇಂಫಾಲ್ ಎರಡು ಕಡೆಗೂ ನುಗ್ಗುವ ಲಕ್ಷಣಗಳಿವೆ ಎಂದು ಹೇಳಲಾಗಿದೆ.

ಇಂಫಾಲ್ ಬಳಿ ಜಪಾನರು

ಮಣಿಪುರದ ಇಂಫಾಲ್ ಬಳಿಯಲ್ಲಿರುವ ಗುಡ್ಡವೊಂದನ್ನು ಜಪಾನರು ಹಿಡಿದುದನ್ನು ಬಿಟ್ಟರೆ ಹೆಚ್ಚಿನ ಕಾರ್ಯಾಚರಣೆಯೇನೂ ಆಗಿಲ್ಲ ಜಪಾನರು ಭಾರತದ ಮೇಲೆ ನಡೆಸುತ್ತಿರುವ ಆಕ್ರಮಣವು ಸುವ್ಯವಸ್ಥೆಯುಂದಲೇ ಸಾಗಿರಬೇಕು ೧೫೦ ಮೈಲಿ ದುರ್ಗಮ ಅರಣ್ಯದಲ್ಲಿ ಅವರು ಮೋಟಾರುಗಳೇ ಮುಂತಾದುವನ್ನು ತಂದಿರುವುದೇ ಇದಕ್ಕೆ ನಿದರ್ಶನ ಆದರೆ ಅವರನ್ನು ತಡೆಯಲು ಬಲವಾದ ಬ್ರಿಟಿಷ್ ಸೇನೆಯಿದೆ ಎಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ತಿಳಿಸಿರುವದಲ್ಲದೆ ಜಪಾನರನ್ನು ಹಿಡಿದು ನಿಲ್ಲಿಸುವ ಶಕ್ತಿ ಬ್ರಿಟಿಷ್ ಸೇನೆಗಳಿಗಿದೆಯೆಂಬ ಭರವಸೆಯನ್ನು ಕರ್ನಲ್ ನಾಕ್ಸ್‌ರವರು ತೋರಿಸಿದ್ದಾರೆ.

ಚೀಣದಲ್ಲಿ ಒಕ್ಕಟ್ಟನ್ನು ಹೆಚ್ಚಿಸುವ ಪ್ರಯತ್ನ

ಚೀಣದಲ್ಲಿ ಜಪಾನರ ಮೇಲೆ ಕದನ ನಡೆಸುತ್ತಿರುವ ಚೀನೀಯರಲ್ಲಿಯೇ ಪರಸ್ಪರ ಸೌಹಾರ್ದವಿಲ್ಲವೆಂದೂ, ಅದನ್ನು ಸಾಧಿಸುವ ನಿಮಿತ್ತ ಅಮೆರಿಕದ ಉಪಾಧ್ಯಕ್ಷ ಹೆನ್ರಿ ವ್ಯಾಲೆಸ್‌ರವರು ಚೀಣಕ್ಕೆ ಹೋಗುವರೆಂದೂ ಗೊತ್ತಾಗಿದೆ.

ಲಿಸ್ಬನ್‌ನಲ್ಲಿ ಜರ್ಮನರ ವ್ಯಾಪಾರೀ ನಿಯೋಗ

ಲಿಸ್ಬನ್ ನಗರಕ್ಕೆ ಜರ್ಮನರ ವ್ಯಾಪಾರಿ ನಿಯೋಗ ಮಂಡಲಿ ಬಂದಿದೆಯೆಂದೂ, ವುಲ್‌ಫ್ರಂ ಎಂಬ ವಸ್ತುವನ್ನು ಪಡೆಯಲು ಉಕ್ಕು ಮತ್ತು ಇತರ ವಸ್ತುಗಳನ್ನು ವಿನಿಮಯವಾಗಿ ಕೊಡುವುದಾಗಿ ಈ ಸಮಿತಿಯು ಪೋರ್ಚುಗೀಸರಿಗೆ ಭರವಸೆ ಕೊಡುತ್ತಿದೆಯೆಂದು ಹೇಳಲಾಗಿದೆ.

ಜರ್ಮನರ ಬಲವನ್ನು ಹೆಚ್ಚಿಸಲಾಗಿದೆಯೇ?

ಜರ್ಮನಿಯ ರಕ್ಷಣ ರಂಗಗಳಲ್ಲಿ ಜರ್ಮನರು ಕಳೆದ ೫-೬ ತಿಂಗಳಿಂದ ಫೈಟರ್ ವಿಮಾನಗಳ ಬಲವನ್ನು ಶೇಕಡ ೩೦೦ ವರೆಗೆ ಬಲಪಡಿಸಿಕೊಂಡಿರುವಂತಿದೆ ಎಂದು ಬ್ರಿಟಿಷ್ ವಿಮಾನಖಾತೆ ಅಧಿಕಾರಿಯೊಬ್ಬರು ಹೇಳಿದರು. ಪೂರ್ವರಂಗದಲ್ಲಿ ಇಷ್ಟೊಂದು ಸೋಲಾಗುತ್ತಿದ್ದರೂ ಜರ್ಮನಿಯನ್ನುಳಿಸಲು ಪ್ರಯತ್ನವಾಗಿದೆಯೆಂದು ನಂಬಲಾಗಿದೆ.

ಹೊಸ ಸರ್ಕಾರಗಳ ಸ್ಥಾಪನೆಗೆ ಸಿದ್ಧತೆ

ಜೆಕೋಸ್ಲೋವೇಕಿಯದ ಕಡೆಗೆ ರಷ್ಯವು ಮುನ್ನಡೆ ಇಟ್ಟಿದೆ ಆಕ್ರಮಣ ಕಾರ್ಯವು ಮೊದಲಾದೊಡನೆಯೇ ಅಲ್ಲಿ ಸ್ವತಂತ್ರ ಸರ್ಕಾರವನ್ನು ರಚಿಸಿ ಆಡಳಿತವನ್ನು ಆರಂಭಿಸಲು ಲಂಡನಿನಲ್ಲಿರುವ ಜೆಕೊಸ್ಲೊವೇಕಿಯ ಸರ್ಕಾರವು ಸ್ಟಾಲಿನರ ಆಶೀರ್ವಾದ ಪಡೆದು ಸಿದ್ಧವಾಗಿದೆಯೆಂದೂ ಮಿತ್ರ ವರ್ಗವು ಪಶ್ಚಿಮ ಯೂರೋಪಿನಲ್ಲಿ ದ್ವಿತೀಯ ರಣರಂಗವನ್ನು ತೆರೆದೊಡನೆಯೇ ಪೋಲೆಂಡಿನಲ್ಲಿ ಸ್ವತಂತ್ರ ಸರ್ಕಾರ ರಚಿಸಲು ಲಂಡನ್ನಿನಲ್ಲಿರುವ ಪೋಲೆಂಡ್ ಸರ್ಕಾರವು ಸಿದ್ಧವಾಗಿದೆಯೆಂದೂ ಹೇಳಲಾಗಿದೆ

ಇಟಲಿಯಲ್ಲಿ ಜರ್ಮನರ ಚಟುವಟಿಕೆ

ಇಟಲಿಯ ಗ್ಯಾರಿಗ್ಲಿಯಾನೋ ನದಿಯಲ್ಲಿ ೨ ಅಡಿ ನೀರನ್ನು ಜರ್ಮನರು ಕಡಮೆ ಮಾಡಿದ್ದಾರೆ ತಾವು ಮುಂದೆ ನುಗ್ಗಲು ಈ ಪ್ರಯತ್ನವಾಗಿದೆಯೋ ಅಥವಾ ಮಿತ್ರರ ಮುನ್ನಡೆ ಪ್ರಯತ್ನ ತಪ್ಪಿಸಲು ಕಾಲವರಿತು ಪುನಃ ಹುಚ್ಚು ಪ್ರವಾಹ ನುಗ್ಗಿಸುವುದೇ ಉದ್ದೇಶವೋ ಹೇಳುವಂತಿಲ್ಲ ಹಿಂದೆ ಕ್ಯಾಸಿನೋ ನಗರದ ಬಳಿ ರ್‍ಯಾಪಿಡೋ ನದಿಯನ್ನು ದಾಟಲು ಅಮೆರಿಕನರು ಯತ್ನಿಸಿದಾಗ ಆ ನದಿಯಲ್ಲಿ ಪ್ರವಾಹ ಬರುವಂತೆ ಜರ್ಮನರು ಮಾಡಿದ್ದರೆಂದು ಹೇಳಲಾಗಿದೆ.

ರಷ್ಯನರ ಮುನ್ನಡೆ

ಕ್ರಿಮಿಯಾದಲ್ಲಿ ರಷ್ಯನರ ಮುನ್ನಡೆಯು ತಡೆಯಿಲ್ಲದೆ ಸಾಗಿದೆ, ಕರ್ಚ್ ಜಲಸಂಧಿಯಲ್ಲಿರುವ ಮುಖ್ಯ ನಗರವಾದ ಕರ್ಚ್ ಸಹ ಆಕ್ರಮಿಸಲ್ಪಟ್ಟಿದೆ ರುಮೇನಿಯದಲ್ಲಿ ಎಲ್ಲೆ ಗಣಿಗಳಿಗೆ ಕೇವಲ ೪೦ ಮೈಲಿಯಲ್ಲಿ ರಷ್ಯನರು ಮುಂದೆ ನುಗ್ಗುವದರಲ್ಲಿ ನಿರತರಾಗಿರುವರು

ಜರ್ಮನರ ಸಾಹಸ

ಸ್ಕಾಲ ಬಳಿಯಲ್ಲಿ ಸುತ್ತುವರಿಯಲ್ಪಟ್ಟಿದ್ದ ತಮ್ಮ ಸೇನೆಯನ್ನುಳಿಸಲು ಏಕೈಕ ದ್ವಾರವಾದ ಬಕ್‌ಚಾಜ್ ಎಂಬ ಊರನ್ನು ಜರ್ಮನರು ಪುನಃ ಆಕ್ರಮಿಸಿ, ಸುತ್ತುವರಿಯಲ್ಪಟ್ಟ ತಮ್ಮ ಸೇನೆಯನ್ನು ಕೂಡಿದ್ದಾರೆಂದು ರಷ್ಯದ ಪ್ರಕಟನೆ ತಿಳಿಸಿದೆ.

ಹಿಟ್ಲರನ ಸಮಾಲೋಚನೆ ಸಭೆ

ಇಟಲಿಯಿಂದ ಬಂದ ವರ್ತಮಾನಪ್ರಕಾರ ಮುಸಲಿನಿಯು ಈಗ ಹಿಟ್ಲರನ ಕೇಂದ್ರಕ್ಕೆ ಹೋಗಿದ್ದಾನೆ ಹಂಗೆರಿ, ರುಮೇನಿಯ, ಫ್ರಾನ್ಸ್, ನಾರ್ವೆ, ಕ್ರೋಷಿಯ ಬೊಹಿಮಿಯ, ಮೊರೇವಿಯ ಭಾಗಗಳ ನಾಯಕರು ಮತ್ತು ಮಹಾನಾಯಕರುಗಳೆಲ್ಲರೂ ಹಿಟ್ಲರರೊಡನೆ ಸಮಾಲೋಚನೆಗಾಗಿ ಬರ್ಚ್‌ಟೆಸ್ ಗೇಡಿನಿನಲ್ಲಿ ಸೇರಿದ್ದಾರೆ, ಈ ಸಭೆಗೆ ಜಪಾನ್ ರಾಯಭಾರಿಯೂ ಹೋಗಿದ್ದಾನೆ-ಎಂದು ತಿಳಿದುಬರುತ್ತದೆ

ಶತ್ರು ವಿಮಾನ ಕಾರ್ಖಾನೆಗಳ ನಾಶ

ಅಮೆರಿಕದ ೫೦೦ ಬಾಂಬರ್ ವಿಮಾನಗಳು ೧೧೦೦ ಫೈಟರ್ ವಿಮಾನಗಳ ಬೆಂಗಾವಲಿನಲ್ಲಿ ಆಸ್ಚ ಬರ್ಗ್ ಮತ್ತು ಸ್ಪೈರ್ ಪೋರ್ಟ್‌ಗಳಲ್ಲಿರುವ ಜರ್ಮನ್ ವಿಮಾನ ತಯಾರಿಕೆಯ ಕಾರ್ಖಾನೆಗಳನ್ನು ದಾಳಿ ಮಾಡಲು ಹೋದಾಗ ಶತ್ರು ವಿಮಾನ ವಿನಾಶಕ ಫಿರಂಗಿಗಳ ಮತ್ತು ವಿಮಾನಗಳ ಪ್ರತಿಭಟನೆಯು ತೀವ್ರವಾಗಿದ್ದಿತು. ಮಿತ್ರರ ೩೭ ಬಾಂಬರುಗಳೂ ೮ ಫೈಟರುಗಳೂ ನಾಶವಾದವು ಉತ್ತರ ಫ್ರಾನ್ಸಿನ ಮೇಲೂ ಬೆಲ್ಜಿಯಂ ಮೇಲೂ ಮಿತ್ರವಿಮಾನಗಳು ದಾಳಿಮಾಡಿ ಶತ್ರು ರೈಲ್ವೆ ಕೇಂದ್ರಗಳನ್ನು ನಾಶಪಡಿಸಿವೆ ನಾಮೂರ್ ಎಂಬ ರೈಲ್ವೆ ಜಂಕ್ಷನ್‌ಗೆ ಬಹಳ ಆಘಾತವಾಗಿದೆ ಇಟಲಿಯ ನೆಲೆಗಳಿಂದ ಅಮೆರಿಕಾ ವಿಮಾನಗಳು ಹಂಗೇರಿಯ ಮೇಲೆ ಹೋಗಿ ಬುಡಾಪೆಸ್ಟ್‌ಗೆ ೧೦ ಮೈಲಿ ದೂರದಲ್ಲಿರುವ ವಿಮಾನಕಾರ್ಖಾನೆಗೆ ಮಹತ್ತರ ಪೆಟ್ಟನ್ನು ಕೊಟ್ಟವು. ರಾಜಧಾನಿಯ ಬಳಿ ಇದ್ದ ವಿಮಾನ ನೆಲೆಯ ಮೇಲೂ ದಾಳಿ ಮಾಡಲಾಯಿತು ಎಂದು ಮಿತ್ರರು ಪ್ರಕಟಿಸಿದ್ದಾರೆ

ಇರಾನಿನಲ್ಲಿ ಭೂಕಂಪ

ಪರ್ಷಿಯದಲ್ಲಿ ಭಾರಿ ಭೂಕಂಪವಾಗಿ ಟೆಹರಾನಿಗೆ ೨೦೦ ಮೈಲಿಯಲ್ಲಿರುವ [illegible] ಎಂ [illegible] ನಾಶವಾಗಿದೆ ಸಾವು ನೋವುಗಳು ಮಿತಿಮೀರಿವೆಯೆಂದು ನಂಬಲಾಗಿದೆ

ಅಂಚೆ, ತಂತಿಗಳಮೇಲೆ ಸೆನ್ಸಾರ್

ಮಿಲಿಟರಿ ಭದ್ರತೆಯ ದೃಷ್ಟಿಯಿಂದ ಖಾಸಗಿ ಅಂಚೆ ಮತ್ತು ತಂತಿ ವ್ಯವಹಾರಗಳ ಮೇಲೆ ಇಂಡಿಯಾ ಸರ್ಕಾರದವರು ಸೆನ್ಸಾರ್ ಅಧಿಕಾರವನ್ನು ಉಪಯೋಗಿಸುವುದು ಈಗ ಅತ್ಯವಶ್ಯಕವಾಗಿದೆ ಎಂಬುದಾಗಿ ಅಧಿಕೃತವಾಗಿ ಪ್ರಕಟನೆ ಹೊರಡಿಸಲಾಗಿದೆ ಏತತ್ಕ್ಕಾರಣದಿಂದ ಶತ್ರುಗಳು ಭಾರತದ ಭೂಗಡಿಯಲ್ಲಿ ಕಾಲಿಟ್ಟಿದ್ದಾರೆ ಸಮುದ್ರಗಡಿಯಲ್ಲಿ ನುಗ್ಗಲು ಹೊಂಚುಹಾಕುತ್ತಿರುವಂತಿದೆ ಹೀಗಿರುವಾಗ ಮಿಲಿಟರಿ ಭದ್ರತೆಯನ್ನು ನೋಡಿಕೊಳ್ಳುವುದು ಅತ್ಯವಶ್ಯಕ ಶತ್ರುವು ಈಗ ರಕ್ಷಣೆಯಲ್ಲಿ ತೊಡಗಿ ಮಿತ್ರ ಸೈನಿಕರೊಂದಿಗೆ ಕಾಳಗ ಮಾಡುತ್ತಿದ್ದರೂ, ಮುತ್ತಿಗೆಯನ್ನು ನಡೆಸಬೇಕೆಂದು ಪ್ರಯತ್ನ ಪಡುತ್ತಿರುವುದರಿಂದ ಮಿಲಿಟರಿ ಭದ್ರತೆ ಈಗ ಅತ್ಯಂತ ಮುಖ್ಯವಾಗಿದೆ. ದಾಳಿ ಮಾಡಲು ಉಪಕ್ರಮಿಸಿದರೆ, ಆಗ ಶತ್ರುಗಳು ಎಲ್ಲ ಸ್ಥಾನಗಳಿಂದಲೂ ವಾರ್ತೆಗಳನ್ನು ಸಂಗ್ರಹಿಸುವುದಕ್ಕಾಗಿ ತಮ್ಮ ಪ್ರಯತ್ನಗಳನ್ನು ಇಮ್ಮಡಿ ಮಾಡುವ ಸಂಭವವಿದೆ. ಜಪಾನರ ಮೇಲೆ ನಡೆಸುತ್ತಿರುವ ಈ ಸಂಗ್ರಾಮದಲ್ಲಿ ಭಾರತವು ಈಗ ಮುಖ್ಯ ನೆಲೆಯಾಗಿದೆ. ಕಾರ್ಯಾಚರಣೆಗಳ ಪ್ರಾಮುಖ್ಯತೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಮಿಲಿಟರಿ ಭದ್ರತೆ ಸಮಸ್ಯೆಯನ್ನು ಪರಿಶೀಲಿಸಲಾಗಿದೆ ಅಜಾಗರೂಕತೆಯಿಂದಲೂ ಉದಾಸೀನದಿಂದಲೂ ಮಾತನಾಡುವುದನ್ನು ಮತ್ತು ವ್ಯವಹರಿಸುವುದನ್ನು ತಡೆಗಟ್ಟಲು ವಿಶೇಷವಾದ ಪ್ರಚಾರ ಮಾಡುತ್ತಿರಲಾಗಿದೆ. ಆದರೂ, ಅಧಿಕಾರಿ ಸಮುದಾಯದಲ್ಲೂ ಖಾಸಗಿ ಸಮುದಾಯದಲ್ಲೂ ಇನ್ನೂ ಉದಾಸೀನವಾಗಿ ಮಾತನಾಡುವುದು ತಪ್ಪಿಲ್ಲ, ಈ ಅಜಾಗರೂಕತೆಯ ಮಾತುಗಳನ್ನಾಡುವುದನ್ನು ತಡೆಗಟ್ಟದೆ ಹೋದಲ್ಲಿ ಇದರಿಂದ ಮಿಲಿಟರಿ ಭದ್ರತೆಗೆ ಅತ್ಯಂತ ಅಪಾಯ ಸಂಭವಿಸುವುದು ಅಷ್ಟೇ ಅಲ್ಲದೆ ಕದನ ಮಾಡುತ್ತಿರುವ ಸೈನಿಕರ ಜೀವಕ್ಕೆ ಹಾನಿಯೂ ಪ್ರಜೆಗಳ ಜೀವ ಮತ್ತು ಆಸ್ತಿಪಾಸ್ತಿಗಳಿಗೆ ಹಾನಿಯೂ ಉಂಟಾಗುವ ಸಂಭವವಿದೆ. ಆದುದರಿಂದ ಈಗಾಗಲೇ ಇತರ ದೇಶಗಳಲ್ಲಿ ಜಾರಿಯಲ್ಲಿರುವಂತೆ ಭಾರತದಲ್ಲೂ ಕೂಡ ಒಳದೇಶದಲ್ಲಿ ನಡೆಯುವ ಖಾಸಗಿ ತಂತಿ ಮತ್ತು ಅಂಚೆ ವ್ಯವಹಾರದ ಮೇಲೆ ಇಂಡಿಯಾ ಸರ್ಕಾರದವರು ಒಡೆದು ನೋಡುವುದನ್ನು ನಿಶ್ಚಯಿಸಿ ಅದನ್ನು ಕಾರ್ಯರೂಪಕ್ಕೆ ತಂದಿದ್ದಾರೆ

ದುಃಖವಾರ್ತೆ

ವಸ್ತಾರೆಗ್ರಾಮದ ಮ|| ರಾ|| ಚೌಡೇಗೌಡರ ಪ್ರಥಮ ಪುತ್ರ ಸಿದ್ಧಪ್ಪನೆಂಬಾತನು ತಾ|| 8 4 1944ನೇ ಶನಿವಾರ ಸಾಯಂಕಾಲ 6 ಘಂಟೆಯಲ್ಲಿ ಹೃದಯರೋಗದಿಂದ ಶಿವಾಧೀನನಾದನು ಈತನು ಹನ್ನೆರಡು ವರ್ಷದ ಬಾಲಕನಾಗಿದ್ದರೂ ಬಹು ಗುಣಶಾಲಿಯಾಗಿದ್ದನು ಅಂತ್ಯಸಂಸ್ಕಾರಕ್ಕೆ ವೇ|| ಕಲ್ಲಳ್ಳಿಮಠದ ಶಾಂತಯ್ಯನವರು ವೇ|| ಮರಿಯಯ್ಯನವರು ಹಲಸುಮನೆ ಮಠದ ವೇ|| ಮಿತ್ರಯ್ಯನವರು ಮ|| ಆರ್ ವೀರಪಟ್ಟರು, ನಂದೀಕೆರೆ ಮ|| ಮಲ್ಲೇಗೌಡರು, ಹಲಸುಮನೆ ಪಟೇಲ ಮ|| ನಿರ್ವಾಣೇಗೌಡರು, ತೋರಣಮಾವು ಪಟೇಲ ಮ|| ವೀರೇಗೌಡರು ಇನ್ನೂ ಅನೇಕರು ಸೇರಿದ್ದರು ಇಂತಹ ಸತ್ಪುತ್ರನನ್ನು ಕಳೆದುಕೊಂಡ ಮಾತಾಪಿತೃಗಳಿಗೆ ದುಃಖಶಮನವನ್ನೂ ಮೃತನ ಆತ್ಮಕ್ಕೆ ಶಾಂತಿಯನ್ನೂ ಪರಶಿವನು ಅನುಗ್ರಹಿಸಲಿ

ದುಃಖಿ [illegible]

ಸ್ವೀಕಾರ

[illegible] ಸಿಟಿ ಸಿದ್ದೇಶ್ವರಪುರದಲ್ಲಿರುವ ರೇಣುಕ [illegible] ಮ|| [illegible] ಗುರುಸಿದ್ದಪ್ಪನವರ ಮ [illegible] ಆರ್ ಸಿದ್ದಪ್ಪನವರ ಪುತ್ರ ಚಿ| ಮರಿಯಪ್ಪನ [illegible] ವಧುವಿನೊಡನೆ ನಡೆದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ಮ| ರಾ|| [illegible] ಬಿ [illegible] ನವರ ದ್ವಾರ ಒಪ್ಪಿಬತ್ತವೆ

ಬೆಳಗಾವ ಡಿ| ಚಂದನಹೊಸೂರುಗ್ರಾಮದಲ್ಲಿರುವ ಮ ರಾ| ಮರಿಗೌಡರ ಭರಮಪ್ಪನವರ ೮ ವರುಷದ ಬಾಲಕನು ಹಾಳು ಬಾವಿಯಲ್ಲಿ ಬಿದ್ದು ಶ್ರೀ [illegible]ಶ್ವರನ ಅನುಗ್ರಹದಿಂದ ಉಳಿದ ಸಂತೋಷಕ್ಕಾಗಿ ಶ್ರೀ ಸುತ್ತಗಟ್ಟೆಸ್ವಾಮಿಗಳವರ ಅನುಜ್ಞೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ಕಡೂರು ಡಿ| ವಸ್ತಾರೆ ಗ್ರಾಮದಲ್ಲಿರುವ ಮ|| ರಾ| ಚೌಡೇಗೌಡರ ಪುತ್ರನು ಶಿವಾಧೀನನಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಮೈಸೂರು ವೀರಶೈವ ವಿದ್ಯಾವರ್ಧಕ ಫಂಡಿನ ಸ್ವೀಕಾರ

1 ಬೆಂಗಳೂರು ಕಂಟೋನ್ಮೆಂಟ್ ಶೇಟ್ ಮ॥ ಗಂಗಪ್ಪನವರ ಪುತ್ರ ಚಿ॥ ಜಿ ಚಂದ್ರಪ್ಪನೆಂಬ ವರನಿಗೂ ಶಿರಿಕೆರೆ ಮ॥ ಬಸಪ್ಪನವರ ಪುತ್ರಿ ಚಿ॥ ಸೌ॥ ಗಂಗರಾಜಮ್ಮನೆಂಬ ವಧುವಿಗೂ ನಡೆದ ವಿವಾಹ ಮಹೋತ್ಸವದಲ್ಲಿ ಸಂಘದ ಫಂಡಿಗಾಗಿ ಎಂ ಜಿ ನಾಗಪ್ಪನವರ ಮೂಲಕ ೨ ರೂಪಾಯಿಗಳು ಬಂದಿರುತ್ತೆ

೨ ಬಿಡದಿ ಶೇಟ್ ಮ॥ ಮಲ್ಲಿಶೆಟ್ಟರ ಪುತ್ರ ಚಿ॥ ಬಿ ಎಂ ಶಿವಪ್ಪ ಬಿ ಎಸ್‌ಸಿ ಇವರಿಗೂ ಬೆಂಗಳೂರು ಶೇಟ್ ಮ॥ ದೊಡ್ಡವೀರಶೆಟ್ಟರ ಪುತ್ರಿ ಚಿ॥ ಸೌ॥ ಪಾರ್ವತಾಂಬಮ್ಮನೆಂಬ ವಧುವಿಗೂ ನಡೆದ ವಿವಾಹ ಸಮಾರಂಭದಲ್ಲಿ ಮ॥ ದೊಡ್ಡವೀರಶೆಟ್ಟರಿಂದ ಸಂಘದ ಫಂಡಿಗಾಗಿ, ಮ॥ ಬಿ ರುದ್ರಶೆಟ್ಟರ ಮೂಲಕ ೧೦ ರೂ ಬಂದಿರುತ್ತೆ

೩ ಬೆಂಗಳೂರು ಸಿಟಿ ವಿಶ್ವೇಶ್ವರಪುರದಲ್ಲಿರುವ ರೇಣುಕಭವನದಲ್ಲಿ ಮ॥ ಗಂಧಿಗೆ ಅಂಗಡಿ ಗುರುಸಿದ್ಧಪ್ಪನವರ ಮಗ ಮ॥ ಜಿ ಆರ್ ಸಿದ್ಧಪ್ಪನವರ ಪುತ್ರ ಚಿ॥ ಮರಿಯಪ್ಪನೆಂಬ ವರನಿಗೂ ಚಿ॥ ಸೌ॥ ಗಂಗಾಂಬಿಕಾ ಎಂಬ ವಧುವಿಗೂ ನಡೆದ ವಿವಾಹ ಸಮಾರಂಭದಲ್ಲಿ ಮ॥ ಗುರುಸಿದ್ಧಪ್ಪನವರಿಂದ ಸಂಘದ ಸೆಕ್ರೆಟರಿಯವರ ಮೂಲಕ ೫ ರೂ ಬಂದಿರುತ್ತೆ

೪ ಬಾಣಾವರದ ಮ॥ ಮಲ್ಲಪ್ಪನವರ ಪುತ್ರಿ ಚಿ॥ ಸೌ॥ ವೇದಾಂಬಾ ಎಂಬ ಕನ್ಯೆಯನ್ನು ಮ॥ ಎನ್ ಶಿವಶಂಕರಪ್ಪನವರ ಪುತ್ರ ಚಿ॥ ಡಿ ಎಸ್ ಉಮಾಪತಿ ಎಂಬ ವರನಿಗೆ ಕೊಟ್ಟು ನಡೆದ ವಿವಾಹ ಸಮಾರಂಭದಲ್ಲಿ ಸಂಘದ ಫಂಡಿಗಾಗಿ ಮ॥ ಕೆ ಬಿ ದೊಡ್ಡರಾಚಪ್ಪನವರ ಮೂಲಕ ೫ ರೂ ಬಂದಿರುತ್ತೆ

ವೀರಶೈವ ವಿದ್ಯಾಭಿವೃದ್ಧಿ ಫಂಡ್

ಆ ಸೆಕ್ರೆಟರಿ ಸರಾಫ್, ಬಿ ಬಸಪ್ಪ, ಬೆಂಗಳೂರುಸಿಟಿ

ದೇವರ ಮಹಿಮೆ ಅಗಾಧವಾದುದು
ಚಂದನ ಹೊಸೂರು

ಬೈಲಹೊಂಗಲ ತಾಲೂಕು ಪೈಕಿ ಚಂದನಹೊಸೂರಲ್ಲಿ ಪ್ರತಿವರ್ಷದಂತೆ ಈ ವರ್ಷ ಚೈತ್ರ ಶು॥ ೧೦ ಸೋಮವಾರ ದಿವಸ ಶ್ರೀಕಲ್ಮೇಶ್ವರನ ಜಾತ್ರೆಯು ನೆರವೇರಿತು. ಆ ದೇವಾಲಯದ ಮುಂಭಾಗದಲ್ಲಿ ಒಂದು ಸೇದುವ ಬಾವಿಯುಂಟು ಅದು ೪೫ ಫೂಟು ಆಳವಾಗಿದ್ದು ಬೇಸಿಗೆಯಲ್ಲಿ ಅದರಲ್ಲಿ ನೀರು ಇರುವದೇ ಇಲ್ಲ ಆ ಬಾವಿಯು ಶಿಲಾಮಯವಾಗಿದ್ದು ಕಟ್ಟಡವು ನೋಡುವಂತಿದೆ ಜಾತ್ರೆಯ ದಿವಸ ಮುಂಜಾನೆ ೧೦ ಘಂಟೆಗೆ ಅಲ್ಲಿಯ ಶಾಲೆ ಬಿಟ್ಟಿತು ಎಲ್ಲ ಹುಡುಗರೂ ದೇವಾಲಯದ ಮುಂಭಾಗದಲ್ಲಿ ನೆರೆದರು ಕೆಲವರು ಬಾವಿಯ ಕಟ್ಟೆಯಮೇಲೆಯೂ ಕುಳಿತು ಆಟವಾಡಹತ್ತಿದರು ಆಗ್ಗೆ ಭರಮಪ್ಪ ಮುದಿಗೌಡರ ಎಂಬವರ ೮ ವರ್ಷದ ಬಾಲಕನು ಕೂಡ ಅದೇ ಬಾವಿಯ ಕಟ್ಟೆಯಮೇಲೆ ಕುಳಿತಿದ್ದನು ಭರಮಪ್ಪನು ಒಳ್ಳೇ ಭಕ್ತಿವಂತನು ಈಶ್ವರಾನುಗ್ರಹದಿಂದಲೇ ವಯಸ್ಸಿನ ಕಾಲಕ್ಕೆ ಆ ಗಂಡುಮಗನನ್ನು ಪಡೆದಿದ್ದನು ಆ ಹುಡುಗನು ಉಳಿದವರ ಕೂಡ ಆಟವಾಡುವಾಗ ಕಾಲುಜಾರಿ ಒಮ್ಮೆಲೇ ಬಾವಿಯಲ್ಲಿ ಬಿದ್ದನು ೪೫ ಫೂಟು ಆಳವಾದ ನೀರಿಲ್ಲದ ಬಾವಿಯಲ್ಲಿ ಬಿದ್ದ ಹುಡುಗನು ಸತ್ತನೆಂದು ಎಲ್ಲರೂ ಗದ್ದಲವೆಬ್ಬಿಸಿದರು ಊರವರೆಲ್ಲರೂ ಬಾವಿಯ ಹತ್ತಿರ ಕೂಡಿದರು ದೇವರ ಸ್ತೋತ್ರ ರೋದನಗಳೆರಡೂ ಕೂಡಿಯೇ ನಡೆದವು ವೀರಭದ್ರಪ್ಪ ಖಾನಾಪುರ ಎಂಬವನು ಆ ಹುಡುಗನನ್ನು ಮೇಲೆ ನಿಂತು ಜೋರಿನಿಂದ ಕರೆದನು ಹಾಳುಬಾವಿಯಲ್ಲಿರುವ ಆ ಚಿಕ್ಕ ಬಾಲಕನು ಎದ್ದು ನಿಂತು ನನ್ನನ್ನು ಮೇಲಕ್ಕೆ ತೆಗೆಯಿರಿ ನನಗೇನೂ ಆಗಿಲ್ಲವೆಂದು ಹೇಳಿದನು ಆಗ್ಗೆ ಬಾವಿಯಲ್ಲಿ ತೊಟ್ಟಿಲವನ್ನು ಬಿಟ್ಟು ಮೇಲಕ್ಕೆ ತೆಗೆದರು ಬಾಲಕನು ಈಶ್ವರಾನುಗ್ರಹದಿಂದ ಮೇಲಕ್ಕೆ ಬಂದನು ಪಾಟಿ ಪುಸ್ತಕಗಳು ಅವನ ಕೈಯಲ್ಲಿ ಹಾಗೆಯೇ ಇದ್ದವು ಗುಡ್ಡದ ಮೇಲಿಂದ ಉರುಳಿಸಲ್ಪಟ್ಟ ಪ್ರಹ್ಲಾದನನ್ನು ಕೃಷ್ಣನು ಉಳಿಸಿದಂತೆ ಈ ಬಾಲಕನನ್ನು ನಮ್ಮ ಈ ಕಲ್ಮೇಶ್ವರನು ಉಳಿಸಿದನೆಂದು ದೇವರ ಮಹಿಮೆಯನ್ನು ಎಲ್ಲರೂ ಕೊಂಡಾಡಹತ್ತಿದರು ದೇವರು ಇಲ್ಲೆಂದು ಕೂಗಾಡುವ ನಾಸ್ತಿಕರಿಗೆ ಇದು ಪ್ರತ್ಯಕ್ಷಪ್ರಮಾಣವಾಯಿತು ಆ ಮೇಲೆ ಹುಡುಗನು ದೇವಾಲಯಕ್ಕೆ ಪ್ರದಕ್ಷಿಣೆಮಾಡಿ ತನ್ನ ಮನೆಗೆ ಆನಂದದಿಂದ ಹೋದನು ಈಶ್ವರನ ಮಹಿಮೆಯು ಅಗಾಧವಾದುದು. ಜಾತ್ರೆಯು ಭಂಗವಾಯಿತೆಂಬ ಜನರ ಭಾವನೆಯು ಉತ್ಸಾಹವುಳ್ಳದ್ದಾಯಿತು ಊರವರೆಲ್ಲರೂ ಕೂಡಿ ಈ ಜಾತ್ರೆಯನ್ನು ೩ ದಿವಸಗಳವರೆಗೆ ಒಳ್ಳೇ ಉತ್ಸಾಹದಿಂದ ಮಾಡಿದರು ಮ॥ ಕಲ್ಲಪ್ಪ ಹೊನ್ನಪ್ಪ ಪಾಟೀಲ ಎಂಬವರು ವಯಸ್ಸಿನಲ್ಲಿ ಚಿಕ್ಕವರಿದ್ದರೂ ಭಕ್ತಿಯಲ್ಲಿ ದೊಡ್ಡವರಿದ್ದಾರೆ ಇವರು ಈ ಜಾತ್ರೆಯಲ್ಲಿ ಭಾಗವಹಿಸಿ ಸತ್ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸಿದರು ಮತ್ತು ಶ್ರೀಮಂತ ಗಂಗಪ್ಪ ಹಿಂದಿಗಾರ, ಗಂಗಪ್ಪ ಬಾಗೋಡಿ, ಲಿಂಗಪ್ಪ ಕರಬಣ್ಣವರ, ಬಸಪ್ಪ ಕರಬಣ್ಣನವರ, ವೀರಭದ್ರಪ್ಪ ಖಾನಾಪುರ ಇವರೇ ಮೊದಲಾದ ಸದ್ಭಕ್ತರು ದೇವರ ಸೇವೆಯನ್ನು ಭಕ್ತಿಪೂರ್ವಕ ಮಾಡಿ ಪುನೀತರಾದರು ದೇವರು ಸರ್ವರಿಗೆ ಕಲ್ಯಾಣವನ್ನುಂಟುಮಾಡಲೆಂದು ಬೇಡಿಕೊಳ್ಳುತ್ತೇನೆ

ಮೃತ್ಯುಂಜಯಶರ್ಮಾ ಹಿರೇಮಠ, ಅರಳೀಕಟ್ಟಿ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ) ..	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ ..	೨ ಆಣೆ
ಪಂಚಾಚಾರ್ಯಪ್ರಕಾಶ	೨ ಆಣೆ
ಪಂಚಾಚಾರ ಪ್ರಕಾಶಿಕಾ ..	೩ ಆಣೆ
ಬಿಲ್ವಮಾಹಾತ್ಮ್ಯ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ ..	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೭ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ ..	೭ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ ..	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
* ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
* ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಸೂಪರ್‌ಮುದ್ರಣ)	೧ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳುಳ್ಳವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಪ್ಪದ) ..	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*) ...	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

* ಈ ಗುರುತು ಹಾಕಿರುವ ಪುಸ್ತಕಗಳು ಮುಗಿದುಹೋಗಿರುವುದರಿಂದ ದೊರೆಯುವುದಿಲ್ಲ. ಕೆಲವು ಪುಸ್ತಕಗಳು ಮುಗಿಯುತ್ತ ಬಂದಿರುವುದರಿಂದಲೂ ಕಾಗದದ ಬೆಲೆಯು ವಿಶೇಷವಾಗಿ ಏರುತ್ತಿರುವದರಿಂದಲೂ ಅವುಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ

ಮ್ಯಾನೇಜರ್— ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರಿಗೆ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೪ನೇ ಏಪ್ರಿಲ್ ೧೯೪೪ [ಸಂಚಿಕೆ ೫೧

॥ ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ ॥

ಲೋಭವು ಪಾಪದ ತಂದೆಯು.

ಲೇ ॥ ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ನ ಕೇವ ಶ ಪ..ವೇನೂರು.

ಲೋಭವೆಂದರೆ ಆಕ್ಯಾಶೆಯ ಮಹತ್ವಾಕಾಂಕ್ಷೆಯೆಂದು ಹೇಳಬಹುದು ಇದು ಪಾಪಗಳಿಗೆಲ್ಲಾ ಮೂಲವು ! ನರಕಕ್ಕೆ ಹೆಬ್ಬಾಗಿಲು ಜನನ ಮರಣರೂಪವಾದ ಈ ಸಂಸಾರದಲ್ಲಿ ಲೋಭವೆಂಬುದು ಒಲಿಷ್ಟವಾದ ಶತ್ರುವು ಇದು ತಲೆದೋರಿದೊಡನೆಯೇ ಎಂತಹ ಜ್ಞಾನಿಯಾದರೂ ಅಜ್ಞಾನಿಯಾಗುವನು ಪಾಪವು ದುರ್ಗುಣಗಳಿಂದ ಹುಟ್ಟುವುದೆಂಬುದು ಎಲ್ಲರಿಗೂ ಗೊತ್ತಿಲ್ಲ ಆದ ಪ್ರಯುಕ್ತ ಪಾಪವು ಹುಟ್ಟದಂತೆ ಆಚರಿಸಬೇಕು ಲಕ್ಷಾಂತರ ಜೀವರಾಶಿಯೋನಿಯಲ್ಲಿ ಜನಿಸಿ ನಾನಾ ದುಃಖಗಳನ್ನು ಹೊಂದಿ ಯಾವುದೋ ಒಂದು ಪುಣ್ಯ ವಿಶೇಷದಿಂದ ಮನುಷ್ಯ ಜನ್ಮವನ್ನು ತಾಳಿ ಪುಣ್ಯಪಾಪಗಳ ತಾರತಮ್ಯವಂ ತಿಳಿದೂ ತಿಳಿದು ಪಾಪಕಾರ್ಯದಲ್ಲಿ ಪ್ರವರ್ತಿಸುತ್ತಿರುವದು ಎಂತಹ ಸೋಜಿಗವು ? ಮನುಷ್ಯನು ಎಷ್ಟು ಓದಿದರೂ ಎಷ್ಟು ಸರಿಯಾಗಿ ಉಪದೇಶ ವಾಕ್ಯಗಳನ್ನು ಕೇಳಿದರೂ, ಎಷ್ಟು ಜಪ-ತಪ-ಅನುಷ್ಠಾನಾದಿಗಳನ್ನು ಮಾಡಿದರೂ ತನ್ನ ದುರ್ಗುಣಗಳನ್ನು ಸುಧಾರಿಸಿಕೊಳ್ಳದಿದ್ದರೆ ಜಲಹೋಮದಂತೆ ಎಲ್ಲವೂ ವ್ಯರ್ಥವಾಗುವದು "ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ" "ಸತ್ಯಂವದ ಧರ್ಮಂಚರ" "ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ" ಎಂದು ಶ್ರುತಿ ಸ್ಮೃತಿ ವಾಕ್ಯಗಳು ಘಂಟಾಘೋಷವಾಗಿ ಸಾರುತ್ತಿದ್ದರೂ ದುರ್ಗುಣಗಳ ಸಂಸರ್ಗದಿಂದ ಧರ್ಮವನ್ನತಿಕ್ರಮಿಸಿ ಮಾನವನು ಅಧರ್ಮದಲ್ಲಿ ಪ್ರವೃತ್ತನಾಗಬೇಕಾದರೆ ದುರ್ಗುಣಗಳ ಪ್ರಾಬಲ್ಯವು ಎಷ್ಟು ಪ್ರಬಲವಾಗಿರುವುದೆಂಬುದನ್ನು ವಾಚಕರೇ ಊಹಿಸಬಹುದು. ಕಾಮ-ಕ್ರೋಧ-ಲೋಭ ಮೊದಲಾದ ದುರ್ಗುಣಗಳು ನರಕದ ಹೆಬ್ಬಾಗಿಲುಗಳಾಗಿರುವವು.

ಸಕಲ ದುರ್ಗುಣಗಳಿಗಿಂತ ಲೋಭದಿಂದಲೇ ಪಾಪವು ಆವಿರ್ಭವಿಸುವುದರಿಂದ ಲೋಭಕ್ಕೆ ಪಾಪದ ತಂದೆಯೆಂದೂ ದುರ್ಗುಣಗಳ ತವರೂರೆಂದೂ ಕರೆಯಲು ಯಾವ ಅಭ್ಯಂತರವೂ ಇಲ್ಲ ಲೋಭಿಯು ಎಂತಹ ನೀಚಕೃತ್ಯಗಳನ್ನು ಮಾಡಲಿಕ್ಕೂ ಸಹ ಹೇಸುವುದಿಲ್ಲ ಧನವು ದೊರೆಯುವುದೇ ಅವನಿಗೆ ಮೊದಲನೆಯ ಕೆಲಸವು ಜಾತಿಯು ರಸಾತಲಕ್ಕೆ ಹೋಗಲಿ, ಶೀಲವು ಸಮುದ್ರಪಾಲಾಗಲಿ ಧರ್ಮಕ್ಕೆ ಬೆಂಕಿಬೀಳಲಿ "ಹಣವೆನಗೊಂದೆ ಮುಖ್ಯವಲೆ" ಎಂಬ ವಾಕ್ಯವನ್ನೇ ಜಪಿಸುತ್ತ ಅಹೋರಾತ್ರಿ ತದೇಕಧ್ಯಾನಾಸಕ್ತನಾಗಿ ಅದನ್ನು ಗಳಿಸುವ ಭರಭರಾಟೆಯ ಬಾಯಾರಿಕೆಯಲ್ಲಿ ಕೃತ್ರಿಮ ವೇಷಭೂಷೆಗಳಿಂದ ಮಹಾ ತಪಸ್ವಿಯಂತೆ ನಟಿಸಿ ಆ ತಪಸ್ವಿ ಈ ತಪಸ್ವಿ ಎಂದು ಹೇಳಿಕೊಳ್ಳುತ್ತ ತನ್ನ ಕುಲ ಧರ್ಮ ಸ್ನಾನ-ಪಾನಗಳನ್ನೇ ತೊರೆದು ಎಲ್ಲಿ ಬೇಕಲ್ಲಿ ತಿನ್ನುವನು, ಜಾತಿಸಾಂಕರ್ಯವನ್ನು ಮಾಡುವನು ಇದು ತಿಪ್ಪರ ಮನೆಗಳನ್ನು ಹೆಚ್ಚಿಸಿಕೊಳ್ಳಬೇಕೆಂಬ ದುರಾಶೆಯ ಪ್ರತಾಪ ! ಈ ವಿಧವಾದ ದುರಾಶೆಯ ಬಲೆಯಲ್ಲಿ ಬಿದ್ದು ಧರ್ಮವನ್ನು ಹಾಳುಮಾಡುವ ಲಫಂಗ ತಪಸ್ವಿಗಳಿಗೆ ಯಮಶಾಸನವಲ್ಲದೆ ಬೇರೆ ಶಾಸನವಿಲ್ಲ

ಲೋಭಿಯಾದವನು ಅಧರ್ಮವನ್ನು ಮಾಡಲಿಕ್ಕೆ ಯಾವರೀತಿ ಪ್ರವೃತ್ತನಾಗುತ್ತಾನೆಂಬ ವಿಷಯದಲ್ಲಿ ಒಂದು ಇತಿಹಾಸವಿರುವುದು, ಅದೇನೆಂದರೆ—

ಚಿದಾನಂದನೆಂಬೋರ್ವನು ವೇದಾಗಮಾದಿಗಳನ್ನು ಅಭ್ಯಾಸಮಾಡಿ ಈ ನಿಸ್ಸಾರವಾದ ಸಂಸಾರದಲ್ಲಿ ಏನೂ ಹುರುಳಿಲ್ಲವೆಂದು ಮನಗಂಡು ಪರತತ್ತ್ವಾನುಭವಾನಂದವನ್ನು ಪಡೆಯುವುದಕ್ಕಾಗಿ ಆತ್ಮಾರಾಮನೆಂಬೋರ್ವ ಗುರುವಿನ ಪುಣ್ಯಾಶ್ರಮಕ್ಕೆ ಹೋಗಿ ಆತನ ಸೇವೆಯನ್ನು ಮಾಡಿ ಆ ಗುರುವರ್ಯನಿಂದ ಜ್ಞಾನೋಪದೇಶವನ್ನು ಪಡೆದನು ಆ ಗುರೂತ್ತಮನು ಉಪದೇಶವೆಲ್ಲವನ್ನೂ ಮಾಡಿ ಎಲೈ ಪ್ರಿಯಶಿಷ್ಯನೇ ! "ಲೋಭಃ ಪಾಪಸ್ಯ ತಾತಃ" ಎಂದರೆ ಲೋಭವೆಂಬುದು ಪಾಪದ ತಂದೆಯು ಆದುದರಿಂದ ನೀನು ಲೋಭವನ್ನು ಬಿಟ್ಟುಬಿಡು ಇದೇ ನಿನಗೆ ಕಡೆಯ ಉಪದೇಶವೆಂದು ಹೇಳಿ ಬೀಳ್ಕೊಟ್ಟನು ಅನಂತರ ಚಿದಾನಂದನು "ಲೋಭಃ ಪಾಪಸ್ಯ ತಾತಃ" ಎಂಬ ವಾಕ್ಯದ ಅನುಭವವನ್ನು ಮಾಡಿಕೊಳ್ಳಬೇಕೆಂದು ಜ್ಞಾನಪುರಿ ಎಂಬ ಪಟ್ಟಣದ ಬೀದಿಗಳಲ್ಲಿ 'ಲೋಭವು ಪಾಪದ ತಂದೆಯು' ಹೇಗಾಗುವುದೆಂದು ಕಂಡಕಂಡವರನ್ನು ಕೇಳುತ್ತಿದ್ದನು. ಈತನ ವಾಕ್ಯವನ್ನು ಕೇಳಿದ ಜ್ಞಾನಾಂಜನೆಯೆಂಬೋರ್ವ ವಾರಾಂಗನೆಯು ಮುಂದೆ ಬಂದು ಆವನನ್ನು ಕುರಿತು—ಮಹಾಸ್ವಾಮಿ ! ತಾವು ಕೇಳುವ ಪ್ರಶ್ನೆಗೆ ನಾನು ಸದುತ್ತರವನ್ನು ಕೊಡುತ್ತೇನೆ. ಆದರೆ ತಾವು ಮಾತ್ರ ನನ್ನ ಮನೆಯಲ್ಲಿ ಕೆಲವು ದಿನಗಳವರೆಗೆ ಊಟಮಾಡಿಕೊಂಡು ಇರಬೇಕೆಂದು ಹೇಳಿದಳು ಅದಕ್ಕೆ ಅವನು ಅಮ್ಮಾ ಮಗಳೇ ! ನೀನು ಹೇಳುವಂತೆ ಆಗಬಹುದು ಆದರೆ ಸ್ವಲ್ಪ ಕೇಳು, ನಾವು ಶುದ್ಧವಂಶೀಯರಾದ್ದರಿಂದ ಹಾಗೆ ಮಾಡಲಿಕ್ಕೆ ಬರುವುದಿಲ್ಲ. ಕಂಡಕಂಡವರಲ್ಲಿ ಉಣ್ಣುವುದು ಶುದ್ಧವಂಶೀಯನ ಧರ್ಮವಲ್ಲ ಸಜಾತೀಯರನ್ನು ಬಿಟ್ಟು ವಿಜಾತೀಯರಲ್ಲಿ ಭೋಜನಮಾಡುವವರು ಘೋರವಾದ ನರಕವನ್ನೈದುವರೆಂದು ಧರ್ಮಶಾಸ್ತ್ರವು ಘಂಟಾಘೋಷವಾಗಿ ಸಾರುತ್ತಿರುವುದು ಧರ್ಮ ವಿರುದ್ಧವಾಗಿ ನಡೆದರೆ ಜನರಾದರೂ ಏನಂದಾರು ? ಪರಶಿವನಾದರೂ ಮೆಚ್ಚುವನೇ ? ಆದುದರಿಂದ ನಾವು ನಿನ್ನ ಮನೆಯಲ್ಲಿದ್ದುಕೊಂಡು ಊಟಮಾಡುವುದು ತಾನೇ ಹೇಗೆ ? ಎಂದನು ಇದನ್ನು ಕೇಳಿದೊಡನೆ ಚತುರಳಾದ ಆ ವಾರಾಂಗನೆಯು ಹಾಗಾದರೆ ನಮ್ಮಂಥ ಅಜ್ಞಾನ ಭಕ್ತರನ್ನು ಉದ್ಧಾರಮಾಡುವ ಬಗೆ ಹೇಗೆ ? ಮಹಾಸ್ವಾಮಿಗಳೇ ! ನಾನು ಪ್ರತಿದಿನವೂ ಒಬ್ಬ ಗುರುವಿಗೆ ಭೋಜನವನ್ನೂ ಮೇಲೆ ೨೫ ರೂಪಾಯಿ ದಕ್ಷಿಣೆಯನ್ನೂ ಕೊಟ್ಟು ಒಂದು ವರ್ಷದ ವರೆಗೆ ಅವರನ್ನು ನನ್ನ ಮನೆಯಲ್ಲಿಟ್ಟುಕೊಂಡು ಅವರ ಸೇವೆ ಮಾಡಿ ಕೃತಾರ್ಥಳಾಗಬೇಕೆಂದು ಸಂಕಲ್ಪವನ್ನು ಮಾಡಿರುತ್ತೇನೆ. ಆದುದರಿಂದ ತಾವು ತಮ್ಮ ಭಕ್ತಳಾದ ನನ್ನ ಬಯಕೆಯನ್ನು ಪೂರ್ಣಮಾಡಬೇಕು ತಾವು ನನ್ನ ಮನೆಯಲ್ಲಿದ್ದರೆ ನಿತ್ಯದಲ್ಲಿ ಮೃಷ್ಟಾನ್ನಭೋಜನವೂ ಮೇಲೆ ೨೫ ರೂಪಾಯಿ ದಕ್ಷಿಣೆಯೂ ಸಿಗುವುದಲ್ಲದೆ ನೀವು ಕೇಳುತ್ತಿರುವ ಪ್ರಶ್ನೆಕ್ಕೆ ಸಮುತ್ತರವಾದರೂ ದೊರೆಯುವುದರಲ್ಲಾವ ಸಂದೇಹವೂ ಇಲ್ಲೆಂದಳು ಅದನ್ನು ಕೇಳಿ ಅವನು ಮನದೊಳಗೆ ಆಹುವಹುದು, ಈಕೆಯು ಹೇಳುವುದು ನಿಜವು, ನನ್ನದೇನು ಗಂಟು ಹೋಗುವುದು ? ಒಂದು ವರ್ಷದವರೆಗೇಕೆ ? ಸಾಯುವವರೆಗೂ ಇರಬಹುದು ನಿತ್ಯದಲ್ಲಿ ಭೋಜನವನ್ನೂ ಮೇಲೆ ೨೫ ರೂಪಾಯಿಗಳನ್ನೂ ಕೊಡುವಳಂತೆ ! ಇಷ್ಟೇ ಅಲ್ಲ ನನ್ನ ಪ್ರಶ್ನೆಗೆ ಉತ್ತರವನ್ನೂ ಕೊಡುವಳಂತೆ ! ಸ್ವಯಂ ಪಾಕಮಾಡಿಕೊಂಡು ಇದ್ದರಾಯಿತೆಂದು ಯೋಚಿಸಿ ಆಗಬಹುದೆಂದು ಉತ್ತರವಿತ್ತನು ಅದರಂತೆ ಕೆಲವು ದಿವಸಗಳ ವರೆಗೆ ಆ ವೇಶ್ಯಾಸ್ತ್ರೀಯಳ ಮನೆಯ ಒಂದು ಭಾಗದಲ್ಲಿ ಸ್ವಯಂ ಪಾಕವನ್ನು ಮಾಡಿಕೊಳ್ಳುತ್ತ ತನ್ನ ಪ್ರಶ್ನೆಗೆ ಉತ್ತರವು ಇಂದು ದೊರೆಯಬಹುದು. ನಾಳೆ ದೊರೆಯಬಹುದು ಎಂದು ಕಾಲನಿರೀಕ್ಷಣೆಯನ್ನು ಮಾಡುತ್ತ ಆಕೆಯ ಮನೆಯಲ್ಲಿಯೇ ಇದ್ದುಬಿಟ್ಟನು ಹೀಗಿರುತ್ತಿರಲೊಂದುದಿನ ಚಾಣಾಕ್ಷಳಾದ ಆಗಣಿಕಾಂಗನೆಯು ಮಹಾಸ್ವಾಮಿ ! ತಾವು ಅಡಿಗೆ ಮಾಡುವ ಕಷ್ಟವನ್ನು ನೋಡಿ ನನಗೆ ಬಹಳ ವ್ಯಥೆಯಾಗುವುದು, ತಮ್ಮ ಪ್ರಿಯಶಿಷ್ಯಳಾದ ನಾನು ಇರುತ್ತಿರಲು ತಾವು ಇಷ್ಟು ತೊಂದರೆ ಪಡುವುದೇಕೆ ? ದಿನಂಪ್ರತಿ ನಾನೇ ಅಡಿಗೆಮಾಡಿ ಬಡಿಸುತ್ತೇನೆಂದು ಹೇಳಲು ಅವನು ಶಿವ ಶಿವಾ ! ಎನ್ನುತ್ತ ಕಿವಿಗಳನ್ನು ಮುಚ್ಚಿಕೊಂಡು ಛೇ ! ಛೇ ! ಇದು ಮಾತ್ರ ನಮ್ಮಿಂದಾಗದ ಮಾತು ನೀನು ಜಾತಿಯಲ್ಲಿ ಶೂದ್ರಳು ! ವೃತ್ತಿಯಲ್ಲಿ ನೀಚಳು ! ಇಂತಹ ನಿನ್ನ ಕೈಯಿಂದ ಸಿದ್ಧವಾದ ಅನ್ನವನ್ನು ಗ್ರಹಿಸಬಾರದು ಒಂದುವೇಳೆ ಗ್ರಹಿಸಿದ್ದಾದರೆ ಜಾತಿ-ಕುಲ-ಧರ್ಮ ನಿಯಮಗಳು ನಾಶವಾಗಿ ಜಾತಿಸಾಂಕರ್ಯವುಂಟಾಗುವುದು ಇನ್ನು ನಾನು ಇಲ್ಲಿರಲಾರೆನೆಂದು ಹೇಳುತ್ತ ಹೊರಡಲನುವಾದನು ಆಗ ಆ ವಾರಾಂಗನೆಯು ಸ್ವಾಮಿ ! ಇಗೋ ! ಬೇಕಾದರೆ ಒಂದೂಟಕ್ಕೆ ೧ ನೂರು ರೂಪಾಯಿಗಳನ್ನಾದರೂ ದಕ್ಷಿಣೆಕೊಡುತ್ತೇನೆ ಈ ನಿಮ್ಮ ಕಷ್ಟವನ್ನು ನೋಡಲಾರೆನು ನನ್ನಂತಹ ಶಿಷ್ಯಳಿರುವಲ್ಲಿ ತಮಗೇತಕ್ಕೆ ಚಿಂತೆ ? ಎಂದಳು "ಒಂದೂಟಕ್ಕೆ ೧೦೦ ರೂಪಾಯಿ ದಕ್ಷಿಣೆ' ಎಂಬ ಶಬ್ದವು ಕಿವಿಗೆ ಬಿದ್ದೊಡನೆಯೇ ಆ ಲೋಭಿಯ ಬಾಯಲ್ಲಿ ಜುಳುಜುಳು ನೀರು ಒಂದು ಧನಾಶೆಯಿಂದ ಭೋಜನಮಾಡಲು ಒಪ್ಪಿಕೊಂಡನು ಮಗಳೇ ! ಮನುಸ್ಮೃತಿಯಲ್ಲಿ "ಅದ್ಭಿರ್ಗಾತ್ರಾಣಿ ಶುದ್ಧ್ಯಂತಿ" ಅಂದರೆ ನೀರಿನಿಂದ ಅವಯವಗಳು ಶುದ್ಧವಾಗುವವೆಂದು ಹೇಳಲ್ಪಟ್ಟಿರುವುದು. ಅಂದ ಮೇಲೆ ನೀನು ದಿನವೂ ಸಚೇಲಸ್ನಾನವನ್ನು ಮಾಡಿ ಪಾಕಾದಿಗಳನ್ನು ಮಾಡು, ಅಂದರಾಯಿತು, ನಾವು ಭೋಜನಮಾಡುವುದಕ್ಕೆ ಯಾವ ಅಭ್ಯಂತರವೂ ಇಲ್ಲೆಂ

(ಎನೇ ಪುಟವನ್ನು ನೋಡಿ)

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ

ಹಾಗೂ

ಶ್ರೀಜಗದ್ಗುರು ದಾರುಕಾಚಾರ್ಯರ

ಜಯಂತೀಮಹೋತ್ಸವಗಳು

ವೈಶಾಖ ಶು|| ೩ ಮಂಗಳವಾರ **ವೈಶಾಖ ಶು|| ೫ ಗುರುವಾರ**

ಯಾವ ಮಹಾತ್ಮರು ಭರತಖಂಡದಲ್ಲಿರತಕ್ಕ ಸಮಸ್ತಪವಿತ್ರಕ್ಷೇತ್ರ ಮಸ್ತಕಮಣೀಭೂತಗಳಾದ ಶ್ರೀದಾಕ್ಷಾರಾಮ, ಉಜ್ಜಯಿನೀಕ್ಷೇತ್ರಗಳಲ್ಲಿ ವಿರಾಜಿಸುವ ಶ್ರೀಭೀಮನಾಥ, ಶ್ರೀಸಿದ್ಧೇಶ್ವರ ಮಹಾಲಿಂಗಗಳಿಂದವತರಿಸಿ, ಪರಮಪವಿತ್ರವಾದ ವೀರಶೈವಸಿದ್ಧಾಂತವನ್ನು ಭೂಮಂಡಲದಲ್ಲಿ ನೆಲೆಗೊಳಿಸಿ, ವ್ಯಾಸ, ದಧೀಚಿ ಮೊದಲಾದ ಅನಂತಜನ ಮಹರ್ಷಿಗಳನ್ನೂ, ಗೌತಮೇಂದ್ರ, ದೇವನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶದ್ವಾರಾ ಉದ್ಧರಿಸಿ ಲೋಕೈಕಪೂಜ್ಯರಾಗಿರುವರೋ, ಅಂಥ ಶ್ರೀಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಇದೇ ವೈಶಾಖ ಶುಕ್ಲಪಕ್ಷದಲ್ಲಿ ಪ್ರಾಪ್ತವಾಗುವುದರಿಂದ ಸರ್ವ ಗುರುಭಕ್ತರೂ ಈ ಜಯಂತೀಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸಬೇಕು. **ವೈಶಾಖ ಶು|| ೩ ಮಂಗಳವಾರ ತಾ|| ೨೫—೪—೧೯೪೪**ನೆಯ ದಿವಸ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವವನ್ನೂ, **ವೈಶಾಖ ಶು|| ೫ ಗುರುವಾರ ತಾ|| ೨೭—೪—೧೯೪೪**ನೆಯ ದಿವಸ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವನ್ನೂ ನೆರವೇರಿಸಬೇಕು. ಈ ಮೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಭರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧಸಂಪ್ರದಾಯದ ವೀರಶೈವರು ಶ್ರೀಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತೀಮಹೋತ್ಸವಗಳನ್ನು ಆಯಾಯ ಪವಿತ್ರದಿನಗಳಲ್ಲಿ ಅತ್ಯಂತಭಕ್ತಿಯಿಂದಲೂ, ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ. ಶುದ್ಧಸಂಪ್ರದಾಯದ ವೀರಶೈವರು ಸದ್ಯಃ ಪ್ರಾಪ್ತವಾಗಿರುವ ಆಚಾರ್ಯರ ಜಯಂತೀಮಹೋತ್ಸವಗಳನ್ನು ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೆರವೇರಿಸಿ, ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇನೆ.

ಚಂದಾದಾರರಲ್ಲಿ ವಿಜ್ಞಾಪನೆ

ಇತ್ತೀಚೆಗೆ ಪ್ರಿಂಟಿಂಗಿಗೆ ಸಂಬಂಧಪಟ್ಟ ಎಲ್ಲ ಸಾಮಾನುಗಳಿಗೂ ವಿಶೇಷಬೆಲೆಯು ಏರಿರುವುದರಿಂದ ನಮ್ಮ ಪತ್ರಿಕೆಯ ಚಂದಾ ಹಣವನ್ನು ೨ ಆಣೆ ಹೆಚ್ಚಿಸಿರುತ್ತೇವೆ ಚಂದಾದಾರರು ಇನ್ನುಮುಂದೆ ೩ ರೂ ಗಳನ್ನು ಮನಿಯಾರ್ಡರು ಮೂಲಕ ಕಳುಹಿಸಬೇಕು ವಿ ಪಿ. ಮಾಡುವದಾದರೆ ೩ ರೂ ೨ ಆಣೆ ಬೀಳುವದು

ಮ್ಯಾನೇಜರ್

ಯುದ್ಧವಾರ್ತೆ.

ಅಮೇರಿಕಾ ವಿಮಾನ ಕೇಂದ್ರದ ಬದಲಾವಣೆ

ಭಾರತದಲ್ಲಿ ಅಮೇರಿಕಾ ವಿಮಾನ ಪಡೆಯು ಕೇಂದ್ರ ಕಛೇರಿಯನ್ನು ದೆಹಲಿಯಿಂದ ಕಲ್ಕತ್ತಾಕ್ಕೆ ಬದಲಾಯಿಸಿದೆ ಬರ್ಮಾ ರಂಗಕ್ಕೆ ಕಾರ್ಯ ಚಟುವಟಿಕೆ ಕ್ಷೇತ್ರವನ್ನು ೧೦೦೦ ಮೈಲಿ ಹತ್ತಿರ ತರುವುದೇ ಈ ಬದಲಾವಣೆಗೆ ಕಾರಣವೆಂದು ಅಧಿಕೃತ ವರದಿ ಮೇಜರ್ ಜನರಲ್ ಜಾರ್ಜ್ ಎ ಸ್ಟ್ರಾಟ್ ಮೇಯರ್‌ರವರೂ ಸಹ ದೆಹಲಿಯಿಂದ ಕಲ್ಕತ್ತಾಕ್ಕೆ ವರ್ಗವಾಗಿದ್ದಾರೆ

ಭಾರತದ ಸಹಾಯ ಬೇಕು

ಕಾಮನ್‌ವೆಲ್ತ್ ಪಾರ್ಟಿಯು " ಭಾರತಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ತಕ್ಷಣ ಕೊಡಬೇಕು ಯುದ್ಧವನ್ನು ಯಶಸ್ವಿಯಾಗಿ ಕೊನೆಗಾಣಿಸಲು ಭಾರತೀಯರ ಸಂಪೂರ್ಣ ಸಹಕಾರ ಬೇಕು " ಎಂದು ಬ್ರಿಟಿಷ್ ಸರ್ಕಾರಕ್ಕೆ ಮನವಿ ಮಾಡಿಕೊಂಡಿದೆಯೆಂದು ಸರ್ ರಿಚರ್ಡ್ ಅಕ್ಲೆಂಡರು ಕ್ಯಾಕ್ಸ್‌ಟನ್ ಭವನದಲ್ಲಿ ಭಾಷಣ ಮಾಡುತ್ತಾ ಹೇಳಿದ್ದಲ್ಲದೆ ಡೊಮಿನಿಯನ್ ಸ್ಟೇಟಸ್ ಎಂದರೆ ಪೂರ್ಣ ಸ್ವರಾಜ್ಯ ಎಂಬ ಅಮೇರಿಯವರ ವ್ಯಾಖ್ಯಾನದಲ್ಲಿ ಹುರಳಿಲ್ಲವೆಂದು ಹೇಳಿದರು

ಇಂಫಾಲ್ ಕ್ಷೇತ್ರದಲ್ಲಿ ಶತ್ರುವಿಗೆ ಅಪಾರ ನಷ್ಟ

ಇಂಫಾಲ್ ಸಮಭೂಮಿಯ ಈಶಾನ್ಯ ಅಂಚಿನಲ್ಲಿದ್ದ ಗುಡ್ಡ ಒಂದನ್ನು ಜಪಾನರ ವಶದಿಂದ ಕಿತ್ತುಕೊಳ್ಳಲು ಮಿತ್ರರ ಟ್ಯಾಂಕುಗಳು ಹೊರಟು ಸಮಪ್ರದೇಶದಿಂದ ಸುಮಾರು ೧೦೦೦ ಅಡಿಗಳ ಎತ್ತರದವರೆಗೂ ಗುಡ್ಡದ ಮೇಲೆ ಹತ್ತಿ ಶತ್ರುಪಡೆಗಳ ಮೇಲೆ ಬಿದ್ದವು ಟ್ಯಾಂಕುಗಳ ರಕ್ಷಣೆಯಲ್ಲೇ ಹೋಗುತ್ತಿದ್ದ ಮಿತ್ರ ಸೈನಿಕರು ಜಪಾನರ ಮೇಲೆ ಬಿದ್ದು ಸುಮಾರು ೪೦೦ ಶತ್ರುಯೋಧರನ್ನು ಕೊಂದರು ಟ್ಯಾಂಕುಗಳು ೯೭ ಜಪಾನರನ್ನು ನಾಶಮಾಡಿದವು ಶತ್ರು ಪಡೆಗಳು ಪರಾಭವಗೊಂಡು ಗುಡ್ಡ ಪ್ರದೇಶದಿಂದ ಓಡಿದವು ಈ ಪಡೆಗಳಲ್ಲಿ ೭ ಯೋಧರನ್ನು ಸೆರೆ ಹಿಡಿಯಲಾಯಿತು ಅನೇಕ ಯುದ್ಧೋಪಕರಣಗಳು ಮಿತ್ರರ ಹಸ್ತಗತವಾದವು. ಯುದ್ಧ ನಡೆಸಿದ ಭಾರತೀಯ ಪಡೆಯವರ ನಷ್ಟ ಶತ್ರುನಷ್ಟಕ್ಕಿಂತ ಬಹಳ ಕಡಿಮೆಯಾಗಿರುವುದು ಇಂಫಾಲ್ ಮತ್ತು ಕೋಹಿಮಾಗಳ ಪ್ರಥಮ ಆಕ್ರಮಣ ಕಾಲದಿಂದ ಶತ್ರುವಿಗೆ ಅಪಾರ ಸಾವುನೋವುಗಳು ಆಗಿದೆ ಶತ್ರುವಿನ ಕೆಲವು ಪಡೆಗಳು ನಿರ್ನಾಮವಾಗಿವೆ ಕೆಲವು ಪಡೆಗಳಲ್ಲಿ ೩೦ಕ್ಕಿಂತ ಹೆಚ್ಚು ಯೋಧರು ಹಿಂತಿರುಗಲಿಲ್ಲ ಎಂದು ಮಿಲಿಟರಿ ಸುದ್ದಿಗಾರರು ತಿಳಿಸುತ್ತಾರೆ

ಮಿತ್ರ ವಿಮಾನ ದಾಳಿ

ಹೇಸೋ ವಿಮಾನಾಶ್ರಯದ ಮೇಲೆ ಮಿತ್ರ ವಿಮಾನಗಳು ದಾಳಿ ಮಾಡಿ ೭ ಶತ್ರು ವಿಮಾನಗಳನ್ನು ನಶಗೊಳಿಸಿ ಇನ್ನೆರಡು ಶತ್ರು ವಿಮಾನಗಳಿಗೆ ಜಖಂ ಮಾಡಿ

ದವು ಪಾಲೇವ್ ಬಳಿ ಒಂದು ಶತ್ರು ವಿಮಾನವನ್ನು ಹೊಡೆದುರುಳಿಸಿದವು ಟಾಂಗುಪ್ ಬಳಿ ದಾಳಿ ಮಾಡಿ ಜಪಾನಿ ಸರಬರಾಜು ಮಳಿಗೆಗಳನ್ನೇ ನಾಶಗೊಳಿಸಿದವು ಅರಕಾನ್, ಕಲಾಡನ್, ಮಾಯೂ, ಚಿನ್ ಪ್ರದೇಶ, ಚಿಂದ್ವಿನ್ ಮತ್ತು ಕಾಬ್‍ಗಳಲ್ಲಿರುವ ಶತ್ರುವಿಗೆ ಆಹಾರ ನಷ್ಟವುಂಟುಮಾಡಿದುವು ಅಂಡಮಾನ್ ದ್ವೀಪ ಮತ್ತು ಪೋರ್ಟ್ ಬ್ಲೇಯರ್‌ಗಳ ಮೇಲೆ ಮಿತ್ರ ವಿಮಾನಗಳು ದಾಳಿಮಾಡಿದವು ಜಪಾನ್ ವಿಮಾನಗಳು ಪ್ರತಿಭಟಿಸಲಾಗಿ ಒಂದು ಶತ್ರು ವಿಮಾನವನ್ನು ಹೊಡೆದುರುಳಿಸಲಾಯಿತು ಕಾರ್ಯಾಚರಣೆಯಲ್ಲಿ ೩ ಮಿತ್ರವಿಮಾನಗಳು ಪತ್ತೆಯಿಲ್ಲ

ಜರ್ಮನಿಗೆ ತುರ್ಕಿಯ ಸರಬರಾಯಿ

ಕಾಮನ್ಸ್ ಸಭೆಯಲ್ಲಿಂದ್ದು ಎಕನಾಮಿಕ್ ವಾರ್ ಫೇರಿನ ಪಾರ್ಲಿಮೆಂಟರಿ ಕಾರ್ಯದರ್ಶಿ ಡಿಂಗಲ್‌ಪುಟ್ ರವರು ಡೇವಿಡ್‌ಸನ್‌ರವರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರವೀಯುತ್ತಾ, "೧೯೪೩ ರಲ್ಲಿ ತುರ್ಕಿಯು ೪೭ ಸಹಸ್ರ ಟನ್ ಕ್ರೋಮನ್ನು ಸಂಯುಕ್ತರಾಷ್ಟ್ರಗಳಿಗೂ ೪೭ ಸಹಸ್ರ ಟನ್ ಕ್ರೋಮನ್ನು ಜರ್ಮನಿಗೂ ಸರಬರಾಜು ಮಾಡಿದೆ. ಈ ವರ್ಷ ಪ್ರಥಮ ಭಾಗದಲ್ಲಿ ಅಂದರೆ ಎರಡು ತಿಂಗಳಲ್ಲಿ ಜರ್ಮನಿಗೆ ೧೫೦೦೦ ಟನ್ ಸರಬರಾಜನ್ನೂ, ಸಂಯುಕ್ತ ರಾಷ್ಟ್ರಗಳಿಗೆ ೬೦೦೦ ಟನ್ ಸರಬರಾಜನ್ನೂ ತುರ್ಕಿ ಒದಗಿಸಿದೆ' ಎಂದು ಹೇಳಿದರು.

ಜರ್ಮನಿಯ ಸೈನ್ಯಬಲ ಹೆಚ್ಚಿದೆ

೫ ವರ್ಷಗಳಿಂದ ಯುದ್ಧ ಮಾಡುತ್ತಿದ್ದರೂ ಜರ್ಮನಿಯು ೫೮ ಲಕ್ಷ ಯೋಧರನ್ನು ಆಕ್ರಮಣಕ್ಕಾಗಿ ಸಿದ್ಧಪಡಿಸಿರುವ ಮುಂಚೂಣಿ ಸೈನ್ಯಗಳಲ್ಲಿ ಇಟ್ಟಿದೆ ಯುದ್ಧ ಪ್ರಾರಂಭವಾದಾಗ ಸೈನ್ಯ ಸಂಖ್ಯೆ ೫೦ ಲಕ್ಷ ವಿದ್ದಿತು ಈಗ ೭೩,೩೪,೦೦೦ ಸೈನಿಕರು ಜರ್ಮನರ ಸೈನ್ಯಗಳಲ್ಲಿರುವುದಾಗಿ ಮಿತ್ರರ ವಿಚಾರ ಸಂಗ್ರಹಕ (ಗುಪ್ತಚಾರ) ಸಂಸ್ಥೆಯು ಗೊತ್ತು ಹಚಿದೆ ಕಳೆದ ಅಕ್ಟೋಬರ್ ತಿಂಗಳಲ್ಲಿ ಆಕ್ರಮಣಕ್ಕಾಗಿ ಜರ್ಮನಿಯು ಸಿದ್ಧಗೊಳಿಸಿದ್ದ ಸೈನ್ಯಗಳ ಸಂಖ್ಯೆಯನ್ನು ಈಗ ೨೦ ಲಕ್ಷದಷ್ಟು ಹೆಚ್ಚಿಸಿದೆ ಆದರೆ ಇದರಲ್ಲಿ ಅರ್ಧ ಭಾಗದಷ್ಟು ರಷ್ಯಾ ರಂಗಗಳಲ್ಲಿ ಕಾರ್ಯ ನಡೆಸುತ್ತಿದೆ. ಆಕ್ರಮಣ ಸೈನ್ಯದ ಒಟ್ಟು ಸಂಖ್ಯೆಯಲ್ಲಿ ಶೇಕಡ ೧೦ ರಷ್ಟು, ಡೆನ್ಮಾರ್ಕ್‌ನಿಂದ ಹಿಡಿದು ಬಿಸ್ಕೆಕೊಲ್ಲಿಯವರೆಗೆ ಅಂದರೆ ೧೮೦೦ ಮೈಲಿ ತೀರಪ್ರದೇಶದಲ್ಲಿ ಮಿತ್ರರ ಆಕ್ರಮಣವನ್ನು ಪ್ರತಿಭಟಿಸಲು ಅಲ್ಲಲ್ಲೇ ಹರಡಲ್ಪಟ್ಟಿದೆ ಮಿತ್ರರ ಆಕ್ರಮಣವು ಫ್ರೆಂಚ್ ತೀರಪ್ರದೇಶದಲ್ಲಿ ನಡೆಯಲಿರುವುದೆಂದು ಜರ್ಮನಿಯು ಭಾವಿಸಿ ೩೦ ಮೈಲಿ ಅಂತರದಲ್ಲಿ ಸುಮಾರು ೫,೩೦,೦೦೦ ದಿಂದ ೭,೯೫,೦೦೦ ಸೈನ್ಯಗಳನ್ನಿಟ್ಟಿದೆ ಫ್ರಾನ್ಸ್, ಬೆಲ್ಜಿಯಂ, ಡೆನ್ಮಾರ್ಕ್ ಮತ್ತು ಹಾಲೆಂಡಿನ ಪ್ರಜೆಗಳನ್ನೊಳಗೊಂಡ ಹೋಂ ಗಾರ್ಡ್‌ಗಳನ್ನು ೧೭೩ ಪಡೆಗಳನ್ನಾಗಿ ಏರ್ಪಡಿಸಿ ತೀರ ಪ್ರದೇಶಗಳ ಕಾವಲಿಗೋಸ್ಕರ ಅಲ್ಲಲ್ಲೇ ಇಟ್ಟಿವೆ. ನಾರ್ವೆಯಲ್ಲಿ ೧೫ ಡಿವಿಜನ್, ಪೋಲೆಂಡಿನಲ್ಲಿ ೯ ಡಿವಿಜನ್ ಜರ್ಮನಿಯ ಮಾತೃ ಸ್ಥಾನದಲ್ಲಿ ೪ ಡಿವಿಜನ್ ಬಾಲ್ಕನ್ ಪ್ರದೇಶದಲ್ಲಿ ೧೭ ಡಿವಿಜನ್, ಇಟಲಿಯಲ್ಲಿ ೨೨ ಡಿವಿಜನ್ ಸೇನೆಗಳನ್ನು ಜರ್ಮನಿಯು ಇಟ್ಟಿರುವುದಲ್ಲದೆ ೬,೭೦,೦೦೦ ದಿಂದ ೧೦,೧೧,೦೦೦ ಸೈನಿಕರನ್ನು 'ರಿಜರ್ವ್'ನಲ್ಲಿಟ್ಟಿರುವುದಾಗಿಯೂ ಅಂದಾಜು ಮಾಡಲಾಗಿದೆ

ಬರ್ಲಿನ್ ಮೇಲೆ ೨೦೦೦ ವಿಮಾನಗಳ ಧಾಳಿ

ಕಳೆದ ೧೭ ನೆಯ ತಾರೀಖು ಉತ್ತರ ಫ್ರಾನ್ಸಿನ ಮೇಲೂ, ಜರ್ಮನಿಯ ಮೇಲೂ ಶತ್ರು ಸ್ಥಾನಗಳನ್ನೂ ಯುದ್ಧೋಪಕರಣಗಳನ್ನೂ ಧ್ವಂಸ ಮಾಡಲು ೬೦೦೦ ಕ್ಕೆ ಮೇಲ್ಪಟ್ಟು ಮಿತ್ರ ವಿಮಾನಗಳು ಬ್ರಿಟನ್ನಿನ ನೆಲೆಗಳಿಂದ ಹೊರಹೊರಟವು ಈ ವಿಮಾನ ಪಡೆಯಲ್ಲಿ ೨೦೦ ಅಮೇರಿಕದ 'ಲಿಬರೇಟರ' ಮತ್ತು 'ಫ್ಲೈಯಿಂಗ್ ಫೋರ್ಟ್ರೆಸ್' ವಿಮಾನಗಳು ೭೫೦ ಫೈಟರ್ ವಿಮಾನಗಳ ಬೆಂಗಾವಲಿನಲ್ಲಿ ಹೋಗಿದ್ದವು ಮಿತ್ರ ವಿಮಾನಗಳು ಜರ್ಮನಿಯ ನಾನಾ ಪ್ರದೇಶಗಳ ಮೇಲೆ ಧಾಳಿ ಮಾಡಲು ಒರುತ್ತಿರುವುದಾಗಿಯೂ ಬರ್ಲಿನ್ ನಗರದ ಒಡಾವಣೆಗಳ ಪ್ರದೇಶದಲ್ಲಿ ವಿಮಾನ ಕಾಳಗಗಳಾಗುತ್ತಿರುವುದಾಗಿಯೂ ಜರ್ಮನ್ ವಾರ್ತಾ ಸಂಸ್ಥೆಯು ರೇಡಿಯೋ ಮುಖಾಂತರ ಜರ್ಮನ್ ಪ್ರಜೆಗಳಿಗೆ ಎಚ್ಚರಿಕೆ ಕೊಟ್ಟಿತ್ತು ಜರ್ಮನಿಯ ಇತರ ಪ್ರದೇಶಗಳಲ್ಲಿರುವ ವಿಮಾನ ಕಾರ್ಖಾನೆಗಳನ್ನು ಪುಡಿ ಪುಡಿ ಮಾಡುವ ಕೆಲಸದಲ್ಲಿ ಮಿತ್ರ ವಿಮಾನಗಳು ಬಹಳ ಯಶಸ್ವಿಯಾದವು ೧೯ ಅಮೇರಿಕಾ ಬಾಂಬರ್ ವಿಮಾನಗಳೂ ೫ ಫೈಟರ್ ವಿಮಾನಗಳೂ ಧಾಳಿಗಳಿಂದ ಹಿಂತಿರುಗಲಿಲ್ಲವೆಂದು ಹೇಳಲಾಗಿದೆ

ಜರ್ಮನರು ಗುಪ್ತಾಸ್ತ್ರಗಳನ್ನು ಪ್ರಯೋಗಿಸಬಹುದು

ಅಮೇರಿಕದ ಯುದ್ಧಸಾಮಗ್ರಿ ಶಾಖೆಯ ಪ್ರಧಾನರಾದ ರಿಯರ್ ಅಡ್ಮಿರಲ್ ಜಾರ್ಜ್ ಎಫ್ ಮನೇಯವರು ಪರಿಸ್ಥಿತಿಯನ್ನು ವಿವರಿಸುತ್ತ 'ಮಿತ್ರ ಸೈನಿಕರು ದ್ವಿತೀಯ ರಂಗವನ್ನು ಪ್ರಾರಂಭಿಸಿದಾಗ ಉಪಯೋಗಿಸಲೆಂದು ಜರ್ಮನರು ಹಲವು ರಹಸ್ಯ ಆಯುಧಗಳನ್ನು ಹಾಗೆಯೇ ಇಟ್ಟಿರಬಹುದು ಈ ರಹಸ್ಯ ಆಯುಧಗಳು ಎಂತಹವೂ? ಅವನ್ನು ಜರ್ಮನರು ಎಂದು ಎಷ್ಟನ್ನು ಉಪಯೋಗಿಸುವರೋ ಎಂಬುದನ್ನು ತಿಳುಹಿಸಲು ಸಾಧ್ಯವಿಲ್ಲವಾಗಿದೆ ಪೆಸಿಫಿಕ್ ರಂಗದಲ್ಲಿ ಜಪಾನಿ ವಿಮಾನಗಳು ಸ್ವಲ್ಪವೇ ಕಂಡು ಬರುತ್ತಿವೆ ಒಂದೊಂದು ಜಪಾನಿ ವಿಮಾನವನ್ನು ಬೀಳಿಸಲು ಪರ್ಲ್‌ಹಾರ್ಬರಿನಲ್ಲಿ ದಾಳಿ ನಡೆದ ದಿನಗಳಲ್ಲಿ ಎಷ್ಟು ಗುಂಡುಗಳನ್ನು ಉಪಯೋಗಿಸಿದೆವೋ ಅದರಲ್ಲಿ ಈಗ ಕೇವಲ ಮೂರನೆ ಒಂದುಭಾಗ ಗುಂಡುಗಳನ್ನುಪಯೋಗಿಸಿದರೆ ಸಾಕಾಗುವುದು" ಎಂದು ತಿಳಿಸಿದ್ದಾರೆ

ಬೊಂಬಾಯಿ ಬೆಂಕಿ ಅನಾಹುತದಲ್ಲಿ ಚಿನ್ನದ ಘಟ್ಟಿಗಳು ಬಿದ್ದವು

ಕಳೆದ ೧೪ನೆಯ ತಾರೀಖು ಶುಕ್ರವಾರ ಬೊಂಬಾಯಿಯಲ್ಲಿ ನಡೆದ ಬೆಂಕಿಯ ಅನಾಹುತದಲ್ಲಿ ಒಂದು ವಿಚಿತ್ರ ಸಂಗತಿಯು ನಡೆಯಿತು ೭೨ ವರ್ಷದ ಮೋತಿವಾಲ ಎಂಬ ಪಾರ್ಸಿ ಇಂಜನಿಯರೊಬ್ಬರು ಮಾಳಿಗೆಯಲ್ಲಿ ತಮ್ಮ ಸಂಸಾರದೊಡನೆ ಕುಳಿತಿದ್ದಾಗ ಹೊರಗಡೆ ಆಸ್ಫೋಟನ ಶಬ್ದ ಕೇಳಿಬಂದಿತು ಅದೇ ಕಾಲದಲ್ಲಿ ಇಟ್ಟಿಗೆ ಆಕಾರದಲ್ಲಿದ್ದ ಪದಾರ್ಥವೊಂದು ಬಾಣದಂತೆ ಮನೆಯ ಕೊನೆಯ ಮತ್ತು ನಾಲ್ಕನೇ ಅಂತಸ್ತುಗಳನ್ನು ಬೇಧಿಸಿಕೊಂಡು ಇಂಜನಿಯರಿದ್ದ ಮೂರನೇ ಮಾಳಿಗೆಯ ಕೊಠಡಿಯಲ್ಲಿ ಬಿತ್ತು ಇದು ಬಿದ್ದ ಶಬ್ದಕ್ಕೆ ಕಾರಣವನ್ನು ಹುಡುಕಲು ಮೋತಿವಾಲರು ಹೊರಗೆ ಬಂದು ನೋಡಲು ಸುತ್ತಮುತ್ತಲೂ ಅನೇಕ ಜನಗಳ ಗುಂಪನ್ನೂ ಕಟ್ಟಡಗಳು ಕಳಚಿಬಿದ್ದಿರುವುದನ್ನು ನೋಡಿ ತಮ್ಮ ಮನೆಯಲ್ಲಿ ಬಿದ್ದಿರುವ ಪದಾರ್ಥವನ್ನು ಪರೀಕ್ಷಿಸಲು ಅದು ಇಂಗ್ಲೆಂಡ್ ಬ್ಯಾಂಕಿನ ಮುದ್ರೆಯೊತ್ತಿದ ೧ ಮಣ ತೂಕದ ಚಿನ್ನದ ಘಟ್ಟಿಯಾಗಿದ್ದಿತು ಕೂಡಲೇ ಚಿನ್ನದ ಘಟ್ಟಿಯನ್ನು ಪೋಲೀಸಿನವರ ವಶಕೆ ಕೊಟ್ಟರು ಇದೇರೀತಿ ಚಿನ್ನದ ಘಟ್ಟಿಗಳು ಅನೇಕ ಕಡೆಗಳಲ್ಲಿ ಬಿದ್ದಿರಬಹುದೆಂದು ಊಹಿಸಲಾಗಿದೆ

ಬೊಂಬಾಯಿನ ಪರಿಸ್ಥಿತಿ

ಬೊಂಬಾಯಿಯಲ್ಲಿ ಸಂಭವಿಸಿದ ಅಗ್ನಿ ಪ್ರಮಾದಕ್ಕೆ ತುತ್ತಾದವರ ಸಂಖ್ಯೆ ಇದುವರೆಗೆ ೩೪೭ ಎಂದು ಗೊತ್ತಾಗಿದ ಕಷ್ಟಕ್ಕೀಡಾದವರಿಗೆ ಪರಿಹಾರ ಒದಗಿಸಲು ಭೂಪಾಲ್ ನವಾಬರು ೫೦೦೦೦ ರೂ ಗಳನ್ನು ಕೊಟ್ಟಿದ್ದಾರೆ ಭಾರತದ ದಕ್ಷಿಣ ಸೇನೆಯ ಸೇನಾನಿ ಲೆ। ಜ। ಸರ್ ನಿರೋಲ್‌ಬೆರ್ಡ್‌ಪರ್ಡ್ ಮತ್ತು ಬೊಂಬಾಯಿ ಜಿಲ್ಲಾ ಸೇನಾನಿ ಇವರಿಬ್ಬರೂ ಆ ದಿನ ಅಗ್ನಿ ಪ್ರಮಾದಕ್ಕೆ ಒಳಗಾದ ಪ್ರದೇಶಕ್ಕೆ ಭೇಟಿಯಿತ್ತು ಪರಿಶೀಲಿಸಿದರು ಮಿಲಿಟರಿ ವ್ಯವಸ್ಥೆಗಳನ್ನು ರಿಪೇರಿ ಮಾಡುತ್ತಿರುವ ಕೆಲಸವನ್ನೂ ಭಗ್ನಾವಶೇಷಗಳನ್ನು ತೆಗೆಯುವ ಕೆಲಸವನ್ನೂ ಭಾರತೀಯ ಸೈನಿಕರು ಮಾಡುತ್ತಿದ್ದುದನ್ನು ಅವರು ವೀಕ್ಷಿಸಿದರು ಸೈನಿಕರು, ನೌಕಾದಳದವರು ವಿಮಾನ ದಳದವರು ಮತ್ತು ಅಮೇರಿಕನ್ ಸೈನಿಕರು ಈ ಸಂದರ್ಭದಲ್ಲಿ ಮಾಡಿದ ಕೆಲಸವನ್ನು ನೋಡಿ ತಾವು ಸಂತೋಷಪಟ್ಟಿರುವುದಾಗಿ ಸರ್ ನಿಯೋಲ್‌ರವರು ತಿಳಿಸಿದ್ದಾರೆ ಭಗ್ನಾವಶೇಷವನ್ನು ತೆಗೆಯುತ್ತಿದ್ದ ಒಬ್ಬ ಅಧಿಕಾರಿಗೆ ಕೆಲವು ಗಜಗಳ ದೂರದಲ್ಲೇ ಮೂರು ಆಸ್ಫೋಟನೆಗಳುಂಟಾದರೂ ಆ ಅಧಿಕಾರಿಯು ಎದೆಗೆಡದೆ ತನ್ನ ಕಾರ್ಯವನ್ನು ಮುಂದುವರಿಸಿದರೆಂದೂ ನಿಯೋಲ್‌ರವರು ವ್ಯಕ್ತಪಡಿಸಿದರು ಈ ಪ್ರಾಣಾಪಾಯಕರವಾದ ಕೆಲಸದಲ್ಲಿ ತೊಡಗಿದ್ದವರ ಧೈರ್ಯ ಮತ್ತು ದೃಢತೆಯನ್ನು ಅವರು ಪ್ರಶಂಸಿಸಿದರು.

ಸ್ವೀಕಾರ

ಅರಸೀಕೆರೆ ತಾ|| ವೃಂದಾವನ ಹಳ್ಳಿಗ್ರಾಮದ ಲೇ। ಬಸವೇಗೌಡರ ಮಕ್ಕಳು ಮ। ರಾ|| ವೀರಪ್ಪಗೌಡರ ಪುತ್ರಿ ಚಿ। ಸೌ|| ಕಾಲಸಿದ್ದಮ್ಮನನ್ನು ಬಿಸಲೆಹಳ್ಳಿ, ಗ್ರಾಮದ ಲೇ|| ದೇವಣ್ಣಗೌಡರ ಪುತ್ರ ಚಿ। ದೇವಣ ಸಿದ್ಧಪ್ಪನಿಗೆ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ತೆಗೆಯಿಸಿದ 2 ರೂಪಾಯಿ ಮತ್ತು ಅರಸೀಕೆರೆ ತಾಲ್ಲೂಕು ವೃಂದಾವನ ಹಳ್ಳಿ ಗೌಡರನಂಜಪ್ಪನವರ ಪುತ್ರಿ ಚಿ। ಸೌ|| ಗಂಗಮ್ಮನನ್ನು ಹಿರಿಯೂರು ಪಾಲೇಗೌಡರ ಪುತ್ರ ಚಿ|| ಬಸಪ್ಪನಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ವಧೂವರರಿಂದ ತೆಗೆಯಿಸಿದ 1 ರೂ ಒಟ್ಟು 3 ರೂಪಾಯಿಗಳು ಕಲ್ಯಾಡಿ ಮಠದ ವೇ|| ನಂಜಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ

ದಾವಣಗೆರೆ ಟವನ್ ನಿವಾಸಿಗಳಾದ ಮಾಗಾನಹಳ್ಳಿ ಮ|| ರಾ। ಹೊಳಿಬಸಪ್ಪನವರ ಪುತ್ರ ಚಿ। ವಿರೂಪಾಕ್ಷಪ್ಪನಿಗೆ ಬನವಾಸಿಯಲ್ಲಿರುವ ಮ|| ರಾ। ಮಳೆಗುಂದದ ವೀರಪ್ಪನವರ ಪುತ್ರಿ ಚಿ|| ಸೌ|| ಗಿರಿಜಮ್ಮನನ್ನು ಕೊಟ್ಟು ಚೈತ್ರ ಶು|| ೫ ಬುಧವಾರ ದಿವಸ ನಿಶ್ಚಯಕಾರ್ಯವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯವರು ಸಮರ್ಪಿಸಿದ 2 ರೂ ಕನ್ಯೆಯ ಕಡೆಯವರು ಸಮರ್ಪಿಸಿದ 1 ರೂ ಒಟ್ಟು 3 ರೂಪಾಯಿಗಳು ದಾವಣಗೆರೆ ಹಿರಿಯಮಠದ ವೇ|| ಜ್ಯೋತಿಭೂಷಣ ಹೆಚ್ ಎಂ ಶಿವಾನಂದಸ್ವಾಮಿ ಶಾಸ್ತ್ರಿಗಳದ್ವಾರಾ ತಲ್ಪಿರುತ್ತವೆ

ರಾಯಚೂರು ಡಿ|| ಬಿಜ್ಜಾವಲಿಯಲ್ಲಿ ಶ್ರೀಮದ್ಹಂಪೀಶ್ವರಸ್ವಾಮಿಯ ರಥೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿದ ಸಮಯದಲ್ಲಿ ಸದರಿ ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಚನ್ನವೀರಶಿವಾಚಾರ್ಯಸ್ವಾಮಿಗಳವರು ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ತೆಗೆಸಿ ಕಳುಹಿಸಿದ್ದಾರೆ

ಧಾರವಾಡ ಡಿ|| ಹೊಳೆ ಆಲೂರು ಗ್ರಾಮದಲ್ಲಿರುವ ಮ। ರಾ|| ಕಾತರಕಿ ಮಲ್ಲಪ್ಪನವರ ಶಿವಾಧೀನರಾದ ಸಮಯದಲ್ಲಿ ಮ ರಾ। ಕಾತರಕಿ ಭೀಮಪ್ಪನವರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ವೇ|| ಭಿಕ್ಷಾವೃತ್ತಿ ಹಿರೇಮಠದ ದೇವಣಸಿದ್ಧಯ್ಯನವರ ದ್ವಾರಾ ತಲ್ಪಿರುತ್ತವೆ

ನಾಗರ ತಾ|| ಹಿರೇಬಾಸ್ಸೂರದಲ್ಲಿರುವ ವೇ|| ಬಿ. ಆರಾಧ್ಯರ ಧರ್ಮಪತ್ನಿ ಸೌ|| ಅನ್ನಪೂರ್ಣಮ್ಮನವರು ತಾ। 1. 4 44ನೇ ಸೋಮವಾರ ದಿವಸ ಕನ್ಯಾರತ್ನವನ್ನು ಪ್ರಸವಿಸಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂಪಾಯಿಯು ಹೆಡ್ ಮಾಸ್ಟರ್ ಎಸ್ ಎಂ ಸಿದ್ದಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇವೆ

(೧ನೆಯ ಪುಟದಿಂದ ಮುಂದುವರಿದುದು)

ದನು. ಆಗಲಾ ವಾರಾಂಗನೆಯು ದುರಾಶಾಗ್ರಸ್ತನಾದ ಆತನ ವರ್ತನೆಯನ್ನು ಕಂಡು ಮನದೊಳಗೆ ನಸು ನಗುತ ಹಾಗೆಯೇ ಆಗಲೆಂದು ಹೇಳಿ ಆ ಕ್ಷಣವೇ ನದಿಗೆ ಹೋಗಿ ಸಚೇಲಸ್ನಾನವಂ ಮಾಡಿಕೊಂಡು ಬಂದು ಪಕ್ವಾನ್ನವಂ ಮಾಡಿ ನೀಡಿ ೧೦೦ ರೂಪಾಯಿಗಳನ್ನೂ ಮುಂದಿರಿಸಿ ಆತನು ಕೇಳಿದ "ಲೋಭಃ ಪಾಪಸ್ಯ ತಾತಃ" ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಇದೇ ತಕ್ಕ ಸಮಯವೆಂದು ತಿಳಿದು ಎದುರಿನಲ್ಲಿ ನಿಂತುಕೊಂಡಳು. ಕಡುಲೋಭಿಯಾದ ಆವನು ಮುಂದಿರಿಸಿರುವ ೧೦೦ ರೂಪಾಯಿಗಳನ್ನೂ ಷಡ್ರಸೋಪೇತವಾದ ಭಕ್ಷ್ಯಗಳನ್ನೂ ನೋಡಿ ಮನದೊಳಗೆ ಹಿರಿ ಹಿರಿ ಹಿಗ್ಗುತ್ತ ಮೊದಲನೇ ಒಂದು ತುತ್ತನ್ನು ಬಾಯಿಯಲ್ಲಿಡತಕ್ಕವನೇ! ಅಷ್ಟರಲ್ಲಿ ಕೇಳುವುದೇನು? ವಾರಾಂಗನೆಯು ಆವನ ಕೆನ್ನೆಗೆ ಬಲವಾದ ಒಂದೇಟನ್ನು ಕೊಟ್ಟಳು. ತಕ್ಕ ಪ್ರಾಯಶ್ಚಿತ್ತ! ಆಗ ಆ ಹೊಡೆತದಿಂದ ಎಚ್ಚರವಿಪ್ಪಿದ ಆವನು ತಡವರಿಸುತ್ತ ಪೋಲಿಕ್ಷೆ ಎಲೇ ನೀಚಳೆ! ನಿನ್ನ ದೇಹವನ್ನೇ ವಿಕ್ರಯಿಸುವ ಪಾಟಿಸ್ತಳೇ! ಇದೇನು ಮಾಡಿದೆ? ಯಾಕೆ ನನ್ನನ್ನು ಹೊಡೆಯುವೆ? ಎಂದು ಕಣ್ಣು ಕೆಂಪಗೆ ಮಾಡಿ ಹಲ್ಲುಗಳನ್ನು ಕಡಿಯುತ್ತ ನೋಡು ಈಗೀಗಲೇ ನಿನಗೆ ಶಾಪವನ್ನು ಕೊಡುತ್ತೇನೆ ಎಂದೆನ್ನುತ್ತ ಮನೆಯತುಂಬಾ ಚಿಟ್ಟೆಯಂತೆ ಹಾರಾಡಹತ್ತಿದನು. ಆಗಲವಳು ಸ್ವಾಮಿ! ತಮ್ಮ ಶಾಪಾಗ್ನಿಪಾ ರಾಗಿರಲಿ! ಅದು ನನ್ನನ್ನೇನೂ ಮಾಡಲಾರದು. ಸ್ವಲ್ಪ ಶಾಂತರಾಗಿರಿ! ಈ ಮೊದಲು ನಾನು ಮಾಡಿದ ಅನ್ನವನ್ನು ಭೋಜನಮಾಡಿರಿ ಎಂದದ್ದಕ್ಕೆ ತಾವು 'ನೀನು ಶೂದ್ರಳು, ನನ್ನ ಕುಲ-ಜಾತಿ-ಧರ್ಮ-ಜಾತಿಸಾಂಕರ್ಯ ಹೀಗೆ ಏನೇನೋ ಹೇಳಿ ನೂರು ರೂಪಾಯಿ ಎಂದೊಡನೆಯೇ ಊಟಮಾಡಲು ಸಿದ್ಧರಾದಿರಿ! ಇದು ತಮ್ಮಂತಹರಿಗೆ ಯೋಗ್ಯವೆ? ಧರ್ಮದಿಂದ ನಡೆಯುತ್ತಾ ಇತರರಿಗೆ ಮಾದರಿಯಾಗಿರತಕ್ಕಂಥ ನಿಮ್ಮಂಥವರೇ ಈರೀತಿಯಾಗಿ ನಡೆದರೆ, ಧರ್ಮದಲ್ಲಿ ಯಾರಿಗೆತಾನೇ ಶ್ರದ್ಧೆಯು ಹುಟ್ಟುವುದು? ಧರ್ಮಕ್ಕೆ ಪ್ರಮಾಣರೂಪದಲ್ಲಿರಬೇಕಾದವರೇ ಹೀಗಾದರೆ, ಧರ್ಮಕ್ಕೆ ಪ್ರಮಾಣವು ಇನ್ನೆಲ್ಲಿ ದೊರಕುವುದು? ಅಲ್ಲದೆ ಕಡುಲೋಭಿಯಾದವನು ತಂದೆಯನ್ನೂ ತಾಯಿಯನ್ನೂ ಸೋದರರನ್ನೂ ಗುರುಗಳನ್ನೂ ಮತ್ತು ಬಂಧುಗಳನ್ನೂ ಕೊಲ್ಲುವನು. ಇವರಲ್ಲಿ ವಿವೇಚನೆಯೇ ಉಂಟಾಗುವುದಿಲ್ಲವೆಂದೂ, ಆಸೆಯುಳ್ಳವನೇ ಮನುಷ್ಯನು ತಿನ್ನಬಾರದಲ್ಲಿ ತಿನ್ನುವನು. ಹೆಚ್ಚೇಕೆ? ತನ್ನ ಧರ್ಮ ಕುಲ ಗೋತ್ರಗಳನ್ನು ಬಿಡುವನೆಂದೂ, ಆಸೆಗೊಳಗಾದವನು ತಾನು ಮಾಡಬಾರದ ಕಾರ್ಯವನ್ನು ಮಾಡುತ್ತಿರುವುದನ್ನಾಗಲಿ, ಮಾಡಬೇಕಾದುದನ್ನು ಮಾಡದೆ ಬಿಡುತ್ತಿರುವುದನ್ನಾಗಲಿ, ತಿಳಿಯುವವನಾಗುವುದಿಲ್ಲವೆಂದೂ ಹಿರಿಯರಾಡುತ್ತಿರುವ ವಾಕ್ಯಗಳು ಅಕ್ಷರಶಃ ತಮ್ಮಲ್ಲಿಯೇ ನಿದರ್ಶನಕ್ಕೆ ಬಂದವು. ನೀವು ಹೀಗೆ ಮಾಡುವುದರಿಂದ ಧರ್ಮಕ್ಕೆ ಲೋಪ ಬರುವುದಲ್ಲದೆ ನಿಮಗೆ ಇಹದಲ್ಲಿ ಅವಹೇಳನವೂ ಪರದಲ್ಲಿ ದುರ್ಗತಿಯೂ ಉಂಟಾಗುವವು. ಹೀಗೆ ಪೂರ್ವಾಪರವಿಚಾರವಿಲ್ಲದೆ ಸ್ವಪರ ಹಿತಘಾತಕವನ್ನು ಮಾಡುವುದು ತಮ್ಮಂತಹವರಿಗೆ ಸರ್ವಥಾ ಭೂಷಣವಲ್ಲವು. ಮಹಾಸ್ವಾಮಿ! ಇದೀಗ ನಡೆದ ಪ್ರಸಂಗವೇ ತಮ್ಮ ಗುರುಗಳು ಉಪದೇಶಿಸಿದ "ಲೋಭಃ ಪಾಪಸ್ಯ ತಾತಃ" ಎಂಬ ಪ್ರಶ್ನೆಯ ಉತ್ತರವೆಂದಳು. ಆಗ ಪರಮ ಲೋಭಾಂಧನಾದ ಅವನಿಗೆ ಆ ಜ್ಞಾನಾಂಜನೆಯ ಜ್ಞಾನಾಂಜನದಿಂದ ಪರೆ ಬಿಟ್ಟಿದ ಹಾವಿನಂತೆ ಕಣ್ಣುಗಳೂ ಮನಸ್ಸೂ ನಿಚ್ಚಳವಾಗಿ ಅಹುದೆಂದು ಒಪ್ಪಿಕೊಂಡು ಪ್ರಾಯಶ್ಚಿತ್ತಪೂರ್ವಕವಾಗಿ ತನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟು ಪೂರ್ಣ ಜ್ಞಾನೋಪದೇಶವನ್ನು ಮಾಡಿದ ಆ ವಾರಾಂಗನೆಯ ಚಾತುರ್ಯವನ್ನು ಶ್ಲಾಘಿಸುತ್ತ ಇಂದಿಗೆ ನೀನು ನನಗೆ ಜ್ಞಾನದಾತಳು ಎಂದು ಕೃತಜ್ಞತೆಯನ್ನು ತೋರಿಸುತ್ತ ಎಂದಿನಂತೆ ಸ್ವಸ್ಥಾನವನ್ನು ಸೇರಿದನು.

ಗುಣಗ್ರಾಹಿಗಳೇ! ಈಗಲೂ ಎಷ್ಟೋ ಜನರು ಲೋಭಕ್ಕೊಳಗಾಗಿ ಹೋಗಬಾರದಲ್ಲಿಗೆ ಹೋಗುತ್ತಾರೆ; ಉಣ್ಣಬಾರದಲ್ಲಿ ಉಣ್ಣುತ್ತಾರೆ; ಮಾಡಬಾರದ ಕೃತ್ಯಗಳನ್ನು ಮಾಡಿ ತಾವೂ ಕೆಡುವರಲ್ಲದೆ ಇತರರನ್ನೂ ಕೆಡಿಸುತ್ತಾರೆ. ಈ ವಿಷಮ ವರ್ತನವು ಇವರಿಗೆ ಸರ್ವಥಾ ಭೂಷಣವಲ್ಲವು. ಕಲಿಕಾಲಮಹಿಮೆ!

ಶ್ರೀಮರುಳಸಿದ್ಧೇಶ್ವರಸ್ವಾಮಿಯ ರಥೋತ್ಸವ, ಉಜ್ಜಯಿನಿ.

ಇದೇ ವೈಶಾಖ ಶು ೨ ಗುರುವಾರದಿಂದ ಶ್ರೀಮರುಳಸಿದ್ಧೇಶ್ವರಸ್ವಾಮಿಯ ರಥೋತ್ಸವವೂ ಶುದ್ಧ ೬ ಶುಕ್ರವಾರ ಸ್ವಾಮಿಯ ಶಿಖರಕ್ಕೆ ತೈಲಾಭಿಷೇಕವೂ ಬಹು ವಿಜೃಂಭಣೆಯಿಂದ ನೆರವೇರುವವು. ಆ ಕಾಲಕ್ಕೆ ಮಾಹೇಶ್ವರ ವಟುಗಳ ಉಪನಯನವೂ ವಿದ್ವಾಂಸರ ಭಾಷಣಗಳೂ ಸಂಗೀತ ಕಚೇರಿಯೂ ಜರುಗುವವು. ಶ್ರೀಜಗದ್ಗುರುಗಳವರ ಮುಕ್ಕಾಂ ಸದ್ಯಃ ಗುರುಪೀಠದಲ್ಲಿಯೇ ಇರುವುದು. ಆದುದರಿಂದ ಸ್ವಾಮಿಯ ಭಕ್ತರೆಲ್ಲರೂ ರಥೋತ್ಸವಕ್ಕೆ ಆಗಮಿಸಿ ಶ್ರೀಗುರುದೇವತಾದರ್ಶನವನ್ನು ಪಡೆದು ಧನ್ಯರಾಗಬೇಕೆಂದು ಕೋರಿಕೆ

ಶ್ರೀಜಗದ್ಗುರು ಉಜ್ಜಯಿನಿ ಸಂಸ್ಥಾನದ ಏಜೆಂಟ್

ರಥೋತ್ಸವ ಬಿಜಾಪುರ

ಬಿಜಾಪುರ ಸಾಹುರ ದೇವರು ಷ ಬ್ರ ಚನ್ನವೀರಶಿವಾಚಾರ್ಯಸ್ವಾಮಿಗಳವರ ಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ತಾ ೧೩-೪-೪೪ ನೆಯ ಗುರುವಾರ ಶ್ರೀ ಮಹಾಂತೇಶ್ವರಸ್ವಾಮಿಯ ರಥೋತ್ಸವ ಕಾರ್ಯವು ಅತಿ ವಿಜೃಂಭಣೆಯಿಂದ ನೆರವೇರಿತು. ಈ ಮಹೋತ್ಸವಕ್ಕೆ ಸುತ್ತಲು ಗ್ರಾಮಗಳಿಂದ ಹೆಚ್ಚಾಗಿ ಜನಸಂದಣಿಯು ಸೇರಿದ್ದಿತು. ಶುಕ್ರವಾರ ತಾ ೧೪ ನೆಯ ದಿವಸ ಉದಯ ೮ ರಿಂದ ೧೧ ಘಂಟೆಯವರೆಗೆ ಸಂಗೀತ ಕಚೇರಿಯೂ ಮತ್ತು ಪಂಡಿತರ ಧಾರ್ಮಿಕ ಸಾಮಾಜಿಕೋಪನ್ಯಾಸಗಳೂ ಜರುಗಿ ಯಥೋಚಿತ ಸಂಭಾವನೆಯು ಕೊಡಲ್ಪಟ್ಟು ಮಹಾಚಾರ್ಯರ ಜಯಘೋಷದೊಡನೆ ಸಭಾಕಾರ್ಯವು ಸಮಾಪ್ತಿಗೊಂಡಿತು.

ಪ್ರತ್ಯಕ್ಷದರ್ಶಿ

ಶ್ರೀ ಜಗದಾಚಾರ್ಯರ ಜಯಂತೀಮಹೋತ್ಸವ, ಹೊಳೆಆಲೂರು.

ಧಾರವಾಡ ಡಿ ರೋಣ ತಾಲೂಕು ಹೊಳೆಆಲೂರು ಗ್ರಾಮದ ವೀರಶೈವಸಮಾಜದವರಿಂದ ತಾ ೨೩-೩-೪೪ ನೆಯ ಮಂಗಳವಾರ ವೇ|| ರೇವಣಸಿದ್ಧಯ್ಯನವರು ಘಟ್ಟಾಸ್ವಾಮಿ ಹಿರೇಮಠ ಇವರ ಮಠದಲ್ಲಿ ಪ್ರತಿ ವರ್ಷ ಪದ್ಧತಿ ಪ್ರಕಾರ ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯ ಜಯಂತೀಮಹೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಮತ್ತು ತಾ ೨-3-44 ನೇ ಬುಧವಾರ ದಿವಸ ಸದರಿ ಗ್ರಾಮದ ಉಮಾಮಹೇಶ್ವರ ಕ್ಷೇತ್ರದಲ್ಲಿ ಶ್ರೀರೇಣುಕಜಯಂತಿ ಪ್ರಯುಕ್ತ ಶ್ರೀ ಆಚಾರ್ಯರ ಭಾವಚಿತ್ರವನ್ನು ಸಿಂಹಾಸನದಲ್ಲಿ ಮೂರ್ತಗೊಳಿಸಿ ಷೋಡಶೋಪಚಾರದಿಂದ ಪೂಜಿಸಿ ಕಾಯಿಕರ್ಪೂರ ನೈವೇದ್ಯ ಅರ್ಪಿಸಿದ ನಂತರ ವೇ|| ಡಾ|| ಚಂದ್ರಶೇಖರಸ್ವಾಮಿ ಇವರು ಶ್ರೀರೇಣುಕವಿಜಯಪುರಾಣದಲ್ಲಿನ ವರದರಾಜ ಮಸ್ತಕವನ್ನು ಸೀಳಿಸಿದ ವಿಷಯವನ್ನು ಅಬ್ಬೀಗೇರಿ ಅರಳಿಕಟ್ಟಿಶಾಸ್ತ್ರಿಗಳಿಂದ ಪ್ರವಚನ ಮಾಡಿಸಿ ಸರ್ವರನ್ನೂ ಆನಂದಗೊಳಿಸಿದರು. ಮಹಾಮಂಗಳಾರತಿಯಾಗಿ ಪ್ರಸಾದವು ಹಂಚಲ್ಪಟ್ಟು ಕಾರ್ಯಕ್ರಮವು ಮುಕ್ತಾಯಗೊಂಡಿತು.

ಉತ್ಸವಭಾಗಿ

ಶ್ರೀ ಉಮಾಮಹೇಶ್ವರ ಮಾಂಗಲ್ಯ ಸಮಾರಂಭ, ಹೊಳೆ ಆಲೂರು.

ಧಾರವಾಡ ಡಿ|| ಹೊಳೆ ಆಲೂರು ಗ್ರಾಮದ ವೀರಶೈವ ಬಾಂಧವರು ಪ್ರಕಟನೆ ಜಾಹೀರಪಡಿಸಿದಂತೆ ಕಳೆದ ಮಾಘ ಶು|| ೧೧ ಶುಕ್ರವಾರ ಅರುಣೋದಯ ಬ್ರಾಹ್ಮೀ ಮುಹೂರ್ತದಲ್ಲಿ ಸರ್ವಕ್ರಿಯೆಗಳಿಂದ ಸಂಶುದ್ಧಿ ಹೊಂದಿದ ನಂದಿ ಪಾದುಕಾಪೀಠವು ಸ್ಥಾಪಿತವಾಗಿ ೭ ಗಂಟೆಯವರೆಗೆ ಶ್ರೀ ರುದ್ರಾಭಿಷೇಕವು ನಡೆದು, ೧೦-೧೨ ವರೆಗೆ ಶ್ರೀ ಜಗದಾದಿದಂಪತಿಗಳ ಮಾಂಗಲ್ಯಸಮಾರಂಭವು ಮತ್ತು ಧರ್ಮಾರ್ಥ ವಿವಾಹವು ಮತ್ತು ೪೧ ವಟುಗಳಿಗೆ ಮಹೇಶ್ವರದೀಕ್ಷೆಯೂ ನಡೆಯಿತು. ಈ ಕಾರ್ಯಕ್ಕೆ ಶ್ರೀ ಷ ಬ್ರ ಗಂಗಾಧರಶಿವಾಚಾರ್ಯ ಮಹಾಂತಿನಮಠ ಬೆಂಗಳೂರು ಸಿಟಿ ಇವರನ್ನು ಮಹೋತ್ಸವದಿಂದ ಬರಮಾಡಿಕೊಂಡು ಸರ್ವಕಾರ್ಯಗಳು ಸ್ವಾಮಿಗಳ ನೇತೃತ್ವದಲ್ಲಿ ಷ|| ಬ್ರ|| ಕಿರಿಸೂರು ಪಟ್ಟದಸ್ವಾಮಿಗಳು ಮುದವಾಡ ಗಿರಿಸಾಗರ ಪಟ್ಟದಸ್ವಾಮಿಗಳು, ವೇ|| ರಾಜಶೇಖರಶಾಸ್ತ್ರಿಗಳು ಸಂದಿಗೋಡ ಇವರ ವೈದಿಕತ್ವದಲ್ಲಿ ಬಹಳ ಶೋಭಾಯಮಾನವಾಗಿ ನೆರವೇರಿತು. ಮರುದಿವಸ ಸಾವಿರಾರು ಜನರಿಗೆ ಅನ್ನಸಂತರ್ಪಣೆಯಾದ ವೇಳೆ ರಥೋತ್ಸವವು ನಡೆಯಿತು. ಅನಂತರ ಸಭಾಕಾರ್ಯಗಳು ನಡೆದವು. ಅನೇಕರ ಭಾಷಣಗಳು ನಡೆದ ಮೇಲೆ ವೀರಶೈವಸಾಹಿತ್ಯ ವರ್ಗದ ವಿದ್ಯಾರ್ಥಿಗಳಿಗೆ ಪಾರಿತೋಷಕವು ಕೊಡಲ್ಪಟ್ಟಿತು. ಸರ್ವಕಾರ್ಯಕ್ಕೂ ಕಾರಣೀಭೂತರಾದ ವೇ|| ಚಂದ್ರಶೇಖರಸ್ವಾಮಿ ಡಾಕ್ಟರ ಇಲಕಲ್ಲ ಇವರಿಗೂ ವೀರಶೈವಸಮಾಜದ ಸದ್ಭಕ್ತರಿಗೂ ಶ್ರೀಉಮಾಮಹೇಶ್ವರನೂ ಶ್ರೀಜಗದ್ಗುರು ಪಂಚಾಚಾರ್ಯರೂ ಆಯುರಾರೋಗ್ಯ ಐಶ್ವರ್ಯವನ್ನು ಕೊಟ್ಟು ಕಾಪಾಡಲೆಂದು ಹಾರೈಸುತ್ತೇನೆ.

ಉತ್ಸವಭಾಗಿ

ಬ್ರಿಟಿಷ್ ಸಬ್‌ಮೆರೈನುಗಳ ಹೊಸ ಅಸ್ತ್ರ

ಹ್ಯೂಮನ್ ಟಾರ್ಪಿಡೋ ಎಂಬ ಹೆಸರಿನ ಹೊಸ ಅಸ್ತ್ರವನ್ನು ಈಗ ಬ್ರಿಟಿಷ್ ಸಬ್‌ಮೆರೈನುಗಳು ಉಪಯೋಗಿಸುತ್ತಿವೆ ಎಂಬುದಾಗಿ ಲಂಡನ್ನಿನಲ್ಲಿ ಅಡ್ಮಿರಲ್ಟಿ ಪ್ರಕಟನೆ ತಿಳಿಸುತ್ತದೆ. ಈ ಹೊಸ ಅಸ್ತ್ರವನ್ನು ಹೋದ ವರ್ಷದ ಜನವರಿಯಲ್ಲಿ ಇಟಲಿಯ ಪಾಲರ್ಮೊ ಬಂದರಿನಲ್ಲಿ ಇಟಲಿಯ ಹಡಗುಗಳ ಮೇಲೆ ಮೊದಲು ಬ್ರಿಟಿಷ್ ಸಬ್‌ಮೆರೈನುಗಳು ಪ್ರಯೋಗಿಸಿದವು. ಈ ಟಾರ್ಪಿಡೋವನ್ನು ಇಬ್ಬರು ಎತ್ತಿಕೊಂಡು ಹೋಗಿ ಸಬ್‌ಮೆರೈನಿನ ತುದಿಯಲ್ಲಿ ಇಡುವರು. ಅನಂತರ ಇದನ್ನು ಪ್ರಯೋಗಿಸಲಾಗುವದು

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಸುಪ್ರಸಿದ್ಧವಾದ ಪ್ರತಿಯೊಬ್ಬನೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಚೀನವಾದ ಈ ಮಹಾಗ್ರಂಥವಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನವೆಂದು ಹೇಳಲಾಗುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೨ ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದವರೇ ಈ ಉಚಿತವ ವ್ಯಾಖ್ಯಾನದ ಮಹತ್ವವು ಪಾಠಕರಿಗೆ ವೇದ್ಯವಾಗುವುದು. ಪಾಠಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಶೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮ್ಯಾನೇಜರ್—

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ನಯ್ಯಾಬಜಾರ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

18

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ. ವಿ. ಪಿ. ಖರ್ಚು ಸೇರಿ ೩ ರೂ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧ನೇ ಮೇ ೧೯೪೪ [ಸಂಚಿಕೆ ೧

ಹಣದ ವಿನಿಯೋಗ

ಲೇ॥ ಮಲ್ಲಿಕಾರ್ಜುನಾರಾಧ್ಯ ಶಾಸ್ತ್ರಿಗಳು ಹಾಲೇಸ್ವಾಮಿ ಮಠ ಮಾದೇನೂರು.

ಧನವನ್ನು ಗಳಿಸುವುದಕ್ಕೆ ಉದ್ಯೋಗವು ಅಗತ್ಯವಾಗಿರುವಂತೆ ಧನವನ್ನು ಯೋಗ್ಯವಾದ ರೀತಿಯಲ್ಲಿ ಖರ್ಚು ಮಾಡುವ ಮಾರ್ಗವನ್ನು ಅಭ್ಯಾಸಮಾಡುವುದೂ ಅಷ್ಟು ಅಗತ್ಯವಾಗಿರುವುದು. ಕೈಯಲ್ಲಿ ಧನವಿರುವಾಗ ವಿಲಾಸ ವಿಭ್ರಮಗಳಿಗೆ ಬೇಕಾಗುವ ಬಗೆ ಬಗೆಯ ಪಕ್ವಾನ್ನಗಳನ್ನು ಊಟಮಾಡುವುದರಲ್ಲಿಯೂ ನಾಟಕ ಸಿನಿಮಾಗಳನ್ನು ನೋಡುವುದರಲ್ಲಿಯೂ ದುರ್ವ್ಯಸನಗಳನ್ನು ಮಾಡುವುದರಲ್ಲಿಯೂ ನಾವು ಅದನ್ನು ಖರ್ಚು ಮಾಡಿದರೆ ಮುಂದೆ ಆಪತ್ಸಮಯದಲ್ಲಿ ಪರಿ ಪರಿಯ ಕಷ್ಟಗಳನ್ನನುಭವಿಸಬೇಕಾಗುವುದು. ಬೇಸಿಗೆಯಲ್ಲಿ ಕೀಟಗಳಾದ ಮಿಡಿತೆಗಳು ಸುಗ್ರಾಸವನ್ನು ತಿಂದು ನೃತ್ಯ ಮಾಡಿ ಹೆಚ್ಚಾಗಿ ಆನಂದವನ್ನು ಹೊಂದಿ ಚಳಿಗಾಲವು ಬಂದಾಗ ಅನ್ನಕ್ಕೆ ಎರವಾಗಿ ಉಪವಾಸ ಮಾಡುತ್ತ ಪ್ರಾಣ ಬಿಡುವಂತೆ ದುಂದುಗಾರರೂ ಸಹ ದುರವಸ್ಥೆಯನ್ನು ಹೊಂದಬೇಕಾಗುವುದು. ಆದ ಪ್ರಯುಕ್ತ ವಿವೇಕವಂತರು ದೇವರು ಕೊಟ್ಟಾಗ ಎಲ್ಲವನ್ನೂ ಹಾಳು ಮಾಡದೆ ಆಪದ್ಧನವನ್ನು ಇಟ್ಟುಕೊಳ್ಳುವರು. 'ಇಡಬೇಕಿದ್ದ ಣಬೇಕಲ್ಲೆ ಹರಹರಾ ಶ್ರೀ ಚೆನ್ನಸೋಮೇಶ್ವರ' ಎಂದು ಜ್ಞಾನಿಗಳು ಹೇಳಿರುವರು.

ಉದ್ಯೋಗದಿಂದ ಧನಸಂಗ್ರಹಮಾಡಿ ಸುಖಪಡಬೇಕೆನ್ನುವವರು ಈ ಕೆಳಗಿನ ನಿಯಮಗಳನ್ನು ಲಕ್ಷ್ಯದಲ್ಲಿಡತಕ್ಕದ್ದು:—

1) ಆದಾಯಕ್ಕಿಂತ ಹೆಚ್ಚಾಗಿ ವ್ಯಯವನ್ನು ಎಂದಿಗೂ ಮಾಡಬಾರದು. ಬಂದದ್ದರಲ್ಲಿ ಖರ್ಚು ಕಳೆದು ಅಲ್ಪ ಸ್ವಲ್ಪ ಹಣವನ್ನು ಸಂಗ್ರಹಿಸುತ್ತಿರಬೇಕು. ಸಾಲವನ್ನು ಮಾಡಬಾರದು. ಸ್ವಲ್ಪ ಆದಾಯವಿದ್ದರೂ ಅಷ್ಟರಿಂದಲೇ ಗೃಹಕೃತ್ಯವನ್ನು ನಿರ್ವಹಿಸಬೇಕು. ಅನುಕೂಲಸ್ಥರ ಸೌಖ್ಯಗಳನ್ನು ಬಯಸಿ ತಮ್ಮ ಯೋಗ್ಯತೆಯನ್ನು ಮೀರಿ ಸಾಲವನ್ನು ಮಾಡಿ ಹುಲಿಯ ಬಣ್ಣಕ್ಕೆ ನರಿಯು ಮೈ ಸುಟ್ಟುಕೊಂಡಂತೆ ಸಂಕಟಕ್ಕೆ ಗುರಿಯಾಗಬಾರದು. ನಮಗಿಂತಲೂ ಕಡಿಮೆ ಸ್ಥಿತಿಯಲ್ಲಿರುವವರನ್ನು ನೋಡಿ ಸಂತೃಪ್ತರಾಗಿರಬೇಕು. ಹೀಗೆ ಮಾಡುವುದರಿಂದ ಮನಸ್ಸಿಗೆ ಶಾಂತಿಯುಂಟಾಗುವುದಲ್ಲದೆ ಶಿವನಲ್ಲಿ ಕೃತಜ್ಞತೆಯನ್ನು ತೋರಿಸಿದಂತಾಗುವುದು.

2) ಯಾರಿಗೂ ಸಾಲವನ್ನು ಕೊಡಬಾರದು ಬಡ್ಡಿಯ ವ್ಯವಹಾರವನ್ನಿಟ್ಟುಕೊಂಡವರು ಮಾತ್ರ ಸಾಲವನ್ನು ಕೊಡತಕ್ಕದ್ದು ಉಳಿದವರು ಕೊಟ್ಟರೆ ತಿರುಗಿ ಬರುವುದು ಕಷ್ಟವಾಗುವುದು. ಸಾಲಗಾರರು ಉಪಕಾರವನ್ನು ಸ್ಮರಿಸದೆ ಕೇಳಿದೊಡನೆ ಸಿಟ್ಟಾಗುವರು. ದೇವರು ನಮಗೆ ಅನುಕೂಲತೆಯನ್ನು ಕೊಟ್ಟಾಗ ಬಡವರಿಗೆ ಕೈಯೆತ್ತಿ ಕೊಡಬೇಕೆಂಬುದು ಯಥಾರ್ಥವು. ಆದರೆ ಕೊಟ್ಟದ್ದು ತಿರುಗಿ ಬರುವುದೆಂಬ ಆಶೆ ಇಟ್ಟುಕೊಳ್ಳಬಾರದು.

3) ನಿರುಪಯೋಗವಾದ ವಸ್ತುಗಳು ಎಷ್ಟು ಅಗ್ಗವಾಗಿಸಿಗುತ್ತಿದ್ದರೂ ಅವುಗಳ ಕಡೆಗೆ ಮನಸ್ಸನ್ನು ಹರಿಯಗೊಡಬಾರದು.

4) ಅನುತ್ಪಾದಕವಾದ ಭಂಡವಾಳದಲ್ಲಿ ಹಣವನ್ನು ಉಪಯೋಗಿಸಬಾರದು ಸಂಪತ್ತನ್ನು ಹೆಚ್ಚಿಸುವಂತಹ ಹೊಸ ಹೊಸ ವ್ಯಾಪಾರಗಳಲ್ಲಿ ಉಪಯೋಗಿಸಬೇಕು.

5) ದುರ್ವ್ಯಸನಗಳನ್ನು ಕಲಿಯಬಾರದು. ದುರ್ವ್ಯಸನಗಳಿಗಾಗಿ ವರ್ಷಕ್ಕೆ ಎಷ್ಟು ವ್ಯಯವಾಗುವುದೆಂಬುದನ್ನು ಪರಿಶೀಲಿಸಿ ಅದನ್ನೇ ಸದ್ವಿನಿಯೋಗಮಾಡಿದರೆ ಸಾರ್ಥಕವಾಗುತ್ತದೆ.

ಭಾಗ್ಯವಂತರು ಲೋಭಿಗಳಾಗಬಾರದು. ಅವರಲ್ಲಿ ಔದಾರ್ಯವಿರತಕ್ಕದು. "ಕೈಯೆತ್ತಿ ಕೊಟ್ಟುದು ಈಗಲೂ ತನ್ನ ಹತ್ತಿರ ಉಂಟೆಂದೂ, ವೆಚ್ಚಮಾಡಿದುದು ಒಂದೆ ತನ್ನ ಹತ್ತಿರವಿತ್ತೆಂದೂ, ಉಳಿದುದು ಕಳೆದು ಹೋಯಿತೆಂದೂ ಎಣಿಸಬೇಕು" ಎಂಬುದಾಗಿ ಪಾಶ್ಚಾತ್ಯ ನಾಡಿನ ವಾಣ್ನುಡಿಯುಂಟು ಇದೇ ಮೇರೆಗೆ ನಮ್ಮ ನಾಡಿನ ಕವೀಶ್ವರನಾದ ಸರ್ವಜ್ಞನು:—ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ, ಕೊಟ್ಟದ್ದು ಕೆಟ್ಟಿತೆನಬೇಡ, ಅದು ಮುಂದೆ, ಕಟ್ಟಿಹುದು ಬುತ್ತಿ ಸರ್ವಜ್ಞ ॥ ಎಂದು ಹೇಳಿರುವರು.

ಹಣವು ಜೀವನವನ್ನು ರಕ್ಷಿಸಿಕೊಳ್ಳಲು ಅಗತ್ಯವಾದುದು. ಆದರೆ ಹಣವನ್ನು ಗಳಿಸುವುದೊಂದೇ ಮುಖ್ಯವಾದುದಲ್ಲ. ಈ ವಿಷಯದಲ್ಲಿ ಬೇಕನ್ನನೆಂಬ ತತ್ವಜ್ಞನು ಹೇಳಿರುವುದೇನಂದರೆ:—"ಧನಸಂಪಾದನೆಗೋಸ್ಕರ ಅವಿಶ್ರಾಂತವಾಗಿ ಶ್ರಮಪಡುವವರು ತಮ್ಮ ಅಮೌಲ್ಯವಾದ ಕಾಲವನ್ನು ವ್ಯರ್ಥವಾಗಿ ಕಳೆಯುತ್ತಾರೆ. ಏಕೆಂದರೆ ಈ ಜಗತ್ತಿನಲ್ಲಿ ಜ್ಞಾನಸಂಪಾದನೆ ಮೊದಲಾದ ಹಲವು ಮಹತ್ವದ ಕಾರ್ಯಗಳಿರಲು, ಕೇವಲ ಲೋಭದಿಂದ ಧನಸಂಪಾದನೆಯಲ್ಲಿಯೇ ಮಗ್ನನಾಗಿ ಹೋದರೆ ಆ ಕಾರ್ಯಗಳನ್ನು ಮಾಡಲು ಕಾಲವಿರುವುದಿಲ್ಲ. ಮಾನವ ಜನ್ಮದಲ್ಲಿ ಹುಟ್ಟಿದ್ದೂ ವ್ಯರ್ಥವಾಗುವುದು"

ಒಂದುಸಾರೆ ಒಬ್ಬ ಆಂಗ್ಲದೇಶದ ವಿದ್ವಾಂಸನು ಒಂದು ಸಭೆಯಲ್ಲಿ ಐಶ್ವರ್ಯಕ್ಕಿಂತ ಬಡತನವು ಲೇಸೆಂದು ಸ್ಥಿರಪಡಿಸಲು ಕೆಳಗೆ ಬರೆದಂತೆ ಸ್ವಾನುಭವವನ್ನು ವಿವರಿಸಿದನು. ಎಂತೆಂದರೆ:—

ಅಂಜಿಕೆಗೆ ಒಳಗಾಗಿ ಇರುವುದಕ್ಕಿಂತಲೂ ಅಂಜಿಕೆ ಇಲ್ಲದೆ ಇರುವುದು ಮೇಲು ಒಬ್ಬನ ಆಳಾಗಿ ದುಡಿಯುವುದಕ್ಕಿಂತಲೂ ಸ್ವತಂತ್ರ ನಾಗಿ ಬಾಳುವುದು ಮೇಲು. ದೇಶದ ಸುತ್ತು ಗ್ರಾಮದ ಜನರಿಗೆಲ್ಲ ಬೇಡದವನಂತೆ ಇರುವುದಕ್ಕಿಂತಲೂ ಸರ್ವಜನಪ್ರಿಯನಾಗಿ ಇರುವುದು ಮೇಲು. ಈ ಎಲ್ಲ ಮಾತುಗಳಿಗೆ ನೀವೆಲ್ಲರೂ ಒಪ್ಪಿಕೊಳ್ಳುತ್ತೀರಷ್ಟೇ. ಅಂದ ಬಳಿಕ ನನ್ನ ಸ್ಥಿತ್ಯಂತರವನ್ನೂ, ಅದರ ಹಿತಾಹಿತ ಪರಿಣಾಮಗಳನ್ನೂ ಹೇಳುತ್ತೇನೆ ಕೇಳಿರಿ. ನಾನು ಶ್ರೀಮಂತನಾಗಿದ್ದಾಗ ನನ್ನ ಮನೆಗೆ ಕಳ್ಳರು ಕನ್ನಹಾಕಿ ದ್ರವ್ಯವನ್ನು ಕದಿಯುವರೆಂತಲೂ ನನ್ನ ಜೀವಕ್ಕೆ ಅಪಾಯವನ್ನುಂಟುಮಾಡುವರೆಂತಲೂ ಯಾವಾಗಲೂ ಅಂಜಿಕೊಂಡು ಕಾಲಕಳೆದೆನು. ರಾತ್ರಿಯಲ್ಲಿ ನಿದ್ರೆಯೇ ಬರುತ್ತಿರಲಿಲ್ಲ ಈಗ ನನಗೆ ಸುಖವಾಗಿ ನಿದ್ರೆ ಬರುತ್ತಿದೆ ಮೊದಲು ನನ್ನನ್ನು ಗಣ್ಯನಾದವನೆಂದು ಭಾವಿಸಿ ಸಭೆಯಲ್ಲಿ ಭಾಷಣವನ್ನು ಮಾಡಲು ಕರೆಯುತ್ತಿದ್ದರು. ಈಗ ಆ ತೊಂದರೆಯೂ ತಪ್ಪಿ ಹೋಗಿರುತ್ತದೆ. 'ಜೋಗಿ ಎದ್ದರೆ ಜೋಳಿಗೆಯು ಹೆಗಲ ಮೇರೆ' ಎಂಬಂತೆ ಬೇಕಾದಾಗ ನಾನು ಊರು ಬಿಟ್ಟು ಹೋಗಲು ಸ್ವತಂತ್ರನಾಗಿರುತ್ತೇನೆ. ಮನಸ್ಸು ಬಂದಷ್ಟು ದಿವಸ ಊರೊಳಗಿರುವೆನು. ಬಾಕಿ ದಿವಸ ಮನಸ್ಸು ಬಂದ ಕಡೆಗೆ ಹೋಗುವೆನು. ನಾನು ಮೊದಲು ಸಾಕ್ರೆಟೀಸ ಮುಂತಾದ ಬಡ ಸ್ಥಿತಿಯ ತತ್ವಜ್ಞರೊಡನೆ ಸಂಚರಿಸಿದರೆ ಜನರು ನನಗೆ ಏನಾದರೂ ಒಂದು ಹೆಸರಿಡುತ್ತಿದ್ದರು. ಈಗ ನಾನು ಯಾರ ಸ್ನೇಹವನ್ನು ಮಾಡಿದರೂ ನನ್ನ ಗೋಜಿಗೆ ಯಾರೂ ಬರುವುದಿಲ್ಲ. ನಾನು ದರಿದ್ರನಾಗಿರುವುದರಿಂದ ನನ್ನನ್ನು ಯಾರೂ ಲಕ್ಷ್ಯವಿಟ್ಟು ನೋಡುವುದಿಲ್ಲ. ಆದುದರಿಂದ ಈಗ ನನ್ನ ಮನ ಬಂದಂತೆ ಮಾಡಲು ನನಗೆ ಪೂರ್ಣವಾದ ಸ್ವಾತಂತ್ರ್ಯವು ದೊರಕಿದೆ. ನಾನು ಶ್ರೀಮಂತನಾಗಿದ್ದಾಗ ದಿನದಿನ ಯಾವುದಾದರೊಂದು ವಸ್ತುವನ್ನು ಕಳೆದುಕೊಂಡು ದುಃಖಿಸುವ ಪ್ರಸಂಗವು ಬರುತ್ತಿತ್ತು ಈಗ ನಾನು ಏನನ್ನು ಕಳೆದುಕೊಳ್ಳಬೇಕಾಗಿದೆ? ಇದ್ದುದೆಲ್ಲ ಮೊದಲೇ ಹೋಗಿರುತ್ತದೆ. ಈಗ ಎಲ್ಲ ವಿಷಯದಲ್ಲಿಯೂ ಸುಖವಾಗಿದ್ದೇನೆ. ನನ್ನಲ್ಲಿದ್ದ ದ್ರವ್ಯವು ಹೋದರೂ ಉದ್ಯೋಗದಿಂದ ಜೀವಿಸುವ ಶಕ್ತಿಯನ್ನು ದೇವರು ನನ್ನಲ್ಲಿಟ್ಟಿರುತ್ತಾನೆಂದು ಧೈರ್ಯವನ್ನು ಹೊಂದಿ ತುಂಬಾ ಹರ್ಷಿಸುತ್ತೇನೆ"

ಈ ವಿದ್ವಾಂಸನು ಬಡತನಕ್ಕೆ ಬೇಡಾಗಿ ನಿರಾಶೆಯಿಂದ ಈ ದುಃಖೋದ್ಗಾರಗಳನ್ನು ಮಾಡಿರಬಹುದೆಂದು ಕಾಣುತ್ತದೆ. ಆದರೂ ಇವನು ಹೇಳಿದುವ ಮಾತುಗಳಲ್ಲಿ ಸತ್ಯಾಂಶವುಂಟು ಹಣದ ಯಥಾರ್ಥವಾದ ವಿನಿಯೋಗವನ್ನು ಅರಿಯದವರು ದುಂದುವೆಚ್ಚಮಾಡಿ ಕೊನೆಗೆ ಭಿಕ್ಷಾಪಾತ್ರೆಯನ್ನು ತಕ್ಕೊಳ್ಳುವರು. ಇಲ್ಲವೆ ಧನವನ್ನು ದೇವರೆಂದು ಭಾವಿಸಿ ನಾನಾತರದ ಮೂಢ ಭಕ್ತಿಗಳನ್ನು ಕೈಕೊಂಡು ಸ್ವಪರಹಿತಗಳನ್ನು ಸಾಧಿಸದೆ ಅದನ್ನು ಭೂಮಿಯಲ್ಲಿ ಹೂಳುವರು.

ಲೋಭಿಗಳು ತಮ್ಮಲ್ಲಿ ಹಣವಿದ್ದರೆ ಸಾಕೆಂದು ಗಳಿಸುವರು. ಅವರು ಅದನ್ನು ತಮ್ಮ ಕುಟುಂಬದ, ಅಥವಾ ತಮ್ಮ ದೇಶದ ಸಲುವಾಗಿ ಉಪಯೋಗಿಸದೆ ಇರುವುದಲ್ಲದೆ ಬೇರೆಯವರು ಅದನ್ನು ನೋಡಬಾರದೆಂದು ಬಚ್ಚಿಡುವರು. ಒಬ್ಬರಿಗೂ ಕೈಯೆತ್ತಿ ಏನನ್ನೂ ಕೊಡರು. ಅವರ ಗಂಟೆಲ್ಲವೂ ಕಳ್ಳರ ಮತ್ತು ಮೋಸಗಾರರ ಪಾಲಾಗುವುದು. ಲೋಭಿಗಳಾದ ಶ್ರೀಮಂತರು ಸುಖವನ್ನು ಕಾಣರು. ಮತ್ತು ದುಂದುಗಾರಿಕೆಯಿಂದ ವೆಚ್ಚಮಾಡುವವರು ಕಷ್ಟವನ್ನು ತಪ್ಪಿಸಿಕೊಳ್ಳರು.

ಲೋಭಿಗಳಿಗಿಂತ ಬಡವರು ಸಾವಿರಪಾಲು ಮೇಲು. ಏಕೆಂದರೆ ಬಡವರು ತಮಗೆ ಬೇಕಾದುದನ್ನು ಮಾತ್ರ

(೩ನೇ ಪುಟವನ್ನು ನೋಡಿ)

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ೧೬ ವರ್ಷಗಳು ತುಂಬಿ ೧೭ನೆಯ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೬ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂ. ಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು

ಮ್ಯಾ —

ಪಂಚಾಚಾರ್ಯಪ್ರಭಾ.

೧೯೪೪ನೆಯ ಮೇ ತಾ|| ೧ನೇ ಸೋಮವಾರ

೧೭ನೆಯ ವರ್ಷದ ಪ್ರಾರಂಭ.

ಸನಾತನ ವ ಪಯಾಯಿಗಳಿಗೆ ಪರಮಮಾನ್ಯಗಳಾದ ಅರವತ್ತು ಸಂವತ್ಸರಗಳಲ್ಲಿ ಪ್ರಥಮವೆನಿಸಿರುವ ಪ್ರಭವನಾಮಸಂವತ್ಸರದ ವೈಶಾಖ ಶುದ್ಧ ೫ ದಿವಸ ಪ್ರಾಪ್ತವಾಗುವ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತ್ಯುತ್ಸವವಾದ ಪುಣ್ಯದಿವಸದಲ್ಲಿ ವೀರಶೈವ ಮತೋದ್ಧಾರಕ್ಕಾಗಿ ಅವತಾರವನ್ನೆತ್ತಿರುವ ಪಂಚಾಚಾರ್ಯ ಪ್ರಭಾನಾಮಕವಾದೀಪತ್ರಿಕೆಗೆ ೧೬ ವರುಷಗಳು ತುಂಬಿ ಈ ದಿವಸ ೧೭ನೆಯ ವರ್ಷವು ಪ್ರಾರಂಭವಾಗಿರುವುದು.

ಶ್ರೀಜಗದ್ಗುರು ಪಂಚಾಚಾರ್ಯರ ಚಿತ್ಕಲಾಸ್ವರೂಪವಾಗಿರುವೀಪತ್ರಿಕೆಯು, ಆ ಮಹಾತ್ಮರ ಅನುಗ್ರಹಬಲದಿಂದ ಯಾವ ತೊಂದರೆಯೂ ಇಲ್ಲದ ಅವಿಚ್ಛಿನ್ನವಾಗಿ ಪ್ರಕಟವಾಗುತ್ತಿರುವುದನ್ನು ಕಂಡು ಭರತಖಂಡದಲ್ಲಿರುವ ಸಮಸ್ತ ಗುರುಭಕ್ತರೂ ಆನಂದೋದ್ಗಾರವನ್ನು ಮಾಡುತ್ತಿರುವುದನ್ನು ನೋಡಿ ಸಂತೋಷಪಡಬೇಕಾಗಿದೆ.

ಜಗದ್ವಿಖ್ಯಾತರಾದ ಶ್ರೀಜಗದ್ಗುರು ಪಂಚಾಚಾರ್ಯರ ನಾಮಸಂಕೀರ್ತನವು, ನಾಸ್ತಿಕಮಯವಾದ ಈ ಕಾಲದಲ್ಲಿ ಲುಪ್ತಪ್ರಾಯವಾಗಿದ್ದುದನ್ನು ಕಂಡು, ಅವರ ಪವಿತ್ರಾಭಿಧಾನದಿಂದ ಪ್ರಕಾಶಿಸುತ್ತಿರುವೀ ಪತ್ರಿಕೆಯು ತನ್ನ ಅತ್ಯುಜ್ವಲಲೇಖಗಳ ದ್ವಾರಾ ಆ ಮಹಿಮರ ಪವಿತ್ರನಾಮಸಂಕೀರ್ತನವು ದಶದಿಕ್ಕುಗಳಲ್ಲಿ ಹರಡುವಂತೆ ಮಾಡಿತು. ಜಾತಿಸಾಂಕರ್ಯ ಪ್ರಘಾತದಿಂದ ಜರ್ಝರಿತವಾಗುತ್ತಿರುವ ಸನಾತನಧರ್ಮದ ರಕ್ಷಣೆಯ ವಿಷಯದಲ್ಲಿ ಅನೇಕಾನೇಕ ಲೇಖಗಳನ್ನು ಪ್ರಕಟಮಾಡಿ, ಜಾತಿಸಾಂಕರ್ಯವಾದಿಗಳ ದುರಭಿಪ್ರಾಯವನ್ನು ಆಮೂಲಾಗ್ರವಾಗಿ ಖಂಡಿಸಿ ನಮ್ಮೀ ಭರತಭೂಮಿಯಲ್ಲಿ ವರ್ಣಾಶ್ರಮವಿಭಾಗವು ಅನಾದಿಕಾಲದಿಂದಲೂ ರೂಢಮೂಲವಾಗಿರುವದೆಂಬ ಅಭಿಪ್ರಾಯವನ್ನು ನಿಗಮಾಗಮಾದಿ ಪ್ರಮಾಣಗಳ ದ್ವಾರಾ ಬೋಧಿಸಿ ಮಹಾಜನಗಳ ಮನಸ್ಸನ್ನು ಸನಾತನಧರ್ಮದ ವಿಷಯದಲ್ಲಿ ಪ್ರೇಮಭರಿತವಾದುದನ್ನಾಗಿ ಮಾಡಿತು. ಪ್ರತಿಯೊಬ್ಬರ ಹೃದಯಭೂಮಿಯಲ್ಲಿ ಗುರುದೇವತಾಭಕ್ತಿರೂಪವಾದ ಬೀಜವನ್ನು ಬಿತ್ತಿ, ಅಂಕುರಿಸಿ, ಪಲ್ಲವಿಸಿ, ಫಲಿಸುವಂತೆ ಮಾಡಿತು ಅತ್ಯಂತ ಕಠಿನವಾಗಿರುವ ವೀರಶೈವಸಿದ್ಧಾಂತ ರಹಸ್ಯವನ್ನು ಸರ್ವರಿಗೂ ತಿಳಿಯುವಂತಹ ಸುಗಮವಾದ ಭಾಷಾಶೈಲಿಯಿಂದ ಬೋಧಿಸಿ ಅನೇಕರನ್ನು ಸ್ವಸಿದ್ಧಾಂತತತ್ವಜ್ಞರನ್ನಾಗಿ ಮಾಡಿತು.

ಈ ರೀತಿಯಾಗಿ ಈ ಪತ್ರಿಕೆಯು ತಾನು ಜನ್ಮವೆತ್ತಿದಂದಿನಿಂದ ಇಲ್ಲಿಯವರೆಗೆ ಸನಾತನಧರ್ಮೋದ್ಧಾರ ಕಾರ್ಯಗಳನ್ನು ಮಾಡುತ್ತ ಸಮಸ್ತ ಸನಾತನಮತಾನುಯಾಯಿಗಳ ಪರಮಪ್ರೇಮಕ್ಕೆ ಕಾರಣವಾಗಿರುವುದು. ಮತೋದ್ಧಾರಕ್ಕಾಗಿ ಮಹಾಚಾರ್ಯರ ಪವಿತ್ರಾಭಿಧಾನದಿಂದ ಪ್ರಕಾಶಿಸುತ್ತಿರುವ ಈ ಪತ್ರಿಕೆಯು ಚಿರಕಾಲ ಬಾಳಲೆಂಬ ಸದುದ್ದೇಶದಿಂದ ಅನೇಕ ಜನ ಗುರುಭಕ್ತಿಧುರೀಣರು ಈ ಪತ್ರಿಕೆಯ ಅಭಿವೃದ್ಧಿಗಾಗಿ ಲಿಂಗಧಾರಣ, ದೀಕ್ಷಾ, ವಿವಾಹಾದಿ ಶುಭಕಾರ್ಯಗಳಲ್ಲಿ ತಮ್ಮ ತಮ್ಮ ಶಕ್ತ್ಯನುಸಾರವಾಗಿ ದ್ರವ್ಯವನ್ನು ಸಮರ್ಪಿಸುತ್ತಿರುವುದು ಪ್ರತಿಯೊಬ್ಬರಿಗೂ ತಿಳಿದ ವಿಷಯವಾಗಿದೆ ಇದೇ ರೀತಿಯಾಗಿ ಸಮಸ್ತ ಗುರುಭಕ್ತರೂ ಈ ಪತ್ರಿಕೆಯ ಅಭಿವೃದ್ಧಿ ವಿಷಯದಲ್ಲಿ ಕಾಯ ವಾಙ್ಮನಸ್ಸುಗಳಿಂದ ಸಹಾಯಮಾಡಿ, ಶ್ರೀಜಗದಾಚಾರ್ಯರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದಾಶಿಸುತ್ತೇವೆ ಈಗ ಪ್ರಾಪ್ತವಾಗಿರುವ ಘೋರಯುದ್ಧದಿಂದ ಕಾಗದ ಮೊದಲಾದವುಗಳ ಬೆಲೆಯು ವಿಪರೀತವಾಗಿ ಏರಿಹೋಗಿದೆ ಇದರಿಂದ ಪತ್ರಿಕೆಗೆ ವಿಶೇಷ ನಷ್ಟವಾಗುವುದೆಂಬುದು ಪ್ರತಿಯೊಬ್ಬರಿಗೂ ತಿಳಿಯತಕ್ಕ ವಿಷಯವೇ ಆಗಿದೆ ಇಂತಹ ಕಠಿನ ಸಮಯದಲ್ಲಿ ಅಭಿಮಾನಿಗಳು ನಾನಾರೀತಿಯಿಂದ ಹೆಚ್ಚು ಸಹಾಯಮಾಡಿದರೆ ಪತ್ರಿಕೆಯು ನಿರಾತಂಕವಾಗಿ ನಡೆಯುವುದು ಈ ವಿಷಯವನ್ನು ಅಭಿಮಾನಿಗಳಾದವರು ಮುಖ್ಯವಾಗಿ ಗಮನದಲ್ಲಿಡಬೇಕು ಅಸ್ತು! ಶ್ರೀಜಗದಾಚಾರ್ಯರು ಸದಾ ತಮ್ಮ ಸೇವೆಯಲ್ಲೇ ನಿರತವಾಗಿರುವ ಈ ಪತ್ರಿಕೆಗೆ ಜಯಾಶೀರ್ವಾದಗಳನ್ನನುಗ್ರಹಿಸಿ, ಇದರ ವೈಭವವು ಸರ್ವತ್ರ ವ್ಯಾಪಿಸುವಂತೆ ಮಾಡಲೆಂದು ಆ ಪೂಜ್ಯಪಾದರನ್ನು ಅನನ್ಯಸಾಧಾರಣವಾದ ಭಕ್ತಿಭಾವದಿಂದ ಭಜಿಸುತ್ತೇವೆ

ಯುದ್ಧವಾರ್ತೆ.

ಯೂರೋಪ್ ಮೇಲೆ ದಂಡಯಾತ್ರೆಗೆ ಸಿದ್ಧತೆ

ಅಮೇರಿಕಾ ಯುದ್ಧೋದ್ಯಮ ತಯಾರಿಕಾ ಸಮಿತಿಯ ಅಧ್ಯಕ್ಷರಾದ ಶ್ರೀ ಡೋನಾಲ್ಡ್ ನೆಲ್‌ಸನ್‌ರವರು ಯೂರೋಪಿನ ದಂಡಯಾತ್ರೆ ವಿಷಯವಾಗಿ ಉತ್ಸಾಹಕರವಾದ ಭವಿಷ್ಯ ನುಡಿದಿದ್ದಾರೆ "ಆಕ್ರಮಣ ಪಡೆಗಳನ್ನು ೮೦೦೦ ಘಾತಕ ನೌಕೆಗಳ ಮೂಲಕ ಅತ್ಯಂತ ಬಲಯುತವಾದ ವಿಮಾನ ಪಡೆಗಳ ರಕ್ಷಣೆಯಲ್ಲಿ ಯೂರೋಪ್‌ಖಂಡದ ನಾನಾ ತೀರಗಳಲ್ಲಿ ಇಳಿಸಿ ಆಕ್ರಮಣ ನಡೆಸಲಾಗುವುದು ಪ್ರತಿಯೊಬ್ಬನಿಗೂ ಅತ್ಯುತ್ತಮ ಶಸ್ತ್ರಗಳನ್ನು ಒದಗಿಸಲಾಗುವುದಲ್ಲದೆ ಭೂಪಡೆಗಳ ಬೆಂಬಲವಾಗಿ ಟ್ಯಾಂಕುಗಳೂ ಸಹ ಹೋರಾಡುವುವು ಅಮೆರಿಕದ ಟ್ಯಾಂಕುಗಳಂದರೋ ಅದ್ವಿತೀಯವಾದುವು ಇತಿಹಾಸದಲ್ಲೇ ನಡೆಯದಿದ್ದ ಕಾರ್ಯ ಚಟುವಟಿಕೆಯು ಇನ್ನು ಮೇಲೆ ನಡೆಯಲಿದೆ" ಎಂದು ಹೇಳಿದರು

ಫ್ರೆಂಚ್ ನೌಕಾದಳವು ಜಪಾನನ್ನು ಸದೆಬಡಿಯುವುದು

ಜರ್ಮನಿಯ ಪತನವಾದ ಮೇಲೆ ಫ್ರೆಂಚ್ ನೌಕಾದಳವು ಜಪಾನರ ಮೇಲೆ ಕಾರ್ಯಕ್ರಮ ಜರುಗಿಸಿ ಫ್ರೆಂಚ್ ಇಂಡೋ ಚೀನವನ್ನು ಜಪಾನರ ಪಾಶದಿಂದ ಬಿಡಿಸಲು ನಿರ್ಧರಿಸಿರುವುದಾಗಿ ನೌಕಾದಳದ ಉಪನಾಯಕರು ಹೇಳಿದರು ಈ ನೌಕಾದಳದಲ್ಲಿ ೧೭೪ ಯುದ್ಧನೌಕೆಗಳೂ ೫೦,೦೦೦ ಯೋಧರೂ ಈಗ ಯುದ್ಧಮಾಡುವ ಸ್ಥಿತಿಯಲ್ಲಿರುವುದಾಗಿ ತಿಳಿಸಿರುವರು.

ಬೇಸಿಗೆಯುದ್ಧಕ್ಕಾಗಿ ಸಿದ್ಧತೆ.

ರಷ್ಯನ್ ರಣರಂಗದಲ್ಲಿ ಸಾಮಾನ್ಯ ಚಟುವಟಿಕೆ ಮಾತ್ರ ನಡೆಯುತ್ತಿದೆ. ಪ್ರಾಯಶಃ ಬೇಸಗೆಯಲ್ಲಿ ದಂಡಯಾತ್ರೆಯನ್ನು ಪ್ರಾರಂಭಿಸುವುದಕ್ಕಾಗಿ ರಷ್ಯನ್ ಸೇನೆ ಈಗ ಅಗಾಧ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರಬಹುದು. ಉಭಯತ್ರರೂ ತಮ್ಮ ಸೇನೆಗಳನ್ನು ಪುನರ್ವ್ಯವಸ್ಥೆಗೊಳಿಸುತ್ತಿದ್ದಾರೆ; ಜರ್ಮನರುಹೊಸ ಟ್ಯಾಂಕ್ ಡಿವಿಜನ್ನುಗಳನ್ನು ನಿರ್ಮಿಸುತ್ತಿದ್ದಾರೆ. ಯೂರೋಪನ್ನು ಸ್ವತಂತ್ರಗೊಳಿಸಲು ಪಶ್ಚಿಮ ಮತ್ತು ದಕ್ಷಿಣಗಳ ಕಡೆಯಿಂದ ಮಿತ್ರರು ದಂಡಯಾತ್ರೆಯನ್ನಾರಂಭಿಸುವಾಗಲೇ ರಷ್ಯನ್ ಸೇನೆಯೂ ಎರಡು ಅಥವಾ ಮೂರು ಕ್ಷೇತ್ರಗಳಲ್ಲಿ ನುಗ್ಗಿ ದಂಡಯಾತ್ರೆಯನ್ನಾರಂಭಿಸಬಹುದೆಂದು ನಿರೀಕ್ಷಿಸಲಾಗುತ್ತಿದೆ. ಈ ಎರಡು ದಂಡಯಾತ್ರೆಗಳೂ ಏಕಕಾಲದಲ್ಲಿ ಪ್ರಾರಂಭವಾಗುವ ಸಂಭವ ಹೆಚ್ಚುತ್ತಿದೆ.

ಆಸ್ಟ್ರೇಲಿಯಾದಲ್ಲಿ ನೌಕಾ ನಿರ್ಮಾಣ

ಆಸ್ಟ್ರೇಲಿಯಾ ಸರ್ಕಾರವು ೪೫ ಲಕ್ಷ ಪೌಂಡುಗಳನ್ನು ಖರ್ಚು ಮಾಡಿ ಒಂದು 'ಕ್ರೂಸರ್' ನೌಕೆಯನ್ನು ಕಟ್ಟಲೇರ್ಪಾಡು ಮಾಡಿದೆ. ಆಸ್ಟ್ರೇಲಿಯಾದಲ್ಲಿ ಕಟ್ಟಲ್ಪಟ್ಟಿರುವ ಹಡಗುಗಳಲ್ಲಿ ಇದೇ ಬಹಳ ದೊಡ್ಡದು ಎಂದು ತಿಳಿಸಲಾಗಿದೆ

ಯೂರೋಪಿನ ಆಕ್ರಮಣವು ನಾಜಿಗಳ ಭವಿಷ್ಯ ನಿರ್ಧರಿಸುವುದು

ಆಕ್ರಮಿತ ಯೂರೋಪಿನಲ್ಲಿ ನಿಶ್ಶಬ್ದತೆಯು ಹರಡಿದೆ. ಎಲ್ಲೆಲ್ಲೂ ಜನಗಳು ಮಿತ್ರರ ಆಕ್ರಮಣ ಕಾರ್ಯ ನಡೆಯುವುದನ್ನೇ ಉಸಿರು ಹಿಡಿದು ಎದುರು ನೋಡುತ್ತಿರುವರು ಜರ್ಮನಿಯಲ್ಲಿ ನಾಜಿಗಳೂ ಸಹ ತಮ್ಮ ಆತ್ಮಗಳು ತಟವಟಗೊಳ್ಳುತ್ತಿರುವದನ್ನು ಮರೆಮಾಚಲು ಸಹ ಪ್ರಯತ್ನಿಸುತ್ತಿಲ್ಲ ಅಕ್ಷರಾಜ್ಯಗಳ ಉಳಿವಿಗೆ ಕೃಣ ಮಾತ್ರವೂ ಭರವಸೆಯಿಲ್ಲ ಜರ್ಮನಿಯ ಆಗುಹೋಗುಗಳು ಮಿತ್ರರ ಆಕ್ರಮಣದ ಫಲಗಳನ್ನು ಅನುಸರಿಸುವುದಾಗಿ ಬರ್ಲಿನ ಮತ್ತು ಟೋಕಿಯೋವೃಂದಗಳಲ್ಲಿ ಊಹೆಗಳಾಗುತ್ತಿವೆ ಮಿತ್ರರ ಆಕ್ರಮಣವೇನಾದರೂ ಮೊದಲಿನಲ್ಲೇ ಯಶಸ್ವಿಯಾದರೆ ನಾಜಿಗಳ ಅಳಿವು ಕ್ಷಣದಲ್ಲಿ ಆಗುವುದಾಗಿ ನಾಜಿಗಳು ಆಗಲೇ ಅಭಿಪ್ರಾಯಪಟ್ಟಿರುವರು

ಶತ್ರುವಿನ ಮುಂದಿನ ನೀತಿ ಕುರಿತು ಯುದ್ಧ ಬಾತ್ಮೀದಾರರ ಅಭಿಪ್ರಾಯ

ಆಸ್ಸಾಂ ಪ್ರಾಂತ್ಯದಲ್ಲಿ ಧಾರಾಕಾರವಾದ ಮುಂಗಾರು ಮಳೆಯು ಪ್ರಾರಂಭವಾಗಲು ಇನ್ನು ೩ ವಾರಗಳು ಮಾತ್ರ ಉಳಿದಿವೆ ಈ ಮೂರು ವಾರಗಳ ಅಂತ್ಯದಲ್ಲಿ ಆಸ್ಸಾಂ ರಂಗದ ಯುದ್ಧಸ್ಥಿತಿಯು ಒಂದು ಘಟ್ಟಕ್ಕೆ ಬರಲಿದೆ ಈಗ ಬೆಟ್ಟ ಕಾಡುಗಳಲ್ಲಿ ಅವಿತುಕೊಂಡಿರುವ ಜಪಾನರು ಮಳೆಯ ಉಪದ್ರವವನ್ನು ತಡೆದುಕೊಂಡು ವಿವಿಧ ಕಷ್ಟಗಳನ್ನು ಅನುಭವಿಸಬೇಕು. ಇಲ್ಲವೇ ಕೋಹಿಮಾ ಇಂಫಾಲುಗಳನ್ನು ಆಕ್ರಮಿಸಿ ಸುರಕ್ಷಿತ ಸ್ಥಾನಗಳಲ್ಲಿ ಮಳೆಗಾಲವನ್ನು ಕಳೆಯಬೇಕು. ಜಪಾನರು ಏನು ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ ವಾದರೂ ಮೇಲೆ ಹೇಳಿದ ಎರಡು ಮಾರ್ಗಗಳಲ್ಲೊಂದನ್ನು ಅನುಸರಿಸಲೇಬೇಕಾಗಿರುವುದು ಒಂದು ವೇಳೆ ಜಪಾನರೇನಾದರೂ ಇಂಫಾಲಿನ ಸಮ ಪ್ರದೇಶಕ್ಕೆ ತಾವು ಈಗ ಇರುವ ಬೆಟ್ಟ ಕಾಡುಗಳಿಂದ ಬಂದರೆ ಅವರಿಗೆ ಮಿತ್ರರು ಎಂತಹ ಸ್ವಾಗತಕೊಡುವರೆಂದು ಗೊತ್ತಿರುವುದರಿಂದ ಜಪಾನರು ಸದ್ಯಕ್ಕೆ ಬಯಲಿಗೆ ಬರಲಾರರು. ಆದ್ದರಿಂದ ಬೆಟ್ಟ ಕಾಡುಗಳಲ್ಲಿಯೇ ಇದ್ದು ಧಾರಾಕಾರವಾಗಿ ಬೀಳುವ ಸುರಿಮಳೆಯನ್ನೆದುರಿಸಿ ಕಷ್ಟಪಟ್ಟುಕೊಂಡು ಇರಬೇಕಾಗಿರುವುದು ಆಶ್ಚರ್ಯ ಕಾರ್ಯಕ್ರಮ ಜರಗಿಸಲು ನಿಸ್ಸಹಾಯಕರಾಗಿರುವುದರಿಂದ ಕಿಚ್ಚಿನಿಂದ ಮಿತ್ರ ಪಡೆಗಳಿಗೆ ಕಿರುಕುಳ ಕೊಡುವ ಉದ್ದೇಶ್ಯದಿಂದ ಇಂಫಾಲನ್ನು ಕೋಹಿಮಾ ನಗರವನ್ನೂ ಸುತ್ತುಗಟ್ಟಿ ಮಿತ್ರ ವ್ಯವಹಾರಕ್ಕೆ ಅಡ್ಡಿ ಮಾಡಿ ಅದರಲ್ಲಿಯೇ ಸಂತೃಪ್ತರಾಗಬೇಕು. ಜಪಾನರು ಹೀಗೆ ಮಾಡಲೂಬಹುದು ಆದರೆ ಈ ತೆರನಾದ ಕಾರ್ಯಕ್ರಮಕ್ಕೆ ಮಿತ್ರರು ಸಿದ್ಧರಾಗಿಯೇ ಇದ್ದಾರೆ ತಿಂಗಳುಗಟ್ಲೆ ಹೊರ ಸಂಪರ್ಕವಿಲ್ಲದೆ ಮಿತ್ರರು ಇಂಫಾಲ್, ಕೋಹಿಮಾಗಳಲ್ಲಿರಲು ಬೇಕಾದ ಸೌಲಭ್ಯಗಳೆಲ್ಲವನ್ನೂ ಈಗಾಗಲೇ ಸಿದ್ಧ ಮಾಡಿಕೊಂಡಿರುವರು. ಇಂಫಾಲಿನ ಸುತ್ತುಮುತ್ತ ಜಪಾನರು ಪಾಳ್ಯ ಹಾಕಿ ಮಳೆಯ ಕಷ್ಟವನ್ನನುಭವಿಸಿದ ನಂತರ ಮಿತ್ರರ ಘಾತಕ್ಕೆ ಸಿಕ್ಕುವುದು ಖಂಡಿತ ಎಂದು ರಣಕ್ಷೇತ್ರದಲ್ಲಿರುವ ಅಸೋಸಿಯೇಟೆಡ್ ವಾರ್ತಾ ಸಂಸ್ಥೆ ಬಾತ್ಮೀದಾರರಾದ ಮಾಂಕೇಕರ್‌ರವರು ಬರೆಯುತ್ತಾರೆ.

ಕೋಹಿಮಾವಿಗೆ ಸರಬರಾಜು

ಕೋಹಿಮಾಕ್ಕೆ ಈಗ ಸಕಲ ಯುದ್ಧೋಪಕರಣಗಳೂ ಬರಾಜಾಗುತ್ತಿವೆ. ಕೋಹಿಮಾಕ್ಕೆ ಹೋಗುವ ಟ್ ರಸ್ತೆಯಲ್ಲಿ ಟ್ಯಾಂಕುಗಳೂ ಫಿರಂಗಿಗಳೂ ೋಧರೂ ಒಂದೇ ಸಮನೆ ಸರಿಯುತ್ತಿದ್ದಾರೆ. ೋಹಿಮಾ ಬಳಿ ಶತ್ರುವನ್ನು ಮರ್ದನ ಮಾಡುವುದೇ ತ್ರರ ಗುರಿಯಾಗಿದೆ. ದಿಮಾಪುರದಿಂದ ಕೋಹಿಮಾಕ್ಕೆ ಹೋಗುವ ರಸ್ತೆಯ ಪಾರ್ಶ್ವದಲ್ಲಿರುವ ಕಣಿವೆ ದೇಶಗಳಲ್ಲಿ ನಾಗಾ ಕಾಡುಜನರು ಮಿತ್ರರ ಸೈನ್ಯ ಟುವಟಿಕೆಯನ್ನು ಕುತೂಹಲದಿಂದ ನೋಡುತ್ತಿದ್ದಾರೆ ಂದು ಯುದ್ಧ ಸುದ್ದಿಗಾರರು ತಿಳಿಸುತ್ತಾರೆ. ಜಪಾನ ಗೆ ಉಸಿರಾಡಲು ಸಹ ಬಿಡಬೇಡಿ ಎಂಬುದು ೧೪ನೇ ನ್ಯಪಡೆಯ ಯುದ್ಧ ಘೋಷಣೆಯಾಗಿದೆ ಎಂದು ೇಳಲಾಗಿದೆ.

ಕೋಹಿಮಾ ಯುದ್ಧ

ಕೋಹಿಮಾನಗರದ ಮಧ್ಯಭಾಗದಲ್ಲಿರುವ ನಾಗಾ ದ್ದಗಳು ಕಮಿಷನರ್ ಮಿ|| ಪಿ. ಆರ್. ಪಾಸಿಯವರ ಂಗಲೆಯು ಜಪಾನಿಗಳ ವಶವಾಗಿದೆ. ಜೆಸ್ಸಾಮಿನ್ ಗಂದ ಮೇಲೆ ಜಪಾನಿಗಳು ಮುತ್ತಿಗೆ ಹಾಕುವ ಎರಡು ನಗಳ ಮುಂಚೆ ಪಾಸಿಯವರು ಅಲ್ಲಿಗೆ ಹೋಗಿದ್ದರು ೋಹಿಮಕ್ಕೆ ಅವರು ವಾಪಸು ಬಂದು ಸೇರಿದ ಡನೇ ಜಪಾನಿ ಮುತ್ತಿಗೆ ಆರಂಭವಾಯಿತು. ರಾತ್ರಿ ಗಲೂ ಶತ್ರು ಮುತ್ತಿಗೆ ನಡೆಯುತ್ತಿದ್ದರೂ ಪಾಸಿಯವರು ಸ್ಥಳ ಬಿಟ್ಟು ಕದಲಲಿಲ್ಲ ಅವರ ಬಂಗಲೆಯಲ್ಲಿ ಪರೀತ ಕದನವಾಗಿ ಕೊನೆಗೆ ಅದನ್ನು ಶತ್ರುಗಳಿಗೆ ಟ್ಟುಕೊಡಬೇಕಾಯಿತು ಪಾಸಿಯವರು ೧೯೩೯ ರಲ್ಲಿ ಸ್ಸಾಮಿಗೆ ಬಂದರು ನಾಗಾ ಗುಡ್ಡ ಪ್ರದೇಶದಲ್ಲಿ ೧೦ ರ್ಷಗಳಿಂದ ಅವರಿದ್ದಾರೆ. ೧೯೩೭ ರಲ್ಲಿ ಅವರು ಮಿಷನರ್ ಆದರು. ನಾಗಾ ಜನರು ಅವರನ್ನು ಂದರೆ ತುಂಬಾ ವಿಶ್ವಾಸದಿಂದ ಇದ್ದಾರೆ. ಕೋಹಿಮಾ ಂತ್ಯ ಕದನಕ್ಕಾಗಿ ರಂಗವೀಗ ಪರಿಷ್ಕಾರವಾಗಿದೆ. ಪಾನಿಗಳು ಅಲ್ಲಿ ನಿಂತು ಕದನ ಮಾಡಲು ನಿರ್ಧರಿಸಿದೆ, ಕೋಹಿಮಾ ಕದನ ಎಂಟ್ರಿಯ ವಲ್ಲಾದ ಕೆರೆಕ ನವಷ್ಟೇ ಪ್ರಸಿದ್ಧಿಗೆ ಬರುತ್ತದೆ ಆ ಕೆರೆ ಕದನದಲ್ಲಿ ತ್ರ ಸೇನೆ ಎಷ್ಟು ಎರಡು ತೊಡರುಗಳನ್ನು ನಿವಾರಿ ಕೊಳ್ಳಬೇಕಾಯಿತೋ ಅಷ್ಟೇ ಎರಡು ತೊಡರುಗಳನ್ನು ಲ್ಲೂ ನಿವಾರಿಸಿಕೊಳ್ಳ ಬೇಕಾಗಿದೆ ದಿಮಾಪುರದಿಂದ ೋಹಿಮಾಕ್ಕೆ ಲಾರಿಗಳಲ್ಲಿ ಅಗಾಧವಾಗಿ ಸಾಮಗ್ರಿಗಳು ಂದು ತಲುಪುತ್ತಿವೆ ಜಪಾನಿಗಳು ಇವುಗಳ ಮೇಲೆ ಂಡು ಹಾರಿಸಲು ಸಾಧ್ಯವಿದ್ದರೂ ತಮ್ಮ ಫಿರಂಗಿ ಗಳ ಸುಳಿವು ಎಲ್ಲಿ ಗೊತ್ತಾಗಿಬಿಡುತ್ತದೋ, ಎಂದು ಮ್ಮನಿದ್ದಾರೆ. ಕೋಹಿಮಾದಲ್ಲಿ ಸಮ್ಮರ್ ಹೌಸ್ ಲ್ ಎಂಬುದೊಂದು ಗಿರಿ ಶಿಖರವಿದೆ ಅಲ್ಲಿ ಮಿತ್ರ ನೆ ಸಜ್ಜಿತವಾಗಿ ನಿಂತಿದೆ. ಮಿತ್ರ ಟ್ಯಾಂಕುಗಳು ರಂಗಿಗಳು ಡೈವ್ ಬಾಂಬರುಗಳು ಮಿತ್ರರಿಗೆ ನೆರ ಾಗಿ ನಿಂತಿವೆ.

ಜವಾಡದಲ್ಲಿ ಬೆಂಕಿಯ ಅನಾಹುತ

ಬೆಜವಾಡಕ್ಕೆ ೬ ಮೈಲಿ ದೂರದಲ್ಲಿರುವ ಒಂದು ಗ್ರಾಮದಲ್ಲಿ ೨೨ನೇ ತಾರೀಖು ಶನಿವಾರ ಬೆಂಕಿಯ ಪ್ರಮಾದ ಸಂಭವಿಸಿತು ೪೦೦ ಮನೆಗಳು ಸುಟ್ಟು ೋದವು ; ಕಡಲೇಕಾಯಿ ಮತ್ತು ಬತ್ತವನ್ನು ತುಂಬಿದ್ದ ಮಳಿಗೆಗಳೆಲ್ಲ ಅಗ್ನಿಗೆ ಆಹುತಿಯಾಗಿ ನೆಲಸಮ ವಾಯಿತು ಬೆಂಕಿಯ ಜ್ವಾಲೆಯು ಅಗಾಧವಾಗಿ ಹರಡಿತ್ತು; ಬೆಜವಾಡದಲ್ಲಿ ಇಂತಹ ಭಾರಿ ಬೆಂಕಿಯ ಅನಾಹುತ ಹಿಂದೆ ಯಾವಾಗಲೂ ಸಂಭವಿಸಿರಲಿಲ್ಲವೆಂದು ಳಬಹುದು. ಬೆಂಕಿ ಆರಿಸುವ ದಳದವರು ೩೬ ಟೆಗಳ ಕಾಲ ಅತಿ ಪ್ರಯಾಸದಿಂದ ಶ್ರಮಿಸಿ ಬೆಂಕಿ ಸಿ ಅರ್ಧ ಗ್ರಾಮವನ್ನು ರಕ್ಷಿಸಿದರು. ಅನೇಕ ಕ್ಷ ರೂ. ಗಳಷ್ಟು ನಷ್ಟವಾಗಿದೆಯೆಂದು ಅಂದಾಜು ಾಡಲಾಗಿದೆ. ಆದರೆ ಪ್ರಾಣಹಾನಿ ಮಾತ್ರ ಸಂಭವಿ ಲ್ಲವೆಂದು ಹೇಳಲಾಗಿದೆ.

ಬೊಂಬಾಯಿಯಲ್ಲಿ ಭಾರಿ ದರೋಡೆ

ಬೊಂಬಾಯಿಯ ವ್ಯಾಪಾರಸ್ಥರಲ್ಲೊಬ್ಬರಾದ ಶ್ರೀ ಛೋಟಲಾಲ್ ಭೋಗಿಲಾಲ್ ಷಾರವರ ಅಂಗಡಿಯಲ್ಲಿ ೩೦ ಸಹಸ್ರ ರೂ. ಬೆಲೆಬಾಳುವ ಒಡವೆಗಳನ್ನೂ ನಗದನ್ನೂ ಯಾರೋ ಅಪಹರಿಸಿಕೊಂಡು ಹೋದರು. ವಿವರ ಹೀಗಿದೆ :—

ಮರಿನ್ ಡ್ರೈವ್ ರಸ್ತೆಯಲ್ಲಿರುವ ಷಾರವರ ಮನೆಗೆ ಪೋಲೀಸ್ ಉಡುಪನ್ನೂ ಮಿಲಿಟರಿ ಪೋಷಾಕನ್ನೂ ತೊಟ್ಟಿದ್ದ ಇಬ್ಬರು ಬಂದು, ತಾವು ಸರ್ಕಾರಿ ಅಧಿಕಾರಿಗಳೆಂದು ಅವರಿಗೆ ತಿಳಿಸಿದರಂತೆ. ಅಲ್ಲದೆ ಷಾರವರು ಶತ್ರುವಿನೊಡನೆ ವ್ಯಾಪಾರ ನಡೆಸುವುದರಲ್ಲಿ ಉದ್ಯುಕ್ತರಾಗಿದ್ದಾರೆಂದು ಸಂಶಯ ತಮಗೆ ಉಂಟಾಗಿರುವುದಾಗಿ ತಿಳಿಸಿದರಂತೆ ಕುಂಬಕಾಂತದಲ್ಲಿರುವ ಅವರ ಅಂಗಡಿಯ ಶೋಧನೆ ನಡೆಸಬೇಕಾಗಿದೆಯೆಂದೂ ಆದುದರಿಂದ ಷಾರವರು ಅವರೊಡನೆ ಬರತಕ್ಕದ್ದೆಂದೂ ತಿಳಿಸಿದರು. ಅದೇ ಪ್ರಕಾರ ಅವರು ಷಾರವರನ್ನು ಜೊತೆಯಲ್ಲಿ ಕರೆದುಕೊಂಡು ಅಂಗಡಿಗೆ ಬಂದರು. ಅಂಗಡಿಗೆ ಬಂದೊಡನೆಯೇ ಅಲ್ಲಿದ್ದ ನೌಕರರಿಗೆ ಹೊರಗೆ ಹೋಗತಕ್ಕದ್ದೆಂದು ಆ ಅಪರಿಚಿತರು ಆಜ್ಞಾಪಿಸಿದರು. ಆ ಮೇಲೆ ತಿಜೋರಿಯ ಬಾಗಿಲು ತೆಗೆಯುವಂತೆ ಷಾರವರಿಗೆ ತಿಳಿಸಿದರು. ಷಾರವರು ತಿಜೋರಿಯನ್ನು ತೆರೆದೊಡನೆಯೇ ಆ ಅಪರಿಚಿತರು ಅವರನ್ನು ಹೊಡೆದುರುಳಿಸಿ ತಿಜೋರಿಯಲ್ಲಿದ್ದ ನಗದನ್ನೂ ಒಡವೆಗಳನ್ನೂ ಅಪಹರಿಸಿಕೊಂಡು ಅಂಗಡಿಗೆ ಸ್ವಲ್ಪ ದೂರದಲ್ಲಿ ಕಾದಿದ್ದ ಕಾರಿನಲ್ಲಿ ಕುಳಿತು ಪರಾರಿಯಾದರು ಇದುವರೆಗೂ ಅವರ ಪತ್ತೆಯಾಗಿಲ್ಲ.

ಸ್ವೀಕಾರ

ಬೆಂಗಳೂರುಸಿಟಿಯಲ್ಲಿರುವ ಶೇ|| ಬೆಳ್ಳಾವೆ ಶಂಕರಪ್ಪನವರ ದ್ವಿತೀಯ ಪುತ್ರ ಚಿ|| ವೀರಭದ್ರಯ್ಯನಿಗೆ ತುಮಕೂರು ತಾ|| ಹೊನ್ನುಡಿಕೆಯಲ್ಲಿರುವ ವೇ|| ಸರ್ವಜ್ಞಯ್ಯನವರ ಪುತ್ರಿ ಚಿ|| ಸೌ|| ರುದ್ರಾಣಮ್ಮನನ್ನು ಕೊಟ್ಟು ಚಿಕ್ಕಪೇಟೆಯಲ್ಲಿರುವ ಶ್ರೀ ಮಹಾಂತಿನಮಠದಲ್ಲಿ ವಿವಾಹ ಮಹೋತ್ಸವವು ನೆರವೇರಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ವರನ ಕಡೆಯವರು ಸಮರ್ಪಿಸಿದ 2 ರೂ. ಗಳು ವಧುವಿನ ಕಡೆಯವರು ಸಮರ್ಪಿಸಿದ 1 ರೂ. ಒಟ್ಟು 3 ರೂ. ಗಳು ಯಜಮಾನ್ ಕೆಂಚಪ್ಪ ಅಂಡ್ ಬ್ರದರ್ಸ್ ಇವರ ದ್ವಾರಾ ತಲ್ಪಿರುತ್ತವೆ.

ನಿಜಾಂ ಇಲಾಖಾ ಪೇಣೇತಂಜೇರಿಗ್ರಾಮದಲ್ಲಿರುವ ಶ್ರೀ ಮಲ್ಲಿಕಾರ್ಜುನ ಪ್ರಾಸಾದಿಕ ಸಂಗೀತ ನಾಟಕ ಮಂಡಳಿಯವರು ಶ್ರೀ ಜಗದಾಚಾರ್ಯರ ಜಯಂತಿ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ದಾರುಕ ಶಾಖಾಮಠದ ವೇ|| ಸಿದ್ಧಲಿಂಗಸ್ವಾಮಿಯವರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಡಿ|| ಹೂವಿನಹಡಗಲಿ ಗ್ರಾಮದಲ್ಲಿರುವ ಮ|| ರಾ|| ಹಂಣಿ ಬಣಕಾರ ಚನ್ನಬಸಪ್ಪನವರ ಧರ್ಮಪತ್ನಿಯವರಾದ ವೀರಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಮತ್ತು ಇದೇ ಗ್ರಾಮದ ಮ|| ರಾ|| ಸೊಪ್ಪಿನ ಕರಿಯಪ್ಪನವರ ಮಕ್ಕಳಾದ ಮಲ್ಲಪ್ಪನವರು ಶಿವಾಧೀನರಾದ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿ ಒಟ್ಟು 3 ರೂಪಾಯಿ-ಗಳು ಶ್ರೀಮಂತ ಗುಗ್ಗರಿ ಪುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ.

ವಿಜಾಪುರ ಡಿ|| ಹೈನಾಪುರಗ್ರಾಮದಲ್ಲಿರುವ ಒಪವ್ವ ಶಿವಸಿಂಪಿ ಇವರು ತಮ್ಮ ೮೦ನೆಯ ವಯಸ್ಸಿನಲ್ಲಿ ಶಿವಾಧೀನರಾದ ಸಮಯದಲ್ಲಿ ಅವರ ಮಕ್ಕಳು ಗುರುಗಳ ಅಪ್ಪಣೆ ಪ್ರಕಾರ ಸಮರ್ಪಿಸಿದ 1 ರೂಪಾಯಿ ಮುಡಪತ್ತಿ ಗುರುಪಾದಯ್ಯನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

(೧ನೆಯ ಪುಟದಿಂದ ಮುಂದುವರಿದುದು)

ಬೇಡುವರು. ಆದರೆ ಭೋಗಿಗಳು ಕಂಡುದನ್ನೆಲ್ಲ ತಮಗೆ ಅಗತ್ಯವಿರಲಿ, ಇಲ್ಲದಿರಲಿ ಬೇಡುವರು.

ಮುಖ್ಯವಾಗಿ ಎಲ್ಲ ಕೆಲಸಗಳಿಗೂ ಮನಸ್ತುಷ್ಟಿಯೇ ಕಾರಣವಾಗಿರುವುದು. ಒಂದು ಲಕ್ಷ ಧನವು ನಮ್ಮ ಪೆಟ್ಟಿಗೆಯಲ್ಲಿದ್ದರೂ ನಾವು ತುಷ್ಟಿಯನ್ನು ಹೊಂದದಿದ್ದರೆ ನಮ್ಮ ಬಡತನವು ಹಿಂಗಿತೆಂದು ತಿಳಿಯಬಾರದು. ತುಷ್ಟಿಯು ಉದ್ಯೋಗವೆಂಬ ಗಾಲಿಯನ್ನು ನಡೆಸುವ ಕೀಲಿನಂತಿದೆ. ಮನುಷ್ಯನು ದ್ರವ್ಯವನ್ನು ಸಂಪಾದಿಸಿ ತನ್ನ ಸೌಖ್ಯವನ್ನು ಹೆಚ್ಚಿಸಿಕೊಂಡರೆ ತನ್ನ ಜನ್ಮದ ಉದ್ದೇಶವು ಸಫಲವಾಯಿತೆಂದು ತಿಳಿಯಬಾರದು. ಶಾರೀರಕ ಮತ್ತು ಮಾನಸಿಕ ಶ್ರಮಗಳಿಂದ ಸ್ವಂತ ಸುಖಸಾಧನಗಳನ್ನು ಮಾತ್ರ ಹೆಚ್ಚಿಸಿಕೊಳ್ಳದೆ ಇತರರಿಗೂ ಉಪಕಾರ ಮಾಡಬೇಕು ನಾಸ್ತಿಕ ವಿಚಾರವನ್ನು ಮನಸ್ಸಿಗೆ ತಂದುಕೊಂಡು ಪುಣ್ಯಪಾಪಗಳ ಭೇದವನ್ನೆಣಿಸದೆ ಅಧರ್ಮಿಗಳಂತೆ ಆಚರಣೆಯನ್ನು ಮಾಡಬಾರದು. ನೀತಿಗೆ ಸರಳವಾದ ಒಂದೇ ಮಾರ್ಗವುಂಟು. ಅನೀತಿಗೆ ಮುಳ್ಳುಗಳುಳ್ಳ ಸಾವಿರಾರು ಮಾರ್ಗಗಳುಂಟು. ದುರ್ನಡತೆಗಳನ್ನು ಬಿಟ್ಟು ನೀತಿಯಿಂದ ಬದುಕುವವನೇ ಭಾಗ್ಯವಂತನು ಸೌಖ್ಯವೂ ಸಿರಿಯೂ ಒಂದೇಕಡೆ ಕೂಡಿರುವುದಿಲ್ಲ ಮನೆಯಲ್ಲಿ ಬೇಕಾದಷ್ಟು ಹಣವಿದ್ದರೂ, ದುರ್ಗುಣವಿದ್ದರೆ ಕ್ಲೇಶಗಳು ಮನಸ್ಸನ್ನು ವ್ಯಾಪಿಸುವುವು. ಆದುದರಿಂದ ಒಳ್ಳೆಯತನ, ವಿದ್ಯೆ, ಔದಾರ್ಯಗಳನ್ನು ಗಳಿಸುವವನು ಎಲ್ಲರಿಗಿಂತ ಹೆಚ್ಚು ಸೌಖ್ಯವನ್ನು ಅನುಭವಿಸುವನು. "ಚಕ್ರವತ್ ಪರಿವರ್ತಂತೇ ದುಃಖಾನಿಚ ಸುಖಾನಿಚ" ಎಂಬಂತೆ ಆಗಾಗ ಸುಖಗಳೂ ದುಃಖಗಳೂ ಒದಗುವುವು. ಸೌಖ್ಯ ಬಂದಾಗ ಹಿಗ್ಗದೆ ದುಃಖ ಬಂದಾಗ ತಗ್ಗದೆ ಜೀವಿಸತಕ್ಕದ್ದು. ನಮಗೆ ಪ್ರಿಯರಾದ ಬಂಧುಮಿತ್ರರು ಮಡಿಯಬಹುದು. ದುಷ್ಟರೂ ದ್ರೋಹಿಗಳೂ ನಮ್ಮನ್ನು ಕಷ್ಟಕ್ಕೆ ಗುರಿಮಾಡಬಹುದು. ಆದರೆ ನಾವು ದೇವರನ್ನು ನಂಬಿ ನೀತಿಯಿಂದ ನಡೆದರೆ ನಮಗೆ ಸೌಖ್ಯವೂ ಸದ್ಗತಿಯೂ ನೆರೆಮನೆಯಾಗಿರುವುವು.

ವಾಚಕರೇ ಜಗತ್ತಿನಲ್ಲಿ ಜನರು ಪುಷ್ಕಳ ಧನವನ್ನು ಸಂಪಾದಿಸುತ್ತಾರೆ. ಅನೇಕರು ವಾರ್ತಾ-ಕೀರ್ತಿ-ಬಾಹ್ಯಾಡಂಬರ, ಅಧಿಕಾರ, ದುರ್ವ್ಯಸನಗಳಿಗಾಗಿ ಸಾವಿರಾರು ರೂಪಾಯಿಗಳನ್ನು ಹುಣಸೇ ಬೀಜಗಳಿಗೆ ಕಡೆಯಾಗಿ ಖರ್ಚು ಮಾಡುತ್ತಾರೆ ಅವರು ಸದ್ವಿನಿಯೋಗದ ರೀತಿ ನೀತಿಗಳನ್ನೇ ಅರಿಯರು. ಈ ವಿಷಯದಲ್ಲಿ ನೀತಿಕಾರರು ದುಷ್ಟರ ಐಶ್ವರ್ಯವೆಲ್ಲವೂ, ಬೇವಿನ ಮರವು ಫಲಭರಿತವಾಗಿದ್ದರೂ ಕಾಗೆಗಳಿಂದ ಭಕ್ಷಿಸಲ್ಪಡುವಂತೆ ಮೂರ್ಖರ ಉಪಯೋಗಕ್ಕೆ ಆಗುವುದು ಎಂದು ಹೇಳಿರುವರು ಅರ್ಥಾತ್ ಸತ್ಕಾರ್ಯಕ್ಕೆ ಉಪಯೋಗವಾಗುವುದಿಲ್ಲವೆಂದು ಭಾವವು. ಆದ ಪ್ರಯುಕ್ತ ಹಣದ ವಿನಿಯೋಗ ಮಾಡುವುದಕ್ಕಾದರೂ ಪಾತ್ರಾಪಾತ್ರ ವಿವೇಚನೆಯಿರಬೇಕಾಗುತ್ತದೆ.

ಪೋಸ್ಟ್‌ಮಾಸ್ಟರ್ ಜನರಲ್‌ರವರು ಲಾರಿ ಅಪಘಾತಕ್ಕೀಡಾಗಿ ಸತ್ತರು

ಮದರಾಸ್ ಮೌಂಟ್‌ರೋಡಿನಲ್ಲಿ ಅಂಚೆ ಕಛೇರಿಯ ಬಳಿ ಇರುವ ಚರ್ಚ್‌ಹತ್ತಿರ ಪೋಸ್ಟ್‌ಮಾಸ್ಟರ್ ಜನರಲ್‌ರಾದ ಎಫ್. ರಹಮಾನ್‌ರವರೂ ತಂತಿಗಳ ಡೈರೆಕ್ಟರಾದ ಎ ಜೆ ಪಾಸ್ಕೆರ್‌ರವರೂ ನಕ್ಷೆಯೊಂದನ್ನು ಹಿಡಿದುಕೊಂಡು ಪರೀಕ್ಷಿಸುತ್ತಿದ್ದಾಗ ಮಿಲಿಟರಿ ಲಾರಿಯೊಂದು ಅವರಿಗೆ ಢಿಕ್ಕಿಹೊಡೆಯಿತು. ತತ್ಪರಿಣಾಮವಾಗಿ ರಹಮಾನರಿಗೆ ತೀವ್ರ ಗಾಯಗಳಾದವು. ಹತ್ತಿರವಿದ್ದ ಕಾರೊಂದರಲ್ಲಿ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು ಆದರೆ ಒಂದು ಗಂಟೆಯೊಳಗಾಗಿ ಮೃತರಾದರು. ಪಾಸ್ಕೆರ್‌ರವರಿಗೆ ತೀವ್ರ ಗಾಯಗಳೇನೂ ಆಗಿಲ್ಲ. ಅವರು ಜನರಲ್ ಆಸ್ಪತ್ರೆಯಲ್ಲಿ ಗುಣಹೊಂದುತ್ತಿದ್ದಾರೆ. ಈ ಮರಣಕ್ಕೆ ಕಾರಣವಾದ ಲಾರಿಯನ್ನು ಆದರ ಚಾಲಕನು ಅಲ್ಲಿ ನಿಲ್ಲಿಸದೆ ಇನ್ನೂ ವೇಗವಾಗಿ ಬಿಟ್ಟುಕೊಂಡು ಹೋದನೆಂದು ಹೇಳಲಾಗಿದೆ.

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ X ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗ ವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ X ೧೦ ಬೆಲೆ	೦—೬—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ ಸಾನಂದ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧ X ೧೪ ಬೆಲೆ	೦—೩—೦
ಸತ್ಯ ಲೋಕಾರೋಹಣಮಾಡಿದನಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ X ೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ X ೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೦
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೦
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ X ೧೦	೦—೪—೦
ಶ್ರೀಪಮ್ಮನ್ಮಹಾಮುನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೦
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೦
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದು ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೩ಸಾವಿರ** ವರ್ಷಗಳ ಪೂರ್ವದಲ್ಲಿ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ಗೊತ್ತಾಗುವುದು. ವಾಚಕರ ಅನುಕೂಲಕ್ಕಾಗಿ ಕ್ರಮವರಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೩ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಲಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಸಿದ್ಧತತ್ವದರ್ಪಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪ್ರವಚನ (೩ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಭಕ್ತವಿಲಾಸ	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ಬಿಲ್ವಮಾಹಾತ್ಮ್ಯ	೩ ಆಣೆ
ವೀರಶೈವಾಚಾರಪದ್ಧತಿ (೨ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹಪದ್ಧತಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವಪ್ರಸಾದಿಕಸ್ವರೂಪ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶಾಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಅಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨
* ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨
ಶಿಖಾಸೂತ್ರಸಿದ್ಧಾಂತದರ್ಪಣ	೧೨
* ವೈದಿಕಶಿವಪೂಜಾಪದ್ಧತಿ (ವೈದಿಕಸ್ವರಯುಕ್ತವಾದ ಸುಂದರಮುದ್ರಣ)	೧
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧
ಶ್ರೀಕರಭಾಷ್ಯಂ (೪ನೆ ಸೂತ್ರ)	೧॥
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೩
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಿಸಲ್ಪಟ್ಟುದು)	೨
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨
ವೀರಶೈವಸಿದ್ಧಾಂತಸುಧಾಕರ	೩
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮
A brief life-sketch of Pandit Sri Kashinatha Shastriji (*English*)	4
The Philosophical Aspect of Virasaivism (*English*)	8
Speeches by Pandit Shri Kashinatha Shastriji (*English*)	12
लिंगधारणचन्द्रिका (संस्कृत)	३
वीरशैवरत्न (मराठी)	१
महानारायणोपनिषत् (वीरशैवभाष्य-संस्कृत)	१
सिद्धांतशिखामणि (मूल)	८
नन्दिकेश्वरकारिका (संस्कृत)	२

* ಈ ಗುರುತು ಹಾಕಿರುವ ಪುಸ್ತಕಗಳು ಮುಗಿದುಹೋಗಿರುವುದರಿಂದ ದೊರೆಯುವುದಿಲ್ಲ. ಕೆಲವು ಪುಸ್ತಕಗಳು ಮುಗಿಯುತ್ತ ಬಂದಿರುವುದರಿಂದಲೂ ಕಾಗದದ ಬೆಲೆಯು ವಿಶೇಷ ಏರಿರುವುದರಿಂದಲೂ ಅವುಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ನಯಾಜಿರಾಜ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

GISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ದವರ್ಷಕ್ಕೆ ೨ ರೂ. ೪ ಆಣೆ ಪರಸ್ಥಳದವರಿಗೆ ೩ ರೂ. ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಶ್ರೀ ಜಗದ್ಗುರು ದಾರುಕಾಚಾರ್ಯ ಜಯಂತೀಮಹೋತ್ಸವಗಳು

ಹುಬ್ಬಳ್ಳಿ

ಧಾರವಾಡ ಡಿ|| ಹುಬ್ಬಳ್ಳಿ ನಿವಾಸಿಗಳಾದ ವೇ|| ಚಿಕ್ಕ ದ ರೇವಣಯ್ಯನವರು ದೇಸಾಯಿ ಗಲ್ಲಿಯಲ್ಲಿರುವ ಮಠದಲ್ಲಿ ಇದೇ ವೈಶಾಖ ಶು|| ೫ ಗುರುವಾರ ೨೭-೪-೧೯೪೪ ನೇ ದಿವಸ ವೀರಶೈವ ಮಹಾಮತ ಪಕ ಪಂಚಜಗದ್ಗುರುಗಳಲ್ಲೊಬ್ಬರಾದ ಶ್ರೀ ದಾರು ಚಾರ್ಯರ ಜಯಂತೀ ಮಹೋತ್ಸವವನ್ನು ಬಹಳ ಸಂಭ್ರಮದಿಂದ ನೆರವೇರಿಸಿದರು ಮೇಲ್ಕಂಡ ಮಹತ್ಕಾರ್ಯವನ್ನು ನಾರಾಯಣಪುರದ ಹಿರೇಮಠದ ಗದಿಗೆಯ್ಯ ನರ ಪೌರೋಹಿತ್ಯದಲ್ಲಿ ಜಗದ್ಗುರು ಮೂರ್ತಿಯನ್ನು ತನ ಮಂಟಪದಲ್ಲಿ ಮೂರ್ತಗೊಳಿಸಿ ಅಷ್ಟವಿಧಾ ನೆಯಿಂದಲೂ ಷೋಡಶೋಪಚಾರಗಳಿಂದಲೂ ಂತ ಭಕ್ತಿ ವೈಭವಗಳಿಂದ ಪೂಜಿಸಿದರು ಅನಂತರ ನಮ ಮೂರ್ತಿಗಳ ಹಾಗೂ ಆಮಂತ್ರಿಸಲ್ಪಟ್ಟ ಪುರ ಮುಖರುಗಳಿಗೆ ಮಿಷ್ಟಾನ್ನ ಭೋಜನವಾದನಂತರ ನ ಕಾರ್ಯಕ್ರಮವು ಪೂರ್ತಿಗೊಳಿಸಲ್ಪಟ್ಟಿತು. ಲ್ಕಂಡ ಮಹತ್ಕಾರ್ಯವು ಅತ್ಯಂತ ವೈಭವ ಭಕ್ತಿ ಯೊಡನೆ ನೆರವೇರುವಂತೆ ಸದರಿ ಮಠಾಧಿಕಾರಿಗಳ ಚಿರಂ ವರಾದ ವೇ|| ಗಂಗಾಧರಯ್ಯನವರು ಚಿಕ್ಕಮಠ ಇವರು ದಕ್ಷತೆಯಿಂದ ಸಕಲವ್ಯವಸ್ಥೆಯನ್ನೂ ಮಾಡಿದ್ದರು.

ಓರ್ವ ಗುರುಭಕ್ತ

ಹಡಗಲಿ

ರೋಣ ತಾ|| ಹಡಗಲಿಗ್ರಾಮದ ಜಂಗರಡ್ಡಿ ಓಣಿಯ ರು ವೈಶಾಖ ಶು|| ೫ ಗುರುವಾರ ದಿವಸ ಶ್ರೀ ಜಗ ರು ದಾರುಕಾಚಾರ್ಯರ ಜಯಂತೀಮಹೋತ್ಸವ ಬಹು ವೈಭವದಿಂದ ನೆರವೇರಿಸಿದರು ಈ ಕಾರ್ಯ ಒಳ್ಳೆ ಉತ್ಸಾಹದಿಂದ ಮಾಡಿದ ಸಮಸ್ತ ಸದ್ಭಕ್ತ ರಿಗೆ ಜಗದಾಚಾರ್ಯರು ಸನ್ಮಂಗಲವನ್ನೀಯ ಮ ಪ್ರಾರ್ಥಿಸುವ

ಶಂಕರಪ್ಪ ಮೇಟಿ

ಚಿಲಕನಹಟ್ಟಿ

ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲೂಕು ಚಿಲಕನ ಗ್ರಾಮದ ಪಂಚಗೃಹಮಠದಲ್ಲಿ ಮಹಾಚಾರ್ಯ ಜಗದ್ಗುರು ಪಂಚಾಚಾರ್ಯರ ಜಯಂತಿಯನ್ನು ವರೆ ತಾ|| ೨೭-೨-೪೪ ರಲ್ಲಿ ಪಂಡಿತಾರಾಧ್ಯ ಹಾಗೂ ರಾಧ್ಯರ ಜಯಂತಿಯನ್ನು ಮತ್ತು ತಾ|| ೯-೩-೪೪ ರೇಣುಕಾಚಾರ್ಯರ ಜಯಂತಿಯನ್ನು ವಿಧಿಪೂರ್ವಕ ನೆರವೇರಿಸಿ ಏಕೋರಾಮ, ಮತ್ತು ದಾರುಕಾಚಾರ್ಯರ ಜಯಂತಿಯ ನಿಮಿತ್ಯವಾಗಿ ವೈಶಾಖ ಶು|| ಪ್ರತಿಪದಾದಿಯಾಗಿ ಸುಂದರವಾಗಿ ನಿರ್ಮಿಸಲ್ಪಟ್ಟ ಮಂಟಪಾಗ್ರದೊಳ್ ಸ್ಥಾಪಿಸಲ್ಪಟ್ಟ ಲಿಂಗೋದ್ಭವ ಮೂರ್ತಿಗೆ ಪಾದ್ಯಾದಿ ಷೋಡಶೋಪಚಾರಪೂಜಾ ಸಹಸ್ರ ಬಿಲ್ವಾರ್ಚನ ಕ್ರಮವು ಗುರುಪಾದಪೂಜಾ ಪ್ರಸಾದವಿನಿಯೋಗ ಮುಂತಾದವು ನಡೆದವು ಪ್ರತಿದಿನವು ಸಾಯಂಕಾಲಕ್ಕೆ ಕೂಡಿದ ಭಕ್ತವೃಂದದ ಮಧ್ಯೆ ಸದ್ರಿ ಮಠಾಧ್ಯಕ್ಷರು ಶಿವಸರ್ವೋತ್ತಮತ್ವದ ಒಗ್ಗೆ ಶಿವಾಧಿಕ್ಯ ಪುರಾಣಮಂ ಪ್ರಮಾಣಮಾಗಿರಿಸಿ ಸಮಯೋಚಿತ ಉಪನ್ಯಾಸಗಳನ್ನು ಜರುಗಿಸುತ್ತ ವೈಶಾಖ ಶು|| ೭ ವರೆಗೆ ನಡೆಯಿಸಿ ಅನಂತರ ಕಡೆಯದಿನ ಎಂದರೆ ಸಪ್ತಮಿ ಶನಿವಾರ ಸಾಯಂಕಾಲ ವಿಶೇಷವಾಗಿ ಕೂಡಿದ ಸ್ವಮತ ಪರಮತೀಯ ಜನ ಸಂದಣಿಯಲ್ಲಿ ನಿಂತು ಮತಸ್ಥಾಪನಾಚಾರ್ಯರ ಜಯಂತಿಯ ಆಚರಣೆಯ ಒಗ್ಗೆ ಗಂಭೀರವಾಣಿಯಿಂದ ಅನುಭವ ಫಲಿತಾಂಶ ಪ್ರಮಾಣಗಳೊಂದಿಗೆ ಸಕಲರ ಹೃದಯದೊಳ್ ಭಕ್ತ್ಯುದ್ರೇಕವಾಗುವಂತೆ ಉಪದೇಶಿಸಿದರು ಅನಂತರ ಸಕಲರಿಗೂ ಫಲತಾಂಬೂಲ ವಿನಿಯೋಗವಾದ ಮೇಲೆ ಪಂಚಾಚಾರ್ಯರ ಜಯಘೋಷದೊಡನೆ ಜಯಂತಿ ಕಾರ್ಯವು ಸಮಾಪ್ತಿಗೊಂಡಿತು

ಓರ್ವ ಆಚಾರ್ಯಕಿಂಕರ

ಹಂಪಸಾಗರ

ಹುವ್ವಿನಹಡಗಲಿ ತಾಲೂಕ ಸೈಕಿ ಹಂಪಸಾಗರ ಗ್ರಾಮದಲ್ಲಿ ಶ್ರೀ|| ಷ|| ಬ್ರ|| ತಗಪಟ್ಟಾಧ್ಯಕ್ಷ ರುದ್ರ ಮುನಿಶಿವಾಚಾರ್ಯ ದಿಗ್ಗಾವಿ ಬೃಹನ್ಮಠ ಇವರ ಅಪ್ಪಣೆಯ ಮೇರೆಗೆ ಇಲ್ಲಿಯ ಪ್ರಮುಖರಾದ ಶರಣಪ್ಪನವರು ಸರೂರುಶೆಟ್ರು, ಯಾತಗಿರಿ ಸಿದ್ಧಲಿಂಗಪ್ಪನವರು, ಬೆಲ್ಲದ ಸಿದ್ಧಪ್ಪನವರು, ಹಡಗಲಿ ಕೊಟ್ರಪ್ಪನವರು, ಹಕ್ತಿ ರುದ್ರಪ್ಪನವರು, ಸೊನ್ನದ ರುದ್ರಪ್ಪನವರು, ಕಡ್ಲಿ ಕೊಟ್ರಬಸಪ್ಪನವರು ಇತ್ಯಾದಿ ಭಕ್ತರು ಜಗದ್ಗುರು ಏಕೋರಾಮಾರಾಧ್ಯದ ಜಯಂತ್ಯುತ್ಸವವನ್ನು ಮಾಡಲೊಪ್ಪಲು ಶ್ರೀಗಳು ತಾ|| ೨೧-೪-೪೪ ಅಂದರೆ ಚೈತ್ರ ಕೃ ೧೪ ಶುಕ್ರವಾರದಿಂದ ಸದರಿ ಗ್ರಾಮದ ಸಿದ್ಧಗಿರಿ ಮಠದಲ್ಲಿ ಅನುಷ್ಠಾನ ಪ್ರಾರಂಭಿಸಿ ಜಯಂತಿಯ ದಿವಸ ಶ್ರೀ ಜಗದ್ಗುರುಗಳ ಭಾವಚಿತ್ರಕ್ಕೆ ಶ್ರೀ ರುದ್ರಾಭಿಷೇಕ ಮತ್ತು ಅರಳೆಲೆ ಕಟ್ಟಿಮನಿ ಕೊಟ್ರಬಸವಯ್ಯನವರ ಚಿ|| ಗುರುಸಿದ್ಧಯ್ಯನಿಗೆ ಮಾಹೇಶ್ವರದೀಕ್ಷಾ ಮೇಲೆ ಕಾಣಿಸಿದ ಕೆಲವು ಭಕ್ತರಿಗೆ ಭಕ್ತದೀಕ್ಷೆ ಜರಗಿಸಿ ೧೦೧ ಜನ ಗಣಾಧೀಶ್ವರರನ್ನು ಸಂತೃಪ್ತಿಪಡಿಸಿ ಶ್ರೀಗಳವರು ಅನುಷ್ಠಾನ ಸಮಾಪ್ತಿ ಮಾಡಿದರು.

ಈ ಉತ್ಸವದಲ್ಲಿ ಸುತ್ತಲಿನ ಗ್ರಾಮದ ಭಕ್ತಮಾಹೇಶ್ವರರು ಭಾಗಿಗಳಾಗಿದ್ದರು ಈ ಗುರುಧರ್ಮ ಕಾರ್ಯಕ್ಕೆ ಪ್ರೋತ್ಸಾಹಿಸಿದ ಭಕ್ತವೃಂದಕ್ಕೆ ಶ್ರೀ ಜಗದಾಚಾರ್ಯರು ಸದಾಮಂಗಲವನ್ನೀಯಲೆಂದು ಪ್ರಾರ್ಥಿಸುವ

ಸಿದ್ಧೇಶ್ವರಶಾಸ್ತ್ರಿ.

ದೊಡ್ಡಿಮಠ

ಮಂಡ್ಯ ಡಿಸ್ಟ್ರಿಕ್ಟ್ ಮದ್ದೂರು ತಾಲ್ಲೋಕು ಚಿಕ್ಕರಸಿನಕೆರೆ ಹೋಬಳಿ ಶ್ರೀ ಹರಿಹರ ಕೂಡಲಸಂಗಮಶಿವಕ್ಷೇತ್ರ ಮರದದೊಡ್ಡಿಮಠದಲ್ಲಿ ಪದ್ಧತಿ ಪ್ರಕಾರ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವನ್ನು ಇದೇ ವೈಶಾಖ ಶುದ್ಧ ಪಂಚಮಿ ಗುರುವಾರದ ದಿವಸ ಅತ್ಯಂತ ವೈಭವದಿಂದ ನೆರವೇರಿಸಿದರು ಆ ದಿವಸ ಬೆಳಗ್ಗೆ ಶ್ರೀಜಗದ್ಗುರು ದಾರುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ಶ್ರೀಮಠದ ಸ್ವಾಮಿಗಳವರಿಂದಲೂ ಮದ್ದೇನಹಳ್ಳಿ ಶ್ರೀಜಗದ್ಗುರು ಪಂಚಾಚಾರ್ಯ ಭಜನಾ ಸಂಘದವರಿಂದಲೂ ಏಕಾದಶವಾರ ರುದ್ರಾಭಿಷೇಕವು, ಷೋಡಶೋಪಚಾರ ರಾಜೋಪಚಾರ ಪೂಜಾಪೂರ್ವಕ ಮಹಾಮಂಗಳಾರತಿಯು ನಡೆದವು ಅನಂತರ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯು ನೆರವೇರಿತು ಅನಂತರ ಆಗಮಿಸಿದ್ದ ಸ್ವಮತ ಮತ್ತು ಪರಮತೀಯ ಭಕ್ತಾದಿಗಳು ಸುಮಾರು ೪೦೦, ೫೦೦ ಜನಗಳಿಗೆ ಈ ಮಠದ ಖರ್ಚಿನಿಂದಲೇ ಅನ್ನಸಂತರ್ಪಣೆ ನಡೆದಮೇಲೆ ಸಭೆಯು ಸೇರಿ ಶ್ರೀಮಠದ ಶ್ರೀ ಸದಾಶಿವಸ್ವಾಮಿಯವರಿಂದ ಜಗದ್ಗುರು ಪಂಚಾಚಾರ್ಯರ ಜಯಂತೀಮಹೋತ್ಸವವನ್ನು ಪ್ರತಿಯೊಬ್ಬ ವೀರಶೈವನೂ ಆಚರಿಸಬೇಕೆಂಬ ವಿಷಯವನ್ನೂ ಶ್ರೀ ಜಗದ್ಗುರು ಪಂಚಾಚಾರ್ಯರು ಅನಾದಿಕಾಲದಿಂದಲೂ ಯುಗ ಯುಗಂಗಳಲ್ಲೂ ಅವತರಿಸಿ ಈ ಮತವನ್ನು ಪಾಲನೆ ಮಾಡಿದ ವಿಷಯವನ್ನೂ ವಿಶದವಾಗಿ ಸರ್ವರ ಹೃದಯದಲ್ಲ ನೆಲೆಗೊಳ್ಳುವಂತೆ ಬೋಧಿಸಿದರು ಗುರುಪೀಠಗಳ ಪ್ರಕಾಶಕ್ಕಾಗಿ ನಿರಂತರದಲ್ಲೂ ಶ್ರಮವಹಿಸುತ್ತಿರುವ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಸನಾತನ ಧರ್ಮ ಧ್ವಜವನ್ನು ಮೇಲಕ್ಕೆತ್ತಿ ಗುರುವರ್ಗವನ್ನೆಲ್ಲಾ ಎಚ್ಚರಿಸಿ ನಾಸ್ತಿಕರಾದ ವೇಷಧಾರಿಗಳಾದ ಸನಾತನ ಧರ್ಮವನ್ನೇ ನಾಶಮಾಡುತ್ತಿದ್ದ ಕುಟಿಲ ವಿರಕ್ತರನ್ನು ಮೂಲೆಗೊತ್ತಿ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪಾಶೀರ್ವಾದ ಬಲದಿಂದಲೂ ತಮ್ಮ ವಿದ್ವತ್‌ಪ್ರಭಾವದಿಂದಲೂ ವಿಶ್ವತೋಮುಖವಾಗಿ ಬೆಳಗುತ್ತಿರುವದು ಸರ್ವಶ್ರುತವಷ್ಟೆ! ಈ ರೀತಿ ಸನಾತನ ಧರ್ಮವನ್ನು ಕಾಪಾಡುವವರ ಮೂಲಕ ಜಾತಿಸಾಂಕರ್ಯಕಾರಕರನ್ನು ಧ್ವಂಸಮಾಡುತ್ತಿರುವ ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರಿಗೆ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಾದಿ ಸಕಲ ಇಷ್ಟಾರ್ಥಗಳನ್ನು ಕೊಟ್ಟು ಕಾಪಾಡಲೆಂದು ಜಗದ್ಗುರುಗಳವರನ್ನು ಪ್ರಾರ್ಥಿಸಲಾಯಿತು. ತದನಂತರ ನೆರೆದಿದ್ದ ಭಕ್ತಮಂಡಲಿಗೆ ಮಹಾಮಂಗಳಾರತಿ ಪ್ರಸಾದ ವಿನಿಯೋಗವಾಗಿ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಳಿಸಲ್ಪಟ್ಟಿತು. ಈ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ೩ ರೂ. ಗಳು ತೆಗೆಯಿಸಲ್ಪಟ್ಟವು.

ಗುರುಪಾದಸೇವಕ ಬೆಚ್. ಎಸ್. ರಾಜಮೂರ್ತಿ.

ಪಂಚಾಚಾರ್ಯಪ್ರಭಾ.

೧೯೪೪ನೆಯ ಮೇ ತಾ॥ ೮ನೇ ಸೋಮವಾರ

ಶ್ರೀಕಾಶೀಜಗದ್ಗುರುಗಳವರು ಶಿವೈಕ್ಯರಾದರು

ಶ್ರೀಭೂಕೈಲಾಸ ಕಾಶೀಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀಜಗದ್ಗುರು ವಿಶ್ವಾರಾಧ್ಯಪೀಠಾಧೀಶ್ವರ ಶ್ರೀ ೧೦೮ ಜಗದ್ಗುರು ಪಂಚಾಕ್ಷರಶಿವಾಚಾರ್ಯ ಮಹಾಸ್ವಾಮಿಗಳವರು ಕಳೆದ ತಿಂಗಳು ೨೬ನೇ ತಾರೀಖಿನ ದಿವಸ ಶಿವೈಕ್ಯರಾದರೆಂಬ ವಿಷಯವನ್ನು ತಿಳುಹಿಸಲು ಅತ್ಯಂತ ವ್ಯಸನ ಕಿನಿಸುತ್ತದೆ.

ಶ್ರೀಜಗದ್ಗುರುಗಳವರು ಒಂದು ವರ್ಷದಿಂದಲೂ ಜ್ವರಪೀಡಿತರಾಗಿದ್ದರು ನಾನಾವಿಧವಾದ ಔಷಧೋಪಚಾರ ನಡೆಯಿಸಿದರೂ ಜ್ವರವು ನಿಲ್ಲಲೇ ಇಲ್ಲ ಕೊನೆಗೆ ಈ ಜ್ವರದಲ್ಲಿಯೇ ಗತಿಸಿದರೆಂದು ತಿಳಿದುಬರುತ್ತದೆ ಶ್ರೀಗಳವರಿಗೆ ಬಹಳ ವಯಸ್ಸಾಗಿರಲಿಲ್ಲ ೩೯ನೆಯ ವರ್ಷದಲ್ಲಿಯೇ ಅವರು ಗತಿಸಿದುದನ್ನು ನೋಡಿದರೆ ಇದು ಆ ಪೀಠದ ಮತ್ತು ಸಮಾಜದ ದುರ್ದೈವವೆಂದೇ ಹೇಳಬೇಕಾಗಿದೆ. ಜಗದ್ಗುರುಗಳವರು ಆ ಪೀಠದ ಅಧಿಕಾರವನ್ನು ವಹಿಸಿ ೧೩ ವರ್ಷಗಳಾಗಿದ್ದವು. ಈ ಅವಧಿಯಲ್ಲಿ ಅವರಿಗೆ ಅನೇಕ ವಿಧವಾದ ತೊಂದರೆಗಳು ಪ್ರಾಪ್ತವಾದವು. ಆದರೂ ಅಸಾಧಾರಣವಾದ ಧೈರ್ಯದಿಂದಲೂ ಸಾಹಸದಿಂದಲೂ ಆ ತೊಂದರೆಗಳನ್ನೆಲ್ಲ ನ್ಯಾಯಾಸ್ಥಾನಗಳ ಮೂಲಕ ಪರಿಹರಿಸಿ ಆ ಪೀಠವು ಕಾಶೀಕ್ಷೇತ್ರದಲ್ಲಿ ಚಿರಕಾಲ ವಿರಾಜಿಸುವಂತೆ ಮಾಡಿದರು. ಪೀಠೋದ್ಧಾರದ ಬಗ್ಗೆ ಅವರು ನಡೆಸಿದ ಕಾರ್ಯಕಲಾಪಗಳು ಸುವರ್ಣಾಕ್ಷರಗಳಿಂದ ಬರೆದಿಡತಕ್ಕವುಗಳಾಗಿವೆ. ಶ್ರೀಗಳವರು ಮಹಾಕುಶಲರೂ ಶಾಂತಸ್ವಭಾವದವರೂ ಮಿತಭಾಷಿಗಳೂ ಆಗಿದ್ದರು. ಇವರ ವಿಯೋಗವು ಭರತಖಂಡದಲ್ಲಿರುವ ಸಮಸ್ತ ಗುರುಪೀಠಾಭಿಮಾನಿಗಳ ಮನಸ್ಸಿಗೆ ಬಹಳ ದುಃಖವನ್ನುಂಟುಮಾಡಿರುವುದು. ಈಶ್ವರೇಚ್ಛೆಗೆ ಉಪಾಯವಿಲ್ಲ. ಶ್ರೀಜಗದಾಚಾರ್ಯರು ಶ್ರೀಗಳವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಆ ಪೂಜ್ಯಪಾದರನ್ನೆ ಪ್ರಾರ್ಥಿಸುತ್ತೇವೆ.

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು॥ ಪಂಚಮಿಗೆ ೧೬ ವರ್ಷಗಳು ತುಂಬಿ ೧೭ನೆಯ ವರ್ಷವು ಪ್ರಾರಂಭವಾಗಿರುವುದು ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೬ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂ ಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದ ತಿಳುಹಿಸಬೇಕು ನಂಬರ ತಿಳುಹಿಸದಿದ್ದರೆ ತೊಂದರೆಯಾಗುವದು

ಮ್ಯಾ —

ಯುದ್ಧವಾರ್ತೆ.

ಅಸ್ಸಾಂ ಪ್ರಾಂತ್ಯದಿಂದ ಜನರು ಗುಂಪು ಗುಂಪಾಗಿ ಬಂಗಾಳಕ್ಕೆ ಬರುತ್ತಲಿದ್ದಾರೆ

ಅಸ್ಸಾಂ ಪ್ರಾಂತ್ಯದಿಂದ ಜನರು ತಂಡೋಪತಂಡವಾಗಿ ಬಂಗಾಳಕ್ಕೆ ಬರುತ್ತಲಿದ್ದಾರೆಂದೂ ಹೀಗೆ ಬರುತ್ತಿರುವ ಬಡಜನರಿಗೆ ಮೇಮೆನ್‌ಸಿಂಗ್ ರೈಲ್ವೆ ಸ್ಟೇಷನ್ನಿನಲ್ಲಿ ಜಿಲ್ಲಾ ಕಾಂಗ್ರೆಸ್ಸಿನವರು ಉಚಿತ ಆಹಾರವನ್ನು ಕೊಡುತ್ತಲಿದ್ದಾರೆಂದು ತಿಳಿದುಬರುತ್ತದೆ

ಬೊಂಬಾಯಿಯಲ್ಲಿ ಸ್ಯಾಲ್ವೇಜ್ ಪಡೆಗಳ ಕಾರ್ಯ

ಬೊಂಬಾಯಿ ಅನಾಹುತದಲ್ಲಿ ನಾಶವಾದ ಪ್ರದೇಶದಲ್ಲಿ ಈಗ ಸ್ಯಾಲ್ವೇಜ್ ಪಡೆಗಳು ಕೆಲಸಮಾಡುತ್ತಾ ಅನೇಕ ಬೆಳ್ಳಿ ಚಿನ್ನಗಳ ನಗಗಳನ್ನೂ ೨೫,೦೦೦ ಮೂಟೆ ಕೆಡದಿದ್ದ ಧಾನ್ಯಗಳ ಮೂಟೆಗಳನ್ನೂ ಹೊರತೆಗೆದಿವೆ ಪರಿಹಾರ ಕಾರ್ಯವನ್ನು ಪೌರಸಭೆಯವರು ನಡೆಸುತ್ತಲಿದ್ದಾರೆ ಖಾಸಗೀ ಸಂಸ್ಥೆಗಳ ಪರಿಹಾರ ಕಾರ್ಯವು ಈಗ ನಿಂತಿಹೆಯೆಂದು ತಿಳಿದುಬರುತ್ತದೆ

ಬರ್ಮಾಕ್ಷೇತ್ರದಲ್ಲಿ ಮಿತ್ರ ವಿಮಾನಗಳ ಸಹಾಯ

ಜನವರಿ ತಿಂಗಳಿಂದ ಬ್ರಿಟಿಷ್ ಮತ್ತು ಅಮೆರಿಕಾ ವಿಮಾನಗಳು ಒಂದೇ ಸಮನೆ ಬರ್ಮಾಕ್ಷೇತ್ರದಲ್ಲಿ ಸೈನ್ಯಗಳಿಗೆ ಸಾಮಾನು ಸರಬರಾಜು ಮಾಡುತ್ತಿರುವವಲ್ಲದೆ ರಣಕ್ಷೇತ್ರದಲ್ಲಿ ಘಾಯಗೊಂಡ ಮಿತ್ರ ಸೈನಿಕರನ್ನು ನೆಲೆಗಳಿಗೆ ಸಾಗಿಸುವ ಕಾರ್ಯದಲ್ಲೂ ಬಹಳ ಶ್ರಮಿಸುತ್ತಿವೆ ದಿನವೂ ೧೬ ಗಂಟೆಗಳು ಕೆಲಸ ಮಾಡುತ್ತಾ ಮಿತ್ರ ವಿಮಾನಗಳು ಸಾಧಿಸಿರುವ ಕಾರ್ಯವನ್ನು ಗಣಿಸಲು ಸಾಧ್ಯವಿಲ್ಲ ಎಂದು ಮೌಂಟ್‌ಬ್ಯಾಟನ್‌ರವರ ಕಛೇರಿಯು ಪ್ರಕಟಿಸಿದೆ

ಅಸ್ಸಾಂ ಯುದ್ಧರಂಗ

ಜಪಾನರು ತೀವ್ರವಾದ ಪ್ರತಿಭಟನೆಯನ್ನು ತೋರುತ್ತಿದ್ದರೂ ಸಹ ಮಿತ್ರ ಪಡೆಗಳು ಇಂಫಾಲ್ ಕ್ಷೇತ್ರದ ಗಡಿ ಪ್ರದೇಶವನ್ನು ತಮ್ಮ ವಶದಲ್ಲಿಟ್ಟುಕೊಂಡಿರುವುದಲ್ಲದೆ, ಜಪಾನರು ನಡೆಸಬಹುದಾದ ನೂತನ ಮುತ್ತಿಗೆಯನ್ನ ಎದುರಿಸಲೂ ಸಿದ್ಧವಾಗಿವೆ ಜಪಾನರು ಯಾವ ಘಳಿಗೆಯಲ್ಲಾದರೂ ಈ ನೂತನ ಮುತ್ತಿಗೆಯನ್ನ ಪ್ರಾರಂಭಿಸಬಹುದು, ಎಂದು ಆಗ್ನೇಯ ಏಷ್ಯಾ ಕಮ್ಯಾಂಡಿನ ಪ್ರಧಾನ ಕಛೇರಿಯಲ್ಲಿರುವ ಸುದ್ದಿಗಾರರು ಅಭಿಪ್ರಾಯಪಟ್ಟಿದ್ದಾರೆ ಭಾರತ ಗಡಿಗೆ ೧೬ ಮೈಲಿ ದೂರದಲ್ಲಿರುವ ಪಾಲ್ಲಾನಾ ಗ್ರಾಮದಿಂದ ಬ್ರಿಟಿಷ್ ಸೈನಿಕರು ವಾಪಸು ಬಂದದ್ದರಿಂದ ನಷ್ಟವೇನೂ ಆಗಿಲ್ಲವೆಂದು ಅರಕಾ

ಕ್ಷೇತ್ರದಲ್ಲಿ ಮುಂದೆ ಜಪಾನರು ಯಾವ ಬಗೆಯ
ಕಾರ್ಯಾಚರಣೆ ನಡೆಸುವರೆಂಬುದನ್ನು ಮೊದಲ
ಊಹಿಸಿ ಈ ರೀತಿ ಬ್ರಿಟಿಷ್ ಸೈನಿಕರು ವಾಪಸು ಬಂ
ರೆಂದು ಹೇಳಲಾಗಿದೆ. ಇಂಫಾಲ್ ಬಳಿ ಮಿತ್ರರು ಪ್ರಗ
ಾಮಿಗಳಾಗುತ್ತಿದ್ದಾರೆ ಪಾಲೆವಾಕ್ಕೆ ಉತ್ತರದಲ್ಲಿ ೧
ನೆಯ ಪಂಜಾಬ ರೆಜಿಮೆಂಟು ಜಪಾನರೊಂದಿಗೆ ಕಾ
ಮಾಡಿ ಜಯಪಡೆಯಿತು ಟುಫೇಡಾಂಗ್ ಕ್ಷೇತ್ರದ
ಪಶ್ಚಿಮ ಆಫ್ರಿಕ ಸೈನಿಕರು ಶತ್ರುವಿಗೆ ಅಪಾರ ನಷ್ಟ
ನ್ನುಂಟುಮಾಡಿರುವರು ಹವಾಗುಣ ಕೆಟ್ಟಿರುವುದರಿಂ
ಕೋಹಿಮಾದಲ್ಲೀಗ ಕಾರ್ಯಾಚರಣೆಗಳು ನಿಧಾನವಾ
ನಡೆಯುತ್ತಿವೆ ಅಲ್ಲಿ ಭೀಕರ ಕದನಗಳಾಗುತ್ತಿವೆ ಶತ್
ಪ್ರತಿಭಟನೆ ತೀವ್ರವಾಗಿದೆ ಶತ್ರುವಿನಿಂದ ವಶಪಡಿ
ಕೊಂಡಿದ್ದ ನೀರಿನ ಸರಬರಾಜು ಕೇಂದ್ರಕ್ಕಾಗಿ ಜಪಾನ
ಬ್ರಿಟಿಷರ ಮೇಲೆ ಪ್ರತಿದಾಳಿಗಳನ್ನು ಮಾಡುತ್ತಿ
ವುದನ್ನು ನೋಡಿದರೆ ಈ ಪ್ರದೇಶಕ್ಕೆ ಜಪಾನರು ಬಹ
ಪ್ರಾಮುಖ್ಯತೆಯನ್ನು ಕೊಟ್ಟಿರುವಂತೆ ಕಾಣುತ್ತ
ಇಂಫಾಲಿನ ಉತ್ತರದಲ್ಲೂ ವಾಯುವ್ಯದಲ್ಲೂ ಮಿತ್ರ
ಡೆಗಳು ಪ್ರಗತಿಗಾಮಿಗಳಾಗಿದ್ದಾರೆಂದು ಹೇಳಲಾಗಿದೆ

ಬಂಗಾಳಾಕೊಲ್ಲಿಯಲ್ಲಿ ಸಬ್ ಮೆರೀನುಗಳ ಚಟುವಟಿಕೆ

ಬಂಗಾಳಾ ಕೊಲ್ಲಿಯಲ್ಲಿ ಬ್ರಿಟಿಷ್ ಸಬ್‌ಮೆರೀನ್
ಚಟುವಟಿಕೆಯಿಂದ ಜಪಾನರ ವ್ಯವಹಾರಕ್ಕೆ ಒಪ
ಆತಂಕವುಂಟಾಗಿದೆ. ಅಂಡಮಾನ್ ದ್ವೀಪಗಳ ಬ
ಜಪಾನಿ ನೌಕಾ ಕಾನ್ವಾಯೊಂದರಮೇಲೆ ಬ್ರಿಟಿಷ
ಮೂರು ಸಬ್‌ಮೆರೀನ್‌ಗಳು ದಾಳಿ ಮಾಡಿ ಒಂ
ಡಿಸ್ಟ್ರಾಯರ್ ನೌಕೆಯನ್ನೂ ಒಂದು ಸರಬರಾಜು ನೌ
ಯನ್ನೂ ನಾಶಮಾಡಿರುವುವಲ್ಲದೆ ಮತ್ತೊಂದು ಸರ
ರಾಜು ನೌಕೆಗೆ ಟಾರ್ಪೆಡೋವಿನಿಂದ ಬಹಳ ಜಖ
ಮಾಡಿವೆ ಅಂಡಮಾನಿನ ಮುಖ್ಯರೇವಾದ 'ಪೋರ್ಟ್
ಬ್ಲೇರ್' ಮೇಲೆ ತೀರದ ಫಿರಂಗಿಗಳ ಹೊಡೆತವನ್
ಲಕ್ಷಿಸದೆ ಒಂದು ಬ್ರಿಟಿಷ್ ಸಬ್ ಮೆರೀನ್ ಗುಂಡು
ಳನ್ನು ಹಾರಿಸಿ ಮಿಲಿಟರಿ ಠಾಣ್ಯಕ್ಕೆ ಬಹಳ ನಷ್ಟ ಉಂ
ಮಾಡಿದೆ ಸಿಂಗಪುರಕ್ಕೆ ದಾರಿಯಾದ ಮಲಕ್ಕಾ ಜ
ಸಂಧಿಯಲ್ಲಿ ಓಡಾಡುತ್ತಿದ್ದ ಶತ್ರು ನೌಕೆಗಳ ಮೇ
ದಾಳಿ ಮಾಡಿ ಕೆಲವು ನೌಕೆಗಳನ್ನು ಮುಳುಗಿಸಿ
ಎಂದು ಹೇಳಲಾಗಿದೆ.

ಕೋಹಿಮಾ ಕದನದ ಅಂತಿಮ ಘ

ಕೋಹಿಮಾದಿಂದ ಜಪಾನರನ್ನು ಹೊಡೆದಟ್ಟಲು ವಿ
ಪ್ರಯತ್ನಗಳು ನಡೆಯುತ್ತಿವೆ ಬ್ರಿಟಿಷರು ತಮ್ಮ ಶಿ
ದಿಂದ ಕಾರ್ಯ ಚಟುವಟಿಕೆ ನಡೆಸುವ ವಲಯವನ್
ಹಬ್ಬಿಸಿಕೊಂಡಿರುವರು ಅಳಿಯುವ ಸನ್ನಿವೇಶದಲ್ಲಿರ
ಜಪಾನರ ದಂಡನಾಯಕನ ತನ್ನಲ್ಲಿರುವ ಎಲ್ಲಾ ಪಡೆ
ಗಳನ್ನೂ ಕೋಹಿಮಾ ನಗರದಲ್ಲಿ ಕೇಂದ್ರೀಕರಿಸಿಕೊಳ್ಳ
ದ್ದಾನೆ ಶೀಘ್ರದಲ್ಲೇ ಅಂತ್ಯ ಕದನ ವಾಗುವುದರಲ್ಲಿ
ಅಂತಿಮ ಘಟ್ಟದ ಕದನಕ್ಕಾಗಿ ದಿಮಾಪುರ ಕೋಹಿಮ
ರಸ್ತೆಯಲ್ಲಿ ಮಿತ್ರ ಪಡೆಗಳು ಸ್ಥಾನಗಳನ್ನು ಭದ್ರಪಡಿ
ಕೊಳ್ಳುತಲಿದ್ದಾರೆ ಮಿತ್ರ ಪಡೆಗಳು ಜಪಾನಿ ಪಡೆಗಳನ
ಎಲ್ಲಾ ಪ್ರದೇಶಗಳಿಂದಲೂ ಸುತ್ತುಗಟ್ಟುತ್ತಲಿದಾ
ಮಿತ್ರ ಪಡೆಗಳ ಧೃತಿಯನ್ನು ಕೆಡಿಸಲು ಜಪಾನರು ಸು
ಸುದ್ದಿಗಳನ್ನು ಪ್ರಚಾರ ಮಾಡುವುದಕ್ಕಾರಂಭ ಮಾ
ದ್ದಾರೆ ಬರ್ಮಾ ಕ್ಷೇತ್ರದಲ್ಲಿ ಕಾದುತ್ತಿರುವ ಮಿತ್ರ ಯೋ
ರಿಗೆ ಮಾತೃಭೂಮಿಯ ಹಂಬಲು ಉದ್ಭವಿಸಿರುವುದಾ
ಜಪಾನರು ಹೇಳುತ್ತಿದ್ದಾರೆ.

ಅಮೆರಿಕಾ ಭಾರತಗಳ ವ್ಯಾಪಾರ

ಅಮೆರಿಕಾದಲ್ಲಿ ಭಾರತದ ರಫ್ತಿನಿಂದ ಉತ್ಪತ್ತಿಯಾಗು
ಡಾಲರು ಹಣವನ್ನು ಬ್ರಿಟಿಷ್ ಪೌಂಡುಗಳಿಗೆ ಪರಿವರ್
ಮಾಡುವುದಿಲ್ಲವೆಂದೂ ಈಗ ಜಮಾ ಆಗುತ್ತಲಿರ
ಹಣವನ್ನು ಯುದ್ಧಾನಂತರ ಭಾರತಕ್ಕೆ ಅಮೆರಿ
ಸಾಮಾನುಗಳ ಆಮದಿಗಾಗಿ ಮೀಸಲಾಗಿಡಲ್ಪಟ್ಟ
ಎಂದೂ ಈ ಬಗ್ಗೆ ಭಾರತಕ್ಕೂ ಬ್ರಿಟನ್ನಿಗೂ ಒಪ್ಪ
ವಾಗಿರುವುದಾಗಿಯೂ ಈಗ ತಾನೆ ಭಾರತದಿಂದ ಬಂದಿ
ವ ಅಮೆರಿಕದ ಪ್ರಸಿದ್ಧ ಅರ್ಥಶಾಸ್ತ್ರಜ್ಞರು ತಿಳಿಸಿರುವ

ಯೂರೋಪಿನ ದಂಡಯಾತ್ರೆ ಆರಂಭವಾದಂತಿದೆ

ದ್ವಿತೀಯ ರಣರಂಗದ ಸ್ಥಾಪನೆಯಾಗಿದೆ ಯೂರೋ[illegible] ತೀರಪ್ರದೇಶಗಳಲ್ಲಿ ಹಲವು ಕಡೆ ಮಿತ್ರಸೈನಿಕರು [illegible]ಯುತ್ತಿದ್ದಾರೆ ಎಂಬ ಸ್ಟಾಕ್‌ಹೋಂ ವರದಿಯನ್ನು [illegible]ಯಾರ್ಕಿನಲ್ಲಿ ದಿನಪತ್ರಿಕೆಗಳು ಪ್ರಕಟಿಸಿವೆ.

ಮಿತ್ರರಿಗೆ ಅದ್ಭುತ ಘಟನೆ ಕಾದಿದೆಯಂತೆ!

[illegible]ಮುಂದೆ ನಡೆಯಲಿರುವ ದಂಡಯಾತ್ರೆಯ ಬಗ್ಗೆ [illegible]ರ್ಮನಿಯ ಪ್ರಚಾರ ಮಂತ್ರಿ ಡಾ॥ ಗೋಬಲ್ಸ್‌ರವ[illegible]ಂದು ಲೇಖನ ಬರೆದು "ಅದ್ಭುತ ಪರಂಪರೆ ಮಿತ್ರ[illegible] ಮುಂದೆ ಕಾದಿದೆ" ಎಂದು ಬರೆದಿರುವರಂತೆ "ಶತ್ರು[illegible] ದಂಡಯಾತ್ರೆ ಪ್ರಯತ್ನ ಮುಗಿದಿದೆಯೆಂಬುದು [illegible]ಗೆ ಗೊತ್ತಿದೆ ಯೂರೋಪ್ ತೀರದ ಪ್ರದೇಶವು [illegible]ಅಸಾಧ್ಯವಲ್ಲವೆಂಬುದೇ ಶತ್ರುಗಳಿಗೆ ಇಲ್ಲಿ ಕಾದಿರುವ [illegible]ದ್ಭುತ ಭವಿಷ್ಯದ ಹೆಗ್ಗುರುತಾಗಿದೆ ನಮ್ಮ ಕೈಯಲ್ಲಿ [illegible] ಕೆಲವು ಬ್ರಹ್ಮಾಸ್ತ್ರಗಳು ಉಳಿದಿವೆ ಉಭಯತ್ರರೂ [illegible]ಗ ಹೊಂದಿರುವ ಸೌಲಭ್ಯಗಳನ್ನು ಪರಿಗಣಿಸಿ [illegible]ರ್ಮಾನವನ್ನು ಊಹಿಸುವುದಾದರೆ, ನಮ್ಮ ಕೈ ಬಲ[illegible]ಗಿದೆಯೆಂದು ಭಾವಿಸಬಹುದು" ಎಂಬುದಾಗಿ [illegible]ಲ್ಸ್ ಬರೆದಿರುವರಂತೆ ಜರ್ಮನರು ದಂಡಯಾ[illegible] ಭಯದಿಂದ ತಲ್ಲಣಿಸಿರುವುದಕ್ಕೆ ಇದೊಂದು [illegible] ನಿದರ್ಶನವೆಂದು ಹೇಳಲಾಗಿದೆ

ಜರ್ಮನರ ಶಕ್ತಿ ಇನ್ನೂ ಕುಂದಿಲ್ಲ

ದ್ವಿತೀಯ ರಣರಂಗದ ಆರಂಭದ ಸುದ್ದಿಗಳು ಗಾಳಿ[illegible]ಲ್ಲಿದ್ದರೂ ಬ್ರಿಟನಿನ ಪ್ರಮುಖ ಶತ್ರುವಿನ ಬಲಾಬಲ[illegible]ನ್ನು ತಿಳಿದುಕೊಳ್ಳುವುದು ಉಚಿತವಾದದ್ದು ಜರ್ಮ[illegible] ಆಹಾರ ಪರಿಸ್ಥಿತಿಯನ್ನು ವಿವೇಚಿಸುವುದಾದರೆ [illegible]ಗಿಂತಲೂ ಇದ್ದುದಕ್ಕಿಂತಲೂ ಚೆನ್ನಾಗಿ ಇದೆ ಪಡಿತರ [illegible]ವಸ್ಥೆ ಕಠಿಣವಾದರೂ ಯಾರೂ ಹಸಿವಿನಿಂದ ಬಳಲು[illegible] ಅಲೂಗಡ್ಡೆಯ ಬೆಳೆಯು ನಿರೀಕ್ಷಿಸಿದುದಕ್ಕಿಂತಲೂ [illegible] ಅಪಘಾತದಿಂದ ಅದು ಕೇವಲ ೫॥ ಕೋಟಿ ಟನ್ [illegible]ದ್ದು, ನಾಶವಾಗುವಂತಿಲ್ಲ ವಿಜೇತ ರಾಷ್ಟ್ರಗಳಿಂದ [illegible] ಹೆಚ್ಚಾಗಿ ರುಮೇನಿಯದಿಂದ ಜರ್ಮನಿಗೆ [illegible]ರಬರಾಜಾಗುತ್ತಿದೆ ಆದುದರಿಂದ ಜರ್ಮ[illegible] ಆರ್ಥಿಕಸ್ಥಿತಿಯು ದುರ್ಬಲವಾಗಿಲ್ಲವೆಂದೇ ಹೇಳ[illegible]ದು ಜರ್ಮನರ ಸೈನಿಕ ಶಕ್ತಿಯು, ಸಾಮಗ್ರಿಗಳು [illegible] ವಿಮಾನದಾಳಿಗಳಿಂದಾಗಿ ಎಷ್ಟೇ ಏಟು ತಿಂದಿ[illegible] ಇನ್ನು ೧,೩೩೦,೦೦೦ ಸೈನಿಕರು ಕಾದಾಡಲು [illegible]ರಾಗಿದ್ದಾರೆ ಸದ್ಯದಲ್ಲಿ ಹಲವು ಯುದ್ಧಮುಖಗಳಲ್ಲಿ [illegible]ರ್ಮನರು ಕಾದಾಡುತ್ತಿದ್ದರೂ ಅನೇಕ ಶಸ್ತ್ರಸಜ್ಜಿತ [illegible]ರ್ಮನ್ ಡಿವಿಜನ್ನುಗಳು, ನಾವು ಸ್ಥಾಪಿಸಲಿರುವ [illegible]ತೀಯ ಯುದ್ಧರಂಗದಲ್ಲಿ ಕಾದಾಡಲು ಸದಾ ಸಿದ್ಧ[illegible]ವೆ ಎಂದು ಪ್ರವೀಣರು ಅಭಿಪ್ರಾಯಪಡುತ್ತಿದ್ದಾರೆ.

[illegible]ಂಗೆರಿಗೆ ನುಗ್ಗಲು ರಷ್ಯ ಪ್ರಯತ್ನ

[illegible]ಹಂಗೇರಿಗೆ ಹೋಗುವ ಕಣಿವೆಯ ದ್ವಾರದಲ್ಲಿ [illegible]ರ್ಷಲ್ ಜುಕೋವ್‌ರವರು ಭಾರಿ ಪಡೆಗಳನ್ನು ಜಮಾ[illegible] ಸಿದ್ಧತೆಮಾಡಿಕೊಂಡಿದ್ದಾರೆ ಎಂಬುದಾಗಿ ಜರ್ಮ[illegible] ಜವಾಬ್ದಾರಿಯುತವಾದ ಮಿಲಿಟರಿ ವೃತ್ತಗಳಲ್ಲಿ [illegible]ಪಟ್ಟಿದೆ. ನೀಸ್ಟರ್ ಪ್ರದೇಶದಲ್ಲಿ ರಷ್ಯನ್ ಸೇನೆ[illegible]ಗೆ ಹಾಕಿರುವ ವಿಚಾರವಾಗಿ ಮಾಸ್ಕೋದಿಂದ [illegible]ವರೆಗೆ ಯಾವ ಪ್ರಕಟಣೆಯೂ ಹೊರಬಿದ್ದಿಲ್ಲ.

[illegible]ೋಲೆಂಡಿನ ಮೇಲೆ ರಷ್ಯ ವಿಮಾನ ದಾಳಿ

[illegible]ರಷ್ಯ ರಂಗದಲ್ಲಿ ಮುಖ್ಯ ಬದಲಾವಣೆಗಳೇನೂ [illegible]ವೆಂದೂ ತಟಸ್ಥ ಪರಿಸ್ಥಿತಿ ಮುಂದುವರಿಯುತ್ತಿದೆ[illegible]ದೂ ಮಾಸ್ಕೋ ಪ್ರಕಟಣೆ ತಿಳಿಸುತ್ತದೆ ಆದರೆ [illegible]ನಿರ್ಯ ಪ್ರಕಟಣೆ ಡೆಸ್ಸಿ ರೈಲ್ವೆ ಜಂಕ್ಷನ್ನಿಗೆ ಪೂರ್ವದಲ್ಲಿ ೩೦ ಮೈಲಿ ದೂರದಲ್ಲಿ ರಷ್ಯನರು ಬಲವಾದ ಟ್ಯಾಂಕ್ ಪಡೆಗಳನ್ನು ದೂಡಿ ಮುತ್ತಿಗೆಯನ್ನಾರಂಭಿಸಿದ್ದಾರೆಂದು ತಿಳಿಸುತ್ತದೆ. ಪೋಲೆಂಡಿನಲ್ಲಿರುವ ಲಾವ್ ರೈಲ್ವೆ ಜಂಕ್ಷನ್ನಿನ ಮೇಲೆ ರಷ್ಯನ್ ವಿಮಾನಗಳು ಪುನಃ ದಾಳಿ ನಡೆಸಿದ್ದರಿಂದ ಜರ್ಮನ್ ಸೈನಿಕರನ್ನು ತುಂಬಿಕೊಂಡು ಹೋಗುತ್ತಿದ್ದ ರೈಲುಗಳಿಗೂ, ಮದ್ದು ಗುಂಡುಗಳ ಮಳಿಗೆಗಳಿಗೂ ಬೆಂಕಿ ಬಿದ್ದು ನಷ್ಟವುಂಟಾಯಿತು ೧೨ ಕಡೆ ಭಾರಿ ಆಸ್ಫೋಟನೆಗಳುಂಟಾದವು ಎಂದು ಹೇಳಲಾಗಿದ

ಪೂರ್ವಆಫ್ರಿಕಾದಲ್ಲಿ ಭಾರತೀಯರಿಗೆ ಹಿಂಸೆ

ಪೂರ್ವ ಆಫ್ರಿಕಾ ಸರ್ಕಾರವು ಯುದ್ಧೋದ್ಯಮಕ್ಕಾಗಿ ಹೊಂದಿದ ವಿಶೇಷಾಧಿಕಾರವನ್ನು ದುರುಪಯೋಗಪಡಿಸಿಕೊಂಡು ಭಾರತೀಯರಿಗೆ ಹೆಚ್ಚು ಕಿರುಕುಳ ಕೊಡುತ್ತಿರುವರೆಂದೂ ಆದ್ದರಿಂದ ಪೂರ್ವ ಆಫ್ರಿಕಾ ಸರ್ಕಾರದ ನಿಬಂಧನೆಗಳನ್ನು ರದ್ದು ಪಡಿಸಲು ಇಂಗ್ಲೆಂಡಿನಲ್ಲಿರುವ ಇಂಡಿಯಾ ಲೀಗ್ ಸಂಸ್ಥೆಯು ಪ್ರಯತ್ನಿಸಬೇಕೆಂದೂ ಆಫ್ರಿಕದ ಭಾರತೀಯರು ಕೇಳಿಕೊಂಡಿದ್ದರು ಇಂಗ್ಲೆಂಡಿನಲ್ಲಿರುವ ಇಂಡಿಯಾ ಲೀಗಿನವರು ಪೂರ್ವ ಆಫ್ರಿಕಾ ನಿಬಂಧನೆಗಳ ರದ್ದು ಪಡಿಗೆ ಪ್ರಯತ್ನಿಸುತ್ತಿರುವರೆಂದು ಹೇಳಲಾಗಿದೆ

ಸೈನಿಕರಲ್ಲಿ ಕೆಲವರನ್ನು ಆಸ್ಟ್ರೇಲಿಯಾ ಹಿಂದಕ್ಕೆ ಕರೆಸಿಕೊಳ್ಳುವುದು

ಯುದ್ಧದಲ್ಲಿ ವಿಜಯ ಪಡೆಯಲು ಆಸ್ಟ್ರೇಲಿಯಾ ದೇಶವು ತನ್ನ ಕೈಲಾಗುವ ಪರಮಾವಧಿ ಪ್ರಯತ್ನವನ್ನು ಮಾಡುವುದು ಎಂದು ಪ್ರಧಾನಿ ಕರ್ಟಿನ್ನರವರು ಹೇಳಿಕೆಯೊಂದನ್ನು ಹೊರಡಿಸಿರುವರು ಈಗ ಪೆಸಫಿಕ್ ರಣರಂಗದಲ್ಲಿ ಕಾದುತ್ತಿರುವ ಸೈನ್ಯಗಳಿಗೆ ಆಹಾರ ಮತ್ತು ಆಯುಧೋಪಕರಣಗಳನ್ನು ಒದಗಿಸುವ ಭಾರವು ಆಸ್ಟ್ರೇಲಿಯಾದ ಮೇಲಿರುವುದರಿಂದ ೧ ಲಕ್ಷ ಕಾರ್ಮಿಕರ ತಂಡಗಳನ್ನು ಆಸ್ಟ್ರೇಲಿಯಾ ದೇಶವು ನಿರ್ಮಿಸಿ ಮಿತ್ರಯುದ್ಧೋದ್ಯಮದಲ್ಲಿ ನೆರವಾಗುವುದೆಂದರು ಈ ಕೆಲಸಕ್ಕಾಗಿ ಹೊರಗಡೆ ಕಾದುತ್ತಿರುವ ಯೋಧರಲ್ಲಿ ಕುಶಲ ಕೆಲಸಗಾರರಾದ ಕೆಲವರನ್ನು ಹಿಂದಕ್ಕೆ ಕರೆಸಿಕೊಳ್ಳುವುದೆಂದೂ ಈ ಕಡೆಯಿಂದ ಆಸ್ಟ್ರೇಲಿಯಾ ದೇಶದ ಕದನ ಶಕ್ತಿಯು ಕಡಿಮೆಯಾಗುವುದಿಲ್ಲವೆಂದೂ ಪ್ರಧಾನಿ ಕರ್ಟಿನ್ನರವರು ತಿಳಿಸಿದ್ದಾರೆ

ಸ್ಪೇನ್-ಜರ್ಮನಿಗಳ ಬಾಂಧವ್ಯವಿಚ್ಛೇದ

ಜರ್ಮನಿಗೆ ಸ್ಪೇನು ಕಳುಹಿಸುತ್ತಿದ್ದ ಉಲ್‌ಫ್ರಾಂ ಎಂಬ ಲೋಹವನ್ನು ಇನ್ನು ಮೇಲೆ ಕಳುಹಿಸುವುದಿಲ್ಲ ಟ್ಯಾಂಜಿಯರನಲ್ಲಿ ಜರ್ಮನರ ರಾಯಭಾರಿ ಕಚೇರಿಯನ್ನು (ಕಾನ್‌ಸುಲೇಟ್) ಮುಚ್ಚಲಾಗುವುದಲ್ಲದೆ ಸ್ಪಾನಿಷ್ ಮೊರಾಕೊ ಜಿಬ್ರಾಲ್ಟರ್ ಪ್ರದೇಶಗಳಲ್ಲಿರುವ ಜರ್ಮನ್ ಏಜೆಂಟರುಗಳನ್ನು ಗಡೀಪಾರು ಮಾಡಲಾಗಿದೆ ಸ್ಪೇನಿನಲ್ಲಿರುವ ಜರ್ಮನರ ಗೂಢಚಾರರನ್ನು ದಸ್ತಗಿರಿ ಮಾಡಲಾಗುತ್ತಿದೆ. ಅಮೆರಿಕಾ ಮತ್ತು ಬ್ರಿಟನ್ನುಗಳೊಡನೆ ಮಾಡಿಕೊಂಡ ಕರಾರಿನ ಪ್ರಕಾರ ಸ್ಪೇನಿಗೆ ನಿಲ್ಲಿಸಿದ್ದ ಪೆಟ್ರೋಲನ್ನು ಇನ್ನುಮುಂದೆ ಕಳುಹಿಸಲಾಗುವುದು. ಪಾರ್ಲಿಮೆಂಟ್ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವೀಯುತ್ತ ಸ್ಪೇನಿನ ರೇವುಗಳಲ್ಲಿ ಬಂಧಿತವಾಗಿರುವ ಇಟಲಿ ಹಡಗುಗಳಲ್ಲಿ ಕೆಲವನ್ನು ಬಿಡುಗಡೆ ಮಾಡಲಾಗಿದೆಯೆಂದೂ ಉಳಿದುವನ್ನು ಬಿಡುಗಡೆ ಮಾಡಲಾಗುವುದೆಂದೂ, ರಷ್ಯದಲ್ಲಿ ಕಾದುತ್ತಿರುವ ಸ್ಪೇನಿನ ಬ್ಲೂ ಡಿವಿಜನ್ ಸೈನ್ಯವನ್ನು ವಾಪಸು ಕರೆಸಿಕೊಳ್ಳುವುದೆಂದೂ ವಿದೇಶಾಂಗ ಮಂತ್ರಿಗಳಾದ ಈಡನ್‌ರವರು ತಿಳಿಸಿದರು

ಬುಖಾರೆಸ್ಟ್ ಮೇಲೆ ದಾಳಿ

ರುಮೇನಿಯಾ ರಾಜಧಾನಿಯಾದ ಬುಖಾರೆಸ್ಟ್ ಮೇಲೆ ಆರ್ ಎ. ಎಫ್. ವಿಮಾನಗಳು ಯಶಸ್ವಿಯಾಗಿ ದಾಳಿ ಮಾಡಿ ರೈಲ್ವೆ ವ್ಯವಹಾರ ಮಾರ್ಗಕ್ಕೆ ಪೂರಾ ಜಖಂ ಮಾಡಿರುವುವು ಅಪಘಾತಕ್ಕೀಡಾದ ಪ್ರದೇಶದಲ್ಲಿ ಸುಟ್ಟು ಉರುಳಿಬಿದ್ದ ಕಟ್ಟಡಗಳನ್ನು ಸರಿಪಡಿಸಲು ಎ ಆರ್ ಪಿ. ಪಡೆಗಳಿಗೆ ಮಿಲಿಟರಿಯವರೂ ನೆರವಾದರೆಂದು ರುಮೇನಿಯಾ ರೇಡಿಯೋ ಪ್ರಕಟಿಸಿದೆ ಇಟಲಿಯಲ್ಲಿರುವ ನಾನಾ ಶತ್ರು ಠಾಣ್ಯಗಳ ಮೇಲೂ ಮಿತ್ರ ವಿಮಾನಗಳು ಯಶಸ್ವಿಯಾಗಿ ದಾಳಿ ನಡೆಸಿದುವು ರೋಂ ಫ್ಲಾರೆನ್ಸ್ ರೈಲ್ವೆ ಮಾರ್ಗವು ಈಗ ವ್ಯವಹಾರಕ್ಕೆ ಅನುಕೂಲವಾಗಿಲ್ಲ. ಮೆಡಿಟರೇನಿಯನ್ ನೆಲೆಗಳಿಂದ ಮಿತ್ರ ವಿಮಾನಗಳು ೧೨೫೦ ಆವೃತ್ತಿ ಶತ್ರು ಪ್ರದೇಶಗಳ ಮೇಲೆ ದಾಳಿ ನಡೆಸಿದುವು ಪ್ರತಿಭಟಿಸಲು ಬಂದ ಶತ್ರು ವಿಮಾನಗಳಲ್ಲಿ ಎರಡನ್ನು ಕೆಡವಲಾಯಿತು ಮಿತ್ರರ ಮೂರು ವಿಮಾನಗಳು ಪತ್ತೆ ಇಲ್ಲವೆಂದು ಪ್ರಕಟಿಸಲಾಗಿದೆ.

ವೆಟಿಕನ್ ಭಾಗಕ್ಕೆ ಓಡುತ್ತಿರುವರಂತೆ

ರೋಂ ನಗರದಲ್ಲಿರುವ ಕೆಲವು ಜರ್ಮನ್ ಯೋಧರು ವೆಟಿಕನ್ ಭಾಗಕ್ಕೆ ಹೋಗಿ ತಲೆ ಮರೆಸಿಕೊಳ್ಳಲು ಯತ್ನಿಸಿರುವರೆಂದು ಹಾಗೆ ಹೋಗುವವರನ್ನು ವೆಟಿಕನ್ ಭಾಗದ ಗಡಿಯಲ್ಲಿಯೇ ಗುಂಡಿಟ್ಟು ಕೊಲ್ಲಲು ನಾಜಿಗಳ ಆಜ್ಞೆಯಾಗಿದೆ ಎಂದು ಹೇಳಲಾಗಿದೆ

ಸ್ವೀಕಾರ

ತಿಪಟೂರು ಶ್ರೀ॥ ಎ ಎಂ ಶಿವಲಿಂಗಾರಾಧ್ಯರ ಪುತ್ರಿ ಪ್ರ॥ ಕುಂ॥ ಸೌ॥ ಸುವರ್ಣಾಂಬಿಕೆಗೂ, ನಾರಾಣಪುರದ ಮಠದ ಶ್ರೀ॥ ನಂಜುಡಾರಾಧ್ಯರ ಪುತ್ರ ಚಿ॥ ವೀರಭದ್ರಯ್ಯನವರಿಗೂ ೨೭-೪-೪೪ ರಲ್ಲಿ ನಡೆದ ವಿವಾಹ ಕಾಲದಲ್ಲಿ ಪ್ರಭಾಪೋಷಣಕ್ಕಾಗಿ ವಧುವಿನ ಕಡೆಯಿಂದ ತೆಗೆಯಲ್ಪಟ್ಟ 3 ರೂ, ವರನ ಕಡೆಯಿಂದ ತೆಗೆಯಲ್ಪಟ್ಟ 2 ರೂ ಒಟ್ಟು 5 ರೂಪಾಯಿಗಳು ಶ್ರೀ॥ ಆರ್ ಎಂ. ಮಲ್ಲಿಕಾರ್ಜುನಾರಾಧ್ಯರ ದ್ವಾರಾ ತಲ್ಪಿರುತ್ತವೆ

ಹಿರೇಹಾಳು ಬೃಹನ್ಮಠದ ಲೇ॥ ರಾಚವಾಂಶಪ್ಪಯ್ಯ ಶಾಸ್ತ್ರಿಗಳ ದ್ವಿತೀಯ ಪುತ್ರ ಚಿ॥ ಸೋಮನಾಥಶಾಸ್ತ್ರಿ ಎಂ.ಓ ವರನಿಗೆ ಆದವಾನಿನಾಗಲದಿನ್ನಿ ಮಠದ ಮಿರಾಯಿ ಚನ್ನಬಸವಯ್ಯನವರ ದ್ವಿತೀಯ ಪುತ್ರಿ ಚಿ॥ ಸೌ॥ ಚನ್ನಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರಿಂದ ಸಮರ್ಪಿಸಲ್ಪಟ್ಟ 5 ರೂ ಗಳು ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಕಾಲೇಜ್ ಅಸಿಸ್ಟೆಂಟ್ ಪ್ರೊಫೆಸರ್ ಪಂ॥ ಕೆ ಎಂ ವಿಶ್ವನಾಥಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ

ವಿಜಾಪುರ ಡಿ॥ ಬದಾಮಿ ತಾಲೂಕು ಗೋವನಕೊಪ್ಪ ಗ್ರಾಮದ ಮ॥ ರಾ॥ ಸಂಗನಬಸಪ್ಪ ನಾಳವಾಡ ಇವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಅವರ ಸಹೋದರರಾದ ಮ॥ ರಾ॥ ಗುರುಪಾದಪ್ಪ ಸಂಗಪ್ಪಾ ನಾಳವಾಡ ಇವರು ಸಮರ್ಪಿಸಿದ 5 ರೂ ಗಳು ಕೊಣ್ಣೂರು ಹಿರೇಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಮಂಡ್ಯ ಡಿ॥ ಮದ್ದೂರು ತಾ॥ ಮಠದ ದೊಡ್ಡಿ ಮಠದಲ್ಲಿ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 3 ರೂ ಗಳು ಎಚ್. ಎಸ್ ರಾಜಮೂರ್ತಿಯವರ ದ್ವಾರಾ ತಲ್ಪಿರುತ್ತವೆ

ಶಿವಮೊಗ್ಗಾ ಡಿ॥ ಹಾರನಹಳ್ಳಿ, ಮ॥ ದೇಶಪಶೆಟ್ಟರ ವೀರಪ್ಪಶೆಟ್ಟರ ದ್ವಿತೀಯ ಪುತ್ರ ಚಿ॥ ಮುರಿಗೆಪ್ಪನಿಗೂ ಶಿಕಾರಿಪುರದ ಮ॥ ರಾ॥ ಕೂಸನೂರು ಹೊಳೆಯಪ್ಪನವರ ಪುತ್ರಿ ಚಿ॥ ಸೌ॥ ಜಯದೇವಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 2 ರೂ. ಗಳು ಶಿವಕಥಾಪಂಡಿತ ಗುಬ್ಬಿ ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಮುದಗಲ್ಲ

ನಿಜಾಂ ಇಲಾಖಾ ಜಿಲ್ಲಾ ರಾಯಚೂರ್ ತಾಲ್ಲೂಕು ಲಿಂಗಸಗೂರಪೈಕಿ ಕಸಬಾಮುದಗಲ್ಲ ಗ್ರಾಮದ ಗಂಗಾಧರ ಮಹಾಪ್ರಸ್ತರಾದ ವೇ|| ಶಿದ್ಧರಾಮಾಚಾರ್ಯರು ವಾರ್ಷಿಕ ಪದ್ಧತಿಯಂತೆ ಈ ವರ್ಷವಾದರೂ ಇದೇ ವೈಶಾಖ ಶು ೩ ಮಂಗಳವಾರ ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಯನ್ನು ಹಾಗೂ ಶು ೪ ಗುರುವಾರ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಯನ್ನು ತಮ್ಮ ಮಠದಲ್ಲಿ ಬಹು ಭಕ್ತಿಯಿಂದ ವಿಧ್ಯುಕ್ತವಾಗಿ ಆಚರಿಸಿ ಉಭಯ ಆಚಾರ್ಯರ ಆಶೀರ್ವಾದಕ್ಕೆ ಪಾತ್ರರಾದರು.

ಒಬ್ಬ ಆಚಾರ್ಯಸೇವಕ

ವಿವಾಹಮಹೋತ್ಸವ

ಶಿವಮೊಗ್ಗ ಡಿ ದಾವಣಗೆರೆ ಪೇಟೆ ವರ್ತಕರಾದ ಶ್ರೀ ಪ್ರತಿಷ್ಠಿತರಾದ ಶ್ರೀ [illegible] ಮುರಿಗೆಪ್ಪ ನವರ ಚಿರಂಜೀವಿ [illegible] ಮೋಟೆಯಪ್ಪನವರ ಪುತ್ರಿ [illegible] ಇದೇ ವೈಶಾಖ ಶುದ್ಧ [illegible] ಗುರುವಾರ [illegible] ವಿವಾಹ ಮಹೋತ್ಸವವು ವಿಶೇಷ ವೈಭವದಿಂದ ನೆರವೇರಿಸಲ್ಪಟ್ಟಿತು. ಈ [illegible] ಸಮಯದಲ್ಲಿ ನೂತನ ದಂಪತಿಗಳ ಶ್ರೇಯೋಭಿವೃದ್ಧಿಗಾಗಿ ಶ್ರೀ ರಂಭಾಪುರೀ [illegible] ಹಿಸಲ್ಪಟ್ಟ ಸವಿಮಂತ್ರಾಕ್ಷತಾ [illegible] ಆಶೀರ್ವಚನಪತ್ರವನ್ನು ಗುಬ್ಬಿ ಶಿವರುದ್ರಸ್ವಾಮಿ[illegible] ಓದಿಹೇಳಿದ ತರುವಾಯ ಶ್ರೀಮುರಿಗೆಪ್ಪನವರು ಪಂಚಾಚಾರ್ಯ ಪ್ರಭಾಪೋಷಣಕ್ಕಾಗಿ ೩ ರೂಗಳನ್ನು ಸಮರ್ಪಿಸಿದರು. ಅದೇ ದಿವಸ [illegible] ಶಾಸ್ತ್ರಿಗಳಿಂದ 'ಸುಕನ್ಯಾದೇವಿ" ಎಂಬ ಶಿವಸಂಕೀರ್ತನೆಯು ಸಮಂಜಸವಾಗಿ ನಡೆಸಲ್ಪಟ್ಟಿತು. ಈ ವಿವಾಹಮಹೋತ್ಸವ ಸಮಾರಂಭಕ್ಕೆ ಅನೇಕ ಜನ ಬಂಧುಮಿತ್ರರೂ, ಲೌಕಿಕ ವೈದಿಕ ಮಹೋದಯರೂ ಆಗಮಿಸಿದರು. ಇಂತಹ ಕಠಿಣ ಕಾಲದಲ್ಲಿ [illegible] ದಿವಸಗಳವರೆಗೆ ಪ್ರತಿನಿತ್ಯವೂ, ನೂರಾರು ಜನರನ್ನು ಯೋಗ್ಯರೀತಿಯಿಂದ ಸತ್ಕರಿಸಿದ ಶೆಟ್ಟರವರ ವಿಚಕ್ಷಣತೆಯೂ ಉದಾರತೆಯೂ ಶ್ಲಾಘನೀಯವಾದುವಾಗಿವೆ. ಶ್ರೀ ಜಗದ್ಗುರು ಪಂಚಾಚಾರ್ಯರು ಸರ್ವರಿಗೂ ಸನ್ಮಂಗಳವನ್ನುಂಟುಮಾಡಲೆಂದು ಹಾರೈಸುವ

ಒಬ್ಬ ಪ್ರತ್ಯಕ್ಷದರ್ಶಿ

ದು:ಖವಾರ್ತೆ

ವಿಜಾಪುರ ಡಿ ಬಾದಾಮಿ ತಾಲೂಕ ಪೈಕಿ ಗೋವನಕೊಪ್ಪ ಗ್ರಾಮದ ಮ|| ರಾ|| ಸಂಗನ ಬಸಪ್ಪನವರು ಮಹಾಜನ ಇವರು ಇದೇ ತಾರಣನಾಮಸಂವತ್ಸರ ಜ್ಯೇಷ್ಠ [illegible] (ತಾ ೨೩ ೪-೧೯೪೪) ನೇ ಶನಿವಾರ ದಮ್ಮು ಮತ್ತು ಜ್ವರ ರೋಗದಿಂದ ಶಿವಸಾಯುಜ್ಯವನ್ನು ಹೊಂದಿದರು. ಇವರ ಅಂತ್ಯೇಷ್ಟಿ ವಿಧಿಯು ಶ್ರೀ||ಷ|| ಬ್ರ|| ಕೋಣ್ಣೂರ ಹಿರೇಮಠದ ಶ್ರೀ ಪಟ್ಟದಸ್ವಾಮಿಗಳವರಿಂದ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು. ಆ ಕಾಲದಲ್ಲಿ ಮಾಹೇಶ್ವರರಿಗೂ ಬಡಬಗ್ಗರಿಗೂ ದನಧಾನ್ಯ ವಸ್ತ್ರ ಈ ತ್ರಿವಿಧ ದಾನಗಳು ಮಾಡಲ್ಪಟ್ಟವು. ಇವರ ಸ್ಮಶಾನ ಯಾತ್ರೆಗೆ ಅಜುಬಾಜು ಗ್ರಾಮಗಳಿಂದ ೪-೫ ನೂರು ಜನರು ಕೂಡಿದ್ದರು ಮತ್ತು ಸ್ಮಶಾನ ಯಾತ್ರೆಯು ಭಜನೆ ಬಜಂತ್ರಿ-ಹಲಿಗೆಗಳ ವಾದ್ಯ ಮೇಳದಿಂದ ಕೂಡಿತ್ತು. ಇವರು ಯಾವಾಗಲೂ ಗುರು ಲಿಂಗ ಜಂಗಮ ಪ್ರೇಮಿಗಳಾಗಿದ್ದರು. ಮೃತ್ಯು ಕಾಲದಲ್ಲಿ ಇವರಿಗೆ ೬೦ ೬೫ ವರ್ಷಗಳಾಗಿದ್ದವು. ಇವರಿಗೆ ೩ ಮಂದಿ ತಮ್ಮಂದಿರೂ ೩ ಮಂದಿ ಮಕ್ಕಳೂ ಇದ್ದಾರೆ. ಇವರ ಜ್ಯೇಷ್ಠ ಪುತ್ರರು ಧಾರವಾಡ ಕರ್ನಾಟಕ ಕಾಲೇಜದ ಪ್ರೊಫೆಸರರಾಗಿದ್ದಾರೆ. ಇದೊಂದು ಧಾರ್ಮಿಕ ವ್ಯಕ್ತಿಯು ನಮ್ಮನ್ನು ಅಗಲಿ ಹೋದದ್ದು ವೀರಶೈವ ಸಮಾಜದ ದುರ್ದೈವವೆಂದೇ ಭಾವಿಸಬೇಕಾಗಿದೆ. ಈ ಕಾರ್ಯದಲ್ಲಿ ಧಾರ್ಮಿಕ ತತ್ವಗಳನ್ನು ಪ್ರಕಟಿಸುತ್ತಿರುವ ಪಂಚಾಚಾರ್ಯ ಪ್ರಭಾ ಪೋಷಣಕ್ಕಾಗಿ ೩ ರೂಪಾಯಿಗಳು ಸಮರ್ಪಿಸಲ್ಪಟ್ಟವು. ಶ್ರೀ ಜಗದ್ಗುರು ಪಂಚಾಚಾರ್ಯರು ಹಾಗೂ ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಬಂಧುವರ್ಗಕ್ಕೆ ದುಃಖ ಸಹನವನ್ನೂ ಉಂಟುಮಾಡಲೆಂದು ಹಾರೈಸುತ್ತೇವೆ.

ಕೆ ಜಿ ಹಿರೇಮಠ, ಕೋಣ್ಣೂರ

ಶ್ರೀ ಸಾ|| ಜೆ ಬಸವೇಶ್ವರಯ್ಯನವರ ಛತ್ರ

ಈ ಛತ್ರದಲ್ಲಿ [illegible] ನ ಸಾಲಿಗೆ ವಿದ್ಯಾಭ್ಯಾಸ ಮಾಡಬೇಕೆನ್ನುವ ವೀರಶೈವ ಬಡವಿದ್ಯಾರ್ಥಿಗಳು [illegible] ಈ ಕೆಳಗೆ ರುಜುಮಾಡಿರುವವರಿಗೆ [illegible] ಒಳಗೆ ಬರೆದುಕೊಳ್ಳಬೇಕು

ಎಂ ಪಿ ಚನ್ನಪ್ಪ, ಕನ್ವಿನರ್

ಶ್ರೀಜಗದ್ಗುರು ದಾರುಕಾಚಾರ್ಯಾಯನಮಃ ।

ಪ್ರಭಾವತಾರ

ವೇ|| ವ ಪ್ರಾಚಾರ್ಯ [illegible] ವಾಡೇಬೆಟ್ಟ [illegible] ಮಠದ ಮ ದೇವೂರು

ಪದಸದ್ಭಿಚಾರಶೀಲರೇ?

ಯಾವನು ಚರಾಚರಾತ್ಮಕವಾದೀ ಜಗತ್ತಿಗೆ ಮೂಲ ಕಾರಣೀಭೂತನಾಗಿಯೂ, ಪ್ರಾಣಿಗಳ ಅಜ್ಞಾನಾಂಧಕಾರನಾಶಕನಾಗಿಯೂ ಇರುವನೋ ಆ ಪರಶಿವನ ಪೂರ್ಣಾನುಗ್ರಹದಿಂದ ಪ್ರಭಾಮಾತೆಗೆ ಇದೇ ವೈಶಾಖ ಶು|| ೫ ಗೆ ಹದಿನೆಂಟನೆಯ ವರ್ಷವು ಪ್ರಾರಂಭವಾಗಿರುವುದು. ಈರ್ಷ್ಯಾಸೂಯೆಗಳಿಂದ ಪೂರ್ಣವಾದ ಜಗತ್ತಿನ ಸದ್ಯದ ಪರಿಸ್ಥಿತಿಯಲ್ಲಿ ಪ್ರಭೆಯು ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಯನ್ನೈದುತ್ತ ಬಂದಿರುವುದು ಜಗದಾಚಾರ್ಯರ ಕೃಪಾಶೀರ್ವಾದವೂ, ಪ್ರಭಾಜನ್ಮದಾತರೂ, ಧರ್ಮಾವತಾರಿಗಳೂ, ಗುರುಕುಲತಿಲಕರೂ, ವಿದ್ವನ್ಮಣಿಗಳೂ ಆದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರೀಜಿಯವರ ಆತ್ಮಶಕ್ತಿಯ ತೇಜಸ್ಸಿನ ಪ್ರಭಾವವೂ ಮತ್ತು ಲೇಖಕರ ಗ್ರಾಹಕರ ಅಭಿಮಾನೌದಾರ್ಯಗಳೂ ಕಾರಣಗಳೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಿಕ್ಕಿಲ್ಲ. ಅಸ್ತು!

ಈ ಭರತಖಂಡದಲ್ಲಿರುವ ಸನಾತನಮತಗಳಲ್ಲಿ ಒಂದಾದ ನಮ್ಮ ವೀರಶೈವ ಮತವು ಪರಮಶ್ರೇಷ್ಠವೂ ಅತ ಏವ ಮೋಕ್ಷದಾಯಕವೂ ಆಗಿರುವದು. ಇಂತಹ ಮತಕ್ಕೆ ಕಲಿದೋಷದಿಂದ ಉಚ್ಚನೀಚತಾರತಮ್ಯವಿಲ್ಲದ ಸೋಂಕು ವಜ್ರಲೇಪದಂತೆ ಬಲವಾಗಿ ಅಂಟಿಕೊಂಡು ಬಂದಿತ್ತು. ಜನಗಳಾದರೂ ನಿಜತತ್ವವನ್ನು ಮರೆತು ಗಾಢಾಂಧಕಾರದಲ್ಲಿ ಮುಳುಗಿ ಗಾಢನಿದ್ರೆಯಲ್ಲಿದ್ದರು. ಜನಸಂಖ್ಯೆಯಲ್ಲಿ ಈ ತರಹೆಯ ಜನರೇ ಬಹಳವಾಗಿದ್ದರು. ನಿಜತತ್ವವನ್ನರಿತ ಒಬ್ಬಿಬ್ಬರು ನಿಜತತ್ವವನ್ನು ಬೋಧಿಸಲು ಅವರ ನಾಲಗೆಯು ಕುಂಠಿತವಾಗಿತ್ತು. ಧರ್ಮದ ಗ್ಲಾನಿಯೂ ಅಧರ್ಮದ ಏಳಿಗೆಯೂ ಆದ ಕಾಲದಲ್ಲಿ ಮಹಾಪುರುಷರ ಅವತಾರವು ಈಶ್ವರೀಸಂಕೇತವಾಗಿರುವಂತೆ ಇಂತಹ ವಿಷಮಕಾಲದಲ್ಲಿ ನಮ್ಮ ಪ್ರಭಾದೇವಿಯು ಆವಿರ್ಭವಿಸಿ ಜಗತ್ತಿಗೆ ಶಿವತತ್ವಾಮೃತಪಾನವಂ ಮಾಡಿಸಿ ಎಚ್ಚರಗೊಳಿಸಿದಳು ಮತ್ತು ಈ ಮತದ ಪ್ರಾಚೀನತೆಯನ್ನೂ, ಶ್ರೇಷ್ಠತೆಯನ್ನೂ, ಮೂಲಸ್ಥಾಪನಾಚಾರ್ಯರ ಅಗಾಧಮಹಿಮೆಗಳನ್ನೂ ಬೋಧಿಸುತ್ತಾ ಒಂದದ್ದರಿಂದ ಸೂರ್ಯೋದಯದಿಂ ಅಂಧಕಾರದಂತೆ ಅಪಮಾರ್ಗವು ಮರೆಯಾಗುತ್ತಾ ಬಂದಿತು. ಹೀಗೆ ವೀರಶೈವಮತಕ್ಕೆ ಮಹೋಪಕಾರವಂ ಮಾಡಿದ ಮಾಡುತ್ತಿರುವ ಪ್ರಭಾಮಾತೆಗೆ ಎಷ್ಟು ಧನ್ಯವಾದಗಳನ್ನು ಅರ್ಪಿಸಿದರೂ ಎಷ್ಟು ಕೃತಜ್ಞತೆಯನ್ನು ತೋರಿಸಿದರೂ ತೀರದಾಗಿದೆ. ಅಲ್ಲದೆ ಪ್ರತಿವಾರವೂ ನಮ್ಮ ಮನೆಗೆ ಬಂದು ಬೋಧಿಸುತ್ತಿರುವ ಮತ್ತು ಅಹೋರಾತ್ರಿ ಈ ಮತದ ಏಳಿಗೆಗಾಗಿ ಅವಿಶ್ರಾಂತವಾಗಿ ಶ್ರಮಪಡುತ್ತಿರುವ ಬೋಧಕ ಗುರುರೂಪವಾದ ಈ ಪತ್ರಿಕೆಗೆ ಚಂದಾದಾರರಾಗುವುದೂ ಶುಭಾಶುಭಕರ್ಮಗಳಲ್ಲಿ ಅದರ ಪೋಷಣಕ್ಕಾಗಿ ಧನಸಹಾಯ ಮಾಡುವುದೂ ಪ್ರತಿಯೊಬ್ಬ ವೀರಶೈವನ ಆದ್ಯ ಕರ್ತವ್ಯವಾಗಿರುವುದು. ವಾಚಕರೇ, ಮೇಲುದಾಹರಿಸಿರುವ ವಿವರಣೆಗೆ ತಕ್ಕಂತಹ ಒಂದು ಉಪಮಾನವಿರುವದು. ಅದೇನೆಂದರೆ—

ಒಂದುಸಾರೆ ಒಬ್ಬ ಕುರುಬನಿಗೆ ಒಂದು ಹುಲಿಯ ಮರಿಯು ಸಿಕ್ಕಲಾಗಿ ಅವನು ಅದನ್ನು ಬಹು ಅಕ್ಕರೆಯಿಂದ ಸಾಕಿದನು. ಇದು ಕುರಿಯ ಮಂದೆಯಲ್ಲಿಯೇ ಬೆಳೆಯುತ್ತಾ ಕೊನೆಗೆ ತಾನೂ ಒಂದು ಕುರಿಯೆಂದೇ ಭಾವಿಸಿಕೊಂಡಿತು. ಕುರಿಗಳಂತೆ 'ಬ್ಯಾ! ಬ್ಯಾ!' ಎನ್ನುವದು. ಕುರುಬನು 'ಹುಶ್' ಎಂದರೆ ಕುರಿಗಳು ತಿರುಗಿದ ಕಡೆಗೆ ತಾನೂ ಕತ್ತು ಒಗ್ಗಿಸಿಕೊಂಡು ತಿರುಗುವುದು—ಹೀಗೆ ಇದರ ಆಚರಣೆಯೆಲ್ಲ ಕುರಿಗಳದೇ ಆಗಿಬಿಟ್ಟಿತು.

ಹೀಗಿರುತ್ತಲೊಂದುದಿನ ಒಂದು ಹುಲಿಯು ಕುರಿಯ ಮಂದೆಯಮೇಲೆ ಬೀಳಲಾಗಿ ಕುರಿಗಳೆಲ್ಲಾ ಚೆಲ್ಲಾಪಿಲ್ಲಿಯಾದವು. ಈ ಹುಲಿಯ ಮರಿಯೂ ಮಿಕ್ಕ ಕುರಿಗಳಂತೆಯೇ ತಾನೂ ಓಡಿಹೋಗಲುಪಕ್ರಮಿಸಿತು. ಇದನ್ನು ಕಂಡು ಹೊಸ ಹುಲಿಯು ಸಖೇದಾಶ್ಚರ್ಯದಿಂದ ಎಲಾ ಇದೇನು! ಹುಲಿಮರಿಯು ಕುರಿಮರಿಯಾಗಿರುವುದಲ್ಲಾ! ಎಂದು ಮರಮರನೆ ಮರುಗಿ ಅದನ್ನು ಕುರಿತು ಎಲೋ! ಹುಲಿಮರಿಯೆ, ನೀನೇಕೆ ಓಡಿಹೋಗುತ್ತಿ? ನೀನು ನನ್ನವನಲ್ಲವೆ? ನನ್ನ ಜೊತೆಗೆ ಬಾ" ಎಂದು ಬಹುವಿಧವಾಗಿ ಹೇಳಿತು. ಅದಕ್ಕೆ ಅದು ನಾನು ಬರುವುದಿಲ್ಲ. ಈ ಕುರುಬನು ಮೊದಲಿನಿಂದಲೂ ನನ್ನನ್ನು ಸಾಕಿರುತ್ತಾನೆ. ಅವನ ಆಶ್ರಯದಲ್ಲಿ ಬೆಳೆದ ನಾನು ಅವನಲ್ಲಿಯೇ ಇರುತ್ತೇನೆಂದಿತು. ಅದಕ್ಕೆ ಹುಲಿಯು—

"ಎಲಾ, ತಮ್ಮಾ! ನೀನು ಏಕೆ ಹೀಗಾದೆ! ಏತಕ್ಕೆ ಹೆದರುತ್ತೀಯೆ? ನೀನು ಕುರಿಗಳಂತೆ ಆಡುತ್ತಿರುವದನ್ನು ನೋಡಿ ನನಗೆ ಆಶ್ಚರ್ಯವೂ ವ್ಯಸನವೂ ಆಗುತ್ತಿದೆ. ಚೆನ್ನಾಗಿ ನೋಡು, ನಿನಗೂ ನನಗಿರುವಂತೆ ಉಗುರುಗಳಿವೆ; ನಿನ್ನ ಮೈಯೂ ನನ್ನ ಮೈಯಂತೆ ಪಟ್ಟೆಪಟ್ಟೆಯಾಗಿದೆ, ನಿನಗೂ ನನ್ನಂತೆಯೇ ಮೀಸೆಗಳಿವೆ; ನಿನ್ನ ಹೆಜ್ಜೆಯೂ ನನ್ನ ಹೆಜ್ಜೆಯೂ ಒಂದೇ" ಎಂದೀಪರಿಯಲ್ಲಿ ಸಾಮ್ಯವನ್ನು ತೋರಿಸಿದ್ದಲ್ಲದೆ "ಅಯ್ಯಾ, ಹತ್ತಿರದಲ್ಲಿಯೇ ಇರುವ ಆ ಕೊಳದಲ್ಲಿ ಬಗ್ಗಿನೋಡು, ನಿನ್ನ ಮುಖವು ನನ್ನ ಮುಖದಂತೆ ಇದೆಯೋ ಕುರಿಗಳ ಮುಖದಂತೆ ಇದೆಯೋ ಗೊತ್ತಾಗುತ್ತದೆ. ಆಗಲಾದರು ನಿನಗೆ ನನ್ನ ಮಾತಿನಲ್ಲಿ ಭರವಸೆಯುಂಟಾಗುವದು" ಎಂದು ಹೇಳಿತು. ಆಗ ಕುರಿಯು ಕೊಳದಲ್ಲಿ ನೋಡಲಾಗಿ ತನ್ನ ಮುಖದ ಪ್ರತಿಬಿಂಬವು ಹುಲಿಯ ಮುಖದಂತೆಯೇ ಇದ್ದದ್ದನ್ನು ಕಂಡು ಓಹೋ! ನಾನು ಹೇಗೋ ಮೋಸಹೋಗಿರುವೆನೆಂದು ತಿಳಿದು ಒಂದುಸಾರೆ ಪ್ರಯತ್ನದಿಂದ ಗಟ್ಟಿಯಾಗಿ ಅರ್ಭಟಿಸಿತು. ಕೂಡಲೆ ಆ ಕಡೆಗೆ ಬರುತ್ತಿದ್ದ ಕುರಿಗಳೇ ಮೊದಲಾದ ಪ್ರಾಣಿಗಳು ದಿಕ್ಕಾಪಾಲಾಗಿ ಚದರಿದವು. ತಾನೂ ಹುಲಿಯೆಂಬ ವಿಷಯದಲ್ಲಿ ಇನ್ನು ಯಾವ ಸಂದೇಹವೂ ಉಳಿಯಲಿಲ್ಲವಾದ್ದರಿಂದ ತನ್ನ ಮನಬಂದಂತೆ ಬೇರೊಂದು ಕಡೆಗೆ ಹೋಗಿ ಅಂದಿನಿಂದ ಸುಖವಾಗಿ ಸ್ವಾತಂತ್ರ್ಯವನ್ನನುಭವಿಸಿತು. ಪ್ರಭಾದೇವಿಯ ಉದಯವಾಗುವುದಕ್ಕೆ ಮೊದಲು ನಮ್ಮ ಗುರುವರ್ಗದವರ ಸ್ಥಿತಿಯಾದರೂ ಹೀಗೆಯೇ ಇತ್ತು.

ಜಯವಾಗಲಿ, ಜಯವಾಗಲಿ, ಜಗದಾಚಾರ್ಯರ ಪವಿತ್ರನಾಮದಿಂ ಮೆರೆಯುವ ಪ್ರಭೆಗೆ ಜಯವಾಗಲಿ, ಸನಾತನತತ್ವಕ್ಕೆ ಜಯವಾಗಲಿ, ಸತ್ಯಕ್ಕೆ ಜಯವಾಗಲಿ, ಪಂಡಿತ ಕಾಶೀನಾಥಶಾಸ್ತ್ರೀಜಿಯವರ ಆಯುರಾರೋಗ್ಯಭಾಗ್ಯವೃದ್ಧಿಯಾಗಲಿ; ಜಾತಿಸೌಕರ್ಯವೆಂಬ ನೀಚಪದ್ಧತಿಯು ನಾಶವಾಗಲಿ, ಶಿಷ್ಯರ ಮನೆಗಳ ದುರಾಶೆಯಿಂದ ನರಕಹೇತುವಾದ ಜಾತಿಸಾಂಕರ್ಯವನ್ನು ಮಾಡುವ ಅವರ ಹೇಯವಾದ ಅನ್ನಕ್ಕೆ ನಾಲಗೆಯನ್ನು ಚಾಚುತ್ತಿರುವ ಚೋರತಪಸ್ವಿಗಳಿಗೆ ಬುದ್ಧಿಬರಲಿ, ಧನದ್ರೋಹಾದಿಗಳು ಪಲಾಯನವಾಗಲಿ, ವರ್ಣಾಶ್ರಮಧರ್ಮಗಳು ಸರ್ವತ್ರಪ್ರಕಾಶಿಸಲಿ, ಗುರುವರ್ಗದವರು ಸ್ವಕರ್ತವ್ಯನಿಷ್ಠರಾಗಲಿ, ಮಳೆಗಳು ಸುರಿಯಲಿ ಭೂಮಿಗಳು ಬೆಳೆಯಲಿ ಲೋಕದ ಬಡತನವು ಬಯಲಾಗಲಿ, ಸಿರಿತನವು ಸಿರಿದಾಗಲಿ, ಸರ್ವತ್ರ ಸುಖಶಾಂತಿಗಳು ನೆಲಸಲಿ.

ಲೋಕಾಃ ಸರ್ವಸಮಸ್ತಾಸ್ಸುಖಿನೋಭವಂತು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

EGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾರ್ ಪಂಚಾಸ್ಯಪೀಠಾಧಿಪಾರ್ । ಪಂಚಕ್ಲೇಶವಿನಾಶಕಾರ್ ಪರತರಶ್ರೀಪಂಚಲಿಂಗೋದ್ಭವಾರ್ ॥
ಪಂಚಾಚಾರವಿಧಾಯಕಾರ್ ಪರಶಿವಸ್ವಾಂತಾಬ್ಜಬೋಧಕಾರ್ । ಪಂಚಾಚಾರ್ಯಜಗದ್ಗುರೂನ್ ಸುರವರಾನ್ ಕಾಲತ್ರಯೇಽಹಂ ಭಜೇ ॥

…ಕದವರಿಗೆ ೩ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ. ವಿ. ಪಿ. ಖರ್ಚು ಸೇರಿ ೩ ರೂ. ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೫ನೇ ಮೇ ೧೯೪೪ [ಸಂಚಿಕೆ ೩

ವಿವಾಹಮಹೋತ್ಸವ ಸಮಾರಂಭ
ಹರಪನಹಳ್ಳಿ

ಬಳ್ಳಾರಿ ಡಿ॥ ಹರಪನಹಳ್ಳಿ ಗ್ರಾಮದ ಸುಪ್ರಸಿದ್ಧ …ೀ ತೆಗ್ಗಿನಮಠದ ಚನ್ನವೀರಪ್ಪಯ್ಯನವರು ಇದೇ …ರಣ ಸಂವತ್ಸರ ವೈಶಾಖ ಶು॥ ೧೨ ಶುಕ್ರವಾರ …ವಸ ಶ್ರೀ॥ ಷ॥ ಬ್ರ॥ ಸೋಗಿಪುರವರ್ಗಮಠಾಧ್ಯಕ್ಷ …ತ್ಯಮುನಿ ಪಟ್ಟದ ಸಿದ್ಧವೀರಶಿವಾಚಾರ್ಯಸ್ವಾಮಿಗಳನ್ನು …॥ ಷ॥ ಬ್ರ॥ ತೆಗ್ಗಿನಮಠದ ಪಟ್ಟದ ಚಂದ್ರಶೇಖರ …ವಾಚಾರ್ಯಸ್ವಾಮಿಗಳನ್ನೂ ಬರಮಾಡಿಕೊಂಡು ಅವರ …ಧ್ಯಕ್ಷತೆಯಲ್ಲಿ, ವೇ॥ ಜಿ. ಎಂ. ಶಾಂತವೀರಯ್ಯನವರೇ …ಮುಂತಾದ ವೈದಿಕ ಮಂಡಲಿಯೊಡನೆ, ಪಂಚಕಲಶ …ಸ್ಥಾಪನ ಪೂರ್ವಕ ವಿಮಜನ ಸಾಲಂಕೃತ ಕನ್ಯಾದಾನ …ನ್ನು ಮಾಡಿದರು. ೫-೬ ದಿವಸಗಳ ಕಾಲ ೫-೬ …ವಿರ ಭಕ್ತಮಾಹೇಶ್ವರರನ್ನು ಮಿಷ್ಟಾನ್ನಭೋಜನ …ದ ತೃಪ್ತಿಪಡಿಸಿದರು. ಈ ಸಮಾರಂಭಕ್ಕೆ ಅನೇಕ …ಶ್ರೀಮಂತರು ಪ್ರಮುಖರೂ ಮಾಹೇಶ್ವರರೂ …ಮಿಸಿದ್ದರು. ವೇ॥ ಕರೂರು ಗವಾಯಿ ಗುರುಬಸ …ಯ್ಯರು ತಮ್ಮ ಇಂಪಾದ ಗಾನದಿಂದ ಸರ್ವರನ್ನೂ …ಂದಗೊಳಿಸಿದರು. ವಿವಾಹಗಳು ಸಾಂಗವಾಗಿ …ವೇರಿದಮೇಲೆ ಸುಂದರವಾಗಿ ಅಲಂಕರಿಸಲಾಗಿದ್ದ …ವಲ್ಲಿ ವಧೂವರರ ಮೆರವಣಿಗೆಯು ಅತ್ಯಂತ ವೈಭವ …ಡನೆ ನಡೆಯಿತು. ಅನಂತರ ಆಗಮಿಸಿದ್ದ ಸರ್ವರಿಗೂ …ಪುಷ್ಪತಾಂಬೂಲ ದಕ್ಷಿಣೆಗಳು ಕೊಡಲ್ಪಟ್ಟು …ರ್ಯವು ಮುಕ್ತಾಯಗೊಂಡಿತು. ಈ ಕಾರ್ಯವನ್ನು …ರ್ಣವಾಗಿಯೂ ಬಹು ಅಚ್ಚುಕಟ್ಟಾಗಿಯೂ …ವೇರಿಸಿದ ವೇ॥ ಗುರುಪಾದದೇವರಮಠದ ವಿದ್ವಾನ್ …ಂಕರಿ ಆಯುರ್ವೇದ ವೈದ್ಯಶಾಲಾ ಕರ್ತೃಗಳಾದ …ಲಕಂಠಶಾಸ್ತ್ರಿಗಳು ವೇ॥ ತೆಗ್ಗಿನಮಠದ ಪಾಚಪ್ಪ …ರು ಯೂನಿಯನ್ ಪಂಚಾಯಿತಿ ಬೋರ್ಡು …ಸಿಡೆಂಟರು ಮತ್ತು ಪ್ರಸಿದ್ಧ ವರ್ತಕರಾದ ಗೊಂಗಡಿ …ಹದೇವಪ್ಪನವರೇ ಮೊದಲಾದವರಿಗೂ ಸದರಿ ಚನ್ನ …ರಪ್ಪಯ್ಯನವರಿಗೂ ಇವರ ಸಮಸ್ತ ಕುಟುಂಬ …ರ್ಗಕ್ಕೂ ಸಹ ಶ್ರೀ ಜಗದ್ಗುರು ಪಂಚಾಚಾರ್ಯರು …ಯುರಾರೋಗ್ಯಭಾಗ್ಯಾದಿಗಳನ್ನಿತ್ತು ಕಾಪಾಡಲಿ, ವೀರ …ವ ಧರ್ಮೋದ್ಧಾರಕ್ಕಾಗಿ ಜನ್ಮವೆತ್ತಿದ ಪ್ರಭಾಪೋಷಣ …ಗಿ ಉಭಯ ಗುರುಗಳ ಅಪ್ಪಣೆ ಪ್ರಕಾರ ೩೫ ರೂ ಸಮರ್ಪಿಸಲ್ಪಟ್ಟವು.

ಓರ್ವ ಪ್ರತ್ಯಕ್ಷದರ್ಶಿ

ವಿವಾಹಮಹೋತ್ಸವ, ದಾವಣಗೆರೆ

ದಾವಣಗೆರೆಯಲ್ಲಿರುವ ಮ॥ ರಾ॥ ಮಾಗಾನಹಳ್ಳಿ …ಪಟ್ಟಪ್ಪನವರು ತಮ್ಮ ದ್ವಿತೀಯ ಪುತ್ರ ಚಿ॥ ರಾಮ …ಲಿಂಗಪ್ಪನಿಗೆ ಇದೇ ಗ್ರಾಮದ ಯಜಮಾನ್ ಬೆಳ್ಳೂಡಿ …ನಾಗೇಂದ್ರಪ್ಪನವರ ಪುತ್ರಿ ಚಿ॥ ಸೌ॥ ಸರೋಜಿನಿದೇವಿ …ನ್ನು ತಂದು ತಾ॥ ೨೬-೪-೧೯೪೪ನೇ ಬುಧವಾರ ದಿವಸ ಚಿತ್ರದುರ್ಗ ರೋಡಿನಲ್ಲಿರುವ ತಮ್ಮ ಭವ್ಯವಾದ ಬಂಗಲೆಯಲ್ಲಿ ವಿವಾಹಮಹೋತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿದರು. ಶ್ರೀ ಜಗದ್ಗುರು ರಂಭಾಪುರಿ ಪೀಠದಿಂದಲೂ ಉಜ್ಜಯಿನಿ ಪೀಠದಿಂದಲೂ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದಲೂ ಆಶೀರ್ವಾದ ಪತ್ರಿಕೆಗಳು ಬಂದಿದ್ದವು. ಮೈಸೂರು ಹೈಕೋರ್ಟು ರಿಟೈರ್ಡ್ ಚೀಫ್ ಜಸ್ಟಿಸ್ ಪಿ. ಮಹದೇವಯ್ಯನವರು ಮತ್ತು ಹೈಕೋರ್ಟ್ ಜಡ್ಜ್ ಜಿ. ಪರಮಶಿವಯ್ಯನವರು ವಧೂವರರ ಅಭಿವೃದ್ಧಿಯನ್ನು ಬಯಸಿ ಮಂಗಲಪತ್ರಿಕೆಗಳನ್ನು ಕಳುಹಿಸಿದ್ದರು. ಅಲ್ಲದೆ ಟವನ್ನಿನ ಅನೇಕ ಜನ ಪ್ರಮುಖರೂ ಮಾನ್ಯ ಮಹಿಳೆಯರೂ ಆಗಮಿಸಿ ವಧೂವರರಿಗೆ ಮಂಗಲವನ್ನು ಕೋರಿದರು. ವಿವಾಹವು ದಾವಣಗೆರೆ ಬೃಹನ್ಮಠದ ವೇ॥ ಜ್ಯೋತಿರ್ಭೂಷಣ ಶಿವಾನಂದಸ್ವಾಮಿಶಾಸ್ತ್ರಿಗಳ ಮತ್ತು ನೆಗಳೂರು ಬೃಹನ್ಮಠದ ಪಟ್ಟದಸ್ವಾಮಿಗಳವರ ನೇತೃತ್ವದಲ್ಲಿ ವಿಧ್ಯುಕ್ತವಾಗಿ ನೆರವೇರಿತು. ಶ್ರೀ ಜಗದಾಚಾರ್ಯರು ನೂತನ ವಧೂವರರಿಗೆ ಸಮಸ್ತ ಸನ್ಮಂಗಳಗಳನ್ನೀಯಲೆಂದು ಕೋರುವ,

ಮಳಿ ಜಿನ್ನೂರುಮಠದ ಹಾಲಸಿದ್ದಯ್ಯ
ದಾವಣಗೆರೆ

ಶ್ರೀಜಗದ್ಗುರು ದಾರುಕಾಚಾರ್ಯಾಃ ಪ್ರಸೀದತು

ಶಿವದೀಕ್ಷಾಸಂಸ್ಕಾರವೂ
ವಿವಾಹ ಮಹೋತ್ಸವವೂ

ತೀರ್ಥಹಳ್ಳಿ ತಾ॥ ಕವುಲೇದುರ್ಗದ ಶ್ರೀಮದ್ಪಾಂಚಿನ ಮಠದಲ್ಲಿ ಮಠಾಧಿಪತಿಗಳಾದ ಶ್ರೀವೃಷಭಲಿಂಗಶಿವಾಚಾರ್ಯಸ್ವಾಮಿಗಳವರ ಉದಾರಾಶ್ರಯದಲ್ಲಿ ವೈಶಾಖ ಶುದ್ಧ ೧೧ ಗುರುವಾರ ವೇ॥ ಮಲಗೋಡುಮಠದ ವೀರಯ್ಯನವರ ದ್ವಿತೀಯ ಪುತ್ರ ಚಿ॥ ಈಶ್ವರಯ್ಯನೆಂಬ ವಟುವಿಗೆ ಮಾಹೇಶ್ವರದೀಕ್ಷಾಸಂಸ್ಕಾರವೂ, ಇದೇ ದಿವಸ ವೇ॥ ವೀರಯ್ಯನವರ ಪ್ರಥಮ ಪುತ್ರ ಚಿ॥ ಕೋಟಯ್ಯ ಎಂಬ ವರನಿಗೂ, ನೇಮತಿ ವಾಸಿಗಳಾದ ಎಕ್ಕನಹಳ್ಳಿಮಠದ ವೇ॥ ಈಶ್ವರಯ್ಯನವರ ದ್ವಿತೀಯ ಪುತ್ರಿ ಚಿ॥ ಸೌ॥ ಶಾರದಾಂಬಾ ಎಂಬ ವಧುವಿಗೂ ವಿವಾಹ ಮಹೋತ್ಸವವೂ ಸಹ ಕವುಲೇದುರ್ಗ, ಮಳಲಿ, ಏರಿಕೆ, ಮಠಗಳ ಶ್ರೀಗಳವರ ನೇತೃತ್ವದಲ್ಲಿ ವಿಧ್ಯುಕ್ತವಾಗಿ ವಿಶೇಷ ವೈಭವದಿಂದ ನೆರವೇರಿಸಲ್ಪಟ್ಟಿತು. ಈ ಶುಭ ಮುಹೂರ್ತ ಸಮಯದಲ್ಲಿ ಶ್ರೀಮದುಜ್ಜಯಿನೀ ಜಗದ್ಗುರು ಮಹಾಸನ್ನಿಧಿಯಿಂದ ವಟುವಿಗೂ ನೂತನ ವಧೂವರರಿಗೂ ಫಲಮಂತ್ರಾಕ್ಷತಾಪೂರ್ವಕವಾಗಿ ಅನುಗ್ರಹಿಸಿದ ಆಶೀರ್ವಚನ ನಿರೂಪವನ್ನು ಕೀರ್ತನಕೇಸರಿ ಕವಿಭೂಷಣೇತ್ಯಾದಿ ಬಿರುದಾಂಕಿತರಾದ ವೇ॥ ಗುಬ್ಬಿ ಶಿವರುದ್ರಶಾಸ್ತ್ರಿಗಳವರು ಓದಿ ಹೇಳಿದರು. ತರುವಾಯ ಶ್ರೀಮಠದ ಏಜಂಟರವರಾದ ವೇ॥ ಎ. ವಿ. ನಂಜುಂಡಯ್ಯನವರಿಂದ ಪ್ರಭಾಪೋಷಣಕ್ಕಾಗಿ ೧ ರೂ. ಸಮರ್ಪಿಸಲ್ಪಟ್ಟಿತು. ಮರುದಿವಸ ಬೆಳಗಿನ ೧೦ ಘಂಟೆಯಿಂದ ಶಾಸ್ತ್ರಿಗಳವರು 'ಚ್ಯವನಮಹರ್ಷಿ' ಎಂಬ ಶಿವಸಂಕೀರ್ತನೆಯನ್ನು ಬಹು ಸರಸವಾಗಿ ಅನುವಾದಮಾಡಿ ಸರ್ವರನ್ನೂ ಆನಂದಸಮುದ್ರದಲ್ಲಿ ಮುಳುಗಿಸಿದರು. ಈ ಮಹೋತ್ಸವಕ್ಕಾಗಿ ದೂರ ದೂರ ಪ್ರದೇಶಗಳಿಂದಲೂ ಸುತ್ತುಮುತ್ತಣ ಗ್ರಾಮಗಳಿಂದಲೂ ಬಂಧುಮಿತ್ರರೂ, ಲೌಕಿಕ ವೈದಿಕ ಮಹೋದಯರೂ ಆಗಮಿಸಿದ್ದರು.

ಪ್ರತ್ಯಕ್ಷದರ್ಶಿ

ಶ್ರೀಜಗದ್ಗುರು ರೇಣುಕಾಚಾರ್ಯಾಃ ಪ್ರಸೀದತು

ವಿವಾಹ ಮಹೋತ್ಸವ

ತೀರ್ಥಹಳ್ಳಿ ತಾ॥ ಶ್ರೀಮಳಲಿಮಠದಲ್ಲಿ ಮಠಾಧ್ಯಕ್ಷರಾದ ಶ್ರೀಗುರು ನಾಗಭೂಷಣಶಿವಾಚಾರ್ಯಸ್ವಾಮಿಗಳವರ ಉದಾರಾಶ್ರಯದಲ್ಲಿ ವೈಶಾಖ ಶುದ್ಧ ೪ ಬುಧವಾರ ಭಾವಿಕೈಮಠದ ವೇ॥ ಕೋಟಯ್ಯನವರ ಪುತ್ರ ಚಿ॥ ಚನ್ನಬಸವಾರಾಧ್ಯ ಎಂಬ ವರನಿಗೂ, ಭದ್ರಾವತಿಯಲ್ಲಿರುವ ಗೋಣೀಬೀಡುಮಠದ ವೇ॥ ಶಿವಮೂರ್ತಯ್ಯನವರ ಪುತ್ರಿ ಚಿ॥ ಸೌ॥ ನೀಲಾಂಬೆ ಎಂಬ ವಧುವಿಗೂ ವಿವಾಹ ಮಹೋತ್ಸವವು ವಿಧ್ಯುಕ್ತವಾಗಿ ಅತ್ಯಂತ ವೈಭವದಿಂದ ನೆರವೇರಲ್ಪಟ್ಟಿತು. ತತ್ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರ ಕಡೆಯಿಂದ ೨ ರೂ. ಗಳು ಸಮರ್ಪಿಸಲ್ಪಟ್ಟವು. ಈ ಸಮಾರಂಭಕ್ಕಾಗಿ ಬಂಧುಮಿತ್ರವರ್ಗದವರೂ, ಲೌಕಿಕ ವೈದಿಕ ಪದವೀಧರರೂ, ವಿಶೇಷವಾಗಿ ಆಹೂತರಾಗಿದ್ದರು. ಕಾರ್ಯದರ್ಶಿಗಳಾದ ಮುತ್ತೂರುಮಠದ ವೇ॥ ಶಿವಲಿಂಗಸ್ವಾಮಿಯವರು ಸಮಸ್ತಜನರನ್ನೂ ಸತ್ಕರಿಸಿ ಗೌರವಿಸಿದರು.

ಪ್ರತ್ಯಕ್ಷದರ್ಶಿ

ಮಂಡಿ ಸ್ಥಾಪನೆ

ತುಮಕೂರು ಡಿ॥ ತಿಪಟೂರಿನಲ್ಲಿರುವ ಪ್ರಸಿದ್ಧ ವರ್ತಕರಾದ ರಾಣಿಬೆನ್ನೂರು ಬುಕ್ಕ ಸೆಟ್ಟರ ಚನ್ನಬಸಪ್ಪನವರ ಮಕ್ಕಳು ಪುಟ್ಟಪ್ಪನವರು ತಾ॥ ೫-೫-೪೪ ನೇ ಶುಕ್ರವಾರ ಸಾಯಂಕಾಲ ತಿಪಟೂರಿನಲ್ಲಿ ಕಾಯಿಕೊಬರಿ ಮಂಡಿ ಸ್ಥಾಪನಾ ಪೂಜಾಕಾರ್ಯವನ್ನು ನೆರವೇರಿಸಿದರು. ಪೂಜಾಕಾರ್ಯವು ಕ್ರಮವಾಗಿ ವೇ॥ ಮುದ್ದೇನಹಳ್ಳಿಮಠದ ಎಂ. ಎಸ್. ಮರುಲಸಿದ್ಧಯ್ಯ ಮಾಸ್ಟರ್ ಅಜ್ಜಂಪುರ ಇವರ ವೈದಿಕತ್ವದಲ್ಲಿ ನಡೆಸಲ್ಪಟ್ಟಿತು. ಈ ಕಾರ್ಯಕ್ಕೆ ಸದರಿ ಪುಟ್ಟಪ್ಪನವರ ಗುರುಗಳಾದ ರಾಣಿಬೆನ್ನೂರಿನ ಮಠದ ವೇ॥ ರೇವಣಸಿದ್ಧಯ್ಯನವರೂ ದಯಮಾಡಿಸಿದ್ದರು. ಪುಟ್ಟಪ್ಪನವರು ಸ್ಥಾಪಿಸಿರುವ ಮಂಡಿಯು ಬಹಳ ಮುಂದುವರಿದು ಅವರ ಸಕಲ ಮನೋಭೀಷ್ಟವನ್ನು ಶ್ರೀಜಗದ್ಗುರು ಪಂಚಾಚಾರ್ಯರು ಅನುಗ್ರಹಿಸಲೆಂದು ಬೇಡುತ್ತೇನೆ.

ಪ್ರ.ಪ್ರತ್ಯಕ್ಷದರ್ಶಿ

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು। ಪಂಚಮಿಗೆ ೧೭ ವರ್ಷಗಳು ತುಂಬಿ ೧೮ನೆಯ ವರ್ಷವು ಪ್ರಾರಂಭವಾಗಿರುವುದು ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೬ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂ ಗಳನ್ನು ಮನಿಯಾರ್ಡರ ದ್ವಾರಾ ಕಳುಹಿಸಬೇಕು ಪತ್ರವ್ಯವಹಾರ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯಮಾಡಿ ತಪ್ಪದೆ ತಿಳುಹಿಸಬೇಕು ನಂಬರು ತಿಳಿಸದಿದ್ದರೆ ತೊಂದರೆಯಾಗುವದು

ಮ್ಯಾ —

ಪಂಚಾಚಾರ್ಯಪ್ರಭಾ.

೧೯೪೪ನೆಯ ಮೇ ತಾ ೧೫ನೇ ಸೋಮವಾರ

ಗುರುವರ್ಗದ ಕರ್ತವ್ಯ.

ಉತ್ತಮರಾದ ಉಪಾಧ್ಯಾಯರು ಬಾಲಕರನ್ನು ವಿದ್ಯಾಧಿಕರನ್ನಾಗಿಯೂ, ಗುಣಾಢ್ಯರನ್ನಾಗಿಯೂ ಮಾಡುವುದರಲ್ಲಿ ಹೇಗೆ ಮುಖ್ಯಕಾರಣರೋ ಹಾಗೆ ಮಠದವರ್ಮಾಧಿಕಾರವನ್ನು ವಹಿಸಿದ ಗುರುಗಳು ತಮ್ಮ ಮಠದ ಜನರನ್ನು ಸಂಸ್ಕಾರಸಂಪನ್ನರನ್ನಾಗಿಯೂ, ಅತಿಶಯಭಕ್ತಿಯುತರನ್ನಾಗಿಯೂ, ಸ್ವಧರ್ಮಾಸಕ್ತರನ್ನಾಗಿಯೂ, ಜ್ಞಾನಿಗಳನ್ನಾಗಿಯೂ ಮಾಡುವದರಲ್ಲಿ ಮುಖ್ಯಕಾರಣರಾಗಿರುತ್ತಾರೆ ಉತ್ತಮವಾದ ದೋಣಿಯನ್ನಾಶ್ರಯಿಸಿದ ಜನರು ಹೇಗೆ ಸುಖವಾಗಿ ನದಿಯನ್ನು ದಾಟುವರೋ ಹಾಗೆ ಸದ್ಗುರುಗಳನ್ನಾಶ್ರಯಿಸಿದ ಶಿಷ್ಯರು ಸಂಸಾರಸಾಗರವನ್ನು ದಾಟುವರು. ಗುರುಗಳಲ್ಲಿ ಆ ಶಕ್ತಿಯು ಧನಕನಕಾದಿವಸ್ತುಗಳಿಂದಲೂ, ಸೌಂದರ್ಯ ವೇಷಾದಿಗಳಿಂದಲೂ ಕಾಪಟ್ಯದಿಂದಲೂ, ವಾಗಾಡಂಬರದಿಂದಲೂ ಉಂಟಾಗುವದಿಲ್ಲ ಗುಣಗಳಿಂದಲೂ, ವಿದ್ಯೆಗಳಿಂದಲೂ, ಧರ್ಮಸಿದ್ಧಾಂತಗ್ರಂಥಾಭ್ಯಾಸದಿಂದಲೂ, ಧರ್ಮಾನುಷ್ಠಾನದಿಂದಲೂ, ತತ್ವಜ್ಞಾನಾನುಭವದಿಂದಲೂ ಉಂಟಾಗುತ್ತದೆ ಯಾರಲ್ಲಿ ಆ ಶಕ್ತಿಯು ಇರುವುದಿಲ್ಲವೋ ಅವರು ನಾಮತಃ ಗುರುಗಳೆನಿಸಿಕೊಂಡು ಮುಗ್ಧಜನರನ್ನು ಕಪಟೋಕ್ತಿಗಳಿಂದ ಸ್ವಾಧೀನರನ್ನು ಮಾಡಿಕೊಂಡು ಅವರಿಂದ ದ್ರವ್ಯವನ್ನಾರ್ಜಿಸಿ ಅದನ್ನು ತಮ್ಮ ಭೋಗಕ್ಕೂ, ತಮ್ಮ ಬಂಧುಗಳನ್ನು ಪೋಷಿಸುವದಕ್ಕೂ ವಿನಿಯೋಗಿಸುವರು. ಉತ್ತಮರಾದ ಪ್ರಭುಗಳು ಪ್ರಜೆಗಳಿಂದ ನ್ಯಾಯಾನುಸಾರವಾಗಿ ದ್ರವ್ಯವನ್ನಾರ್ಜಿಸಿ ಅದನ್ನು ಆ ಪ್ರಜೆಗಳ ಸುಖಕ್ಕಾಗಿಯೇ ಹೇಗೆ ಉಪಯೋಗಿಸುವರೋ ಹಾಗೆ ಆ ಶಕ್ತಿಯನ್ನು ಪಡೆದ ಗುರುಗಳು ಶಿಷ್ಯರಿಂದ ನ್ಯಾಯಾನುಸಾರವಾಗಿ ದ್ರವ್ಯವನ್ನು ಸಂಪಾದಿಸಿ ಅದನ್ನು ಅವರ ಧರ್ಮ, ವಿದ್ಯೆ ಮೊದಲಾದುವುಗಳ ವೃದ್ಧಿಗೋಸ್ಕರ ಉಪಯೋಗಿಸುವರು ಆದರೆ ಕುಲಶೀಲಾದಿಗಳಿಂದ ಉತ್ತಮರಾದ ಜನರಲ್ಲಿ ಯಾರಾದರೂ ಕಪಟಗುರುಗಳ ಸಂಬಂಧವನ್ನು ಹೊಂದಿದರೆ ಅವರು "ಸಂಸರ್ಗಜಾ ದೋಷಗುಣಾ ಭವಂತಿ" ಎಂದು ನ್ಯಾಯವಿರುವದರಿಂದ ಧರ್ಮರಹಿತರೂ ಅಜ್ಞಾನಿಗಳೂ ಆಗುವರು. ಅವರು ಇಹಲೋಕದಲ್ಲಿ ನಿಂದಿತರಾಗಿ, ಪರಲೋಕದಲ್ಲಿ ಸದ್ಗತಿಯನ್ನು ಹೊಂದುವದಿಲ್ಲ

ವೀರಶೈವವು ಶಿವೋಕ್ತವಾದುದರಿಂದ ಶಿವಮತವೆಂದೂ, ಶಿವಭಕ್ತರಿಂದಲೇ ಆಶ್ರಯಿಸಲ್ಪಡುವದಕ್ಕೆ ಯೋಗ್ಯವಾಗಿರುವದರಿಂದ ಶಿವಭಕ್ತಮತವೆಂದೂ ಪ್ರಸಿದ್ಧವಾಗಿ ಶಿವಪಂಚಮುಖೋದ್ಭೂತರಾದ ಶ್ರೀ ಜಗದ್ಗುರು ಪಂಚಾಚಾರ್ಯರಿಂದಲೇ ಸ್ಥಾಪಿತವಾಗಿ ಮೋಕ್ಷದಾಯಕವಾಗಿರುತ್ತದೆ. ಇದನ್ನಾಶ್ರಯಿಸಿದ ಜನರಿಗೆ ಸಂಸ್ಕಾರಗಳನ್ನು ಕೊಡುವವರಲ್ಲಿಯೂ ಶಿವಧರ್ಮಗತವಾದ ಗುರು, ಲಿಂಗ, ಜಂಗಮ, ಭಸ್ಮ, ರುದ್ರಾಕ್ಷಿ, ಮಂತ್ರ, ಪಾದೋದಕ, ಪ್ರಸಾದಗಳೆಂಬ ಅಷ್ಟಾವರಣ ಕ್ರಿಯೆಗಳನ್ನೂ ಲಿಂಗಾಚಾರ ಸದಾಚಾರ, ಶಿವಾಚಾರ, ಭೃತ್ಯಾಚಾರ ಗಣಾಚಾರಗಳೆಂಬ ಪಂಚಾಚಾರಗಳನ್ನೂ ಅಪ್ರಾಕೃತ ವರ್ಣಾಶ್ರಮಾಚಾರಗಳನ್ನೂ, ಷಟ್ಸ್ಥಲಲಿಂಗಾಂಗಸಮರಸಾತ್ಮಕವಾದ ಶಿವಜ್ಞಾನವನ್ನೂ ಉಪದೇಶಿಸುವುದರಲ್ಲಿ ಸದ್ಗುರುಗಳೇ ಶಕ್ತರಾಗಿರುತ್ತಾರೆ ಆ ಸದ್ಗುರುವಿನಲ್ಲಿ ವೇದವೇದಾಂಗಾದಿವಿದ್ಯಾವೈದುಷ್ಯ, ಶಿವಾದ್ವೈತಸಿದ್ಧಾಂತಪಾಂಡಿತ್ಯ, ಚತುಷ್ಷಷ್ಟಿತಂತ್ರಪ್ರಯೋಗನೈಪುಣ್ಯ, ಸತ್ಯವಾದಿತ್ವ, ಲೋಭಮೋಹರಾಹಿತ್ಯ, ಭ್ರಾಂತಿರಾಹಿತ್ಯ ನಿಶ್ಚಯಬುದ್ಧಿ, ಶಿವಧರ್ಮನಿಷ್ಠೆ, ಗುರುಪರಂಪರಾಗತ ಶಾಸ್ತ್ರೀಯಾಚಾರಸಂಪತ್ತಿ, ಶಿವಧ್ಯಾನಾಸಕ್ತಿ, ಭಸ್ಮತ್ರಿಪುಂಡ್ರರುದ್ರಾಕ್ಷಧಾರಣಾಸಕ್ತಿ, ಬಾಹ್ಯಾಂತರ್ಲಿಂಗಧಾರಣಸಂಪತ್ತಿ, ಬಾಹ್ಯಾಂತರ್ಲಿಂಗೋಪಾಸನೆ, ಏಕೋತ್ತರಶತಸ್ಥಲಜ್ಞಾನ, ಲಿಂಗಾಂಗಸಂಬಂಧವಿಚಾರ ಮೊದಲಾದ ಲಕ್ಷಣಗಳಿರಬೇಕು ಪ್ರಾಚೀನಕಾಲದಲ್ಲಿ ಇಂತಹ ಸದ್ಗುರುಗಳೇ ಈ ಮತೀಯರ ಮಠಾಧಿಕಾರಗಳನ್ನು ವಹಿಸುತ್ತಿದ್ದರಾದ್ದರಿಂದ ಆ ಕಾಲದಲ್ಲಿದ್ದ ಈ ಮತೀಯರಲ್ಲಿ ಶಿವಭಕ್ತಿ ಶಿವಧರ್ಮ ಶಿವಜ್ಞಾನಗಳು ಔನ್ನತ್ಯವನ್ನು ಹೊಂದಿದ್ದವೆಂದು ಹೇಳಬಹುದು ಆದ್ದರಿಂದ ಆ ಕಾಲದಲ್ಲಿ ಈ ಮತೀಯರಲ್ಲಿ ಹಲವರು ಮಹಾತ್ಮರೂ, ಹಲವರು ಗ್ರಂಥಕರ್ತರೂ ಆಗಿದ್ದರು ಆ ಗುರುಗಳಿಗಾದರೋ ಸ್ವಮತ ಪರಮತದ ಬಹುಮಂದಿರಾಜರು ಭಕ್ತರಾಗಿ ಅವರ ಮಠಗಳಿಗೆ ವೃತ್ತಿಮಾನ್ಯ ಮೊದಲಾದ ಅನುಕೂಲಗಳನ್ನು ಮಾಡಿಕೊಟ್ಟರು, ಸ್ವಲ್ಪಕಾಲದಿಂದ ಈ ಮತದಲ್ಲಿ ಅಂಥ ಸದ್ಗುರುಗಳ ಸಂಖ್ಯೆಯು ಕಡಿಮೆಯಾದುದರಿಂದ ಈ ಮತೀಯರಿಗೆ ಪರಮತೀಯರಿಂದ ಹಲವು ತೊಂದರೆಗಳು ಉಂಟಾಗುತ್ತ ಬಂದವು ಮತ್ತು ಈ ಮತದ ಜನರಲ್ಲಾದರೋ ಹಲವರು ಮೂಢರೂ ಅಸಂಸ್ಕಾರಿಗಳೂ ಆಗಿ ಸ್ವಧರ್ಮಗಳ ಸ್ವರೂಪಗಳನ್ನು ತಿಳಿಯದವರಾಗಿ ತಮ್ಮ ಗೋತ್ರಸೂತ್ರಪ್ರವರಶಾಖೆಗಳನ್ನೂ, ಶ್ರೀಜಗದ್ಗುರು ಪಂಚಾಚಾರ್ಯರ ಮಹತ್ವವನ್ನೂ ಅರಿಯದವರಾದರು. ಅವರಲ್ಲಿ ಕೆಲವರನ್ನು ಕಪಟಗುರುಗಳು ತಮ್ಮ ಕಪಟವೇದಾಂತೋಪದೇಶದಿಂದ ಸ್ವಾಧೀನರನ್ನು ಮಾಡಿಕೊಂಡು ಅವರಿಗೆ ವೇದವೇದಾಂಗಾದಿ ವಿದ್ಯೆಗಳಲ್ಲಿಯೂ ಸ್ವಧರ್ಮಗಳಲ್ಲಿಯೂ ಹೇಯಬುದ್ಧಿಯನ್ನು ಹುಟ್ಟಿಸಿ ದುರಾಚಾರಗಳನ್ನೇ ಬೋಧಿಸುತ್ತ ಸ್ವಾರ್ಥಪರರಾಗಿ ಧರ್ಮಘಾತುಕರಾಗಿರುವರು ಸದ್ಯಃ ಈ ಮತದಲ್ಲಿ ಕೆಲವರು ಸದ್ಗುರುಗಳು ತಮ್ಮ ಕರ್ತವ್ಯವನ್ನು ನೆರವೇರಿಸುತ್ತಿರುವದರಿಂದಲೇ ಈ ಮತದ ಜನರೆಲ್ಲರೂ ಕಪಟಗುರುಗಳ ವಶರಾಗಿಲ್ಲ ಆದರೆ ಸದ್ಗುರುಗಳ ಸಂಖ್ಯೆಗಿಂತ ಕಪಟಗುರುಗಳ ಸಂಖ್ಯೆಯು ವಿಶೇಷವಾಗಿರುವದರಿಂದ ಧರ್ಮಸುಧಾರಣೆಯು ನಿರ್ವಿಘ್ನವಾಗಿ ನೆರವೇರುತ್ತಿಲ್ಲ. ಆದ್ದರಿಂದ ಮಾಹೇಶ್ವರರು ತಮ್ಮ ವಟುಗಳನ್ನು ವೇದವೇದಾಂಗಾದಿ ವಿದ್ಯಾಸಂಪನ್ನರಾಗಿಯೂ ವೀರಶೈವಧರ್ಮಸಿದ್ಧಾಂತಗ್ರಂಥಗಳಲ್ಲಿ ಪಂಡಿತರನ್ನಾಗಿಯೂ ಮಾಡುವದಕ್ಕೋಸ್ಕರ ಪ್ರಯತ್ನಗಳನ್ನು ವಿಶೇಷವಾಗಿ ಅವಲಂಬಿಸಿದರೆ ಇನ್ನು ಸ್ವಲ್ಪಕಾಲದಲ್ಲಿಯೇ ಈ ಮತದಲ್ಲಿ ಸದ್ಗುರುಗಳ ಸಂಖ್ಯೆಯು ಹೆಚ್ಚಿ ಈ ಮತೀಯರಲ್ಲಿ ಧರ್ಮಾಭಿವೃದ್ಧಿಯುಂಟಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಚೀಣರಿಗೆ ಕಳವಳವುಂಟಾಗಿದೆ

ಚೀಣೀ ರಾಷ್ಟ್ರಕ್ಕೆ ಆರಾವರ್ತಿ ರಾಜಧಾನಿಯಾಗಿದ್ದ ಲೋಯಾಂಗ್ ನಗರವನ್ನು ಜಪಾನರು ಆಕ್ರಮಣ ಮಾಡಲು ಈಗ ನಗರಕ್ಕೆ ಸುಮಾರು ೬ ಮೈಲಿಗಳ ದೂರಕ್ಕೆ ಬಂದಿದ್ದಾರೆ. ಈ ನಗರದ ಪತನವು ಚೀಣೀಯರ ಭವಿಷ್ಯದಲ್ಲಿ ಕಳವಳವನ್ನುಂಟುಮಾಡುವುದು ಎಂದು ಹೇಳಲಾಗಿದೆ. ಪೀಪಿಂಗ್ ಹಾಂಕೊ ರೈಲ್ವೆಯ ಮುಖ್ಯ ಜಂಕ್ಷನ್ ಒಂದನ್ನು ಜಪಾನರು ಹಿಡಿದಿರುವುದಾಗಿ ಚುಂಕಿಂಗಿನ ಸರ್ಕಾರ ತಿಳಿಸುತ್ತದೆ ಈಗಾಗಲೇ ಲೋಯಾಂಗ್ ಜಪಾನರ ಕೈಸೇರಿರುವದಾಗಿಯೂ ಸುದ್ದಿಗಳು ಕೇಳಿಬರುತ್ತಿವೆ

ಯುದ್ಧವಾರ್ತೆ.

ಜಪಾನರನ್ನು ೧೯೪೭ರಲ್ಲಿ ಸೋಲಿಸ[ಬಹುದು]ಲಾಗುವುದು

"ಜರ್ಮನಿಯ ಮೇಲೆ ಈಗ ನಡೆಯಲಿರುವ ದಂಡಯಾತ್ರೆಯು ಬೇಗನೆ ವಿಜಯದಲ್ಲಿ ಮುಕ್ತಾಯವಾ[ದರೆ] ಜಪಾನರನ್ನು ೧೯೪೫ ಅಥವಾ ೧೯೪೭ರಲ್ಲಿ ಸೋಲಿ[ಸ]ಬಹುದು ಇಲ್ಲವಾದರೆ ಜಪಾನರ ಮೇಲಿನ ಆಕ್ರಮಣ[ವು] ಹಲ್ಲುಕಚ್ಚಿಕೊಂಡು ಪ್ರಾರಂಭದಿಂದ ಮತ್ತೆ ಕಾದಾಡ[ಬೇ]ಕಾಗುವುದು" ಎಂದು ನ್ಯೂಜೀಲ್ಯಾಂಡಿನ ಪ್ರಧಾನರಾ[ದ] ಫ್ರೇಜರವರು ಲಂಡನ್ನಿನಲ್ಲಿ ಹೇಳಿಕೆಯೊಂದನ್ನು [ಕೊ]ಟ್ಟಿರುವರು ೧೯೪೩ರಲ್ಲಿ ನ್ಯೂಜಿಲ್ಯಾಂಡಿನಲ್ಲಿದ್ದ ಅನೇ[ಕ] ಸೈನ್ಯಗಳನ್ನು ಬ್ರಿಟನ್ನಿಗೆ ಕಳುಹಿಸಲಾಗಿತ್ತು. [ಆ]ನಮ್ಮಲ್ಲಿ ಎರಡೇ ಎರಡು ವಿಮಾನವಿನಾಶಕ ಫಿರಂಗಿ[ಗಳಿ]ದ್ದುವು ವೆಲಿಂಗ್ಟನ್ನಿನಲ್ಲಿ ಒಂದು ಮತ್ತೊಂದೆಡೆಯ[ಲ್ಲಿ] ಒಂದು, ಆಗ ಜಪಾನರು ಬಯಸಿದ್ದರೆ ರಾಜಧಾನಿಯಾ[ದ] ವೆಲಿಂಗ್ಟನ್ ನಗರವನ್ನು ಭೂಪಟದಿಂದ ಅಳಿಸಬಹು[ದಾ]ಗಿತ್ತು ದೈವವಶಾತ್ ಹಾಗೆ ಆಗಲಿಲ್ಲವೆಂದೂ ಫ್ರೇಜ[ರ]ವರು ತಿಳಿಸಿದರು

ಬರ್ಮಾದಲ್ಲಿ ಜಪಾನರ ಸೋಲು

ಕಾಲಪಾಂಜಿ ನದಿಯ ಪೂರ್ವಕ್ಕೆ ಮಿತ್ರಪಡೆಗ[ಳು] ಆಕ್ರಮಣಕಾರ್ಯ ನಡೆಸುತ್ತಾ ಜಪಾನರ ಮದ್ದುಗುಂ[ಡು] ಶೇಖರಣೆಯನ್ನು ಇನ್ನಿತರ ಯುದ್ಧ ಸಲಕರಣೆಗಳನ್ನು ಮತ್ತು ಸರಬರಾಜು ಮಾಡುವ ೨೩೫ ಹೇಸರಕತ್ತೆಗಳನ್ನೂ ವಶಪಡಿಸಿಕೊಂಡಿರುವರು ಮಧ್ಯಬರ್ಮಾದ ಬ್ಹಾಮೋ ಮಿಟ್ಕಿನಾ ರಸ್ತೆಯಲ್ಲಿ ಶತ್ರುಪಡೆಯೊಂದರ ಮೇ[ಲೆ] ಮಿತ್ರಪಡೆಗಳು ಹಠಾತ್ತನೆ ಬಿದ್ದು ಅನೇಕ ಯೋಧರನ್ನು ಹತಮಾಡಿರುವವಲ್ಲದೆ ಶತ್ರುವಿನ ವ್ಯವಹಾರಕ್ಕೆ ಅನುಕೂಲವಾಗಿದ್ದ ಅನೇಕ ಲಾರಿಗಳನ್ನೂ ನಾಶಪಡಿಸಿವೆ ಇಂಡಾ ಮಿಟ್ಕಿನಾ ಭಾಮೋಗಳಿರುವ ತ್ರಿಕೋಣಾಕಾರ ಪ್ರದೇ[ಶ]ದಲ್ಲಿರುವ ಜಪಾನಿ ವ್ಯವಹಾರಮಾರ್ಗಗಳನ್ನು ವಿಮಾ[ನ]ಮೂಲಕ ಇಳಿಸಿದ್ದ ಚಿಂದ್ವಿತ್ ಪಡೆಗಳು ಧ್ವಂಸಮಾಡು[]ತ್ತಾ ಮಿಟ್ಕಿನಾ ಪ್ರದೇಶವನ್ನು ಜನರಲ್ ಸ್ಟೀಲ್‌ವೆ[ಲ್ಲ]ರವರ ಪಡೆಗಳು ಸುಲಭವಾಗಿ ಆಕ್ರಮಣ ಮಾಡ[ಲು] ಅನುಕೂಲಮಾಡಿವೆ. ಮಾಂಡಲೆಗೆ ಹೋಗುವ ರೈ[ಲು] ಮಾರ್ಗವನ್ನು ಇಂಡ್ಹಾ ಬಳಿ ಹತ್ತು ಕಡೆ ಕಿತ್ತು ಹಾ[ಕ]ಲಾಗಿದೆ ಈ ಭಾಗದಲ್ಲಿ ಚಿಕ್ಕ ಸೇತುವೆಗಳು ಧ್ವಂ[ಸ]ವಾಗಿವೆ ೫೦೦೦ ಗ್ಯಾಲನ್ ಪೆಟ್ರೋಲಿನ ಶೇಖರ[ಣೆ]ಯೊಂದು ಅಸ್ಫೋಟನವಾಯ್ತು. ಬ್ಹಾಮೋವಿಗೆ [] ಮೈಲಿ ದೂರದಲ್ಲಿರುವ ಷ್ವೆಲಿ ಸೇತುವೆಯನ್ನು ಮಿ[ತ್ರ] ವಿಮಾನಗಳು ನಾಶಮಾಡಿರುವುದಾಗಿ ಅಸೋಸಿಯೇಟೆ[ಡ್] ವಾರ್ತಾ ಸಂಸ್ಥೆಯ ವಿಶೇಷಬಾತ್ಮೀದಾರರು ತಿಳಿ[ಸು]ತ್ತಾರೆ

ಇಂಫಾಲ್ ಆಕ್ರಮಣ ಪ್ರಯತ್ನ ವಿಫಲವಾಯಿತು

ಇಂಫಾಲನ್ನು ಹಿಡಿಯಲು ಜಪಾನರು ಮಾಡುತ್ತಿ[ರುವ] ಪ್ರಯತ್ನವೆಲ್ಲವೂ ವಿಫಲವಾಗಿದೆ. ಕೋಹಿಮಾ ಕ್ಷೇ[ತ್ರ]ದಲ್ಲಿ ಕೋಹಿಮಾ ನಗರದ ಹೊರವಳಯದಲ್ಲಿ ಜಪಾನರು ಮಿತ್ರಸೈನಿಕರು ಒಂದೇ ಸಮನಾಗಿ ಬಡಿದಾಡುತ್ತಿದ್ದಾರೆ ಈಗ ಜಪಾನರು ಅತ್ಯಂತ ಕ್ರೌರ್ಯದಿಂ[ದ] ಕಾಳಗ ಮಾಡುತ್ತಿರುವುದಾಗಿ ೧೪ನೆಯ ಸೇನೆ[ಯ] ವೀಕ್ಷಕರೊಬ್ಬರು ತಿಳಿಸಿದ್ದಾರೆ ಅಲ್ಲದೆ ಶತ್ರುವಿಗೆ ಅಧಿಕ ಸಾವುನೋವು ಸಂಭವಿಸುತ್ತಿದೆ ಕೋಹಿಮಾ ಕ್ಷೇತ್ರದಲ್ಲಿ ಈಗಾಗಲೇ ೨ ಸಹಸ್ರ ಶತ್ರುಸೈನಿಕರು ಮ[ಡಿ]ದಿದ್ದಾರೆ. ಒಂದು ಬಂಕರ್ ಸ್ಥಾನದಿಂದ ಇನ್ನೊಂ[ದು] ಬಂಕರ್ ಸ್ಥಾನಕ್ಕೆ ಶತ್ರುವನ್ನು ಮಿತ್ರ ಸೈನಿಕರು ಹಿ[ಮ್ಮೆ]ಟ್ಟಿಸುತ್ತಿದ್ದಾರೆ ಮಿತ್ರ ಫಿರಂಗಿಗಳೂ, ಟ್ಯಾಂಕುಗ[ಳೂ] ಮಿತ್ರ ಸೈನಿಕರಿಗೆ ನೆರವಾಗಿ ಕಾರ್ಯಾಚರಣೆ ನಡೆಸುತ್ತಿ[ವೆ] ಇಂಫಾಲಿಗೆ ದಕ್ಷಿಣದಲ್ಲಿ ೨೫ ಮೈಲಿ ದೂರದಲ್ಲಿರು[ವ] ಜಪಾನಿ ಸ್ಥಾನಗಳ ಮೇಲೆ ಮಿತ್ರ ಸೈನಿಕರೂ, ವಿಮಾ[ನ]ಗಳೂ ಟ್ಯಾಂಕುಗಳೂ ಫಿರಂಗಿಗಳೂ ಧಾಳಿಯಾ[]ನ

ಟಿಡ್ಡಿಂ-ಇಂಫಾಲ್ ರಸ್ತೆಯಮೂಲಕ ಬರುತ್ತಿದ್ದ ಸರಬರಾಯಿಗಳ ಮೇಲೆ ಈ ಮುತ್ತಿಗೆ ನಡೆದದ್ದ ಶತ್ರುವಿಗೆ ಸೈನ್ಯ ನಷ್ಟವುಂಟಾಯಿತು ಕೊಹಿಮಾ ...ವಳಯದಿಂದ ಜಪಾನರನ್ನು ಓಡಿಸುತ್ತಿದ್ದರೂ, ...ನೆ ಅಲ್ಲಿ ಇನ್ನೂ ಸ್ವಲ್ಪ ಪ್ರಬಲವಾಗಿರುವಂತೆ ...ಂಡುಬರುತ್ತದೆ

...ಫಾಲ್ ಕ್ಷೇತ್ರದಲ್ಲಿ ಜಪಾನರು ನಡೆಸಿದ ಮುತ್ತಿಗೆ ... ಕಳೆದ ಹಲವು ವಾರಗಳಲ್ಲಿ ಆ ಕ್ಷೇತ್ರವೊಂದ ...ಅವರು ೬ ಸಹಸ್ರ ಸೈನಿಕರನ್ನು ಕಳೆದುಕೊಂಡರು ...ವಿನ ಸಂಖ್ಯೆಯಲ್ಲಿ ಮಿತ್ರವಿಮಾನಗಳ ದಾಳಿ ...ರ ಮಡಿದ ಶತ್ರು ಸೈನಿಕರಸಂಖ್ಯೆ ಸೇರಿಲ್ಲ ...ಲ್ ಟ್ರೈಲಿಗೂ ಚಿಂದ್ವಿನ್ ಬೆಟ್ಟ ಸಾಲಿಗೂ ...ಯಿರುವ ಕ್ಷೇತ್ರದಲ್ಲಿ ಜಪಾನರು ಪರಾಭವಗೊಂ ...ಅವರಿಗಿಷ್ಟು ನಷ್ಟ ಸಂಭವಿಸಿತು ಅರಣ್ಯ ಮತ್ತು ...ಗಳ ಮಧ್ಯದಲ್ಲಿ ಅವರು ಹೋರಾಡಿ ವಿಫಲರಾದರು. ...ಹಿನಾ ಕ್ಷೇತ್ರದಲ್ಲಿ ಕೂಡ ಶತ್ರುವಿನ ನಷ್ಟ ಏರು ...ಈ ಕ್ಷೇತ್ರದಲ್ಲಿ ಜಪಾನರು ತಮ್ಮ ಹಿಡಿತವನ್ನು ...ಕೊಳ್ಳುತ್ತಿದ್ದಾರೆ ಇನ್ನು ಕೆಲವು ವಾರಗಳೊಳಗಾಗಿ ...ರು ಇನ್ನೊಬ್ಬ ಶತ್ರುವಿನೊಡನೆಯೂ ಹೋರಾಡ ...ಗುತ್ತದೆ. ಮುಂಗಾರು ಮಳೆಯೇ ಆ ಶತ್ರು. ...ನರ ವ್ಯವಹಾರ ಮಾರ್ಗಗಳೆಲ್ಲಾ ಈಗ ನಿರುಪ ...ಗವಾಗಿವೆ. ಜೊತೆಗೆ ಅವರಿಗೆ ವಿಮಾನ ಬಲದ ...ಂಗದಂತೆ ಮತ್ತು ವಿಮಾನದಿಂದ ಸರಬರಾಯಿ ...ಂತೆ ತಡೆಯಲಾಗುತ್ತಿದೆ

ಸೆಬಾಸ್ಟಪೂಲ್ ಶತ್ರುಗಳ ರುದ್ರಭೂಮಿಯಾಗಿದೆ

...ಸ್ಸರೇಬಿಯ ಕ್ಷೇತ್ರದಲ್ಲಿ, ಕೆಳನೀಸ್ಟರ್ ನದಿಗೆ ...ಲಾಗಿ ರಷ್ಯನರು ಸ್ಥಾಪಿಸಿರುವ ಸೇತುವೆ ನೆಲೆಯ ... ಜರ್ಮನರು ಭಾರಿ ಪ್ರಮಾಣದ ಮುತ್ತಿಗೆ ... ನಡೆಸಿದರು ನೀಸ್ಟರ್ ನದಿಯ ಬಲ ದಡದಲ್ಲಿ, ...ಸ್ ಪ್ರೂಲಿಗೂ ಕಿಶನ್‌ಗೂ ಮಧ್ಯೆ ಜರ್ಮನರು ...ಗಳನ್ನು ಮಾಡಲಾರಂಭಿಸಿದರು. ಆದರೆ, ಶತ್ರುವಿಗೆ ...ರ ನಷ್ಟವನ್ನುಂಟುಮಾಡಿ ಅನೇಕ ಜರ್ಮನ್ ...ಕು ಪಡೆಗಳನ್ನೂ ಪದಾತಿ ಪಡೆಗಳನ್ನೂ ಹಿಮ್ಮೆಟ್ಟ ...ಯಿತು. ಇತರ ಕ್ಷೇತ್ರಗಳಲ್ಲಿ ಮುಖ್ಯ ಬದಲಾವಣೆ ...ಯೂ ಆಗಿಲ್ಲ. ಸೆಬಾಸ್ಟಪೂಲನ್ನು ಆಕ್ರಮಿಸಿದ ರಷ್ಯ ...ಅಲ್ಲಿರುವ ಜರ್ಮನ್ ಶವಗಳನ್ನು ಇನ್ನೂ ತೆಗೆಯು ...ತ್ತಿದ್ದಾರೆ ಎಲ್ಲೆಲ್ಲೂ ಶತ್ರು ಸೈನಿಕರ ಹೆಣ ಸಾಲು ...ಗಿ ಬಿದ್ದಿವೆ. ಬೀದಿಗಳಲ್ಲಿ ಮನೆಗಳಲ್ಲಿ ಕೊಳೆತು ...ತ್ತಿವೆ ಸೆಬಾಸ್ಟಪೂಲ್ ಶತ್ರುಗಳ ರುದ್ರಭೂಮಿ ...ದೆ ಎಂದು ಹೇಳಲಾಗಿದೆ

ಸ್ವೀಕಾರ

...ಳ್ಳಾರಿ ಡಿ|| ಹರಪನಹಳ್ಳಿ ಗ್ರಾಮದಲ್ಲಿರುವ ವೇ|| ...ಮಠದ ಚನ್ನವೀರಪ್ಪಯ್ಯನವರ ಉದಾರಾಶ್ರಯ ... ವಿಶೇಷ ವೈಭವದೊಡನೆ ನೆರವೇರಿದ ವಿವಾಹ ...ೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ...ಮುಸವನಕಲ್ಲಳ್ಳಿ ಪ್ರಸಾದಿಮಠದ ವೀರಭದ್ರಯ್ಯ ...ಂದ ತೆಗೆಯಿಸಿದ 1 ರೂ ಗಳು, ವೇ|| ಸೋಗಿ ...ರ್ಗ ಮಠದ ಗುರುನಂಜಪ್ಪಯ್ಯನವರಿಂದ ತೆಗೆ ...ದ 6 ರೂ ಗಳು ವೇ|| ಹಾಪನಹಳ್ಳಿ ತೆಗ್ಗಿನ ... ಚನ್ನವೀರಪ್ಪಯ್ಯನವರಿಂದ ತೆಗೆಯಿಸಿದ 5 ರೂ. ವೇ|| ಕೆ. ಜಿ. ಎಂ. ಗುರುಸಿದ್ಧಯ್ಯನವರಿಂದ ತೆಗೆ ...ದ 2 ರೂ ಗಳು, ವೇ|| ದಾವಣಗೆರೆ ಕಟ್ಟಿಗೆಹಳ್ಳಿ ... ಚನ್ನಬಸವಯ್ಯನವರಿಂದ ತೆಗೆಯಿಸಿದ 1 ರೂ ...25 ರೂ. ಗಳು ಶ್ರೀಮಂತ ಗುಗ್ರಿ ಹುಚ್ಚಪ್ಪ ...ದ್ವಾರಾ ತಲ್ಪಿರುತ್ತವೆ.

...ಡೂರು ಡಿ|| ಆಲ್ದೂರು ಗ್ರಾಮದಲ್ಲಿರುವ ಮ|| ರಾ|| ...ಪ್ಪನವರು ತಮ್ಮ ಸಹೋದರನ ವಿವಾಹಮಹೋ ...ವನ್ನು ವಿಶೇಷ ವೈಭವದಿಂದ ನೆರವೇರಿಸಿದ ಸಮಯ ...ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ ತೆಗೆ ...ದ 5 ರೂ. ವಧುವಿನ ಕಡೆಯಿಂದ ತೆಗೆಯಿಸಿದ ... ಒಟ್ಟು 7 ರೂ ಗಳು ಕಾಫಿಪ್ಲಾಂಟರ್ ಎ ... ಸ್ವಾಮಿಯವರ ದ್ವಾರಾ ತಲ್ಪಿರುತ್ತವೆ

ನಿಜಾಂ ಇಲಾಖಾ ರೇಕುಳಗಿ ಗ್ರಾಮದಲ್ಲಿರುವ ಹಿರಿಯ ಮಠಕ್ಕೆ ಸದರಿ ಮಠೋತ್ಪನ್ನರಾದ ಶ್ರೀ|| ಷ|| ಬ್ರ|| ಸದ್ಯೋಜಾತಶಿವಾಚಾರ್ಯರಿಗೆ ವೈಶಾಖ ಶುದ್ಧ ೧೦|| ಬುಧವಾರ ದಿವಸ ಪಟ್ಟಾಧಿಕಾರಮಹೋತ್ಸವವು ವಿಶೇಷ ವೈಭವದೊಡನೆ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ಸೌ|| ಭಾಗೀರಥೀಬಾಯಿ ಕಟಾಪ ಇವರ ದ್ವಾರಾ ತಲ್ಪಿರುತ್ತವೆ

ದಾವಣಗೆರೆಯಲ್ಲಿರುವ ಮ|| ರಾ|| ಮಾಗಾನಹಳ್ಳಿ ಬಸೆಟ್ಟೆಪ್ಪನವರ ದ್ವಿತೀಯಪುತ್ರ ಚಿ|| ರಾಮನಾಥಪ್ಪನಿಗೆ ಇದೇ ಗ್ರಾಮದ ಯಜಮಾನ ಬೇಳೂಡಿ ಮುರಿಗೇಂದ್ರಪ್ಪನವರ ಪುತ್ರಿ ಚಿ|| ಸೌ|| ಸರೋಜನಿದೇವಿಯನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ವೇ|| ಮಳೆಬೆನ್ನೂರು ಮಠದ ಹಾಲಸಿದ್ದಯ್ಯನವರ ದ್ವಾರಾ ತಲ್ಪಿರುತ್ತವೆ

ದಾವಣಗೆರೆ ಟವನ್ನಿನಲ್ಲಿರುವ ಮ|| ರಾ|| ಮಾಗಾನಹಳ್ಳಿ ಮಹಾಲಿಂಗಪ್ಪನವರ ಧರ್ಮಪತ್ನಿಯವರಾದ ಶಿವಮ್ಮನವರು ತಾ|| ೭-೩-೪೪ ನೇ ದಿವಸ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 5 ರೂ ಗಳು ವೇ|| ಮಳೆಬೆನ್ನೂರು ಮಠದ ಹಾಲಸಿದ್ಧಯ್ಯನವರ ದ್ವಾರಾ ತಲ್ಪಿರುತ್ತವೆ

ತೀರ್ಥಹಳ್ಳಿ ತಾ|| ಮಳಲಿ ಮಠದಲ್ಲಿ ಬಾವಿಕ್ಕೆ ಮಠದ ವೇ|| ಕೋಟಯ್ಯನವರ ಪುತ್ರ ಚಿ|| ಚನ್ನಬಸವಯ್ಯನಿಗೆ ಭದ್ರಾವತಿಯಲ್ಲಿರುವ ಗೋಣಿಬೀಡು ಮಠದ ವೇ|| ಶಿವಮೂರ್ತಯ್ಯನವರ ಪುತ್ರಿ ಚಿ|| ಸೌ|| ನೀಲಾಂಬೆಯನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ವಧೂವರರ ಕಡೆಯಿಂದ ಸಮರ್ಪಿಸಲ್ಪಟ್ಟ 2 ರೂ ಗಳು ತೀರ್ಥಹಳ್ಳಿ ತಾ|| ಕೌಲೇದುರ್ಗದ ಮಹಂತಿನಮಠದಲ್ಲಿ ವೇ|| ಮಲಗೋಡುಮಠದ ವೀರಯ್ಯನವರ ದ್ವಿತೀಯ ಪುತ್ರ ಚಿ|| ಈಶ್ವರಯ್ಯನ ಮಾಹೇಶ್ವರದೀಕ್ಷಾಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂ ಒಟ್ಟು 3 ರೂ ಗಳು ಗುಬ್ಬಿ ಶಿವಕಥಾಪಂಡಿತ ವೇ|| ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ

ಅಜ್ಜಂಪುರದ ನಿರಂಜನ ಸೆಟ್ರುಹಾಲಪ್ಪನವರು ಅಜ್ಜಂಪುರದ ಗುರುಪಾದಪ್ಪನವರ ಮಲ್ಲಪ್ಪನವರ ಪುತ್ರ ಬಸಪ್ಪನಿಗೂ ಮತ್ತು ಸೊಲ್ಲಾಪುರದ ಸೆಟ್ರುಸಿದ್ಧರಾಮಪ್ಪನವರ ಪುತ್ರಿ ಚಿ|| ಸೌ|| ಗಂಗಮ್ಮನಿಗೂ ನಡೆದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿ ಮತ್ತು ತಿಪಟೂರಿನ ಪ್ರಸಿದ್ಧ ವರ್ತಕರಾದ ರಾಣೆಬೆನ್ನೂರು ಬುಕ್ಕಸೆಟ್ಟರ ಚನ್ನಬಸಪ್ಪನವರ ಮಕ್ಕಳು ಮ|| ರಾ|| ಪುಟ್ಟಪ್ಪನವರು ತಿಪಟೂರಿನಲ್ಲಿ ಹೊಸದಾಗಿ ಕಾಯಿ ಕೊಬರಿ ಮಂಡಿಯನ್ನು ತೆರೆದ ಸಂತೋಷ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿ ಒಟ್ಟು 2 ರೂ. ಗಳು ಮುದ್ದೇನಹಳ್ಳಿ ಮಠದ ಎಂ. ಎನ್. ಮರುಳಸಿದ್ಧಯ್ಯನವರ ದ್ವಾರಾ ತಲ್ಪಿರುತ್ತವೆ.

ಗುಲಬರ್ಗಾ ಡಿ|| ರೇವಗೀಕ್ಷೇತ್ರದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವೇ|| ಶಿವಲಿಂಗಸ್ವಾಮಿ ಪುರೋಹಿತ ಇವರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಡಿ|| ನರಗುಂದ ಶ್ರೀ ವೀರಶೈವೋತ್ತೇಜಕ ಜ್ಯೋತಿಷ ಪಾಠಶಾಲಾಧ್ಯಾಪಕ ಶ್ರೀಗವಿಗಯ್ಯಶಾಸ್ತ್ರಿ ಕೊಂಗವಾಡ ಇವರು ಶಿವಾಧೀನರಾದ ಸಮಯದಲ್ಲಿ ಮ|| ರಾ|| ಗೌಡಪ್ಪಗೌಡ ಪರ್ವತಗೌಡ ಹಾಲಪ್ಪ ಗೌಡರ ಕೊಂಗವಾಡ ಇವರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ವೇ|| ಚನ್ನಕವಿ ಹಿರೇಮಠ ಸೂಡಕೋಡ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ

ಮದ್ರಾಸ್ ಹೈಕೋರ್ಟಿನಲ್ಲಿ ಚಿದಿರೆಮಠದವರ ವಿಜಯ

ಬೆಜವಾಡ ನಗರದಲ್ಲಿರುವ ಇನಾಂ ಭೂಮಿ ವಗೈರೆ ಆಸ್ತಿಯು ತಮ್ಮ ವ್ಯಕ್ತಿಗತವಾದ ಸಂಪೂರ್ಣಾಧಿಕಾರವುಳ್ಳದ್ದೆಂದು ಶಂ|| ಚಿದಿರೆಮಠದ ವೀರಭದ್ರಶಾಸ್ತ್ರಿಗಳು ಐದುವರ್ಷಗಳಿಂದಲೂ ಕೋರ್ಟಿನಲ್ಲಿ ವಾದಿಸುತ್ತಿದ್ದರು. ಪ್ರತಿವಾದಿಗಳಾದ ಮದ್ರಾಸು ರಿಲಿಜಿಯಸ್ ಎಂಡೋಮೆಂಟ್ ಬೋರ್ಡಿನವರು ಸದರಿ ಆಸ್ತಿ ಧರ್ಮಾದಾಯವೆಂತಲೂ ಸಾರ್ವಜನಿಕವೆಂತಲೂ ಹೈಕೋರ್ಟಿನಲ್ಲಿ ಅಪೀಲು ಮಾಡಿ (331/44) ಪ್ರತಿಭಟಿಸಿದರು ಆದರೆ ಆನರಬಲ್ ಜಸ್ಟಿಸ್ ಶ್ರೀ ಬಿ ಸೋಮಯ್ಯ ಜಡ್ಜಿಯವರು ಈ ವಿಷಯವನ್ನು ಕೂಲಂಕಷವಾಗಿ ವಿಮರ್ಶಿಸಿ ಸದರಿ ಇನಾಂಭೂಮಿಯು ಸದರಿ ಶಾಸ್ತ್ರಿಗಳ ವ್ಯಕ್ತಿಗತ (ಪರ್ಸನಲ್) ವಾದುದೆಂತಲೂ ಸ್ವಾಮಿತ್ವದ ಸರಿಯಾದ ಹಿರಸತ್ವವುಂಟೆಂತಲೂ ಸಾರ್ವಜನಿಕವಾಕ್ಕೆ ಇದಕ್ಕೆ ಸಂಬಂಧವಿಲ್ಲವೆಂತಲೂ ಚನ್ನಾಗಿ ನಿರ್ಣಯಿಸಿಬಿಟ್ಟಿದ್ದಾರೆ. ಇದರಿಂದ ಬೋರ್ಡಿನವರು ಮಠಮಂದಿರಗಳಮೇಲೆ ಸಾಗಿಸುತ್ತಿರುವ ಕ್ರಿಯೆಗಳಿಗೆ ಈ ತೀರ್ಮಾನವು ಪ್ರತಿರೋಧಕವಾಗಿದೆ. ಚಿದಿರೆಮಠದವರ ಶಿಷ್ಯಸಮೂಹವು ಶ್ರೀಗುರು ವಿಜಯವನ್ನು ಅಭಿನಂದಿಸುತ್ತಿದೆ.

ಓರ್ವ ಬೆಜವಾಡ ವೀರಶೈವ

|| ಶ್ರೀಜಗದ್ಗುರು ಪಂಚಾಚಾರ್ಯ ಪ್ರಸೀದಂತು ||

ಪಟ್ಟಾಭಿಷೇಕಮಹೋತ್ಸವ

ರೇಕುಳಗಿ ನಿಜಾಂಸ್ಟೇಟ್

ತಾ|| ೩-೫-೪೪ನೆಯ ಬುಧವಾರ ರೇಣುಕ ಶಾಖಾನುವರ್ತಿಯಾದ ರೇಕುಳಗಿ ಹಿರೇಮಠದಲ್ಲಿ ಪಟ್ಟಾಭಿಷೇಕಮಹೋತ್ಸವವು ಒಳ್ಳೆಯ ವೈಭವದಿಂದ ನೆರವೇರಿತು ಬುಧವಾರ ಮಧ್ಯಾಹ್ನ ಹನ್ನೆರಡು ಘಂಟೆಗೆ ಶ್ರೀ|| ಷ|| ಬ್ರ|| ಚನ್ನವೀರಶಿವಾಚಾರ್ಯರು ಕಿಲ್ಲೆದಮಠ ರಾಯಚೂರು ಇವರ ನೇತೃತ್ವದಲ್ಲಿ ಶ್ರೀ|| ಷ|| ಬ್ರ|| ಸದ್ಯೋಜಾತಶಿವಾಚಾರ್ಯರಿಗೆ ನೂತನಾಧಿಕಾರವು ಮಾಡಲ್ಪಟ್ಟಿತು ವೇ|| ಮಣೂರು ಮಲ್ಲಿಕಾರ್ಜುನಶಾಸ್ತ್ರಿಗಳು ಸೊಲ್ಲಾಪುರ, ವೇ|| ಬಸವಲಿಂಗಶಾಸ್ತ್ರಿಗಳು ರಾಯಚೂರು, ವೇ|| ಸಿದ್ಧಲಿಂಗಸ್ವಾಮಿ ಹಿರೇಮಠ ಕಡಗೋಳ್ ಇವರ ವೈದಿಕತ್ವದಲ್ಲಿ ಅಧಿಕಾರವು ಕ್ರಮವಾಗಿ ನೆರವೇರಿಸಲ್ಪಟ್ಟಿತು ಶ್ರೀ ಷ|| ಬ್ರ|| ಸಿದ್ಧಲಿಂಗ ಶಿವಾಚಾರ್ಯರು ದಾರುಕಶಾಖಾಮಠ ರಂಜೇರಿ, ಶ್ರೀ ಷ|| ಬ್ರ|| ಜೈನಾಪುರ ಶ್ರೀಗಳು, ಷ|| ಬ್ರ|| ಚಿನದೇಮಠದ ಶ್ರೀಗಳು, ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಕಟಕ ಚಿಂಚೋಳಿ ಮೊದಲಾದ ಗುರುಮೂರ್ತಿಗಳು ಆಗಮಿಸಿದ್ದಲ್ಲದೆ ಶ್ರೀ ಬಾಬಾಸಾಹೇಬ ನಾರದ ಸೊಲ್ಲಾಪುರ, ಶ್ರೀ|| ಮಡಿವಾಳಪ್ಪನವರು ಶೇಟೆ ರಂಜೇರಿ, ಶ್ರೀ ಮಲ್ಲಿಕಾರ್ಜುನಪ್ಪ ಗಂಭೀರೆ, ಶ್ರೀರಾಮಶೆಟ್ಟೆಪ್ಪ ಭೈರಪ್ಪ, ವೇ|| ಸಿದ್ಧಯ್ಯ ಹಿರೇಮಠ ಬಾಜನಳ್ಳಿ, ವೇತಿಕೇಂದ್ರಶೆಟ್ಟಿ ಬಿದರಕರ್, ಸೌ|| ಭಾಗೀರಥೀಬಾಯಿ ಕಟಾಪ, ಮಡಿವಾಳಸ್ವಾಮಿ ರಂಜೇರಿ, ಮಹಂತಸ್ವಾಮಿ ಮನ್ನಳ್ಳಿ ಇನ್‌ಸ್ಪೆಕ್ಟರ್. ಪೋಲೀಸ ಪಾಟೀಲ್, ಶ್ರೀ ಸೂರೊಂದಪ್ಪ ಪಟವಾರಿ, ವೀರಭದ್ರಪ್ಪ, ಮಹಾರುದ್ರಪ್ಪ ಪಟೇಲ್, ಚನ್ನಬಸಪ್ಪ ಜೋರಾಳ, ಸಿದ್ಧಯ್ಯ ಹಿರೇಮಠ ಹುಮನಾಬಾದ್ ಮೊದಲಾದವರು ಅತ್ಯಂತ ಭಕ್ತಿಯಿಂದ ಗುರುಸೇವೆಯನ್ನು ಮಾಡಿ ಧನ್ಯರಾದರು ೪೦ ಜನರಿಗೆ ದೀಕ್ಷೆ, ಮಾಹೇಶ್ವರದೀಕ್ಷಾದಿಗಳನ್ನು ಮಾಡಿಸಿದರು. ನೂತನಾಧಿಕಾರವಾದಮೇಲೆ ಗಣಾರಾಧನೆಯಾಯಿತು ತಾ|| ೫-೫-೪೪ನೆಯ ಶುಕ್ರವಾರ ಸಾಯಂಕಾಲ ಆರು ಘಂಟೆಗೆ ನೂತನ ಶ್ರೀಗಳ ತಮ್ಮಂದಿರಾದ ಶ್ರೀ ಶಿವಶಂಕರಪ್ಪಯ್ಯನವರ ಲಗ್ನಾರಂಭವು ಒಳ್ಳೆಯ ವೈಭವದಿಂದ ನಡೆಯಿತು ಆಮೇಲೆ ಶ್ರೀ ಬಾಬಾಸಾಹೇಬ ನಾರದ ಇವರ ಸಮ್ಮತಿಯ ಮೇರೆಗೆ ಸದರೀ ಮಠದಲ್ಲಿ ಸಂಸ್ಕೃತ ಪಾಠಶಾಲೆಯು ಸ್ಥಾಪನವಾಗಬೇಕೆಂದು ವೇ|| ಬಸವಲಿಂಗಶಾಸ್ತ್ರಿಗಳವರು ಭಾಷಣಮಾಡಿದರು ಇದೇ ವಿಷಯದಮೇಲೆ ಸೌ|| ಭಾಗೀರಥೀಬಾಯಿ ಕಟಾಪ ಇವರ ಭಾಷಣವಾದ ಮೇಲೆ

ನೂತನಾಧಿಕಾರಿಗಳಾದ ಶ್ರೀಗಳು ಸಮಾಜಕ್ಕೂ ತಮಗೂ ಇರುವ ಸಂಬಂಧವನ್ನು ಉಪದೇಶಿಸಿದರು ಆಮೇಲೆ ಶ್ರೀ|| ಷ|| ಬ್ರ|| ವಿರೂಪಾಕ್ಷಶಿವಾಚಾರ್ಯರು ಮಾಸೂರು ಹಿರೇಮಠ ಇವರು ಮಠದ ಶಿಷ್ಯಮಂಡಳಿಯವರ ಮೊದಲಾದವರ ಆಭಾರವುನ್ನಿಸಿ ಎಲ್ಲರಿಗೂ ಶ್ರೀಗಳ ಕಡೆಯಿಂದ ಆಶೀರ್ವಾದವನ್ನಿತ್ತರು ಈ ಮಹಾಕಾರ್ಯಕ್ಕಾಗಿ ೮ ೧೦ ಸಾವಿರದ ಮೇಲೆ ಜನರು ಸೇರಿದ್ದರು ಈ ಶುಭಸಮಯದಲ್ಲಿ ಗುರುತತ್ವವನ್ನು ಜಗತ್ತಿನಲ್ಲಿ ಪ್ರಕಾಶಪಡಿಸುತ್ತಿರುವ ಪಂಚಾಚಾರ್ಯ ಪ್ರಭಾಪತ್ರಿಕೆಗೆ ೫ ರೂಗಳು ಸಮರ್ಪಿಸಲ್ಪಟ್ಟವು

ಸಿದ್ಧಲಿಂಗಶಿವಾಚಾರ್ಯರು
ದಾರುಕಶಾಖಾಮಠ, ಬೇಣಿರಂಜೇರಿ

ಚೋರತಪಸ್ವಿಯ ದುರ್ವರ್ತನಕ್ಕೆ ಧಿಕ್ಕಾರ

ಚೋರತಪಸ್ವಿಯ ನಿಜವಾದ ಸ್ವರೂಪವು ಮೊದಲು ಯಾರಿಗೂ ಸರಿಯಾಗಿ ತಿಳಿದಿರಲಿಲ್ಲ ಈಗೀಗ ಈತನ ನಿಜಸ್ವರೂಪವು ಬೈಲಿಗೆ ಬರಹತ್ತಿವೆ ಈ ಕಳ್ಳತಪಸ್ವಿಯು ಮೊದಲು ಬಹು ನಿರಾಶಾ ಪುರುಷನಂತೆ ನಟಿಸಹತ್ತಿ ಜನರಲ್ಲಿ ಒಂದುವಿಧವಾದ ಮಾಯಾಜಾಲವನ್ನೊಡ್ಡಿದನು ಈ ಮಾಯಾಜಾಲಕ್ಕೆ ಬಹುಜನರು ಲಿಬಿದ್ದರು ಈ ಕಳ್ಳತಪಸ್ವಿಯು ೨೪ ಘಂಟೆಗಳಲ್ಲಿಯೂ ಪ್ರಶ್ನದ ಜಪವನ್ನೇ ಮಾಡುತ್ತಿರುವನು ಧನ, ದನ, ಧನ, ಧನ, ಧನ ಎಂದು ಜಪಿಸುವುದೇ ಈತನ ಮಹಾಮಂತ್ರ! ಇದೇ ಈತನ ಮಹಾನುಷ್ಠಾನ! ಈ ವಿಧವಾದ ಕೃತ್ರಿಮವರ್ತನದಿಂದ ಏನೂ ಅರಿಯದ ಮುಗ್ಧಭಕ್ತರನ್ನು ಮಬ್ಬಿಗೆ ಹಾಕಿ ಅವರಿಂದ ದುಡ್ಡನ್ನು ಸೆಳೆಯುತ್ತಿರುವನು ಈ ದುಡ್ಡಿನಮದದಿಂದ ಈತನಲ್ಲಿದ್ದ ಮೊದಲಿನ ಸ್ವಭಾವವು ಲಯವಾಗಿ ದುರಹಂಕಾರವು ಹೆಚ್ಚಿ, ದುರಭಿಮಾನವು ಮೇರೆದಪ್ಪಿಹೋಗಿದೆ ಈತನ ಈ ವಿಧವಾದ ದುರಹಂಕಾರವನ್ನು ಕಂಡು ಈತನಲ್ಲಿ ಪ್ರೀತಿಯನ್ನಿಟ್ಟಿರುವವರೆಲ್ಲರೂ ದೂರಾಗುತ್ತ ನಡೆದಿರುವರು ವನವು ಹಾಳಾಗುವ ಕಾಲಕ್ಕೆ ಮಂಗನಮೋತಿಯ ಕಾಯಿಯು ಹುಟ್ಟಿದಂತೆ ಈತನಿಗೆ ಈ ವಿಧವಾದ ದುರಭಿಮಾನವು ಹುಟ್ಟಿರುವುದು ಈತನ ನಾಶಕ್ಕೆಂದೇ ಹೇಳಬೇಕಾಗಿದೆ ಈ ಮಹಾಪುರುಷನು ಇತ್ತೀಚೆಗೆ ಧರ್ಮಶಾಸ್ತ್ರ ವಿರುದ್ಧವಾಗಿ ನರಕಹೇತುವಾದ ಜಾತಿಸಾಂಕರ್ಯಕಾರ್ಯದಲ್ಲಿ ತೊಡಗಿರುವನು ಶಿಷ್ಯರ ಮನೆಗಳ ಮರಾಶೆಯಿಂದ ಇಂತಹ ನೀಚಕಾರ್ಯದಲ್ಲಿ ತೊಡಗಿ, ಪೂರ್ವದಲ್ಲಿ ಮಾಂಸಭಕ್ಷಕರಾಗಿದ್ದು ಇತ್ತೀಚೆಗೆ ಒಬ್ಬ ವಿರಕ್ತನಿಂದ ಲಿಂಗವನ್ನು ಕಟ್ಟಿಸಿಕೊಂಡಿರುವ ನಿಷಿದ್ಧಜಾತಿಯವರ ಮನೆಯ ಅನ್ನವನ್ನು ತಿನ್ನಲಿಕ್ಕೆ ಬಹು ಹಂಬಲಿಸುತ್ತಿರುವನು

ಈ ರೀತಿ ವೈದಿಕಧರ್ಮವನ್ನು ಹಾಳುಮಾಡುತ್ತಿರುವ ಇಂತಹ ಹಂಡಬಂಡಜಾತಿಯ ತಪಸ್ವಿಗೆ ಧಿಕ್ಕಾರವಿರಲಿ! ಜಾತಿಸಾಂಕರ್ಯವನ್ನು ಮಾಡಬೇಡವೆಂದು ಬುದ್ಧಿವಾದವನ್ನು ಹೇಳುವವರ ಮೇಲೆ ಚೀನದೇಶದ ಕಟುವಾಳಿ ಹೆಂಗಸಿನಂತೆ ಹಾರಿ ಹಾರಿ ಬೀಳುವ ಸ್ತ್ರೀಸ್ವಭಾವದ ಕಳ್ಳತಪಸ್ವಿಗೆ ದಿಕ್ಕಾರವಿರಲಿ! ಅಲ್ಪಕ್ಷೀರಾಹಾರಿಯಾಗಿ ಅನುಷ್ಠಾನಮಾಡುತ್ತೇನೆಂದು ಜನರ ಮುಂದೆ ಹೇಳುತ್ತ, ಒಳಗೊಳಗೆ ಅಂಟಿನ ಉಂಡಿಗಳನ್ನೂ ನಾನಾವಿಧವಾದ ಪೌಷ್ಟಿಕಪದಾರ್ಥಗಳನ್ನೂ ಚಪಾತಿಗಳನ್ನೂ ಚಪ್ಪರಿಸುತ್ತ ಅಜೀರ್ಣವಾಗಬಾರದೆಂದು ಪ್ರತಿದಿವಸವೂ ಜುಲಾಬಿನ ಗುಳಿಗೆಗಳನ್ನು ನುಂಗುತ್ತಿರುವ ಚೋರತಪಸ್ವಿಗೆ ಧಿಕ್ಕಾರವಿರಲಿ! ಈ ಚೋರತಪಸ್ವಿಯ ಅಮಂಗಲಚರಿತ್ರವು ಇನ್ನೂ ಅಸಾಧ್ಯವಾಗಿರುವುದು ಇಷ್ಟಕ್ಕೇ ಎಚ್ಚತ್ತು ಈತನು ತನ್ನ ವಕ್ರಮಾರ್ಗವನ್ನು ಬಿಡುವುದು ಒಳ್ಳೆಯದು. ಇಲ್ಲದಿದ್ದರೆ ಮಹಾಪ್ರಹಾರವು ಸಿದ್ಧವೇ ಇರುವದು ಮಹಾಮಂಡಾಪರ್ವತಗಳೇ ಪುಡಿಪುಡಿಯಾಗುತ್ತಿರುವಾಗ ಚೀನೀಹೆಂಗಸಿನಂತಿರುವ ಈ ಮಂಗನ ಪಾಡೇನು?

ಓರ್ವ ಗುರುಭಕ್ತ

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವ, ರೇವಗಿ

ಗುಲ್ಬರ್ಗಾ ಜಿ: ರೇವಗಿ (ರೇವಣಗಿರಿ) ಕ್ಷೇತ್ರದಲ್ಲಿ ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಸಹಾ ಕಲ್ಯಾಣ ಕಟ್ಟಿಮನಿ ಹಿರೇಮಠ ಜೇಲೂರು ಶ್ರೀಗುರುಲಿಂಗ ಶಿವಾಚಾರ್ಯರ ನೇತೃತ್ವದಲ್ಲಿ ತಾ|| ೬ 3 44 ನೆಯ ದಿವಸ ಜಯಂತೀಮಹೋತ್ಸವವು ವಿಶೇಷ ವೈಭವದೊಡನೆ ನೆರವೇರಿತು, ಪ್ರಾತಃಕಾಲ ಜಗದಾಚಾರ್ಯರ ಲಿಂಗೋದ್ಭವಮೂರ್ತಿಗೆ ವೇದಮೂರ್ತಿ ಚಂದ್ರಯ್ಯ ಪುರಾಣಿಕ ಸುಲೇಪೇಟ ಇವರಿಂದ ರುದ್ರಾಭಿಷೇಕವು ಮಾಡಲ್ಪಟ್ಟಿತು ಮಧ್ಯಾಹ್ನ ಗಣಾರಾಧನೆಯಾಯಿತು ಶ್ರೀಜಗದಾಚಾರ್ಯರ ದೇವಸ್ಥಾನವು, ರಂಭಾಸ್ತಂಭಗಳಿಂದಲೂ ನಾನಾವಿಧವಾದ ಪಲ್ಲವಗಳಿಂದಲೂ ಅಲಂಕರಿಸಲ್ಪಟ್ಟಿತ್ತು ಈ ಮಹೋತ್ಸವಕ್ಕಾಗಿ ಸುತ್ತುಮುತ್ತಲಿನ ಗ್ರಾಮಗಳ ಜನರು ಆಗಮಿಸಿದ್ದರು ರಟಕಲ್ ಗ್ರಾಮದ ಭಜನಸಂಘದವರು ಭಜನೆಯನ್ನುಮಾಡಿ ಸರ್ವರನ್ನೂ ಸಂತೋಷಪಡಿಸಿದರು ಛತ್ರಚಾಮರಾದಿ ಸಕಲ ಬಿರುದಾವಲಿಗಳೊಡನೆ ಆಚಾರ್ಯಮೂರ್ತಿಯ ಪಲ್ಲಕ್ಕಿ ಉತ್ಸವವು ಹೊರಟು ಕಮರೀಮಠವನ್ನು ತಲಪಿ, ಪುನಃ ದೇವಸ್ಥಾನಕ್ಕಾಗಮಿಸಿತು ಅನಂತರ ಶ್ರೀಸ್ವಾಮಿಯ ಮೂರ್ತಿಯನ್ನು ಪುಷ್ಪರಥದಲ್ಲಿಟ್ಟು ಉತ್ಸವವನ್ನು ಮಾಡಲಾಯಿತು ಈ ಉತ್ಸವಕ್ಕಾಗಿ ಪೋಲೀಸು ಅಧಿಕಾರಿಗಳು ಆಗಮಿಸಿ ಸರಿಯಾದ ವ್ಯವಸ್ಥೆಯನ್ನಿಟ್ಟಿದ್ದರು ಉತ್ಸವವು ಮುಗಿದಮೇಲೆ ಸಭೆಸೇರಿ ವೇ|| ಪುರಾಣಿಕ ಚಂದ್ರಯ್ಯನವರು ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ ವಿಷಯವನ್ನು ಕುರಿತು ಸರಸವಾಗಿ ಭಾಷಣಮಾಡಿ ಸರ್ವರನ್ನೂ ಆನಂದಗೊಳಿಸಿದರು ಅನಂತರ ಮಂಗಲವಾಗಿ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಶಿವಲಿಂಗಶರ್ಮಾ ಪುರೋಹಿತ
ರೇವಗೀಕ್ಷೇತ್ರ

ದುಃಖವಾರ್ತೆ

ದಾವಣಗೆರೆ ಪೇಟೆವಸ್ತಿನಲ್ಲಿರುವ ಮ|| ರಾ|| ಮಾಗಾನಹಳ್ಳಿ ಮಹಾಲಿಂಗಪ್ಪನವರ ಧರ್ಮಪತ್ನಿಯವರಾದ ಸೌ|| ಶಿವಮ್ಮನವರು ತಾ|| ೭ ೩ ೧೯೪೪ನೆಯ ಮಂಗಳವಾರ ಸಾಯಂಕಾಲ ೮ ಘಂಟೆಗೆ ಶಿವಾಧೀನರಾದರೆಂಬ ವಿಷಯವನ್ನು ಒರೆಯಲು ವ್ಯಸನವೆನಿಸುತ್ತದೆ ಇವರಿಗೆ ಅವಸಾನಕಾಲದಲ್ಲಿ ೭೫ ವರುಷಗಳಾಗಿದ್ದವು ಇವರು ಪತಿಭಕ್ತಿಪರಾಯಣೆಯರಾಗಿದ್ದರಲ್ಲದೆ, ಗುರುಲಿಂಗಜಂಗಮರಲ್ಲಿ ಅಸಾಧಾರಣ ಭಕ್ತಿಯುಳ್ಳವರಾಗಿದ್ದರು ಈ ಮಾತೃಶ್ರೀಯವರು ತಮ್ಮ ಜೀವಮಾನದಲ್ಲಿ ರಂಭಾಪುರಿ, ಉಜ್ಜಯಿನಿ, ಶ್ರೀಶೈಲ ಮೊದಲಾದ ಪುಣ್ಯಕ್ಷೇತ್ರಗಳ ದರ್ಶನವನ್ನು ಮಾಡಿಕೊಂಡು ಶಕ್ತ್ಯನುಸಾರ ದಾನಧರ್ಮಗಳನ್ನು ಮಾಡಿದ್ದರು ಇವರು ಶಿವಾಧೀನರಾದ ದಿವಸ ಪರಮತಪಸ್ವಿಗಳಾಗಿರುವ ಹುಬ್ಬಳ್ಳಿ ಹನ್ನೆರಡುಮಠದ ಶ್ರೀ ಚರಮೂರ್ತಿಸ್ವಾಮಿಗಳವರು ಅಕಸ್ಮಾತ್ತಾಗಿ ಆಗಮಿಸಿದರು ಇವರ ಅಂತ್ಯೇಷ್ಟಿಕ್ರಿಯೆಗಳು ಸದರಿ ಶ್ರೀಗಳವರಿಂದಲೂ ಮತ್ತು ನೆಗಳೂರು ಪಟ್ಟಾಧ್ಯಕ್ಷರಿಂದಲೂ ವಿಧ್ಯುಕ್ತವಾಗಿ ನೆರವೇರಿದವು ಆ ಸಮಯದಲ್ಲಿ ಪವಿತ್ರವಾದ ಗೋಕರ್ಣಕ್ಷೇತ್ರದಲ್ಲಿ ನೂತನವಾಗಿ ಕಟ್ಟಲ್ಪಡುತ್ತಿರುವ ಮಠದ ಕಟ್ಟಡಕ್ಕಾಗಿ ಸದರಿಯವರ ಜ್ಯೇಷ್ಠಪುತ್ರರಾದ ಮ|| ರಾ|| ಹೊಳೆಬಸಪ್ಪನವರು ೩೦೦ ೦-೦ ರೂಗಳ ದಾನವನ್ನು ಮಾಡಿದರು ಅಲ್ಲದೆ ವೀರಶೈವ ಸಮಾಜದ ಉದ್ಧಾರಕ್ಕೋಸ್ಕರ ಹಗಲಿರುಳು ಅವಿಶ್ರಾಂತಶ್ರಮವಹಿಸುತ್ತಿರುವ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಸಂಪಾದಕತ್ವದಿಂದ ಪ್ರಕಟವಾಗುತ್ತಿರುವ ಪ್ರಭಾ ಪೋಷಣೆಕ್ಕೋಸ್ಕರ ೫ ರೂಗಳನ್ನು ಸಮರ್ಪಿಸಿದರು ಶ್ರೀ ಜಗದಾಚಾರ್ಯರು ಕೈ|| ಶಿವಮ್ಮನವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಹಾರೈಸುವ,

ಮಳೆಚೆನ್ನೂರು ಮಠದ ಹಾಲಸಿದ್ದಯ್ಯ
ದಾವಣಗೆರೆ

ನರಗುಂದ ಶ್ರೀ ವೀರಶೈವೋತ್ತೇಜಕ ಜ್ಯೋತಿಷ ಪಾಠಶಾಲಾಧ್ಯಾಪಕ ಶ್ರೀ ಗದಿಗಯ್ಯಶಾಸ್ತ್ರಿ ಕೊಂಗವಾಡ ಇವರ ಚರಮಪದ್ಯಾವಳಿ.

ಜ್ಯೋತಿರ್ವಿದ್ಯಾನಿಪುಣಂ
ಖ್ಯಾತಂ ಗುರುಭಕ್ತಿಯುಕ್ತನಮಳಚರಿತ್ರಂ
ಪೂತಂ ಗದಿಗಪ್ಪಾರ್ಯಂ।
ಭೂತೇಶನ ಪಾದಭಾವನಾಲಂ ಬಳಲಂ

ನವಜ್ಯೋತಿಷಕುಲಮಣಿಯಂ।
ಬುವೋಳ್ವಿಸರನಾಂತು ಕಾಂತಿಯಶಮುಜ್ವಳಿಸಲ್ ॥
ಶಿವೆಯಾಜ್ಞನ ಪಾದಾಂಭೋ।
ಜವ ಗದಿಗಪ್ಪಾರ್ಯ ಸಾರ್ದು ನಿಜಸುಖವಿರ್ದಂ ॥

ಮುಸುಕಿತು ಚಿಂತಾತಿಮಿರಂ।
ಮುಸುಕ್ಕಿದು ಮತಿನೇತ್ರವಾಳದುದಮಳನಶರಥಾ ॥
ನಸರೋರುಹಮುಖಚಕ್ರಮು।
ದೊಸಗೆ ಯಳದತ್ತು ಸುಮಿತ್ರ ನೀನಳಿಯಲೊಡಂ ॥

ಅಳಲುವದೇನಿದ ತಿಗೆ ತಾ।
ಮಳಕವಿಲೋಚನನ ಲೋಕಕ್ಕೈದುವಕೀಗಳ್ ॥
ಕಳವೆತ್ತೊತ್ತುವಜ್ಯೋತಿಷ।
ಕುಲಮಣಿವೆಸರಾಂತು ಬಾಳ್ದನೀಶನೆ ಧನ್ಯಂ ॥

ಪಂಚವದನಸಂಭೂತರ್।
ಪಂಚತ್ವಹರಣಶರಣಜನಾವನನಿಪುಣರ್ ॥
ಪಂಚಾಸ್ಯಂ ನಿನ್ನಾತ್ಮಕೆ।
ಪಂಚಾಚಾರ್ಯರ್ ಸಮಂತು ನೀಡುಗೆ ಸುಖಮಂ ॥

ದುಃಖಭಾಗಿ
ಚೆನ್ನಕವಿ ಸೂರಕೋ

ಶಾಲಾದಿನಾಚರಣೆ

ತಾ|| ೭ ೫ ೪೪ನೇ ಭಾನುವಾರ ಹರೀಕೆರೆ ತಾಲ್ಲೂ ಅಜ್ಜಂಪುರದ ಪ್ರಾಥಮಿಕ ಶಾಲಾ ದಿನಾಚರಣೆಯ ಬಾಲಕ ಬಾಲಕಿ ಪಾಠಶಾಲ ಬೋಧಕರು, ಮ ಪ್ರಮುಖ ಪುರನಿವಾಸಿಗಳೊಡನೆ ಬಹು ವೈಭವದಿಂ ಆಚರಿಸಿದರು ಭಾನುವಾರ ಪ್ರಾತಃಕಾಲ ವಾದ್ಯವೈಭ ಗಳಿಂದ ಮಹಾರಾಜರ ಭಾವಚಿತ್ರ ಮೈಸೂರು ಧ್ವಜಗ ಸಮೇತ ಗ್ರಾಮದ ಮುಖ್ಯಬೀದಿಗಳಲ್ಲಿ ಉತ್ಸವ ನಡೆ ತು ಸಾಯಂಕಾಲ ೬ ಘಂಟೆಗೆ ಗ್ರಾಮಸ್ಥರ ಸಭೆಸೇರಿ ಈ ಗ್ರಾಮದ ಹಾದಿ ಕೇಂದ್ರದ ಮ್ಯಾನೇಜರ್ ಶ್ರೀಮಾ ನಾರಾಯಣರಾಯರು ಅಧ್ಯಕ್ಷತೆ ವಹಿಸಿದ್ದರು. ಸ ಯಲ್ಲಿ ವಿದ್ಯಾಭ್ಯಾಸದ ವಿಚಾರದಲ್ಲಿಯೂ ಪೋಷ ಬೋಧಕರ ವಿಚಾರದಲ್ಲಿ ಹೇಗೆ ಹೇಗೆ ಸಂಬಂಧ ನ ವಳಕೆ ಇದ್ದರೆ ವಿದ್ಯಾಭ್ಯಾಸ ಸಾಂಗವಾಗಿ ನೆರವೇರುತ್ತ ಎಂಬ ವಿಷಯವಾಗಿಯೂ ನಮ್ಮ ಗ್ರಾಮದವರೆಲ್ಲ ವಿದ್ಯಾವಂತರಾಗಬೇಕಾದರೆ ಸಕಲರೂ ಹೇಗೆ ನಡೆ ಬೇಕು, 'ನಿಮ್ನವರ್ಗದವರ ಮತ್ತು ಸ್ತ್ರೀಯರ ವಿದ ಭ್ಯಾಸ' ಈ ವಿಷಯಗಳನ್ನು ಕುರಿತು, ಮ|| ರಾ|| ಗಳ ಪ್ರೈಮರಿ ಸ್ಕೂಲ್ ಹೆಡ್‌ಮಾಸ್ಟರ್ ರಾಮಾವಧಾ ಗಳು, ಅ|| ಮಾ|| ಎಂ ಎಸ್ ಮರುಲಸಿದ್ಧ ನವರು, ಅ|| ಮಾ|| ಡಿ ತೀರ್ಥಗಿರಿರಾಯರು, ಅಜ ಪುರದ ಶ್ರೀಯುತ ಸುಬ್ರಹ್ಮಣ್ಯಸೆಟ್ಟರು, ವೈಸ್‌ಪ್ರ ಡೆಂಟರು, ಶ್ರೀಯುತ ಕೋ ಆಪರೇಟಿವ್ ಸೊಸ ಸುಬ್ಬರಾಯರು ಮುಂತಾದವರ ಭಾಷಣಗಳು ನಡೆ ಬಡ ವಿದ್ಯಾರ್ಥಿಗಳಿಗೆ ಸ್ಲೇಟು, ಪುಸ್ತಕ, ಬಟ್ಟೆಗ ಇತರ ವಿದ್ಯಾರ್ಥಿಗಳಿಗೆ ಕಡಲೆಪುರಿ ಬಿಸ್ಕತ್ತು ಬಾಲಿ ಶಾಲಾಂಗಣದ ಸಭೆಯಲ್ಲಿ ಲಾಡು ಮಾವಿನಹಣ್ಣುಗ ಹಂಚಲ್ಪಟ್ಟು ಸಭೆಯು ಮುಕ್ತಾಯಗೊಂಡಿತು

ಕಾರ್ಯಭಾ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

ISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ್ಕ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಕಾಲಿಪ್ಪುದೀಲೋಕಮಂ ॥

ದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ. ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೯ನೇ ಮೇ ೧೯೪೪ [ಸಂಚಿಕೆ ೫

ಸ್ವೀಕಾರ

ತಿಪಟೂರು ತಾ॥ ಗುರುಗದಹಳ್ಳಿ ಗ್ರಾಮದ ದ ವೇ॥ ಯ ಜಮಾನ ...ಸಿದ್ಧಪ್ಪಯ್ಯನವರ ಪುತ್ರಿ ಚಿ॥ಸೌ॥ ಅನ್ನಪೂರ್ಣಾಂಬಿಕೆಗೂ, ...ಕುಣಿಗಲು ತಾ॥ ಮುಗ್ಗವಳ್ಳಿ ಮಠದ ವೇ॥ ಗಂಗಾಯ್ಯ...ರ ಪುತ್ರ ಚಿ॥ ಸೋಮಶೇಖರಯ್ಯನಿಗೂ ನೆರವೇರಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವರನ ಕಡೆಯಿಂದ ತೆಗೆಯಿಸಿದ 5 ರೂಪಾಯಿ ವಧುವಿನ ಕಡೆಯಿಂದ ತೆಗೆಯಿಸಿದ 2 ರೂಪಾಯಿ ಮತ್ತು ಗುರುಗದಹಳ್ಳಿ ಕೆರೆ ವೇ॥ ಶಾಂತಯ್ಯನವರ ಪುತ್ರಿ ಚಿ॥ ಸೌ॥ ಶಾಂತ್ಯಾಯಿನಿಗೂ ಹೊನ್ನೇನಹಳ್ಳಿ... ಹಳ್ಳಿಮೈಸೂರು ಮಠದ ವೇ॥ ಗುರುಬಸವಯ್ಯನವರ ಪುತ್ರ ...ಸಂಗಯ್ಯನಿಗೂ ನಡೆದ ವಿವಾಹ ಸಮಯದಲ್ಲಿ ವಧೂವರ...ದ ತೆಗೆಯಿಸಿದ 2 ರೂಪಾಯಿ ಮತ್ತು ಅರಸೀಕೆರೆ ತಾ॥ ...ಧಮುಲ್ಲಾಪುರ ಗ್ರಾಮದ ದ ವೇ॥ ಚನ್ನದೇವರ ಪುತ್ರ ಚಿ॥ ...ವಯ್ಯನಿಗೂ ಹಳ್ಳಿಮೈಸೂರು ವೇ॥ ಚನ್ನವೀರದೇವರ ಪುತ್ರಿ ...ಸೌ॥ ಸಂಗಮ್ಮನಿಗೂ ನಡೆದ ವಿವಾಹ ಸಮಯದಲ್ಲಿ ವರನ ...ಯಿಂದ ತೆಗೆಯಿಸಿದ 1 ರೂಪಾಯಿ ಒಟ್ಟು 10 ರೂಪಾಯಿ ...ತಿಪಟೂರು ವೇ॥ ಆರ್ ಎಂ. ಮಲ್ಲಿಕಾರ್ಜುನಾರಾಧ್ಯರ...ರಾ ತಲ್ಪಿರುತ್ತವೆ

...ಶಿವಮೊಗ್ಗಾ ಜಿ। ತೀರ್ಥಹಳ್ಳಿ ತಾ॥ ಉದ್ಭಾದೇವರ ಮಠದ ... ಶಿವಲಿಂಗಯ್ಯನವರ ಪುತ್ರಿ ಚಿ॥ ಸೌ॥ ...ಮಂಗಳಾದೇವಿಗೂ ಹೊಳಲ್ಕೆರೆ ವೇ। ಜಿ. ಸಿ. ಎಂ. ...ಲಯ್ಯನವರ ಪುತ್ರ ಚಿ॥ ಕೆ. ಹಾಲಯ್ಯ ಎಲ್. ...ಬಸವರಿಗೂ ನಡೆದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ...ಧುವಿನ ಕಡೆಯಿಂದ ತೆಗೆಯಿಸಿದ 2 ರೂಪಾಯಿ ಚಳ್ಳಕೆರೆ ತಾ॥ ...ಟ್ಟಪ್ಪನಹಳ್ಳಿ ಹರ್ತಿಮಠದ ವೇ॥ ಎಚ್ ಎಂ ವೀರಭದ್ರಯ್ಯ...ರ ಪುತ್ರಿ ಚಿ॥ ಸೌ ಲಲಿತಮ್ಮನಿಗೂ, ಚಳ್ಳಕೆರೆ ತಾ॥ ಗೆಜ್ಜೆ...ದನಹಳ್ಳಿ ಮಠದ ವೇ। ಮರುಳಯ್ಯನವರ ಪುತ್ರ ಚಿ॥ ...ರಾಧ್ಯನಿಗೂ ನಡೆದ ವಿವಾಹ ಸಮಯದಲ್ಲಿ ತರೀಕೆರೆ ಹಿರೇ...ದ ವೇ॥ ರುದ್ರಮುನಿಯಯ್ಯನವರು ಸಮರ್ಪಿಸಿದ 2 ...ಪಾಯಿ ಅರಗಮಠದ ವೇ॥ ಪ್ರಭುದೇವರ ಬಸವಯ್ಯನವರ ... ಚಿ॥ ಸೌ॥ ಸರೋಜಮ್ಮನಿಗೂ ಹೊಳಲ್ಕೆರೆ ವೇ॥ ಜಿ ಎಂ ...ದೇವಯ್ಯನವರ ಪುತ್ರ ಚಿ॥ ಜಯಾನಂದಯ್ಯನಿಗೂ ನಡೆದ ...ಹ ಸಮಯದಲ್ಲಿ ವಧುವಿನ ಕಡೆಯಿಂದ ತೆಗೆಯಿಸಿದ 1 ...ಪಾಯಿ ಮತ್ತು ಶಿವಮೊಗ್ಗ ಜಿ॥ ಹಾರ್ನಹಳ್ಳಿಯಲ್ಲಿರುವ ... ರಾ॥ ಗಾಜನೂರು ಗುರುಪಾದಪ್ಪನವರ ಜೇಷ್ಠ ಪುತ್ರಿ ...ಸೌ॥ ಗೌರಮ್ಮನಿಗೂ ಸಾಗರದ ಕೋಣೆ ಮಾವಿನ ಹೊಳೆಯಪ್ಪ...ರ ಪುತ್ರ ಚಿ॥ ನೀಲಕಂಠಪ್ಪನಿಗೂ ಮ॥ ರಾ॥ ಗುರುಪಾದಪ್ಪ...ರ ದ್ವಿತೀಯ ಪುತ್ರಿ ಚಿ॥ ಸೌ॥ ರೇವಣಮ್ಮನಿಗೂ ಹಾರ್ನಹಳ್ಳಿ ... ರಾ॥ ದೇವಪಶೆಟ್ಟರು ವೀರಪ್ಪಶೆಟ್ಟರ ಪುತ್ರ ಚಿ॥ ಬಸಪ್ಪ...ಗೂ ನಡೆದ ವಿವಾಹ ಸಮಯದಲ್ಲಿ ಮ। ರಾ॥ ಗುರುಪಾದಪ್ಪ...ನು ಸಮರ್ಪಿಸಿದ 2 ರೂಪಾಯಿ ಒಟ್ಟು 7 ರೂಪಾಯಿಗಳು ...ಗಪ್ಪ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರ ದ್ವಾರಾ ...ತ್ತವೆ

...ರಿಯೂರು ತಾ॥ ಗಿಡ್ಡೋಬೆನಹಳ್ಳಿ ಪಟೇಲ್ ನಾಗಯ್ಯ...ರು ತಮ್ಮ ಗೃಹದಲ್ಲಿ ತಾ॥ 17-೪-44ನೆಯ ಬಿವಗಶಿವ ಯೋಗಿನ...ಯ್ಯನವರ ಮಠದ ಶ್ರೀ ಪಟ್ಟಾಧ್ಯಕ್ಷರ ಅಧ್ಯಕ್ಷತೆಯಲ್ಲಿ ...ಹೇಶ್ವರ ವಟುಗಳಿಗೆ ದೀಕ್ಷಾಸಂಸ್ಕಾರವನ್ನೂ ಸದರಿಯವರ ...ಲದಲ್ಲಿರತಕ್ಕ ಬಿಲ್ವವೃಕ್ಷಕ್ಕೆ ದೀಕ್ಷಾಸಂಸ್ಕಾರವನ್ನು ನೆರವೇರಿ... ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2-8-0 ರೂ ... ಅದೇ ದಿವಸ ಅದೇ ಗ್ರಾಮದ ಗೊಂಚಿಕಾರ ಸಂಗಪ್ಪ...ರ ಪುತ್ರ ಚಿ॥ ಜಿ ಲಿಂಗಪ್ಪನಿಗೆ ಪಟೇಲ್ ಸಿಂಗಯ್ಯನವರ ... ಚಿ॥ ಸೌ॥ ತಿಪ್ಪಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ 2-8-0 ರೂ ಒಟ್ಟು 5-0-0 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬೇಗಾಂವ ಜಿ॥ ನಾಗನೂರು ಗ್ರಾಮದಲ್ಲಿರುವ ಶೀಲಯ್ಯನವರ ಮಠದ ವೇ॥ ಚನ್ನಬಸವಯ್ಯನವರ ಪುತ್ರ ಚಿ॥ ಶಂಕರಯ್ಯನಿಗೆ ಲಕ್ಷ್ಮೇಶ್ವರಗ್ರಾಮದ ಹಿರಿಯಮಠದ ವೇ॥ ಶಾಂತಪ್ಪಯ್ಯನವರ ಪುತ್ರಿ ಚಿ॥ ಸೌ॥ ಪಾರ್ವತವ್ವನನ್ನು ಕೊಟ್ಟು ಶ್ರೀ ಶ್ರೀಶೈಲಕ್ಷೇತ್ರದಲ್ಲಿ ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರ ಕಡೆಯಿಂದ ತೆಗೆಯಿಸಿದ 4 ರೂಪಾಯಿಗಳು ವೇ॥ ಮುಳಗುಂದ ಹೊಸಮಠದ ವೀರಭದ್ರಯ್ಯನವರ ದ್ವಾರಾ ತಲ್ಪಿರುತ್ತವೆ

ಅರಸೀಕೆರೆ ಟೌನಿನಲ್ಲಿರುವ ಮ॥ ರಾ॥ ಬ್ಯಾಡಗಿ ಚನ್ನವೀರಪ್ಪನವರು ತಮ್ಮ ಪುತ್ರಿ ಚಿ॥ ಸೌ॥ ಸುವರ್ಣಮ್ಮನನ್ನು ಬೆಂಗಳೂರು ಸಿಟಿಯಲ್ಲಿರುವ ರಿಟೈರ್ಡ್ ಡಿಸ್ಟ್ರಿಕ್ಟ್ ಜಡ್ಜ್ ಎಚ್ ಕೆ ವೀರಬಸವಯ್ಯನವರ ಪುತ್ರ ಚಿ॥ ವಿಶ್ವೇಶ್ವರಯ್ಯನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 3 ರೂಪಾಯಿಗಳು ಮ॥ ರಾ॥ ಎಸ್ ಜಿ ಶಿವಶಂಕರಯ್ಯನವರ ದ್ವಾರಾ ತಲ್ಪಿರುತ್ತವೆ

ತಿಪಟೂರು ತಾ॥ ವಿರೂಪಾಕ್ಷಪುರಮಠದ ಪಟೇಲ್ ಶ್ರೀ ರುದ್ರಯ್ಯನವರ ಸಹೋದರ ಚಿ॥ ಉಮಾಪತಿಗೂ, ಕಡೂರು ತಾಲೂಕು ಬಸಲೆಹಳ್ಳಿಮಠದ ಶ್ರೀ ಕರಿಸಿದ್ಧಯ್ಯನವರ ಪುತ್ರಿ ಚಿ॥ ಸೌ। ದೇವೀರಮ್ಮನಿಗೂ ವಿವಾಹವು ನಡೆದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವರನ ಕಡೆಯಿಂದ ತೆಗೆಯಿಸಿದ 3 ರೂಪಾಯಿಗಳು ತುಂಬಾಪುರದ ವೇ॥ ನಂಜುಂಡಯ್ಯನವರ ದ್ವಾರಾ ತಲ್ಪಿರುತ್ತವೆ.

...ಕೊಪ್ಪಲಗ್ರಾಮದಲ್ಲಿರುವ ವೇ॥ ಶಾಂತವೀರಯ್ಯನವರು ತಮ್ಮ ... ಪುತ್ರನ ... ವಲ್ಲಿ ಪ್ರಭಾಪೋಷಣಕ್ಕಾಗಿ ವರನ ಕಡೆಯಿಂದ ತೆಗೆಯಿಸಿದ 2 ರೂಪಾಯಿ ವಧುವಿನ ಕಡೆಯಿಂದ ತೆಗೆಯಿಸಿದ 1 ರೂಪಾಯಿ ಒಟ್ಟು 3 ರೂಪಾಯಿಗಳು ಆಲಂದಿ ಶ್ರೀ ಪಟ್ಟದಸ್ವಾಮಿಗಳ ದ್ವಾರಾ ತಲ್ಪಿರುತ್ತವೆ

ಚಿಕ್ಕಮಗಳೂರು ತಾ॥ ಎಲಗೂಡಿಗೆ ಲೇ॥ ಬಿ॥ ... ಗೌಡರ ಪುತ್ರ ಚಿ॥ ಪಟೇಲ್ ಸಾಗೌಡರಿಗೆ ಬೇಲೂರು ತಾ॥ ಚಿಕ್ಕಮೇದೂರು ಗ್ರಾಮದ ಮೊಗಣ್ಣಗೌಡರ ಪುತ್ರಿ ಚಿ॥ ಸೌ॥ ಪುಟ್ಟಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ವರನ ಕಡೆಯಿಂದ ತೆಗೆಯಿಸಿದ 2 ರೂಪಾಯಿ ವಧುವಿನ ಕಡೆಯಿಂದ ತೆಗೆಯಿಸಿದ 1 ರೂಪಾಯಿ ಒಟ್ಟು 3 ರೂಪಾಯಿಗಳು ಮ॥ ರಾ॥ ಸ್ಕೂಲ್ ಮಾಸ್ಟರ್ ಎ. ಎಸ್. ರುದ್ರೇಗೌಡರ ದ್ವಾರಾ ತಲ್ಪಿರುತ್ತವೆ

ತೀರ್ಥಹಳ್ಳಿ ತಾ॥ ದಾಸನಗದ್ದೆಯಲ್ಲಿರುವ ವೇ॥ ಬಿ ಎಸ್. ರುದ್ರಾರಾಧ್ಯರ ಗೃಹದಲ್ಲಿ ಆನಂದ ಮಹಂತಿನ ಮಠದ ವೇ॥ ಎಸ್ ಕೊಟ್ರಯ್ಯನವರ ಪುತ್ರಿ ಚಿ॥ ಸೌ॥ ಪಾರ್ವತೀದೇವಿಗೂ ಶಿವಮೊಗ್ಗದಲ್ಲಿರುವ ಲೋಕಿಕೆರೆ ಮಠದ ವೇ॥ ಶಿವಪ್ಪಯ್ಯನವರ ಪುತ್ರ ಚಿ॥ ವಿರೂಪಾಕ್ಷಯ್ಯನಿಗೂ ಮತ್ತು ಸದರಿ ಕೊಟ್ರಯ್ಯನವರ ಪುತ್ರ ಚಿ॥ ನಾಗೇಂದ್ರಯ್ಯನಿಗೂ ... ಯಲ್ಲಿರುವ ವೇ॥ ಕೈದಳ್ಳಿ ಮಠದ ಮಲ್ಲೇಶಯ್ಯನವರ ಪುತ್ರಿ ಚಿ॥ ಸೌ। ಸಿದ್ಧಮ್ಮನಿಗೂ ನೆರವೇರಿದ ವಿವಾಹ ಸಮಯದಲ್ಲಿ ವೇ॥ ಬಿ. ಎಸ್. ರುದ್ರಾರಾಧ್ಯರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ವೇ॥ ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ

ಸೊರಬ ತಾ॥ ಕೋಡಿಕೊಪ್ಪ ಗ್ರಾಮದ ಮ॥ ರಾ॥ ಗಿಂಡಿ ಶಿವಪ್ಪಗೌಡರ ಪುತ್ರಿ ರುದ್ರಮ್ಮಾಜಿಯವರು ತಮ್ಮ ಗೃಹದಲ್ಲಿ ಜಗಟೂರು ಮ॥ ರಾ॥ ಮಲ್ಲಪ್ಪಗೌಡರ ಪುತ್ರ ಚಿ॥ ಕೊಟ್ರಪ್ಪಗೌಡನಿಗೂ ಬೀಗರಿ ಮ॥ ರಾ॥ ಮಲಕಪ್ಪಗೌಡರ ಪುತ್ರಿ ಚಿ॥ ಸೌ॥ ರುದ್ರಮ್ಮನಿಗೂ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ಸೊರಬ ತಾ॥ ಜಗಟೂರು ಗ್ರಾಮದ ಶ್ರೀ ಜಗದ್ಗುರು ಪಂಚಾಚಾರ್ಯ ವಾಚನಾಲಯದ ಒಡೆಯರಾದ ಮ॥ ರಾ॥ ಕೆ. ಪಿ ರುದ್ರರಾಜಗೌಡರಿಗೆ ವೈಶಾಖ ಶು ॥ ೯ ದಿವಸ ಪುತ್ರನು ಜನಿಸಿದ್ದು ಸದರಿ ಪುತ್ರನಿಗೆ ಮಲ್ಲಿಕಾರ್ಜುನ ಒಡೆಯ ಉರ್ಫ ವಿಶ್ವನಾಥ ಒಡೆಯ ಎಂದು ನಾಮಕರಣ ಮಾಡಿದ ಸಮಯದಲ್ಲಿ ಸಮರ್ಪಿಸಿದ 1 ರೂ ಒಟ್ಟು 2 ರೂ ಗಳು ವೇ॥ ಜಡೇಮಠದ ಚನ್ನವೀರಯ್ಯನವರ ದ್ವಾರಾ ತಲ್ಪಿರುತ್ತವೆ.

ಅರಸೀಕೆರೆ ತಾಲೂಕು ವೃಂದಾವನಹಳ್ಳಿ ಗ್ರಾಮದಲ್ಲಿ ನೆರವೇರಿದ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವ ಸಮಯದಲ್ಲಿ ಸದರಿ ಗ್ರಾಮಸ್ಥರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಮ॥ ರಾ॥ ಎಚ್ ಮಾದೇಗೌಡರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಜಿ॥ ಮುಳಗುಂದ ಹಿರಿಯಮಠದ ವೇ॥ ಪ್ರಭಯ್ಯನವರು ಶ್ರೀ ಕೇದಾರನಾಥನ ಯಾತ್ರೆಯನ್ನು ನಿರ್ವಿಘ್ನವಾಗಿ ನೆರವೇರಿಸಿದ ಸಂತೋಷಕ್ಕಾಗಿ 1 ರೂಪಾಯಿಯನ್ನು ಕೇದಾರಕ್ಷೇತ್ರದಿಂದ ಕಳುಹಿಸಿರುತ್ತಾರೆ

ಬೆಂಗಳೂರು ತಾ॥ ಚಿಕ್ಕನಹಳ್ಳಿ ಗ್ರಾಮದಲ್ಲಿ ಫಾಲ್ಗುನ ಶು॥ ೧೪ ದಿವಸ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಸದರಿ ಗ್ರಾಮದವರು ಅತ್ಯಂತ ವೈಭವದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಮ। ರಾ॥ ಚನ್ನಪಟ್ಟಣದ ಮಲ್ಲಪ್ಪನವರ ದ್ವಾರಾ ತಲ್ಪಿರುತ್ತದೆ

...ಜಿಲ್ಲಾ ... ಬೇವಿನಗಿ ಗ್ರಾಮದಲ್ಲಿರುವ ಶ್ರೀಮಂತ ... ತಮ್ಮ ಪುತ್ರಿ ಸೌ॥ ಭಾಗೀರಥೀಬಾಯಿಯ ... ಶಿವದೀಕ್ಷಾ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 1 ರೂಪಾಯಿಯನ್ನು ... ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರೆಲ್ಲರಿಗೂ ಶ್ರೀಜಗದ್ಗುರು ಪಂಚಾಚಾರ್ಯರು ಸಕಲಮಂಗಳವನ್ನೀಯಲೆಂದು ಹಾರೈಸುತ್ತೇವೆ

ವಿವಾಹಮಹೋತ್ಸವ

ತೀರ್ಥಹಳ್ಳಿ ತಾ॥ ದಾಸನಗದ್ದೆಯಲ್ಲಿರುವ ವೇ॥ ಬಿ ಎಸ್. ರುದ್ರಾರಾಧ್ಯರವರ ಸ್ವಗೃಹದಲ್ಲಿ ವಿವಾಹಮಹೋತ್ಸವವು ಬಹಳ ವೈಭವದಿಂದ ನೆರವೇರಿತು. ಆ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವೇ॥ ರುದ್ರಾರಾಧ್ಯರು ೨ ರೂ ಗಳನ್ನು ಸಮರ್ಪಿಸಿದರು. ಈ ಮಂಗಲ ಕಾರ್ಯಕ್ಕಾಗಿ ಮಳಲಿ, ಕವಲೆ ದುರ್ಗ, ಹೊಟ್ಟೆಪುರ, ರಿಪ್ಪನ್‌ಪೇಟೆ, ಗುರುಪುರ ಮಠಾಧಿಪತಿಗಳು ದಯಮಾಡಿಸಿದ್ದರು ಹಾಗೂ ದೂರ ದೂರ ಪ್ರದೇಶಗಳಿಂದಲೂ ಸಮೀಪ ಸ್ಥಳಗಳಿಂದಲೂ ಅನೇಕ ಜನ ಬಂಧುಮಿತ್ರರೂ ಲೌಕಿಕ ವೈದಿಕ ಮಹಾಶಯರೂ ಆಗಮಿಸಿದ್ದರು. ಗುರುಪುರದವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೀರ್ತನಕೇಸರಿ ವೇ॥ ಗುಬ್ಬಿ ಶಿವರುದ್ರಶಾಸ್ತ್ರಿಗಳವರು ದಾಕ್ಷಾಯಿಣಿ ವಿಲಾಸ ಎಂಬ ಶಿವಸಂಕೀರ್ತನೆಯನ್ನು ಸ್ವರ ತಾಳ ಪ್ರಮಾಣದ ಜನಸಮೂಹವು ಆನಂದಿಸುವಂತೆ ನವರಸಾಲಂಕಾರಯುಕ್ತವಾಗಿ ಅನುವಾದ ಮಾಡಿದರು. ರುದ್ರಾರಾಧ್ಯರವರು ಸಮಸ್ತ ಜನರನ್ನೂ ಪ್ರೇಮಾದರಗಳಿಂದ ಸತ್ಕರಿಸಿದರು.

ಓರ್ವ ಪ್ರತ್ಯಕ್ಷದರ್ಶಿ

ಚಂದಾದಾರರಲ್ಲಿ ವಿಜ್ಞಾಪನೆ

ಮೈಸೂರು ದೇಶದಲ್ಲಿ ನಡೆಯುತ್ತಿರುವ ಯಂತ್ರಗಳಿಗೆಲ್ಲಾ ಪ್ರಾಣಸಂತಿರುವ ಶಿವನಸಮುದ್ರದ ವಿದ್ಯುಚ್ಛಕ್ತಿಯ ಮೂಲಸ್ಥಾನಕ್ಕೆ ಕಳೆದ ವಾರ ಅಕಸ್ಮಾತ್ ಸಿಡಿಲಿನೇಟು ಬಿದ್ದು ವಿಶೇಷ ನಷ್ಟವುಂಟಾದುದರಿಂದ ಮೈಸೂರುದೇಶವೇ ಕತ್ತಲಾಗಿಹೋಗಿ ಯಂತ್ರಗಳೆಲ್ಲವೂ ನಿಂತುಹೋದವು ನಮ್ಮ ಮುದ್ರಣಯಂತ್ರಗಳೂ ಸಹ ವಿದ್ಯುಚ್ಛಕ್ತಿಯಿಂದಲೇ ನಡೆಯುವವಾದುದರಿಂದ ಕಳೆದ ವಾರ ನಮ್ಮ ಪತ್ರಿಕೆಯು ಎಲೆಕ್ಟ್ರಿಕ್ ಕರೆಂಟ್ ಇಲ್ಲದೆ ಹೊರಡಲು ಅವಕಾಶವಾಗಲಿಲ್ಲ. ದಯಾಳುಗಳಾದ ಮೈಸೂರು ಗೌರ್ನಮೆಂಟ್ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ನಮ್ಮ ಪ್ರೆಸ್ಸಿಗೆ ನಿನ್ನೆಯಿಂದ ಸ್ವಲ್ಪವಾಗಿ ಕರೆಂಟನ್ನು ಕೊಟ್ಟಿರುವುದರಿಂದ ಈ ವಾರದ ಪತ್ರಿಕೆಯು ಹೊರಡಲು ಅನುಕೂಲವಾಯಿತೆಂಬ ಸಂಗತಿಯನ್ನು ಚಂದಾದಾರರು ಗಮನಿಸತಕ್ಕದ್ದು.

ಮ್ಯಾನೇಜರ್

ಪಂಚಾಚಾರ್ಯಪ್ರಭಾ.

೧೯೪೪ನೆಯ ಮೇ ತಾ ೨೯ನೆ ಸೋಮವಾರ

ಸ್ವಧರ್ಮಪಾಲನ

ಜ್ಞಾನಾಮೃತೇನತೃಪ್ತಸ್ಯ ಕೃತಕೃತ್ಯಸ್ಯ ಯೋಗಿನಃ ।
ಆಚಾರಂ ಮಹತಾಂ ದೃಷ್ಟ್ವಾ ಪ್ರವರ್ತಂತೇ ಹಿ ಲೌಕಿಕಾಃ ॥

ಯಮನಿಯಮಾದ್ಯಷ್ಟಾಂಗಯೋಗದಿಂದ ಜ್ಞಾನಸಿದ್ಧಿಯನ್ನು ಪಡೆದ ಮಹಾತ್ಮರೂ ಸಹ ಶಾಸ್ತ್ರದಲ್ಲಿ ವಿಹಿತವಾದ ಧರ್ಮಮಾರ್ಗವನ್ನು ಬಿಡಕೂಡದೆಂದೂ, ದೊಡ್ಡವರ ನಡುವಳಿಕೆಯನ್ನು ನೋಡಿ ಇತರ ಲೌಕಿಕರು ಆ ಮಾರ್ಗದಲ್ಲಿಯೇ ಪ್ರವರ್ತಿಸಬೇಕಾಗುತ್ತದೆಂದೂ ಶ್ರೀರೇಣುಕಭಗವತ್ಪಾದರು ಅಗಸ್ತ್ಯಮಹರ್ಷಿಗಳಿಗೆ ಉಪದೇಶಮಾಡಿರುವುದನ್ನು ಪರಿಶೀಲಿಸಿದರೆ ಧರ್ಮವೆಂಬ ಮಹಾಗುಣವನ್ನು ಸಾಮಾನ್ಯ ಮನುಷ್ಯನು ಮೊದಲುಮಾಡಿಕೊಂಡು ಬ್ರಹ್ಮಜ್ಞಾನಿಯಾದ ಮಹಾತ್ಮನವರೆಗೂ ಇರುವ ಪ್ರತಿಯೊಬ್ಬನೂ ಅನುಸರಿಸಬೇಕೆಂಬುದೇ ಸನಾತನಧರ್ಮಾನುಯಾಯಿಗಳ ಕರ್ತವ್ಯವೆಂಬುದು ಸ್ಪಷ್ಟವಾಗುತ್ತದೆ. ವೇದಾಗಮಪುರಾಣೇತಿಹಾಸಗಳಲ್ಲಿ ವಿಧಿಸಲ್ಪಟ್ಟಿರುವುದೇ ಧರ್ಮವೆಂದು ತಿಳಿಯಬೇಕಲ್ಲದೆ ಅವರವರ ಇಷ್ಟಾನುಸಾರವಾಗಿ ತಮ್ಮ ತಮ್ಮ ಅನುಕೂಲಕ್ಕಾಗಿ ಕಲ್ಪಿಸಿಕೊಳ್ಳಲ್ಪಡುತ್ತಿರುವ ಕರ್ತವ್ಯಗಳನ್ನು ಧರ್ಮಗಳೆಂದು ತಿಳಿಯಲಾಗದು.

ಅಧರ್ಮಂ ನಸ್ಪೃಶೇತ್ ಕಿಂಚಿತ್ ವಿಹಿತಂ ಧರ್ಮಮಾಚರೇತ್ ।

ಶಾಸ್ತ್ರದಲ್ಲಿ ಯಾವುದು ನಿಷೇಧಿಸಲ್ಪಟ್ಟಿರುವುದೋ ಅದು ಅಧರ್ಮವೆಂತಲೂ, ಯಾವುದು ವಿಧಿಸಲ್ಪಟ್ಟಿರುವುದೋ ಅದು ಧರ್ಮವೆಂತಲೂ ಹೇಳಲ್ಪಡುವುದರಿಂದ ನಿಷಿದ್ಧವಾದ ಅಧರ್ಮವನ್ನು ಅನುಷ್ಠಿಸದೆ ವಿಹಿತವಾದ ಧರ್ಮವನ್ನು ಅನುಷ್ಠಿಸುತ್ತ ಬರಬೇಕು. ತನಗೆ ಎಂಥ ವಿಪತ್ಪರಂಪರೆಯೊದಗಿದ್ದರೂ ಧರ್ಮವನ್ನು ಬಿಡಕೂಡದು. ಧರ್ಮಜ್ಞಾನಶೂನ್ಯನಿಗೆ ವಿಧಿನಿಷೇಧಜ್ಞಾನವಿರುವುದಿಲ್ಲ. ಇದನ್ನು ಮಾಡಬೇಕು, ಇದನ್ನು ಮಾಡಬಾರದು ಎಂಬ ವಿಧಿನಿಷೇಧಜ್ಞಾನವಿಲ್ಲದವನನ್ನು ಸಾಧಾರಣವಾಗಿ ಎರಡು ಕಾಲುಳ್ಳ ಪಶುವೆಂದೇ ಭಾವಿಸಬೇಕಾಗಿದೆ. ಪಶುವಿಗೆ ಆಹಾರ, ನಿದ್ರಾ, ಮೈಥುನ ಈ ಮೂರು ಕಾರ್ಯಗಳಿಗೆ ಪ್ರತಿಬಂಧವಿಲ್ಲದಿದ್ದರೆ ಅಷ್ಟೇ ಅದರ ಜೀವಮಾನದ ಫಲವಾಗಿರುವುದಲ್ಲದೆ ಇನ್ನಾವುದನ್ನೂ ಅದು ಅಪೇಕ್ಷಿಸುವುದಿಲ್ಲ. ಅದಕ್ಕೆ ಇನ್ನಾವುದೂ ಬೇಕಾಗಿಯೂ ಇಲ್ಲ. ಮನುಷ್ಯಜನ್ಮವನ್ನು ಧರಿಸಿದವನಿಗೆ ಪಶುಗಳಿಗಿರುವಂತೆ ಆಹಾರ, ನಿದ್ರಾ, ಮೈಥುನಗಳೇ ಮುಖ್ಯ ಧರ್ಮಗಳಲ್ಲವು. ಇವು ಪಶುಪಕ್ಷ್ಯಾದಿ ಸಮಸ್ತ ಪ್ರಾಣಿಗಳಿಗಿರುವಂತೆ ಇವರಿಗೂ ಸಾಮಾನ್ಯ ಧರ್ಮಗಳಾಗಿರುತ್ತವೆ.

ಮಾತೃವತ್ಪರದಾರಾಂಶ್ಚ, ಪರದ್ರವ್ಯಾಣಿ ಲೋಷ್ಟವತ್ ।
ಆತ್ಮವತ್ಸರ್ವಭೂತಾನಿ ಯಃ ಪಶ್ಯತಿ ಸಧರ್ಮಿಣಾಮ್ ॥

ಪರಸ್ತ್ರೀಯರನ್ನು ತಾಯಿಯಂತೆಯೂ, ಪರದ್ರವ್ಯವನ್ನು ಮಣ್ಣಿನ ಹೆಂಟೆಯಂತೆಯೂ, ಎಲ್ಲ ಪ್ರಾಣಿಗಳನ್ನು ತನ್ನಂತೆಯೂ ಯಾವನು ನೋಡುವನೋ ಅವನು ಧರ್ಮಿಷ್ಠರೊಳಗೆಲ್ಲ ಚಕ್ರವರ್ತಿಯೆಂದು ಶಾಸ್ತ್ರವು ಉದ್ಘೋಷಿಸುವುದರಿಂದ ಈ ನಿಯಮಗಳನ್ನು ಮನುಷ್ಯರು ಪಾಲಿಸಬಲ್ಲರೇ ಹೊರತು ಪಶುಗಳು ಪಾಲಿಸಲಾರವು. ಒಂದು ಪಶುವು ಇನ್ನೊಂದು ಪಶುವಿನ ಮುಂದಿರುವ ಹುಲ್ಲನ್ನು ತಿನ್ನಲು ಅಪೇಕ್ಷಿಸುತ್ತದೆ ಮತ್ತು ಸ್ವಕೀಯ ಪರಕೀಯ ಎಂಬ ಜ್ಞಾನವಿಲ್ಲದೆ ಎಲ್ಲವೂ ತನ್ನದೇ ಎಂದು ತಿಳಿದುಕೊಂಡಿರುತ್ತದೆ. ಅದಕ್ಕೆ ತನ್ನಂತೆ ಇತರ ಪ್ರಾಣಿಗಳನ್ನು ಕಾಣುವ ಸ್ವಭಾವವಿಲ್ಲ. ಮನುಷ್ಯನು ಇದಕ್ಕೆ ವಿರುದ್ಧಸ್ವಭಾವವುಳ್ಳವನಾಗಿರುವುದರಿಂದ "ಕ್ರಿಮಿಕೀಟ ಪತಂಗೇಭ್ಯಃ ಪಶವಃ ಪ್ರಜ್ಞಯಾಧಿಕಾಃ । ಪಶುಭ್ಯೋಽಪಿ ನರಾಃ ಶ್ರೇಷ್ಠಾಃ" ಎಂದು ಶಾಸ್ತ್ರದಲ್ಲಿ ಪ್ರಜ್ಞಾವಿಶೇಷದಿಂದ ಪ್ರಾಣಿತಾರತಮ್ಯವನ್ನು ಹೇಳಿ ಅವುಗಳಲ್ಲೆಲ್ಲಾ ಮನುಷ್ಯನೇ ಶ್ರೇಷ್ಠನೆಂದು ಹೇಳಿರುವುದನ್ನು ನೋಡಿದರೆ ಮಾನವನು ವಿಧಿನಿಷೇಧವೆಂಬ ವಿಶೇಷಾಕಾರವಾದ ಜ್ಞಾನವುಳ್ಳವನಾದುದರಿಂದ ಮಾನವಜನ್ಮಧಾರಿಯು ಧರ್ಮನಿಬಂಧನೆಗೊಳಪಟ್ಟಿರಲೇಬೇಕು. ಮಾನವನು ಪರಮೇಶ್ವರನ ಪ್ರೀತಿಯನ್ನು ಪಡೆಯುವುದಕ್ಕೆ ಧರ್ಮವೆಂಬುವುದೇ ಒಂದು ದೊಡ್ಡ ಮಾರ್ಗವಾಗಿರುತ್ತದೆ. ಈ ಮಾರ್ಗವನ್ನು ಆ ಪರಮೇಶ್ವರನೇ ಮಾನವರ ಹಿತಕ್ಕಾಗಿ ರಚಿಸಿರುವುದರಿಂದ ಎಲ್ಲರೂ ಈ ಧರ್ಮಮಾರ್ಗದಲ್ಲಿ ಪ್ರವೇಶಮಾಡಿ ಅವನ ಪ್ರೀತಿಯನ್ನು ಪಡೆಯಬೇಕಾಗಿದೆ. ಯಾರು ಪರಮೇಶ್ವರ ನಿರ್ಮಿತವಾದ ಧರ್ಮಮಾರ್ಗದಲ್ಲಿ ಕಾಲಿಡದೆ ಅಧರ್ಮಮಾರ್ಗದಲ್ಲಿ ಕಾಲಿಡುತ್ತಾರೆಯೋ ಅವರು ನರಕವೆಂಬ ಮಹಾರಣ್ಯವನ್ನು ಪ್ರವೇಶಮಾಡಿ ಅಲ್ಲಿ ಬಹುವಿಧವಾದ ಯಾತನೆಗಳೆಂಬ ಕ್ರೂರಜಂತುಗಳ ಬಾಯಿಗೆ ಸಿಕ್ಕಿ ನರಳಬೇಕಾಗುತ್ತದೆ. ಹಾಗೆ ಆಗಬಾರದೆಂದೇ ಈಶ್ವರಸ್ವರೂಪರಾದ ಅನೇಕ ಜನ ಮತಾಚಾರ್ಯರು ಭೂಲೋಕದಲ್ಲಿ ಅವತಾರಮಾಡಿ ಧರ್ಮಶಾಸ್ತ್ರಗಳೆಂಬ ರಾಜಮಾರ್ಗಗಳನ್ನು ರಚಿಸಿ ಎಲ್ಲರನ್ನೂ ಆ ರಾಜಮಾರ್ಗದಲ್ಲಿ ಪ್ರವೇಶಿಸುವಂತೆ ಬೋಧಿಸಿ ಮಾನವರ ಕರ್ತವ್ಯಾಂಶಗಳನ್ನು ತೋರಿಸಿಕೊಟ್ಟಿರುತ್ತಾರೆ. ಇವೇ ಮತಗಳೆಂದು ಹೇಳಿಸಿಕೊಳ್ಳಲ್ಪಡುತ್ತವೆ. ಈ ಮತಗಳೆಲ್ಲಾ ಪರಮೇಶ್ವರನ ಪ್ರೇಮವನ್ನು ಸಂಪಾದಿಸಿ ಪುನಃ ಈ ದುಃಖಕರವಾದ ದೇಹಧಾರಣವಾಗಬಾರದೆಂಬುದೇ ಮುಖ್ಯ ಗುರಿಯಾಗಿರುತ್ತದೆ. ಲೋಕದಲ್ಲಿ ಒಂದು ಪಟ್ಟಣವನ್ನು ಪ್ರವೇಶಮಾಡಲಿಕ್ಕೆ ಅವರವರ ಇಚ್ಛಾನುಸಾರವಾಗಿ ಅನಂತಮಾರ್ಗಗಳು ರಚಿಸಲ್ಪಟ್ಟಿರುವಂತೆ, ಜಗನ್ನಿಯಾಮಕನಾದ ಈಶ್ವರನ ಸ್ಥಾನವನ್ನು ಸೇರಲು ಅನಂತ ಧರ್ಮಮಾರ್ಗಗಳು ರಚಿಸಲ್ಪಟ್ಟಿದ್ದರೂ ಅವುಗಳೆಲ್ಲವೂ ಪರಮೇಶ್ವರನನ್ನೇ ಲಕ್ಷೀಕರಿಸುತ್ತವೆಯಲ್ಲದ ಇನ್ನಾರನ್ನೂ ಲಕ್ಷೀಕರಿಸಲಾರವು. ಆದರೆ ಬಹುಕಾಲದಿಂದ ತನ್ನ ವಂಶಪರಂಪರೆಯಾಗಿ ಒಂದು ಮತವನ್ನು ಪ್ರವೇಶಿಸಿ ಇನ್ನೊಂದು ಮತವನ್ನು ಪ್ರವೇಶಿಸಬೇಕೆಂದರೆ ಅದು ಬಹು ಕಷ್ಟಕರವೆಂದೇ ಭಾವಿಸಬೇಕಾಗುವದು. "ಭಿನ್ನರುಚಿರ್ಹಿಲೋಕಃ" ಎಂಬುವಂತೆ ಒಬ್ಬನಿಗೆ ರುಚಿಸುವ ವಸ್ತುವು ಇನ್ನೊಬ್ಬನಿಗೆ ರುಚಿಸಲಾಗದು, ಅಷ್ಟು ಮಾತ್ರದಿಂದ ಆ ವಸ್ತುವೇ ನಿಂದ್ಯವೆಂದು ಹೇಳಲು ಸಾಧ್ಯವಿಲ್ಲ. ಬಹುಕಾಲದಿಂದ ತಾನು ತಮ್ಮ ಪೂರ್ವಜರಂತೆ ಯಾವ ಮತಧರ್ಮವನ್ನು ಅಭ್ಯಾಸದಲ್ಲಿ ತಂದುಕೊಂಡಿರುತ್ತಾನೆಯೋ ಆ ಮತಧರ್ಮವು ತನಗೆ ತೃಪ್ತಿದಾಯಕವಾಗಿರುವುದಲ್ಲದೆ ತನ್ನ ಮಾತಾಪಿತೃಗಳು ಅದೇ ಧರ್ಮಮಾರ್ಗವನ್ನು ವಿಶೇಷವಾಗಿ ಅಭ್ಯಾಸಮಾಡಿಸುತ್ತ ಬಂದದ್ದರಿಂದ ಆ ಧರ್ಮಮಾರ್ಗದಲ್ಲಿ ಪ್ರಯಾಣಮಾಡುವುದೇ ಆತನಿಗೆ ಶ್ರೇಯಸ್ಕರವಾಗಿದೆ. ಈಗಿನ ಕಾಲದಲ್ಲಿ ಅನೇಕ ಜನ ಭಾರತೀಯರು ತಮ್ಮ ತಮ್ಮ ವಂಶಾನುಗತವಾದ ಮತಧರ್ಮಗಳನ್ನು ಬಿಟ್ಟು ಭಿನ್ನ ಧರ್ಮಗಳನ್ನವಲಂಬಿಸುತ್ತಿದ್ದಾರೆ. ಇದರಿಂದ ತಮ್ಮ ತಂದೆತಾಯಿಗಳು ತೋರಿಸಿಕೊಟ್ಟ ಸ್ವಧರ್ಮಕ್ಕೆ ತರ್ಪಣವನ್ನು ಕೊಟ್ಟು ಎಂದೂ ಅಭ್ಯಾಸಮಾಡದ ಪರಧರ್ಮದಲ್ಲಿ ಕಾಲಿಡುವುದೆಂದರೆ "ಸಿದ್ಧಾನ್ನಂ ಪರಿತ್ಯಜ್ಯ ಭಿಕ್ಷಾಮಟತಿ ದುರ್ಮತಿಃ" ಎಂಬುವಂತೆ ತನ್ನ ಮುಂದೆ ಇಟ್ಟಿರುವ ಎಡೆಯನ್ನು ಕಾಲಿನಿಂದ ತಳ್ಳಿಹೋದಂತೆಯೇ ಸರಿ! ತನ್ನ ಹಿರಿಯರು ತೋರಿಸಿಕೊಟ್ಟಿರುವ ಧರ್ಮವನ್ನು ತಿರಸ್ಕರಿಸುವುದು ವಿವೇಕಶಾಲಿಗಳಿಗೆ ಕರ್ತವ್ಯವಲ್ಲ. ಇದೇ ಅಭಿಪ್ರಾಯವನ್ನು ಗೀತಾಕಾರರು "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ತನ್ನ ವಂಶಾನುಗತವಾಗಿ ಬಂದಿರುವ ತನ್ನ ಕುಲಗುರುಗಳು ಹೇಳಿರುವ ಧರ್ಮಮಾರ್ಗವನ್ನು ಬಿಟ್ಟು ಪರಧರ್ಮಕ್ಕೆ ಕೈಹಾಕದಿರುವುದೇ ಶ್ರೇಯಸ್ಕರವೆಂದು ಬೋಧಿಸಿರುವುದರಿಂದ ಅನೂಚಾನವಾಗಿ ಬಂದ ತಮ್ಮ ತಮ್ಮ ಮತಾಚಾರ್ಯರಿಂದ ಸ್ಥಾಪಿತವಾದ ಧರ್ಮಮಾರ್ಗದಿಂದ ಯಾರೂ ಚ್ಯುತರಾಗದಂತೆ ಜಗದೀಶ್ವರನು ಸದ್ಬುದ್ಧಿಯನ್ನೀಯಲಿ.

ಯುದ್ಧವಾರ್ತೆ.

ಸಿಂಗಪುರದ ಆಕ್ರಮಣ ಪ್ರಯತ್ನವೇ?

ಡಚ್ ಈಸ್ಟ್ ಇಂಡೀಸಿನ ಪ್ರಧಾನ ನೆಲೆಯಾದ ಸೌರಬಾಯಾ ಮೇಲೆ ಮೆಕ್ ಆರ್ಥರ್-ನಿಮಿಟ್ಸ್ ಮೌಂಟ್ ಬ್ಯಾಟನ್ ಪಡೆಗಳು ಸಂಘಟಿತ ರೀತಿಯಲ್ಲಿ ದಾಳಿ ಮಾಡಿದುದನ್ನು ಸಿಂಗಪುರ ಮತ್ತು ಫ್ರೆಂಚ್ ಇಂಡೋಚೀಣದ ನೆಲೆಗಳನ್ನಾಕ್ರಮಿಸಿಕೊಂಡು ತದನಂತರ ಫಿಲಿಪೈನಿನ ಮೇಲೆ ಏಕಕಾಲದಲ್ಲಿ ಎರಡು ದಿಕ್ಕುಗಳಿಂದ ಮುತ್ತಿಗೆ ಹಾಕಲಾಗುವುದೆಂಬುದನ್ನು ಈ ದಾಳಿ ಸೂಚಿಸುವುದೆಂದು ಮಿಲಿಟರಿ ವ್ಯಾಖ್ಯಾನಕಾರರು ಅಭಿಪ್ರಾಯಪಡುತ್ತಿದ್ದಾರೆ. ಜಪಾನಿ ನೌಕಾ ಪಡೆ ಯುದ್ಧಕ್ಕಿಳಿಯದೆ ಇನ್ನೂ ತಲೆ ಮರೆಸಿಕೊಂಡಿದೆ. ಚೀಣಾ ತೀರದಲ್ಲಿರುವ ನೆಲೆಗಳನ್ನಾಕ್ರಮಿಸಿಕೊಳ್ಳುವುದಾಗಿ ಫೆಸ್ಟರ್ ನಿಮಿಟ್ಸ್ ಪದೇ ಪದೇ ಹೇಳುತ್ತಲೇ ಬಂದಿದ್ದಾರೆ. ಹಾಗೆಯೇ ಜನರಲ್ ಡಗ್ಲಾಸ್ ಮೆಕ್ ಆರ್ಥರರೂ ಫಿಲಿಪೈನ್ಸ್ ಮಾರ್ಗವನ್ನು ಸರಿಪಡಿಸಿಕೊಂಡು ಮತ್ತೆ ಅಲ್ಲಿ ಬಂದು ನೆಲಸುವುದಾಗಿ ಮೇಲಿಂದ ಮೇಲೆ ಸೂಚಿಸುತ್ತಿದ್ದಾರೆ.

ಇಂಫಾಲ್ ಆಕ್ರಮಣ ಪ್ರಯತ್ನ ಫಲಿಸುವದಿಲ್ಲ

ಮಳೆಗಾಲ ಇನ್ನಷ್ಟು ಬಲವಾಗುವುದರೊಳಗೆ ಇಂಫಾಲನ್ನೂ ಅದರ ವಿಮಾನಾಶ್ರಯಗಳನ್ನೂ ಆಹಾರ ಕೋಠಿಗಳನ್ನೂ ವಶಪಡಿಸಿಕೊಳ್ಳಲು ಜಪಾನಿಗಳು ಈತನಕ ಮಾಡಿರುವದಕ್ಕಿಂತಲೂ ಪ್ರಬಲ ಪ್ರಯತ್ನ ನಡೆಸುವಂತಿವೆ ಎಂಬುದಾಗಿ ಮಿತ್ರ ಸೇನಾ ಖಾತೆಯ ಹೆಡ್‌ಕ್ವಾರ್ಟರ್ಸಿನಲ್ಲಿರುವ ಎ. ಪಿ. ಐ. ವಿಶೇಷ ಬಾತ್ಮೀದಾರರು ತಿಳಿಸುತ್ತಾರೆ. ಆದರೆ ಇಂಫಾಲಿನ ಆಕ್ರಮಣಕ್ಕಾಗಿ ಈ ತನಕ ಶತ್ರುಗಳು ಹೂಡಿದ ಮುತ್ತಿಗೆಗಳೆಲ್ಲವನ್ನೂ ಮಿತ್ರ ಸೇನೆ ನಿರರ್ಥಕಗೊಳಿಸಿವೆ. ಜಪಾನಿಗಳು ವಾಟ್ಸನಾ ಕ್ಷೇತ್ರದಿಂದಲೂ ಸಹ ರಿಸರ್ವ್ ಪಡೆಗಳನ್ನು ಬರಮಾಡಿಕೊಂಡು ಭಾರಿಯಾಗಿ ಸೇನೆಯನ್ನು ಜಮಾಯಿಸಿಕೊಂಡು ನಿಂತಿರುವುದಾದರೂ, ಮಿತ್ರಸೇನಾನಿಗಳು ಇಂಫಾಲ್ ಮೈದಾನವನ್ನು ಉಳಿಸಿಕೊಳ್ಳುವ ಭರವಸೆಯಿಂದ ಇದ್ದಾರೆ. ಇಂಫಾಲಿಗೆ ದಕ್ಷಿಣದಲ್ಲಿ ಟಿಡ್ಡಿಂ ರಸ್ತೆ ಭಾಗದಲ್ಲೂ ಉತ್ತರದಲ್ಲಿ ಕಾಲೆಲ್-ಟಾಮು ಭಾಗದಲ್ಲೂ ಜಪಾನಿಗಳು ಹಾಕಿದ ಮುತ್ತಿಗೆಗಳನ್ನು ಮಿತ್ರ ಸೇನೆ ನಿರರ್ಥಕಗೊಳಿಸಿ, ಶತ್ರುಗಳಿಗೆ ಅಪಾರ ನಷ್ಟವನ್ನುಂಟುಮಾಡಿದೆ. ಇಂಫಾಲ್ ಮೈದಾನಕ್ಕೆ ಪೂರ್ವ ಪಶ್ಚಿಮಗಳಲ್ಲಿ ಶತ್ರುಗಳು ಹಾಕಿದ ಮುತ್ತಿಗೆಗಳೂ ನಿರರ್ಥಕವಾದುವೆಂದು ಹೇಳಲಾಗಿದೆ.

ಬೊಂಬಾಯಿ ಬೆಂಕಿ ಅನಾಹುತದಿಂದ ನಷ್ಟಗೊಂಡವರಿಗೆ ಪರಿಹಾರ

ಇಂಡಿಯಾ ಸರ್ಕಾರಕ್ಕೂ-ಫೈರ್ ಇನ್‌ಶೂರೆನ್ಸ್ ಕಂಪೆನಿಗಳಿಗೂ ಒಂದು ಒಪ್ಪಂದವಾಗಿ, ಬೊಂಬಾಯಿ ಅಗ್ನಿ ಪ್ರಮಾದದಲ್ಲಿ ನಷ್ಟಗೊಂಡವರಿಗೆ ಇಂಡಿಯಾ ಸರ್ಕಾರವು ಕ್ಲೇಂ ಮೊಬಲಗಿನ ಶೇಕಡಾ ೭೨||ಯಷ್ಟನ್ನೂ ಇನ್‌ಶೂರೆನ್ಸ್ ಕಂಪೆನಿಗಳು ಶೇಕಡ ೧೨|| ಯಷ್ಟನ್ನೂ ಕಟ್ಟಿಕೊಡುತ್ತವೆ. ಉಳಿದ ೧೫ಭಾಗವನ್ನು ಕ್ಲೇಂದಾರರೇ ಸಹಿಸಬೇಕು ಎಂದು ಗೊತ್ತುಮಾಡಲಾಗಿದೆ. ಇನ್‌ಶೂ

ರೆನ್ಸ್ ಕಂಪೆನಿಗಳು ಕೊಡಬೇಕಾದ ಮೊಬಲಗನ್ನೂ ಸಹ ಇಂಡಿಯಾ ಸರ್ಕಾರವೇ ಪಾವತಿಮಾಡಿ, ಆ ಹಣವನ್ನು ಕಂಪೆನಿಗಳಿಂದ ವಾರ್ಷಿಕ ಕಂತುಗಳಲ್ಲಿ ವಸೂಲ್ಮಾಡಿಕೊಳ್ಳುತ್ತದೆ ಮರೀನ್ ಇನ್ಷೂರೆನ್ಸ್ ವಿಚಾರದಲ್ಲಿ ಸರ್ಕಾರವು ಶೇಕಡಾ ೮೦ ರಷ್ಟು ನಷ್ಟವನ್ನು ಮಾತ್ರ ಕಟ್ಟಿಕೊಡುತ್ತದೆಂದು ಹೇಳಲಾಗಿದೆ

ಭಾರತದಿಂದ ಕಲ್ಲಿದ್ದಿಲಿನ ರಫ್ತು

ಭಾರತದಲ್ಲಿ ಕಲ್ಲಿದ್ದಿಲಿನ ಅಭಾವ ಪ್ರಾಪ್ತವಾಗಿ ತುಂಬ ತೊಂದರೆಯಾಗಿರುವುದಾದರೂ, ಮುಖ್ಯ ಯುದ್ಧ ಕಾರ್ಯಗಳಿಗಾಗಿ ಅಲ್ಪ ಸ್ವಲ್ಪ ಕಲ್ಲಿದ್ದಿಲನ್ನು ಹೊರಕ್ಕೆ ರವಾನಿಸಬೇಕಾದದ್ದು ಅತ್ಯಗತ್ಯವಾಗಿದೆ ಎಂದು ಇಂಡಿಯಾ ಸ್ಟೇಟ್ ಸೆಕ್ರೆಟರಿ ಅಮೆರಿಯವರು ಕಾಮನ್ಸ್ ಸಭೆಯಲ್ಲಿ ಹೇಳಿದರು

ವಿಷವಾಯು ಯುದ್ಧಕ್ಕೆ ಮಿತ್ರರು ಸಿದ್ಧರಿದ್ದಾರೆ

" ವಿಷವಾಯು ಯುದ್ಧಕ್ಕೆ ಸಜ್ಜಿತರಾದ ತರಪೇತಾದ ಹತ್ತಾರು ಡಿವಿಜನ್ನುಗಳು ಅಮೇರಿಕದಲ್ಲಿ ಸಿದ್ಧವಾಗಿವೆ ಇವರು ಜರ್ಮನರು ವಿಷವಾಯು ಪ್ರಯೋಗಿಸುವುದನ್ನೇ ಕಾದು ಕುಳಿತಿದ್ದಾರೆ ಇವರು ನೇರವಾಗಿ ಯೂರೋಪಿನ ಪಶ್ಚಿಮ ರಂಗದಲ್ಲಿರುವ ಮಿತ್ರ ಸೈನ್ಯಗಳೊಡನೆ ಸೇರಿಕೊಳ್ಳಲು ಯಾನ ಮಾಡಲಿದ್ದಾರೆ ಯುದ್ಧ ಖಾತೆಯವರು ಹಲವು ಮಿತ್ರ ರಾಷ್ಟ್ರಗಳ ಪತ್ರಿಕೋದ್ಯಮಿಗಳನ್ನು ೪೦೦೦ ಮೈಲಿ ಪ್ರವಾಸ ಕರೆದುಕೊಂಡು ಹೋಗಿ ಯುದ್ಧಮುಖಕ್ಕೆ ಹೊರಡಲು ಸಿದ್ಧರಾಗಿರುವ ಯೋಧರನ್ನು ತೋರಿಸಿದರು ಈಗ ಯುದ್ಧ ಶಿಕ್ಷಣ ನಡೆಯುತ್ತಿರುವ ಮೈದಾನಗಳ ವಿಸ್ತೀರ್ಣ ನೂರು ಚದುರ ಮೈಲಿಗಳು ಈಗ ಇಂಗ್ಲೆಂಡಿನಲ್ಲಿರುವ ಅಮೇರಿಕನ್ ಪಡೆಗಳಿಗೆ ಅದ್ಭುತ ಬೆಂಬಲವಿದೆ ಇನ್ಯಾವ ಸೈನ್ಯಕ್ಕೂ ಇಂತಹ ಅಗಾಧ ಮೀಸಲು ಪಡೆಯಿಲ್ಲವೆಂದು ಹೇಳಲಾಗಿದೆ

ಅಮೇರಿಕನ್ ವಿಮಾನ ಪಡೆಗಳ ಸಾಹಸ

ಅಮೇರಿಕವು ಯುದ್ಧಕ್ಕಿಳಿದ ೩ ತಿಂಗಳಿಂದ, ಅಮೇರಿಕನ್ ವಿಮಾನ ಪಡೆಗಳು ೨೦,೧೭೪ ಶತ್ರು ವಿಮಾನಗಳನ್ನು ಕೆಡವಿವೆ ಬಹುಶಃ ಇನ್ನೂ ೧೨,೦೦೦ ಶತ್ರುವಿಮಾನಗಳನ್ನು ನಾಶಪಡಿಸಿವೆ, ಎಂದು ಅಮೇರಿಕನ್ ವಿಮಾನ ಸೇನಾನಿ ಜನರಲ್ ಅರ್ನಾಲ್ಡ್ ಪ್ರಕಟಿಸಿದ್ದಾರೆ ಇದೇ ಕಾಲದಲ್ಲಿ ೬೧೫೪ ಅಮೇರಿಕನ್ ವಿಮಾನಗಳು ನಷ್ಟವಾಗಿವೆ ಎಂದು ಹೇಳಲಾಗಿದ

ಜರ್ಮನರು ಹಿಂದೋಡಿದರು

ಅನ್‌ಜಿಯೋ ಕ್ಷೇತ್ರಕ್ಕೆ ಈಶಾನ್ಯದಲ್ಲಿ ೧೨ ಮೈಲಿ ದೂರದಲ್ಲಿರುವ ಸಿಸ್ಟರ್ನಿಯಾಕ್ಕೆ ಮಿತ್ರಸೇನೆಗಳು ಪ್ರವೇಶಿಸಿವೆ ೮ನೇ ಸೇನಾ ಪ್ರದೇಶದಲ್ಲಿ ಕೆನಡಿಯನ್ ಸೇನೆ ಮೇಲ್ಪ ನದಿಯನ್ನು ದಾಟಿ ಪಾಂಟಿಕಾರ್ವೋವನ್ನು ಆಕ್ರಮಿಸಿಕೊಂಡಿವೆ ಟೆರನ್‌ಸಿಯಾ-ಅನ್‌ಜಿಯೋ ಗಾಣ್ಯಗಳ ಮಧ್ಯೆ ಇರುವ ತೀರಪ್ರದೇಶವನ್ನೂ, ೨೦ ಮೈಲಿ ಮೇಲ್ಭಾಗದಪ್ರದೇಶವನ್ನೂ ಜರ್ಮನರು ಬಿಟ್ಟುಕೊಟ್ಟು ಹಿಮ್ಮೆಟ್ಟಿದ್ದಾರೆ ಜರ್ಮನರು ಈ ಪ್ರದೇಶದಿಂದ ಹಿಮ್ಮೆಟ್ಟಿದ್ದು ಅವರು ಆ ಭಾಗವನ್ನು ಬಿಟ್ಟುಹೋದಂತೆಯೇ ಎಂದು ಭಾವಿಸಲ್ಪಟ್ಟಿದೆ ಅಮೆರಿಕನ್ ಸೇನೆಗಳು ಟೆರನ್ ಸಿಯಾದಿಂದ ನುಗ್ಗಿಬರುತ್ತಾ ಪಾಂಟೈನ್ ಜೌಗುಪ್ರದೇಶದ ಮಧ್ಯಭಾಗದಲ್ಲಿದ್ದ ಜರ್ಮನ್ ಸೇನೆಗೆ ಪಾರ್ಶ್ವಗಳಿಂದ ಮುತ್ತಿಗೆ ಹಾಕಿದಾಗ ಇಲ್ಲಿ ಜರ್ಮನರ ಪರಿಸ್ಥಿತಿ ದುಸ್ಸಹವಾಯಿತು. ಜನರಲ್ ಅಲೆಕ್ಸಾಂಡರರ ಪ್ರಕಟಣೆ ಪ್ರಕಾರ ಜರ್ಮನರು, ೫ನೇ ಸೇನೆಯನ್ನು ಪ್ರತಿಭಟಿಸಿ ನಿಲ್ಲುವಷ್ಟು ಶಕ್ತಿ ಹೊಂದಿರಲಿಲ್ಲವೆಂದು ಗೊತ್ತಾಗುತ್ತದೆ

ಐಸ್ಲೆಂಡ್ ಸ್ವತಂತ್ರವಾಯಿತು

ಐಸ್ಲೆಂಡ್ ಶಾಸನ ಸಭೆಯು ಪೂರ್ಣ ಸ್ವತಂತ್ರ ಪ್ರಜಾಪ್ರಭುತ್ವವಾಗಲು ತೀರ್ಮಾನಿಸಿದೆ ಜೂನ್ ೧೭ನೇ ತಾ|| ಐಸ್ಲೆಂಡಿನ ಸ್ವಾತಂತ್ರ್ಯ ಘೋಷಿಸಲ್ಪಡುವುದು ನೂತನ ಪ್ರಭುತ್ವಕ್ಕೆ ಈಗಾಗಲೇ ಅಮೇರಿಕವು ಮನ್ನಣೆ ಇತ್ತಿದೆ ಐಸ್ಲೆಂಡ್ ೧೨೬೪ರ ವರೆಗೆ ಸ್ವತಂತ್ರವಾಗಿತ್ತು ಇಲ್ಲಿಗೆ ಪ್ರಥಮತಃ ಒಂದು ನೆಲಸಿದವರು ೮೭೪ರಲ್ಲಿ ಬಂದರು ೧೨೬೪ರಲ್ಲಿ ನಾರ್ವೆ ಐಸ್ಲೆಂಡ್‌ಗಳಿಗೆ ಒಂದು ಕರಾರಾಗಿ ಅದು ನಾರ್ವೆಯ ಅಧೀನಕ್ಕೆ ಬಂದಿತು ೧೩೮೧ರಲ್ಲಿ ನಾರ್ವೆ ಡೆನ್ಮಾರ್ಕಿನ ಅಧೀನವಾಯಿತು ೧೮೧೪ರಲ್ಲಿ ನಾರ್ವೆ ಡೆನ್ಮಾರ್ಕಿನಿಂದ ಪ್ರತ್ಯೇಕವಾದಾಗ ಐಸ್ಲೆಂಡ್ ಡೆನ್ಮಾರ್ಕಿನ ಅಧೀನದಲ್ಲೇ ಉಳಿಯಿತು ೧೯೧೮ನೆಯ ಡಿಸೆಂಬರ್ ೧ನೇ ತಾ|| ನಿಂದ, ಐಸ್ಲೆಂಡ್ ಡೇನ್ಮಾರ್ಕ್‌ಗಳಿಗೆ ಆಗಿರುವ ಒಪ್ಪಂದದ ಪ್ರಕಾರ, ಐಸ್ಲೆಂಡ್ ಪೂರ್ಣ ಸ್ವತಂತ್ರ ರಾಷ್ಟ್ರವಾಗಿ ಪರಿಗಣಿಸಲ್ಪಟ್ಟಿದೆ ಐಸ್ಲೆಂಡಿನ ದೊರೆಯೇ ಡೆನ್ಮಾರ್ಕಿನ ದೊರೆಯಾಗಿದ್ದುದರಿಂದ ಮಾತ್ರವೇ ಉಭಯ ರಾಷ್ಟ್ರಗಳಿಗೂ ಅನುಬಂಧವಿದ್ದದ್ದು ಡೆನ್ಮಾರ್ಕಿನ ದೊರೆಗೆ ಅವರು ಐಸ್ಲೆಂಡಲ್ಲೂ ದೊರೆಯಾಗಿದ್ದುದರಿಂದ ೩೦ ಸಾವಿರ ಕ್ರೋನರ್‌ವರಮಾನವಿತ್ತು (ಒಂದು ಕ್ರೋನರಿಗೆ ಸುಮಾರು ೯ ಆಣೆ) ಐಸ್ಲೆಂಡಿನ ವಿಸ್ತೀರ್ಣ ಸುಮಾರು ೪೦ ಸಾವಿರ ಚ|| ಮೈಲಿ ಜನ ಸಂಖ್ಯೆ ೧,೨೦,೦೦೦ ಭೂ, ವಿಮಾನ ಅಥವಾ ನೌಕಾ ಸೇನೆಯೇ ಇಲ್ಲದ ರಾಷ್ಟ್ರವಿದು ಆದರೂ ಶತಮಾನಗಳಿಂದ ಸಾಧಿಸುತ್ತಿದ್ದ ಸ್ವಾತಂತ್ರ್ಯವನ್ನದು ಈಗ ಪೂರ್ಣವಾಗಿ ಸಾಧಿಸಿಕೊಂಡಿದೆ

ಬಲ್ಗೇರಿಯದಲ್ಲಿ ಜರ್ಮನ್ ವಿರುದ್ಧ ಭಾವನೆ

ಸ್ಟಾಕ್‌ಹೋಮಿಗೆ ಬಲ್ಗೇರಿಯಾದಿಂದ ಬಂದ ಸ್ವೀಡಿಷ್ ಪ್ರಜೆಯೊಬ್ಬನು ಬಲ್ಗೇರಿಯಾ ಗಡಿಯಲ್ಲಿ ಜರ್ಮನರ ಅಗಾಧ ಸೈನ್ಯಗಳು ಸೇರಿವೆಯೆಂದು ಬಲ್ಗೇರಿಯನ್ನರು ತಮ್ಮ ದೇಶವೂ ರುಮೇನಿಯಾ ಗತಿಯನ್ನೇ ಹಿಡಿದೀತೆಂದು ಹೆದರಿಕೆಯಿಂದಿದ್ದಾರೆಂದೂ ಇವರಿಂದ ಜನರಿಗೂ, ಜರ್ಮನ್ ಸೈನ್ಯಗಳಿಗೂ ವಿಷಮ ಭಾವನೆ ಬರಲು ಮಾರ್ಗವಾಗಿದೆಯೆಂದೂ ಆದರೆ ಇದುವರೆಗೆ ಜನರಿಗೂ ನಾಜಿ ಸೈನಿಕರಿಗೂ ಕೈಕಲಹವಿಲ್ಲವೆಂದೂ ತಿಳಿಸಿದ್ದಲ್ಲದೆ " ಈಗ ರಷ್ಯದ ಬಗ್ಗೆ ಎಂದೂ ಇಲ್ಲದ ಸಹಾನುಭೂತಿ ಬಲ್ಗೇರಿಯದಲ್ಲಿದೆ ಬಲ್ಗೇರಿಯಕ್ಕೆ ರಷ್ಯನ್ ಸೇನೆಗಳು ಪ್ರವೇಶಿಸಿದರೇ ಆದರೆ ಅವನ್ನು ಬಲ್ಗೇರಿಯನರು, ಆಕ್ರಮಣಾ ಸೇನೆಗಳಂತಲ್ಲ, ತಮ್ಮ ಬಂಧನವನ್ನು ಬಿಡಿಸಲು ಬಂದ ಸೇನೆಗಳೆಂದು ಭಾವಿಸಿ ಅವನ್ನು ಸ್ವಾಗತಿಸುತ್ತಾರೆ ಇದಕ್ಕಾಗಿ ಇಲ್ಲಿನ ಜನ ಸಿದ್ಧರಾಗುತ್ತಿದ್ದಾರೆ ಈಗಾಗಲೇ ಗೆರಿಲ್ಲಾ ಪಡೆಗಳು ಸಿದ್ಧವಾಗುತ್ತಿವೆ ಅಗಲೇ ಹಲವರು ಕಡೆಗಳಲ್ಲಿ ಜರ್ಮನ್ ಸರಬರಾಜುಗಳನ್ನು ತಡೆಗಟ್ಟುವ ಕ್ರಮ ತೆಗೆದುಕೊಳ್ಳಲಾಗಿದೆ" ಎಂದು ಹೇಳಿರುವನು

ಹಿಟ್ಲರ್ ವ್ಯೂಹ ಛಿದ್ರಿಸಲು ಪ್ರಯತ್ನ

ಇಟಲಿಯಲ್ಲಿ ಮಿತ್ರ ಬಲಗಳು ಗುಸ್ಟವ್‌ವ್ಯೂಹವನ್ನೊಡೆದು ಹಿಟ್ಲರ್ ವ್ಯೂಹವನ್ನು ತುಳಿಯಲು ಸಿದ್ಧವಾಗಿನಿಂತಿವೆ! ಕಳೆದ ಸಂಗ್ರಾಮದ ಕೊನೆಯ ಅಂಕದಲ್ಲಿ ಜರ್ಮನರು ನಡೆಸಿದ ಆತ್ಮರಕ್ಷಣಾ ಕದನಗಳ ನೆನಪು ಇಟಲಿಯಲ್ಲಿ ಹಲವರಿಗೆ ಉಂಟಾಗುತ್ತಿದ'

ಕಾಮನ್ಸ್ ಸಭೆಯಲ್ಲಿ ಚರ್ಚಿಲರ ವಿವರಣೆ

ತುರ್ಕಿಯನ್ನು ಯುದ್ಧಕ್ಕೆಳೆಯದೆಯೇ ಬಾಲ್ಕನ್ ಮತ್ತು ಆಗ್ನೇಯ ಯೂರೋಪ್ ಯುದ್ಧದಲ್ಲಿ ಮಿತ್ರರು ವಿಜಯ ಸಾಧಿಸುವ ಭರವಸೆ ಇದೆ ಎಂಬುದಾಗಿ ಚರ್ಚಿಲ್ಲರು ಕಾಮನ್ಸ್ ಸಭೆಯಲ್ಲಿ ವಿದೇಶಾಂಗ ವ್ಯವಹಾರಗಳ ವಿಚಾರವಾಗಿ ಚರ್ಚೆಯನ್ನು ಆರಂಭಿಸುತ್ತಾ ಹೇಳಿದರು ಅನಂತರ ಬ್ರಿಟನ್ನಿಗೂ ಮಿತ್ರ ರಾಷ್ಟ್ರಗಳಿಗೂ ಇರುವ ವ್ಯವಹಾರ, ಜರ್ಮನ್ ಅಧೀನದಲ್ಲಿರುವ ರಾಷ್ಟ್ರಗಳಲ್ಲಿ ಶತ್ರುಗಳನ್ನು ಪ್ರತಿಭಟಿಸಿ ಹೋರಾಡುತ್ತಿರುವ ಸಂಘಗಳೊಡನೆ ಬ್ರಿಟನ್ ಇಟ್ಟುಕೊಂಡಿರುವ ಸಂಬಂಧ ತಟಸ್ಥರಾಷ್ಟ್ರಗಳೊಡನೆ ಬ್ರಿಟನ್ ಮಾಡಿಕೊಂಡಿರುವ ಏರ್ಪಾಟುಗಳು ಈ ವಿಚಾರವಾಗಿ ದೀರ್ಘಕಾಲ ಭಾಷಣ ಮಾಡಿದರು ಅನಂತರ ಅವರು ಬ್ರಿಟಿಷ್ ಸಾಮ್ರಾಜ್ಯದ ಸಂಘಟನೆಯನ್ನು ಹೊಗಳಿದರು ಆ ಮೇಲೆ ಜರ್ಮನಿ ಜಪಾನ್‌ಗಳ ಮಾತಿತ್ತ ಜರ್ಮನಿ ಜಪಾನ್‌ಗಳೆರಡೂ ಯಾವ ಷರತ್ತೂ ಹಾಕದೆ ಸಂಪೂರ್ಣವಾಗಿ ಶರಣಾಗಿ ಬಂದರೇನೇ ಅವುಗಳೊಡನೆ ವ್ಯವಹಾರ ನಡೆಸುವುದು ಎಂದು ಸ್ಪಷ್ಟಪಡಿಸಿದರು ಆ ನೀತಿಯನ್ನು ಬದಲಾಯಿಸುವುದೇ ಇಲ್ಲವೆಂದರು ಯೂರೋಪಿಗೆ ಶಾಂತಿ ಮತ್ತು ರಕ್ಷಣೆ ಲಭಿಸಲು ಜರ್ಮನಿಯ ಎಲ್ಲೆ ಮೇರೆಗಳನ್ನು ಬದಲಾಯಿಸುವುದು ಅಗತ್ಯವಾದರೆ ಅಂಥ ಬದಲಾವಣೆಗಳನ್ನು ಕೈಕೊಳ್ಳುವುದಿಲ್ಲವೆಂದು ಶತ್ರುವಿಗೆ ಭರವಸೆ ಕೊಡುವ ಮಾತೇ ಇನ್ನು ಇಲ್ಲ ಎಂದರು. ಇನ್ನು ಮುಂದೆ ಯುದ್ಧಗಳಾಗದಂತೆ ತಡೆಗಟ್ಟಲು ಸಾಕಷ್ಟು ಅಧಿಕಾರಗಳನ್ನು ಪಡೆದಿರುವ ವಿಶ್ವ ಸಂಸ್ಥೆಯೊಂದನ್ನು ಸ್ಥಾಪಿಸಲು ಮಿತ್ರ ರಾಷ್ಟ್ರಗಳು ಉದ್ದೇಶಪಟ್ಟಿರುವುದಾಗಿ ಅವರು ಹೇಳಿದರು

ಲೋಯಾಂಗ್ ಆಕ್ರಮಣ

ಹೊನಾನ್ ಪ್ರಾಂತ್ಯದ ಪ್ರಸಿದ್ಧವಾದ ಲೋಯಾಂಗ್ ನಗರ ಜಪಾನರಿಂದ ಸಂಪೂರ್ಣವಾಗಿ ಆವರಿಸಲ್ಪಟ್ಟಿರುವುದಾಗಿ ವರ್ತಮಾನ ಲೋಯಾಂಗಿನಲ್ಲಿರುವ ಚೀಣೆ ರಾಣ್ಯದೊಡನೆ ರೇಡಿಯೋ ಸಂಪರ್ಕವೂ ಸಹ ಇಲ್ಲದಾಗಿದೆ ಎಂದು ಹೇಳಲಾಗಿದೆ

ಜಪಾನಿ ಸೈನ್ಯದ ಹಂಚಿಕೆ

ಈಗ ಅಮೇರಿಕಾಕ್ಕೆ ಬಂದಿರುವ ಚೀಣೀ ಮಿಲಿಟರಿ ನಿಯೋಗದ ನಾಯಕರಾದ ಜನರಲ್ ಷಾಂಗ್‌ಫೇರವರು ಜಪಾನರ ಸೈನ್ಯಗಳು ನಾನಾ ರಂಗಗಳಲ್ಲಿ ಯಾವ ರೀತಿ ಹಂಚಲ್ಪಟ್ಟಿದೆ ಎಂದು ತಿಳಿಸಿದರು ಅದರಂತೆ ಚೀಣದಲ್ಲಿ ೨೯|| ಡಿವಿಜನ್ ಸೇನೆ ಪೆಸಿಫಿಕ್ ಸಾಗರದ ದಕ್ಷಿಣ ದ್ವೀಪಗಳಲ್ಲಿ ೬೮|| ಡಿವಿಜನ್‌ಗಳು ಥಾಯಿಲೆಂಡ್ ಮತ್ತು ಬರ್ಮಾಗಳಲ್ಲಿ ೧೩|| ಡಿವಿಜನ್‌ಗಳು ಮಂಚೂರಿಯಾದಲ್ಲಿ ೨೮ ಡಿವಿಜನ್‌ಗಳು ಜಪಾನ್ ಮಾತೃಭೂಮಿಯಲ್ಲಿ ೧೧ ಡಿವಿಜನ್‌ಗಳು ಅಂತೂ ಒಟ್ಟು ೧೧೨ ಡಿವಿಜನ್ ಸೇನೆಗಳು. ಒಂದು ಜಪಾನಿ ಡಿವಿಜನ್ ಸೇನೆಯಲ್ಲಿ ೧೮ ಸಹಸ್ರದಿಂದ ೨೦ ಸಹಸ್ರ ಯೋಧರಿರುವರು ಜಪಾನರ ಈಗಿನ ಸ್ಥಿತಿಯನ್ನು ವಿವರಿಸುತ್ತಾ, ಜಪಾನರು ಪ್ರತಿ ತಿಂಗಳಲ್ಲೂ ೧೫೦೦ ವಿಮಾನಗಳನ್ನು ತಯಾರಿಸುತ್ತಿರುವುದಾಗಿಯೂ, ಚೀಣದಲ್ಲಿ ೫೦ ಲಕ್ಷ ಯೋಧರೂ ೧೦ ಲಕ್ಷ ಗೆರಿಲ್ಲಾ ಯೋಧರೂ ಇರುವರೆಂದೂ ತಿಳಿಸಿದ್ದಲ್ಲದೆ ಈಗ ಯೂರೋಪಿನ ಮೇಲೆ ಬ್ರಿಟನ್ನಿನ ನೆಲೆಗಳಿಂದ ಹೊರಹೊರಟ ವಿಮಾನಗಳು ಯಾವರೀತಿ ದಾಳಿಗಳನ್ನು ಮಾಡುತ್ತಲ್ಲಿವೆಯೋ ಅದೇರೀತಿ ಚೀಣಾ ನೆಲೆಗಳಿಂದ ಜಪಾನನ್ನು ವಿಮಾನದಾಳಿ ಮಾಡಿ ಧ್ವಂಸಮಾಡಬಹುದು ಎಂದೂ ತಿಳಿಸಿದರು

ವಿದ್ಯುತ್ ಕಾರಾಗಾರಕ್ಕೆ ನಷ್ಟ

ಮೇ ೧೯ನೇ ತಾ|| ಸಂಜೆ ೭-೩೦ ಗಂಟೆ ಸಮಯದಲ್ಲಿ ಶಿವನಸಮುದ್ರದ ಜನರೇಟಿಂಗ್ ಸ್ಟೇಷನ್ನಿಗೆ ಸಿಡಿಲು ಬಡಿದು ಕಟ್ಟಡ, ಜನರೇಟಿಂಗ್ ಯಂತ್ರೋಪಕರಣಗಳು ಮುಂತಾದವುಗಳೆಲ್ಲಾ ಬಹಳಮಟ್ಟಿಗೆ ನಾಶವಾಗಿವೆ. ಪ್ರಾಣಹಾನಿ ಏನೂ ಸಂಭವಿಸಲಿಲ್ಲ ಅನಿರೀಕ್ಷಿತವಾದ ಈ ಘಟನೆಯ ಫಲವಾಗಿ ಶಿವನಸಮುದ್ರದ ಜನರೇಟಿಂಗ್ ಸ್ಟೇಷನ್ನಿನ ಕೆಲಸವು ನಿಲ್ಲಬೇಕಾಗಿ ಬಂದಿದೆ ಆದ್ದರಿಂದ ಈಗ ಜೋಗದಿಂದ ಒದಗಿಸಲಾಗಿರುವ ವಿದ್ಯುಚ್ಛಕ್ತಿ ಸರಬರಾಜನ್ನು ಮಿತವಾಗಿ ಉಪಯೋಗಿಸಬೇಕಾಗಿದೆ. ಮೈಸೂರು, ಬೆಂಗಳೂರು ಮತ್ತು ಚಿನ್ನದ ಗಣಿಗಳಲ್ಲಿ ಮಾತ್ರವೇ ಅತಿ ಮುಖ್ಯವಾದ ಕಾರ್ಯಗಳಿಗೆ ಮಾತ್ರ ವಿದ್ಯುಚ್ಛಕ್ತಿ ಒದಗುವುದು ಶಿವನಸಮುದ್ರದ ಜನರೇಟಿಂಗನ್ನು ದುರುಸುಮಾಡಿ, ವಿದ್ಯುಚ್ಛಕ್ತಿ ಯಂತ್ರೋಪಕರಣಗಳನ್ನು ಸರಿಪಡಿಸಲು ವಿದ್ಯುಚ್ಛಕ್ತಿ ಇಲಾಖೆಯು ಶಕ್ತಿಮೀರಿ ಶ್ರಮಿಸುತ್ತಿದೆ ಒಂದು ತಿಂಗಳೊಳಗೆ ಕನಿಷ್ಠ ಪಕ್ಷ ಅರ್ಧಮಟ್ಟಿನಾದರೂ ವಿದ್ಯುಚ್ಛಕ್ತಿ ಸರಬರಾಜನ್ನು ಏರ್ಪಡಿಸಲಾಗುವುದೆಂದು ಆಶಿಸಲಾಗಿದೆ." ಎಂದು ಮೈಸೂರು ಸರ್ಕಾರದ ಪ್ರಕಟಣಾಧಿಕಾರಿ ಶ್ರೀ ಸಿ. ನಂಜರಾಜಅಯ್ಯಂಗಾರ್‌ರವರು ತಿಳಿಸಿರುತ್ತಾರೆ

ಶಿವಸಂಕೀರ್ತನ [illegible]

ವಿವಾಹ ಮಹೋತ್ಸವ

ತೀರ್ಥಹಳ್ಳಿ ತಾ|| [illegible] ವೈದಿಕ [illegible] ನವರ ಪುತ್ರ [illegible] ಮಹಾಪ್ರತ [illegible] ಪುತ್ರಿ [illegible] ಸರ್ವ [illegible] ಹೊಳಲ್ಕೆರೆ [illegible] ನವರ ಪುತ್ರ ಹಾಸನದ [illegible] ವರನಿಗೂ [illegible] ವೇ ಪ್ರಭುಸ್ವಾಮಿ [illegible] ನವರ ಜೇಷ್ಠ ಪುತ್ರಿ [illegible] ಸರ್ವೋಜನ [illegible] ಯಂ ಮಹಾದೇವಯ್ಯನವರ ದ್ವಿತೀಯ ಪುತ್ರ [illegible] ಜಯಾನಂದಯ್ಯ [illegible] ವರನಿಗೂ ಇದೇ [illegible] ಶುಕ್ರವಾರ ಚಿಕ್ಕಕೆರೆ [illegible] ಮದನ [illegible] ನವರ ಪುತ್ರಿ [illegible] ಗೌರಮ್ಮ [illegible] ನವರ ದ್ವಿತೀಯ ಪುತ್ರ [illegible] ವಿವಾಹ ಮಹೋತ್ಸವ [illegible] ಶ್ರೀಮುರುಳಿ ತರೀಕೆರೆ ಹೊಳಲ್ಕೆರೆ [illegible] ಶ್ರೀಗುರು [illegible] ಕಾರಿ [illegible] ತತ್ವ [illegible] ಪ್ರಧಾನ [illegible] ಸವನೀಸಲಿಕ್ಕೆ [illegible]

[illegible] ವೇ [illegible] ಶಾಸ್ತ್ರಿಗಳವರ [illegible] ಎಂಬ ಶಿವಸಂಕೀರ್ತನೆಯನ್ನು ನವರಸಾಲಂಕಾರಯುಕ್ತವಾಗಿ ಇಂಪಾದ ಧ್ವನಿಯಿಂದ [illegible] ಸಮಸ್ತ ಜನರನ್ನು ಆನಂದಗೊಳಿಸಿದರು. ಈ ಮಂಗಲಕಾರ್ಯಕ್ಕಾಗಿ ಅನೇಕ ಕಡೆಗಳಿಂದ ಸುಮಾರು 400-500 ಜನರು [illegible] ಲೌಕಿಕವೈದಿಕ [illegible] ಆಗಮಿಸಿದ್ದ ಇಷ್ಟು ಜನರನ್ನು ಸತ್ಕರಿಸುವ ರೀತಿಯಲ್ಲಿ ವೇ|| ಶಿವಲಿಂಗಯ್ಯನವರೂ ಇವರ ಸಹೋದರರಾದ ಪ್ರಭುಸ್ವಾಮಿಗಳವರೂ ಸಹ ಆದರಿಸಿದರು. ವೇ|| [illegible] ಸ್ವಾಮಿಯವರು [illegible] ಹಾಲಯ್ಯ ಹಚ್ ಎಂ ಸದಾಶಿವಯ್ಯ ಬಿ ಎ [illegible] ಇನ್ಸ್ಪೆಕ್ಟರ್ ಎಂ ಸಿದ್ದಪ್ಪ ಬಿ ಎ ಬಿ ಹೆಚ್ [illegible] ರುದ್ರಯ್ಯ [illegible] ಮಹೇಂದ್ರಪ್ಪ ಡಾಕ್ಟರ್ ಇವರುಗಳ ನೇತೃತ್ವದಲ್ಲಿ ಎಲ್ಲ ಕಾರ್ಯಗಳೂ ಯಶಸ್ವಿಯಾಗಿ ಕೊನೆಗಂಡವು. ಶ್ರೀಜಗದ್ಗುರು ಪಂಚಾಚಾರ್ಯರು ಸರ್ವರಿಗೂ ಇಷ್ಟಾರ್ಥಸಿದ್ಧಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುವೆನು.

ಪ್ರತ್ಯಕ್ಷದರ್ಶಿ

ಜಯಂತೀಮಹೋತ್ಸವ

ಅರಸೀಕೆರೆ ತಾ|| ವೃಂದಾವನಹಳ್ಳಿ ಗ್ರಾಮದ ವೀರಶೈವ ಮಂಡಲಿಯವರು ತಾ|| ೨೭-೪-೪೪ ನೇ ಗುರುವಾರ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವನ್ನು ಅತ್ಯಂತ ಭಕ್ತಿಯಿಂದ ನೆರವೇರಿಸಿದರು.

ಉತ್ಸವದ ದಿವಸ ಗ್ರಾಮದ ಮ|| ರಾ|| ಬಿ ವೀರಪ್ಪಗೌಡರ ಹೊಸಮನೆಯಲ್ಲಿ ರಂಭಾಸ್ತಂಭಗಳಿಂದ ಮಂಟಪವನ್ನು ರಚಿಸಿ ಜಗದಾಚಾರ್ಯರ ಭಾವಚಿತ್ರಪಟವನ್ನು ಪೀಠದಲ್ಲಿರಿಸಿ ಪಂಚಾಭಿಷೇಕ ವಗೈರೆ ಪೂಜೋಪಚಾರಗಳಿಂದ ಉಪಚರಿಸಿ ಮಹಾಮಂಗಳಾರತಿ ಎಡೆನೈವೇದ್ಯಾದಿಗಳು ನಡೆದು ಸರ್ವರು ಶ್ರೀ ಜಗದಾಚಾರ್ಯರ ಜಯಘೋಷವನ್ನು ಮಾಡಿ ಆಚಾರ್ಯರ ಭಾವಚಿತ್ರಪಟವನ್ನು ಶ್ರೀ ಮಲ್ಲಿಕಾರ್ಜುನಸ್ವಾಮಿಯನ್ನು ಮಲ್ಲಿಕಾದಿ ಪುಷ್ಪಮಾಲಿಕೆಗಳಿಂದ ಅಲಂಕರಿಸಿ ಪಲ್ಲಕ್ಕಿಯಲ್ಲಿರಿಸಿ ವಾದ್ಯವೈಭವದೊಡನೆ ಉತ್ಸವವು ರಾತ್ರಿ ೧೦ ಘಂಟೆಗೆ ಹೊರಟಿತು. ಉತ್ಸವದ ಮುಂಭಾಗದಲ್ಲಿ ಪಾಠಶಾಲೆಯ ವಿದ್ಯಾರ್ಥಿಗಳು ಜಗದಾಚಾರ್ಯರ ಮಂಗಲಸ್ತೋತ್ರಾವಳಿಗಳನ್ನು ಹಾಡುತ್ತಿದ್ದರು. ಉತ್ಸವವು ಪ್ರತಿ ಮನೆಯ ಮುಂಭಾಗಕ್ಕೆ ಬಂದಕೂಡಲೆ ಮನೆಯವರು ಕಾಯಿ ಕರ್ಪೂರಾದಿಗಳನ್ನು ಸಮರ್ಪಿಸಿ ಪ್ರಸಾದವಂ ಪಡೆಯು

[illegible] ಗುರು ಪೂಜೆಯು ಮೆರವಣಿಗೆಯು [illegible] ವಾಗಿ ನಡೆದು ಭಾವಿಯ [illegible] ಪಲ್ಲಕ್ಕಿಯನ್ನು ಕಟ್ಟೆಯಮೇಲೆ [illegible] ಭಾವಚಿತ್ರಪಟಕ್ಕೆ [illegible] ಮಂಗಳಾರತಿ [illegible] ಅರ್ಪಿಸಲ್ಪಟ್ಟಿ [illegible] ಪ್ರಸಾದ ಸ್ವೀಕರಿಸಿ [illegible] ವತ್ತ [illegible] ಸಂತೋಷ [illegible]

[illegible] ಉತ್ಸವವಾಗಿ

ಶ್ರೀ ಜಗದ್ಗುರು ರೇಣುಕ ಪಂಚಾಚಾರ್ಯ ಸಂಸ್ಕೃತಕಾಲೇಜು

[illegible] ಅಪೇಕ್ಷೆಯುಳ್ಳ [illegible] ವಿದ್ಯಾರ್ಥಿಗಳು ಜೂನ್ 1 ನೇ [illegible] ತಮ್ಮ ಅಪ್ಲಿಕೇಷನ್ [illegible] ಪ್ರಿನ್ಸಿಪಾಲರವರಿಗೆ ಕಳುಹಿಸಬೇಕು [illegible] ವಿದ್ಯಾರ್ಥಿಗಳು [illegible] ಕೆಳಗೆ [illegible] ತಮ್ಮ [illegible] ಇಟ್ಟು ಒರೆದು [illegible] ವಾಗಿ [illegible]

ಮ್ಯಾನೇಜರ್

ಮರುಳಸಿದ್ಧನಮಠ ಚಿಕ್ಕಪೇಟೆ

ಬೆಂಗಳೂರು ಸಿಟಿ

ಶ್ರೀ ಚಾಮರಾಜೇಂದ್ರ ಸಂಸ್ಕೃತಕಾಲೇಜ್, ಬೆಂಗಳೂರು

ಬೆಂಗಳೂರು ನಗರದ ಕಾಲೇಜಿನಲ್ಲಿ ಕಾರ್ಯಾರಂಭವು ವೈಶಾಖ ಶುದ್ಧ ನವಮಿ ಸೋಮವಾರ (15-5-1944) ರಿಂದ ಪ್ರಾರಂಭವಾಗುವುದು. ಪ್ರಾಥಮಿಕ ಕಾವ್ಯ ಚಂಪೂನಾಟಕ ವಿದ್ವನ್ಮಧ್ಯಮ ವಿದ್ವದುತ್ತಮ ಪರೀಕ್ಷೆಗಳಿಗೆ ತಕ್ಕಂತೆ ವಿದ್ಯಾರ್ಥಿಗಳನ್ನು ತರಬೇತು ಮಾಡಲಾಗುವುದು. ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನೂ ಪರೀಕ್ಷೆಗಳಲ್ಲಿ ಉತ್ತಮರೀತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನೂ ಕೊಡಲಾಗುವುದು. ಮಧ್ಯಾಹ್ನದಹೊತ್ತು ಉಪಾಹಾರ ತಿಂಡಿಕೊಡುವ ಏರ್ಪಾಟು ಮಾಡಲಾಗಿದೆ. ಹಿಂದುಳಿದ ಪಂಗಡಗಳ ವಿದ್ಯಾರ್ಥಿಗಳಿಗೆ ಉತ್ತೇಜನಕೊಡಲು ಕೆಲವು ವಿಶಿಷ್ಟ ಬಹುಮಾನಗಳನ್ನಿಡಲಾಗಿದೆ. ವಿದ್ಯಾರ್ಥಿಗಳ ವಾಸಕ್ಕೆ ಸರ್ಕಾರದ ಹಾಸ್ಟಲ್ ಕಟ್ಟಡವಿದೆ. ಬೆಂಗಳೂರು ನಗರದಲ್ಲಿರುವ ಶ್ರೀ ತೋಟದಪ್ಪನವರ ವಿದ್ಯಾರ್ಥಿನಿಲಯ, ಶ್ರೀ ಗೌಡರ ವೀರಭದ್ರಪ್ಪನವರ ವಿದ್ಯಾರ್ಥಿನಿಲಯ, ಶ್ರೀ ಮರಿಸ್ವಾಮಿಮಠದ ಶ್ರೀ ಪಾಮಿಡಿ ವಿದ್ಯಾರ್ಥಿನಿಲಯ, ಶ್ರೀ ಬೇಲಿಮಠ, ಶ್ರೀ ಮಹಂತಿನಮಠ, ಶ್ರೀ ಜೈನ ವಿದ್ಯಾರ್ಥಿನಿಲಯ, ಇವುಗಳಲ್ಲಿ ಕೆಲವು ಹಿಂದುಳಿದ ಪಂಗಡದ ವಿದ್ಯಾರ್ಥಿಗಳಿಗೆ ಆಶ್ರಯವು ದೊರೆಯುತ್ತದೆ. ಕೆಲವು ಧರ್ಮಾತ್ಮರು ಕೆಲವಲ್ಲಿ ಬಡವಿದ್ಯಾರ್ಥಿಗಳಿಗೆ ಅಶನವೀಯುತ್ತೇವೆಂದು ವಾಗ್ದಾನಮಾಡಿರುತ್ತಾರೆ.

ಈ ಎಲ್ಲಾ ಅನುಕೂಲತೆಗಳನ್ನೂ ಉಪಯೋಗಿಸಿಕೊಂಡು ಸಂಸ್ಕೃತ ವಿದ್ಯಾಭ್ಯಾಸಮಾಡಲು ಹೆಚ್ಚು ಹೆಚ್ಚು ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕಾಲೇಜಿಗೆ ಸೇರುವರೆಂದು ನಿರೀಕ್ಷಿಸಲಾಗಿದೆ. ಕಾಲೇಜಿಗೆ ಮೆಡಿಕಲ್ ಫೀಜು ಹೊರತು ಮತ್ತಾವ ಫೀಜನ್ನೂ ಕೊಡಬೇಕಾಗಿಲ್ಲ. ಕಾಲೇಜಿಗೆ ಸೇರಲಪೇಕ್ಷಿಸುವವರು ಪ್ರಿನ್ಸಿಪಾಲರಿಗೆ ಬರೆದು ಅಡ್ಮಿಷನ್ ಫಾರಂಗಳನ್ನು ಪಡೆಯಬಹುದು. ಹೆಚ್ಚಿನ ವಿವರಗಳನ್ನೂ ಬರೆದುಕೊಳ್ಳಬಹುದು.

ಬೆಂಗಳೂರು ಸಿಟಿ ಕೆ ಎಸ್ ದರಣೇಂದ್ರಯ್ಯ

5 5 1944 ಪ್ರಿನ್ಸಿಪಾಲ್

ದುಃಖವಾರ್ತೆ

ಜೇವರಗಿ ಗ್ರಾಮದ ಶ್ರೀಮಾನ್ [illegible] ಅವರ ಪುತ್ರ ಸ|| [illegible] ಇದೇ ತಿಂಗಳು ೧೧-೫-೪೪ ರಲ್ಲಿ ವಿನಾಕಾರಣ [illegible] ಮೂರು ದಿನಗಳ [illegible] ಬಂದ [illegible] ಎಷ್ಟು ಚಿಕಿತ್ಸೆ ನಡೆಸಿದರೂ [illegible] ಆಸ್ಪತ್ರೆಯಲ್ಲಿ ಮೃತನಾದನೆಂದು ತಿಳಿಸಲು ಅತ್ಯಂತ ವಿಷಾದಪಡುತ್ತೇವೆ. ಈತನಿಗೆ ಮರಣಕಾಲಕ್ಕೆ ೧೭ ವಯಸ್ಸು ಮಾತ್ರ [illegible] ಸಣ್ಣ ವಯಸ್ಸಿನಲ್ಲಿ ಶಿವನ ನಿರ್ಧರಿಸಿದ [illegible] ಆತ್ಮಕ್ಕೆ ಶಾಂತಿಯನ್ನೂ [illegible] ಅಗಲುವಿಕೆಯಿಂದ ದುಃಖಾಕ್ರಾಂತರಾದ ಮಾತಾಪಿತೃಗಳಿಗೂ ಆಪ್ತ [illegible] ಬಂಧುಗಳಿಗೂ ದುಃಖಶಮನವನ್ನು ದಯಪಾಲಿಸಲೆಂದು ಶ್ರೀ ಜಗದಾಚಾರ್ಯರನ್ನು ಪ್ರಾರ್ಥಿಸುತ್ತೇನೆ.

ಓರ್ವ ದುಃಖಭಾಗಿ

ಕಣ್ಣೀರು

ಲೇ—ಗುರುಸಿದ್ಧಸ್ವಾಮಿ ಹಿರೇಮಠ ಮುದೇನೂರು

ಅಂದೊಮ್ಮೆ ನಾ ಕಂಡೆ ।
ಅಂದದಾ ಗುರು ನಿನ್ನ ।
ವಂದಿಸಲು ಚಂದದಿಂದೊರೆದೆಯೆನಗೆ ॥

“ ಕಂದ ನೀನಿಗು ಮುದದಿ ।
ಚಂದವಾಗಲಿ ನಿನ್ನ ।
ಸುಂದರಾಧ್ಯಯನ ಸುಗಮ ಸುಲಭ” ॥೧॥

ವಿನಯಶಾಲಿಯು ನೀನು ।
ಮನವ ಕರಗಿಸುತಿತ್ತು ।
ಮನಮೋಹನಾಕಾರ ಸಾಕಾರವು ॥

ಅನವರತ ಗುರು ನಿನ್ನ ।
ನೆನೆಯುತಿವೆ ಮನವೆನ್ನ ।
ಮನನಯನದಿಂ ನೀನು ದೂರನಾಗು ॥೨॥

ಕಾಯಿಯೊಳ್ಳಿರೆದಿದ್ದ ।
ಈಶ ಸಮನೆನಿಸಿದ್ದ ।
ದೇಶ ದೇಶದಿ ಪೆಸರಾಂತ ನೀನು ॥

ಈಶ ಸ್ಮರಣದಯಾ ?
ದೇಶದಿಂ ಪೋದೆಯಾ ? ।
ಆಶೆಯುದ್ದಿತು ನಿನ್ನ ಮರುನೋಡುವ ॥೩॥

ನಮ್ಮ ಮತಕಾದಿಯ್ಯೆ ।
ನಿಮ್ಮ ಹೆಸರಿನ ಮಂತ್ರ ।
ಒಮ್ಮೆಲೇ ಮುಕ್ತಿಯ್ಯೆ ‘ ಪಂಚಾಕ್ಷರ ’ ॥

ಸುಮ್ಮನಿರದಾದನೇ ? ।
ಸೋಮಧರ ಗೌರೀಶ ।
ಬೊಮ್ಮ ಬರೆದಾ ಬರಹ ಸಟೆಯಲ್ಲವು ॥೪॥

ತಡೆಯಬಹುದಾಗಿತ್ತು ।
ಬಿಡದಿನಗಳೆಂದನ್ನು ।
ಬಿಡುವು ತೀರಿದ ಒಡನೆ ಬರುತಿರ್ದನು ॥

ಬಿಡಲಿಲ್ಲ ಕ್ರೂರ ವಿಧಿ ।
ತೊಡೆಯಲಿಲ್ಲವು ಬೊಮ್ಮ ।
ಕಡುಮಾಸಿ ನಾ ಗುರುವೆ ನೋಡಲಿಲ್ಲ ॥೫॥

ಕಡೆಗಾದ ಕಣ್ಣೀರು ।
ಕಡಲಾಗಿ ಹೆಚ್ಚೆಯ್ಯೆ ।
ಕಡು ದುಃಖಪಟ್ಟೆನೈ ನಿನ್ನನಗಲಿ ॥

ಕೊಡು ದೇವ ಮತಿಯನ್ನು ।
ಕೊಡು ದೇವ ಬುದ್ಧಿಯನು ।
ಕಡೆಗೊಮ್ಮೆ “ ನಸ್ತು ಅವಿನಾಶಿ ” ಯಂತೆ ॥೬॥

ಪತ್ರಿದಾರಿ ಶಾಖೆಗೆ ಸ್ತ್ರೀಯರು

ಅಮೆರಿಕದಲ್ಲಿ ಯೋಧ ಸೇವೆಗೆ ಪುರುಷರು ಬೇಕಾಗಿರುವ ನಿಮಿತ್ತ ಪತ್ರಿದಾರಿ ಶಾಖೆಗೂ ಸ್ತ್ರೀಯರನ್ನು ನೇಮಿಸಲಾಗಿದೆ. ಅವರನ್ನೆಲ್ಲ ರೇಡಿಯೋ ಸಮಾಚಾರ ಪತ್ತೆಮಾಡುವ ಶಾಖೆಗೆ ನೇಮಿಸಲಾಗಿದೆ.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 226

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಸ್ಥಾನಸಮಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೨ನೇ ಜೂನ್ ೧೯೪೪ [ಸಂಚಿಕೆ ೭

ದೃಷ್ಟಾಂತ-ಸಮುಚ್ಚಯ

ಲೇ|| ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರ ಪ.ಶೀಮಠ ಮುದೇನೂರು.

"ಮನಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಬಂಧಮೋಕ್ಷಗಳಿಗೆ ಮನಸ್ಸೇ ಕಾರಣವು ಆದುದರಿಂದ ಸಾಂಸಾರಿಕ ಜೀವಿಗಳ ಮನಸ್ಸಿನಲ್ಲಿ ಈಶ್ವರ ಸ್ಮರಣೆಯು ನೆಲೆಗೊಂಡರೆ ಮೋಕ್ಷವಾಗುವುದರಲ್ಲಿ ಸಂಶಯವಿಲ್ಲ. ಉದಾ —

ಪ್ರಾಚೀನ ಕಾಲದಲ್ಲಿ ಸರ್ವಸಂಗ ಪರಿತ್ಯಾಗಮಾಡಿದ ಸನ್ಯಾಸಿಯೋರ್ವನು ಒಂದು ಶಿವಾಲಯದಲ್ಲಿ ವಾಸವಾಗಿದ್ದನು ಅದೇ ಶಿವಾಲಯದ ಸಮ್ಮುಖದಲ್ಲಿ ಒಬ್ಬ ವಾರಾಂಗನೆಯ ಮನೆ ಸನ್ಯಾಸಿಯು ಸರ್ವದಾ ಆ ವೇಶ್ಯೆಗೆ ಧರ್ಮೋಪದೇಶ ಮಾಡುತ್ತಿದ್ದನು ಆದರೂ ವೇಶ್ಯೆಯು ತನ್ನ ದೇಹ ವಿಕ್ರಯವೃತ್ತಿಯನ್ನು ಬಿಟ್ಟಿರಲಿಲ್ಲ ಸನ್ಯಾಸಿಯು ಅದನ್ನು ನೋಡಿ ಬಹು ಕ್ರೋಧಾನ್ವಿತನಾಗಿ "ಎಲೌ, ವಾರಾಂಗನೆ! ಚನ್ನಾಗಿ ಯೋಚಿಸಿ ನೋಡು! ನೀನು ಅವಲಂಬಿಸಿರುವ ವೃತ್ತಿಯು ಬಹು ಹೇಯವಾದುದು ಅದನ್ನು ನೀನು ಈವರೆಗೂ ಬಿಟ್ಟಂತೆ ಕಾಣುವುದಿಲ್ಲ ನಾನು ಮಾಡಿದ ಧರ್ಮೋಪದೇಶವು ಜಲ ಹೋಮದಂತಾಯಿತು ಯಾವ ಪಾಪವನ್ನು ಮಾಡುತ್ತಿದ್ದೀಯೋ ಮತ್ತು ಮುಂದೆಯೂ ಮಾಡುವೆಯೋ, ಅದನ್ನೆಲ್ಲ ಪರಿಗಣಿಸಿದರೆ, ನಿನಗೆ ಸಂಭವಿಸಬಹುದಾದ ಭೀಷಣ ಯಾತನೆಯ ವಿಚಿತ್ರ ಚಿತ್ರವು ನನ್ನ ಮಾನಸಪಟದಲ್ಲಿ ಸಮುದಿತವಾಗುತ್ತಲಿದೆ ಆದುದರಿಂದ ಇನ್ನು ಮೇಲಾದರೂ ಈ ಪಾಪ ಕಾರ್ಯದಿಂದ ವಿಮುಖಳಾಗಿ ಸ್ವಯಂಕೃತಾಪರಾಧಕ್ಕಾಗಿ ಪಶ್ಚಾತ್ತಾಪ ಪಟ್ಟು ಪರಶಿವನಲ್ಲಿ ಮೊರೆಯಿಡು" ಎಂದು ಹೇಳಿದನು ವೇಶ್ಯೆಯು ಸನ್ಯಾಸಿಯ ಮಧುರವಾದ ಉಪದೇಶವನ್ನು ಕೇಳಿ ಮರುಗಿದಳಲ್ಲದೆ ತನ್ನ ನೀಚ ವೃತ್ತಿಯನ್ನು ಭಗವಂತನು ಎಂದಿಗೆ ನಿವೃತ್ತಿಯನ್ನು ಮಾಡುವನೋ ಎಂದು ಕಾತರಿಸುತ್ತ ಅಂದಿನಿಂದ ವಿಟಪುರುಷರ ಸಂಸರ್ಗದಿಂದ ದೂರಾದಳು. ಆದರೆ ಭಗವಂತನ ಲೀಲೆಯು ವಿಚಿತ್ರವಾದುದು! ಒಬ್ಬಿಬ್ಬರು ವಿಟಪುರುಷರಿಗೆ ಬದಲಾಗಿ ಅಂದಿನಿಂದ ಪ್ರತಿನಿತ್ಯವೂ ಹತ್ತಾರು ಜನಗಳು ಅವಳ ಮನೆಗೆ ಬರಲುಪಕ್ರಮಿಸಿದರು ಮೊದಲಿಗಿಂತಲೂ ಹೆಚ್ಚು ಜನಗಳ ಸಮಾಗಮವು ಬಂದೊದಗಿತು ಸನ್ಯಾಸಿಯು ಈ ವಿಧವಾದ ವಿಪರೀತ ಘಟನೆಯನ್ನು ನೋಡಿ ವಿಸ್ಮಿತನಾಗಿ, ಅವಳ ಮನೆಗೆ ಹೋಗುತ್ತಲಿದ್ದ ವಿಟಪುರುಷರ ಸಂಖ್ಯೆಯನ್ನು ಗೊತ್ತುಮಾಡುವುದಕ್ಕಾಗಿ ಸಣ್ಣ ಸಣ್ಣ ಕಲ್ಲುಗಳನ್ನು ಲೆಕ್ಕಮಾಡಿ ಒಂದು ಕಡೆ ಹಾಕಲಾರಂಭಿಸಿದನು ದಿನಕ್ರಮೇಣ ಆ ಕಲ್ಲುಗಳ ಸಂಖ್ಯೆಯು ಹೆಚ್ಚಹೋಯಿತು ಹೀಗಿರುತಿರಲೊಂದು ದಿನ ವಾರಾಂಗನೆಯು ತನ್ನ ಪ್ರಾಸಾದದ ಮೇಲೆ ನಿಂತಿರುವ ಸಮಯದಲ್ಲಿ, ಸನ್ಯಾಸಿಯು ಅವಳನ್ನು ಕರೆದು, "ನೋಡು! ನೋಡು! ಈಗ ನಿನಗೆ ಮೂರನೆಯ ಸಲ ಹೇಳುತ್ತಿದೇನೆ. ಈಗಲಾದರೂ ಈ ನೀಚಕೃತ್ಯದಿಂದ ನಿವೃತ್ತಳಾಗಿ ಭಗವನ್ನಾಮಸ್ಮರಣೆಯಲ್ಲಿ ನಿರತಳಾಗು ಇಷ್ಟು ದಿವಸಗಳವರೆಗೆ ನೀನು ಸಂಗ್ರಹಿಸಿರುವ, ಪಾಪರಾಶಿಯನ್ನು ನೋಡಿದರೆ ಅತ್ಯಂತ ಭಯವಾಗುತ್ತದೆ" ಎಂದು ಹೇಳುತ್ತ, ಕಲ್ಲುಗಳ ರಾಶಿಯನ್ನು ತೋರಿಸಿದನು ಗಣಿಕಾಂಗನೆಯು ಆ ಕಲ್ಲಿನ ರಾಶಿಯನ್ನು ನೋಡಿ ಭಯಾನ್ವಿತಳಾಗಿ ಕಂಪಿಸತೊಡಗಿದಳು ಆಗ ಮನಸ್ಸಿನಲ್ಲಿ, "ನನಗೆ ಗತಿಯೇನು? ನಾನು ಉದ್ಧಾರವಾಗುವಬಗೆ ಹೇಗೆ? ಭಗವಂತನಿಗೆ ನನ್ನ ಮೇಲೆ ದಯೆ ಹುಟ್ಟುವುದಿಲ್ಲವೆ? ಪತಿತಪಾವನನು ನನ್ನಂತಹ ಪತಿತರಿಗೆ ಗತಿ ಕೊಡಲಾರನೆ" ಎಂದು ಪೂರ್ಣ ಪಶ್ಚಾತ್ತಾಪದಿಂದ ಪ್ರಲಾಪಿಸ ತೊಡಗಿದಳು ಮತ್ತು "ನಾನು ಸ್ತ್ರೀ ಜನಕ್ಕೆ ಪ್ರಧಾನ ಭೂಷಣವಾದ ಲಜ್ಜೆಯನ್ನು ತೊರೆದು ಮನೋವಾಕ್ಕಾಯಗಳಲ್ಲಿಯೂ ಲೋಭದಿಂದ ಸೌಂದರ್ಯ ಸೇವೆಯನ್ನು ಮಾಡುತ್ತಾ ಸಾತ್ವಿಕಮಾರ್ಗವನ್ನನುಸರಿಸದೆ ಬಹು ಪಾಪಿಯಾದೆನು." ಎಂದು ಮರುಗಿದಳು ತತ್ಫಲವಾಗಿ ಅವಳ ಹೃದಯದಲ್ಲಿ ವಿವೇಕೋದಯವಾಯಿತು! ಅಂತಿಮಕಾಲದಲ್ಲಿ ಸಾಂಸಾರಿಕ ಸುಖದ ತುಚ್ಛತೆಯು ಹೃದಯಂಗಮವಾಗಿ ಶಿವ ಶಿವಾ ಎನ್ನುತ ಪರಲೋಕಕ್ಕೆ ಪ್ರಯಾಣಮಾಡಿದಳು ತತ್ಸಮಯದಲ್ಲಿಯೇ ದೈವಗತಿಯಿಂದ ಆ ಸನ್ಯಾಸಿಯೂ ಮೃತಿಯನ್ನೈದಿದನು ವಿಚಿತ್ರ ವ್ಯಾಪಾರ!

ಅವರೀರ್ವರ ಸೂಕ್ಷ್ಮ ಶರೀರಗಳನ್ನು ತೆಗೆದು ಕೊಂಡುಹೋಗುವುದಕ್ಕಾಗಿ ಶಿವದೂತನೂ ಯಮದೂತನೂ ಇಬ್ಬರೂ ಬಂದರು ಶಿವದೂತನು ವೇಶ್ಯೆಯನ್ನು ವಿಮಾನದಲ್ಲಿ ಕೂರಿಸಿಕೊಂಡು ಹೊರಟನು ಯಮದೂತನು ಸನ್ಯಾಸಿಯ ಕಯ್ಕಾಲುಗಳನ್ನು ಬಂಧಿಸಿ ಎಳೆದುಕೊಂಡು ಹೊರಟನು ಸನ್ಯಾಸಿಯು ವಾರಾಂಗನೆಯ ಸೌಭಾಗ್ಯವನ್ನು ನೋಡಿ ಆಶ್ಚರ್ಯದಿಂದ "ಆಹಾ! ಇದೇನು ಭಗವಂತನ ಸೂಕ್ಷ್ಮ ವಿಚಾರ! ಚಿರಕಾಲವೂ ಸನ್ಯಾಸಿಯಾಗಿದ್ದು ಪವಿತ್ರ ವ್ರತಾಚರಣೆಯಲ್ಲಿದ್ದವನಿಗೆ ಯಮದೂತನ ದರ್ಶನ! ಯಾವಜ್ಜೀವವೂ ಪಾಪಾಚರಣೆಯಲ್ಲಿದ್ದವಳಿಗೆ ಶಿವದೂತನ ದರ್ಶನ! ಆಹಾ! ಇದೇನು ಭಗವಂತನ ಅದ್ಭುತ ವಿಚಾರ!" ಎಂದೀ ರೀತಿಯಾಗಿ ಪ್ರಲಾಪಿಸತೊಡಗಿದನು ಆಗ ಶಿವದೂತನು "ಎಲೈ, ಸನ್ಯಾಸಿಯೇ! ನೀನು ಹೇಳಿದುದೆಲ್ಲವೂ ಸತ್ಯವು ಭಗವಂತನ ವಿಚಾರವು ಸೂಕ್ಷ್ಮವೂ ಅದ್ಭುತವೂ ಆದುದೆಂಬುದರಲ್ಲಿ ಸಂದೇಹವೇನಿದೆ? ಮನೋವ್ಯಾಪಾರಕ್ಕೆ ತಕ್ಕ ಫಲವು ದೊರೆವುದು ಸಹಜವಾಗಿದೆ. ನಿಮ್ಮೀರ್ವರಲ್ಲಿ ಯಾರು ಪರಮಾತ್ಮನ ಧ್ಯಾನವನ್ನು ಏಕಾಗ್ರಚಿತ್ತದಿಂದ ಮಾಡಿದರೆಂಬುದನ್ನು ನೀನೇ ಯೋಚಿಸಿ ನೋಡು. ನೀನು ಮಾಡಿದುದೆಲ್ಲವೂ ಕೇವಲ ಬಾಹ್ಯಾಡಂಬರ ಒಂದು ದಿನದಲ್ಲಿ ಒಂದು ಕ್ಷಣವಾದರೂ ಪರಮಾತ್ಮನ ಧ್ಯಾನವನ್ನು ಮನಮುಟ್ಟಿ ಮಾಡಿದೆಯಾ? ವಿಟಪುರುಷರ ಸಂಖ್ಯೆಯನ್ನು ಗೊತ್ತು ಮಾಡುವುದಕ್ಕಾಗಿ ಕಲ್ಲಿನ ರಾಸಿಯನ್ನು ನಿರ್ಮಾಣ ಮಾಡುವುದರಲ್ಲಿಯೇ ನಿನ್ನ ಮನಸ್ಸು ಮಗ್ನವಾಗಿದ್ದುದರಿಂದ ನಿನ್ನ ಮನಸ್ಸು ಮಲಿನವಾಗಿ ಪಾಪರಾಶಿಯಾಯಿತು ವೇಶ್ಯೆಯು ತನ್ನ ಸ್ಥೂಲದೇಹದಿಂದ ಮಾತ್ರ ವೇಶ್ಯಾವೃತ್ತಿಯನ್ನಾಚರಿಸಿದಳು. ಆದುದರಿಂದಲೇ ಆ ಸ್ಥೂಲದೇಹದ ಮೇಲೆ ನನಗೆ ಅಧಿಕಾರವಿಲ್ಲ ಅಗೋ! ನೋಡು! ಅವಳ ದೇಹವನ್ನು ನರಿ ನಾಯಿಗಳು ಭಕ್ಷಿಸುತ್ತಿವೆ! ಯಾವ ದೇಹವು ಭಗವಧ್ಯಾನದಲ್ಲಿ ಮಗ್ನವಾಗಿದ್ದಿತೋ ಆ ಸೂಕ್ಷ್ಮ ದೇಹವನ್ನು ಮಾತ್ರ ತೆಗೆದುಕೊಂಡುಹೋಗುತ್ತಿದೇನೆ ತನ್ನ ನೀಚ ವೃತ್ತಿಯನ್ನು ಕುರಿತು ಚಿಂತಿಸುತ್ತ ಭಗವಂತನಿಗೆ ಮೊರೆಯಿಡುತಲಿದ್ದ ಪ್ರಾಣಿಗೆ ಭಗವಂತನ ಸಾನ್ನಿಧ್ಯವು ದೊರೆಯಬೇಕಲ್ಲವೇ? ಆದರೆ ನಿನ್ನ ಸ್ಥೂಲದೇಹವು ಪವಿತ್ರವಾದುದು ಆದುದರಿಂದಲೇ ಇದೋ! ನೋಡು ಅದು ಜಾಹ್ನವಿಯ ತೀರದಲ್ಲಿ ಸಮಾಧಿಯಲ್ಲಿರುವದು ನಿನ್ನ ಸೂಕ್ಷ್ಮ ದೇಹವು ವೇಶ್ಯಾವೃತ್ತಿಯನ್ನೇ ಚಿಂತಿಸುತ್ತಿದ್ದುದರಿಂದ ಈಗ ಯಮ ಯಾತನೆಯನ್ನು ಅನುಭವಿಸಬೇಕಾಗಿದೆ ಇದ ಕಾರಣ ಎಲೈ, ಸನ್ಯಾಸಿಯೆ! ಇದು ಭಗವಂತನ ಸೂಕ್ಷ್ಮವಿಚಾರವಲ್ಲವೆ ನೀನೇ ಯೋಚಿಸು

ಸಾರಾಂಶ ಭಾವಶುದ್ಧಿಯಿಲ್ಲದೆ ಬಾಹ್ಯಾಡಂಬರ ವೇಷಭಾಷೆಗಳಿಂದಲೂ ಬೂಟಾಟಿಕೆಯ ಪೂಜೆ ಜಪತಪಾದಿಗಳಿಂದಲೂ ಏನೂ ಪ್ರಯೋಜನವಿಲ್ಲ ಆದುದರಿಂದಲೇ—ಬಿಡು ಬಾಹ್ಯದೊಳು ದಂಭವ! ಮಾನದೊಳಗೆಡವಿಡದಿರು ಶಂಭುವ ॥ ಒಡಲೊಳು ವಂಚಿಸಿ ಹೊರಗೆ ನೀ ಕೀರ್ತಿಯ। ಪಡೆದರೆ ಶಿವನಿನಗೊಲಿವನೇ ಮರುಳೆ ॥ ಎಂದು ಜ್ಞಾನಿಗಳು ಹೇಳಿರುವರು

ಸಂತೋಷದ ಸುದ್ದಿ

ಧಾರವಾಡ ಡಿ|| ಬಂಕಾಪುರ ಗಚ್ಚಿನ ಮಠದ ಬಸವರಾಜ ಎಂಬವರು ಇದೇ ವರ್ಷ ದಿಲ್ಲಿಯಲ್ಲಿ ನಡೆದ ಅಖಿಲ ಭಾರತ ಇಂಜನೀಯರ್ (ಕಾಂಪಿಟಿಟಿವ್) ಪರೀಕ್ಷೆಯಲ್ಲಿ ತೇರ್ಗಡೆಯಾದ ವಿಷಯವು ಇಂಡಿಯಾ ಗ್ಯಾಜೆಟ್ಟಿನ ತಾ|| ೧೮-೫-೪೪ನೇ ದಿವದ ಸಂಚಿಕೆಯಲ್ಲಿ ಪ್ರಕಟವಾಗಿದೆ ಸ್ವಲ್ಪ ದಿವಸಗಳಲ್ಲಿ ಇವರಿಗೆ ಇಂಪೀರಿಯಲ್ ಸರ್ವೀಸಿನಲ್ಲಿ ಅಧಿಕಾರ ದೊರೆಯಬಹುದಾಗಿದೆ ಇವರು ಮುಂಬಯಿ ವಿಶ್ವವಿದ್ಯಾಲಯದ ಬಿ ಇ ಪರೀಕ್ಷೆಯಲ್ಲಿ ಕೂಡ (ಎಲೆಕ್ಟ್ರಿಕಲ್ ಮತ್ತು ಮೆಕಾನಿಕಲ್ ಭಾಗಗಳಲ್ಲಿ) ೧ನೇ ವರ್ಗದಲ್ಲಿ ತೇರ್ಗಡೆ ಹೊಂದಿದ್ದಾರೆ ಈ ಪರೀಕ್ಷೆಗಳಲ್ಲಿ ಈ ರೀತಿ ಯಶಸ್ವಿಯಾದ ವೀರಶೈವರಿಂದರೆ ಇವರೇ ಮೊದಲಿಗರೆಂದು ಹೇಳಬಹುದು ತಮ್ಮ ಯೋಗ್ಯತೆಗೆ ತಕ್ಕ ಉಚ್ಚ ಅಧಿಕಾರವನ್ನು ಅವರು ಶೀಘ್ರದಲ್ಲಿಯೇ ಹೊಂದಿ ತಮ್ಮ ಕಾರ್ಯದಕ್ಷತೆಯಿಂದ ಮತ್ತು ಬುದ್ಧಿವಂತಿಕೆಯಿಂದ ಹೆಚ್ಚಿನ ಗೌರವಾತಿಶಯಗಳನ್ನು ಪಡೆಯುತ್ತ ವೀರಶೈವ ಸಮಾಜಕ್ಕೂ ಕನ್ನಡ ನಾಡಿಗೂ ಭೂಷಣಪ್ರಾಯರಾಗಲೆಂದು ಹಾರೈಸುತ್ತೇನೆ. ತಾ|| ೧೮ ೫-೪೪ನೇ ದಿವಸ ಇವರಿಗೆ ರಾಣೆಬೆನ್ನೂರು ಮುನಿಸಿಪಾಲಿಟಿ ಚೀಫ್ ಆಫೀಸರರಾದ ಶ್ರೀ|| ಬಿ. ಎಸ್ ಮಂಗಳೂರ (ಅರಳೆಲೆಮಠ) ಬಿ.ಎ., ಇವರ ಮಗಳು ಚಿ|| ಸೌ|| ಅನ್ನಪೂರ್ಣಾ ಎಂಬವರನ್ನು ಕೊಟ್ಟು ನಿಶ್ಚಯಸಮಾರಂಭವು ನೆರವೇರಿತು

ಶ್ರೇಯಃಕಾಂಕ್ಷಿ

ಪಂಚಾಚಾರ್ಯಪ್ರಭಾ.

೧೯೪೪ನೆಯ ಜೂನ್ ತಾ॥ ೧೨ನೇ ಸೋಮವಾರ

ಏಕದೇವನಿಷ್ಠೆ.

ಈ ಪ್ರಪಂಚವನ್ನು ಸೃಷ್ಟಿಸಿದ ದೇವರು ಒಬ್ಬನಾಗಿರುವನಲ್ಲದೆ ಅನೇಕರಿಲ್ಲವು [illegible] ಯಜಮಾನನಿದ್ದು [illegible] ಯು ಸಂಸಾರವು [illegible] ಲ್ಲದ ಅನೇಕ ಯಜಮಾನರಿಂದ [illegible] ಸಂಸಾರವು ವಿಷಮವಾಗುವ [illegible] ಸೃಷ್ಟಿಕರ್ತರನ್ನು ಒಪ್ಪಿಕೊ [illegible] ಪರಸ್ಪರರಾಗದ್ವೇಷ [illegible] ಸ್ಮಮವಾಗಿ ಹೋಗುಪ್ರದ [illegible] ಆದುದರಿಂದ ಸೃಷ್ಟಿ [illegible] ದೇವರ [illegible] ಏಕದೈವ [illegible] ವಿಷ್ಣುವೆಂತಲೂ ಶಿವನೆಂತಲೂ, [illegible] ಯೆಂತಲೂ ಅನಂತ [illegible] ರವರು ಮಾಡುವ ಪ್ರ[illegible] ಸ್ಥಿಯುವನ [illegible] ಆಗಿದ್ದರೂ ಆಯಾಯ [illegible] ತಮ್ಮ ಮತಪ್ರಕ್ರಿಯ [illegible] ದಿಂದ [illegible] ದೇವರ [illegible] ಇವನ ದೇವರ [illegible] ಆಯಾಯ [illegible] ಹಾಲು [illegible] ಧರಿಸಿದ್ದರೂ ಅದು [illegible] ಒಂದೇ ಫಲವನ್ನು ಕೊಡುವಂತೆ ದೇವರನ್ನು [illegible] ಸಾರವಾಗಿ [illegible] ಧ್ಯಾನಿಸಿದರೂ ಪೂಜಿಸಿದರೂ [illegible] ನಿವಾರಿಸಿಯೇ ನಿವಾರಿಸುವನು ಹೀಗಿರುವಲ್ಲಿ ದೇವರುಂಟೆಂದು ಒಪ್ಪುವ ಶೈವ ವೈಷ್ಣವ [illegible] ಜೈನಾದಿ ಅನೇಕಮತಗಳೊಳಗ ಯಾವ ಮತದಲ್ಲಿ ಜನ್ಮವನ್ನೆತ್ತಿದರೂ ಆಯಾಯ ದೇವರನ್ನಾರಾಧಿಸಿ ಸುಖವನ್ನು ಪಡೆಯುವ ಶಕ್ತಿಯು ಪ್ರತಿಯೊಬ್ಬರಿಗೂ ಇರುವಲ್ಲಿ ತಾನು ಹುಟ್ಟಿದ ಮತವನ್ನು ಬಿಟ್ಟು ಮತ್ತೊಂದು ಮತವನ್ನು ಅವಲಂಬಿಸವೆನೆಂಬ ಬುದ್ಧಿಯು ಕೇವಲ ಐಹಿಕ ವಿಷಯಾಭಿಲಾಷೆಯಿಂದಲೇ ಹೊರತು ಪಾರಮಾರ್ಥಿಕಬುದ್ಧಿಯಿಂದಲ್ಲವೆಂಬುದು ಸ್ಪಷ್ಟವಾಗುತ್ತದೆ ಆದುದರಿಂದ ಜನ್ಮತಃ ವೀರಶೈವನಾಗಿದ್ದು ದುಸ್ಸಂಗದೋಷದಿಂದ ಆ ವೀರಶೈವಮತವನ್ನು ಬಿಡುವುದಾಗಲಿ ಜನ್ಮತಃ ವೈಷ್ಣವನಾಗಿದ್ದು ಅದನ್ನು ಬಿಡುವುದಾಗಲಿ ಜನ್ಮತಃ ಜೈನನಾಗಿದ್ದು ಅದನ್ನು ಬಿಡುವುದಾಗಲಿ ಎಲ್ಲವೂ ಅಜ್ಞಾನದಾಯಕಗಳೇ ಹೊರತು ವಾಸ್ತವವಲ್ಲ, ಮತ್ತು ಇಂಥ ಏಕಾಂತಬುದ್ಧಿಯಿಲ್ಲದವನಿಗೆ ಅನೇಕವಿಧ ಸಂಶಯಗಳುದಯಿಸಿ ತನ್ನ ಜೀವಮಾನವನ್ನೇ ವ್ಯರ್ಥಗೊಳಿಸುತ್ತಾನೆ ಒಂದೇ ದೇವರನ್ನು ನಂಬಿದವನನ್ನು ಒಬ್ಬ ಸಾಧ್ವಿಗೂ ಅನೇಕ ದೇವರನ್ನು ನಂಬಿದವನನ್ನು ಒಬ್ಬ ಸ್ವೈರಿಣಿಗೂ ಹೋಲಿಸಬಹುದಾಗಿದೆ

ಸ್ತ್ರೀಣಾಮು ದ್ವಾಹ ಏಕೋವೈವೇದೋಕ್ತಃ ಪಾವನೋವಿಧಿಃ ।

ಎಂಬ ಧರ್ಮಶಾಸ್ತ್ರದಂತೆ ಸ್ತ್ರೀಯರು ಒಂದು ಜನ್ಮದಲ್ಲಿ ಒಂದೇ ವಿವಾಹವನ್ನು ಮಾಡಿಕೊಳ್ಳಬೇಕಲ್ಲದೆ ಅನೇಕ ವಿವಾಹಗಳನ್ನು ಮಾಡಿಕೊಳ್ಳಲಾಗದು ಒಂದು ಕಾಲದಲ್ಲಿ ಪಾಣಿಗ್ರಹಣಮಾಡಿದ ಗಂಡನು ಕುರೂಪಿಯಾಗಿರಲಿ, ಸುಂದರನಾಗಿರಲಿ ಶ್ರೀಮಂತನಾಗಿರಲಿ ದರಿದ್ರನಾಗಿರಲಿ ದುಃಖಿಯಾಗಿರಲಿ ಸುಖಿಯಾಗಿರಲಿ ಮೂರ್ಖನಾಗಿರಲಿ ಪ್ರೌಢನಾಗಿರಲಿ ಅವನೇ ತನ್ನ ಸಾಕ್ಷಾತ್ ಕುಲದೈವವೆಂದು ಭಾವಿಸಿ ಆತನಲ್ಲಿಯೇ ನಿರತಿಶಯಪ್ರೇಮವನ್ನು ತೋರಿಸುತ್ತಿರುವುದೇ ಸಾಧ್ವಿಯ ಧರ್ಮವೆಂದೂ ಕ್ಷಣಿಕ ಸುಖದಾಶೆಯಿಂದಲಾಗಲಿ ಸಂಗದೋಷದಿಂದಲಾಗಲಿ ಧನಾಶೆಯಿಂದಲಾಗಲಿ ಬೇರೆ ಬೇರೆ ಪುರುಷರನ್ನು ವರಿಸುತ್ತ ಹೋಗುವುದೇ ಸ್ವೈರಿಣಿಯ ಧರ್ಮವೆಂದೂ ಎಲ್ಲರೂ ತಿಳಿದಿರುತ್ತಾರೆ ಇದರಂತೆ ತನ್ನ ಮತಗುರುಗಳ ಅನುಗ್ರಹದಿಂದ ತಾನು ಯಾವ ದೇವತಾಸಂಬಂಧವಾದ ದೀಕ್ಷೆಯನ್ನು ತನ್ನ ಪಿತೃಪಿತಾಮಹಾದಿವಂಶಕ್ರಮದಿಂದ ವಹಿಸಿಕೊಂಡು ಬಂದಿರುತ್ತಾನೆಯೋ ಅಂಥ ದೀಕ್ಷಾನುಗುಣವಾದ ದೇವರನ್ನು ಎಂಥ ಕಷ್ಟಗಳೊದಗಿದರೂ ಬಿಡದಿರುವುದೇ ಉತ್ತಮನ ಧರ್ಮವು ಇಚ್ಛಾನುಸಾರವಾಗಿ ತಾವು ಸ್ವತಂತ್ರರೆಂದು ಸ್ತ್ರೀಯಾಶೆಯಿಂದ ದ್ರವ್ಯದಾಶೆಯಿಂದ ಅಜ್ಞಾನವಾಗಿ ಬಂದ ತನ್ನ ಮತವನ್ನು ಬಿಟ್ಟು ಮತ್ತೊಂದು ಮತವನ್ನು ಪ್ರವೇಶಿಸಿ ಆ ಮತಾನುಗುಣವಾದ ದೇವರನ್ನು ಆರಾಧಿಸುವದೂ ಸ್ವಲ್ಪಕಾಲದಲ್ಲಿ ಅದನ್ನು ಬಿಟ್ಟು ಮತ್ತೊಂದನ್ನಾಶ್ರಯಿಸುವದೂ ಹೀಗೆ ಬಾಳುವವನಿಗೆ ಯಾವ ಮತದಲ್ಲಿಯೂ ಶ್ರದ್ಧೆಯಿಲ್ಲದೆ "ಎರಡುದೇವರನ್ನು ನಂಬಿ ಕುರುಡುದಾಸಕೆಟ್ಟ" ಎಂಬಂತೆ ನವನವ್ಯೋನ್ಮೇಷಶಾಲಿನಿಯಾದ ಗೋವಿನಂತೆ ಅಲೆಯುವನು ಕೇವಲ ನೀಚಪುರುಷನ ಲಕ್ಷಣವೇ ಸರಿ ಇಂಥವರಿಗೆ ಯಾವ ಮತದಲ್ಲಿಯೂ ಸುಖ ದೊರೆಯುವುದಿಲ್ಲ ಮತಗಳು ಬಿನ್ನಭಿನ್ನವಾದರೂ ಎಲ್ಲಾ ಮತಗಳಲ್ಲಿಯೂ ಪರಿಪೂರ್ಣನಾದ ದೇವರು ಅವರವರ ಭಾವನಾನುಸಾರವಾಗಿ ಸುಶೀಲರಿಗೆ ಅಭಯಹಸ್ತವನ್ನು ನೀಡುತ್ತಿರುವನೆಂದು ಸ್ವಮತವನ್ನು ಬಿಟ್ಟು ಪರಮತವನ್ನು ಪ್ರವೇಶಿಸುವವರ ಕೇವಲ ಅಜ್ಞರೆಂದೇ ಹೇಳಬೇಕಾಗುವದು

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮೋಭಯಾವಹಃ ।

ಎಂದು ಶ್ರೀಕೃಷ್ಣನು ಇದೇ ಅರ್ಥವನ್ನು ಸ್ಪಷ್ಟಪಡಿಸಿರುತ್ತಾನೆ ಒಂದು ವೇಳೆ ಲೋಕದಲ್ಲಿ ನಿರಾಧಾರವಾಗಿ ದೇವರಿಲ್ಲ, ಗುರುಗಳಿಲ್ಲ ಸುಖವೇ ಸ್ವರ್ಗ, ದುಃಖವೇ ನರಕವೆಂದು ಸಾಧಿಸುವ ಕೆಲವು ಸ್ವೇಚ್ಛಾಮತಗಳುಂಟು ಅಂಥ ಮತಗಳನ್ನು ಅವಲಂಬಿಸುವುದರಿಂದ ಮಾನವನು ಸ್ವೇಚ್ಛಾಚಾರಿಯಾಗಿ ನಿಧಿನಿಷೇಧಸ್ವರೂಪಜ್ಞಾನವಿಲ್ಲದೆ ಅನೇಕ ಅನರ್ಥವ್ಯಾಪಾರಗಳನ್ನೂ ಆಗಮ್ಯಾಗಮನವನ್ನೂ ಅಪೇಯಪಾನವನ್ನೂ ಮಾಡಿ ಪಿಶಾಚಿಗಳಂತೆ ವರ್ತಿಸಬೇಕಾಗುವದು ಪ್ರಾಣವಿಲ್ಲದ ಇಂಥ ಪಿಶಾಚಮತಗಳನ್ನು ಬಿಟ್ಟು ದೈವೀಶಕ್ತಿಯುಳ್ಳ ಆಸ್ತಿಕಮತಗಳನ್ನು ಪ್ರವೇಶಿಸುವುದು ಇದರಿಂದ ಶ್ರೇಯಃಕಾಮಿಯಾದ ಆತನಿಗೆ ಯಾವ ದೋಷವೂ ಇಲ್ಲ ಸ್ವಭಾವತಃ ನಿರ್ಮಲವಾಗಿಯೂ ದೇವಗುರುಗಳ ಅಸ್ತಿತ್ವವನ್ನು ಒಪ್ಪುವುದಾಗಿಯೂ ವೇದಾಗಮಪ್ರಮಾಣಾನುಯಾಯಿಯಾಗಿಯೂ ವಿಧಿನಿಷೇಧಪ್ರದರ್ಶಕವಾಗಿಯೂ ಇರುವ ಮತಗಳಲ್ಲಿ ಜನ್ಮವೆತ್ತಿದರೂ ಆ ಮತವನ್ನು ಬಿಟ್ಟು ಮತ್ತೊಂದು ಮತವನ್ನು ಪ್ರವೇಶಿಸುವ ಮಾನವನು ಕಾಲಕ್ರಮದಿಂದ ಆ ಮತವನ್ನು ಸಹ ಬಿಟ್ಟು ಮೂರನೆಯದಾದ ಮತವನ್ನು ಪ್ರವೇಶಿಸುವದೂ ಅಲ್ಲಿ ಸುಖ ದೊರೆಯದಿದ್ದರೆ ಪುನಃ ಹಿಂದಕ್ಕೆ ಬರುವದು ಇಂಥ ಚಂಚಲಸ್ವಭಾವದವನು ಪಾಷಂಡಿಯೆಂದು ಹೇಳಿಸಿಕೊಳ್ಳಲ್ಪಡುವನು ಈ ವಿಷಯದಲ್ಲಿ ಶಾಸ್ತ್ರಕಾರರ ಅಭಿಮತವೂ ಉಂಟು

ಶಿವ್ರೋಕ್ತಂ ಜಾತಿಮರ್ಯಾದಾಂ ಯೋಽತೀತ್ಯ ಭುವಿವರ್ತತೆ ।
ಸಪಾಷಂಡ ಇತಿಜ್ಞೇಯಸ್ಸರ್ವ-ಕರ್ಮಬಹಿಷ್ಕೃತಃ ।
ಭ್ರಷ್ಟೋ ಯಸ್ಸ್ವಾಶ್ರಮಾಚಾರಾತ್ಪತಿತಸ್ಸೋಽಭಿಧೀಯತೆ ॥

ತಮ್ಮತಮ್ಮ ಜಾತಿಮತಧರ್ಮಗಳನ್ನು ಯಾರು ತ್ಯಜಿಸುವರೋ ಅವರೇ ಪಾಷಂಡಿಗಳು ಯಾವ ವೇದೋಕ್ತಕರ್ಮಗಳಲ್ಲಿಯೂ ಅವರಿಗೆ ಅಧಿಕಾರವಿಲ್ಲ. ತಮ್ಮತಮ್ಮ ಆಶ್ರಮಧರ್ಮಗಳಿಂದ ಭ್ರಷ್ಟರಾದವರು ಪತಿತರೆನಿಸಿಕೊಳ್ಳುತ್ತಾರೆ ಎಂದು ಸ್ಕಾಂದಾದಿಪುರಾಣಗಳು ಪಾಷಂಡಪತಿತಾದಿಶಬ್ದಗಳ ವಿವರಣೆಯನ್ನು ಮಾಡಿರುತ್ತವೆ ಇದಲ್ಲದೆ—

ಶ್ರುತಿ ಕೀರ್ತಿತಲಿಂಗೇಭ್ಯಃ ಲಿಂಗಾಂಗೇಭ್ಯೋಲಿಂಗಿನಃ ।
ಲಿಂಗಾಂಗಸಂಗಿಪ್ಯಧಿಕಃ ಷಟ್‌ಸ್ಥಲಜ್ಞಾನವಾನ್ ಕ್ರಮಾತ್ ।
ತಸ್ಮಾದಸ್ಯಧಿಕೋನಾಸ್ತಿ ತ್ರಿಷುಲೋಕೇಷು ಸರ್ವದಾ ।
ತದಂಧಸ್ಸರ್ವದಾ ಭೂಷ್ಯಸ್ಸಂಸಾರವಿಜಿಗೀಷುಭಿಃ ।
ಒಹುನೋಕ್ತೇನ ಕಿಂವತ್ಸ ಸ ವಿವಾಹಂ ಪಶಂಸತಃ ॥
ಶಿರೋದೇಶೇಽಥವಾಕಂಠೇ ಹಸ್ತೇ ವಕ್ಷಸ್ಥಲೇಪಿವಾ ।
ಲಿಂಗಧಾರೀಸಮಾಖ್ಯಾತೋ ಶಂಭುಕೀಲಂ ತ್ಯಜಂಯತಃ ॥
ಲೋಕೇ ನ ಪೂಜಯತೇ ಭಕ್ತ್ಯಾ ಲಿಂಗಂ ತ್ರಿಭುವನೇಶ್ವರಂ ।
ಸಪಾಶ್ಚಸ್ವರ್ಗಸ್ಯಮೋಕ್ಷಸ್ಯ ನ ಚ ರಾಜ್ಯಸ್ಯ ಭಾಜನಂ ।
ವಿಕಲ್ಪಂತೇ ಮಹಾತ್ಮಾನಂ ಯೇ ಮೂಢಾಶ್ಶಿವಲಿಂಗಿನಂ ।
ತೇ ಯಾಂತಿ ಪಿಶಾಚಭಾವಾರ್ಥಂ ನರಕೇಷು ನ ಸಂಶಯಃ ॥

ಎಂದು ಶಂಕರಸಂಹಿತೆ ವೀರಾಗಮ, ಮಕುಟಾಗಮ ಶಿವಧರ್ಮೋತ್ತರ ಮುಂತಾದ ಅನೇಕ ಧರ್ಮಗ್ರಂಥಗಳು ಲಿಂಗಧಾರಣದ ಮಹತ್ವವನ್ನು ನಾನಾಮುಖವಾಗಿ ಕೊಂಡಾಡಿರುವಲ್ಲಿ ಇಂಥ ಮುಕ್ತಿದಾಯಕವಾದ ಲಿಂಗದೀಕ್ಷೆಯನ್ನು ತ್ಯಜಿಸಿ ಮತಾಂತರವನ್ನು ಹೊಂದುವವನೇ ಪಾಷಂಡಿಯೆಂದು ಸ್ಪಷ್ಟವಾಗುತ್ತದೆ ಇಂಥ ಮತವನ್ನು ಬಿಟ್ಟು ಅನ್ಯಮತಕ್ಕೆ ಪ್ರವೇಶಿಸುವ ಪಾಷಂಡಿಗಳೇ "ಶೈವಾನ್ ಪಾಶುಪತಾಂಶ್ಚೈವ" ಎಂಬ ಶ್ಲೋಕಕ್ಕೆ ವಾಚ್ಯರಾಗುತ್ತಾರಲ್ಲದೆ ಯಾವಜ್ಜೀವವೂ ಏಕದೇವನಿಷ್ಠೆಯೆಂಬ ಪಾತಿವ್ರತ್ಯಧರ್ಮವುಳ್ಳ ಲಿಂಗಧಾರಿಗಳೆಂದೂ ವಾಚ್ಯರೆನಿಸಲಾರರು

ಯುದ್ಧವಾರ್ತೆ.

ರೋಂ ನಗರದ ಪತನ

ಕಳೆದ ೩ನೆಯ ತಾರೀಖು ಶನಿವಾರ ದಿವಸ ೮ನೆಯ ಭಾರತೀಯ ಸೇನೆಯ ಸೈನಿಕರು ರೋಂ ನಗರವನ್ನು ಪ್ರವೇಶಮಾಡಿದರು ಇಟಾಲಿಯನ್ನರು ನಗರದ ಬೀದಿಗಳಲ್ಲಿ ಸಾಲಾಗಿ ನಿಂತು ಮಿತ್ರಸೈನಿಕರಿಗೆ ಸ್ವಾಗತವಿತ್ತರು ರೋಂ ನಗರವು ಕೈವಶವಾಗುವ ಸಮಯದಲ್ಲಿ ಮಿತ್ರವಿಮಾನಗಳು ಆ ನಗರದ ಉತ್ತರದಲ್ಲಿದ್ದ ಶತ್ರುಗಳ ಮುಖ್ಯಸ್ಥಾನಗಳ ಮೇಲೆ ಧಾಳಿ ನಡೆಸಿ ೩೦೦ ಶತ್ರು ಲಾರಿಗಳನ್ನು ನಾಶಮಾಡಿದವು ಮತ್ತು ರೋಂ ನಗರವನ್ನು ಸ್ವಾಧೀನಪಡಿಸಿಕೊಂಡು ಸೇನೆಯ ಮುಂಪಡೆಗಳು ನಗರವನ್ನು ಹಿಂದಕ್ಕೆ ಬಿಟ್ಟು ಶತ್ರುವನ್ನು ಅಟ್ಟಿಕೊಂಡು ಮುನ್ನುಗ್ಗಿವೆ ಅನೇಕ ಕಡೆಗಳಲ್ಲಿ ಟೈಬರ್ ನದಿಯನ್ನು ದಾಟಿ ಮುನ್ನುಗ್ಗುತ್ತಿವೆ ರೋಂ ನಗರದ ೯ ಆಭಾಗಕ್ಕೆ ಯುದ್ಧದಿಂದ ಯಾವ ಬಗೆಯ ಕೇಡೂ ಆಗಿಲ್ಲ ಅಲ್ಲಿಗೆ ಯುದ್ಧದ ಅಪಾಯತಟ್ಟಿಲ್ಲ ಕೆಥೀಡ್ರಲ್ ದೇವಸ್ಥಾನ ಮೊದಲಾದವು ಸುರಕ್ಷಿತವಾಗಿವೆ ವೆಟಿಕನ್ ನಗರವೂ ಸುರಕ್ಷಿತವಾಗಿದೆ ಚಿತ್ರಾರ್ಹಕಲಾಕೃತಿಗಳಿಗೆಲ್ಲ ಸರಿಯಾದ ರಕ್ಷಣಾವ್ಯವಸ್ಥೆ ಮಾಡಲಾಗಿತ್ತು. ಸೇಂಟ್‌ಪೀಟರ್ಸ್ ಚರ್ಚನ್ನು ಇನ್ನುಮುಂದೆ ಪೂಜಾದಿಗಳಿಗೆ ತೆರೆಯಬೇಕಾಗಿದೆ ಅದನ್ನು ಕಳೆದ ಸೆಪ್ಟೆಂಬರ್‌ನಿಂದ ಮುಚ್ಚಲಾಗಿತ್ತು ಜರ್ಮನರೂ ಕೂಡ ಆ ನಗರವನ್ನು ಹಾಳುಮಾಡದೆ ರಕ್ಷಿಸುವ ಸಲುವಾಗಿಯೇ ಅದನ್ನು ತಾವು ತ್ಯಜಿಸಿ ಬಂದುದಾಗಿ ಹೇಳಿಕೊಳ್ಳುತ್ತಿದ್ದಾರೆ ಮಿತ್ರಸೈನಿಕರು ನಗರವನ್ನು ಪ್ರವೇಶಿಸಿದಾಗ ಅಲ್ಲಿನ ಪ್ರಜೆಗಳು ಬಹುಕಾಲದಿಂದ ಸರಿಯಾದ ಆಹಾರ ಸಿಕ್ಕದೆ ನರಳುತ್ತಿದ್ದರೆಂಬುದನ್ನು ಜ॥ ಅಲೆಕ್ಸಾಂಡರವರ ಪ್ರಧಾನಕಚೇರಿಯಿಂದ ಪ್ರಕಟಿಸಿದ್ದಾರೆ

೧೮೦೦೦ ಶತ್ರುಸೈನಿಕರ ಸೆರೆ

ರೋಂ ಜಿಲ್ಲೆಯಿಂದ ಪಲಾಯನ ಮಾಡುತ್ತಿರುವ ಜರ್ಮನರನ್ನು ೫ನೆಯ ಸೇನೆ ಬೆನ್ನಟ್ಟಿಕೊಂಡು ಹೋಗುತ್ತಿದೆ ಅವರು ಬಹುವೇಗವಾಗಿ ಓಟಕೀಳುವುದರಿಂದ ಆ ಸೇನೆಗೆ ಅವರನ್ನು ಸಮೀಪಿಸಲು ಸಾಧ್ಯವಾಗುತ್ತಿಲ್ಲ. ಟೈಬರ್ ನದಿ ಮುಖಜಭೂಮಿಗೆ ೩೭ ಮೈಲಿ ದೂರದಲ್ಲಿರುವ ಚಿವೆಟಾವಿಷ್ಯಾ ಕಡೆಗೆ ಈಗ ಜರ್ಮನರು ಹಿಮ್ಮೆಟ್ಟುತ್ತಿದ್ದಾರೆ. ೫ನೆಯ ಸೇನೆ ಇಲ್ಲಿ ಮುತ್ತಿಗೆಯನ್ನು ಪ್ರಾರಂಭಿಸಿದಲಾಗಾಯ್ತು ಇದುವರೆಗೆ ೧೮೦೦೦ ಶತ್ರುಸೈನಿಕರನ್ನು ಸೆರೆ ಹಿಡಿದಿದೆಯೆಂದು ಹೇಳಲಾಗಿದೆ.

ಯೂರೋಪ್ ಯುದ್ಧಾರಂಭ

ಪಶ್ಚಿಮ ಯೂರೋಪಿನ ಮೇಲೆ ಬ್ರಿಟಿಷ್ ಮತ್ತು ಅಮೆರಿಕನ್ ಪಡೆಗಳು ಕಳೆದ 6 ನೆಯ ತಾರೀಖು ದಂಡಯಾತ್ರೆಯನ್ನು ಪ್ರಾರಂಭಿಸಿದವು ದಂಡಯಾತ್ರೆಗೆ ಪೂರ್ವಭಾವಿಯಾಗಿ ಶತ್ರುರಾಣ್ಯಗಳಮೇಲೆ ಮಿತ್ರನೌಕೆಗಳು ಭಯಂಕರವಾಗಿ ಗುಂಡು ಹಾರಿಸಿದವು ಈ ಮಧ್ಯೆ ಬ್ರಿಟಿಷ್ ಮತ್ತು ಅಮೆರಿಕ ನೌಕಾಸೇನಾನಿಗಳ ಅಧೀನದಲ್ಲಿ ೪ ಸಾವಿರದ ಮೇಲೆ ನೌಕೆಗಳು ಸೈನಿಕರನ್ನು ಹೊತ್ತು ಫ್ರೆಂಚ್‌ತೀರಕ್ಕೆ ಹೊರಟವು ಶತ್ರುಗಳು

ಸಮುದ್ರದಲ್ಲಿ ಹಾಕಿರಬಹುದಾದ ಮೈನುಗಳನ್ನು ಗುಡಿಸಿ ಎತ್ತಿ ಹಾಕಲು ಮೊದಲೇ ಹೋಗಿದ್ದ ನೌಕೆಗಳೂ ತಮ್ಮ ಕರ್ತವ್ಯವನ್ನು ತೀರಿಸಿಕೊಂಡು ಬಂದು ಸೇರಿದವು ಎಲ್ಲವೂ ಒಟ್ಟಿಗೆ ಸೇರಿ ಕಡಲನ್ನಾಳುವ ಮಾರ್ಗವಾಗಿ ಫ್ರೆಂಚ್ ತೀರಕ್ಕೆ ನುಗ್ಗಿದವು ವಿಮಾನಗಳೂ ನೌಕೆಗಳೂ ಶತ್ರುಗಳಮೇಲೆ ಬಾಂಬುಗಳನ್ನು ಕಾರುತ್ತಿರುವ ಸಮಯದಲ್ಲಿ ಮಿತ್ರಸೇನೆಗಳನ್ನು ಇಳಿಸಲಾಯಿತು. ಪ್ಯಾರಾಟ್ರೂಪುಗಳನ್ನಿಳಿಸಲು ಸಾವಿರಾರು ಗ್ಲೈಡರ್ ವಿಮಾನಗಳೂ ಉಪಯೋಗಿಸಲ್ಪಟ್ಟವು ಹನ್ನೊಂದುಸಾವಿರ ಪ್ರಥಮ ಶ್ರೇಣಿಯ ವಿಮಾನಗಳು ದಾಳಿಮಾಡುತ್ತಿರುವ ಮಿತ್ರಪಡೆಗಳಿಗೆ ಒತ್ತಾಸೆಕೊಡುತ್ತಿವೆ ಜರ್ಮನ್ ಠಾಣ್ಯಗಳ ಹಿಂಬದಿಯಲ್ಲಿ ಗ್ಲೈಡರ್ ವಿಮಾನಗಳಲ್ಲಿ ಪ್ಯಾರಾಟ್ರೂಪ್ ದಳಗಳನ್ನು ತಂದಿಳಿಸಲಾಗಿದೆ ಆಗಲೇ ಮಿತ್ರಸೈನಿಕರು ಮುಂದುವರಿದು ಉತ್ತರಫ್ರಾನ್ಸಿನಲ್ಲಿ ಕೇನ್ ನಗರಕ್ಕೆ 15 ಮೈಲಿ ದೂರದಲ್ಲಿರುವ ಬಯೋನಗರವನ್ನು ಹಿಡಿದುಕೊಂಡಿದ್ದಾರೆ ಜರ್ಮನರ ರಿಜರ್ವ್ ಪಡೆಗಳು ಈಗ ಪ್ರತಿಭಟಿಸಿ ಥಾಂಕದನವನ್ನಾರಂಭಿಸಿವೆ

ಪಶ್ಚಿಮರಂಗದ ಯುದ್ಧದಲ್ಲಿ ಉಭಯ ಪಕ್ಷದ ಸೇನಾನಿಗಳು

ಮಿತ್ರಪಕ್ಷದಲ್ಲಿ—ಪ್ರಧಾನ ಸೇನಾನಿ ಜನರಲ್ ಐಸನ್ ಹೊವರ್, ಉಪಪ್ರಧಾನ ಸೇನಾನಿ ಏರ್ ಚೀಫ್ ಮಾರ್ಷಲ್ ಸರ್ ಆರ್ಥರ್ ಟೆಡ್ಡರ್, ಬ್ರಿಟಿಷ್ ಪ್ರಧಾನ ಸೇನಾನಿ ಜನರಲ್ ಮಾಂಟ್ಗೊಮರಿ, ಅಮೆರಿಕ ಬಾಂಬಿಂಗ್ ವಿಮಾನ ಪಡೆಯ ಸೇನಾನಿ ಜನರಲ್ ಕಾರ್ಲ್ ಸ್ಪಾಟ್ಸ್, ಇತರ ಸೇನಾನಿಗಳು ಲೆ|| ಜನರಲ್ ಓಮರ್ ಬ್ರಾಡ್ಲಿ

ಶತ್ರು ಪಕ್ಷದಲ್ಲಿ— ಮಹಾಪ್ರಧಾನ ಸೇನಾನಿ ಹೆರ್ ಹಿಟ್ಲರ್, ಪ್ರಧಾನ ಸೇನಾನಿ ಫೀಲ್ಡ್ ಮಾರ್ಷಲ್ ಕಾರ್ಲ್ ಫಾನ್ ರುಂಸ್ಟೆಟ್, ಸೇನಾಪಡೆಗಳ ಸೇನಾನಿಗಳು ಫೀಲ್ಡ್ ಮಾರ್ಷಲ್ ರಾಮೆಲ್, ಫೀಲ್ಡ್ ಮಾರ್ಷಲ್ ಬ್ಲಾಸ್ಕೊವಿಟ್ಸ್, ವಿಮಾನ ಸೇನಾನಿ ಫೀಲ್ಡ್ ಮಾರ್ಷಲ್ ಹ್ಯೂಗೋಸ್ಪರ್ರಿ, ಇತರ ಸೇನಾನಿಗಳು ಅಡ್ಮಿರಲ್ ಕ್ರ್ಯಾಂಕ್, ಪ್ಯಾನ್ ಸರ್ ಜನರಲ್ ಫಾನ್ ಸ್ವೆಪೆಬರ್ಗ್ ಈ ರೀತಿ ಇವೆ

ಹಿಟ್ಲರ್ ಸ್ವತಃ ಸೇನೆಯ ಆಧಿಪತ್ಯ ವಹಿಸಿದ್ದಾನೆ

ಹಿಟ್ಲರನು ಸ್ವತಃ ಜರ್ಮನ್ ಸೇನೆಯ ಪ್ರಧಾನ ಸೇನಾಧಿಪತ್ಯವನ್ನು ವಹಿಸಿಕೊಂಡಿದ್ದಾನೆ ಆತನಿಗೆ ಸಮಾಲೋಚನೆ ಹೇಳಲು ಮಹಾ ಮಹಾ ರಣಪಂಡಿತರು ಇದ್ದಾರೆ ೪ ಮಂದಿ ಮಾರ್ಷಲ್‌ಗಳು ಇದ್ದಾರೆ ಆತನ ಶಿಬಿರವೀಗ ಉತ್ತರ ಫ್ರಾನ್ಸಿನಲ್ಲಿ ಎಲ್ಲಿಯೋ ಏರ್ಪಟ್ಟಿದೆ

ಜರ್ಮನ್ ರಿಸರ್ವ್ ಪಡೆಗಳ ಉಗ್ರ ಪ್ರತಿಭಟನೆ

ಮಿತ್ರ ದಂಡಯಾತ್ರೆಯನ್ನೆದುರಿಸಲು ಶತ್ರು ಸೇನಾನಿ ಜ|| ರಾಮೆಲ್ ಈಗ ಅಗಾಧ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವುದಾಗಿಯೂ ಜರ್ಮನ್ ರಿಸರ್ವ್ ಪಡೆಗಳೀಗ ಭಾರೀ ಪ್ರತಿ ಮುತ್ತಿಗೆಯನ್ನು ಹಾಕಿವೆಯೆಂದು ಕೆನೇಡಿಯನ್ ಪದಾತಿ ಪಡೆಯು ಜರ್ಮನ್ ೨೧ನೆಯ ಪ್ಯಾಂಜರ್ ಡಿವಿಜನ್ ಸೇನೆಯೊಂದಿಗೆ ಸೆಣೆಸುತ್ತಿದೆಯಾದರೂ ಇದುವರೆಗೂ ಭಾರಿ ಸಂಗ್ರಾಮ ಪ್ರಾಪ್ತವಾಗಿಲ್ಲವೆಂದೂ ಹೇಳಲಾಗಿದೆ ಒಂದು ಕ್ಷೇತ್ರದಲ್ಲಿ ಎಡಬಿಡದೆ ಕೆನೇಡಿಯನ್ನರು ದಾಳಿಗಳನ್ನು ಮಾಡುತ್ತಿರುವುದರಿಂದ, ಅವರನ್ನೆದುರಿಸುತ್ತಿರುವ ಪಡೆಯೊಂದು ಈಗ ಹಿಮ್ಮೆಟ್ಟುತ್ತಿದೆ ಅಲ್ಲಿ ಅನೇಕ ಶತ್ರು ಸೈನಿಕರನ್ನು ಸೆರೆಹಿಡಿದಿದ್ದಲ್ಲದೆ, ರಾಶಿರಾಶಿಯಾಗಿ ಬಿದ್ದಿದ್ದ ಶತ್ರು ಸಾಮಗ್ರಿಗಳನ್ನು ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಈಗ ಮಿತ್ರ ಸೇನೆಗಳು ಇಳಿದಿರುವ ಪ್ರದೇಶದ ಬಲಭಾಗದಲ್ಲಿ ಅಮೇರಿಕ ಪಡೆಗಳೂ, ಎಡಭಾಗದಲ್ಲಿ ಕೆನೇಡಿಯನ್ ಮತ್ತು ಬ್ರಿಟಿಷ್ ಪಡೆಗಳೂ ಮುನ್ನುಗ್ಗುತ್ತಾ ಶತ್ರುವಿನೊಂದಿಗೆ ಕದನ ಮಾಡುತ್ತಿವೆ ಜರ್ಮನ್ ರಿಸರ್ವ್ ಪಡೆಗಳೀಗ ರಣಕ್ಷೇತ್ರದಲ್ಲೆಲ್ಲಾ ಅತ್ಯುಗ್ರವಾಗಿ ಪ್ರತಿಭಟಿಸುತ್ತಿದ್ದರೂ ಸಹ ಬ್ರಿಟಿಷ್ ಮತ್ತು ಕೆನೇಡಿಯನ್ ಸೈನಿಕರು ಏಕಪ್ರಕಾರವಾಗಿ ಮುನ್ನುಗ್ಗುತ್ತಲೇ ಇದ್ದಾರೆ ಎಂದು ಹೇಳಲಾಗಿದೆ

ಮಿತ್ರರು ಅನೇಕ ಗುಪ್ತಾಯುಧಗಳನ್ನು ಉಪಯೋಗಿಸುತ್ತಿದ್ದಾರೆ

"ಯೂರೋಪಿನ ಮೇಲೆ ದಂಡೆತ್ತಿ ಹೋಗಿರುವ ಮಿತ್ರ ಸೈನಿಕರು ಈಗ ಅನೇಕ ಗುಪ್ತಾಯುಧಗಳನ್ನು ಶತ್ರುವಿನ ಮೇಲೆ ಪ್ರಯೋಗಿಸುತ್ತಿದ್ದಾರೆ ಈ ಆಯುಧಗಳನ್ನು ಉಪಯೋಗಿಸುತ್ತಿರುವುದು ಇದೇ ಮೊದಲನೆಯ ಬಾರಿ ಆ ಆಯುಧಗಳನ್ನು ಮಂತ್ರಿಮಂಡಲದ ಅಧೀನದಲ್ಲಿರುವ ಕಾರ್ಖಾನೆಗಳಲ್ಲಿ ಅತ್ಯಂತ ಗೋಪ್ಯವಾದ ರೀತಿಯಲ್ಲಿ ತಯಾರಿಸಲಾಯಿತು ಕೆಲವು ಸಂದರ್ಭಗಳಲ್ಲಿ ಕೆಲಸಗಾರರಿಗೇ ಅವರೇನು ಮಾಡುತ್ತಿರುವರೆಂಬುದು ಗೊತ್ತಾಗುತ್ತಿರಲಿಲ್ಲ" ಎಂದು ಸರಬರಾಯಿ ಮಂತ್ರಿಮಂಡಲವು ಪ್ರಕಟಿಸಿದೆ

ಕೆನೆಡಿಯನ್ ಸೈನಿಕರು ನೆಲೆ ಸ್ಥಾಪಿಸಿಕೊಂಡರು

ಚೆರ್ಬರೋ ಪರ್ಯಾಯ ದ್ವೀಪಕ್ಕೂ ಲಾಹ್ಯಾವರ್ ನಗರಕ್ಕೂ ಮಧ್ಯೆ ಜಯಪ್ರದವಾಗಿ ಪ್ಯಾರಾಚೂಟ್ ಸೈನಿಕರನ್ನು ಇಳಿಸಲಾಯಿತು ಅವರು ಈಗಾಗಲೇ ಮಹತ್ವ ಸ್ಥಳಗಳನ್ನಾಕ್ರಮಿಸಿಕೊಂಡಿದ್ದಾರ ಸಾವಿರಾರು ಗಟ್ಟಳೆ ಮಿತ್ರ ಹಡಗುಗಳು ಈಗ ಫ್ರೆಂಚ್ ತೀರಕ್ಕೆ ಅಲೆಗಳೋಪಾದಿಯಲ್ಲಿ ಹೊರಟು ಶಸ್ತ್ರಾಸ್ತ್ರಗಳನ್ನೂ ಟ್ಯಾಂಕುಗಳನ್ನೂ ಮದ್ದುಗುಂಡುಗಳನ್ನೂ ಅಪಾರವಾಗಿ ಸಾಗಿಸುತ್ತಿವೆ ಫ್ರಾನ್ಸಿನಲ್ಲಿ ಬಂದಿಳಿದ ಕೆನೇಡಿಯನ್ ಸೈನಿಕರು ಒಂದ ೩ ಗಂಟೆಗಳೊಳಗಾಗಿಯೇ ಒಂದು ಪ್ರಮುಖ ನೆಲೆಯನ್ನು ಸ್ಥಾಪಿಸಿಕೊಂಡಿದ್ದಾರೆ ಅಲ್ಲದೆ ಒಂದು ಗ್ರಾಮವೊಂದಕ್ಕೆ ನುಗ್ಗಿ ಶತ್ರು ಸೈನಿಕರನ್ನು ಸೆರೆಹಿಡಿದಿದ್ದಾರೆ

ಫ್ರೆಂಚರಿಗೆ ಪೆಟೆನ್‌ರ ಎಚ್ಚರಿಕೆ

"ಈಗಾಗಲೇ ಫ್ರೆಂಚ್ ದೇಶದಲ್ಲಿ ಸಂಭವಿಸುತ್ತಿರುವ ದುರ್ಘಟನೆಗಳನ್ನು ಹೆಚ್ಚಿಸಲು ಸಿಲುಕಬೇಡಿ ಈಗ ನಡೆಯುತ್ತಿರುವ ಘೋರಸಂಗ್ರಾಮದಲ್ಲಿ ಜರ್ಮನರು ಅನೇಕ ರಕ್ಷಣಾಕಾರ್ಯಗಳನ್ನು ಜರುಗಿಸುವುದು ಅನಿವಾರ್ಯ ಇವುಗಳನ್ನು ಅಡ್ಡಿಮಾಡಿದಲ್ಲಿ ಫ್ರೆಂಚರನ್ನು ನಿರ್ದಾಕ್ಷಿಣ್ಯವಾಗಿ ಜರ್ಮನರು ಶಿಕ್ಷಿಸುವರು ನಿರಾಶಾ ವಾದಿಗಳ ಮಾತಿನ ಬೆಡಗಿಗೆ ಮರುಳುಗೊಳ್ಳದಿರಿ ಜರ್ಮನರಿಗೆ ಒಳಸಂಚು ದ್ರೋಹ ಮಾಡದಿರಿ,' ಎಂದು ವಿಚಿ ಸರ್ಕಾರದ ಅಧ್ಯಕ್ಷರಾದ ಮಾರ್ಷಲ್ ಪೆಟೆನರವರು ಪ್ರಜೆಗಳನ್ನು ಎಚ್ಚರಿಸಿ ಬ್ರಾಡ್‌ಕ್ಯಾಸ್ಟ್ ಭಾಷಣ ಮಾಡಿದ್ದಾರೆ

ಜರ್ಮನರು ಯುದ್ಧನೌಕೆಯನ್ನು ತ್ಯಜಿಸಿದ್ದಾರೆ

ನಾರ್ವೆಯ ಆಲ್ಟೆಫೋರ್ಡಿನಲ್ಲಿ ನಷ್ಟಗೊಂಡು ಬಿದ್ದಿರುವ ಪ್ರಸಿದ್ಧವಾದ ೪೨ ಸಹಸ್ರ ಟನ್ನಿನ 'ಟಿರ್ಪಿಟ್ಸ್' ಯುದ್ಧನೌಕೆಯನ್ನು ಸರಿಮಾಡಿ ರಂಗಕ್ಕಿಳಿಸಲು ಜರ್ಮನರು ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ ಈ ನೌಕೆಯು ಮಿತ್ರರ ದಾಳಿಗಳಿಂದ ಜಖಂಗೊಂಡಿರುವ ಕಾರಣ ಈಗ ಉಪಯೋಗಾರ್ಹವಾಗಿಲ್ಲ ಇದನ್ನು ಸರಿಮಾಡುವ ಸಂಭವವೂ ಇಲ್ಲ ಇದರಲ್ಲಿದ್ದ ನಾವಿಕರೆಲ್ಲರೂ ನೌಕೆಯನ್ನು ತ್ಯಜಿಸಿದ್ದಾರೆಂದು ಸ್ಟಾಕ್‌ಹೋಂ ವರ್ತಮಾನ ತಿಳಿಸುತ್ತದೆ

ರಷ್ಯನರ ಜಯಪ್ರದ ಮುತ್ತಿಗೆ

ರುಮೇನಿಯದಲ್ಲಿರುವ ಜೆಸ್ಸಿಯ ಬಳಿ ರಷ್ಯನರು ಅನೇಕ ಜಯಪ್ರದ ದಾಳಿಗಳನ್ನು ನಡೆಸಿದ್ದಾರೆ ಆದರೆ ರಷ್ಯನ್ ಹೈ ಕಮ್ಯಾಂಡಿನ ಪ್ರಕಟಣೆಯು ಈ ಸುದ್ದಿಯನ್ನು ತಿಳಿಸಿಲ್ಲವಾದರೂ ಜೆಸ್ಸಿಯ ಉತ್ತರ ಮತ್ತು ವಾಯವ್ಯಗಳಲ್ಲಿ ಜರ್ಮನರು ಟ್ಯಾಂಕುಗಳ ಬೆಂಬಲದಿಂದ ನಡೆಸಿದ ಪ್ರತಿದಾಳಿಗಳೆಲ್ಲವನ್ನೂ ರಷ್ಯನ್ ಸೈನಿಕರು ಎದುರಿಸಿ ವ್ಯರ್ಥಪಡಿಸಿದರೆಂದಷ್ಟು ಮಾತ್ರ ತಿಳಿಸಿದೆ ಜರ್ಮನರಿಗೆ ಅಪಾರ ಸಾವುನೋವು ಮತ್ತು ನಷ್ಟ ಉಂಟಾಯಿತೆಂದು ಹೇಳಲಾಗಿದೆ

ಅಮೆರಿಕದ ಹೊಸಶಸ್ತ್ರ

ಅಕ್ಷರಾಷ್ಟ್ರಗಳ ಸಬ್ ಮೆರೀನುಗಳನ್ನು ಮುಳುಗಿಸಲು ಹೊಸದೊಂದು ಶಸ್ತ್ರವನ್ನು ಅಮೆರಿಕಾ ನೈನ್ಯಶಾಖೆಯು ಉಪಯೋಗಿಸುತ್ತಿದೆ ಇದಕ್ಕೆ 'ರಾಕೆಟ್‌ಗನ್' ಎಂದು ಹೆಸರು ಈ ಶಸ್ತ್ರಗಳನ್ನು ವಿಮಾನಗಳ ಮೂಲಕ ಪ್ರಯೋಗ ಮಾಡಲಾಗುವುದು 'ಸಬ್ ಮೆರೀನ್ ನಶಿಸುವವರು ಏನಾಗಿದೆಯೆಂದು ತಿಳಿದುಕೊಳ್ಳುವ ಮುಂಚೆಯೇ ರಾಕೆಟ್‌ಗನ್ ಹೊಡೆತದಿಂದ ಸಬ್ ಮೆರೀನ್ ಮುಳುಗಿ ಬಿಡುವುದಾಗಿ ಈ ಶಸ್ತ್ರವನ್ನು ಉಪಯೋಗಿಸುತ್ತಿರುವ ವೈಮಾನಿಕರು ತಿಳಿಸಿರುವರು ಜಪಾನ್ ವಿಮಾನಗಳನ್ನು ನಾಶಪಡಿಸಲೂ ಸಹ ಈ ರಾಕೆಟ್‌ಗನ್ನುಗಳನ್ನು ಉಪಯೋಗಿಸುತ್ತಿರುವುದಾಗಿ ತಿಳಿದುಬಂದಿದೆ

ಛಾಂಗ್ಷಾಕ್ಕೆ ವಿಪತ್ತು

ಹೂನಾನ್ ಪ್ರಾಂತ್ಯದ ಮುಖ್ಯ ಪಟ್ಟಣವಾದ ಛಾಂಗ್ಷಾಕ್ಕೆ ವಿಪತ್ತು ತಾಗಿದೆ ನಗರದ ವಾಯವ್ಯಕ್ಕೆ ಕೇವಲ ೬ ಮೈಲಿ ದೂರದಲ್ಲೂ ಉತ್ತರಕ್ಕೆ ೧೦ ಮೈಲಿ ದೂರದಲ್ಲೂ ಜಪಾನರ ಪಡೆಗಳು ಈಗಾಗಲೇ ಬಂದಿರುವುವು ನಗರವು ಇನ್ನೂ ಚೀಣರ ವಶದಲ್ಲೇ ಇರುವುದಾದರೂ ನಗರದಲ್ಲಿರುವ ಚೀಣರ ಠಾಣ್ಯದ ಪರಿಸ್ಥಿತಿಯು ಉತ್ಕಟಾವಸ್ಥೆಯಲ್ಲಿರುವುದಾಗಿ ಇತ್ತೀಚಿನ ಚುಂಕಿಂಗ್ ವರ್ತಮಾನ ತಿಳಿಸಿದೆ

ಕೋಹಿಮಾದಿಂದ ಶತ್ರುವು ಹಿಮ್ಮೆಟ್ಟಲು ಕಾರಣ

"ಪ್ರಥಮತಃ ಬ್ರಿಟಿಷರ ರಕ್ಷಣಾವ್ಯವಸ್ಥೆಗಳು ಬಲವಾಗಿದ್ದವು ಎರಡನೆಯದಾಗಿ ಬ್ರಿಟಿಷ್ ಪಡೆಗಳ ಆಕ್ರಮಣಗಳು ಬಹು ಪ್ರತಿಭೆಯಿಂದ ನಡೆಯಿತು ಮೂರನೆಯದಾಗಿ ಜಪಾನರ ಸರಬರಾಜು ವ್ಯವಸ್ಥೆಗಳನ್ನು ಮಿತ್ರ ಪಡೆಗಳು ಶತ್ರು ಹಿಂಬದಿಯಲ್ಲಿ ಕಾರ್ಯಾಚರಣೆ ನಡೆಸಿ ಛಿದ್ರಿಸಿದವು ನಾಲ್ಕನೆಯದಾಗಿ ಪ್ರಕೃತಿಯ ಅಡಚಣೆ ಅಂದರೆ ಮುಂಗಾರು ಮಳೆ ಈ ೪ ಕಾರಣಗಳು ಜಪಾನರ ಕೋಹಿಮಾ ಆಕ್ರಮಣವನ್ನು ನಿರರ್ಥಕಗೊಳಿಸಿದವು" ಎಂದು ಅಸೋಸಿಯೇಟೆಡ್ ಪ್ರೆಸ್ ಸಂಸ್ಥೆಯ ಯುದ್ಧ ಬಾತ್ಮೀದಾರರಾದ ಅರ್ಲ ಹಂಫ್ರಿಸ್‌ರವರು ತಿಳಿಸಿರುವರು ಜಪಾನರು ಈಗ ಹಿಂದೋಡಿ ಯಾವ ಪ್ರದೇಶದಲ್ಲಿ ನಿಲ್ಲುವರೆಂಬುದು ತಿಳಿದಿಲ್ಲ ಎಂದೂ ಇವರು ತಿಳಿಸಿರುತ್ತಾರೆ

ಭಾರತದ ಸ್ಟರ್ಲಿಂಗ್ ಸಾಲ ತೀರಿಸಲು ಬ್ರಿಟನ್ನಿನ ಅಭಿಪ್ರಾಯ

ಈಗ ನಡೆಯುತ್ತಿರುವ ಯುದ್ಧಕ್ಕಾಗಿ ಭಾರತವು ಬ್ರಿಟನ್ನಿಗೂ ಇತರ ಮಿತ್ರರಾಷ್ಟ್ರಗಳಿಗೂ ಯಥೇಚ್ಛವಾಗಿ ಸರಬರಾಜು ಮಾಡುತ್ತಿವೆ ಈ ಸರಬರಾಜಿನ ಬೆಲೆಯು ಕೋಟಿಗಟ್ಟಲೆ ಆಗಿದೆ ಈ ಮಾರಾಟದಿಂದ ಬಂದ ಹಣವೆಲ್ಲವೂ ಇಂಗ್ಲೆಂಡಿನ ಟ್ರೆಜರಿಗೆ ಜಮಾ ಮಾಡಲಾಗುತ್ತಿದೆ ಹೀಗೆ ಮಾಡಿದ ಹಣವನ್ನು ಯುದ್ಧಾನಂತರ ಭಾರತಕ್ಕೆ ಕೊಡಬೇಕ ಬೇಡವೆ? ಎಂದು ಬ್ರಿಟನ್ನಿನಲ್ಲಿ ವಾದವಿವಾದಗಳು ಆಗುತ್ತಿವೆ ಕೆಲವು ಪತ್ರಿಕೆಗಳಂತೂ ಈ ಹಣವನ್ನು ತೀರಿಸುವುದರಿಂದ ಬ್ರಿಟನ್ನಿನ ಯುದ್ಧಾನಂತರದ ವ್ಯಾಪಾರವು ಹದಗೆಡುವುದೆಂದೂ ಆದ್ದರಿಂದ ಈ ಹಣವನ್ನು ಸಾಲವಾಗಿ ಎಣಿಸದೆ ಕೇವಲ ಯುದ್ಧ ಸಹಾಯವೆಂದು ಎಣಿಸಬೇಕೆಂದೂ ಸೂಚಿಸಿರುವುದಾಗಿ ವರ್ತಮಾನ ಇದು ಭಾರತೀಯರಲ್ಲಿ ಕಳವಳವನ್ನುಂಟುಮಾಡಿದೆ ಈ ಬಗ್ಗೆ ವಿಶ್ವ ಆರ್ಥಿಕ ಸಮ್ಮೇಳನದಲ್ಲಿ ಚರ್ಚೆ ಮಾಡುವುದಾಗಿ ಸರ್ ಷಣ್ಮುಗಂಚೆಟ್ಟಿಯವರು ತಿಳಿಸಿರುವರು ಸಾಲತೀರಿಸಬೇಕೆಂದು ಬ್ರಿಟನ್ನಿನ ಜನಾಭಿಪ್ರಾಯ ಇದೆ ಎಂತಲೂ ಈಚೆಗೆ ತಿಳಿದುಬಂದಿದೆ.

ಚೀಣರು ಪೂರ್ಣಪೂರ್ವಕವಾಗಿ ಯುದ್ಧ ಮಾಡುತ್ತಿಲ್ಲ

"ಚೀಣಾ ಸೈನ್ಯಗಳ ಪ್ರಮುಖ ಪಡೆಗಳು ಕೇವಲ ಅಲ್ಪ ಬಲಹೊಂದಿದ ಜಪಾನಿ ಪಡೆಗಳನ್ನು ತಡೆಗಟ್ಟದೆ ಹೋನಾನ್ ಪ್ರಾಂತ್ಯದಿಂದ ಹಿಮ್ಮೆಟ್ಟುತ್ತಿರುವುದರಿಂದ ಈಗ ೬ ವರ್ಷಗಳ ಯುದ್ಧದಲ್ಲೇ ಆಗದಿದ್ದ ಸೋಲನ್ನು ಚೀಣೀ ಪಡೆಗಳು ಈಗ ಉಂಟುಮಾಡಿಕೊಂಡಿವೆ ಚೀಣರು ಪೂರ್ಣಪೂರ್ವಕವಾಗಿ ಯುದ್ಧ ಮಾಡುತ್ತಿಲ್ಲ ಚೀಣೀ ಸೈನ್ಯಾಧಿಕಾರಿಗಳಲ್ಲಿ ಹಳೇ ಸಂಪ್ರದಾಯದವರು ಇನ್ನೂ ಇರುವರು ಕೆಲವರಂತೂ ನಿರಾಶಾ ಬುದ್ಧಿಯಿಂದ ಅಸ್ವಸ್ಥರಾಗಿರುವರು ಜನರಲ್ ಹೋಟ್ಸುನಿನ್ನ ರವರ ನೇತೃತ್ವದಲ್ಲಿರುವ ಉತ್ತಮ ಪಡೆಗಳನ್ನು ಜಪಾನರ ಮೇಲೆ ನೂತನ ಜೋರೊಂದು ಗಡಿಯಲ್ಲಿಟ್ಟಿರುವುದು ಮಿಲಿಟರಿ ದಕ್ಷತೆಯಲ್ಲ ಹೋನಾನ್ ಪ್ರಾಂತ್ಯದಲ್ಲಿ ಚೀಣೀಯರ ಸೋಲು ಒಂದು ಅನಿವಾರ್ಯ ದುರ್ಘಟನೆಯಲ್ಲ ಚೀಣದಲ್ಲಿರುವ ಅವ್ಯವಸ್ಥೆಯೇ ಇದಕ್ಕೆ ಕಾರಣ ಎಂದು ರಷ್ಯದ ವಾರ್ ಅಂಡ್ ವರ್ಕಿಂಗ್ (ಯುದ್ಧವೂ ಕಾರ್ಮಿಕರೂ) ಎಂಬ ಪತ್ರಿಕೆಯು ಚೀಣ ಸೈನ್ಯದ ವಿಚಕ್ಷಣೆಯನ್ನು ಉಗ್ರವಾಗಿ ಖಂಡಿಸಿದೆ

ಜಪಾನು ತನ್ನ ದಂಡಯಾತ್ರಾ ಕ್ರಮವನ್ನು ತಿಳಿಸುವುದಿಲ್ಲ

ಫಿಲಿ ಪ್ಪೈನ್ಸ್ ಮತ್ತು ಪೋರ್ನಿಯೋ ದ್ವೀಪಗಳ ಸ್ಥೂಲ ತ್ರಿಕೋಣದಲ್ಲಿ ಜಪಾನರು ಮಿತ್ರರಮೇಲೆ ಮಹಾಯುದ್ಧವನ್ನು ನಡೆಸಲು ಏರ್ಪಡಿಸಿಕೊಂಡಿರುವ ರೆಂಡರ್ ಕ್ರಾಪಗಳ ಯೋಜನಾಕ್ರಮವನ್ನು ತಿಳಿಸಲಾಗುವುದಿಲ್ಲವೆಂದೂ ಟೋಜೋರವರು ಕೆಲವು ದಿನಗಳ ಕೆಳಗೆ ಇತ್ತ ಹೇಳಿಕೆಯನ್ನು ಜಪಾನಿನ ಯುದ್ಧಖಾತೆಯು ಪ್ರಕಟಿಸಿದೆ ಇದಲ್ಲದೆ ಬಿಯೊಕ್ ದ್ವೀಪವು ಅಮೇರಿಕರ ಹಸ್ತಗತವಾದಲ್ಲಿ ಅಮೇರಿಕನ್ನರು ಫಿಲಿಪ್ಪೈನ್ ದ್ವೀಪಾಕ್ರಮಣವನ್ನು ಪ್ರಾರಂಭಿಸಲು ಅನುವಾಗುವುದೆಂದು ಜಪಾನರು ಅರಿತುಕೊಂಡಿರುವರು ಹೀಗೆ ಜಪಾನರ ಒಳಕೋಟೆಗೆ ನುಗ್ಗಿಬರಲು ಆಸ್ಪದ ಏಕ ಕೂಟ್ಟರೆಂಬುದರ ಬಗ್ಗೆಯೂ ಜಪಾನರು ಸಮಜಾಯಿಷಿ ಕೊಟ್ಟಿರುವರು ಮಿತ್ರಪಡೆಗಳನ್ನು ಒಳಕೋಟೆಗೆ ಆಕರ್ಷಿಸಿ ಮಿತ್ರಸೈನ್ಯಗಳನ್ನು ನಾಶಪಡಿಸುವ ಉದ್ದೇಶದಿಂದಲೇ ಈಗ ಆಸ್ಪದಕೊಡಲಾಯಿತೆಂದು ಹೇಳಿರುವರು

ಭಾರತದ ಮಿಲಿಟರಿ ವೆಚ್ಚ ಕುರಿತು ಅಮೇರಿಯವರ ವಿವರಣೆ

"ಭಾರತದ ಗಡಿಗಳನ್ನು ರಕ್ಷಿಸಲು ತಗಲಬಹುದಾದ ವೆಚ್ಚವೆಲ್ಲವನ್ನೂ ೧೯೪೦ರ ಒಪ್ಪಂದದಂತೆ ಭಾರತವೇ ಹೊತ್ತಿದೆ ಇದರ ವೆಚ್ಚ ೧ ಕೋಟಿ ರೂ ಗಳಷ್ಟಾಗಿದೆ ಹೊರದೇಶಗಳಲ್ಲಿ ಕಾದುತ್ತಿರುವ ಭಾರತೀಯ ಪಡೆಗಳ ಖರ್ಚನ್ನು ಸಹ ಭಾರತ ಸರ್ಕಾರವೇ ವಹಿಸಿಕೊಂಡಿದೆ ಸೈನ್ಯ ಶಕ್ತಿಯನ್ನು ಹೆಚ್ಚಿಸಲು, ಹೊಸ ವಿಮಾನ ನಲೆಗಳನ್ನು ಸ್ಥಾಪಿಸಲು, ನೌಕಾಪಡೆಗಳನ್ನು ನಿರ್ಮಿಸಲೂ ಆದ ಖರ್ಚನ್ನು ಸಹ ಭಾರತ ಸರ್ಕಾರವೇ ಹೊತ್ತಿರುವದಲ್ಲದೆ ಭಾರತದಲ್ಲಿರುವ ಅಮೇರಿಕಾ ಸೈನ್ಯಗಳ ಖರ್ಚನ್ನೂ ಕೊಡುತ್ತಿದೆ ಆದರೆ ಅಮೇರಿಕಾ ಸೈನ್ಯಗಳಿಗೋಸ್ಕರ ಮಾಡುತ್ತಿರುವ ವೆಚ್ಚವು ಭಾರತಕ್ಕೆ ಪರೋಕ್ಷವಾಗಿ ಸಲ್ಲಿಸಲಾಗುತ್ತಿದೆ ಈ ವೆಚ್ಚ ೬೦ ಲಕ್ಷ ರೂಪಾಯಿಗಳು" ಎಂದು ಕಾಮನ್ಸ್ ಸಭೆಯಲ್ಲಿ ಅಮೇರಿಯವರು ಪ್ರಶ್ನೆಯೊಂದಕ್ಕೆ ಉತ್ತರವೀಯುತ್ತಾ ತಿಳಿಸಿದರು

ಅಮೇರಿಕಾದಲ್ಲಿ ಕಲ್ಲಿದ್ದಲು ಅಭಾವ

ಅಮೇರಿಕಾದ ಇತಿಹಾಸದಲ್ಲಿ ಎಂದೂ ಇಲ್ಲದ ಕಲ್ಲಿದ್ದಲಿನ ಅಭಾವ ಈಗ ಒದಗಿದೆ' ಎಂದು ಮಂತ್ರಿಗಳಾದ ಹೆರಾಲ್ಡ್ ಐಕ್ಸ್‌ರವರು ತಿಳಿಸಿರುವರು ಈಗ ಗಣಿ ಕೆಲಸವು ಬಹಳ ಗುರುತರವಾದದ್ದು ಕಷ್ಟವೂ ಭಯಂಕರವೂ ಆದ ಪರಿಸ್ಥಿತಿಯಲ್ಲಿ ಅಮೇರಿಕಾ ಕಲ್ಲಿದ್ದಲು ಗಣಿ ಕಟುಕದವರು ಕೆಲಸ ಮಾಡಬೇಕಾಗಿದೆ ಎಂದು ತಿಳಿಸಿದ್ದಲ್ಲದೆ ಅಮೇರಿಕದ ಸಾರ್ವಜನಿಕರು ಕಲ್ಲಿದ್ದಲನ್ನು ಮಿತವ್ಯಯದಿಂದ ಉಪಯೋಗಿಸಿ ಚಳಿಗಾಲದಲ್ಲಿ ಬೆಚ್ಚಗೆ ಜೀವಿಸಲು ಶಕ್ಯವೆಂದು ತಿಳಿಸಿರುವರು

ಸ್ವೀಕಾರ

ಚನ್ನರಾಯಪಟ್ಟಣ ತಾ॥ ಹಿರೀಸಾವೆ ಗ್ರಾಮದಲ್ಲಿರುವ ಶಾಲಾ ಮಾಸ್ಟರ್ ಮ॥ ರಾ॥ ಸಿದ್ಧಲಿಂಗಪ್ಪನವರ ಮೊಮ್ಮಗಳು ಚಿ॥ ಸೌ॥ ಸಿದ್ಧಲಿಂಗಮ್ಮನನ್ನು ಇದೇ ತಾಲೂಕು ದೊಡ್ಡ ಕರಡೇವ ಗಿರಿಮಲ್ಲಯ್ಯನವರ ಮಗ ಚಿ॥ ಮಲ್ಲಪ್ಪನಿಗೆ ಕೊಟ್ಟು ಕನ್ಯಾಗೃಹದಲ್ಲಿ ನಡೆದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವಧು ವರರ ಕಡೆಯಿಂದ ತೆಗೆಯಿಸಿದ 2 ರೂಪಾಯಿ ವಧುವಿನ ಕಡೆಯಿಂದ ತೆಗೆಯಿಸಿದ 1 ರೂಪಾಯಿ ಮತ್ತು ನಾಗಮಂಗಲ ತಾ॥ ಲಾಳನಕೆರೆ ಗ್ರಾಮದಲ್ಲಿರುವ ಅಚಲಾಪರಮೇಶ್ವರಿ ಅರ್ಚಕರಾದ ಮಲ್ಲಪ್ಪನವರ ಮಗಳನ್ನು ಹೊಳೆನರಸೀಪುರದ ರುದ್ರದೇವರ ಅರ್ಚಕರಾದ ವಿ ಬಸಪ್ಪನವರಿಗೆ ಕೊಟ್ಟು ಕನ್ಯಾಗೃಹದಲ್ಲಿ ನಡೆದ ವಿವಾಹೋತ್ಸವ ಸಮಯದಲ್ಲಿ ವಧೂವರರಿಂದ ತೆಗೆಯಿಸಿದ 2 ರೂಪಾಯಿ ಒಟ್ಟು 5 ರೂಪಾಯಿಗಳು ಮ॥ ರಾ॥ ಹಿರೀಸಾವೆ ಸಿದ್ಧಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ

ನವಲಗುಂದ ತಾ॥ ಮಣಕವಾಡ ಗ್ರಾಮದಲ್ಲಿರುವ ಮ॥ ರಾ॥ ತಿಪ್ಪಣ್ಣ ನಲವಡಿ ಇವರ ಅಣ್ಣನವರ ಪುತ್ರ ಚಿ॥ ಗುರುಪಾದಪ್ಪನಿಗೆ ಇದೇ ಗ್ರಾಮದ ಮ॥ ರಾ॥ ಕಲ್ಲಪ್ಪ ಹಳ್ಳಿಕೇರಿ ಇವರ ಮೊಮ್ಮಗಳು ಚಿ॥ ಸೌ॥ ಪಾರ್ವತೆವ್ವನನ್ನು ಕೊಟ್ಟು ನೆರವೇರಿಸಿದ ವಿವಾಹ ಮಹೋತ್ಸವಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರ ಕಡೆಯಿಂದ ತೆಗೆಯಿಸಿದ 3 ರೂಪಾಯಿ ಮತ್ತು ಕಲ್ಲೇರಿ ಗ್ರಾಮದಲ್ಲಿರುವ ಮ॥ ರಾ॥ ಬಸವನಗೌಡ ಕಂಚನಗೌಡರ ಇವರಿಗೆ ಮೇಲ್ಕಂಡ ಮ॥ ರಾ॥ ತಿಪ್ಪಣ್ಣ ನಲವಡಿ ಇವರ ಅಣ್ಣನವರ ಪುತ್ರಿ ಚಿ॥ ಸೌ॥ ರುದ್ರವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ ತೆಗೆಯಿಸಿದ 1 8 0 ರೂಗಳು ಒಟ್ಟು 4 8 0 ರೂಗಳು ಮ॥ ರಾ॥ ಬಸವನಗೌಡ ರಾಮನಗೌಡರ ದಲಾಲರ ಇವರ ದ್ವಾರಾ ತಲ್ಪಿರುತ್ತವೆ

ತಿಪಟೂರು ಸಿದ್ದಪ್ಪನವರ ಸಹೋದರ ಚಿ॥ ಗುರಪ್ಪನಿಗೆ ಹೊನ್ನವಳ್ಳಿ ಮರುಳಯ್ಯನವರ ಪುತ್ರಿ ಚಿ॥ ಸೌ॥ ಕಲ್ಯಾಣಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರ ಕಡೆಯಿಂದ ತೆಗೆಯಿಸಿದ 2 ರೂಪಾಯಿಗಳು ವೇ॥ ಎ ಎಂ ಶಿವಲಿಂಗಾರಾಧ್ಯರ ದ್ವಾರಾ ತಲ್ಪಿರುತ್ತವೆ

ಕಲಘಟಗಿ ತಾಲೂಕು ಸೋಮನಕೊಪ್ಪದಲ್ಲಿರುವ ಮ॥ ರಾ॥ ಗದಿಗಪ್ಪನವರು ವಾಲಿಶೆಟ್ಟರು ಇವರ ಪುತ್ರ ಇವರ ಅನುಜರ ವಿವಾಹವು ನೆರವೇರಿ ಇದೇ ತಿಂಗಳು ಒಂದನೆಯ ತಾರೀಖಿನ ದಿವಸ ಬೆಲವಂತರ ಹಿರಿಯ ಮಠದ ವೇ॥ ಸಿದ್ಧರಾಮೇಶ್ವರಸ್ವಾಮಿಯವರನ್ನು ತಮ್ಮ ಮನೆಗೆ ಉತ್ಸವ ಪೂರ್ವಕ ಬರಮಾಡಿಕೊಂಡು ನೆರವೇರಿಸಿದ ಆರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂಪಾಯಿಯು ಕಲಘಟಗಿ ವಾಲಿಶೆಟ್ಟರ ಬಸಪ್ಪನವರ ದ್ವಾರಾ ತಲ್ಪಿರುತ್ತದೆ.

ಸೊಲ್ಲಾಪುರ ನಗರದಲ್ಲಿರುವ ಮ॥ ರಾ॥ ರೇವಣಸಿದ್ಧಪ್ಪಾ ಕುರಲೆ ಇವರ ಪುತ್ರ ಚಿ॥ ಚನ್ನಬಸವಪ್ಪನಿಗೆ ಪಂಢರಪುರದಲ್ಲಿರುವ ಮ॥ ರಾ॥ ದಿಗಂಬರ ಕೋರೆ ಇವರ ಪುತ್ರಿ ಚಿ॥ ಸೌ॥ ಶಿವಗಂಗಾಬಾಯಿಯನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಭೂಸನೂರು ಮತ್ತು ಶೈನಾಪುರಸ್ವಾಮಿಗಳವರ ಅಪ್ಪಣೆಯ ಮೇರೆಗೆ ವಧುವಿಯವರು ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಕಳುಹಿಸಿದ್ದಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಪಾದಪೂಜಾ ಸಮಾರಂಭ ಸೊಲ್ಲಾಪುರ

ಸೊಲ್ಲಾಪುರದಲ್ಲಿರುವ ಸುಪ್ರಸಿದ್ಧ ನಂದೀಮಠಾಧ್ಯಕ್ಷರಾದ ಶ್ರೀ ಷಡಕ್ಷರಶಿವಾಚಾರ್ಯಸ್ವಾಮಿಗಳವರು ತಮ್ಮ ಶಿಷ್ಯರಾದ ವಿಶ್ವನಾಥಪ್ಪ ದರಗೋ ಪಾಟೀಲ ಆನಂದರಾವ್ ದರಗೋ ಪಾಟೀಲ, ಕಾಶೀಬಾಯಿ ದರಗೋ ಪಾಟೀಲ ಇವರ ಪ್ರಾರ್ಥನೆಯ ಮೇರೆಗೆ ಅವರ ಮನೆಗೆ ದಯಮಾಡಿಸಿದರು ಶಿಷ್ಯಮಂಡಲಿಯವರೆಲ್ಲರೂ ಸೇರಿ ವಿಧ್ಯುಕ್ತವಾಗಿ ಗುರುಪಾದಪೂಜೆಯನ್ನು ಮಾಡಿ ತೀರ್ಥಪ್ರಸಾದವನ್ನು ಸ್ವೀಕರಿಸಿ ೧೧ ರೂ ಕಾಣಿಕೆಯನ್ನರ್ಪಿಸಿ ಧನ್ಯರಾದರು ಶ್ರೀ ಜಗದ್ಗುರು ಪಂಚಾಚಾರ್ಯರು ಸರ್ವ ಶಿಷ್ಯಮಂಡಲಿಗೂ ಮಂಗಳವನ್ನೀಯಲೆಂದು ಹಾರೈಸುವ ಸಿದ್ಧಲಿಂಗ ನಂದೀಮಠ

ದುಃಖಸೂಚಕ ಸಭೆ, ಹುಬ್ಬಳ್ಳಿ

ತಾ॥ ೧೫-೬-೪೪ ನೆಯ ದಿವಸ ಇಲ್ಲಿಯ ಘಂಟಿಕೇರಿ ಶ್ರೀ ಬಸವೇಶ್ವರ ದೇವಾಲಯದಲ್ಲಿ ವೇ॥ ಸೋಮನಾಥಯ್ಯನವರು ಹಿರೇಮಠ, ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಕಾಶೀಕ್ಷೇತ್ರ ವಿರಾಜಮಾನ ಜ್ಞಾನಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಪಂಚಾಕ್ಷರಶಿವಾಚಾರ್ಯಮಹಾಸ್ವಾಮಿಗಳವರು ಶಿವೈಕ್ಯರಾದ ಬಗ್ಗೆ ಸಂತಾಪವನ್ನು ವ್ಯಕ್ತಮಾಡಲಾಯಿತು

ಶ್ರೀ ಜಗದ್ಗುರುಗಳವರು ಚಿಕ್ಕಪ್ರಾಯದಲ್ಲಿಯೇ ಅಂದರೆ ೩೯ ವರ್ಷ ವಯಸ್ಸಿನಲ್ಲೇ ಲಿಂಗೈಕ್ಯರಾದುದು ನಮಗೆ ಬಹಳ ದುಃಖವನ್ನುಂಟುಮಾಡಿದೆ ಶ್ರೀಗಳು ಸಂಸ್ಕೃತದಲ್ಲಿ ಉದ್ದಾಮ ಪಂಡಿತರಾಗಿಯೂ ರಾಜಕಾರಣಪಟುಗಳಾಗಿಯೂ ಇದ್ದುದರಿಂದ ಸಂಸ್ಥಾನದ ಅನೇಕ ತೊಂದರೆಗಳನ್ನು ನಿವಾರಿಸಿ ಪೀಠವನ್ನು ಅಭಿವೃದ್ಧಿಗೆ ತಂದರು ಜಗದ್ಗುರುಗಳು ವಿದ್ಯಾಪ್ರೇಮಿಗಳಾಗಿದ್ದುದರಿಂದ ವಿದ್ವಾಂಸರಿಗೆ ಆಶ್ರಯವನ್ನಿತ್ತಿದ್ದರು "ಮಠಸ್ಸ್ಯಾತ್ರಾದಿನಿಲಯಃ" ಎಂಬುದನ್ನು ಅನ್ವರ್ಥಕವಾಮವನ್ನಾಗಿ ಮಾಡಿದ್ದರು ಇಂಥ ಮಹಾಚಾರ್ಯರ ಅಕಾಲ ನಿಧನದಿಂದ ವೀರಶೈವ ಸಮಾಜಕ್ಕೆ ದೊಡ್ಡ ಹಾನಿಯಾಯಿತು ಸಮಾಜಕ್ಕಾದ ದುಃಖದಲ್ಲಿ ಹುಬ್ಬಳ್ಳಿಯ ವರಾದ ನಾವೂ ಭಾಗಿಗಳಾಗಿದ್ದೇವೆ ಎಂಬ ಅಭಿಪ್ರಾಯದ ಮೇಲೆ ಕಲಜನರು ಮಾತಾಡಿದರು ಆಮೇಲೆ ಎಲ್ಲರೂ ಎದ್ದುನಿಂತು ದುಃಖಸೂಚನೆ ಮಾಡಿ ರಜೆಯನ್ನು ಪಾಸುಮಾಡಿದರು ಬಿ ಎ ಶೆಟ್ಟರ ಹುಬ್ಬಳ್ಳಿ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣವಂತವಾದುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ಆರುನೂರು ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವದು. ವಾಚಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೩ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುವೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೯ನೇ ಜೂನ್ ೧೯೪೪ [ಸಂಚಿಕೆ ೮

ಶ್ರೀ ಗಿರೀಶ ವೀರಶೈವ ವಿದ್ಯಾವರ್ಧಕಸಂಘ, ಹಿರಿಯೂರು

ಹಿರಿಯೂರು ತಾಲ್ಲೂಕಿನ ವೀರಶೈವ ಮಹಾಜನಗಳಲ್ಲಿ ವಿನಂತಿಗಳು

ಮಹಾಶಯರೇ,

ನಿಮ್ಮೆಲ್ಲರ ಉದಾರಾಶ್ರಯದಿಂದ ಸ್ಥಾಪಿಸಲ್ಪಟ್ಟು ಯಶಸ್ವಿಯಾಗಿ ನಡೆಯುತ್ತಿದ್ದ ಶ್ರೀ ಗಿರೀಶ ವೀರಶೈವ ವಿದ್ಯಾವರ್ಧಕ ಸಂಘವು ಇತ್ತೀಚೆಗೆ ಸಂಬಂಧಪಟ್ಟವರ ಉಪೇಕ್ಷೆಗಳಿಂದ ಅವ್ಯವಸ್ಥೆಗೆ ಬರುತ್ತಿದೆ ಎಂಬ ವಿಚಾರವನ್ನು ತಮ್ಮೆಲ್ಲರ ಪರಿ ಂಬರಿಕೆಗೆ ವಿಷಾದಪೂರ್ವಕ ತರಬೇಕಾಗಿದೆ ಮಹಾಜನರ ಉದಾರವಾದ ದೇಣಿಗೆ, ಧರ್ಮ, ಬೆಂಬಲದಿಂದ ಸ್ಥಾಪಿಸಲ್ಪಟ್ಟಿರುವ ಈ ವಿದ್ಯಾ ಸಂಘವನ್ನು ಹೆಚ್ಚು ಹೆಚ್ಚು ಉನ್ನತಿಗೊಳಿಸಬೇಕಾದ್ದು, ಹಿರಿಯೂರು ತಾಲ್ಲೂಕಿನ ವೀರಶೈವ ಮಹಾಜನಗಳ ಪವಿತ್ರ ಕರ್ತವ್ಯವೆಂಬುದನ್ನು ಹೇಳಬೇಕಾಗಿಲ್ಲ. ಪ್ರಯುಕ್ತ ವೀರಶೈವ ಮಹಾಜನಗಳು ಇನ್ನು ಮುಂದಾದರೂ ಅಭಿಮಾನಪೂರ್ವಕ ಸಂಘದ ಕಾರ್ಯಕಲಾಪಗಳ ಕಡೆಗೆ ಗಮನಕೊಡಬೇಕಾಗಿ ಕೋರುತ್ತೇವೆ

ಮೇಲಾಗಿ ಸಂಘದ ಕಾರ್ಯಕಲಾಪಗಳು ಅಂದರೆ ಅಧ್ಯಕ್ಷ, ಉಪಾಧ್ಯಕ್ಷ, ಸೆಕ್ರೆಟರಿ ಮತ್ತು ಕಾರ್ಯಕಾರೀ ಮಂಡಳಿಯವರು ಹೊಸದಾಗಿ ಚುನಾಯಿಸಲ್ಪಡಬೇಕಾಗಿದೆ. ಇದಕ್ಕಾಗಿ ಈ ಕೆಳಗಿನ ಕಾರ್ಯಕ್ರಮಗಳು ನಡೆಯಲು ಸಹಾಯಕರಾಗಿ ಸಂಘವನ್ನು ಉನ್ನತಿಗೊಳಿಸಬೇಕಾಗಿ ಪ್ರಾರ್ಥನೆ

ಕಾರ್ಯಕ್ರಮಗಳು

1 ಸಂಘದ ಚುನಾವಣಾ ಕಾರ್ಯಕ್ರಮಕ್ಕಾಗಿ ತಾ|| 10-5-44 ರಲ್ಲಿ ಒಂದು ತಾತ್ಕಾಲಿಕ ಉಪಸಮಿತಿಯನ್ನು ನೇಮಿಸುವುದು

2. ಸಂಘದ ಅಧಿಕಾರವರ್ಗಕ್ಕೆ ಚುನಾವಣೆಗೆ ನಿಲ್ಲ ಬಯಸುವವರು ತಾ|| 17-6-44ರ ಒಳಗಾಗಿ ಅರ್ಜಿ ಫಾರಂಗಳನ್ನು ಸಂಘದ ಮ್ಯಾನೇಜರ್‌ರವರ ಸುಪರ್ದಿಗೆ ಪಾವತಿಮಾಡಬೇಕು.

3 ನಿಯಮಿತ ಸಂಖ್ಯೆಗಿಂತ ಹೆಚ್ಚಾಗಿ ಅಪ್ಲಿಕೇಷನ್ ಬಂದಲ್ಲಿ ತಾ|| 22-7-44ರ ಒಳಗೆ ಚುನಾವಣೆಯನ್ನು ಗ್ರಾಮಗಳಲ್ಲಿ ಮಹಜರು ಕ್ರಮದಿಂದಲೂ ಮತ್ತು 22 7 44 ರಲ್ಲಿ ನಡೆಯತಕ್ಕ ಜನರಲ್ ಮೀಟಿಂಗಿನಲ್ಲಿ ಅಂದಿನ ಮೀಟಿಂಗ್ ಅಧ್ಯಕ್ಷರನ್ನು ಚುನಾಯಿಸಿಕೊಂಡು ಮುಂದಿನ ಕಾರ್ಯಕ್ರಮಗಳು ಅಂದರೆ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಸೆಕ್ರೆಟರಿ ಕಾರ್ಯಕಾರೀ ಮಂಡಳಿಯನ್ನು ಸೇರಿದ್ದ ಬಹುಜನರ ಅಭಿಪ್ರಾಯ ಮಂಡೆಯೂ ಮತ್ತ ಗ್ರಾಮಾಂತರಗಳಿಂದ ಬಂದಿರತಕ್ಕ ಮಹಜರ್ ಕ್ರಮಗಳ ಆಧಾರದಮೇಲೂ ಚುನಾಯಿಸಲಾಗುವುದು.

4 ತಾ|| 13-7-44 ರ ಒಳಗಾಗಿ ಚುನಾವಣಾ ಸಂಬಂಧವಾಗಿ ತಕರಾರುಗಳಿದ್ದಲ್ಲಿ ತಾ|| 10-6-44 ರಲ್ಲಿ ಚುನಾಯಿಸಲ್ಪಟ್ಟಿರುವ ತಾತ್ಕಾಲಿಕ ಉಪಸಮಿತಿಯವರ ಗಮನಕ್ಕೆ ಅರ್ಜಿ ಮೂಲಕ ತರತಕ್ಕದ್ದು. ಈ ತಕರಾರುಗಳನ್ನು ಸಮಿತಿಯವರು ಪರಿಶೀಲಿಸಿ ತಾ|| 7-8 44 ರಲ್ಲಿ ಅಖೈರು ತೀರ್ಮಾನವನ್ನು ಪ್ರಕಟಗೊಳಿಸುವರು

5 31 7 44ರ ಒಳಗಾಗಿ ಚುನಾವಣೆ ಹೊಂದಿದ ಹೊಸ ಸಮಿತಿಯವರ ಹೆಸರುಗಳನ್ನು ನಮೂದಿಸಿ ಸಂಘದ ಇದುವರೆಗಿನ ಕಾರ್ಯಕಲಾಪಗಳ ವರದಿಯನ್ನು ಪುಸ್ತಕರೂಪದಲ್ಲಿ ಮಾರಾಟಕ್ಕೆ ಪ್ರಕಟಿಸಲಾಗುವುದು ವರದಿಯಲ್ಲಿ ಭಾವಚಿತ್ರವನ್ನು ಪ್ರಕಟಿಸಲು ಹೊಸ ಸಮಿತಿಯವರು ಇಷ್ಟಪಟ್ಟಲ್ಲಿ ಅದಕ್ಕೆ ಆಗುವ ಖರ್ಚನ್ನು 31 7 44 ರ ಒಳಗೆ ತಾತ್ಕಾಲಿಕ ಉಪಸಮಿತಿ ಕಾರ್ಯದರ್ಶಿಗಳಿಗೆ ಪಾವತಿಮಾಡಬೇಕು

6. ಈ ವಿಚಾರಗಳಲ್ಲಿ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಮ|| ರಾ|| ಟ್ರೆಜರರ್, ಬೊಬ್ಬೂರು ಪಟೇಲ್ ಲಿಂಗಪ್ಪನವರಿಂದ ತಿಳಿದುಕೊಳ್ಳಬಹುದು

ವಿಶೇಷಸೂಚನೆ.— ಜವಾಬ್ದಾರಿಯಿಂದ ಸೇವೆಸಲ್ಲಿಸಲು ಇಷ್ಟಪಡುವ ಉಮೇದುವಾರರು ಮಾತ್ರ ಹೊಸ ಚುನಾವಣೆಗೆ ನಿಲ್ಲಬೇಕಾಗಿ ಸಂಘದವರ ವಿನಂತಿ

ವ್ಯವಸ್ಥಾಪಕ,
ಬಬ್ಬೂರು ಪಟೇಲ್ ಲಿಂಗಪ್ಪ

ಆರೋಗ್ಯ ವಿಜ್ಞಾನ

ಆಹಾರದ ವಿಷಯದಲ್ಲಿ ವೈದ್ಯರೊಬ್ಬರ ಹೇಳಿಕೆ

ಅತಿ ಪೂರ್ವಕಾಲದಲ್ಲಿ ಮನುಷ್ಯರು ಅನಾಗರಿಕರಾಗಿ ಕಾಡಿನ ಗುಹೆಗಳಲ್ಲಿ ವಾಸಮಾಡುತ್ತಿದ್ದಾಗ ಸೇವಿಸುತ್ತಿದ್ದ ಆಹಾರಕ್ಕೂ ಈಗಿನ ನವನಾಗರಿಕ ಸ್ಥಿತಿಯಲ್ಲಿ ನಗರಗಳ ಮಹಾಸೌಧಗಳಲ್ಲಿ ವಾಸಿಸುತ್ತಿರುವಾಗ ಸೇವಿಸುತ್ತಿರುವ ಆಹಾರಕ್ಕೂ ಎಷ್ಟೋ ಹೆಚ್ಚು ಕಡಿಮೆ ಇದೆ. ಅನಾಗರಿಕ ಸ್ಥಿತಿಯಲ್ಲಿದ್ದ ಜನರು ಗೆಡ್ಡೆಗೆಣಸುಗಳನ್ನಾಗಲಿ, ಹಣ್ಣು ಹಂಪಲುಗಳನ್ನಾಗಲಿ, ಆಗತಾನೇ ತಂದ ಹಸಿಯವನ್ನೇ ಚೆನ್ನಾಗಿ ಜಗಿದು ನುಂಗುತ್ತಿದ್ದರು ಹಸಿ ತಿನ್ನುವ ಎಷ್ಟೋ ಮಂದಿ ಅನಾಗರಿಕರು ಈಗಲೂ ಕೂಡ ಕಾಣಿಸುವರು. ಇದೆಲ್ಲಾ ಬೆಂಕಿಯನ್ನು ಕಂಡುಕೊಳ್ಳುವುದಕ್ಕಿಂತ ಮೊದಲಿನ ಸ್ಥಿತಿ ಪೂರ್ವಕಾಲದವರು ಕಾಯಿಪಲ್ಯಗಳನ್ನೂ ಕಾಳುಗಳನ್ನೂ ಬೇಯಿಸದೆ ಹಸಿಯಾಗಿಯೇ ಮೆಲ್ಲುತ್ತಿದ್ದರು ಇದರಿಂದ ಪ್ರಯೋಜನವಿಲ್ಲದಿರಲಿಲ್ಲ ನಮ್ಮ ಶರೀರಪೋಷಣೆಗೆ ಬೇಕಾದ ಸಾರವಸ್ತು (ವಿಟಮಿನ್) ಈ ಹಸಿ ಪದಾರ್ಥದಲ್ಲೇ ತುಂಬಿಕೊಂಡಿರುವುದು. ಬೇಯಿಸಿದ ಪದಾರ್ಥಗಳಲ್ಲಿ ವಿಟಮಿನ್‌ನ ಅಣುಗಳು ಕಡಿಮೆಯಾಗುತ್ತವೆ ಕೆಲವು ಪದಾರ್ಥಗಳಲ್ಲಂತೂ ಸಂಪೂರ್ಣ ನಾಶವಾಗುತ್ತವೆ ಹಾಗಾಗಿ ನಮ್ಮ ಅಜ್ಜಂದಿರಾದ ಅನಾಗರಿಕರು ಸಿಂಹಗಳೊಡನೆ ಹೋರಾಡುವ ಬಲವನ್ನು ತಮ್ಮ ಆಹಾರದ ಸಹಾಯದಿಂದ ಪಡೆದರೆಂದು ಹೇಳಲು ಯಾವ ಸಂಶಯವೂ ಇಲ್ಲ.

ಆಹಾರವನ್ನು ಹೆಚ್ಚಾಗಿ ತಿಂದದ್ದರಿಂದ ದೇಹವು ಬೆಳೆಯುವುದಿಲ್ಲ. ಆಹಾರವು ಸ್ವಲ್ಪವಾದರೂ ಅದರಲ್ಲಿ ಜೀವರಕ್ಷಣಶಕ್ತಿಯಿರಬೇಕು ಜೀವರಕ್ಷಣಶಕ್ತಿಯು ಆಹಾರದ ಪ್ರಮಾಣವನ್ನು ಹೊಂದಿಕೊಂಡಿರುವುದಿಲ್ಲ ಬೇರೆ ಬೇರೆ ವಸ್ತುಗಳಲ್ಲಿ ಆ ಶಕ್ತಿಯು ಹೆಚ್ಚು ಕಡಿಮೆ ಪ್ರಮಾಣದಿಂದಿದೆ ಆದುದರಿಂದ ನಮ್ಮ ಶರೀರಕ್ಕೆ ಜೀವರಕ್ಷಣಾಶಕ್ತಿಯಿರುವ ಆಹಾರದ ಆವಶ್ಯಕತೆ ಎಷ್ಟುಂಟೆಂದು ನೋಡಿಕೊಂಡು ನಾವು ಅಂತಹ ಸಾರವತ್ತಾದ ಆಹಾರವನ್ನೇ ಸೇವಿಸಬೇಕು

ನಮ್ಮ ಆಹಾರಗಳಲ್ಲಿ ‘ಪ್ರೋಟೀನ್’ ‘ಕಾರ್ಬೋಹೈಡ್ರೇಟ್’ ‘ಕೊಬ್ಬು’ ‘ಲವಣ’ ಮೊದಲಾದುವುಗಳು, ಜೀವಪೋಷಣೆಗೆ ಅವಶ್ಯವಾಗಿ ಬೇಕು ಇವುಗಳು ಕಾಯಿಪಲ್ಯಗಳಲ್ಲಿ ವಿಶೇಷವಾಗಿವೆ

ಈ ಆಹಾರಪದಾರ್ಥಗಳಲ್ಲಿರುವ ಬೇರೆ ಬೇರೆ ಮೂಲವಸ್ತುಗಳನ್ನನುಸರಿಸಿ ಅವುಗಳಿಗೆ ವಿಟಮಿನ್ ಎ. ಬಿ ಸಿ ಡಿ ಎಂಬ ಹೆಸರುಗಳನ್ನಿತ್ತಿರುವರು. ವಿಟಮಿನ್ ಎ ಬಿ ಸಿ ಡಿ ಗಳು ಎಲ್ಲಾ ಹಸುರು ಶಾಖಗಳಲ್ಲಿರುವುವಾದರೂ ಸಮುದ್ರ ಸಸ್ಯಗಳಲ್ಲಿ ಈ ಎ ಬಿ ಸಿ ಡಿ ನಾಲ್ಕೂ ಹೆಚ್ಚಾಗಿ ದೊರಕುತ್ತವೆ. ಸಮುದ್ರದ ಸಸ್ಯಗಳು ಸಮುದ್ರಜಲದಲ್ಲಿರುವ ಅಯೋಡಿನ್ ಎಂಬ ಸಾರವಸ್ತುವನ್ನು ಸೆಳೆಕೊಳ್ಳುವುವು

ಸಮುದ್ರದಲ್ಲಿ ಬೆಳೆಯುವ ಗಿಡಗಳಲ್ಲಿ ಮೇಲೆ ಹೇಳಿದ ಎಲ್ಲಾ ವಿಧದ ಜೀವಸತ್ವವಿರುವುದರಿಂದ ಅವನ್ನು ಕೂಡ ಆಹಾರವಾಗಿ ಸೇವಿಸಬಹುದು ಜಪಾನರು ಪೂರ್ವಕಾಲದಿಂದಲೇ ಸಮುದ್ರ ಸಸ್ಯಗಳನ್ನು ಆಹಾರರೂಪದಲ್ಲಿ ಉಪಯೋಗಿಸುತ್ತಿದ್ದರು ಇಂದು ಕೂಡ ಜಪಾನರ ಆಹಾರದಲ್ಲಿ ಒಂದೆರಡು ಬಗೆಯ ಸಮುದ್ರ ಸಸ್ಯಗಳ ಪದಾರ್ಥಗಳು ಸೇರದೆ ಇರುವುದಿಲ್ಲ ಜಪಾನಿಗಳು ಕುಳ್ಳರಾದರೂ ಶಕ್ತಿವಂತರಾಗಲಿಕ್ಕೆ ಈ ಸಮುದ್ರ ಸಸ್ಯದ ಆಹಾರವನ್ನು ಸೇವಿಸುವುದು ಕೂಡ ಒಂದು ಕಾರಣವೆಂಬುದನ್ನು ಸಂದೇಹವಿಲ್ಲದೆ ಧೈರ್ಯದಿಂದ ಹೇಳಬಹುದು ಚೈನದವರು ಕೂಡ ಈ ಆಹಾರವನ್ನು ಸೇವಿಸುವರು ಫಲಜಾತಿಗಳನ್ನೂ, ಕಾಯಿಪಲ್ಯಗಳನ್ನೂ, ಸೇವಿಸುತ್ತಿದ್ದ ಜನರೂ ದೃಢಕಾಯರಾಗಿಯೂ ಸುಂದರಕಾಯರಾಗಿಯೂ ರೋಗರಹಿತರಾಗಿಯೂ ಇರುತ್ತಿದ್ದ ಕಾಲವು ಕಳೆದುಹೋಯಿತು. ಅಂತಹದು ಇರುವರಾದರೆ ಕಾಡುಜನರಲ್ಲಿ. ದೇಶದಲ್ಲಿ ಮಿಠಾಯಿಗಳೂ, ಬಿಸ್ಕೀಟುಗಳೂ ಹೆಚ್ಚಿದ ಅನಂತರವೇ ಜನರಲ್ಲಿ ದೇಹಕ್ಷೀಣತ್ವವೂ, ಹುಳದ ಉಪದ್ರವವೂ, ಹಲ್ಲುನೋವೂ ಕಾಣಿಸಿಕೊಂಡಿವೆ ಹಲ್ಲು ಕೆಡುವುದಕ್ಕೂ ಶರೀರ ದುರ್ಬಲತೆಗೂ ಸಿಹಿ ಪದಾರ್ಥಗಳೂ ಮೃದುವಾದ ಆಹಾರವೂ ಕಾರಣವೆಂದು ಹಲವರು ಭಾವಿಸುತ್ತಾರೆ. ಆದರೆ ನಿಜವಾದ ಕಾರಣವು ಅದಲ್ಲ. ವಿಟಮಿನುಗಳು ಕಡಿಮೆಯಾದ ಕೃತ್ರಿಮ ಆಹಾರಗಳೇ ಮೇಲೆ ಹೇಳಿದ ರೋಗಗಳಿಗೆ ಕಾರಣವೆಂದು ಸಂದೇಹವಿಲ್ಲದೆ ಹೇಳಬಹುದು.

ಪಂಚಾಚಾರ್ಯಪ್ರಭಾ.

೧೯೪೪ನೆಯ ಜೂನ್ ತಾ॥ ೧೯ನೇ ಸೋಮವಾರ

ವಿಧವಾವಿವಾಹನಿಷೇಧ.

ಪಾತಿವ್ರತ್ಯವೆಂಬ ಧರ್ಮವನ್ನು ತಮ್ಮ ಪ್ರಾಣದಂತೆ ಕಾಪಾಡಿಕೊಳ್ಳುವುದೇ ಸನಾತನಧರ್ಮಾವಲಂಬಿಗಳಾದ ಸ್ತ್ರೀಯರಿಗೆ ಮುಖ್ಯ ಕರ್ತವ್ಯವಾಗಿದೆ. ನಮ್ಮ ಭಾರತೀಯ ಸ್ತ್ರೀಯರಲ್ಲಿ ಎಂದು ಪಾತಿವ್ರತ್ಯಧರ್ಮವು ಬಿಟ್ಟುಹೋಗುವುದೋ ಅಂದೇ ಅವರ ಸೌಭಾಗ್ಯವು ನಷ್ಟವಾಗುವುದು. ವಿವಾಹಸಂಸ್ಕಾರದಿಂದ ವರಿಸಿದ ಪತಿಯು ಸಂತೋಷವುಳ್ಳವನಾಗಿದ್ದರೆ ತಾನೂ ಸಂತೋಷಚಿತ್ತವುಳ್ಳವಳಾಗಿಯೂ, ಪತಿಯು ದುಃಖವುಳ್ಳವನಾಗಿದ್ದರೆ ತಾನೂ ದುಃಖವುಳ್ಳವಳಾಗಿಯೂ ಪತಿಯು ದೀರ್ಘಕಾಲ ಪ್ರವಾಸಮಾಡಿದರೆ ತನು ಅಲಂಕಾರ ಭೋಜನಾದಿಗಳಿಲ್ಲದೆ ಪತಿಯ ಆಗಮನವನ್ನೇ ಹಗಲಿರುಳು ಅಪೇಕ್ಷಿಸುತ್ತಿರುವವಳಾಗಿಯೂ, ಆಕಸ್ಮಿಕವಾಗಿ ಪತಿಯ ಅತ್ಯಂತಿಕವಿಯೋಗವುಂಟಾದರೆ ತನ್ನ ಪ್ರಾಣವನ್ನು ಸಹ ಒಪ್ಪಿಸಲು ಸಿದ್ಧಳಾಗಿಯೂ ಇರುವ ಸ್ತ್ರೀಯನ್ನು ಪತಿವ್ರತೆಯನ್ನಾಗಿ ನಮ್ಮ ಸನಾತನಧರ್ಮಾವಲಂಬಿಗಳು ಹೇಳುತ್ತಾರೆ.

ಆರ್ತಾರ್ತೇ ಮುದಿತಾ ಹೃಷ್ಟೇ ಪ್ರೋಷಿತೇ ಮಲಿನಾ ಕೃಶಾ ।
ಮೃತೇ ಮ್ರಿಯೇತ ಯಾ ಪತ್ಯೌ ಸಾ ಸ್ತ್ರೀ ಜ್ಞೇಯಾ ಪತಿವ್ರತಾ ॥
ಶರೀರಾರ್ಧಂ ಸ್ಮೃತಾ ಜಾಯಾ ಪುಣ್ಯಾಪುಣ್ಯಫಲೇ ಸಮಾ ॥
ಯಸ್ಯ ನೋಪರತಾ ಭಾರ್ಯಾ ದೇಹಾರ್ಧಂ ತಸ್ಯ ಜೀವತಿ ।
[illegible] ಶರೀರಾರ್ಧಂ ಕಥಮನ್ಯಃ ಸಮಾಪ್ನುಯಾತ್ ॥

ಎಂಬ ಪ್ರಮಾಣದಿಂದ ಗಂಡನು ಮಾಡುವ ಪುಣ್ಯಪಾಪಕರ್ಮಗಳ ಫಲಗಳಿಗೆ ಹೆಂಡತಿಯೂ ಸಮಭಾಗಿಯಾಗಿರುವದರಿಂದ ಪತ್ನಿಯು ಗಂಡನ ಅರ್ಧಶರೀರವೆನ್ನಿಸಿಕೊಳ್ಳುತ್ತಾಳೆ. ಹೀಗೆ ಅರ್ಧಶರೀರವೆನಿಸಿಕೊಂಡ ಮೇಲೆ ಗಂಡನು ಮೃತಿಯನ್ನು ಹೊಂದಿದರೂ ಅವನ ಅರ್ಧಶರೀರವು ಉಳಿದುಕೊಂಡಂತೆಯೇ ಆಯಿತು. ಆದ್ದರಿಂದ ಪತಿಯನ್ನು ಕಳೆದುಕೊಂಡ ಸ್ತ್ರೀಯಳು ಪುನಃ ಮತ್ತೊಬ್ಬನನ್ನು ಮದುವೆಮಾಡಿಕೊಳ್ಳದೆ ಆ ಪತಿಯ ಸ್ಮರಣೆಯಿಂದ ಪುಣ್ಯಕರ್ಮಗಳನ್ನಾಚರಿಸಿ ಆ ಪುಣ್ಯಕರ್ಮಗಳ ಬಲದಿಂದ ಮೃತಪತಿಗುಂಟಾಗುವ ನರಕವನ್ನು ತಪ್ಪಿಸಿ ಉತ್ತಮಲೋಕವನ್ನು ಹೊಂದಿಸುವುದರಲ್ಲಿ ಆಸಕ್ತಳಾಗಿರಬೇಕು. ಪತಿಯನ್ನು ಕಳೆದುಕೊಂಡ ಸ್ತ್ರೀಯಳು ಹೀಗೆ ಶುಭಕರ್ಮವನ್ನು ಆಚರಿಸದೆ ಅರ್ಧಶರೀರವೆನಿಸಿದ ಆ ಪತಿಯನ್ನು ಬಿಟ್ಟು ಪುನಃ ವಿವಾಹಸಂಸ್ಕಾರವನ್ನು ಹೊಂದಿದ್ದಾದರೆ ಮೃತಪತಿಯನ್ನು ನರಕಕ್ಕೀಡುಮಾಡುವಳು. ಇದರಿಂದ ಅವಳು ಪಾತಿವ್ರತ್ಯರೂಪವಾದ ಧರ್ಮವನ್ನು ಕಳೆದುಕೊಂಡಂತಾಗುವುದು. ಆದ್ದರಿಂದ ಸನಾತನಧರ್ಮಾವಲಂಬಿನಿಯಾದ ಸ್ತ್ರೀಯಳಿಗೆ ಪತ್ಯಂತರಗ್ರಹಣವು ಮಹಾಪಾಪಹೇತುವಾದುದೆಂದು ಸಿದ್ಧವಾಗುತ್ತದೆ.

ಅಮುತಸ್ಯ ಪ್ರಮೃತಸ್ಯ ಪತ್ನೀ ತದ್ಭಾಗಹಾರಿಣೀ ।
ಪೂರ್ವಂ ಪ್ರಣೀತಾಗ್ನಿಹೋತ್ರಂ ಮೃತೇ ಭರ್ತರಿ ತದ್ಧನಂ ।
ವಿಂದೇತ್ಪತಿವ್ರತಾ ಸಾಧ್ವೀ ಧರ್ಮ ಏಷ ಸನಾತನಃ ॥

ಮಕ್ಕಳಿಲ್ಲದೆ ಪತಿಯು ಅಕಾಲದಲ್ಲಿ ವಿಧಿವಶನಾದರೆ ಪತ್ನಿಯು ತನ್ನ ಪತಿಯ ಭಾಗದ್ರವ್ಯದಿಂದ ಆತನ ಪರಲೋಕಸಾಧನಕ್ಕಾಗಿ ಸತ್ಕ್ರಿಯೆಗಳನ್ನಾಚರಿಸುವುದೇ ಭಾರತೀಯ ಸಾಧ್ವೀಮಣಿಗಳ ಧರ್ಮವಾಗಿದೆ ಎಂಬ ಪ್ರಮಾಣವು ಸಹ ಇರುವುದರಿಂದ ದೈವಯೋಗದಿಂದ ವಿಧವೆಯಾದ ಹೆಂಗಸು ತನ್ನ ಪತಿಯನ್ನು ನರಕಕ್ಕೀಡುಮಾಡುವ ಮತ್ತು ತಾನೂ ನರಕಕ್ಕೀಡಾಗುವ ಪತ್ಯಂತರಗ್ರಹಣವು ಸನಾತನಧರ್ಮಕ್ಕೆ ಅತ್ಯಂತ ವಿರೋಧಾಸ್ಪದವೂ ವ್ಯಭಿಚಾರಾಸ್ಪದವೂ ಆಗುವುದೆಂಬಲ್ಲಿ ಯಾವ ಸಂಶಯವೂ ಇಲ್ಲ.

ಇಂಥ ಪವಿತ್ರವಾದ ಸನಾತನಧರ್ಮವು ಈಗಿನ ಕಠಿಣತರವಾದ ವಾತಾವರಣದಿಂದ ಜರ್ಝರಿತವಾಗುತ್ತಲಿರುವುದನ್ನು ನೋಡಿದರೆ ಅನಾದಿಕಾಲದಿಂದ ಬಂದಿರುವ ಸನಾತನಧರ್ಮದಲ್ಲಿ ಶ್ರದ್ಧೆಯುಳ್ಳವರಿಗೆ ಅತ್ಯಂತ ಖೇದವೆನಿಸುತ್ತದೆ. ನಮ್ಮ ಸನಾತನ ಧರ್ಮದವರಲ್ಲದೆ ಪರಧರ್ಮೀಯರಿಂದ ಇಂಥ ಆಘಾತಗಳು ಸಮಾಜದಲ್ಲಿ ಕಾಲಿಡುತ್ತಲಿದ್ದರೆ ಅದಕ್ಕೆ ಪ್ರತೀಕಾರವನ್ನು ಸುಲಭವಾಗಿ ಮಾಡಬಹುದಾಗಿತ್ತು. ಹಾಗಿಲ್ಲದೆ ಸನಾತನಧರ್ಮಾವಲಂಬಿಗಳೇ ತಮ್ಮ ಪವಿತ್ರವಾದ ಧರ್ಮವೃಕ್ಷದ ಮೂಲವನ್ನು ನಾಸ್ತಿಕ್ಯವೆಂಬ ತೀಕ್ಷ್ಣಾಯುಧದಿಂದ ಕತ್ತರಿಸುತ್ತ ಬಂದರೆ ಭಾರತದ ಧರ್ಮವನ್ನು ಉಳಿಸುವವರ್‍ಯಾರು? ಸೃಷ್ಟಿಕಾಲದಲ್ಲಿ ಈಶ್ವರನು ಸನಾತನಧರ್ಮವನ್ನು ವೇದರೂಪದಲ್ಲಿ ಪ್ರಯೋಗಿಸಿ ಕಾಪಾಡುವುದಕ್ಕಾಗಿ ಗುರುಗಳನ್ನು ನಿರ್ಮಿಸಿದನು. ಅಂದ ಗುರುಸಂತಾನ ಕ್ರಮವಾಗಿ ಬಂದ ಧರ್ಮಾಧಿಪತಿಗಳು ಬದಲಾಗುತ್ತ ತಮ್ಮ ಕರ್ತವ್ಯವನ್ನು ಮರೆತು ಸ್ವಾರ್ಥ್ಯದಲ್ಲಿಯೇ ನಿರತರಾಗುತ್ತ ದ್ರವ್ಯಾಶಾಬದ್ಧರಾಗುತ್ತ ಧರ್ಮಮೂಢರಾಗುತ್ತ ಬಂದದ್ದಾಗೆಲ್ಲ ಕೇವಲ ಐಹಿಕಾಭಿವೃದ್ಧಿಯೊಂದನ್ನೇ ಮುಖ್ಯಧ್ಯೇಯವನ್ನಾಗಿ ಮಾಡಿಕೊಂಡಿರುವ ಆಧುನಿಕ ವಿದ್ಯಾಧಿಕರಾದ ಕೆಲವರು ಈ ಸನಾತನಧರ್ಮವನ್ನೇ ಬುಡಮೇಲು ಮಾಡಲು ಪ್ರಯತ್ನಿಸುತ್ತಿರುವರು. ಇನ್ನುಮೇಲಾದರೂ ಧರ್ಮಪ್ರಚಾರ ಕರೆನಿಸಿಕೊಂಡ ಗುರುಗಳು ಎಚ್ಚರದಿಂದ ಸಮಾಜದಲ್ಲಿ ತಲೆಹಾಕುತ್ತಿರುವ ಶಾಸ್ತ್ರವಿರುದ್ಧವೂ ಲೋಕವಿರುದ್ಧವೂ ಅತ್ಯಂತ ಗರ್ಹಣೀಯವೂ ಆದ ಇಂಥ ವಿಧವಾವಿವಾಹಾದಿ ನಿಷಿದ್ಧಕರ್ಮಗಳ ಪ್ರಸ್ತಾಪಕ್ಕೂ ಸಹ ಅವಕಾಶವನ್ನು ಕೊಡದ ತಡೆಮಾಡದಿದ್ದಲ್ಲಿ ಸನಾತನಧರ್ಮವು ಜೀವಿಸುವುದು ಹಾಗಿಲ್ಲವಿದ್ದರೆ ಈಗಿನ ಪ್ರಮುಖರಂತೆ ಗುರುಗಳೂ ಸಹ ಒಪ್ಪುವುದಾಗಲಿ ಅದರಂತೆ ಔದಾಸೀನ್ಯವನ್ನಾಗಲಿ ಅವಲಂಬಿಸಿದರೆ ತಮ್ಮ ಗುರುತ್ವಕ್ಕೆ ತಿಲಾಂಜಲಿ ಕೊಟ್ಟು ಕೇವಲ ಐಹಿಕ ಸುಖಾಪೇಕ್ಷಿಗಳಾಗುವುದೇ ಉತ್ತಮ. ಪ್ರಪಂಚದಲ್ಲಿ ಗುರುತ್ವ ಪಂಡುವದು ಭಕ್ತರ ದುಷ್ಟಾಚರಣೆಯನ್ನು ದೂರಮಾಡುವುದಕ್ಕಾಗಿಯೂ ವೇದಧರ್ಮಾಚರಣೆಯನ್ನು ಸ್ಥಾಪಿಸುವುದಕ್ಕಾಗಿಯೂ ಇರುವುದಲ್ಲದೆ ಅವರವರು ಹೋದ ಮಾರ್ಗದಲ್ಲಿಯೇ ಅನುಕೂಲಸಿಂಧುವನ್ನು ಹೇಳುವುದಕ್ಕಲ್ಲ. ನರಕಹೇತುವಾದ ವಿಧವಾವಿವಾಹವು ಬಳಕೆಯಲ್ಲಿ ಬಂದರೆ ಇನ್ನು ಅತಿ ನಿಷಿದ್ಧವಾದ ಕರ್ಮಗಳೂ ಕೂಡ ಒಳಕ್ಕೆ ಬಂದೇ ಬರುವವು. ಆಗ ಸ್ತ್ರೀ ಜಾತಿಯೆಂದು ಪುರುಷಜಾತಿಯೆಂದು ಎರಡು ಜಾತಿಗಳು ಮಾತ್ರ ಉಳಿದು ಸ್ತ್ರೀಪುರುಷರೀರ್ವರ ಸಂಬಂಧವೆಂಬುವದು ಅವರವರ ಸೌಂದರ್ಯಕಾಮಾದಿಗಳನ್ನು ಮಾತ್ರ ಅವಲಂಬಿಸಬೇಕಾಗುವದು. ಇದು ಪಶುಧರ್ಮವಲ್ಲದೆ ಮಾನವಧರ್ಮವಲ್ಲ. ಶಾಸ್ತ್ರನಿಷಿದ್ಧಕರ್ಮವನ್ನು ಅವಲಂಬಿಸುವದೇ ಪಶುಧರ್ಮವೆಂತಲೂ ಶಾಸ್ತ್ರವಿಹಿತಕರ್ಮವನ್ನು ಅವಲಂಬಿಸುವುದೇ ಮಾನವಧರ್ಮವೆಂತಲೂ ಕರೆಸಿಕೊಳ್ಳಲ್ಪಡುವವು. ಆದ್ದರಿಂದ ತನ್ನ ದೈವದುರ್ವಿಲಾಸದಿಂದ ಪತಿಯನ್ನು ಕಳೆದುಕೊಂಡ ಮೇಲೆ ಆ ಪತಿಯ ಸ್ಮರಣೆಯಲ್ಲಿ ಈಶ್ವರಚಿಂತನವನ್ನು ಮಾಡುವುದನ್ನು ಬಿಟ್ಟು ಪಶುಧರ್ಮವನ್ನವಲಂಬಿಸಿ ಲೌಕಿಕ ಸುಖಾಭಿಲಾಷೆಯಿಂದ ಪರಪುರುಷನನ್ನು ವರಿಸಿದರೆ ಅವಳೆಂದಿಗೂ ಸದ್ಗತಿಯನ್ನು ಪಡೆಯುವುದಿಲ್ಲ ಮತ್ತು ಅಂಥವಳು ಬಹುಪತಿವ್ರತೆಯೆನಿಸುತ್ತಾಳಲ್ಲದೆ ಶುದ್ಧಪತಿವ್ರತೆಯೆನಿಸಲಾರಳು. ಮತ್ತು ಅವಳ ವಂಶವೃಕ್ಷವೂ ಸಹ ಕೆಟ್ಟುಹೋಗಿ ಸತ್ಕುಲಪ್ರಸೂತಳೆಂಬುವುದಕ್ಕೆ ಬದಲಾಗಿ ದುಷ್ಕುಲಪ್ರಸೂತಳೆನಿಸಿಕೊಳ್ಳುತ್ತಾಳೆ. ಕ್ಷೇತ್ರಭೂತವಾದ ಸ್ತ್ರೀಯಳು ಕೆಟ್ಟುಹೋದಮೇಲೆ ಅಲ್ಲಿ ಹುಟ್ಟುವ ಮಕ್ಕಳು ಮಿಶ್ರಮಕ್ಕಳಾದಿಯಾಗಿ ಎಲ್ಲರ ರಕ್ತವೂ ಮಿಶ್ರವಾಗಿಹೋಗುತ್ತದೆ. ಕ್ಷಯರೋಗವು ಹೇಗೆ ಸರ್ವರೋಗನಿಧಾನವಾಗಿರುವುದೋ ಹಾಗೆ ಈ ವಿಧವಾವಿವಾಹಸಂಸ್ಕರಣವೂ ಸಹ ಪ್ರಪಂಚದಲ್ಲಿರುವ ಪಾಪಗಳೆಲ್ಲಕ್ಕೂ ನಿಧಾನವಾಗಿರುವುದು. ಆದ್ದರಿಂದ ತನ್ನ ಪೂರ್ವಜನ್ಮ ಪಾಪಕರ್ಮದಿಂದೊದಗಿದ ವೈಧವ್ಯವು ಪತ್ಯಂತರಗ್ರಹಣದಿಂದ ಎಂದೂ ಪರಿಹಾರವಾಗಲಾರದು. ಹಾಗೆ ಪತ್ಯಂತರಗ್ರಹಣಮಾಡಿದರೆ ತನ್ನ ಮೃತಪತಿಗೂ ತನಗೂ ನರಕವಾಗುವುದಲ್ಲದೆ ಈಶ್ವರಪ್ರಿಯವಾದ ಪಾತಿವ್ರತ್ಯಪ್ರಕಾಶವು ನಷ್ಟವಾಗಿ ಹೋಗುವುದು. ಹೀಗೆ ಎಲ್ಲರನ್ನು ನರಕಕೂಪಕ್ಕೆ ಎಳೆಯುತ್ತಿರುವ ಘೋರವಾದ ವಿಧವಾವಿವಾಹವೆಂಬ ವಿಷಬೀಜವನ್ನು ಪರಿಶುದ್ಧವಾದ ವೀರಶೈವಸಮಾಜವೆಂಬ ಕ್ಷೇತ್ರದಲ್ಲಿ ಬಿತ್ತಲು ಕೆಲವರು ಹವಣಿಸುತ್ತಿರುವರು. ಸನಾತನಧರ್ಮಾಭಿಮಾನಿಗಳಾದ ಗುರುಗಳೂ, ಭಕ್ತರೂ ಇಂಥ ವಿಷಬೀಜವನ್ನು ಬಿತ್ತಲು ಅವಕಾಶವನ್ನು ಕೊಡದಿರಲೆಂದು ದಯಾಮಯನಾದ ಪರಮೇಶ್ವರನನ್ನು ಪ್ರಾರ್ಥಿಸುತ್ತೇವೆ.

ಯುದ್ಧವಾರ್ತೆ.

ಜಪಾನಿನ ಯಾವ ಭಾಗವೂ ಸುರಕ್ಷಿತವಾಗಿಲ್ಲ

ಅಮೆರಿಕನ್ ಸಂಯುಕ್ತ ಸಂಸ್ಥಾನದ ಯುದ್ಧಕಾರ್ಯದರ್ಶಿ ಮಿ॥ ಹೆನ್ರಿಸ್ಟಿಂಸನ್‌ರವರು ಜಪಾನಿನ ಮೇಲೆ ಸೂಪರ್ ಫಾರ್ಟ್ರೆಸ್ ವಿಮಾನಗಳು ದಾಳಿಮಾಡಿದ ವಿಷಯವನ್ನು ಪ್ರಸ್ತಾಪಿಸುತ್ತಾ, "ಜಪಾನಿನ ಪ್ರತಿಯೊಂದು ಮೂಲೆಯ ಮೇಲೂ ಈಗ ವಿಮಾನ ದಾಳಿ ಮಾಡಲು ಅವಕಾಶವುಂಟಾಗಿದೆ. ಆ ದೇಶದ ಯಾವ ಭಾಗವೂ ಕೂಡ ಸುರಕ್ಷಿತವಾಗಿಲ್ಲ. ಈ ಹೊಸ ಲಾಂಗ್ ರೇಂಜ್ ಬಾಂಬರುಗಳು ನಾಗಲೋಟದಲ್ಲಿ ಪ್ರಯಾಣ ಮಾಡುವ ಅದ್ಭುತ ವಿಮಾನಗಳಾಗಿವೆ. ಅವು ಜಪಾನಿನ ಹೃದಯವು ಅಮೆರಿಕನ್ ಸೇನೆಯ ವಿಮಾನಪಡೆಗಳ ಪೆಟ್ಟಿಗೆ ಸಿಲುಕುವಂತೆ ಮಾಡಿವೆ. ಈ ವಿಮಾನಗಳು ಟೋಕಿಯೋ ಮಾರ್ಗವನ್ನು ಬಹಳ ಹತ್ತಿರಕ್ಕೆ ತಂದಿವೆ" ಎಂದು ಹೇಳಿದರು.

ಇಂಫಾಲ್ ಆಕ್ರಮಣದ ಆಶೆ ಇನ್ನೂ ಬಿಟ್ಟಿಲ್ಲ

ಇಂಫಾಲ್ ಸಮಭೂಮಿಯ ಆಗ್ನೇಯ ಅಂಚಿನಲ್ಲಿರುವ ಪಾಲೆಲ್ ಬಳಿ ಜಪಾನರ ಆಕ್ರಮಣ ಇಷ್ಟರಲ್ಲೇ ಆರಂಭವಾಗಬಹುದೆಂದು ಸುದ್ದಿಗಾರರು ಬರೆಯುತ್ತಾರೆ. ಅಂದರೆ ಅವರು ಇಂಫಾಲ್ ಆಕ್ರಮಣದ ಉದ್ದೇಶವನ್ನು ಇನ್ನೂ ತೊರೆದಿಲ್ಲವೆಂದು ತೋರುತ್ತದೆ. ಈಗ ಪಾಲೆಲ್ ಟಾಮೂ ರಸ್ತೆಯಲ್ಲಿ ಜಪಾನರ ಚಟುವಟಿಕೆ ಬಹಳ ಜೋರಿನಿಂದ ನಡೆಯುತ್ತಿದೆ. ಬಹುಶಃ ತಮ್ಮ ಸೈನ್ಯಗಳಿಗೆ ಹೆಚ್ಚು ಬಲವನ್ನು ಗಳಿಸುವುದೇ ಈ ಚಟುವಟಿಕೆಗಳ ಉದ್ದೇಶ್ಯವಿರಬಹುದು. ಈಗ ಈ ಪ್ರದೇಶದಲ್ಲಿರುವ ಶತ್ರು ಸೈನ್ಯದ ಶಕ್ತಿಯು ಇಂಫಾಲಿಗೆ ದಕ್ಷಿಣದಲ್ಲಿ ವಿಷ್ಣುಪುರ ಕ್ಷೇತ್ರದಲ್ಲಿರುವಷ್ಟೇ ಇದೆ. ಜಪಾನರು ಹಿಮ್ಮೆಟ್ಟುವಾಗ ಕೂಡ ಬಹಳ ಶೌರ್ಯದಿಂದ ಕಾದಾಡುವರು. ಇಂಫಾಲ್ ಕೋಹಿಮಾ ರಸ್ತೆಯಲ್ಲಿ ಕಾಂಗ್ಲತೋಂಗ್ಬಿಯಿಂದ ಜಪಾನರು ಹಿಮ್ಮೆಟ್ಟಿದುದೇ ಇದಕ್ಕೆ ನಿದರ್ಶನ. ರಸ್ತೆಯ ೧೧೬ನೇ ಮೈಲಿಯಿಂದ ಹಿಮ್ಮೆಟ್ಟಿದ ಜಪಾನರು ೧೧೩ನೇ ಮೈಲಿಯಲ್ಲಿ ಠಾಣ್ಯ ಸ್ಥಾಪಿಸಿಕೊಂಡು ಮಿತ್ರಪಡೆಗಳ ಪ್ರಗತಿಯನ್ನು ಸಾಹಸದಿಂದ ಪ್ರತಿಭಟಿಸುತ್ತಿರುವರು. ಮಿತ್ರ ಪಡೆಗಳು ಈಗ ೧೧೩ನೇ ಮೈಲಿಯವರೆಗೆ ಮುನ್ನುಗ್ಗಿವೆ. ಇಂಫಾಲ್ ಪ್ರದೇಶದಲ್ಲಿ ಜಪಾನರು ಮಿತ್ರ ರಕ್ಷಣಾ ಸಾಲುಗಳಮೇಲೆ ಆಕ್ರಮಣದಾಳಿಗಳನ್ನು ಮಾಡಿ ಪರಾಭವಗೊಂಡರು. ಇಂಫಾಲ್ ದಿಮಾಪುರ ರಸ್ತೆಯ ೬೦ನೇ ಮೈಲಿಯ ಬಳಿ ಜಪಾನರು ಮಿತ್ರ ಪ್ರಗತಿಯನ್ನು ತೀವ್ರವಾಗಿ ಪ್ರತಿಭಟಿಸುತ್ತಿರುವರು. ವಿಷ್ಣುಪುರಕ್ಕೆ ೪ ಮೈಲಿ ದಕ್ಷಿಣದಲ್ಲಿ ಟಿಡ್ಡಿಂ ರಸ್ತೆಯಲ್ಲಿರುವ ನಿಂಗ್‌ಥೋಕಾಂಗ್ ಹಳ್ಳಿಗಾಗಿ ಈಗಾಗಲೇ ಅನೇಕಾವರ್ತಿ ಭೀಕರ ಕದನಗಳಾಗಿವೆ. ಈ ಹಳ್ಳಿಯು ಕೈ ಕೈ ಬದಲಾಯಿಸಿದಷ್ಟು ಇನ್ನಾವ ಸ್ಥಳವೂ ಬದಲಾಯಿಸಲಿಲ್ಲ. ಈಗ ಇದು ಮಿತ್ರವಶದಲ್ಲಿದೆ. ಈ ಹಳ್ಳಿಯನ್ನು ಪುನಃ ತನ್ನ ಸ್ವಾಧೀನಪಡಿಸಿಕೊಳ್ಳಲು ಜಪಾನರು ಟ್ಯಾಂಕುಗಳನ್ನು ಮಿತ್ರರಮೇಲೆ ಹೂಡಿದರು. ಮಿತ್ರರ ಬಂಕರ್ ಸ್ಥಾನಗಳನೇಕವೂ ನಾಶವಾದವು. ಶತ್ರು ಫಿರಂಗಿ ಆರ್ಭಟವು ಬಹಳ ಜೋರಾಗಿತ್ತು. ಆದರೂ ಮಿತ್ರ ಪಡೆಗಳು ಶೌರ್ಯದಿಂದ ಕಾದು ಈ ಎಲ್ಲಾ ಆಕ್ರಮಣಗಳನ್ನು ಹಿಮ್ಮೆಟ್ಟಿಸಿದುವು. ಶತ್ರು ಯೋಧರ ಸಂಹಾರವು ವಿಶೇಷವಾಗಿ ಆಯಿತೆಂದು ಹೇಳಲಾಗಿದೆ.

ಮಿಟ್ಕಿನಾದಲ್ಲಿ ಭೀಕರ ಕದನ

ಮಿಟ್ಕಿನಾ ನಗರದ ಹೊರ ಮತ್ತು ಅಂತರ ವಲಯಗಳಲ್ಲಿ ಭೀಕರ ಕದನಗಳಾಗುತ್ತಿರುವುದಾಗಿ ಈಚಿನ ಸುದ್ದಿಗಳು ತಿಳಿಸುತ್ತವೆ. ಮಿತ್ರ ಯೋಧರು ಹಗಲಾಗಲಿ ರಾತ್ರಿಯಾಗಲಿ ಯಾವ ಬೀದಿಗೆ ಹೋಗಲಿ ಅಲ್ಲಿ ಜಪಾನರು ಕಾಳಗ ಹೂಡುತ್ತಿರುವರು. ಪ್ರತಿ ಮನೆ

ಯಲ್ಲೂ ಜಪಾನಿ ಯೋಧರು ಸಶಸ್ತ್ರರಾಗಿ ೨೪ ಘಂಟೆಯೂ ಕಾಳಗಕ್ಕೆ ಸಿದ್ಧರಾಗಿರುವರಂತೆ ಈಗ ಮಿಟ್ಕಿನಾ ನಗರದಲ್ಲಿ ಸಾರ್ವಜನಿಕ ಜೀವನವು ಸಂಪೂರ್ಣವಾಗಿ ನಿಂತಿದೆ ಅಮೇರಿಕಾ ಪಡೆಗಳು ಆಕ್ರಮಣ ಪ್ರಾರಂಭ ಮಾಡಿ ೮೦೦ ಗಜ ಮುನ್ನುಗ್ಗಿರುವುದಾಗಿಯೂ ಈಗ ನಗರದ ಹೊರವಲಯಕ್ಕೆ ಬಂದಿರುವುದಾಗಿಯೂ ಸುದ್ದಿ ಪಶ್ಚಿಮ ದಕ್ಷಿಣ ದಿಗ್ಭಾಗಗಳಲ್ಲಿ ಚೀಣೀ ಪಡೆಗಳು ಫಿರಂಗಿಗಳ ಮತ್ತು ಮೋಟರುಗಳ ಸಹಾಯದಿಂದ ನಗರದೊಳಕ್ಕೆ ಪ್ರವೇಶಿಸಿರುವರು ಮಿಟ್ಕಿನಾ ನಗರದ ದಕ್ಷಿಣದಲ್ಲಿರುವ ವಿಮಾನ ನೆಲೆಯು ಮಿತ್ರ ವಶವಾಗಿದೆ ಈ ನೆಲೆಗೆ ಮಿತ್ರ ವಿಮಾನಗಳು ಎಲ್ಲಾ ಕಾಲವಲ್ಲೂ ಬಂದು ಮಿತ್ರ ಪಡೆಗಳಿಗೆ ಸರಬರಾಜು ಮಾಡಿ ಹಿಂದಿರುಗುವಾಗ ಘಾಯಗೊಂಡ ಮಿತ್ರ ಯೋಧರನ್ನು ಚಿಕಿತ್ಸೆಗಾಗಿ ಕೊಂಡೊಯ್ಯುತ್ತಿವೆ ಈ ಮಿತ್ರ ಕಾರ್ಯಾಚರಣೆಗೆ ಶತ್ರು ವಿಮಾನ ಪ್ರತಿಭಟನೆ ಇಲ್ಲವೆಂದೂ ಪ್ರಾಯಶಃ ತಮ್ಮ ವಿಮಾನಗಳನ್ನು ಜರ್ಮನರು ತೋರಿಸಿಕೊಟ್ಟಿರುವಂತೆ ಆತ್ಮ ಸಂರಕ್ಷಣೆಗಾಗಿ ಮೀಸಲಾಗಿಟ್ಟಿರುವುದೇ ಈ ಶತ್ರುವಿನ ಪ್ರತಿಭಟನೆ ಇಲ್ಲದಿರುವುದಕ್ಕೆ ಕಾರಣವೆಂದು ಸೂಚಿಸಲಾಗಿದೆ

ಆಂಗ್ಲ-ಅಬಿಸೀನಿಯಾ ಒಪ್ಪಂದದ ರದ್ದು

ಆಂಗ್ಲ ಅಬಿಸೀನಿಯಾ ಒಪ್ಪಂದ ಮತ್ತು ಮಿಲಿಟರಿ ಒಪ್ಪಂದ ಕೊನೆಗೊಳ್ಳತಕ್ಕದ್ದೆಂದು ಅಬಿಸೀನಿಯಾ ಚಕ್ರವರ್ತಿ ಹೈಲಿ ಸೆಲಾಸೆಯವರು ಬ್ರಿಟನ್ನಿಗೆ ಮೇ ೩೦ ನೇ ತಾ|| ನೋಟೀಸು ಕೊಟ್ಟಿದ್ದಾರೆ ಈ ವಿಚಾರವನ್ನು ಈಡನ್‌ರವರು ಕಾಮನ್ಸ್ ಸಭೆಯಲ್ಲಿ ಪ್ರಕಟಿಸಿ ಪರಿಸ್ಥಿತಿಯ ಪರಿಶೀಲನಾ ದೃಷ್ಟಿಯಿಂದ ಅಬಿಸೀನಿಯಾದಲ್ಲಿರುವ ಬ್ರಿಟಿಷ್ ರಾಯಭಾರಿಯನ್ನು ಬ್ರಿಟನ್ನಿಗೆ ಬರಮಾಡಿಕೊಳ್ಳಲಾಗಿದೆಯೆಂದರು ಆಂಗ್ಲ-ಅಬಿಸೀನಿಯಾ ಒಪ್ಪಂದದ ಪ್ರಕಾರ ಉಭಯ ರಾಷ್ಟ್ರಗಳಿಗೂ ರಾಯಭಾರಿ ವ್ಯವಹಾರ ಆರಂಭವಾಯಿತು ಇತರ ವಿದೇಶಾಂಗ ಪ್ರತಿನಿಧಿಗಳಿಗಿಂತ ಬ್ರಿಟಿಷ್ ರಾಯಭಾರಿಗಳಿಗೆ ಉಚ್ಚ ಗೌರವ ಸಲ್ಲತಕ್ಕದ್ದೆಂದು ಸಮ್ರಾಟರು ಒಪ್ಪಿಕೊಂಡರು ಅಬಿಸೀನಿಯಾದ ಆಪೇಕ್ಷಿತದಲ್ಲಿ ಸಹಾಯ ಮಾಡಲು ಬ್ರಿಟಿಷ್ ಸರಕಾರ ಸಮಾಲೋಚಕರನ್ನು ಕಳಿಸಲು ಒಪ್ಪಿತು ಅಬಿಸೀನಿಯಾಕ್ಕೆ ಬ್ರಿಟನ್ನಿನಿಂದ ಆರ್ಥಿಕ ಸಹಾಯವೂ ಲಭಿಸಿತು ಬ್ರಿಟನ್ ಮತ್ತು ಅಬಿಸೀನಿಯಾಗಳ ಪರಸ್ಪರರ ಹಿತಕ್ಕೆ ಅನುಗುಣವಾಗಿಲ್ಲದ ಯಾವ ಮಿಲಿಟರಿ ನಡವಳಿಕೆಗಳನ್ನೂ ಅಬಿಸೀನಿಯಾದ ಸಮ್ರಾಟರು ಕೈಗೊಳ್ಳಬಾರದೆಂದು ಪಿಥಿಸಲ್ಪಟ್ಟಿತು ಬ್ರಿಟಿಷ್ ವಿಮಾನಗಳಿಗೆ ಅಬಿಸೀನಿಯದ ಮಾರ್ಗವಾಗಿ ಬರಲು ಸ್ವತಂತ್ರಾಧಿಕಾರವೂ, ವಿಮಾನಾಶ್ರಯಗಳ ಉಪಯೋಗವೂ ಒಪ್ಪಂದದಿಂದ ಲಭಿಸಿತ್ತು ಈ ಒಪ್ಪಂದದ ಬದಲು ಬೇರೊಂದು ಒಪ್ಪಂದವಾಗಲು ಅಬಿಸೀನಿಯಾ ಸಾಮ್ರಾಟರು ಸಲಹೆಗಳನ್ನು ಮಂಡಿಸುವವರೆಗೆ ಅಥವಾ ಎರಡು ವರ್ಷಗಳೊಳಗೆ ಹಾಗೆ ಸಲಹೆಗಳು ಬರದಿದ್ದರೆ, ಮುಂದೆ ಎರಡು ವರ್ಷಗಳವರೆಗೆ ಯಾರಾದರೊಬ್ಬರು ೩ ತಿಂಗಳ ನೋಟೀಸನ್ನು ಕೊಟ್ಟು ಒಪ್ಪಂದವನ್ನು ಕೊನೆಗಾಣಿಸುವವರೆಗೂ ಈ ಒಪ್ಪಂದ ಜಾರಿಯಲ್ಲಿರತಕ್ಕದ್ದೆಂದು ಒಪ್ಪಂದದ ೧೫ ನೇ ವಿಧಿ ಆ ವಿಧಿಗನುಸಾರವಾಗಿ ಸಮ್ರಾಟ ಸೆಲಾಸಿಯವರು ಈಗ ನೋಟೀಸು ಕೊಟ್ಟಿದ್ದಾರೆ

ಟಿಲ್ಲಿರಂಗವಲ್ಲಿ ವಿಪರೀತ ರಕ್ತಪಾತ

ಕೇನ್ ಕ್ಷೇತ್ರಕ್ಕೆ ಪಶ್ಚಿಮದಲ್ಲಿ ಟಿಲ್ಲಿ ರಂಗದಲ್ಲಿ ನಮ್ಮ ಮುತ್ತಿಗೆಯನ್ನು ತಡೆಗಟ್ಟಲು ಜರ್ಮನರು ಭಾರಿ ಸೇನೆಯನ್ನು ದೂಡಿ ಪ್ರತಿಮುತ್ತಿಗೆಗಳನ್ನು ಪ್ರಬಲವಾಗಿ ಹೂಡುತ್ತಿದ್ದಾರೆ ಆದರೆ ಮಿತ್ರಪಡೆಗಳು ತಾವು ಆಕ್ರಮಿಸಿಕೊಂಡಿರುವ ಸ್ಥಳವನ್ನು ಭದ್ರವಾಗಿ ರಕ್ಷಿಸಿಕೊಂಡು ಜರ್ಮನ್ ವ್ಯೂಹದಲ್ಲೆಲ್ಲಿನಾದರೂ ದುರ್ಬಲ ಪ್ರದೇಶಗಳಿವೆಯೋ ಎಂಬುದನ್ನು ಪತ್ತೆ ಹಚ್ಚುತ್ತಲಿದ್ದಾರೆ ಈ ಸಂಗ್ರಾಮದಲ್ಲಿ ಈ ತನಕ ಆಗದಿರುವಷ್ಟು ರಕ್ತಪಾತ ಇಲ್ಲಿ ಆಗಿದೆ ಅದು ಕೇನ್ ಟಿಲ್ಲಿ ಕ್ಷೇತ್ರದ ಗ್ರಾಮಗಳ ವೈಶಿಷ್ಟ್ಯ. ಬ್ರಿಟಿಷ್ ಕೆನಡಿಯನ್ ಕ್ಷೇತ್ರದಲ್ಲಿ ಯುದ್ಧ ಮತ್ತೆ ಉಗ್ರಾವಸ್ಥೆಗೆ ಬರುತ್ತಿದೆ ಶತ್ರುಪ್ರತಿಭಟನೆ ಜೋರಾಗಿರುವುದಾದರೂ, ಮಿತ್ರಪಡೆಗಳು ಪ್ರಬಲವಾಗಿ ಕಾದಾಡುತ್ತಿವೆ ನಿನ್ನೆ ಪ್ರಾತಃಕಾಲದ ವೇಳೆಗೆ ಮುಂಚೂಣಿ ಪಡೆಗಳು ಟಿಲ್ಲಿಗೆ ನೈರುತ್ಯದಲ್ಲಿ ಸುಮಾರು ೧೦ ಮೈಲಿ ದೂರದಲ್ಲಿರುವ ಗುಡ್ಡದ ಬಳಿಗೆ ಒಂದುವು ಟಿಲ್ಲಿ ಮತ್ತು ಕೇನ್‌ಕ್ಷೇತ್ರಗಳಲ್ಲಿ ಟ್ಯಾಂಕ್ ಕಾಳಗಗಳು ಜರುಗಿವೆ ಟಿಲ್ಲಿ ಜರ್ಮನರ ಅಧೀನದಲ್ಲಿ ಇರುವುದಾದರೂ, ಮಿತ್ರರು ಅಲ್ಲಿ ಕೊಂಚ ವಿಜಯ ಸಾಧಿಸಿದ್ದಾರೆ ಜರ್ಮನ್ ತೀರ ರಕ್ಷಣಾ ಫಿರಂಗಿಗಳು ಏಟಿಗೆ ಸಿಕ್ಕದಂತೆ ಮಿತ್ರಪಡೆಗಳು ಒಳಪ್ರಾಂತದಲ್ಲಿ ಬಹು ದೂರದಲ್ಲಿವೆ ಜರ್ಮನರು ರಿಸರ್ವ್ ಪಡೆಗಳನ್ನು ಬರಮಾಡಿಕೊಳ್ಳುತ್ತಿರುವುದಾದರೂ ಕೆನಡಿಯನ್ ಸೇನೆ ಅವರನ್ನು ಉಗ್ರವಾಗಿ ಎದುರಿಸಿ ಹೋರಾಡುತ್ತಿವೆ ಮಿತ್ರಪಡೆಗಳಿಗೆ ಸಾಮಗ್ರಿಗಳ ಸರಬರಾಜು ಎಡೆಬಿಡದೆ ಲಭಿಸುತ್ತಿದೆ

ಕಾರೆಂಟಾನಿನಲ್ಲಿ ಜರ್ಮನರ ಸೋಲು

ಮಿತ್ರರ ವಶವಾದ ಕ್ಯಾರೆಂಟಾ ನಗರದ ಪುನರಾಕ್ರಮಣಕ್ಕಾಗಿ ಜರ್ಮನರು ಮಾಡಿದ ಪ್ರಯತ್ನಗಳೆಲ್ಲವನ್ನೂ ಅಮೇರಿಕನ್ ಸೇನೆ ವಿಫಲಗೊಳಿಸಿ, ನಗರದ ಪಶ್ಚಿಮ ಮತ್ತು ಪಶ್ಚಿಮ ಭಾಗಗಳಲ್ಲಿ ಪ್ರಗತಿ ಸಾಧಿಸಿರುವುದರ ಜೊತೆಗೆ, ಜರ್ಮನ್ ಪಡೆಗಳನ್ನು ಪರಾಭವಗೊಳಿಸಿದವು ವಿಮಾನಗಳಲ್ಲಿ ಬಂದಿಳಿದ ಮಿತ್ರ ಸೇನೆ ಕ್ಯಾರೆಂಟಾ ನಗರದ ನೈರುತ್ಯ ದಿಗ್ಭಾಗದಲ್ಲಿ ಮುನ್ನುಗ್ಗಿ ಬರುತ್ತಿದೆ ಕ್ಯಾರೆಂಟಾ ಕ್ಷೇತ್ರದಲ್ಲಿ ಆರ್ಮರ್ಡ್ ಪಡೆಗಳ ಕಾಳಗ ಜರುಗಿ ಜರ್ಮನರಿಗೆ ವಿಪರೀತ ನಷ್ಟವೂ ಸೋಲೂ ಸಂಭವಿಸಿತೆಂದು ಹೇಳಲಾಗಿದೆ

ಫಿನ್‌ಲೆಂಡ್‌ಮೇಲಿನ ದಾಳಿ

ಫಿನ್ಲೆಂಡಿನ ರಕ್ಷಣಾಕವಚವಾದ ಮ್ಯಾನರಹೀಂ ಕೋಟೆಯ ಎರಡನೆಯ ಸಾಲಿನಲ್ಲೀಗ ರಷ್ಯನರು ಕಠಿನವಾದ ಕಾಳಗ ನಡೆಸುತ್ತಾ, ಕ್ರಮಕ್ರಮವಾಗಿ ಮುಂದುವರಿಯುತ್ತಿದ್ದಾರೆ ಅವರು ಫಿನ್ನಿಷ್ ರಕ್ಷಣಾವ್ಯೂಹದ ಒಂದು ಬಲೆಯನ್ನು ದಾಟಿಕೊಂಡು ಮುನ್ನುಗ್ಗಿದ್ದಾರ ವೈಪುರಿಗೆ ಹೋಗುವ ಪ್ರಮುಖ ರೈಲ್ವೆ ಮಾರ್ಗಕ್ಕಾಗಿ ಈಗ ಕದನ ನಡೆಯುತ್ತಿದ ಉಭಯತ್ರರೂ ಫಿರಂಗಿ ಪಡೆಗಳನ್ನು ಮತ್ತು ಪದಾತಿ ಪಡೆಗಳನ್ನು ಕದನದಲ್ಲಿ ಮಾಡಿದ್ದಾರೆ ಕ್ಷಣಕ್ಷಣಕ್ಕೂ ಅದು ತೀವ್ರವಾಗುತ್ತಿವೆ

ಇಟಲಿ ಯುದ್ಧರಂಗ

ರೋಂ ನಗರಕ್ಕೆ ೧೦೦ ಮೈಲಿ ದೂರವಿರುವ ಒಂದು ಸ್ಥಳವನ್ನು ೫ನೆಯ ಸೇನೆ ಈಗ ತಲುಪಿದೆ ಅಲ್ಲದೆ ಇನ್ನೆರಡು ನಗರಗಳನ್ನು ಅದು ಸುತ್ತುಗಟ್ಟಿ ಅಲ್ಲಿಂದ ಮುಂದಕ್ಕೆ ಸಾಗಿದೆ ಏಡ್ರಿಯಾಟಿಕ್ ಕ್ಷೇತ್ರದಲ್ಲಿನ ಮಿತ್ರಸೇನೆಯೂ ಸಹ ಒಂದೇ ಸಮನಾಗಿ ಮುನ್ನುಗ್ಗುತ್ತಿದೆ ಮಿತ್ರವಿಮಾನಗಳು ಎರಡು ಸಹಸ್ರ ಸಾರ್ಟಿಗಳನ್ನು ಮಾಡಿ ಶತ್ರು ಗುರಿಗಳಿಗೆ ಅಪಾರ ನಷ್ಟವನ್ನುಂಟುಮಾಡಿದವು ಬ್ರಿಟಿಷ್ ನೌಕೆಗಳು ಫ್ಲೂಮ್‌ನಲ್ಲಿರುವ ರೇವುಗಳ ಮೇಲೆ ಷೆಲ್‌ಗಳನ್ನು ಪ್ರಯೋಗಿಸಿದವು ಡಾಲ್ಮೇಷಿಯನ್ ತೀರದಲ್ಲಿ ಬರುತ್ತಿದ್ದ ೩ ಬೋಟುಗಳ ಮೇಲೆ ದಾಳಿ ಮಾಡಿ ಆ ಪೈಕಿ ಒಂದನ್ನು ಮುಳುಗಿಸಿವೆ ಉತ್ತರಾಭಿಮುಖವಾಗಿ ಮುನ್ನುಗ್ಗುತ್ತಿರುವ ೫ ನೇ ಮಿತ್ರಪಡೆಗಳು ರೋಮಿನಿಂದ ೫೦ ಮೈಲು ದೂರದಲ್ಲಿರುವ ಟೆನ್ನಿ ನಗರಕ್ಕೆ ಮುತ್ತಿಗೆ ಹಾಕಿವೆ ಈ ನಗರವು ಶತ್ರುವಿನ ಭಾರಿ ಶಸ್ತ್ರಾಗಾರವೆಂದು ಹೇಳಲಾಗಿದೆ

ಚೆರ್ಬರೋ ಪರ್ಯಾಯ ದ್ವೀಪದಲ್ಲಿ ಯುದ್ಧ

ಈಗ ಮಿತ್ರ ಪ್ರಧಾನ ಸೇನಾನಿ ಕಛೇರಿಯು ಪ್ರಕಟಿಸಿಯ ಪ್ರಕಾರ ಚೆರ್ಬರೋ ಪರ್ಯಾಯ ದ್ವೀಪದ ಕದನವೇ ಅತಿ ಮುಖ್ಯವಾದದ್ದಾಗಿದೆ ಕ್ಯಾರೆಂಟಾನಿನಿಂದ ಪಶ್ಚಿಮಾಭಿಮುಖವಾಗಿ ಕ್ರಮೇಣ ನುಗ್ಗಿ ಬರುತ್ತಿರುವ ಅಮೇರಿಕನ್ ಸೇನೆಗಳು ಈ ಪರ್ಯಾಯ ದ್ವೀಪದ ಕಂಠ ಭಾಗದಲ್ಲಿ ಅರ್ಧ ದಾರಿ ಹಾಗು ಬಂದಿದ್ದಾರೆ ಜರ್ಮನರ ಪ್ರತಿಭಟನೆ ಅತಿ ಮಹತ್ತರವಾಗಿದ್ದಿತಾದರೂ, ಅಮೇರಿಕನ್ ಸೇನೆಗಳು ಸಾಧಿಸಿರುವ ಪ್ರಗತಿ ಅತ್ಯಭಿನಂದನೀಯವಾಗಿದೆ ಕ್ಯಾರೆಂಟಾ ನಗರಕ್ಕೆ ದಕ್ಷಿಣ ಮತ್ತು ನೈರುತ್ಯ ದಿಗ್ಭಾಗಗಳಲ್ಲಿ ವಿಶಾಲವಾದ ಕ್ಷೇತ್ರದಲ್ಲಿ ಮಿತ್ರ ಪಡೆಗಳು ನುಗ್ಗಿ ಬರುತ್ತಾ, ವ್ಯಾಲೋನ್ಸ್ ನಗರಕ್ಕೆ ದಕ್ಷಿಣದಲ್ಲಿ ೧೦ ಮೈಲಿ ಹತ್ತಿರಕ್ಕೆ ಬಂದಿವೆ ಮಿತ್ರ ರಾಜ್ಯದ ಪಶ್ಚಿಮಭಾಗದಲ್ಲಿ ಇತರ ಅಮೇರಿಕನ್ ಸೇನೆಗಳು ಚೆರ್ಬರೋ ಪರ್ಯಾಯ ದ್ವೀಪದ ಮೇಲ್ಭಾಗದ ಅರ್ಧ ಪ್ರದೇಶವನ್ನು ಗೆದ್ದುಕೊಂಡಿವೆ ಈ ಗೆದ್ದ ಪ್ರದೇಶ ಮುಂದಿನ ಯುದ್ಧ ನಡವಳಿಕೆಗಳಿಗೆ ಅತ್ಯಂತ ಅಮೂಲ್ಯವಾದದ್ದೆಂದು ಹೇಳಲಾಗಿದೆ

ರಣಕ್ಷೇತ್ರಕ್ಕೆ ಸಮ್ರಾಟರ ಭೇಟಿ

ಸಮ್ರಾಟ ಆರನೇ ಜಾರ್ಜ್ ಪ್ರಭುಗಳು ಕಳೆದ ೧೬ ನೆಯ ತಾರೀಕು ನಾರ್ಮಂಡಿ ರಣಕ್ಷೇತ್ರಕ್ಕೆ ದಯಮಾಡಿಸಿದ್ದರೆಂದು ಮಿತ್ರ ಮಹಾಪ್ರಧಾನ ಸೇನಾನಿ ಜನರಲ್ ಐಸೆನ್ ಹೋವರ್, ಉಪಪ್ರಧಾನ ಏರ್ ಚೀಫ್ ಮಾರ್ಷಲ್ ಸರ್ ಆರ್ಥರ್ ಟೆಡ್ಡರ್ ನಾರ್ಮಂಡಿಗೆ ಬಂದಿದ್ದು ಜನರಲ್ ಸರ್ ಬರ್ನಾರ್ಡ್ ಲಾ ಮಾಂಟ್ಗೊಮೆರಿ, ಏರ್ ಮಾರ್ಷಲ್ ಸರ್ ಆರ್ಥರ್ ಕಾನಿಂಗ್ಹಾಂರೊಡಗೂಡಿ ರಣಕ್ಷೇತ್ರಗಳನ್ನು ಪರಿಶೀಲಿಸಿಕೊಂಡು ಬಂದರೆಂದು ಹೇಳಲಾಗಿದೆ

ಚಾಲಕನಿಲ್ಲದ ಶತ್ರು ವಿಮಾನ

ನಾಜಿಗಳು ಹೊಸ ಶಸ್ತ್ರವನ್ನು ಕಾರ್ಯರಂಗದಲ್ಲಿ ಇಳಿಸಿದ್ದಾರೆ ಸಂಚಾಲಕನಿಲ್ಲದ ವಿಮಾನವೇ ಇದು. ಈ ತರಹ ವಿಮಾನ ಬ್ರಿಟನ್ನಿನಲ್ಲಿ ದಾಳಿಗಾಗಿ ಈಗಾಗಲೇ ಅನೇಕಾವರ್ತಿ ಬಂದಿದ್ದುದಾಗಿ ಹರ್ಬರ್ಟ್ ಮಾರಿಸ್‌ರವರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು ಈ ನೂತನ ವಿಮಾನ ಪ್ರಯೋಗವು ಕಳೆದ ಮಂಗಳವಾರ ನಡೆಯಿತಂತೆ ಇದರಿಂದ ಬಿದ್ದ ಆಸ್ಫೋಟಕಗಳು ಬಹಳ ವಿಸ್ತಾರ ಪ್ರದೇಶದ ಮೇಲೆ ಬಿದ್ದಿತಂತೆ ೧೫ ತಾ|| ರಾತ್ರಿ ಮತ್ತು ೧೬ ತಾ|| ಪ್ರಾತಃಕಾಲ ಇಂಥಾ ವಿಮಾನಗಳು ವಿಶೇಷವಾಗಿ ಬಂದಿದ್ದುವಂತೆ ಈ ಹೊಸ ದಾಳಿಗಳನ್ನು ತಡೆಯಲು ವಿಮಾನ ವಿನಾಶಕ ಫಿರಂಗಿಗಳು ಪ್ರಯತ್ನಿಸುತ್ತಿರುವುದಾಗಿಯೂ ಬರೆದ ಅನುಭವ ಪಡೆದ ಹಾಗೆಲ್ಲಾ ಹೊಸ ವಿಧಾನದಲ್ಲಿ ಈ ನೂತನ ವಿಮಾನಕ್ಕೆ ವಿನಾಶಿಕೆಗಳನ್ನು ಪ್ರಯೋಗಿಸಲು ಸಿದ್ಧತೆಗಳಾಗುತ್ತಿರುವುದಾಗಿಯೂ ತಿಳಿದುಬಂದಿದೆ

ಜಪಾನರಿಗೆ ಸರಿಯಾದ ಸರಬರಾಜಿಲ್ಲ

ಶಾಮಿಯಾಂಗ್ ಚೀಣೀ ೫೩ ನೇ ಡಿವಿಜನ್ ಸ್ವಸ್ವಕ್ಕೆ ವಶವಾಯ್ತೆಂದು ಜ|| ಸ್ಟಿಲ್‌ವೆಲ್‌ರವರ ಕೇಂದ್ರ ಕಛೇರಿ ಪ್ರಕಟಿಸಿದೆ ಈಚೆಗೆ ಬರ್ಮಾಗಡಿಯಿಂದ ಹಿಂತಿರುಗಿದ ಜಪಾನಿ ಸೈನ್ಯಾಧಿಕಾರಿಯು ಟೋಕಿಯೋ ರೇಡಿಯೋದಿಂದ ಭಾಷಣ ಮಾಡುತ್ತಾ ಜಪಾನಿ ಯೋಧರಿಗೆ ಸರಿಯಾಗಿ ಸರಬರಾಜಾಗುತ್ತಿಲ್ಲವೆಂದೂ ವಿಮಾನ ನೆರವು ಸಾಕಷ್ಟಿಲ್ಲವೆಂದೂ ವಿರೋಧಿಸಿರುವನು.

ಜಪಾನಿ ಮಂತ್ರಿಮಂಡಲದ ಕಳವಳ

ಜಪಾನಿನ ಮೇಲೆ ವಿಮಾನದಾಳಿ ನಡೆದ ಕೆಲವು ಗಂಟೆಗಳ ಮೇಲೆ ಜಪಾನಿ ಮಂತ್ರಿಮಂಡಲದ ಸಭೆ ಸೇರಿ ಪರಿಸ್ಥಿತಿಯನ್ನು ಪರಿಶೀಲಿಸಿತೆಂದು ಟೋಕಿಯೋ ರೇಡಿಯೋ ಮಾಡಿದ ಬ್ರಾಡ್‌ಕ್ಯಾಸ್ಟಿನಿಂದ ಗೊತ್ತಾಗಿದೆ. ಚೀಣೀ ನೆಲೆಗಳಿಂದ ಸೂಪರ್ ಫಾರ್ಟ್ರೆಸ್ ವಿಮಾನಗಳು ಅತ್ಯಂತ ಗೋಪ್ಯವಾಗಿ ಹೋಗಿ ದಾಳಿ ನಡೆಸಿದವೆಂದು ಈಗ ಗೊತ್ತಾಗಿದೆ

ಸ್ವೀಕಾರ

ಹುಬ್ಬಳ್ಳಿ ಟವನ್ ನಿವಾಸಿಗಳಾದ ವೇ|| ಚಿಕ್ಕಮಠದ ರಾಚಯ್ಯನವರಿಗೆ ಹೆಣ್ಣುಮಗುವು ಜನಿಸಿದ್ದು ತಾ|| 8-6-44 ನೆಯ ದಿವಸ ಗಿರಿಜಾದೇವಿಯೆಂದು ನಾಮಕರಣ ಮಾಡಿದ ಸಮಯದಲ್ಲಿ ಪ್ರಭಾಪೋಷಣ ಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ವೇ|| ಹೊಸಮಠದ ವೀರಭದ್ರಯ್ಯನವರ ದ್ವಾರಾ ತಲ್ಪಿರುತ್ತವೆ.

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದದ್ದು) ಸೈಜು ೧೬ × ೧೦ ಬೆಲೆ	೦—೬—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೪ ಬೆ.	೦—೩—೦
ಸಕಲ ಶಿವಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೪ × ೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೦
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೦
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದದ್ದು) ಸೈಜು ೧೪ × ೧೦	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೦
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದದ್ದು) ಚಿಕ್ಕ ಸೈಜು ೧ಕ್ಕೆ	೦—೨—೦
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದದ್ದು) ದೊಡ್ಡ ಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಕೇದಾರಪೀಠ ಮಠದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೦
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೦
ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸಿದ್ಧಾಂತಶಿಖಾಮಣಿ

ವೀರಶೈವ ಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ **ಲೀಲಾತ್ಮಕವಾದ** ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಶೈವಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಶನ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ಬಿಲ್ವಮಾಹಾತ್ಮ್ಯ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಸತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಜಂಗಮಪರಿಜ್ಞಾನ	೬ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸಮ್ಯೋದರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
* ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
* ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಸುಂದರಮುದ್ರಣ)	೧ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೨೦ ಮುಖ್ಯದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु
वीरशैवमत (मराठी)	१ रु
महानारायणोपनिषत् (वीरशैवभाष्य-संस्कृत)	८ रु
सिद्धांतशिखामणि (मूल)	८ आ
[illegible]कारिका (संस्कृत)	२ आ

* ಈ ಗುರ್ತು ಹಾಕಿರುವ ಪುಸ್ತಕಗಳು ಮುಗಿದುಹೋಗಿರುವುದರಿಂದ ದೊರೆಯುವುದಿಲ್ಲ. ಕೆಲವು ಪುಸ್ತಕಗಳು ಮುಗಿಯುತ್ತ ಬಂದಿರುವುದರಿಂದಲೂ ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದಲೂ ಅವುಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಶಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಮಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ।

ಮುಂಗಡವಾಗಿ ಕೊಡುವವರಿಗೆ ೨ ರೂ ೮ ಆಣೆ — ಹಿಂದಿನಿಂದ ಕೊಡುವವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೬ನೇ ಜೂನ್ ೧೯೪೪ [ಸಂಚಿಕೆ ೯

ಪುಣ್ಯತಿಥಿಮಹೋತ್ಸವವು

ಕಲಘಟಗಿ ತಾಲ್ಲೂಕ ಬೆಲವಂತರ ಹಿರೇಮಠದ ಶರಣ ಸಿಲು ಸಾರ್ವಭೌಮ ಲಿಂಗೈಕ್ಯ ಶ್ರೀ ಚೆನ್ನಬಸವೇಶ್ವರ ಶಿವಯೋಗಿಗಳವರ ೯ ನೇ ಪುಣ್ಯತಿಥಿಮಹೋತ್ಸವವು ವಾರ್ಷಿಕ ಪದ್ಧತಿಯಂತೆ ಅವರ ಸುಪುತ್ರರಾದ ವೇ॥ ಸಿದ್ಧರಾಮೇಶ್ವರಸ್ವಾಮಿಯವರ ನೇತೃತ್ವದಲ್ಲಿ ಇದೇ ಜ್ಯೇಷ್ಠ ಬ॥ ರವಿವಾರ ತಾ॥ ೧೦-೬-೪೪ ನೇ ದಿವಸ ವಿಜೃಂಭಣೆಯಿಂದ ನೆರವೇರಿತು ಈ ಉತ್ಸವಕ್ಕೆ ಕಲಘಟಗಿ, ಹುಬ್ಬಳ್ಳಿ, ಹಾವೇರಿ, ಬ್ಯಾಡಗಿ, ಕರ್ಜಗಿ ತೂಸಿಕಾಳ ಬೆಲವಂತ ಆಲದಕಟ್ಟಿ ಇಂಗಳಗಿ ಮುಲಿ ಬೆಂಡ್ಲಗಟ್ಟಿ ತರ್ಲಘಟ್ಟ, ವಗ್ಗೈತೆ ಊರುಗಳಿಂದ ಅಸಂಖ್ಯ ಸದ್ಭಕ್ತ ಮಹಾಶಯರು ಆಗಮಿಸಿದ್ದರು ಉತ್ಸವದ ದಿವಸ ಅಸಂಖ್ಯ ಜನರಿಗೆ ಅನ್ನಸಂತರ್ಪಣೆ ಮಾಡಲ್ಪಟ್ಟಿತು ಆ ದಿವಸ ರಾತ್ರಿ ಇಂಗಳಗಿ ಹಿರೇಮಠದ ಕೀರ್ತನ ಪ್ರವೀಣ ವೇ॥ ವಿರುಪಾಕ್ಷಶಾಸ್ತ್ರಿಗಳವರು 'ಗುರುಪ್ರಸಾದ' ಮೇಲೆ ಸುಶ್ರಾವ್ಯವಾಗಿ ಕೀರ್ತನ ಮಾಡಿದರು ಪ್ರಸಿದ್ಧ ಲಾವಣಿಕಾರ ಮಲಿಕ್‌ಭಾಯಿ ಬ್ಯಾಡಗಿ ಇವರು ಲಾವಣಿ ಪದಗಳನ್ನು ಹಾಡಿದರು ಹೋದ ವರ್ಷದಿಂದ ಪುಣ್ಯತಿಥಿ ಮಹೋತ್ಸವಕ್ಕೆ ಹುಬ್ಬಳ್ಳಿ ಹಾವೇರಿ ಕರ್ಜಗಿ ಬ್ಯಾಡಗಿ ತೊನಿಶಿ ೪ ತರ್ಲಘಟ್ಟ ಊರುಗಳ ಸದ್ಭಕ್ತರು ವರ್ಷಾಶನವರ್ಗಣಿ ಸಲ್ಲಿಸುತ್ತಿದ್ದಾರೆ ಈ ಮೊದಲು ಮೂರು ವರ್ಷಗಳ ಹಿಂದೆ ಲಿಂಗೈಕ್ಯ ಶ್ರೀಗಳವರ ಗದ್ದಿಗೇರು ಮಾಡಿಸುವುದರ ಸಲುವಾಗಿ ಹುಬ್ಬಳ್ಳಿ ಬ್ಯಾಡಗಿ ಹಾವೇರಿ ತೊನಿಶಿ ೪ ಮೊದಲಾದ ಕೆಲವು ಊರುಗಳಿಂದ ವರ್ಗಣಿ ವಸೂಲ ಮಾಡಿತ್ತು ಆದರೆ ಲಿಂಗೈಕ್ಯ ಶ್ರೀಗಳವರ ಅಪ್ಪಣೆ ಗದ್ದಿಗೇರು ಮಾಡಿಸಲಿಕ್ಕೆ ದೊರೆಯದ್ದರಿಂದ ಮೂರು ವರ್ಷಗಳಹಿಂದೆ ಮಠದ ಛಾವಣಿ ಬಿರುಗಾಳಿಯಿಂದ ಹಾರಿಹೋಗಿ ಮೂರು ಸಾವಿರ ರೂಪಾಯಿ ನಷ್ಟವನ್ನುಂಟುಮಾಡಿದ್ದರಿಂದ ಸದರಿ ಮಠದ ಜೀರ್ಣೋದ್ಧಾರದ ಸಲುವಾಗಿ ಸದರಿ ವರ್ಗಣಿ ರಕಮು ವಿನಿಯೋಗಿಸಲ್ಪಟ್ಟಿತು ಪ್ರತಿವರ್ಷ ವರ್ಷಾಶನ ವರ್ಗಣಿ ದಯಪಾಲಿಸಿ ತ್ರಿಕರಣಪೂರ್ವಕವಾಗಿ ಸೇವೆಯನ್ನು ಮಾಡುತ್ತಲಿರುವ ಸರ್ವ ಸದ್ಭಕ್ತ ಮಹಾಶಯರಿಗೆ ಶ್ರೀ ಶಿವಯೋಗಿಗಳು ಆಯುರಾರೋಗ್ಯಸಂಪತ್‌ಸಮೃದ್ಧಿಯನ್ನುಂಟು ಮಾಡಿ ಸದಾ ಕಾಪಾಡಲೆಂದು ಪ್ರಾರ್ಥಿಸುತ್ತೇವೆ

ಸಿ ಸ್ವಾಮಿ

ಮುಕ್ತಿಮಂದಿರಕ್ಕೆ ಧರ್ಮಾತ್ಮರ ಧನಸಹಾಯ

ನಮ್ಮ ಭಾರತ ಭೂಮಿಯಲ್ಲಿ ಅನೇಕ ಶಿವಕ್ಷೇತ್ರಗಳೂ ವಿಷ್ಣುಕ್ಷೇತ್ರಗಳೂ ಅನಾದಿಕಾಲದಿಂದಲೂ ಪ್ರಸಿದ್ಧಗಳಾಗಿರುವವು ಇದರಂತೆ ಗುರುಕ್ಷೇತ್ರಗಳೂ ಕೂಡ ಪ್ರಸಿದ್ಧಗಳಾಗಿರುವವು ಆದರೆ ಗುರುಕ್ಷೇತ್ರಗಳು ಇತ್ತೀಚಿಗೆ ಅತಿ ವಿರಳವಾಗಿಯೂ ಮತ್ತು ಇದ್ದವುಗಳು ಬಹಳ ಹೀನಸ್ಥಿತಿಯಲ್ಲಿಯೂ ಇರುವವು ಈ ಗುರುಕ್ಷೇತ್ರಗಳನ್ನು ಸರ್ವತ್ರ ಪ್ರಜಾರಗೊಳಿಸಬೇಕೆನ್ನುವ ಗುರುವರ್ಗದ ಗುರುಮೂರ್ತಿಗಳು ಮಾಡುತ್ತಿರುವ ಪರಿಶ್ರಮವು ಪ್ರಶಂಸನೀಯವಾಗಿರುವದು ಇಂತಹ ಗುರುಮೂರ್ತಿಗಳಲ್ಲೊಬ್ಬರಾದ ಬೆಂಗಳೂರು ಮಹಾಂತಿನ ಮಠಾಧ್ಯಕ್ಷರೂ ಪರಮ ತಪೋನಿಧಿಗಳೂ ಆದ ಶ್ರೀ ಗಂಗಾಧರಶಿವಾಚಾರ್ಯಸ್ವಾಮಿಗಳವರು ಧಾರವಾಡ ಪ್ರಾಂತದಲ್ಲಿರುವ ಸಲಾಪುರದ ಸಮೀಪದಲ್ಲಿ ಗುರುಕ್ಷೇತ್ರವಾದ ಮುಕ್ತಿಮಂದಿರವನ್ನು ನಿರ್ಮಿಸಿ ಗುರುಕುಲವನ್ನು ಸ್ಥಾಪಿಸಲು ಸತ್ಸಂಕಲ್ಪವನ್ನು ಮಾಡಿರುವರು ಸದರಿ ಶ್ರೀಗಳವರ ಸಂಕಲ್ಪವನ್ನು ನೆರವೇರಿಸಲು ಬದ್ಧಕಂಕಣರಾದ ಅನೇಕ ಸದ್ಭಕ್ತರು ಅನೇಕ ಸಹಸ್ರ ರೂಪಾಯಿಗಳನ್ನು ವ್ಯಯಮಾಡಿ ಶ್ರೀ ಮುಕ್ತಿಮಂದಿರವನ್ನು ನಿರ್ಮಿಸುತ್ತಾ ಗುರುಕೃಪೆಗೆ ಪಾತ್ರರಾಗುತ್ತಿರುವವನ್ನು ಕೇಳಿ ಬೆಂಗಳೂರು ನಗರ ನಿವಾಸಿಗಳೂ ಗುರುಭಕ್ತಿಪರಾಯಣರೂ ಆದ ತಾಲೂಕು ಆಫೀಸ ಅಂಗಡಿ ಶ್ರೀಮಾನ್ ಅಪ್ಪಾಜಪ್ಪನವರು ೧೦೦೦ ರೂಪಾಯಿಗಳನ್ನು ಮತ್ತು ಚಿಂತಾಮಣಿ ವೇ॥ ಲಿಂಗಾರಾಧ್ಯರು ೫೦೦ ರೂಪಾಯಿಗಳನ್ನು ಶ್ರೀ ಮುಕ್ತಿಮಂದಿರ ನಿರ್ಮಾಣಕ್ಕಾಗಿ ಶ್ರೀ॥ ಷ। ಬ್ರ॥ ಗಂಗಾಧರಶಿವಾಚಾರ್ಯಸ್ವಾಮಿಗಳವರಿಗೆ ಸಮರ್ಪಿಸಿರುವರು ಮೇಲ್ಕಂಡ ಉಭಯ ಧರ್ಮಾತ್ಮರೂ ಬೆಂಗಳೂರು ಮತ್ತು ಇತರ ಸ್ಥಳಗಳಲ್ಲಿ ನಡೆಯುತ್ತಿರುವ ಅನೇಕಾನೇಕ ಧರ್ಮಕಾರ್ಯಗಳಿಗೆ ಧನಸಹಾಯ ಮಾಡಿ ಮಹಾ ಪುಣ್ಯವನ್ನು ಸಂಗ್ರಹಿಸುತ್ತಿರುವರು ಇವರಿಗೆ ಶ್ರೀ ಜಗದಾಚಾರ್ಯರು ನಿತ್ಯಮಂಗಲವನ್ನುಂಟುಮಾಡಲೆಂದು ಹಾರೈಸುತ್ತೇನೆ

ಆರ್ ಎಂ ಎಚ್ ಸದಾಶಿವಶಾಸ್ತ್ರೀ

ಬಲ್ಲಿರಾ ?

೧. ರಕ್ತದಲ್ಲಿ ಕಬ್ಬಿಣದ ಅಂಶವಿರುವುದೇಕೆ ?

ಮನುಷ್ಯ ದೇಹದ ರಕ್ತದಲ್ಲಿ ಕಬ್ಬಿಣದ ಅಂಶವಿರುವುದೇಕೆ ? ರಕ್ತಕ್ಕೆ ಅದರಿಂದೇನು ಉಪಯೋಗ ? ಕಬ್ಬಿಣವಾದರೋ ಉಳಿ, ಕೊಡಲಿ, ಪಾತ್ರೆಗಳನ್ನು ಮಾಡಲು ಬರುವಂಥದು ಆದರ ಶಾಸ್ತ್ರೀಯ ದೃಷ್ಟಿಯಿಂದ ನೋಡಿದರೆ ರಕ್ತದ ಕಣಗಳಲ್ಲಿ ಕಬ್ಬಿಣವು ಮಿಶ್ರಿತವಾಗಿರುವುದು ಕಂಡುಬರುವುದು ಪುರುಷರ 1 ಪಿಂಟು ರಕ್ತದಲ್ಲಿ ನೂರರಲ್ಲಿ ಒಂದಂಶ ಕಬ್ಬಿಣವಿರುತ್ತದೆ ಮತ್ತು 1 ಪಿಂಟು ಸ್ತ್ರೀ ರಕ್ತದಲ್ಲಿ ನೂರಿಪ್ಪತ್ತರಲ್ಲಿ ಒಂದಂಶ ಕಬ್ಬಿಣವಿರುತ್ತದೆ ನಾವು ಶ್ವಾಸದಲ್ಲಿ ತೆಗೆದುಕೊಳ್ಳುವ ಪ್ರಾಣವಾಯುವು ಪುಪ್ಪಸಮಾರ್ಗವಾಗಿ ನಮ್ಮ ದೇಹವನ್ನೆಲ್ಲಾ ವ್ಯಾಪಿಸದೆ ಸರಳವಾಗಿ ದೇಹದ ಅಣುಕೋಣಗಳನ್ನು ವ್ಯಾಪಿಸುತ್ತದೆ ಈ ಪ್ರಾಣವಾಯು ಕೆಂಪುರಕ್ತಕಣಗಳಿಗೆ ವಿಶೇಷವಾಗಿ ಬೇಕಾಗುತ್ತದೆ ಆ ಕೆಂಪುಕಣಗಳಿಗಾದರೋ ಚೈತನ್ಯವನ್ನು ಕೊಡುವುದಕ್ಕೆ ಕಬ್ಬಿಣವು ಬೇಕೇ ಬೇಕು ಆದುದರಿಂದ ಪ್ರಾಣವಾಯುವು ಕಬ್ಬಿಣ ಮತ್ತು ಚೈತನ್ಯ ಇವುಗಳಲ್ಲಿಯ ಪರಸ್ಪರ ಸಂಬಂಧವು ಇನ್ನೂ ಶೋಧನಾಸ್ಪದವಾಗಿದ್ದರೂ ಕಬ್ಬಿಣವಿಲ್ಲದೆ ಪುಪ್ಪಸಗಳು ಸರಿಯಾಗಿ ನಡೆಯಲಾರವೆಂದು ಕಂಡುಬಂದಿದೆ ಅಂದಮೇಲೆ ಕಬ್ಬಿಣಮಿಶ್ರಿತವಾದ ಆಹಾರ ನೀರುಗಳನ್ನು ಸೇವಿಸುವ ಮನುಷ್ಯನಿಗೆ ಕ್ಷಯ ಮುಂತಾದ ಪುಪ್ಪಸ ರೋಗಗಳು ವಾಸಿಯಾಗುತ್ತವೆ ಎಂಬ ಮಾತು ಸತ್ಯವಿರಬಹುದಲ್ಲವೆ ?

೨. ಸಾರಾಯಿಯು ಮಿದುಳಿನ ಮೇಲೆ ಪರಿಣಮಿಸುವುದು ಹೇಗೆ ?

ಅನೇಕ ಪದಾರ್ಥಗಳು ರಕ್ತನಾಳಗಳಂತಹ ಕೆಲವಾದ ರೋಗಗಳನ್ನು ಹಾಯಿಸುತ್ತವೆ. ನಾವು ಬಾಯಿಗೆ ಸಕ್ಕರೆ ಹಾಕಿಕೊಂಡೊಡನೆಯೇ ಅದು ತತ್‌ಕ್ಷಣವೇ ಕರಗಿ ರಕ್ತಗತವಾಗುವುದು ಅಂದರೆ ಸಕ್ಕರೆಯು ರಕ್ತನಾಳದ ಗೋಡೆಗಳನ್ನು ಭೇದಿಸಿಕೊಂಡು ರಕ್ತವನ್ನು ಸೇರುತ್ತದೆ ಅಂತಹ ವಸ್ತುಗಳಲ್ಲಿ ಸಾರಾಯಿಯೂ ಒಂದು ಅದನ್ನು ಸೇವಿಸಿದ ಸ್ವಲ್ಪ ಹೊತ್ತಿನಲ್ಲಿಯೇ ಅದು ರಕ್ತವನ್ನು ಸೇರಿ ತನ್ಮೂಲಕ ಮೆದುಳನ್ನು ಸೇರುತ್ತದೆ ತಲೆಗೆ ಹೋಗಿರುವ ಕೂದಲಿಗಿಂತ ಸೂಕ್ಷ್ಮವಾದ ರಕ್ತನಾಳಗಳ ಮಾರ್ಗವಾಗಿ ಮೆದುಳಿನ ಗ್ರಂಥಿಗಳನ್ನು ಸೇರುತ್ತದೆ

ಸಾರಾಯಿಯು ಒಂದು ನರವನ್ನೋ ಅಥವಾ ನರಗಳ ಕೇಂದ್ರವನ್ನೋ ಸೇರಿದಾಗ ಆಗುವ ಬದಲಾವಣೆಗಳನ್ನು ಯಾರೂ ಸರಿಯಾಗಿ ತಿಳಿದಿಲ್ಲ ಆದರೂ ಅದು ಸೇರುವ ನರ ಅಥವಾ ನರಗಳ ಕೇಂದ್ರದ ಕಾರ್ಯಗಳು ನಿಲ್ಲುವವೆಂದು ಕಂಡುಹಿಡಿಯಲ್ಪಟ್ಟಿದೆ ಸಾರಾಯಿಯು ಮೊದಲು ಅತಿಸೂಕ್ಷ್ಮವಾದ ಹಾಗೂ ಮುಖ್ಯವಾದ ನರಗಳ ಕೇಂದ್ರಗಳನ್ನು ಚೈತನ್ಯಹೀನವನ್ನಾಗಿಮಾಡಿ ಅನಂತರ ಕ್ರಮವಾಗಿ ಕಡಿಮೆದರ್ಜೆಯ ಕಾರ್ಯವನ್ನು ನಿಲ್ಲಿಸುವುದು ಬೇರೆ ಬೇರೆ ದರ್ಜೆಯ ಮೆದುಳುಳ್ಳವರು ಸಾರಾಯನ್ನು ಸೇವಿಸುವುದರಿಂದ ಅವರವರ ಮೆದುಳಿನ ಗುಣಗಳಿಗನುಸಾರವಾಗಿ ವಿವಿಧ ಪರಿಣಾಮಗಳುಂಟಾಗುವುವು ಅವುಗಳಲ್ಲಿ ಮೊದಲನೆಯದು— ಯಾವುದಾದರೂ ಒಂದು ಉತ್ತೇಜಕ ವಸ್ತುವನ್ನು ತೆಗೆದುಕೊಂಡರೆ ಉಂಟಾಗುವಂತಹುದು ಆದುದರಿಂದಲೇ ನಾವು ಸಾರಾಯವನ್ನು ಮಾದಕವಸ್ತುವೆನ್ನುವದು ಮೆದುಳಿನ ಯಾವ ಭಾಗದ ಮೇಲಿಂದ ಮಾತನಾಡುವುದು ನಗುವುದು ಇಂಥ ಕಾರ್ಯಗಳು ನಡೆಯುತ್ತವೋ ಆ ಭಾಗಗಳು ಸಾರಾಯಿಯ ಸೇವನೆಯಿಂದ ನಿಶ್ಚೇತನವಾಗುವುದರಿಂದ ಮೆದುಳಿಗೆ ಆ ಭಾಗಗಳ ಹಿಡಿತವಿರುವುದಿಲ್ಲ ಕುಡುಕರಲ್ಲಿ ಕಂಡುಬರುವ ವಕ್ರಸ್ವಭಾವಗಳಿಗೂ ವಿಚಿತ್ರ ಮಾತುಗಳಿಗೂ ಇದೇ ಕಾರಣ ಸಾರಾಯಿಯ ಅಧಿಕ ಸೇವನೆಯಿಂದ ಆಗುವ ಬದಲಾವಣೆಗಳು ಇಂಥವೇ ಎಂದು ಹೇಳಲಾಗುವುದಿಲ್ಲ ಇದು ನರಗಳ ಗೂಡುಗಳ ಪದಾರ್ಥವು ಅಧಿಕವಾಗಿ ಬೆಳೆಯುವಂತೆ ಮಾಡುತ್ತದೆ ಕ್ರಮೇಣ ಮೆದುಳಿನ ನಾಶವೇ ಇದರಿಂದಾಗುವ ಪರಿಣಾಮವು

ಪಂಚಾಚಾರ್ಯಪ್ರಭಾ.

೧೯೪೪ನೆಯ ಜೂನ್ ತಾ|| ೨೬ನೇ ಸೋಮವಾರ

ಶಿವಯೋಗ.

ಶಿವಯೋಗವೆಂದರೆ ಶಿವನಲ್ಲಿ ಚಿತ್ತವೃತ್ತಿಗಳನ್ನು ನಿರೋಧಿಸಿ ಬಾಹ್ಯಾಕಾರವೃತ್ತಿಗಳನ್ನು ತದನು ಶಿವಾಕಾರಗಳನ್ನಾಗಿ ಮಾಡುವುದರಿಂದ [illegible] ಹೀಗೆ ಮಾಡುವುದು [illegible] ಸರ್ವತದ ಮೇಲ್ಭಾಗದಿಂದ [illegible] ದೊಡ್ಡ ಪ್ರವಾಹವನ್ನು ತಡೆದು [illegible] ತಿರುಗಿಸುವುದು [illegible] ವಿಷಯದೇಶದೆಂ. [illegible] ಚಿತ್ತವೃತ್ತಿ ಪ್ರವಾಹವನ್ನು ತಡೆದು ಶಿವ [illegible] ತಿರುಗಿಸುವುದು ಅಷ್ಟು ಕಷ್ಟಸಾಧ್ಯವಾಗಿರುವುದು. ಇಂಥ ಕಷ್ಟತರವಾದ ಶಿವಯೋಗವು [illegible] ಅವಿಚ್ಛಿನ್ನ ದೀರಸು [illegible] ಕಳ್ಳಿಸಿ ಅಸ್ಸಿ [illegible] ಸಾಧ್ಯವಾಗದು [illegible] ಶತ್ರು [illegible] ಇರುವದು ಶಿವಯೋಗವನ್ನು [illegible] ಮಾತ್ರ [illegible] ಕ್ರಿಯಾದಿ [illegible] (ಸಾಧನ ಪ್ರಕಾರಣ) [illegible] ಶಿವಯೋಗ [illegible] ಇರುವದು [illegible] ಶಿವಯೋಗದ [illegible] ಇಂಥ ಶಿವಯೋಗವು [illegible] ಮುಕ್ತನು. ಇವನೇ [illegible] [illegible] ಪ್ರತಿಪಾದಿಸಲಾಗಿದೆ [illegible] ಪ್ರಕರಣ ಪ್ರಮಾಣ [illegible] ಈ ಶಿವಯೋಗವು ಸಾಧನರೂಪವೆಂತಲೂ ಸಾಧ್ಯರೂಪವೆಂತಲೂ ಎರಡು ಪ್ರಕಾರವಾಗಿರುವುದು. ಸಾಧನರೂಪವಾದ ಶಿವಯೋಗದಲ್ಲಿ ಭಕ್ತ್ಯಾದಿ ಷಟ್‌ಸ್ಥಲಗಳೂ ಅಷ್ಟಾಂಗಗಳೂ ಅಡಕವಾಗಿರುವ ಯಮಾದಿ ಧಾರಣಾಂತಗಳಾದ [illegible] ಅಂಗಗಳೂ ಅಡಕಗಳಾಗುವುವು. ಸಾಧ್ಯರೂಪವಾದ ಶಿವಯೋಗವು ಪಾತಂಜಲದರ್ಶನದಲ್ಲಿ ಸಮಾಧಿಯೆಂದು ಹೇಳಿಸಿಕೊಳ್ಳುವ ಐಕ್ಯಸ್ಥಲವೆನಿಸುವದು. ಈ ಐಕ್ಯಸ್ಥಲವನ್ನು ಹೊಂದಿದವನೇ ಜೀವಭಾವವನ್ನು ಬಿಟ್ಟು ಶಿವನಾಗಿರುವನು. ಇವನು ಸರ್ವೋಪಾಧಿಗಳಿಂದ ಬಿಡಲ್ಪಟ್ಟವನಾದ ಕಾರಣ ಶಿವನೆನಿಸಿಕೊಳ್ಳುವನು. ಆದ್ದರಿಂದ "ಪಾಶಬದ್ಧೋ ಭವೇಜ್ಜೀವಃ ಪಾಶಮುಕ್ತೋ ಭವೇಚ್ಛಿವಃ" ಎಂದು ಆಗಮವು ಸಾರುತ್ತದೆ. ಕೀಟವು ಭ್ರಮರಯೋಗದಿಂದ ಭ್ರಮರವೇ ಆಗುವಂತೆ ಮನುಷ್ಯನು ಸಾಧನರೂಪವಾದ ಶಿವಯೋಗದಿಂದ ಶಿವನೇ ಆಗುವನು. ಸಾಧನರೂಪವಾದ ಶಿವಯೋಗವು ಬಾಹ್ಯವೆಂತಲೂ ಅಭ್ಯಂತರವೆಂತಲೂ ಎರಡು ಪ್ರಕಾರವಾಗಿರುವದು. ಬಾಹ್ಯಶಿವಯೋಗವೆಂದರೆ ಬಾಹ್ಯಶರೀರದಲ್ಲಿ ಇಷ್ಟಲಿಂಗ ಧಾರಣವೆನಿಸಿಕೊಳ್ಳುವುದು. ಇದು ಮುಮುಕ್ಷುವಾದ ಪ್ರತಿಯೊಬ್ಬ ಮನುಷ್ಯನಿಗೂ ಇದ್ದೇ ಇರಬೇಕು. ಇಲ್ಲವಿದ್ದರೆ ಕಾರ್ಮಿಕಮಲವೆಂಬ ಪಾಶವು ಹರಿದು ಹೋಗುವದೇ ಇಲ್ಲವು. ಅದು ಉಳಿದರೆ ಮುಕ್ತಿಯು ಲಭಿಸುವದಿಲ್ಲ. ಈ ವಿಷಯವನ್ನು 'ಅಮೃತಸ್ಯದೇವ ಧಾರಣೋಭೂಯಾಸಂ" "ಅತಪ್ತತನುರ್ನತದಾಮೋ ಅಶ್ನುತೇ" ಇತ್ಯಾದಿ ಶ್ರುತಿಗಳು ಉದ್ಘೋಷಿಸುವವು. ಧನುರ್ಧಾರಿಗೆ ಆದಿಯಲ್ಲಿ ಸ್ಥೂಲಗುರಿಯು ಸಿದ್ಧಿಸದೆ ಸೂಕ್ಷ್ಮಗುರಿಯು ಸಿದ್ಧಿಸದಿರುವಂತೆ ಮಾನವನಿಗೆ ಬಾಹ್ಯಯೋಗವಿಲ್ಲದೆ ಅಭ್ಯಂತರ ಸೂಕ್ಷ್ಮಯೋಗವು ಸಿದ್ಧಿಸಲಾರದು. ಈ ಉಭಯವಿಧ ಶಿವಯೋಗಕ್ಕೆ ಅಷ್ಟಾವರಣಗಳೂ ಪಂಚಾಚಾರಗಳೂ, ಅಂಗಗಳಾಗಿರುವವು. ಈ ಶಿವಯೋಗಕ್ಕೆ ಲಿಂಗಾಂಗಸಾಮರಸ್ಯವೆಂದು ಬೇರೊಂದು ಹೆಸರುಂಟು. ಮೋಕ್ಷಾಪೇಕ್ಷಿಯು ಮೊದಲು ಸಾಧನಸಂಪನ್ನನಾಗಬೇಕು. ಸಾಧನವಿಲ್ಲದೆ ಸಾಧ್ಯರೂಪವಾದ ಫಲವು ದೊರೆಯಲಾರದೆಂಬುದು ಲೋಕಾನುಭವಸಿದ್ಧ [illegible] ಘಟವು [illegible] ಆದಕ್ಕೆ ಜಲಸೇಚನ [illegible] ಮುಂದೆ ಫಲವು ಸಿಕ್ಕಲಾರದು. [illegible] ಸಾಧನಗಳಾದ ಅಷ್ಟಾವರಣಾದಿಗಳನ್ನು [illegible] ಸಂಪಾದಿಸಬೇಕು. ಈ ಸಂಪಾದನೆಗಾಗಿ ಶ್ರೀಗುರುಮೂರ್ತಿಯನ್ನು ಆಶ್ರಯಿಸಿ ಅವನಿಂದ ಶಿವದೀಕ್ಷೆಯನ್ನು ಹೊಂದಬೇಕು. [illegible] ಸಾಧನಸಹಿತ ಶಿವಯೋಗವು (ಲಿಂಗಾಂಗ ಸಾಮರಸ್ಯವು) ತನಗೆ ಪ್ರಾಪ್ತವಾಗುವುದು. ಅಲ್ಲದೆ ಸಾಧ್ಯ (ಫಲ) ರೂಪವಾದ ಶಿವಯೋಗವು ಲಭಿಸುವುದು. ಸಾಧನಸಹಿತ ಶಿವಯೋಗದಲ್ಲಿಯೇ ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಾರ್ಚನ, ಶಿವಜ್ಞಾನಗಳು ಅಂತರ್ಗತಗಳಾಗುವವು. [illegible] ಶಿವಯೋಗವು ದೀಕ್ಷಾಕಾಲದಲ್ಲಿ ಶಿಷ್ಯನಿಗುಂಟಾಗುವದು. ಗುರುವು ಆ ಕಾಲದಲ್ಲಿ ಉಪದೇಶಮಾಡಿದ ಪ್ರಕಾರ ಆ ಸಾಧನಗಳನ್ನು ಆಚರಿಸುತ್ತ ಹೋದರೆ ಎರಡನೆಯದಾದ ಸಾಧ್ಯರೂಪವಾದ ಮೋಕ್ಷವು ಲಭಿಸುವುದು. [illegible] ಅವನು ಮೋಕ್ಷಕ್ಕೆ [illegible] ಗುರುವಿನ ಆಜ್ಞಾಪಂಗಮೋಕ್ಷಕ್ಕೆ [illegible] ಕ್ರಿಯಾ [illegible] ಲಿಂಗಾಂಗ ಸಾಮರಸ್ಯವು ಎರಡು ಪ್ರಕಾರ [illegible] ಸಾಧನಸಹಿತವಾದ ಸಾಮರಸ್ಯ [illegible] ದೀಕ್ಷೆಯಲ್ಲಿ ಮಾಡಲ್ಪಡುವದೆಂತಲೂ [illegible] ರೂಪವ [illegible] ವೆಂತಲೂ [illegible] ಯುವುದೆನಿಸುವ ಶಿಷ್ಯನು ಗುರುವಾಕ್ಯಪಾಲನ [illegible] ಎಂದು ಹೇಳುವುದರಿಂದ ತನ್ನ ದೀಕ್ಷಾ ಗುರುವಿನ ಆಜ್ಞೆಯನ್ನು ಯಾವತ್ಜೀವವೂ ಪಾಲಿಸಲೇಬೇಕು. [illegible] ತನಗೆ ದೀಕ್ಷಾಕಾಲದಲ್ಲಿ [illegible] ಅಷ್ಟಾವರಣಗಳನ್ನು ಬಿಡುವನೋ ಅದವಾ [illegible] ಒಂದನ್ನಾದರೂ ಎರಡನ್ನಾದರೂ ಬಿಡುವನೋ ಅವನು ಎಂದಿಗೂ ವೀರಶೈವನೆನಿಸಿಕೊಳ್ಳಲಾರನು. ಮತ್ತು [illegible] ಸಹಿತ ಶಿವಯೋಗಸಂಪನ್ನನೆಂತಲೂ ಕರೆಯಿಸಿಕೊಳ್ಳಲಾರನು. ಅಂದರೆ [illegible] ವೀರಶೈವಯೋಗಿಯೆಂದೆನಿಸನು. ಸಾಧಕನೆನಿಸದಿದ್ದರೆ ಸಾಧ್ಯ (ಮೋಕ್ಷ)ವುಳ್ಳವನೂ ಆಗಲಾರನು. ಆದ್ದರಿಂದ ಸಾಧನಾವಸ್ಥಾಸಹಿತ ಶಿವಯೋಗಿಯೆನಿಸಿಕೊಂಡು ಸಾಧ್ಯರೂಪವಾದ ಶಿವಯೋಗಸಂಪನ್ನನಾಗಬೇಕು. ದೀಕ್ಷಾಕಾಲದಲ್ಲಿ ಶ್ರೀಗುರುಮೂರ್ತಿಯು ಎಲೈ ಶಿಷ್ಯನೇ ಮುಂದು ಮುಂದಿನ ಆಶ್ರಮಧರ್ಮಗಳನ್ನು ನೀನು ಹೊಂದಿದಾಗ ನನ್ನನ್ನೂ ನಾನು ಉಪದೇಶಿಸಿದ ಮಂತ್ರವನ್ನೂ ಬಿಟ್ಟು ಆಚರಿಸು ಎಂದು ಆಜ್ಞಾದೀಕ್ಷೆಯಿಂದಾಗಲಿ ಉಪಮಾದೀಕ್ಷೆಯಿಂದಾಗಲಿ ಅಪ್ಪಣೆ ಮಾಡಿಲ್ಲವು. ಗುರುಲಿಂಗಜಂಗಮಾದ್ಯಷ್ಟಾವರಣನಿಷ್ಠೆಯುಳ್ಳವನಾಗಿರು, ಎಂಬುವದೇ ಅವನ ಅಪ್ಪಣೆಯಾಗಿದೆ. ಆದ್ದರಿಂದ ವೀರಶೈವರೆನಿಸುವ ಸರ್ವರೂ ಗುರುವಾಕ್ಯಪಾಲನವನ್ನು ಮಾಡಿ ಪುನರಾವೃತ್ತಿರಹಿತನಾದ ಮೋಕ್ಷಸಾಮ್ರಾಜ್ಯವನ್ನು (ಫಲರೂಪಶಿವಯೋಗವನ್ನು) ಪಡೆಯಬೇಕಲ್ಲದೆ ಅವನ ವಾಕ್ಯಕ್ಕೆ ವಿರುದ್ಧವಾಗಿ ಆಚರಿಸಿ ನರಕರೂಪವಾದ ಮಹಾದುಃಖವನ್ನು ಹೊಂದಬಾರದೆಂದು ಆಶಿಸುತ್ತೇವೆ.

ವೈಸರಾಯರ ಮಕ್ಕಳಿಗೆ ಅಪಘಾತ

ವೈಸರಾಯರ ಮಕ್ಕಳಾದ ಮೇಜರ್ ವೇವಲ್ ರವರು ಚಿಂದಿತ್ ಪಡೆಗಳೊಡನೆ ಬರ್ಮಾ ರಂಗದಲ್ಲಿ ಕಾದುತ್ತಿದ್ದರಷ್ಟೆ. ಕದನದಲ್ಲಿ ಇವರಿಗೆ ತೀವ್ರ ಅಪಘಾತವಾಗಿದೆ. ಇವರನ್ನು ಚಿಕಿತ್ಸೆಗಾಗಿ ಈಗ ಆಸ್ಪಾಮಿಗೆ ಕರೆತರಲಾಗಿದೆ. ಗುಣಮುಖರಾಗುತ್ತಿರುವರು. ಇವರಿಗೆ ಒಂದು ಕೈ ಮುರಿದಿದೆ. ವೈಸರಾಯರು ತಮ್ಮ ಮಕ್ಕಳನ್ನು ನೋಡುವುದಕ್ಕಾಗಿ ಅಸ್ಸಾಮಿಗೆ ಬಂದು ವಾಪಸ್ ಹೋದರು.

ಯುದ್ಧವಾರ್ತೆ.

ಅರಕಾನಿನಲ್ಲಿ ಶತ್ರು ಆಕ್ರಮಣ ಪ್ರಯತ್ನ

ಅರಕಾನ್ ಕ್ಷೇತ್ರದಲ್ಲಿ ಜಪಾನರು ಆಕ್ರಮಣ ಪ್ರಾರಂಭಿಸಿರುವರು. ಟಾಂಗ್ ಬಜಾರ್ ಬಳಿ ಇರುವ ಒಂದು ಹಳ್ಳಿಗೆ ಶತ್ರುಯೋಧರು ನುಗ್ಗಿದರು. ಆದರ ಮಿತ್ರ ಪಡೆಗಳು ಕೂಡಲೆ ಕಾರ್ಯಕ್ರಮ ಜರುಗಿಸಿ ಹೆಚ್ಚು ಜಪಾನಿ ಯೋಧರನ್ನು ಕೊಲ್ಲಲಾಗಿ ಉಳಿದುಳಿದವರು ಓಡಿಹೋದರೆಂದು ಹೇಳಲಾಗಿದೆ

ಛಾಂಗ್ಸಾ ಪತನ

ಹೂನಾನ್ ಪ್ರಾಂತ್ಯದ ಮುಖ್ಯ ಪಟ್ಟಣವಾದ ಛಾಂಗ್ಸಾಕ್ಕೆ ಜಪಾನರು ಪ್ರವೇಶಿಸಿರುವುದಾಗಿ ಚೀಣಿ ಅಧಿಕೃತ ಪ್ರಕಟನೆ ತಿಳಿಸಿದೆ. ಕಳೆದ ಭಾನುವಾರ ಛಾಂಗ್ಸಾ ತಮ್ಮ ವಶವಾಯಿತೆಂದು ಜಪಾನರು ಹೇಳಿಕೊಂಡಿದ್ದರು. ಹಿಂದೊಮ್ಮೆ ಛಾಂಗ್ಸಾಕ್ಕೆ ಜಪಾನರು ಪ್ರವೇಶಿಸಿದ್ದರು. ಆದರೆ ಚೀಣರು ಮಹಾ ಶೌರ್ಯದಿಂದ ಹೊಡೆದಾಡಿ ಜಪಾನರನ್ನು ಆ ನಗರದಿಂದ ಓಡಿಸಿದ್ದರು. ಈ ನಗರವು ಶತ್ರುವಶವಾದರೆ ಆಗ್ನೇ ಸೀಕೀಂಗ್-ಹಾಂಕೋ ಕ್ಯಾಂಟನ್ ರೈಲ್ವೆ ಜಪಾನರಿಗೆ ಪೂರ್ತಾ ಲಭಿಸಿದಂತಾಗುವುದು. ಅಲ್ಲದೆ ಚೀಣರಿಗೆ ಫಲವತ್ತಾದ ಜಿಲ್ಲೆಯು ಕೈಬಿಟ್ಟು ಹೋದಂತಾಗುವುದೆಂದು ಹೇಳಲಾಗಿದೆ

ಪೆಸಿಫಿಕ್‌ನಲ್ಲಿ ನೌಕಾಯುದ್ಧ

ಫಿಲಿಪ್ಪೈನ್ಸ್ ದ್ವೀಪಗಳಿಗೂ ಮೇರಿಯಾನೋಸ್ ದ್ವೀಪಸ್ತೋಮಕ್ಕೂ ನಡುವೆ ಅಮೇರಿಕನ್ ಮತ್ತು ಜಪಾನಿ ನೌಕಾ ಪಡೆಗಳಿಗೆ ಮಹಾಯುದ್ಧ ಸಂಭವಿಸಿದೆ. ಅಮೇರಿಕನ್ ಸೇನಾನಿ ಅಡ್ಮಿರಲ್ ಚೆಸ್ಟರ್‌ನಿಮಿಟ್ಸ್ ರವರು ಅಮೇರಿಕನ್ ೫ ನೇ ನೌಕಾ ಪಡೆ ಶತ್ರು ನೌಕಾ ಪಡೆಯನ್ನು ಯುದ್ಧದಲ್ಲಿ ಸಿಕ್ಕಿಸಿಕೊಂಡಿರುವುದಾಗಿ ಪ್ರಚುರಪಡಿಸಿದ್ದಾರೆ. ಜಪಾನಿನ ಒಂದು ಭಾರಿ ವಿಮಾನ ವಾಹಕ ನೌಕೆ, ಮೂರು ಟ್ಯಾಂಕರು ನೌಕೆಗಳು ಮುಳುಗಿಸಲ್ಪಟ್ಟವೆಂದೂ ೧೭೦೦೦ ಟನ್ನೇಜಿನ ಇನ್ನೊಂದು ದೊಡ್ಡ ಜಪಾನಿ ವಾಹಕ ನೌಕೆಯ ಮೇಲೆ ೧೦೦೦ ಪೌಂಡು ತೂಕದ ಬಾಂಬುಗಳು ಬಿದ್ದು ಅದಕ್ಕೆ ಜಖಂ ಆಗಿರಬೇಕೆಂದೂ ನಂಬಲಾಗಿದೆ. ಜಖಂಗೊಂಡ ಜಪಾನಿ ನೌಕೆಗಳ ಪೈಕಿ ಎರಡು ವಿಮಾನ ವಾಹಕ ನೌಕೆಗಳೂ ೩ ಡಿಸ್ಟ್ರಾಯರ್ ನೌಕೆಗಳು ಎರಡು ಟ್ಯಾಂಕರ್ ನೌಕೆಗಳೂ ಇವೆಯೆಂದೂ ಎರಡು ಅಮೇರಿಕನ್ ವಿಮಾನ ವಾಹಕ ನೌಕೆಗಳಿಗೂ ಒಂದು ಸಮರ ನೌಕೆಗೂ ಮೇಲ್ಗಡೆ ಕೊಂಚ ಜಖಂ ಆಗಿದೆಯೆಂದೂ ಅಮೇರಿಕನ್ ೫ ನೇ ನೌಕಾಪಡೆ ಶತ್ರುವನ್ನು ಹುಡುಕುತ್ತಾ ಹೊರಟಿದ್ದಾಗ ಅಕಸ್ಮಾತ್ತಾಗಿ ಆ ನೌಕಾ ಪಡೆಯೊಡನೆ ಯುದ್ಧಮಾಡುವ ಅವಕಾಶ ಒದಗಿತೆಂದೂ ಹೇಳಲಾಗಿದೆ.

ಫಿನ್‌ಲೆಂಡ್ ಯುದ್ಧ

ಫಿನ್ಲೆಂಡಿನಲ್ಲಿ, ಕೆರೇಲಿಯನ್ ಇಸ್ತಮಸ್‌ಗೆ ಈಶಾನ್ಯದಲ್ಲಿ ರಷ್ಯನ್ ಸೇನೆ ನೂತನ ದಂಡಯಾತ್ರೆಯನ್ನಾರಂಭಿಸಿದೆ. ಒನೇಗಾ ಸರೋವರಕ್ಕೆ ಉತ್ತರದಲ್ಲೂ, ಲಡೋಗ ಸರೋವರಕ್ಕೆ ಮತ್ತು ಒನೇಗಾ ಸರೋವರಕ್ಕೆ ಮಧ್ಯೆ ಇರುವ ಪ್ರದೇಶದಲ್ಲೂ ರಷ್ಯನರು ಎರಡು ಭಾರಿ ಮುತ್ತಿಗೆಗಳನ್ನು ಹಾಕಿದ್ದಾರೆ. ಈ ಎರಡು ಪ್ರದೇಶಗಳಲ್ಲೂ ಅವರೀಗ ವೇಗವಾಗಿ ಮುಂದುವರಿಯುತ್ತಿದ್ದಾರೆ. ಫಿನ್ಲೆಂಡಿನ ಪ್ರಸಿದ್ಧ ನಗರಗಳಲ್ಲಿ ಒಂದಾದ ಮೆಡ್ವೆಜೆಲ್‌ಗೋರ್ಸ್ಕ್ ನಗರಕ್ಕೆ ರಷ್ಯ ಸೈನಿಕರು ನುಗ್ಗಿ ಅಲ್ಲಿ ಕೆಲವು ಸ್ಥಳಗಳನ್ನಾಕ್ರಮಿಸಿಕೊಂಡಿದ್ದಾರೆ. ಈಗ ಆ ನಗರದ ಬೀದಿಗಳಲ್ಲಿ ಉಗ್ರ ಕಾಳಗ ನಡೆಯುತ್ತಿದೆಯೆಂದು ವರದಿಯಾಗಿದೆ. ಕೆರೇಲಿಯನ್ ಇಸ್ತಿಮಸ್ಸಿನಲ್ಲೂ ರಷ್ಯನ್ ಸೈನಿಕರು ಏಕ ರೀತಿ ಮುಂದೋಡುತ್ತಿದ್ದಾರೆ. ವೈಪುರಿಯಿಂದ ರಷ್ಯನರು ೬ ಮೈಲಿ ದೂರ ಮುನ್ನುಗ್ಗಿದ್ದಾರೆ.

ಚೈಪುರ ನಗರದ ಪತನ !

ಫಿನ್ಲೆಂಡಿನ ಮಹಾದ್ವಾರವಾದ ವೈಪುರಿಯನ್ನು ರಷ್ಯ ಸೈನಿಕರು ಸ್ವಾಧೀನಪಡಿಸಿಕೊಂಡಿದ್ದಾರೆ ಅದಕ್ಕೆ ಮುಂಚೆ ಅವರು ಆ ನಗರದ ಶತ್ರು ರಕ್ಷಣೆಗಳನ್ನೆಲ್ಲಾ ಧ್ವಂಸಮಾಡಿದರು ಮಾ|| ಸ್ಟಾಲಿನರವರು ವಿಶೇಷ ನಿರೂಪ ಹೊರಡಿಸಿ, ವೈಪುರಿ ನಗರವು ರಷ್ಯನರ ವಶವಾದ ಸುದ್ದಿಯನ್ನು ಅದರಲ್ಲಿ ಪ್ರಕಟಿಸಿದ್ದಾರೆ. ಈ ವಿಜಯವನ್ನು ಗಳಿಸಿದ ವೀರರಿಗೆ ಸನ್ಮಾನಮಾಡುವ ಸಲುವಾಗಿ ಮಾಸ್ಕೋದಲ್ಲಿ ೨೨೪ ತೋಪುಗಳನ್ನು ೨೦ ಬಾರಿ ಹಾರಿಸಬೇಕೆಂದೂ ಸ್ಟಾಲಿನ್ನರು ಸೂಚಿಸಿದ್ದಾರೆ ಈ ನಗರವನ್ನು ರಷ್ಯನರು ಹಿಡಿದಿದ್ದರಿಂದ, ಅತ್ಯಂತ ಒಲಿಯುತವಾದ ಫಿನ್ನಿಷ್ ಕೋಟೆಯನ್ನು ಒಡೆದು ಅವರು ೭೦ ಮೈಲಿ ದೂರ ಮುನ್ನುಗ್ಗಿದಂತಾಯಿತು ವೈಪುರಿಯನ್ನು ಹಿಡಿಯಲು ರಷ್ಯನ್ ಸೇನೆ ಮೂರು ಕಡೆಗಳಿಂದ ತ್ರಿಶೂಲಾಕಾರವಾಗಿ ಮುತ್ತಿಗೆ ಹಾಕಿತು, ಅದೇ ಕಾಲದಲ್ಲಿ ಅಲ್ಲಿದ್ದ ಫಿನ್ನಿಷ್ ಸೇನೆಯ ಮುಖ್ಯ ಪಡೆಯನ್ನೂ ಸಹ ಸುತ್ತುಗಟ್ಟಿ ಸದೆಬಡಿಯಲಾರಂಭಿಸಿತು ಕರೇಲಿಯನ್ ಇಸ್ತಮಸ್‌ನಲ್ಲಿರುವ ಫಿನ್ನಿಷ್ ಪಡೆಗಳೀಗ ರಷ್ಯನರ ಬಲೆಗೆ ಬಿದ್ದಿವೆ ಈ ಕಾರ್ಯಾಚರಣೆಗೆ ಬೆಂಬಲವಾಗಿ ರಷ್ಯನ್ ವಿಮಾನಗಳೂ ಸಹ ಫಿನ್ಲೆಂಡಿನಲ್ಲಿ ದಾಳಿ ಮಾಡುತ್ತಾ ಶತ್ರು ಗುರಿಗಳನ್ನು ನಾಶಮಾಡುತ್ತಿವೆ ಈ ವಿಜಯವನ್ನು ಸಾಧಿಸಿರುವುದಲ್ಲದೆ, ಇತರ ಭಾಗಗಳಲ್ಲಿ ರಷ್ಯನ್ ಸೈನಿಕರು ಇನ್ನೂ ೬೦ ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಒಂದೇ ಸಮನಾಗಿ ಪ್ರಗತಿಗಾಮಿಗಳಾಗುತ್ತಿದ್ದಾರೆ

ರಷ್ಯ ಯುದ್ಧದಲ್ಲಿ ಜರ್ಮನರಿಗೆ ೮೦ ಲಕ್ಷ ಸೇನಾ ನಷ್ಟ

ಇಂದಿನ ರಷ್ಯ-ಜರ್ಮನಿ ಯುದ್ಧಾರಂಭವಾಗಿ ೩ ವರ್ಷಗಳು ಆದವು ಈ ಮೂರು ವರ್ಷಗಳ ಅವಧಿಯಲ್ಲಿ ಜರ್ಮನಿಗೆ ೮೦ ಲಕ್ಷ, ರಷ್ಯನರಿಗೆ ೫೦ ಲಕ್ಷ ಸೇನಾನಷ್ಟ ಸಂಭವಿಸಿರುವುದಾಗಿ ಮಾಸ್ಕೋ ಪ್ರಕಟಣೆ ತಿಳಿಸಿದೆ ಬ್ರಿಟನ್ ಅಮೇರಿಕಗಳು ಜರ್ಮನಿಯನ್ನು ಎಡೆಬಿಡದೆ ಪುಡಿ ಪುಡಿ ಮಾಡುತ್ತಿದ್ದುದರ ಫಲವಾಗಿ ರಷ್ಯಕ್ಕೆ ಅಮೂಲ್ಯ ಸಹಾಯವಾಯಿತೆಂದೂ ಜರ್ಮನ್ ಆರ್ಥಿಕ ಬಲ ಕುಗ್ಗಿದೆಯೆಂದೂ ಈಗ ಮಿತ್ರ ರಾಷ್ಟ್ರಗಳ ಸಂಘಟನೆ ಎಂದಿಗಿಂತ ಬಲವಾಗಿದೆಯೆಂದೂ ನಾರ್ಮಂಡಿ ಮುತ್ತಿಗೆ ಇಟಲಿಯಲ್ಲಿ ವಿಜಯಗಳು, ಜರ್ಮನಿಯ ಪೂರ್ಣಪರಾಭವದ ಯೋಜನೆಯ ಅಂಗಗಳೆಂದು ವಿವರಿಸಲ್ಪಟ್ಟಿದೆ

ಸಂಚಾಲಕರಹಿತ ವಿಮಾನ ದಾಳಿ

ಜರ್ಮನರ ಸಂಚಾಲಕನಿಲ್ಲದ ವಿಮಾನಗಳು ಬ್ರಿಟನ್ನಿನ ಮೇಲೆ ೧೦ ಮತ್ತು ೨೦ ನೇ ತಾರೀಖು ದಾಳಿ ಮಾಡಿದವು ಕೆಲವನ್ನು ಮಿತ್ರ ಫೈಟರ್ ವಿಮಾನಗಳು ಒಳ ಪ್ರಾಂತ್ಯಕ್ಕೆ ನುಗ್ಗುವ ಮುನ್ನ ಹೊಡೆದು ಕೆಡವಿದವು ಜರ್ಮನರು ಗಂಟೆಗೆ ೩೦೦ ರಂತೆ ಈ ವಿಮಾನಗಳನ್ನು ಬ್ರಿಟನ್ನಿನ ಮೇಲೆ ಹಾರಿಸಲು ಸಿದ್ಧತೆಗಳನ್ನು ಮಾಡಿಕೊಂಡಿದ್ದರೆಂದೂ ಅವರ ಈ ವಿಮಾನಗಳ ನೆಲೆಗಳ ಮೇಲೆ ಮಿತ್ರ ಬಾಂಬರ್ ವಿಮಾನಗಳು ಒಂದೇ ಸಮನೆ ದಾಳಿ ಮಾಡುತ್ತಿರುವುದರಿಂದ ಈ ವಿಮಾನಗಳ ಹಾವಳಿಯು ಬಹಳ ಕಡಿಮೆಯಾಗಿದೆಯೆಂದೂ ಹೇಳಲಾಗಿದೆ ಈಗ ಇಂಥಾ ವಿಮಾನ ದಾಳಿಗಳ ಹಾವಳಿಗೆ ಒಳಪಟ್ಟವರಲ್ಲಿ ಕೆಲವು ಭಾರತೀಯರ ಸಾವುಗಳಾಗಿವೆ ಇವರಲ್ಲೆಲ್ಲಾ ಮುಖ್ಯಸ್ಥರೆಂದರೆ ಶ್ರೀ ಸುಂತ್ ಆಲಿಯವರು ಭಾರತೀಯ ನಾವಿಕರ ಯೋಗಕ್ಷೇಮಕ್ಕಾಗಿ ಸುರತ್ತಾಲಿಯವರು ಅನೇಕ ವರ್ಷಗಳಿಂದ ಬ್ರಿಟನ್ನಿನಲ್ಲಿ ದುಡಿಯುತ್ತಿದ್ದರೆಂದು ಹೇಳಲಾಗಿದೆ

ಪಶ್ಚಿಮಯುದ್ಧರಂಗ

ಷೆರ್ಬರೋ ನಗರದಲ್ಲಿ ಎಷ್ಟು ಜರ್ಮನ್ ಸೇನೆ ಇದೆ ಎಂಬುದು ಕರಾರುವಾಕ್ಕಾಗಿ ತಿಳಿಯದೆ ಇರುವುದಾದರೂ ೩ ಡಿವಿಜನ್ ಸೇನೆಯೆಂದರೆ ಪಡ್ಡುಗೊಳಿಸಲ್ಪಟ್ಟ, ೫೦ ಸಾವಿರ ಸೇನೆ ಅಲ್ಲಿರಬಹುದೆಂದು ಅಂದಾಜು ಮಾಡಬಹುದೆಂದೂ ಆದರೆ ಆ ಸೇನೆಗೆ ಸಾಕಷ್ಟು ಟ್ಯಾಂಕ್ ಬಲವಿಲ್ಲವೆಂದೂ ಊಹಿಸಲಾಗಿದೆ ಮಾಂಟಿಬೂ ನಗರ ಈಗ ಮತ್ತೆ ಮಿತ್ರವಶವಾಗಿದೆ ಜರ್ಮನರಿಂದ ಅದು ಪಾರುಮಾಡಲ್ಪಟ್ಟಿರುವುದರ ಜೊತೆಗೆ ವೊಲೋನಾ ನಗರಕ್ಕೂ ಮಿತ್ರಸೇನೆ ಮೂರು ಕಡೆಗಳಿಂದ ಮುತ್ತಿಗೆ ಹಾಕಿದೆ ಈಗ ಆ ನಗರದಲ್ಲಿ ಪ್ರಬಲ ಕದನ ನಡೆಯುತ್ತಿದೆ ಟಿಲ್ಲಿ ನಗರದಿಂದ ಜರ್ಮನರನ್ನು ಬ್ರಿಟಿಷ್‌ಪಡೆಗಳು ಓಡಿಸಿವೆ ನಗರದ ನೈರುತ್ಯದಿಗ್ಭಾಗದಲ್ಲಿ ಪರಿಸ್ಥಿತಿ ಅರಿತು ಬರಲು ಬಲವಾದ ಬೇಹುಗಾರ ಪಡೆಗಳು ಹೋಗಿದ್ದವು ಕೇನ್ ಟಿಲ್ಲಿ ಕ್ಷೇತ್ರಗಳಲ್ಲಿರುವ ಜರ್ಮನ್ ಆರ್ಮರ್ಡ್ ಪಡೆಗಳೀಗ ಆತ್ಮರಕ್ಷಣಾ ಕದನದಲ್ಲಿ ತೊಡಗಿವೆ ಸಾಮಗ್ರಿಗಳನ್ನು ಇಳಿಸುವ ಕಾರ್ಯಕ್ಕೆ ಹವಾ ಆತಂಕವುಂಟಾಗಿದೆ ತೀರಪ್ರದೇಶಗಳಮೇಲೆ ಜರ್ಮನ್ ಫಿರಂಗಿಗಳೂ ಪದೇ ಪದೇ ಷೆಲ್ ಹಾರಿಸುತ್ತಿವೆ ಈ ಶತ್ರು ಫಿರಂಗಿಗಳನ್ನು ೪ ಬ್ರಿಟಿಷ್ ಕ್ರೂಸರ್ ನೌಕೆಗಳು ಎದುರಿಸಿ ನಿಂತು ಹೋರಾಡುತ್ತಿವೆ ಈಗ ಕೆಲವು ದಿನಗಳಿಂದ ಶತ್ರು ಇ ಬೋಟುಗಳ ಸುಳಿವೇ ಇಲ್ಲವೆಂದು ಹೇಳಲಾಗಿದೆ.

ನೂತನ ಟ್ಯಾಂಕ್ ವಿನಾಶಿಕೆ

ಮಿತ್ರರಾಷ್ಟ್ರಗಳು ದಂಡಯಾತ್ರೆ ನಡೆಸುವಾಗ ಅನೇಕ ಆಶ್ಚರ್ಯಕರವಾದ ಶಸ್ತ್ರಗಳನ್ನು ಉಪಯೋಗಿಸುವುದಾಗಿ ಡಾ|| ಗೋಬೆಲ್ಸ್‌ರವರು ಹೇಳಿದ್ದು ಈಗ ಕಾರ್ಯತಃ ರೂಪಿಸಲ್ಪಡುತ್ತಿದೆ ಸಂಚಾಲಕನಿಲ್ಲದ ವಿಮಾನಪ್ರಯೋಗವಾಯಿತು ಏಕಮಾತ್ರ ಸಂಚಾಲಕನಿಂದ ನಡೆಸಲ್ಪಟ್ಟ ಸಬ್‌ಮೆರಿನ್ ಪ್ರಯೋಗವಾಯಿತು ಈಚೆಗೆ ಟ್ಯಾಂಕುಗಳನ್ನು ಧ್ವಂಸಮಾಡುವ ಹೊಸ ತರದ ಫಿರಂಗಿಗಳನ್ನು ಜರ್ಮನರು ನಾರ್ಮಂಡಿಯಲ್ಲಿ ಉಪಯೋಗಿಸುತ್ತಿರುವರು. ಈ ಫಿರಂಗಿಗಳು ಸ್ವಯಂಚಲನೆಯುಳ್ಳದ್ದಾಗಿರುವುದು ಇವನ್ನು ಗುರಿಗೆ ಬೀಳುವಂತೆ ಮಾಡಲು ಒಬ್ಬ ಪ್ಯಾದೆಯೇ ಸಾಕೆಂದೂ ಈ ಟ್ಯಾಂಕ್‌ವಿನಾಶಿಕೆಯು ೪ ಅಡಿ ಉದ್ದವಿರುವುದೆಂದೂ ಮೂತಿಯ ಬಳಿ ೮೮ ಮಿಲಿಮೀಟರಿನ ತೆಲ್ಲನ್ನು ಹೊಂದಿಸಲಾಗಿರುವದೆಂದು ಹೇಳಲಾಗಿದೆ

ಜರ್ಮನರು ಶರಣಾಗತರಾಗುವ ಸೂಚನೆ ಇಲ್ಲ

ಷೆರ್ಬರೋ ಪರ್ಯಾಯ ದ್ವೀಪದಿಂದ ಜರ್ಮನರನ್ನು ಅಟ್ಟಿ ಷೆರ್ಬರೋವನ್ನು ತನ್ನಾಧೀನಪಡಿಸಿಕೊಳ್ಳಲು ಮಿತ್ರ ಸೇನೆಗಳೀಗ ಕೊನೆಯ ಕದನಕ್ಕೆ ಆರಂಭಿಸಿವೆ ಷೆರ್ಬರೋ ಪರ್ಯಾಯದ್ವೀಪದ ಭಾಗಗಳಿಂದ ಪ್ರತ್ಯೇಕಿಸಲ್ಪಟ್ಟ ಸುಮಾರು ೧೮ ೧೫ ಸಾವಿರ ಜರ್ಮನ್ ಸೇನೆ ಷೆರ್ಬರೋ ಬಂದರಿನಲ್ಲಿ ಷೆರ್ಬರೋ ನಗರದ ಸುತ್ತ ಇದೆಯೆಂದೂ ಇಲ್ಲಿರುವ ಜರ್ಮನರು ಶರಣಾಗತರಾಗಿ ಬರುವ ಸೂಚನೆಗಳಿಲ್ಲವೆಂದೂ ಹೇಳಲಾಗಿದೆ ಷೆರ್ಬರೋ ಬಂದರಿನ ಸೌಕರ್ಯಗಳನ್ನು ನಾಶಪಡಿಸುವ ಉದ್ಯಮದಲ್ಲಿ ತಾವು ತೊಡಗಿರುವುದಾಗಿಯೂ ಈಗಾಗಲೇ ಸೌಕರ್ಯಗಳನೇಕವು ನಾಶವಾಗಿರುವುದಾಗಿಯೂ ಜರ್ಮನರು ಹೇಳಿಕೊಂಡಿರುವರು

ಶತ್ರು ಗೂಢಚಾರನನ್ನು ಗಲ್ಲಿಗೇರಿಸಲಾಯಿತು

ಬ್ರಿಟನ್ನಿನಲ್ಲಿ ೨೮ ವರ್ಷದ ಒಬ್ಬ ಜರ್ಮನ್ ಗೂಢಚಾರನನ್ನು ಗಲ್ಲಿಗೇರಿಸಲಾಯಿತು ಇದುವರವಿಗೂ ೧೫ ಗೂಢಚಾರರನ್ನು ಹೀಗೆ ಶಿಕ್ಷಿಸಲಾಗಿದೆ ಈ ಗೂಢಚಾರನು ೧೯೪೦ ರಲ್ಲಿ ಜರ್ಮನ್ ಸೈನ್ಯ ಶಾಖೆಯಲ್ಲಿ ಶಿಕ್ಷಣ ಪಡೆದು ಲಿಸ್ಬನ್ ಮುಖಾಂತರ ಇಂಗ್ಲೆಂಡಿಗೆ ಬಂದು ಬ್ರಿಟನ್ನಿನಲ್ಲಿರುವ ಬೆಲ್ಜಿಯಂ ಸರ್ಕಾರ ಕಛೇರಿಯಲ್ಲಿ ಗುಮಾಸ್ತೆಯಾಗಿ ಸೇರಿಕೊಂಡನು. ಕಾಗದ ಪತ್ರಗಳ ಮುಖೇನ ಈ ಗೂಢಚಾರನು ಬ್ರಿಟನ್ನಿನಲ್ಲಿ ಬೆಲ್ಜಿಯನ್ ಸೈನ್ಯಗಳ ಕಾರ್ಯಕ್ರಮ ಮತ್ತು ಅಂಕಿ ಅಂಶಗಳನ್ನು ಜರ್ಮನರಿಗೆ ತಿಳಿಸುತ್ತಿದ್ದನು ಇದನ್ನು ಕಂಡುಹಿಡಿಯಲಾಯ್ತು. ಅಪಾದಿತನು ತಪ್ಪನ್ನು ಒಪ್ಪಿಕೊಂಡನು

ಅಂಡಮಾನ್ ಮೇಲೆ ನೌಕಾ ದಾಳಿ

ಕಳೆದ ಬುಧವಾರ ಮುಂಜಾನೆಯಲ್ಲಿ ಅಂಡಮಾನ್ ದ್ವೀಪಗಳ ಮೇಲೆ ಮಿತ್ರ ನೌಕಾ ಮತ್ತು ವಿಮಾನದಾಳಿಗಳು ನಡೆಯಿತು ಈ ಮಿತ್ರನೌಕೆಗಳು ಪೂರ್ವಪ್ರಾಚ್ಯ ನೌಕಾಪಡೆಗೆ ಸೇರಿದವು ಈ ಪಡೆಯ ಮುಂದಾಳತ್ವವನ್ನು ವೈಸ್‌ಅಡ್ಮಿರಲ್ ಪೊವರ್‌ರವರು ವಹಿಸಿದ್ದರು ಈ ದಾಳಿಯನ್ನು ಶತ್ರುವು ನಿರೀಕ್ಷಿಸಿದ್ದಂತೆ ಕಂಡುಬರಲಿಲ್ಲ ಮಿತ್ರನೌಕಾಪಡೆಯನ್ನು ಪ್ರತಿಭಟಿಸಲು ಶತ್ರುವು ಯಾವ ಕಾರ್ಯಕ್ರಮವನ್ನೂ ಕೈಕೊಂಡಿರಲಿಲ್ಲ ಶತ್ರುವಿಮಾನ ಪ್ರತಿಭಟನೆಯೂ ಸಹ ಇರಲಿಲ್ಲ ಈ ದಾಳಿಗಳ ದೆಸೆಯಿಂದ ಪೋರ್ಟ್‌ಬ್ಲೇರ್‌ದೇವಿನ ವ್ಯವಸ್ಥೆಗಳೆಲ್ಲಾ ಸಂಪೂರ್ಣವಾಗಿ ನಾಶವಾದವು ವಿದ್ಯುತ್ ಉತ್ಪತ್ತಿ ಕಾರ್ಖಾನೆ, ರೇಡಿಯೋ ಲೊಕೇಟರ್ ವ್ಯವಸ್ಥೆಗಳು, ತೈಲಶೇಖರಣೆಗಳು ಧ್ವಂಸವಾದವು ಮಿಲಿಟರಿ ವ್ಯವಸ್ಥೆಗಳೂ ಸಹ ನಾಶವಾಗಿರುವುದಾಗಿ ತಿಳಿದುಬಂದಿದೆ

ವಿಮಾನಾಶ್ರಯಗಳ ರಚನೆಯಲ್ಲಿ ಭಾರತೀಯ ಕಾರ್ಮಿಕರ ಅಮೂಲ್ಯ ನೆರವು

ಜಪಾನಿನ ಮೇಲೆ ಸೂಪರ್ ಫಾರ್ಟ್ರೆಸ್ ವಿಮಾನಗಳಿಂದ ದಾಳಿ ನಡೆಸುವ ಸಲುವಾಗಿ ಆ ವಿಮಾನಗಳಿಗೆ ನೆಲೆಗಳನ್ನು ಸಿದ್ಧಗೊಳಿಸುವುದರಲ್ಲಿ ಸಹಸ್ರಾರು ಮಂದಿ ಭಾರತೀಯರಿಂದ ಅಗಾಧ ನೆರವು ಲಭಿಸಿತು. ವಿಮಾನಾಶ್ರಯಗಳನ್ನು ವಿಸ್ತರಗೊಳಿಸಿ, ಕಟ್ಟಡಗಳನ್ನು ಕಟ್ಟಿ, ರಸ್ತೆಗಳನ್ನು ನಿರ್ಮಿಸುವ ಕಾರ್ಯದಲ್ಲಿ ಭಾರತೀಯ ಮತ್ತು ಅಮೆರಿಕನ್ ಕಾರ್ಮಿಕರು ತೊಡಗಿ ದಿನ ೧ ಕ್ಕೆ ೧೬-೧೮ ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದರೆಂದೂ, ಒಂದೇ ಒಂದು ಹೊತ್ತಿನ ಊಟಕ್ಕಾಗಿ ಮಾತ್ರ ಕೆಲಸವನ್ನು ಸ್ವಲ್ಪಕಾಲ ನಿಲ್ಲಿಸುತ್ತಿದ್ದರೆಂದೂ ನ್ಯೂಯಾರ್ಕ್ ಟೈಂಸ್ ಪತ್ರಿಕೆ ಪ್ರಕಟಿಸಿದೆ

ಭಾರತೀಯ ಸೈನಿಕರಿಗೆ ರೂಸ್ವೆಲ್ಟರಿಂದ ಪ್ರಶಂಸೆ

ಅಧ್ಯಕ್ಷ ರೂಸ್ವೆಲ್ಟರು ಪತ್ರಿಕಾ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ಇಟಲಿಯಲ್ಲಿ ಕಾಳಗ ಮಾಡುತ್ತಿರುವ ಭಾರತೀಯ ಸೈನಿಕರ ಪರಾಕ್ರಮವನ್ನು ಕೊಂಡಾಡಿ ಅವರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು ಆ ಸೈನಿಕರು ಬಹು ಚೆನ್ನಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ ಎಂಬುದಾಗಿ ರೂಸ್ವೆಲ್ಟರು ಹೇಳಿದರು

ಬಿಕ್ಕಟ್ಟನ್ನು ಪರಿಹರಿಸಲು ಅಮೆರಿಕದ ಆಸಕ್ತಿ

ದೆಹಲಿಯಲ್ಲಿರುವ ಅಮೆರಿಕಾ ರಾಯಭಾರ ಕಛೇರಿಯ ಸಂಚಾಲಕರಾದ ಶ್ರೀ ಲಾಟನ್ ಬ್ಯಾರಿಯವರು ಬೊಂಬಾಯಿಗೆ ಆಗಮಿಸಿದ್ದಾರೆ ಬೊಂಬಾಯಿನಲ್ಲಿ ಶ್ರೀ ಬ್ಯಾರಿಯವರು ೫ ದಿನಗಳಿರುವರು ಬೊಂಬಾಯಿನಲ್ಲಿರುವ ರಾಜಕೀಯ ಪ್ರಮುಖರನ್ನು ನೋಡಿ ಭಾರತ ಪರಿಸ್ಥಿತಿಯ ಬಗ್ಗೆ ತಿಳುವಳಿಕೆ ಪಡೆಯಲಿದ್ದಾರೆ. ಜಯಕರರನ್ನು ಸಹ ಬ್ಯಾರಿಯವರು ನೋಡಲಿದ್ದಾರೆಂದು ತಿಳಿದುಬಂದಿದೆ. ಜಯಕರರೊಡನೆ ಬ್ಯಾರಿಯವರ ಮಾತುಕತೆಗಳು ಸರಿಯಾಗಿದ್ದಲ್ಲಿ ಗಾಂಧಿಜಿಯವರನ್ನು ಸಹ ಬ್ಯಾರಿಯವರು ಭೇಟಿಮಾಡುವರಂತೆ

ಸ್ವೀಕಾರ

ಕಲಘಟಗಿ ತಾ|| ಬೆಲವಂತರ ಗ್ರಾಮದಲ್ಲಿರುವ ಶ್ರೀ ಚನ್ನಬಸವೇಶ್ವರ ಶಿವಯೋಗಿಗಳ ಪುಣ್ಯತಿಥಿಯು ವಿಶೇಷ ವೈಭವದಿಂದ ನೆರವೇರಿದ ಸಮಯದಲ್ಲಿ ಪ್ರಭಾ ಪೋಷಣಾರ್ಥೋಸ್ಕರ ಸಮರ್ಪಿಸಿದ 2 ರೂ. ಗಳು ಮಲ್ಲಯ್ಯನವರು ಪೂಜಾರ ತೋಪಿಶಾಳ ಇವರ ದ್ವಾರಾ ತಲ್ಪಿರುತ್ತವೆ.

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೧೦×೧೬ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗ ಸಮಾರಂಭದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೬—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೪—೦
ಸದ್ಯಃ ಶ್ರೀಶೈಲ ಪೀಠಾರೋಹಣಮಾಡಿದವರು ಇವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀ ಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಪದೇಶಪಡೆಯುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಪಂಡಿತ ಕಾಶೀನಾಥಶಾಸ್ತ್ರಿಗಳವರಿಗೆ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವದು. ವೀರಶೈವಮತದಲ್ಲಿ ಸದ್ಯಃ ದೊರೆಯುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವದು. ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಅವರ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ವಾಚಕರಿಗೆ ವೇದ್ಯವಾಗುವದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೬೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಛಾಯಾಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅನಘ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೨ನೆಯ ಆವೃತ್ತಿ)	೧ ಆಣೆ
ಸನ್ನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೩ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ಬಿಲ್ವಮಾಹಾತ್ಮ್ಯ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೬ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
* ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
* ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಸುಂದರಮುದ್ರಣ)	೧ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೨ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

* ಈ ಗುರುತು ಹಾಕಿರುವ ಪುಸ್ತಕಗಳು ಮುಗಿದುಹೋಗಿರುವುದರಿಂದ ದೊರೆಯುವುದಿಲ್ಲ. ಕೆಲವು ಪುಸ್ತಕಗಳು ಮುಗಿಯುತ್ತ ಬಂದಿರುವುದರಿಂದಲೂ ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದಲೂ ಅವುಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಚಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಷೇತ್ರವಿರಾಜಿತರ್ ಪರಶಿವಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೮ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩ನೇ ಜುಲೈ ೧೯೪೪ [ಸಂಚಿಕೆ ೧೦

ಗುರು ಗದ್ದುಗೆಯ ಶೋಧ
ನೆಲ್ಲಿಹರವಿ

ಕಲ್ಲುಘಟಿಗಿ ತಾಲ್ಲೂಕ ನೆಲ್ಲಿಹರವಿ ಗ್ರಾಮಕ್ಕೆ ತಾ|| ೨೮ ೫ ೧೯೪೪ ನೇ ಭಾನುವಾರ ಪುರವರ್ಗ ಶಿವಪುರ ಮಠಾಧ್ಯಕ್ಷ ಶಿವಯೋಗಿ ಶ್ರೀ ಕಾಲಮಹೇಸ್ವಾಮಿಗಳು ದಯಮಾಡಿಸಲು ನೆಲ್ಲಿಹರವಿ ಭಕ್ತರು ಅತ್ಯಂತ ಭಕ್ತಿಯಿಂದ ಸೇವಾಸತ್ಕಾರಾದಿಗಳನ್ನರ್ಪಿಸಿದರು ತಾ|| ೩೧ ೫ ೪೪ ಬುಧವಾರ ಸಾಯಂಕಾಲ ಭಕ್ತಾದಿಗಳನ್ನು ದೇವಸ್ಥಾನಕ್ಕೆ ಕರೆಯಿಸಿ ಜಗದ್ಗುರು ಪಂಚಾಚಾರ್ಯರ ದಿವ್ಯಾವತಾರ ಮಹಾಚಾರ್ಯರ ಲೀಲಾ ವಿಷಯಗಳನ್ನು ವೀರಶೈವರ ಆಚಾರ ವಿಚಾರ ಲಿಂಗಧಾರಣಾದಿ ವಿಷಯಗಳನ್ನೂ ಸುಮಾರು ೨ ಘಂಟೆಯವರೆಗೂ ಬೋಧಿಸಿದರು ಶ್ರೀಗಳ ಸದ್ಬೋಧಾಮೃತವನ್ನು ಪಾನಮಾಡಿದ ಭಕ್ತ ವೃಂದವು ಆನಂದಸಾಗರದಲ್ಲಿ ತೇಲಾಡುತ್ತಿರಲು ಸದ್ರಿ ಗ್ರಾಮದ ಪಾಟೀಲ ಪುಟ್ಟನಗೌಡ್ರು ಆ ಗ್ರಾಮದ ಹಿರೇಮಠದ ಷ|| ಬ್ರಂ|| ಪಟ್ಟದ ಮಹೇಸ್ವಾಮಿಗಳ ಪೂರ್ವ ಮಠವು ಬಿದ್ದು ನೆಲಸಮವಾಗಿ ಅದರಲ್ಲಿದ್ದ ಮಹಾತ್ಮ ಮಹೇಸ್ವಾಮಿಗಳವರ ಗದ್ದುಗೆಯು ಕೂಡ ೩೦ ೪೦ ವರ್ಷಗಳಿಂದ ಭೂಮಿಯಲ್ಲಿ ಹೂತು ಮುಚ್ಚಿ ಹೋಗಿದ್ದು ಅದನ್ನು ಪೂಜಾದಿಗಳಿಗೆ ಅನುಕೂಲಿಸುವಂತೆ ಮಾಡಬೇಕೆಂದು ಕೇಳಿಕೊಂಡರು ಅಗ್ಗಿ ಶ್ರೀಗಳು ಎಲ್ಲಾ ಭಕ್ತಾದಿಗಳಿಗೂ ನಾಳೆ ಸರ್ವರೂ ಕೆಲಸಕ್ಕೆ ಹಾಜರು ಆಗಬೇಕೆಂದು ಹೇಳಿ ಮಹಾಚಾರ್ಯರ ಜಯಘೋಷದೊಡನೆ ಸಭಾ ವಿಸರ್ಜನೆ ಮಾಡಿದರು ಮರುದಿನ ಉದಯಕ್ಕೆ ಸರ್ವರೂ ಹಾಜರಾಗಿ ಶ್ರೀಗಳ ಅಪ್ಪಣೆಯಂತೆ ಬಿದ್ದು ಹೋದ ಮಠದಲ್ಲಿ ಅಗೆದು ಶೋಧಿಸಲು ಮಹಾಪುರುಷರ ಗದ್ದುಗೆಯು ಒಯಲಿಗೆ ಬೀಳಲು ಎಲ್ಲರೂ ಆನಂದತುಂದಿಲ ಹೃದಯರಾಗಿ ಗುರುಗದ್ದುಗೆಯ ದರ್ಶನ ತೆಗೆದುಕೊಂಡರು ತಾ|| ೨ ೬ ೪೪ ನೇ ಶುಕ್ರವಾರ ಗದ್ದುಗೆಯ ಪ್ರತಿಷ್ಠಾದಿಕಾರ್ಯಗಳು ನಡೆದು ಶ್ರೀ ಗುರುಪಾದಪೂಜೆ ತೀರ್ಥ ಸ್ವೀಕಾರಾದಿ ಕಾರ್ಯಗಳು ನಡೆದು ಮಹಾಗಣಾರಾಧನೆಯು ನಡೆಯಿತು ಸುಮಾರು ೧೫೦ ಬಡಜನಗಳಿಗೆ ಅನ್ನಸಂತರ್ಪಣೆಯಾಯಿತು ಈ ಕಾರ್ಯದಲ್ಲಿ ರಾ|| ಶ್ರೀ ಬಸವನಗೌಡ್ರು ಚನ್ನಪ್ಪಗೌಡ್ರು ಹಿರೇಮಠದ ಸಿದ್ರಾಮಯ್ಯನವರು ಶಿವಲಿಂಗಯ್ಯನವರು ಮಾಸ್ತರು ಮಲ್ಲಿಕಾರ್ಜುನಯ್ಯ ನವರೇ ಮೊದಲಾದವರು ಬಹು ಶ್ರದ್ಧೆಯಿಂದ ಕೆಲಸ ಮಾಡಿದರು ಪಂಚಾಚಾರ್ಯ ಭಜನಾಮಂಡಳಿಯವರಿಗೆ ಶ್ರೀಗಳು ಮಹಾಚಾರ್ಯರ ಭಜನಾಪುಸ್ತಕಗಳನ್ನಾಶೀರ್ವದಿಸಿ ಮುಂದೆ ಅವಿಚ್ಛಿನ್ನವಾಗಿ ಮಹಾಚಾರ್ಯರ ಭಜನೆಯನ್ನು ವೃದ್ಧಿಗೊಳಿಸಬೇಕೆಂದು ಅಪ್ಪಣೆ ಮಾಡಿದರು ಈ ಗ್ರಾಮದ ಭಕ್ತಮಂಡಳಿಯವರಿಗೆ ಶ್ರೀ ಜಗದಾಚಾರ್ಯರು ಸಕಲ ಸಂಪತ್ಸಮೃದ್ಧಿಯನ್ನೀಯಲೆಂದು ಜಗದಾಚಾರ್ಯರನ್ನು ಪ್ರಾರ್ಥಿಸುತ್ತೇನೆ

ವೀರಶೈವ ಮಠ ಭಿಮಾಪಿ

ಹೊಗೆಸೊಪ್ಪುಸೇವನೆಯ ಕೆಡಕು

ಸಿಗರೇಟು, ಬೀಡಿ, ಚುಟ್ಟಾ ಮುಂತಾದ ಹೊಗೆ ಬತ್ತಿಗಳನ್ನು ಸೇದುವ ಅಭ್ಯಾಸವು, ಈಚೀಚೆಗೆ ಜನಗಳಲ್ಲಿ ಒಂದು ದೊಡ್ಡ ವ್ಯಸನವಾಗಿ ಅಧಿಕ ಪ್ರಚಾರಕ್ಕೆ ಬರಹತ್ತಿದೆ ಅಷ್ಟೇಕೆ? ಈ ನಮ್ಮ ಬಡದೇಶದಲ್ಲಿ, ಈಗ ಹೊಗೇಸೊಪ್ಪನ್ನು ಉಪಯೋಗಿಸದ ಶುದ್ಧಾತ್ಮನಾರೆಂದು ನಿಶ್ಚಯಿಸುವುದೇ ಕಷ್ಟವೆಂದು ಹೇಳಬಹುದು ಹೊಗೆಸೊಪ್ಪನ್ನು ನಸ್ಯದ ರೂಪದಿಂದಾಗಲಿ, ತಾಂಬೂಲಕ್ಕೆ ಸೇರಿಸಿಯಾಗಲಿ, ಹೊಗೆಬತ್ತಿಗಳ ರೂಪದಿಂದಾಗಲಿ ಉಪಯೋಗಿಸುವುದು ಸರ್ವಸಾಮಾನ್ಯವಾಗಿದೆ ಮೊದಮೊದಲು ಅಮೇರಿಕದ ಇಂಡಿಯನ್ ಜನರೇ ಹೊಗೆಸೊಪ್ಪಿನ ಕೃಷಿಯನ್ನು ಆರಂಭಿಸಿದವರಾದರೂ, ಈಗ ಅಲ್ಲಿಯ ಜನರು ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಅದನ್ನು ಒಂದು ಅಂಗವಾಗಿ ಉಪಯೋಗಿಸುತ್ತಿದ್ದವರು ಬೇರೆ ಪಂಗಡದವರಾದರೂ ತಮ್ಮಲ್ಲಿ ಕಾರ್ಯಾರ್ಥಿಗಳಾಗಿ ಅಥವಾ ಅಭ್ಯಾಗತರಾಗಿ ಬಂದಾಗ, ಬೆಂಕಿಯ ಮುಂದೆ ಎಲ್ಲರೂ ಸುತ್ತಿ ಕುಳಿತು ಮಾತಾಡುತ್ತ, ಒಬ್ಬೊಬ್ಬರು ಒಂದೆರಡಾವರ್ತಿ ಕುಡಿದ ಬೀಡಿ, ಚುಟ್ಟಾಗಳನ್ನು ತಮ್ಮ ಪಕ್ಕದಲ್ಲಿರುವವರಿಗೆ ಕೊಡುತ್ತ, ಹೀಗೆ ಎಲ್ಲರಿಗೂ ಅನ್ಯೋನ್ಯ ಸೂಚಕವಾದ ಸತ್ಕಾರಗಳನ್ನು ತೋರಿಸುವ ಪದ್ಧತಿಯುಂಟು ವಿಶೇಷವಾದ ಕೂಟಗಳು ಕೂಡಿದಾಗಲೂ ಕಾರ್ಯಾರಂಭಕ್ಕೆ ಮೊದಲು ಇದೇ ರೀತಿಯಾದ ಆಚರಿಸುವರು ಹೊಗೆಸೊಪ್ಪಿನ ಪೂರ್ವಚರಿತ್ರೆಯೂ, ಅದರ ಉಪಯೋಗಕ್ರಮವೂ ಇಷ್ಟರಲ್ಲಿಯೇ ಪರ್ಯವಸಾನವಾಗಿತ್ತು ಆದರೆ ಈಚೀಚೆಗೆ ಈ ಹೊಗೆಸೊಪ್ಪಿನ ಮಹಿಮೆಯನ್ನು ಹೆಚ್ಚಿಸಿ, ಅದನ್ನು ವಿಶೇಷ ಪ್ರಚಾರಕ್ಕೆ ತಂದವರು ಬಿಳಿಜನರೆಂದೇ ಹೇಳಬೇಕು ಅವರು ಪ್ರತಿದಿನವೂ ತಪ್ಪದೆ ಹೊಗೆ ಕುಡಿಯುವ ಅಭ್ಯಾಸವನ್ನು ತಮ್ಮಲ್ಲಿ ಆಚರಣೆಗೆ ತಂದುದು ಮಾತ್ರವಲ್ಲದೆ ಅವರೊಡನೆ ಈ ದುರಭ್ಯಾಸದ ಸೋಂಕು ಪ್ರಪಂಚದ ಎಲ್ಲಾ ಭಾಗಗಳಿಗೂ ಹರಡುವಂತಾಯಿತು

ಹೊಗೆಸೊಪ್ಪೆಂಬುದು ಒಂದು ತರಹದ ವಿಷವಸ್ತುವಾದುದರಿಂದ ಅದನ್ನು ಯಾವ ರೂಪದಿಂದಲೇ ಆದರೂ ಬಿಡದೆ ಸೇವಿಸುತ್ತ ಬಂದರೆ ದೇಹದಲ್ಲಿ ಆ ವಿಷವೇ ಪ್ರಮೊದಮೊದಲು ಕೇವಲ ಸೂಕ್ಷ್ಮವಾದ ಮರ್ಮಾವಯವಗಳಲ್ಲಿ ವ್ಯಾಪಿಸಿ, ಮೊದಲೇ ದುರ್ಬಲವಾದ ಆ ಅವಯವಗಳನ್ನು ಮತ್ತಷ್ಟು ದುರ್ಬಲವಾಗಿ ಮಾಡುವುದು ಹೊಗೇಸೊಪ್ಪಿನ ಅಭ್ಯಾಸವು ಹೆಚ್ಚುತ್ತ ಬಂದಷ್ಟೂ, ಮನೋಬಲವು ಕುಗ್ಗುತ್ತ ಬರುವುದು ಹೃದಯದಲ್ಲಿ ಉದ್ರೇಕವು ತೋರಿ, ಎದೆಯ ದುಡಿತವೇ ಮುಂತಾದ ಕೆಟ್ಟ ಬಾಧೆಗಳು ಅಂಕುರಿಸುವುವು ಹೊಗೆಸೊಪ್ಪಿನಲ್ಲಿ ವಿಷಸಂಬಂಧವಿದೆಯೆಂಬುದಕ್ಕೆ ನಮಗೆ ನಿದರ್ಶನವೇ ಬೇಕಾಗುವುದಿಲ್ಲ ಅಭ್ಯಾಸವಿಲ್ಲದವರ ಮೂಗಿಗೆ ಒಂದಿಷ್ಟು ನಸ್ಯವನ್ನು ಮೂಸಿಸಿದರೆ, ಆಗ ಅವರ ಅವಸ್ಥೆಯೇನೆಂಬುದನ್ನು ನೀವು ನೋಡಿರಬಹುದು ಹಾಗೆಯೇ ಮೊದಲು ತಾಂಬೂಲದೊಡನೆ ಮೆಲ್ಲುವ ಅಭ್ಯಾಸವನ್ನು ಮಾಡುವವರಿಗೂ, ಹೊಗೆಬತ್ತಿಗಳನ್ನು ಮೊದಮೊದಲು ಸೇದುವವರಿಗೂ ದುಸ್ಸಹವಾದ ಕಷ್ಟವಾಗುವುದು ಇದಕ್ಕೆಲ್ಲ ವಿಷಸಂಬಂಧವೇ ಕಾರಣವು ವಿಷಕ್ರಿಮಿಗಳಂತೆ ಕ್ರಮಕ್ರಮವಾಗಿ ಆ ವಿಷವೇ ಅವರ ಮೈಗೆ ಅಂಟಿಕೊಂಡಮೇಲೆ, ಅಷ್ಟೇನೂ ಕಷ್ಟವು ತೋರದು ಕೊನೆಕೊನೆಗೆ ಮದ್ಯಪಾನ ವ್ಯಸನದಂತೆ ಅದನ್ನು ಬಿಟ್ಟಿರುವುದೂ ಸಾಧ್ಯವಿಲ್ಲದಂತಾಗುವುದು ಅದರಿಂದೇನು? ಮೈಗೆ ಅದರಿಂದೇನೂ ಬಾಧೆಯಿಲ್ಲದೆ ಹಿತಕರವಾದಂತೆ ತೋರಿದರೂ, ಒಳಗೊಳಗೆ ಅದು ದೇಹವನ್ನು ಹಾಳುಮಾಡುವುದು ಅನೇಕ ವರ್ಷಗಳವರೆಗೆ ಹೊಗೆಸೊಪ್ಪನ್ನು ಉಪಯೋಗಿಸುತ್ತಿದ್ದರೂ ತನ್ನ ಮೈಗೇನೂ ವಿರೋಧವಿಲ್ಲವೆಂದು ನೀನು ತಿಳಿಯಬಹುದು ಆದರೆ, ಅದರ ವಿಷವು ಒಳಗೊಳಗೆ ನಿಮಗೆ ತಿಳಿಯದಂತೆ ಬಹು ನಿಧಾನವಾಗಿ ಕೆಲಸಮಾಡುತ್ತಿರುವುದು ಬಹಳವಾಗಿ ಹೊಗೆಸೊಪ್ಪನ್ನು ಉಪಯೋಗಿಸುತ್ತಿದ್ದವನು ಒಂದೆರಡು ದಿನಗಳವರೆಗೆ ಅದನ್ನು ನಿವೃತ್ತಿಮಾಡಿ ನೋಡಿದರೆ, ಅವನಿಗೆ ರಾತ್ರಿಯೆಲ್ಲವೂ ನಿದ್ರೆಯೇ ಬಾರದು ಅವನ ಮೈಯಲ್ಲಿ ನರಗಳೆಲ್ಲ ಸಡಿಲ ಕತ್ತರಿಸಿದಂತೆ ತೋರುವುದು ತಿರುಗಿ ಅವನು ತನ್ನ ಮೊದಲಿನ ಅಭ್ಯಾಸವನ್ನು ಆರಂಭಿಸುವವರೆಗೆ ಮೃತನಂತೆ ಮೃತಪ್ರಾಯನಾಗಿ ತೋರುವನು ಆದರೆ, ಈ ಹೊಗೆಸೊಪ್ಪಿನ ಅಭ್ಯಾಸದ ಪರಿಣಾಮವೇನೆಂದು ನೋಡಿದರೆ, ಆ ದುರಭ್ಯಾಸವು ಹೆಚ್ಚಿದಷ್ಟೂ, ತನಗೆ ದೂರವಾಗಿರುವ ಮೃತ್ಯುದೇವತೆಯನ್ನು ಹತ್ತಿರ ಹತ್ತಿರಕ್ಕೆ ಬರಮಾಡಿಕೊಂಡಂತಾಗುವುದೇ ಹೊರತು ಬೇರೆಯಲ್ಲ

ಈ ಮೇಲ್ಕಂಡ ದುರಭ್ಯಾಸವು ಆತ್ಮಘಾತಕ್ಕೆ ಕಾರಣವೆಂಬುದು ಮಾತ್ರವಲ್ಲ "ಸ್ವಯಂ ನಷ್ಟಃ ಪರಾನ್ನಾಶಯತಿ" "ತಾನು ಕೆಟ್ಟ ಕೋತಿ ವನವನ್ನೆಲ್ಲ ಕೆಡಿಸಿತು" ಎಂಬ ಗಾದಿ ಮಾತುಗಳಂತೆ, ಜನಸಾಮಾನ್ಯಕ್ಕೂ ಅಂತಹದರಿಂದ ದೊಡ್ಡ ಅಪಾಯಗಳೂ, ತೊಂದರೆಗಳೂ ಬಹಳವಾಗಿವೆ ಅನೇಕ ವ್ಯಾಧಿಗಳ ಸೋಂಕು ಮುಖ್ಯವಾಗಿ ಕ್ಷಯರೋಗದ ಸೋಂಕು, ಹೊಗೆಬತ್ತಿಗಳನ್ನು ಸೇವಿಸುವುದರಿಂದಲೇ ಸಾಮಾನ್ಯ ಜನಗಳಿಗೂ ವ್ಯಾಪಿಸಲು ಮೂಲಕಾರಣವಾಗುವುದು ಅವರು ಬಾಯಿಂದ ಹಾರಿಸುವ ಹೊಗೆ ಅವರು ಆಗಾಗ ಉಗುಳುವ ಎಂಜಲು ಒಬ್ಬರು ಕಚ್ಚಿದ ಬತ್ತಿಯನ್ನು ಮತ್ತೊಬ್ಬರು ಬಾಯಲ್ಲಿಟ್ಟುಕೊಳ್ಳುವುದು, ಇವೆಲ್ಲ ವ್ಯಾಧಿಗಳು ಹರಡುವುದಕ್ಕೆ ಬಹಳ ಸಹಕಾರಿಗಳು

ಮುಖ್ಯವಾಗಿ ಹೊಗೆಸೊಪ್ಪಿನ ಸೇವನೆಯಲ್ಲಿ ಪದೇ ಪದೇ ಬಾಯಿಂದ ಎಂಜಲನ್ನುಗುಳುತ್ತಲೇ ಇರಬೇಕಾಗುವುದು ಈ ಉಗುಳಿನಿಂದ ಉಂಟಾಗುವ ಕೆಡಕುಗಳಾದರೂ ಅಪಾರವಾಗಿವೆ ಅನೇಕ ವ್ಯಾಧಿಗಳ ಸೋಂಕು ಇದರಿಂದಲೇ ಹರಡುವುದು ಆದುದರಿಂದ ಸಿಕ್ಕಿದಕಡೆ ಉಗುಳುವ ದುರಭ್ಯಾಸವು ಜನಗಳಲ್ಲಿ ಕಡಿಮೆಯಾದಷ್ಟೂ ಕ್ಷಯರೋಗದಿಂದ ಜನಗಳಲ್ಲಿ ಮರಣಸಂಖ್ಯೆಯೂ ಅಷ್ಟು ಕಡಿಮೆಯಾಗುವುದರಲ್ಲಿ [illegible]

ಪಂಚಾಚಾರ್ಯಪ್ರಭಾ.

೧೯೪೪ನೆಯ ಜುಲೈ ತಾ|| ೩ನೇ ಸೋಮವಾರ

ಮಠಾಧಿಕಾರಿಗಳು

ಮತಸ್ಥಾಪನಾಚಾರ್ಯರು ವೀರಶೈವರಿರುವ ಪ್ರತಿಯೊಂದು ಗ್ರಾಮದಲ್ಲಿಯೂ ಗುರುಮಠಗಳನ್ನು ಸ್ಥಾಪಿಸಿ ಗುರುಗಳ ವಿಷಯದಲ್ಲಿ —

ಗುರುಮಠಗಳನ್ನು ಶಿವಾಲಯಗಳನ್ನಾಗಿಯೂ ಅಲ್ಲಿರುವ ಗುರುವನ್ನು ಸಾಕ್ಷಾತ್ ಶಿವನನ್ನಾಗಿಯೂ ಭಾವಿಸಬೇಕೆಂದು ಅನುಜ್ಞೆಯನ್ನಿತ್ತಿರುವರು. ಇದನ್ನು ಪ್ರಶಸ್ತ್ಯವು ಗುರುಗಳಿಗೂ ಗುರುಮಠಗಳಿಗೂ ಬರಬೇಕಾದರೆ, ಗುರುಗಳು ಮತ್ತು ಗುರುಮಠಗಳು ಎಷ್ಟು ಪರಿಶುದ್ಧವಾಗಿರಬೇಕೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಹಿಂದೆ ಗುರುಗಳೆಂಬುವರು ಭಕ್ತಿ, ಜ್ಞಾನ, ವೈರಾಗ್ಯಗಳೆಂಬ ರತ್ನತ್ರಯವನ್ನು ಯಾವಾಗಲೂ ತಮ್ಮ ಹೃದಯಸ್ಥಾನದಲ್ಲಿ ಧರಿಸಿದ್ದು ಶಿಷ್ಯರನ್ನುದ್ಧರಿಸುವ ವೃತ್ತಿಯೊಂದನ್ನು ಮಾತ್ರ ಅವಲಂಬಿಸಿದ್ದರಲ್ಲದೆ ಇನ್ನಾವ ಲೌಕಿಕವೃತ್ತಿಗಳಿಗೂ ಪ್ರವೇಶಿಸುತ್ತಿರಲಿಲ್ಲ. ಸದಾ ವೇದಾಧ್ಯಯನ ಘೋಷದಿಂದಲೂ ಶಿವಯೋಗಾಭ್ಯಾಸದಿಂದಲೂ, ಲಿಂಗಾಂಗಸಾಮರಸ್ಯಬೋಧಕವಾದ ಶಾಸ್ತ್ರಾರ್ಥವಿಚಾರದಿಂದಲೂ ತಪಶ್ಚರ್ಯೆಯಿಂದಲೂ ಗುರುಮಠಗಳು ಯಾವಾಗಲೂ ಬರಹೋಗುವ ಭಕ್ತರ ಮನಸ್ಸನ್ನು ಆಕರ್ಷಿಸುತ್ತಿದ್ದವು. ಭಕ್ತರು ಕೆಲವೆಲ್ಲ ವ್ಯವಸಾಯ, ವ್ಯಾಪಾರ ಮುಂತಾದ ತಮ್ಮ ಅನೇಕ ವಿಧವಾದ ಕಸಬುಗಳಲ್ಲಿ ಆಯಾಸಪಟ್ಟು ವಿಶ್ರಾಂತಿಗೋಸ್ಕರ ಗುರುಮಠಗಳಿಗೆ ಹೋಗಿ ಗುರುಗಳ ದರ್ಶನವನ್ನು ಮಾಡಿ ಗುರುಗಳ ಬೋಧಾಮೃತಪಾನದಿಂದ ತೃಪ್ತರಾಗಿ ಬರುತ್ತಿದ್ದರು. ಪೂಜ್ಯಪೂಜಕಭಾವವು ಇಷ್ಟು ಗಟ್ಟಿಗೊಳ್ಳುವುದಕ್ಕೆ ಮಠಾಧಿಕಾರಿಗಳು ದಾಹ್ನಿಯನ್ನು ಶಾಂತಗೊಳಿಸುವ ಮೇಘಗಳಂತೆ ಶಿಷ್ಯರ ಭವತಾಪವನ್ನು ಪರಿಹರಿಸುವುದರಲ್ಲಿ ಜಾಗರೂಕರಾಗಿದ್ದುದೇ ಕಾರಣವಾಗಿದ್ದಿತು. ಮತ್ತು ಶಿಷ್ಯರು ಯಾವಾಗಲೂ ಧರ್ಮದಿಂದ ಚ್ಯುತರಾಗದಂತೆ ಮನೋವೃತ್ತಿಯನ್ನು ತಿದ್ದುತ್ತ ಪ್ರಪಂಚವನ್ನು ಆಸ್ತಿಕಮಯವನ್ನಾಗಿ ಮಾಡುವುದೇ ಗುರುಗಳ ಮುಖ್ಯಗುರಿಯಾಗಿದ್ದಿತು. ಕಾಲಪರಿಪಾಕದಿಂದ ಇತ್ತೀಚೆಗೆ ಅಂಥ ಮಠಾಧಿಕಾರಿಗಳಾದ ಗುರುಗಳು ತಮ್ಮ ಘನತರವಾದ ವೈದಿಕವಿದ್ಯೆಯಿಂದ ಬಿಡಲ್ಪಟ್ಟವರಾಗಿ ಲೌಕಿಕರಂತೆ ತಾವೂ ಸಹ ವ್ಯವಸಾಯ ವ್ಯಾಪಾರ ಮುಂತಾದ ಲೌಕಿಕವೃತ್ತಿಗಳನ್ನವಲಂಬಿಸುತ್ತ ಬಂದುದರಿಂದ ಅವರ ಹೃದಯವು ಸತ್ವಶೂನ್ಯವಾಗಿ ಮಠಗಳೂ ಸಂಸಾರಿಗಳ ದುಃಖಮಯವಾದ ಮನೆಗಳಾಗಿ ಪರಿಣಮಿಸಿದವು. ಬಹುಕಾಲದಿಂದ ಗುರುಗಳ ಹೃದಯಸ್ಥಾನವನ್ನು ಆಶ್ರಯಮಾಡಿಕೊಂಡಿದ್ದ ಶಮದಮಾದಿಗಳು ನಾಶವಾಗಿ ಕಾಮಕ್ರೋಧಾದಿದುರ್ಗುಣಗಳು ನೆಲೆಗೊಂಡವು. ಇದರಿಂದ ಭಕ್ತರಿಗೆ ಗುರುಗಳಲ್ಲಿರುವ ಪ್ರೀತಿಯು ಕಡಿಮೆಯಾಗುತ್ತ ಬಂದಿತು. ಲೋಕದಲ್ಲಿ ಯಾಚಕನು ಧನಿಕನನ್ನಾಶ್ರಯಮಾಡುವುದನ್ನು ಬಿಟ್ಟು ತನ್ನಂತೆ ಇರುವ ಮತ್ತೊಬ್ಬ ಯಾಚಕನನ್ನಾಶ್ರಯಮಾಡದಂತೆ ಶಾಸ್ತ್ರಾಧ್ಯಯನಮಾಡದೆ ಶಮದಮಾದಿಗುಣಸಂಪತ್ತಿಯಿಲ್ಲದ ತನ್ನಂತೆ ದುಃಖದಿಂದ ನರಳುತ್ತಿರುವ ಜ್ಞಾನಶೂನ್ಯರಾದ ಗುರುಗಳನ್ನು ಯಾರೂ ಆಶ್ರಯಮಾಡುವುದಿಲ್ಲ. ಆದುದರಿಂದ ಗುರುಗಳು ತಮ್ಮ ಮತಸಿದ್ಧಾಂತವನ್ನು ಓದಿ ಅಂತಃಕರಣಶುದ್ಧಿಯುಳ್ಳವರಾಗಿ ಸೃಷ್ಟಿಕರ್ತನಾದ ಭಗವಂತನ ಗುಣಾವಳಿಯನ್ನು ತಮ್ಮ ಸ್ವಾಧೀನಪಡಿಸಿಕೊಂಡಿದ್ದು ಶಿಷ್ಯರಿಗೆ ಅವರವರ ಶಕ್ತಿಪಾತಾನುಸಾರವಾಗಿ ಮುಕ್ತಹಸ್ತದಿಂದ ಅನುಗ್ರಹ ಮಾಡುವ ಶಕ್ತಿಯನ್ನು ಪಡೆದಿರಬೇಕು. ಹಾಗಿಲ್ಲದೆ ಗುರುಗಳೂ ಶಿಷ್ಯರಂತೆ ಅಜ್ಞರೇ ಆಗಿದ್ದರೆ ಅಂಥ ಗುರುಗಳಿಂದ ಪ್ರಪಂಚಕ್ಕೆ ಏನೊಂದೂ ಪ್ರಯೋಜನವಾದಂತಾಗಲಿಲ್ಲ. ಸಾಧಾರಣವಾಗಿ ಪಶು, ಪಕ್ಷಿ, ವೃಕ್ಷ, ಲತೆ ಮೊದಲಾದ ಚೇತನಾಚೇತನವಸ್ತುಗಳೂ ಒಂದೊಂದು ಪ್ರಯೋಜನಕ್ಕೆ ಬರುವಲ್ಲಿ, ಕ್ರಿಯಾಸಿದ್ಧಿಯಿಲ್ಲದ ಗುರುಗಳು ಅವುಗಳಿಗಿಂತಲೂ ಲಘುವೆಂದೇ ಭಾವಿಸುವ ಕಾಲವು ಬಂದಿದೆ.

ಜ್ಞಾನಹೀನ ಗುರುಂ ಪ್ರಾಪ್ಯ ಕುತೋ ಮುಕ್ತಿಮವಾಪ್ನುಯಾತ್ |
ಛಿನ್ನನೌಕಾಗತಸ್ಸಿಂಧೋರ್ಯಥಾ ಪಾರಂ ನ ಗಚ್ಛತಿ ||

ಜ್ಞಾನಶೂನ್ಯರಾದ ಗುರುಗಳನ್ನಾಶ್ರಯಮಾಡಿ ಮುಕ್ತಿಯನ್ನು ಪಡೆಯುವೆನೆಂದಪೇಕ್ಷಿಸುವ ಮಾನವನು, ಒಡೆದು ತೂತುಬಿದ್ದಿರುವ ಹಡಗದಲ್ಲಿ ಕುಳಿತುಕೊಂಡು ಸಮುದ್ರವನ್ನು ದಾಟುವೆನೆಂದು ಪ್ರಯತ್ನಪಡುವ ಮೂಢನಿಗೆ ಸಮಾನನಾಗುವನು ಎಂದು ಶ್ರೀಮಹಾಗುರುಗಳಾದ ರೇಣುಕಭಗವತ್ಪಾದರು ಅನುಜ್ಞೆಯನ್ನಿತ್ತಿರುವುದನ್ನು ನೋಡಿದರೆ, ಮಠಾಧಿಕಾರಿಗಳಾದ ಗುರುಗಳು ಶಾಸ್ತ್ರಪಾರಂಗತರಾಗಿಯೂ, ಜ್ಞಾನಿಗಳಾಗಿಯೂ, ಶಮದಮಾದಿಗುಣಸಂಪನ್ನರಾಗಿಯೂ, ವೈರಾಗ್ಯಶಾಲಿಗಳಾಗಿಯೂ, ಲಿಂಗಾಂಗಸಾಮರಸ್ಯಾನುಭವವುಳ್ಳವರಾಗಿಯೂ ಇರಬೇಕೆಂದು ಸ್ಪಷ್ಟವಾಗುವದು "ಮಠಶ್ಛಾತ್ರಾದಿನಿಲಯಃ" ಎಂಬ ಅಮರಕೋಶೋಕ್ತಿಯಂತೆ ಮಠಗಳೆಂದರೆ ಪಾರಮಾರ್ಥಿಕ ವಿದ್ಯೆಯನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಮಂದಿರಗಳಾಗಿರಬೇಕು. ಪೂರ್ವದಲ್ಲಿ ಇಂಥ ಸ್ಥಿತಿಯಲ್ಲಿದ್ದ ಅನೇಕ ಮಠಗಳಲ್ಲಿ ಮಂಗಲಮಯ ವೇದಶಾಸ್ತ್ರಪಠನಧ್ವನಿಗೆ ಬದಲಾಗಿ ಅಮಂಗಲಧ್ವನಿಯು ಕೇಳಬರುತ್ತಲಿದೆ.

ಯಥಾ ವಹ್ನಿಸಂಪರ್ಕಾನ್ಮಲಂ ತ್ಯಜತಿ ಕಾಂಚನಂ |
ತಥೈವ ಗುರುಸಂಪರ್ಕಾತ್ಪಾಪಂ ತ್ಯಜತಿ ಮಾನವಃ ||
ಯಥಾವಹ್ನಿಸಮೀಪಸ್ಥೋ ಜಾತಕುಂಭೋ ವಿಲೀಯತೇ |
ತಥಾ ಪಾಪೋ ವಿಲೀಯೇತ ಆಚಾರ್ಯಸ್ಯ ಸಮೀಪತಃ ||

ಬೆಂಕಿಯ ಸಂಬಂಧದಿಂದ ಬಂಗಾರವು ಹೇಗೆ ದೋಷದಿಂದ ಬಿಡುಗಡೆ ಹೊಂದುತ್ತದೆಯೋ, ಹಾಗೆ ಗುರುಸಂಸರ್ಗವುಳ್ಳ ಮಾನವನು ಪಾಪದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಬೆಂಕಿಯ ಸಮೀಪದಲ್ಲಿರಿಸಿದ ಸುವರ್ಣಕುಂಭವು ಹೇಗೆ ಕರಗಿ ಮಾಯವಾಗುವುದೋ ಹಾಗೆ ಗುರುಗಳ ದರ್ಶನಸಂಭಾಷಣಾದಿ ಸಂಸರ್ಗದಿಂದ ಶಿಷ್ಯನ ಹೃದಯಸ್ಥಾನದಲ್ಲಿ ಗಟ್ಟಿಗೊಂಡಿರುವ ಪಾಪರಾಶಿಯು ಕರಗಿ ಮಾಯವಾಗುವದು ಎಂದು ವೀರಶೈವ ಸಿದ್ಧಾಂತಗ್ರಂಥಗಳಲ್ಲಿ ಗುರುಗಳಿಗೆ ಬಹಳವಾದ ಮಹತ್ವವನ್ನು ಕೊಟ್ಟಿದ್ದಾರೆ. ಗುರುಗಳಿಗೆ ಇಂಥ ಮಹತ್ತ್ವವು ಬರಬೇಕಾದರೆ—

ಶಮೋ ದಮಸ್ತಪಶ್ಶೌಚಂ ಕ್ಷಾಂತಿರಾರ್ಜವಮೇವಚ |
ಜ್ಞಾನವಿಜ್ಞಾನಮಾಸ್ತಿಕ್ಯಂ ಬ್ರಾಹ್ಮಂ ಕರ್ಮ ಸ್ವಭಾವಜಂ ||

ಎಂಬಂತೆ ಅಂತರಿಂದ್ರಿಯನಿಗ್ರಹ, ಬಹಿರಿಂದ್ರಿಯನಿಗ್ರಹ, ತಪಸ್ಸು, ಶೌಚ, ಕ್ಷಾಂತಿ, ಆರ್ಜವ, ಜ್ಞಾನ, ಆಸ್ತಿಕ್ಯ ಮುಂತಾದ ದೈವೀಸಂಪತ್ತುಗಳು ಅವಶ್ಯಕವಾಗಿವೆ. ಇಂಥ ಶಿಷ್ಯರ ಕಲುಷಿತಗಳಾದ ಆತ್ಮವನ್ನು ಶೋಧನ ಮಾಡುವ ದೈವೀಸಂಪತ್ತುಗಳು ಲುಪ್ತಗಳಾಗಿ ಅವುಗಳ ಸ್ಥಾನದಲ್ಲಿ ಕ್ರೋಧ, ದಂಭ, ದರ್ಪ, ಅಜ್ಞಾನ ಮೊದಲಾದ ಆಸುರೀಸಂಪತ್ತುಗಳಿಗೆ ಎಡೆಗೊಟ್ಟುದರಿಂದ ಗುರುಗಳಲ್ಲಿ ಶ್ರದ್ಧೆಯು ಕಡಿಮೆಯಾಗುತ್ತ ಬಂದಿತು. ಗುರುಗಳಿಲ್ಲದೆ ಮಠಗಳು ಬಿದ್ದುಹೋಗುತ್ತಿದ್ದರೂ ಒಬ್ಬರೂ ಕಣ್ತೆರೆದು ನೋಡುವುದೇ ಇಲ್ಲ. ಇದರಿಂದ ಗುರುವನ್ನು ದೇವರನ್ನಾಗಿಯೂ, ಗುರುನಿವಾಸವನ್ನು ದೇವಮಂದಿರವನ್ನಾಗಿಯೂ ಕಾಣಬೇಕೆಂಬ ಸಿದ್ಧಾಂತವಚನವು ವ್ಯರ್ಥವಾಗಿ ಹೋಗುವಂತಾಯಿತು. ಗುರುಗಳು ತಮ್ಮ ಕರ್ತವ್ಯಗಳಲ್ಲಿ ಸಮರ್ಥರಾಗಿದ್ದರೆ ಇಂಥ ಅನಾಹುತಗಳು ನಡೆಯುತ್ತಿರಲಿಲ್ಲ. ರಾಜನು ತನ್ನ ರಾಜಧರ್ಮವನ್ನು ಬಿಟ್ಟು ಸ್ವೇಚ್ಛಾಚಾರಿಯಾದರೆ ಪ್ರಜೆಗಳಿಗೆ ಅಂಥ ರಾಜನಲ್ಲಿ ರಾಜಭಕ್ತಿಯು ಕಡಿಮೆಯಾಗುವಂತೆ, ಗುರುಗಳು ತಮ್ಮ ಕರ್ತವ್ಯಹೀನರಾದರೆ ಶಿಷ್ಯರಿಗೆ ಭಕ್ತಿಯು ಕಡಿಮೆಯಾಗುವದು ಸ್ವಭಾವವೇ ಆಗಿದೆ. ಇಷ್ಟರಿಂದಲೇ ಗುರುವರ್ಗದವರು ಎಚ್ಚತ್ತು ತಮ್ಮ ಮಕ್ಕಳಿಗೆ ಶಾಸ್ತ್ರಾಧ್ಯಯನವನ್ನು ಮಾಡಿಸಿ ತಮ್ಮ ವಂಶಾನುಗತವಾದ ಗುರುಧರ್ಮವನ್ನು ಕಾಪಾಡಿಕೊಂಡು ಜಗದ್ವಂದ್ಯರಾಗಲೆಂದು ಕೋರುತ್ತೇವೆ.

ಅಮೇರಿಕಾದಲ್ಲಿ ಈಚೆಗೆ ನೂತನ ಮಾದರಿಯ ನೌಕೆಗಳು ನೂರುಗಟ್ಲೆ ನಿರ್ಮಾಣವಾಗುತ್ತಲಿವೆ. ಈ ನೌಕೆಗಳು ೧ ಸಹಸ್ರ ಯೋಧರನ್ನೂ, ಟ್ಯಾಂಕುಗಳನ್ನೂ, ದೊಡ್ಡ ಫಿರಂಗಿಗಳನ್ನೂ ಸುಲಭವಾಗಿ ಒಯ್ಯಲು ಸಹಕಾರಿಯಾಗುವವೆಂದು ಹೇಳಲಾಗಿದೆ.

ಯುದ್ಧವಾರ್ತೆ.

ಶೆರ್ಬರ್ಗೋ ರೇವಿನ ಅನುಕೂಲತೆ

ಶೆರ್ಬರ್ಗೋ ರೇವು ಯೂರೋಪಿನ ರೇವುಗಳಲ್ಲಿ ಒಂದು ಒಳ್ಳೆಯ ರೇವು. ರೇವಿನಲ್ಲಿ ಎರಡು ಲಂಗರ್ ಪ್ರದೇಶಗಳಿವೆ. ಹೊರ ಲಂಗರ್ ಪ್ರದೇಶಗಳಲ್ಲಿ ದೊಡ್ಡ ಸಮರ ನೌಕೆಗಳು ಬರಬಹುದು. ಈ ರೇವು ಮಿತ್ರರಿಗೆ ಸಿಕ್ಕಿರುವುದರಿಂದ ದಂಡಯಾತ್ರಾ ಪಡೆಗಳನ್ನು ಇಳಿಸಲೂ ಸರಬರಾಜನ್ನು ಸುಗಮವಾಗಿ ಮಾಡಿಕೊಳ್ಳಲೂ ಬಹಳ ಸಹಕಾರಿಯಾಗಿದೆ.

ಷೆರ್‌ಬರ್ಗೋವಿನಲ್ಲಿ ಜರ್ಮನ್ ಸೈನಿಕರು ಅನುಸರಿಸಿದ ಕದನ ಕ್ರಮ

ಅಮೆರಿಕನ್ ಸೈನಿಕರು ಷೆರ್ಬರ್ಗೋ ರೇವನ್ನು ಪ್ರವೇಶಿಸಿದಾಗ ಅಲ್ಲಿದ್ದ ಅನೇಕ ಸುರಂಗಗಳಿಂದ ಮೊಲಗಳು ಹೊರಬೀಳುವಂತೆ ಜರ್ಮನ್ ಸೈನಿಕರು ಹೊರಕ್ಕೆ ಬಂದು ಪ್ರತಿಭಟಿಸಿದ ಮೇಲೆ ಬಿಲದೊಳಕ್ಕೆ ಹೋಗುತ್ತಿದ್ದರು; ಶತ್ರುಸೈನಿಕರಲ್ಲಿ ಮಿಷನ್‌ಗನ್‌ಗಳಿರುತ್ತಿದ್ದವು. ಅವರನ್ನು ಹೊರಕ್ಕೆ ಬರುವಂತೆ ಮಾಡಲು ಪ್ರಯತ್ನಿಸಿದರೂ ವಿಫಲವಾಯಿತು. ಅಮೇರಿಕನ್ನರ ಜೀವ ಉಳಿಯಬೇಕೆ ಅಥವಾ ಜರ್ಮನರ ಜೀವ ಉಳಿಯಬೇಕೆ ಎಂಬ ಸಮಸ್ಯೆ ಅದರಿಂದುಂಟಾಯಿತು. ಕೊನೆಗೆ ಆ ಸುರಂಗಮಾರ್ಗಗಳನ್ನು ನಾಶಮಾಡಬೇಕಾಯಿತು ಎಂದು ಸುದ್ದಿಗಾರರಾದ ಮಿ|| ಜಾನ್ ಓರ್ಕೈಲಿಯವರು ತಿಳಿಸಿದ್ದಾರೆ.

ಕೇನ್ ದಕ್ಷಿಣದಲ್ಲಿ ಕದನ

ಕೇನ್ ನಗರಕ್ಕೆ ದಕ್ಷಿಣ ಪ್ರದೇಶದಲ್ಲಿ ಅಂದರೆ ಓರ್ನ್ ಆರ್ನ ನದಿಗಳ ಮಧ್ಯ ಪ್ರದೇಶದಲ್ಲಿ ಈಗ ಮಹತ್ತರ ಟ್ಯಾಂಕು ಕದನಗಳು ಆಗುತ್ತಿವೆ. ಇಂಥಾ ಟ್ಯಾಂಕುಗಳ ಕದನವು ಇದುವರೆಗೂ ಆಗಿರಲಿಲ್ಲ. ಜರ್ಮನ್ ಟ್ಯಾಂಕುಗಳಿಗೂ ಮಿತ್ರ ಟ್ಯಾಂಕುಗಳಿಗೂ ಕೇವಲ 30 ಗಜ ಅಂತರವಿದೆ. ಕೇನ್ ನಗರದಿಂದ ಹಿಡಿದು ವಿಲ್ಲೆಬ್ಯಾಕಾಜ್ ಎಂಬ ಹಳ್ಳಿಯವರೆವಿಗೂ ಇರುವ ವಿಶಾಲ ಪ್ರದೇಶದಲ್ಲಿ ಜರ್ಮನರು ಟ್ಯಾಂಕುಗಳನ್ನು ಮಿತ್ರ ಪಡೆಗಳ ಮೇಲೆ ದೂಡಿರುವರು. ಜರ್ಮನರ ರಕ್ಷಣಾ ಸಾಲುಗಳನ್ನು ಭೇದಿಸಿರುವ ಮಿತ್ರ ಪಡೆಗಳಿಗೆ ಸಹಾಯಕವಾಗಿ ಬ್ರಿಟಿಷ್ ಟ್ಯಾಂಕುಗಳೂ ಭೂಸೈನ್ಯಗಳೂ ಓರ್ನ್ ನದಿಯನ್ನು ದಾಟಿ ಒಂದೇ ಸಮನೆ ಬರುತ್ತಿವೆ. ಹೀಗೆ ಜರ್ಮನ್ ಟ್ಯಾಂಕುಗಳು ಕಾಳಗ ಹೂಡಿರುವುದು ಮುಂದೆ ನಡೆಯಬಹುದಾದ ಭೀಕರ ಕಾಳಗಗಳ ಪೀಠಿಕೆ ಮಾತ್ರ ಆಗಿದೆ. ಜರ್ಮನರು ಪ್ರತಿದಾಳಿಗಾರಂಭ ಮಾಡಿಲ್ಲ. ಈ ಪ್ರದೇಶದಲ್ಲಿ ಜರ್ಮನರು ಶೇಖರಿಸಿರುವ ಟ್ಯಾಂಕುಗಳಷ್ಟನ್ನೂ ಇನ್ನೂ ಯುದ್ಧರಂಗಕ್ಕಿಳಿಸಿಲ್ಲ ಎಂದು ಕೆಲವು ಯುದ್ಧ ವಾರ್ತಾದಾರರು ಹೇಳುತ್ತಿದ್ದಾರೆ. ಆದರೂ ಬ್ರಿಟಿಷರ ಎರಡನೇ ಸೈನ್ಯವು ಜರ್ಮನರ ಪ್ರತಿಭಟನೆಯನ್ನು ಎದುರಿಸುತ್ತಾ ಓರ್ನ್ ನದಿಯ ಎರಡು ಮುಖ್ಯ ಸೇತುವೆಗಳನ್ನು ವಶಪಡಿಸಿಕೊಂಡಿದೆ. ಮತ್ತೊಂದು ಸೇತುವೆಗಾಗಿ ಭೀಕರ ಕಾಳಗವಾಗುತ್ತಿದೆ.

ಶೆರ್ಬರ್ಗೋ ಪತನವಾದ ಮೇಲೆ ದಂಡಯಾತ್ರೆಯ ಮೊದಲನೇ ಹಂತವು ಎರಲ್ಪಟ್ಟಿದೆ. ಒಂದು ಘಟ್ಟವು ಮುಕ್ತಾಯವಾಯಿತು. ಈಗ ನಾರ್ಮಂಡಿ ಕದನದ ಎರಡನೆ ಹಂತವನ್ನು ಮಿತ್ರಪಡೆಗಳು ಸಾಧಿಸುತ್ತಿವೆ. ಈ ಹಂತವನ್ನು ಕೇನ್—ಟಿಲ್ಲಿಗಳ ಮಧ್ಯರಂಗದಲ್ಲಿ ದಾಟಬೇಕಾಗಿದೆ. ಈಗ ಪ್ರದೇಶದಲ್ಲಿ ಅಂದರೆ ಕೇನಿಗೆ ನೈರುತ್ಯದಲ್ಲಿ ೭ ಮೈಲಿ ದೂರದಲ್ಲಿರುವ ಸ್ಟೇಷನ್ ಒಂದನ್ನು ಜ|| ಮಾಂಟಗೋಮರಿಯವರ ಪಡೆಯವರು ಹಿಡಿದು ಅಲ್ಲಿಂದ ಮುಂದಕ್ಕೆ ನುಗ್ಗುತ್ತಲಿದ್ದಾರೆ. ಶತ್ರುವಿಗೆ ಭ್ರಾಂತಿಪಡಿಸಲು ಜ|| ಮಾಂಟಗೋಮರಿಯವರು ಹವಾಮಾನವು ಕೆಟ್ಟಿರುವ ದಿನವನ್ನೇ ಉಪಯೋಗಿಸಿಕೊಂಡು ಭೂಪಡೆಯನ್ನು ಆಕ್ರಮಣಕ್ಕೆ ದೂಡಿದಂತಿದೆ. ಈಗಾಗಲೇ ಮಿತ್ರ ಪಡೆಗಳು ೪ ಹಳ್ಳಿಗಳನ್ನು ವಶಪಡಿಸಿಕೊಂಡಿವೆ. ಈ ಪಡೆಗಳಿಗೆ ವಿಮಾನ ಬೆಂಬಲವು ಇರಲಿಲ್ಲ. ಮಾಂಟಗೋಮರಿಯವರ ಮತ್ತೊಂದು ಪಡೆಯು

ಗಗೆ ಸೈನ್ಯಕ್ಕೆ ಕೆಸರು ಬುರುದೆಗಳನ್ನು ಲೆಕ್ಕಿಸದೆ ರಸ್ ನದಿಯ ಉಪನದಿಯೊಂದರ ತೀರದವರೆಗೂ ಂದಿದೆ. ನದಿಯ ಆಚೆ ದಡದಿಂದ ಜರ್ಮನರು ತೀವ್ರ ಾಗಿ ಪ್ರತಿಭಟಿಸುತ್ತಿರುವರು. ಮಿತ್ರ ಪಡೆಗಳು ಸಮಿಾಪಿ ರುವ ನದಿಯ ಎಡದ ಪಕ್ಕದಲ್ಲಿರುವ ಹಳ್ಳಿಯೊಂದರಲ್ಲಿ ಮಿತ್ರ ಪಡೆಗಳಿಗೂ ಶತ್ರು ಪಡೆಗಳಿಗೂ ಕದನವು ಭೀಕರ ಾಗಿದೆ.

ಜರ್ಮನಿಯ ಮೇಲೆ ಮಿತ್ರವಿಮಾನಗಳ ದಾಳಿ

750 ಕ್ಕಿಂತ ಹೆಚ್ಚು ಅಮೆರಿಕಾ ಬಾಂಬರ್ ವಿಮಾನ ಳು ಫೈಟರ್ ವಿಮಾನಗಳ ಬೆಂಗಾವಲಿನಲ್ಲಿ ಹೊರಟು ರ್ಮನಿಯ ವಿಮಾನ ಕಾರ್ಖಾನೆಗಳ ಮೇಲೆ ಪ್ರಬಲ ಾಳಿ ಮಾಡಿದುವು. ಲೀಪ್ಜಿಗ್ ಬಳಿ ಜರ್ಮನರ ಕೃತಕ ಟ್ರೋಲ್ ತಯಾರಿಕಾ ಕಾರ್ಖಾನೆಗಳ ಮೇಲೂ ಯಶಸ್ವಿಯಾಗಿ ದಾಳಿ ಮಾಡಿದುವು. ಮಧ್ಯ ಜರ್ಮ ಯ ಮೇಲೂ ದಾಳಿ ನಡೆಯಿತು

ಸಂಗ್ರಾಮ ಜಾಗ್ರತೆ ಮುಗಿಯುವಂತಿಲ್ಲ

ಜರ್ಮನಿಯ ಮೇಲೆ ನಡೆಸುತ್ತಿರುವ ಸಂಗ್ರಾಮ ಜಾಗ್ರತೆ ಮುಗಿಯಬಹುದಲ್ಲವೆ ಎಂಬುದಾಗಿ ಕಾಮನ್ಸ್ ಭೆಯಲ್ಲಿ ಸದಸ್ಯರೊಬ್ಬರು ಪ್ರಶ್ನಿಸಿದಾಗ "ಶತ್ರುವು ಪ್ರಬಲನಾಗಿದ್ದಾನೆ, ಜರ್ಮನಿಯನ್ನು ಪೂರ್ಣವಾಗಿ ೋಲಿಸಬೇಕಾದರೆ ದೀರ್ಘಕಾಲವಾಗಬಹುದೆಂದೇ ನ್ನ ವೈಯುಕ್ತಿಕ ಅಭಿಪ್ರಾಯ" ಎಂದು ವಿಮಾನ ಾತೆಯ ಅಂಡರ್ ಸೆಕ್ರೆಟರಿ ಕ್ಯಾ|| ಬೆಲ್ಫೋರವರು ಳಿಸಿರುವರು

ವಿಯನ್ನಾ ತೈಲ ಕ್ಷೇತ್ರಕ್ಕೆ ಅಪಘಾತ

ಮೆಡಿಟರೇನಿಯನ್ ತೀರದ ನೆಲೆಗಳಿಂದ 500 ಕ್ಕಿಂತ ಹೆಚ್ಚು ಅಮೆರಿಕನ್ ವಿಮಾನಗಳು ಹೊರಟು ವಿಯನ್ನಾ ಳಿ ಇರುವ ಪೆಟ್ರೋಲ್ ತಯಾರಿಕಾ ಕಾರ್ಖಾನೆಗಳ ಮೇಲೆ ಪ್ರಬಲ ದಾಳಿ ಮಾಡಿದವು. ಈ ವಿಮಾನಗಳಿಗೆ ಜರ್ಮನ್ ವಿಮಾನ ಪ್ರತಿಭಟನೆಯು ತೀವ್ರವಾಗಿತ್ತು. ತ್ರು ವಿಮಾನಗಳ ವ್ಯೂಹವನ್ನು ಭೇದಿಸಿಕೊಂಡು ನುಗ್ಗ ಬೇಕಾಗಿ ಬಂತು. ಅಡಚಣೆ ಮಾಡಿದ ಶತ್ರು ವಿಮಾನ ಗಳಲ್ಲಿ ಅನೇಕವನ್ನು ಉರುಳಿಸಲಾಯ್ತೆಂದು ತಿಳಿದುಬರು ತ್ತದೆ.

ರಿಮಿನಿ-ಪಿಸ್ಸಾ ಕೋಟೆ ಬಳಿ ಶತ್ರು ಸಿದ್ಧತೆ

ಇಟಲಿಯಲ್ಲಿ ಜರ್ಮನರ ಪ್ರತಿಭಟನೆ ತೀವ್ರವಾಗಿದೆ ಯಾದರೂ, ಮಿತ್ರ ಸೈನ್ಯಗಳು ಮುಂದುವರೆಯುತ್ತಲೇ ಇವೆ. ಜರ್ಮನ್ ಸೇನಾನಿ ಜ|| ಕೇಸಲ್ರಿಂಗ್‌ರವರು ರಿಮಿನಿ ಪಿಸ್ಸಾ ಕೋಟೆಗಳ ಬಳಿ ಅನೇಕ ಹಳ್ಳಿಗಳನ್ನು ನಾಶಮಾಡಿ ಅವನ್ನು ಬಲಯುತವಾದ ರಕ್ಷಣಾ ಸ್ಥಾನ ಗಳನ್ನಾಗಿ ಮಾರ್ಪಡಿಸಿಕೊಂಡಿದ್ದಾರೆ. ಪ್ರಾಯಶಃ ಶತ್ರು ಸೇನೆ ಇಲ್ಲಿ ಭೀಕರವಾಗಿ ಪ್ರತಿಭಟಿಸಿ, ಮುತ್ತಿಗೆ ಯನ್ನು ಹಾಕಬಹುದಾದ ಸಂಭವವಿದೆಯೆಂದು ಹೇಳಲಾಗಿದೆ

ಸೈಪಾನ್ ಕದನ ತೀವ್ರವಾಗಿದೆ

ಸೈಪಾನ್ ದ್ವೀಪದ ಆಕ್ರಮಣಕ್ಕಾಗಿ ತೀವ್ರವಾಗಿ ಕಾದು ತ್ತಿರುವ ಅಮೆರಿಕನರಿಗೆ ಜಪಾನರ ಪ್ರತಿಭಟನೆಯು ಬಿರು ಸಾಗಿದೆ. ದ್ವೀಪದ ಪೂರ್ವ ತೀರದಲ್ಲಿ ಬಂದಿಳಿದ ಅಮೆ ರಿಕನ್ ಪಡೆಗಳ ಮೇಲೆ ಜಪಾನರು ಟ್ಯಾಂಕುಗಳನ್ನು ದೂಡಿದರು. ಇವುಗಳಲ್ಲಿ 36 ರನ್ನು ನಾಶಪಡಿಸಲಾಯ್ತು. ಇನ್ನೂ 40 ಟ್ಯಾಂಕುಗಳನ್ನು ಉಪಯೋಗಾರ್ಹವಾಗ ದಂತೆ ಮಾಡಲಾಗಿದೆ. ಇತರ ಕಡೆಯಲ್ಲಿ ಅಮೆರಿಕನರು ತಾವು ಗಳಿಸಿದ್ದ ಸ್ಥಾನಗಳನ್ನು ಬಲಪಡಿಸಿಕೊಂಡಿರುವರು.

ಫಿನ್ಲೆಂಡಿಗೆ ಜರ್ಮನ್ ನೌಕೆಗಳ ಸಹಾಯ

ಜರ್ಮನಿಗೂ ಫಿನ್ಲೆಂಡಿಗೂ ಆಗಿರುವ ನೂತನ ಮಿಲಿಟರಿ ಒಪ್ಪಂದದ ರೀತ್ಯಾ ಫಿನ್ಲೆಂಡಿನ ರಾಜಧಾನಿ ಯಾದ ಹೆಲ್ಸಿಂಕಿ ಬಳಿ ಒಂದು ಜರ್ಮನ್ ಪಾಕೆಟ್ ಯುದ್ಧನೌಕೆ ಮತ್ತು ಒಂದು ಕ್ರೂಸರ್ ಬಂದಿದೆ ಯೆಂದು ಲಂಡನ್ನಿಗೆ ಸುದ್ದಿ ತಲುಪಿದೆ.

ರಷ್ಯದಲ್ಲಿರುವ ಅಮೆರಿಕನ್ ವಿಮಾನ ನೆಲೆಗೆ ಪೆಟ್ಟು

ರಷ್ಯಾದಲ್ಲಿರುವ ಎರಡು ಅಮೆರಿಕನ್ ವಿಮಾನ ನೆಲೆ ಗಳ ಮೇಲೆ ಜರ್ಮನ್ ವಿಮಾನಗಳು ದಾಳಿ ಮಾಡಿದ್ದ ರಿಂದ ಮೂರು ಮಂದಿ ವೈಮಾನಿಕರು ಮಡಿದರು ಮತ್ತು ಕೆಲವು ಬಾಂಬರ್ ವಿಮಾನಗಳು ನಾಶವಾದವು ಎಂದು ಮಾಸ್ಕೋದಲ್ಲಿ ಪ್ರಕಟಿಸಲಾಗಿದೆ

ಇಟಲಿಯಲ್ಲಿ ೩೨ ಸಹಸ್ರ ಶತ್ರು ಯೋಧರ ಕೈಸೆರೆ

ಇಟಲಿಯಲ್ಲಿ ೫ನೆಯ ಸೇನೆ ಅತ್ಯಂತ ತ್ವರಿತದಿಂದ ಸಾಗುತ್ತಾ ಅಲ್ಲಿನ ಮೂರನೆಯ ಮುಖ್ಯ ರೇವಾದ ಲೆಗ್ಹಾರನ್ನಿಗೆ ಕೇವಲ ೫೦ ಮೈಲಿ ದೂರದಲ್ಲಿರುವುದಾಗಿ ಈಚೆಗೆ ಬಂದ ವರದಿ ತಿಳಿಸುತ್ತದೆ. ಇನ್ನೊಂದು ಮಿತ್ರ ಪಡೆ ಮಾಂಟೆಪಿಯನೋ ರಸ್ತೆಗಳ ಸಂಗಮ ಪ್ರದೇಶ ವನ್ನು ಆಕ್ರಮಿಸಿಕೊಂಡು ಈಗ ಸಿಯನಾಕ್ಕೆ ಕೇವಲ ೧೨ ಮೈಲಿ ದೂರದಲ್ಲಿವೆ. ಮಿತ್ರ ಸೇನೆಗಳು ಎಲ್ಲಾ ಕ್ಷೇತ್ರದಲ್ಲೂ ೩೨ ಸಹಸ್ರ ಮಂದಿ ಶತ್ರು ಸೈನಿಕರನ್ನು ಸೆರೆ ಹಿಡಿದಿವೆಯೆಂದು ಹೇಳಲಾಗಿದೆ

ಜಪಾನಿನ ಮೇಲೆ ದಂಡಯಾತ್ರೆ

ಈಚೆಗೆ ಫಿಲಿಪೈನ್ಸ್ ದ್ವೀಪದಾಚೆ ನಡೆದ ನೌಕಾ ಕದನದಲ್ಲಿ ಜಪಾನಿನ ನೌಕಾಪಡೆ ಪರಾಭವಗೊಂಡಿದ್ದು ಯುದ್ಧ ನೀತಿಯಲ್ಲಿ ಬದಲಾವಣೆಗಳು ಆಗುವುದೆಂದೂ ಬರ್ಮಾ ಮತ್ತು ಪೆಸಿಫಿಕ್ ರಂಗಗಳಿಂದ ಜಪಾನನ್ನು ಮುತ್ತಲು ಅಮೆರಿಕಾ-ಬ್ರಿಟನ್ನುಗಳು ಹೇಮಂತಋತು ವಿನಲ್ಲಿ ಆರಂಭಿಸಬಹುದೆಂದೂ ಜಪಾನಿಗಳು ತಿಳಿಸಿರು ವುದಾಗಿ ಚೀಣೀ ಪತ್ರಗಳಲ್ಲಿ ಹೇಳಿಕೆಗಳು ಹೊರಬಿದ್ದಿ ವೆ. ಇದಕ್ಕಾಗಿಯೇ ಜಪಾನರು ಚೀಣದಲ್ಲೂ ಫಿಲಿಪೈನ್ ದ್ವೀಪಗಳಲ್ಲೂ ವಿಶೇಷ ಯುದ್ಧಸಿದ್ಧತೆಗಳನ್ನು ಮಾಡಿ ಕೊಳ್ಳುತ್ತಿರುವುದು ಎಂದೂ ಈ ಚೀಣೀ ಪತ್ರಗಳಲ್ಲಿ ದೃಢಪಟ್ಟಿವೆ

ರಷ್ಯಯುದ್ಧರಂಗ

ಶ್ವೇತರಷ್ಯಾದ ಪ್ರಮುಖ ನಗರಗಳಲ್ಲೊಂದಾದ ಬೋಬ್ರೂಯ್ಸ್ಕ ರಷ್ಯನರ ವಶವಾದಂತೆಯೇ ಎಂದು ಪ್ರಕಟಿಸಲಾಗಿತ್ತು. ಆ ನಗರವನ್ನು ರಷ್ಯನ್ ಪಡೆಗಳು ಸಂಪೂರ್ಣವಾಗಿ ವಶಪಡಿಸಿಕೊಂಡಿವೆಯೆಂದು ಈಗ ಸುದ್ದಿ ಬಂದಿದೆ. ಈ ನಗರವನ್ನು ಸ್ವಾಧೀನಪಡಿಸಿಕೊಳ್ಳಲು ಅತ್ಯುಗ್ರ ಕಾಳಗ ನಡೆಯಿತು. ಶತ್ರುಗಳ ಕಡೆ 1600 ಮಂದಿಗೆ ಸಾವುನೋವಾಯಿತು. ಅಲ್ಲದೆ 8000 ಮಂದಿ ಶತ್ರು ಸೈನಿಕರು ಸೆರೆಸಿಕ್ಕಿದರು. ಮೊಹಿಲೆವ್ ನಗರದಿಂದ ರಷ್ಯನ್ ಸೇನೆ ಈಗ ಇನ್ನೂ 22 ಮೈಲಿ ದೂರ ನುಗ್ಗಿ ಪೋಲೋಟ್ಸ್ಕ ನಗರಕ್ಕೆ ಹೋಗುವ ರೈಲ್ವೆ ಹೆದ್ದಾರಿ ಯನ್ನು ಅನೇಕ ಸ್ಥಳಗಳಲ್ಲಿ ಕತ್ತರಿಸಿಹಾಕಿದೆ. ಮುರ್ ಮಾನ್ಸ್ಕ್‌ನಿಂದ ಹಿಡಿದು ಲೆನಿನ್‌ಗ್ರಾಡ್‌ವರೆಗಿರುವ ರೈಲ್ವೆಯು ಪೂರ್ತಿಯಾಗಿ ಈಗ ರಷ್ಯನರ ಹಸ್ತಗತವಾಗಿ ಅದನ್ನೀಗ ಅವರು ಉಪಯೋಗಿಸಿಕೊಳ್ಳುತ್ತಿದ್ದಾರೆ. ಶ್ವೇತರಷ್ಯದಲ್ಲಿ ರಷ್ಯನ್ ಸೇನೆ ಈ ರೀತಿ ಜಯಗಳ ಮೇಲೆ ಜಯಗಳನ್ನು ಗಳಿಸುತ್ತಿರುವುದಕ್ಕೆ ರಷ್ಯನ್ ಸೇನಾನಿ ಜನರಲ್ ರೋಕೋಸೊವ್‌ಸ್ಕಿಯವರ ವ್ಯೂಹ ರಚನಾಕೌಶಲ್ಯವೇ ಕಾರಣ; ಈಗ ಅವರಿಗೆ ಗೌರವ ಚಿಹ್ನೆ "ಮಾರ್ಷಲ್ ಆಫ್ ಸೋವಿಯೆಟ್ ಯೂನಿ ಯನ್" ಪದವಿಯನ್ನು ಕೊಡಲಾಗಿದೆ. ಮೊಹಿಲೆವ್ ನಗರಕ್ಕೆ ಉತ್ತರದಲ್ಲಿ ನೂರಾರು ಮೈಲಿಗಳ ದೂರದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಇತರ ರಷ್ಯನ್ ಸೈನಿಕರು ಓನೇಗಾ ಸರೋವರದ ಪಶ್ಚಿಮಮಾರ್ಗದತಟದಲ್ಲಿರುವ ಒಂದು ಮುಖ್ಯ ನಗರವನ್ನು ಆಕ್ರಮಿಸಿಕೊಂಡಿದ್ದಾರೆ. ಶ್ವೇತರಷ್ಯಾರಾಜಧಾನಿಯಾದ ಮಿನ್‌ಸ್ಕ್ ನಗರದಮೇಲೆ ನಾಲ್ಕೂ ಕಡೆಗಳಿಂದ ರಷ್ಯನ್ ಪಡೆಗಳು ಮುತ್ತಿಗೆ ಹಾಕಲಾರಂಭಿಸಿವೆ. ಓರ್ಷಾ ಜೋ ಬ್ರೂಯ್ಸ್ಕ್-ಮಿನ್‌ಸ್ಕ್ ಈ ಮಧ್ಯೆ ಇರುವ ತ್ರಿಕೋಣಾಕಾರವಾದ ಕ್ಷೇತ್ರದಲ್ಲಿ ಜರ್ಮನ್ ಸೇನೆ ರಷ್ಯನ್ ಆಘಾತದಿಂದ ತಳಮಳಿಸುತ್ತಿದೆ

ದೂರಪ್ರಾಚ್ಯ ವಿಮಾನ ಪಡೆ

ದೂರಪ್ರಾಚ್ಯ ವಿಮಾನ ಪಡೆ ಎಂಬ ಹೆಸರಿನಲ್ಲಿ ಒಂದು ನೂತನ ವಿಮಾನ ಪಡೆಯನ್ನು ಏರ್ಪಡಿಸಲಾ ಗುತ್ತದೆ. ಮತ್ತು ಈ ಪಡೆಯ ಪ್ರಧಾನ ಕಛೇರಿ ಆಸ್ಟ್ರೇ ಲಿಯದಲ್ಲಿರುತ್ತದೆ—ಎಂಬುದಾಗಿ ಜ|| ಮೆಕ್ ಆರ್ಥರ್ ಕಛೇರಿಯ ವಿಶೇಷ ಪ್ರಕಟಣೆ ತಿಳಿಸುತ್ತದೆ. ಜಪಾನರ ಮೇಲೆ ಜಯಪ್ರದವಾಗಿ ದಾಳಿಗಳನ್ನು ನಡೆಸಿ ಖ್ಯಾತಿವೆ ತ್ತಿರುವ 7ನೆಯ ಮತ್ತು 13ನೆಯ ವಿಮಾನ ದಳಗಳು ಈ ನೂತನ ಪಡೆಯಲ್ಲಿ ಸೇರಿಕೊಂಡಿವೆ

ಇಂಫಾಲ್ ಕದನ ಮುಕ್ತಾಯವಾದ್ದಕ್ಕೆ ಮಣಿಪುರದ ರಾಜರ ಸಂತೋಷ

ಇಂಫಾಲಿನ ಮೇಲೆ ಜಪಾನರು ಹಾಕಿದ್ದ ಮುತ್ತಿಗೆ ಯನ್ನು ಸಂಪೂರ್ಣವಾಗಿ ಹಿಮ್ಮೆಟ್ಟಿಸಲಾಗಿದೆ. ಈ ಬಗ್ಗೆ ಮಣಿಪುರದ ಮಹಾರಾಜರು ತಮ್ಮ ಸಂತೋಷ ವನ್ನು ವ್ಯಕ್ತಪಡಿಸಿದ್ದಾರೆ. ಇಂಫಾಲ್ ಮುತ್ತಿಗೆಯನ್ನು ತಡೆಯಿಸಲು ಸಾಹಸ ತೋರಿದ ಪಡೆಗಳಲ್ಲಿ ಆಗ್ನೇಯ ಏಷ್ಯಾ ಕಮ್ಯಾಂಡಿನ ದಂಡನಾಯಕರಾದ ಮೌಂಟ್ ಬ್ಯಾಟನರವರು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ ಸಂದೇಶ ಒಂದನ್ನು ಮಿತ್ರ ಪಡೆಗಳಿಗೆ ಕಳುಹಿಸಿದ್ದಾರೆ. ಈಗ ವಿಷ್ಣುಪುರ ಕ್ಷೇತ್ರದಲ್ಲೂ ಪಾಲೆಲ್-ಟಾಮೂಗಳ ಬಳಿಯೂ ಉಳಿದುಳಿದ ಜಪಾನರನ್ನು ಇದುವರೆವಿಗೂ ತೋರಿದ ಶೌರ್ಯದಿಂದ ಮಿತ್ರ ಪಡೆಗಳು ಓಡಿಸುವುವೆಂದು ತಾವು ಸಂಪೂರ್ಣ ಭರವಸೆ ಇಟ್ಟುಕೊಂಡಿರುವುದಾಗಿ ಮೌಂಟ್‌ಬ್ಯಾಟನರವರು ಸಂದೇಶದಲ್ಲಿ ತಿಳಿಸಿದ್ದಾರೆ

ಭಾರತೀಯ ಯೋಧನಿಗೆ 'ಜಾರ್ಜ್ ಕ್ರಾಸ್' ಪ್ರಶಸ್ತಿ

ಇಟಲಿ ರಂಗದಲ್ಲಿ ಕಷ್ಟ ಸಂದಿಗ್ಧದಲ್ಲಿ ಬಹಳ ಶೌರ್ಯ ಸಾಹಸಗಳಿಂದ ಕಾರ್ಯತತ್ಪರತೆ ತೋರಿಸಿದಕ್ಕಾಗಿ ಸುಬೇ ದಾರ್ ಸುಬ್ರಮಣ್ಯಂರವರಿಗೆ 'ಜಾರ್ಜ್ ಕ್ರಾಸ್' ಪ್ರಶಸ್ತಿ ಪದಕವನ್ನು ದಯಪಾಲಿಸಲಾಯಿತು. ಈ ಪದ ಕವನ್ನು ಪಡೆದ ಭಾರತೀಯರಲ್ಲಿ ಇವರೇ ಮೊದಲನೆ ಯವರು. ಇವರು ಕಾರ್ಯತತ್ಪರರಾಗಿದ್ದಾಗ ನಿಧನರಾ ದರು. ಆಫ್ರಿಕಾರಂಗದಲ್ಲಿ ಇವರಿಗಾಗಲೇ ಭಾರತ ಡಿಸ್ಟಿಂಗ್ವಿಷ್ಡ್ ಮಿಲಿಟರಿ ಸರ್ವಿಸ್ ಮೆಡಲು ಕೊಡ ಲ್ಪಟ್ಟಿತು.

ಸ್ವೀಕಾರ

ಕಲಘಟಗಿ ತಾ|| ನೆಲ್ಲಿಹರವಿಗ್ರಾಮದಲ್ಲಿ ಪೂರ್ವದ ಶ್ರೀಹಾಲುಮಠಸ್ವಾಮಿಗಳ ಮಠವು ಬಿದ್ದುಹೋಗಿ ಅದರ ಲ್ಲಿದ್ದ ಸ್ವಾಮಿಗಳ ಗದ್ದುಗೆಯು ಮಣ್ಣಿನಲ್ಲಿ ಹೂತು ಹೋಗಿದ್ದದ್ದನ್ನು ಪಾಟೀಲ ಪುಟ್ಟನಗೌಡರು ಸಲಹೆಯ ಮೇರೆ ಶೋಧಮಾಡಿ ತೆಗೆದು ಪೂಜಾದಿಗಳನ್ನು ನಡೆಸಿದ ಸಂತೋಷ ಸಮಯದಲ್ಲಿ ಪ್ರಸಾದೋಪಣಕ್ಕಾಗಿ ನೆಲ್ಲಿ ಹರವಿ ಹಿರೇಮಠದ ಸಿದ್ಧರಾಮಯ್ಯನವರು 1 ರೂಪಾಯಿ ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಧತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ ೦—೬—೦

ಶ್ರೀ ರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ ೦—೬—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ [illegible] ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೮ × ೧೪ ಬೆಲೆ ೦—೪—೦

ಸದ್ಯೋಜಾತಾದಿ [illegible] ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ ೨—೪—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೨—೪—೨

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೧ ೬

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೧ ೬

ಶ್ರೀ ಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ ೨ ೧ ೬

ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × [illegible] ೨—೪ ೦

ಶ್ರೀ ಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ —೧ ೬

ಶ್ರೀ ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ —೧ ೬

ಶ್ರೀ ಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು [illegible] ಫೋಟೋ ೨—೧—೬

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು [illegible] —[illegible]—೦

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ ೨—೧—೬

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ ೨—೧—೬

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೧ —೬

ಶ್ರೀ ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ೨—೧ ೬

ಬೆಂಗಳೂರ ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ ೧ ೬

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಪ್ರಮಾಣವಾದುದು [illegible] ಸಿದ್ಧಾಂತಶಿಖಾಮಣಿ ಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸಹ [illegible] ತತ್ವಗ್ರಂಥಗಳಲ್ಲೆಲ್ಲ ಇದೇ [illegible] ಈ ಗ್ರಂಥವು [illegible] ವಿಶಾರದ [illegible] **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವ ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದು. ಇದಕ್ಕೆ ಇದುವರೆಗೆ ಅನೇಕರು [illegible] ಆದರೆ [illegible] ಈ [illegible] **ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ [illegible] ಈ ಗ್ರಂಥವನ್ನು [illegible] ವ್ಯಾಖ್ಯಾನದ ಮಹತ್ವವು [illegible] ಬಹು ಕ್ರಮವಹಿಸಿ [illegible] ವಿಷಯಾನುಕ್ರಮಣಿಕೆಯೂ [illegible] ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು [illegible] ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥ ಸೌಂದರ್ಯವು [illegible] ಈ ಗ್ರಂಥವನ್ನು [illegible] ಅವಶ್ಯವಾಗಿ [illegible] **ಬೆಲೆ ೨ ರೂಪಾಯಿ**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಸಿದ್ಧತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀ ಗುರುತತ್ವ್ತಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ಬಿಲ್ವಮಾಹಾತ್ಮ್ಯ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವ ಅಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೬ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
* ಮಾಹೇಶ್ವರ ದೀಕ್ಷಾವಿಧಿ ([illegible] ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
* ವೈದಿಕಶಿವಪೂಜಾವಿಧಿ ([illegible])	೧ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ ([illegible])	೧। ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೨ನೆಯ ಆವೃತ್ತಿ ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪ್ರಬಂಧ (ಕನ್ನಡ ಭಾಷಾಟೀಕಾ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೬ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य–संस्कृत)	१ रु
सिद्धान्तशिखामणि (मूल)	८ आ.
नन्दिकेश्वरकारिका (संस्कृत)	२ आ

* ಈ ಗುರ್ತು ಹಾಕಿರುವ ಪುಸ್ತಕಗಳು ಮುಗಿದುಹೋಗಿರುವುದರಿಂದ ದೊರೆಯುವುದಿಲ್ಲ ಕೆಲವು ಪುಸ್ತಕಗಳು ಮುಗಿಯುತ್ತ ಬಂದಿರುವುದರಿಂದಲೂ ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದಲೂ ಅವುಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಪಂಚಾಚಾರ್ಯ [illegible] ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಪ್ರಕಾಶಕರಾದ ವೇದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಮುಂಗಡವಾಗಿ ಕೊಡುವವರಿಗೆ ೩ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೦ನೇ ಜುಲೈ ೧೯೪೪ [ಸಂಚಿಕೆ ೧೧

ಶ್ರೀಹಿಮವತ್ಕೇದಾರ ಪೀಠದಲ್ಲಿ ಆಂಗ್ಲೋ ಸಂಸ್ಕೃತ ಹೈಸ್ಕೂಲ್ ಸ್ಥಾಪನೆ

ಶ್ರೀಜಗದ್ಗುರು ಹಿಮವತ್ಕೇದಾರ ಏಕೋರಾಮಶೀರ ಉಖಾಮಠದಲ್ಲಿ ತಾ॥ 1–7–1944 ದಿವಸ ಆಂಗ್ಲೋ ಸಂಸ್ಕೃತ ಹೈಸ್ಕೂಲಿನ ಉದ್ಘಾಟನ ಸಮಾರಂಭವು ನಡೆಯುವದೆಂದು ಹಿಂದೆ ತಿಳಿಸಲಾಗಿತ್ತು ಈ ಸಮಾರಂಭಕ್ಕೆ ಜಿಲ್ಲಾ ಕಲೆಕ್ಟರ್ ಸಾಹೇಬರಿಗೆ ಆಮಂತ್ರಣ ಕೊಟ್ಟಿದ್ದರು ಕಲೆಕ್ಟರರು ತಾ॥ 18–6–44 ರಲ್ಲಿಯೇ ಉಖಾಮಠಕ್ಕೆ ಬರುವದಾಗಿ ತಿಳಿಸಿದ್ದರಿಂದ ಜುಲೈ ೧ನೇ ತಾರೀಖು ನಡೆಯಬೇಕಾಗಿದ್ದ ಉದ್ಘಾಟನ ಸಮಾರಂಭವನ್ನು ಜೂನ್ ತಿಂಗಳ 19ನೆಯ ತಾರೀಖಿನ ದಿವಸವೇ ನಡೆಸಬೇಕಾಯಿತು 19ನೆಯ ತಾರೀಖು ಸೋಮವಾರ 4 ಘಂಟೆಗೆ ಸರಿಯಾಗಿ ಕಲೆಕ್ಟರರನ್ನು ವಾದ್ಯ ವೈಭವದಿಂದಲೂ, ವಿದ್ಯಾರ್ಥಿಗಳ ರಾಷ್ಟ್ರಗೀತೆಗಳಿಂದಲೂ, ಆಗಮಿಸಿದ್ದ ಸದ್ಗೃಹಸ್ಥರ ಸಮೂಹದಿಂದಲೂ ವಿರಾಜಿಸುತ್ತಿದ್ದ ಭವ್ಯ ಸಭಾಮಂಟಪಕ್ಕೆ ಬರಮಾಡಿಕೊಂಡು ಸುಸಜ್ಜಿತವಾದ ಉಚ್ಚಾಸನದ ಮೇಲೆ ಮಂಡಿಸಿದ ನಂತರ ಸರ್ವಸಮ್ಮತಿಯಿಂದ ಕಲೆಕ್ಟರ್ ಸಾಹೇಬ ಬಹದ್ದೂರರವರಿಗೆ ಸಭೆಯ ಸಭಾಪತಿ ಪೀಠವನ್ನು ಸ್ವೀಕರಿಸುವಂತೆ ಮಹಾವಿದ್ಯಾಲಯದ ಪ್ರೆಸಿಡೆಂಟರಾದ ಪಂ॥ ಏಸ್ ಸೇಯವಾಲ್, ಬಿ ಎ, ಎಲ್ ಎಲ್ ಬಿ, ಇವರು ಸೂಚಿಸಿದರು ಅದಕ್ಕೆ ಶ್ರೀ ೧೦೮ ಜಗದ್ಗುರುಗಳವರು ಅನುಮೋದನವನ್ನಿತ್ತರು ತರುವಾಯ ಜಗದ್ಗುರುಗಳವರು ಆಂಗ್ಲೋ ಸಂಸ್ಕೃತ ಹೈಸ್ಕೂಲಿನ ಅವಶ್ಯಕತೆಯ ವಿಷಯವಾಗಿ ಭಾಷಣ ಮಾಡಿದರು ಅನಂತರ ಮಿ॥ ಸೇಯವಾಲ, ಬಿ ಎ, ಎಲ್.ಎಲ್.ಬಿ., ಪಂ॥ ಜಿ. ಡಿ. ಮೈಠಾಣಿ, ಎಂ.ಎ, ಎಲ್ ಎಲ್ ಬಿ, ಪ್ರಿನ್ಸಿಪಾಲ್ ಇವರ ಭಾಷಣಗಳಾದ ಮೇಲೆ ಶ್ರೀಮಂತ ಕಲೆಕ್ಟರ್ ಸಾಹೇಬರವರಿಂದ ಉದ್ಘಾಟನ ಕಾರ್ಯವು ನೆರವೇರಿಸಲ್ಪಟ್ಟಿತು ಅನಂತರ ಸಭಾಪತಿಗಳು ಬಹು ಮನೋಹರವಾಗಿ ಭಾಷಣ ಮಾಡಿದರು ಅನಂತರ ಮಹಾವಿದ್ಯಾಲಯದ ಸೆಕ್ರೆಟರಿಯವರು 1943 ನೆಯ ವರ್ಷದ ಮಹಾವಿದ್ಯಾಲಯದ ಜಮಾ ಖರ್ಚಿನ ವರದಿಯನ್ನೂ ಮತ್ತು ಮಹಾವಿದ್ಯಾಲಯವು ಸ್ಥಾಪಿಸಲ್ಪಟ್ಟಂದಿನಿಂದ ಅಲ್ಲಿಯವರೆಗೆ ನಡೆದ ಕಾರ್ಯಕ್ರಮಗಳ ರಿಪೋರ್ಟನ್ನೂ ಓದಿ ಹೇಳಿದರು ಇದಾದ ಮೇಲೆ ಮಹಾವಿದ್ಯಾಲಯದ ಪ್ರಿನ್ಸಿಪಾಲರಾದ ಪಂ॥ ಜಿ ಡಿ ಮೈಠಾಣಿಯವರು ಸಭಾಪತಿಗಳಿಗೂ ಮತ್ತು ಸಭಿಕರಿಗೂ ಸಭೆಗೆ ದಯಮಾಡಿಸಿದ ಬಗ್ಗೆ ಧನ್ಯವಾದವನ್ನಿತ್ತರು 6 ಘಂಟೆಗೆ ಸರಿಯಾಗಿ ಆಚಾರ್ಯ ಜಯಘೋಷದೊಡನೆ ಸಭಾ ಕಾರ್ಯವು ಸಮಾಪ್ತಿಗೊಂಡಿತು

ಮಾಯೀಶ ಪ್ರಸಾದ ಶಾಸ್ತ್ರಿ
ಸೆಕ್ರೆಟರಿ, ಮಹಾವಿದ್ಯಾಲಯ,
ಉಖಾಮಠ, (ಹಿಮಾಲಯ)

ಕ್ಷಯರೋಗ

ಈಗೀಗ ಕ್ಷಯರೋಗದ ವಿಚಾರವು ಬಹಳ ದೊಡ್ಡ ಸಮಸ್ಯೆಯಾಗಿದೆ ಈ ವ್ಯಾಧಿಯಿಂದಾಗುವಷ್ಟು ಅರ್ಥಹಾನಿಯೂ, ಪ್ರಾಣಹಾನಿಯೂ ಮತ್ತಾವ ವ್ಯಾಧಿಯಿಂದಲೂ ಆಗುತ್ತಲ್ಲಿಲ್ಲ ವ್ಯಾಧಿಯು ಹರಡುವುದಕ್ಕೆ ಸರ್ವಸಾಮಾನ್ಯವಾದ ಪ್ರಧಾನ ಕಾರಣಗಳಾವುವೆಂದರೆ—

1 ಆರೋಗ್ಯಶಾಸ್ತ್ರವಿಚಾರವಾದ ಸಾಮಾನ್ಯ ವಿಷಯಗಳಲ್ಲಿಯೂ ಜನಗಳಿಗೆ ತಿಳುವಳಿಕೆಯಿಲ್ಲದಿರುವುದು

2 ಬಡತನದ ದೋಷದಿಂದ ಹೊಟ್ಟೆತುಂಬ ಆಹಾರವು ಸಿಕ್ಕದಿರುವುದು

3 ಊಟಕ್ಕೆ ತಟ್ಟೆಗಳನ್ನು ಉಪಯೋಗಿಸುವುದು ಮತ್ತು ಕಂಡಕಡೆಗಳಲ್ಲಿ ಉಗುಳುವುದು

4 ಗಾಳಿಯ ಮೂಲಕವಾಗಿ ಮತ್ತು ಗಾಡಿಗಳ ಸಂಚಾರದಿಂದ ಧೂಳು ಎಬ್ಬುವುದು

5 ಶರೀರದ ಶಕ್ತಿಯನ್ನು ತಗ್ಗಿಸುವ ವಾಯುಗುಣ (ಎಂದರೆ, ಎಂಟು ತಿಂಗಳುಗಳ ಕಾಲವೂ ಅತ್ಯುಷ್ಣವಾಗಿದ್ದು, ಅದರಮೇಲೆ ಮಳೆಗಾಲದಲ್ಲಿ ಮೂರು ತಿಂಗಳು ಉಷ್ಣವು ಸ್ವಲ್ಪ ಕಡಿಮೆಯಾಗಿ, ತರುವಾಯ ಒಡನೆ ವಾಯುಗುಣದಲ್ಲಿ ಚಳಿಯು ಹೆಚ್ಚುವುದು)

6 ಸಣ್ಣದೊಂದು ಮನೆಯಲ್ಲಿ ಜನಸಂದಣಿಯು ವಿಶೇಷವಾಗಿ ಹೆಚ್ಚಿರುವುದು ಅಥವಾ ಮನೆಗಳಲ್ಲಿ ರೋಗಗಳ ಸೋಂಕು ಹರಡಿರುವುದು

7 ಈ ಕೆಳಗೆ ಕೊಟ್ಟಿರುವ ಕೆಲವು ಕಟ್ಟ ಸಾಮಾಜಿಕ ಪದ್ಧತಿಗಳೂ ವ್ಯಾಧಿಕಾರಣಗಳಾಗಿವೆ

(1) ಘೋಷಾಪದ್ಧತಿ (2) ದೊಡ್ಡದೊಡ್ಡ ಕುಟುಂಬಗಳು ಒಟ್ಟಿಗೆ ವಾಸಿಸುವುದು ಹೀಗೆ ಒಟ್ಟಿಗೆ ವಾಸ ಮಾಡುವುದರಿಂದ, ಕ್ಷಯರೋಗದಿಂದ ನರಳುತ್ತಿರುವವರನ್ನು ಪ್ರತ್ಯೇಕವಾಗಿಟ್ಟು, ಅವರಿಂದ ಮನೆಯಲ್ಲಿರುವ ಇತರರಿಗೂ, ಮಕ್ಕಳಿಗೂ, ಆ ರೋಗದ ಸೋಂಕು ತಗುಲದಂತೆ ನೋಡಿಕೊಳ್ಳಲು ಅಸಾಧ್ಯವಾಗುವುದು. (3) ಒಂದೇ ತಟ್ಟೆಯಲ್ಲಿ ಅನೇಕರು ಊಟಮಾಡುವುದೂ, ಮಹಮ್ಮದೀಯರ ಪದ್ಧತಿಯಂತೆ, ಒಂದೇ ಕೊಳವೆಯಲ್ಲಿ ಹಲವರು ಹುಕ್ಕಾ ಸೇದುವುದೂ (4) ಮಕ್ಕಳಿಗೆ ಬಾಲ್ಯವಯಸ್ಸಿನಲ್ಲಿಯೇ ವಿವಾಹಮಾಡುವುದೂ, ರೋಗಪ್ರಾಪ್ತಿಗೆ ಕಾರಣಗಳು

ಮೇಲೆ ಹೇಳಿದ ಕಾರಣಗಳ ಜತೆಗೆ ಇನ್‌ಫ್ಲುಯೆಂಜಾ ಆಮಶಂಕೆ, ಮಲೇರಿಯಾ, ವಿಷಮಜ್ವರ ಮುಂತಾದ ಉಷ್ಣದೇಶದ ಇನ್ನೂ ಅನೇಕ ವ್ಯಾಧಿಗಳು ಬರುವುದರಿಂದ ಅವು ಮೊದಲೇ ಬಲಹೀನರಾಗಿರುವವರ ಶಕ್ತಿಯನ್ನು ಇನ್ನೂ ತಗ್ಗಿಸಿ ಅವರನ್ನು ಕ್ಷಯರೋಗಕ್ಕೆ ಸುಲಭವಾಗಿ ಗುರಿಮಾಡುವುವು

ನಮ್ಮ ದೇಶದಲ್ಲಿ ಮರಣ ಸಂಖ್ಯೆಯು ಹೆಚ್ಚಾಗಿರುವುದಕ್ಕೆ ಈ ಕೆಳಗೆ ಬರೆದಿರುವುವು ಮುಖ್ಯ ಕಾರಣಗಳು

1 ವಾಯುಗುಣದಲ್ಲಿ ಉಷ್ಣವು ಹೆಚ್ಚಿರುವುದೊಂದು ಈ ಕಾರಣದಿಂದ ಅನೇಕ ವ್ಯಾಧಿಗಳು ತಲೆದೋರಿ, ಜನಗಳಿಗೆ ರೋಗಬಾಧೆಗಳನ್ನು ತಡೆಯುವ ಶಕ್ತಿಯು ಕಡಿಮೆಯಾಗಿರುವದು

2 ಹೆಂಗಸರಿಗೆ ಸ್ವಾಭಾವಿಕವಾದ ಲಜ್ಜಾಸ್ವಭಾವದಿಂದಲೂ, ಅವರ ಘೋಷಾಪದ್ಧತಿಯಿಂದಲೂ, ಅವರು ತಾವು ಬಾಧೆಪಡುತ್ತಿರುವ ವ್ಯಾಧಿಗಳ ಸೂಚನೆಗಳೆಲ್ಲವನ್ನೂ ತಮ್ಮಲ್ಲಿಯೇ ಮರೆಸಿಡುವರು

3 ಒಬ್ಬೊಬ್ಬರಾದರೂ ಕ್ಷಯರೋಗದಿಂದ ಬಾಧೆಪಡದಿರುವ ಮಹಮ್ಮದೀಯ ಕುಟುಂಬಗಳೇ ಕಡಿಮೆ ಹಿಂದೂ ಜನಾಂಗದಲ್ಲಿ ಇದರ ಹಾವಳಿಯು ಹೆಚ್ಚಾಗಿದ್ದರೂ ಮಹಮ್ಮದೀಯರಲ್ಲಿರುವಷ್ಟು ಹೆಚ್ಚಿಲ್ಲ ಹಿಂದೂಗಳು ಉಡುಪುಗಳಲ್ಲಿಯೂ ಆಚಾರವ್ಯವಹಾರಗಳಲ್ಲಿಯೂ ಮಹಮ್ಮದೀಯರಿಗಿಂತ ಹೆಚ್ಚು ಶುಚಿಯಾಗಿರುವರು ದಿನಕ್ಕೊಂದು ಸಲವಾದರೂ ತಪ್ಪದೆ ಸ್ನಾನ ಮಾಡುವರು ಪರ್ದಾಪದ್ಧತಿಯಲ್ಲಿಯೂ ಅಷ್ಟು ಕಠಿನ ನಿಯಮವುಳ್ಳವರಾಗಿಲ್ಲ ಒಟ್ಟಿನಲ್ಲಿ, ಹೆಚ್ಚು ಆರೋಗ್ಯಕರವಾದ ರೀತಿಯಲ್ಲಿ ಜೀವನಮಾಡುತ್ತಿರುವರು ಆದುದರಿಂದಲೇ ಹಿಂದೂ ಸಮಾಜದಲ್ಲಿ ಇದರ ಹಾವಳಿಯು ಕಡಿಮೆಯಾಗಿದೆ ಯುವಕರಿಗಿಂತ ಯುವತಿಯರಲ್ಲಿ ಈ ವ್ಯಾಧಿಯ ಪ್ರಾಬಲ್ಯವು ಹೆಚ್ಚು

ಅಲಹಾಬಾದಿನಲ್ಲಿ ಅಚ್ಚುಮೊಳೆ ಜೋಡಿಸುವವರು, ದರ್ಜಿಗಳು, ಕಟುಕರು, ಮನೆಯಾಳುಗಳು ಮತ್ತು ಗುಮಾಸ್ತರು ಈ ಕಸುಬಿನವರಲ್ಲಿಯೇ ಹೆಚ್ಚುಮಂದಿ ಈ ರೋಗಕ್ಕೆ ತುತ್ತಾಗಿರುವರು

ಶಾಸ್ತ್ರೀಯವಾದ ರೋಗಲಕ್ಷಣವನ್ನು ಪರೀಕ್ಷಿಸಿ ನೋಡುವುದಾದರೆ ಈ ರೋಗವು ಪಾಶ್ಚಾತ್ಯದೇಶಗಳಲ್ಲಿರುವುದಕ್ಕೂ ಇಲ್ಲಿರುವುದಕ್ಕೂ ಬಹಳ ಭೇದವುಂಟೆಂದು ನಮಗೆ ಚೆನ್ನಾಗಿ ನಿದರ್ಶನಕ್ಕೆ ಬಂದಿದೆ ಇಲ್ಲಿ ಹೊರಗಿನ ಕಾರಣಗಳಿಂದ ದೇಹದಲ್ಲಿ ವ್ಯಾಪಿಸುವ ಮತ್ತು ಶ್ವಾಸಕೋಶಗಳಿಗೆ ಸಂಬಂಧಿಸಿ ಬಹು ಬೇಗನೆ ತೀವ್ರವಾದ ಅಪಾಯವನ್ನು ತರುವ ಕ್ಷಯರೋಗವು ಬಹು ಪ್ರಬಲವಾಗಿದೆ ಪಾಶ್ಚಾತ್ಯ ದೇಶಗಳಲ್ಲಿ ಯಾದರೋ ದೇಹದಲ್ಲಿ ಒಂದೇಕಡೆ ಅಂಕುರಿಸಿ ದೀರ್ಘಕಾಲದ ವ್ಯಾಧಿಯಾಗಿ ಪರಿಣಮಿಸುವ ಕ್ಷಯಜಾತಿಯು ಹೆಚ್ಚಾಗಿದೆ ಎರಡನೆಯದೇನೆಂದರೆ, ತರುಣವಯಸ್ಕರಲ್ಲಿ ಜಠರ ಸಂಬಂಧವಾದ ಕ್ಷಯವೂ ಹೆಚ್ಚಾಗಿದೆ

4 ಇಲ್ಲಿ ಅಂತಹ ರೋಗಿಗಳಿಗೆ ಶುದ್ಧವಾದ ಗಾಳಿಯ ಮೈದಾನದ ಚಿಕಿತ್ಸೆಗಾಗಿ ರೋಗಿಯನ್ನು ನದಿಯ ಮೇಲೆ ದೋಣಿಗಳಲ್ಲಿ ಕೂರಿಸಿಕೊಂಡು ಹೋಗುವುದು ಬಹಳ ಉತ್ತಮವಾದ ಚಿಕಿತ್ಸಾ ಕ್ರಮವು ಇದಲ್ಲದೆ ಕ್ಷಯರೋಗವು ಹೇಗೆ ವೃದ್ಧಿಯಾಗುವುದು ಅದರ ಲಕ್ಷಣಗಳೇನೆಂಬುದನ್ನೂ ಅದರ ನಿವಾರಣೋಪಾಯಗಳನ್ನೂ ಜನಗಳಿಗೆ ತಿಳಿಸುತ್ತಿದ್ದು ಅದು ವ್ಯಾಪಿಸದಂತೆ ತಡೆಯುವುದಕ್ಕೆ ತಕ್ಕ ನಿವಾರಣೋಪಾಯಗಳನ್ನು ನಡೆಯಿಸಬೇಕು ಅಲ್ಲಲ್ಲಿ ಸಂಘಗಳ ಮೂಲಕವಾಗಿಯೂ ಇದಕ್ಕೆ ಸಹಾಯವನ್ನೊದಗಿಸಿಕೊಳ್ಳಬೇಕು ಹೀಗೆ ಮಾಡುವುದರಿಂದ ಇದರಿಂದ ಈಗ ಸಂಭವಿಸುತ್ತಿರುವ ಪ್ರಾಣನಾಶವನ್ನು ಬಹುಮಟ್ಟಿಗೆ ಕಡಿಮೆಮಾಡಬಹುದು

ಶ್ರೀಜಗದ್ಗುರು ಕಾಶೀಪೀಠದ ಮುಂದಿನ ಅಧಿಪತಿಗಳು



ಚಿದರೆಮಠಾಧ್ಯಕ್ಷರಾದ ವೇ|| ಪಂಡಿತ ವೀರಭದ್ರಶಾಸ್ತ್ರಿಗಳವರು

ಶ್ರೀ ಕಾಶೀ ಕ್ಷೇತ್ರದಲ್ಲಿ ನೆಲಸಿದ್ದ ಶ್ರೀಜಗದ್ಗುರು ವಿಶ್ವಾರಾಧ್ಯ ದರ್ಮಪೀಠಾಧಿಪತಿಗಳಾಗಿದ್ದ ಶ್ರೀಜಗದ್ಗುರು ಪಂಚಾಕ್ಷರಶಿವಾಚಾರ್ಯ ಮಹಾಸ್ವಾಮಿಗಳವರು ಕಳೆದ ವೈಶಾಖ ಮಾಸದಲ್ಲಿ ಶಿವಾಧೀನರಾದ ವಿಷಯವು ನಮ್ಮ ಪತ್ರಿಕಾವಾಚಕರಿಗೆಲ್ಲಾ ತಿಳಿದುದಾಗಿದೆ. ಪರಂಧಾಮವನ್ನೈದಿದ ಶ್ರೀಗಳವರು ತಾವು ಜೀವಿಸಿರುವಾಗಲೇ ಆ ಮಹಾಪೀಠಕ್ಕೆ ಯಾರು ಅರ್ಹರೆಂಬುದನ್ನು ಪೂರ್ಣವಾಗಿ ಆಲೋಚಿಸಿ ಸುಪ್ರಸಿದ್ಧರೂ ಶುದ್ಧಚರಿತ್ರರೂ ತಪಸ್ವಿಗಳೂ ಮಹಾಮೇಧಾವಿಗಳೂ ಆಗಿರುವ ಚಿದರೆಮಠಾಧ್ಯಕ್ಷರಾದ ವೇ|| ಪಂಡಿತ ಶ್ರೀವೀರಭದ್ರಶಾಸ್ತ್ರಿಗಳವರ ಹೆಸರಿಗೆ ವಿಲ್ಲನ್ನು ಬರೆದು ರಿಜಿಸ್ಟರು ಮಾಡಿಸಿರುವದನ್ನು ನೋಡಿದರೆ, ಶ್ರೀಗಳವರ ದೂರದೃಷ್ಟಿ ಎಷ್ಟೆಂದು ಇಲ್ಲವೆಂದು ಹೇಳಬಹುದಾಗಿದೆ. ಪಂಡಿತ ವೀರಭದ್ರಶಾಸ್ತ್ರಿಗಳವರು ಮಹಾಬುದ್ಧಿಶಾಲಿಗಳು, ಅಸಾಧಾರಣ ಪಂಡಿತರೂ ನಾನಾ ಭಾಷಾ ಲಿಪಿಗಳನ್ನು ಬಲ್ಲವರೂ ಮಹಾಪ್ರೌಢಶಾಲಿಗಳೂ ವಾಕ್ಪಟುಗಳೂ ಆಗಿರುವರಲ್ಲದೆ, **ವೇದತೀರ್ಥ, ಸ್ಮೃತಿತೀರ್ಥ, ಕಾವ್ಯತೀರ್ಥ,** ಸಾಹಿತ್ಯವಿಶಾರದ, ವಿದ್ಯಾರತ್ನ, ವಿದ್ಯಾನಿಧಿ ಇತ್ಯಾದಿ ಪದವೀವಿಭೂಷಿತರೂ ಆಗಿರುವರು. ಈ ಕಾಲದಲ್ಲಿ ಇವರಷ್ಟು ಪದವಿಗಳನ್ನು ಪಡೆದವರು ಯಾರೂ ಇಲ್ಲವೆಂದು ಬರೆದರೆ ಅತಿಶಯೋಕ್ತಿಯೆನಿಸಲಾರದು. ಒಟ್ಟಿಗೆ ಇವರು ಸಾರಸ್ವತಪ್ರಪಂಚಕ್ಕೆ ಅಲಂಕಾರಪ್ರಾಯರಾಗಿರುವರು.

ಗುರುಪೀಠಗಳನ್ನು ಇಂತಹ ವ್ಯಕ್ತಿಗಳೇ ಅಲಂಕರಿಸಬೇಕು. ಇಂತಹ ವ್ಯಕ್ತಿಗಳಿಂದಲೇ ಪೀಠಗಳು ಮುಂದೆ ಬರಬೇಕಾಗಿವೆ. ಕಾಶೀಪೀಠವು ಜ್ಞಾನಪೀಠವೆನಿಸಿರುವದರಿಂದ, ಇವರು ತಮ್ಮ ಜೀವಮಾನದಲ್ಲಿ ಸಂಗ್ರಹಿಸಿರುವ ೮೧೦ ಸಾವಿರ ಗ್ರಂಥಗಳ ದೊಡ್ಡ ಲೈಬ್ರರಿಯು ಆ ಜ್ಞಾನಪೀಠದ ಹೆಸರಿಗೆ ಅನ್ವರ್ಥಕತೆಯನ್ನುಂಟುಮಾಡತಕ್ಕದಾಗಿದೆ. ಇವರ ಕಾಲದಲ್ಲಿ ಕಾಶೀಪೀಠವು ಸರ್ವತೋಮುಖವಾಗಿ ಮುಂದುವರಿಯುವದೆಂಬ ಸದುದ್ದೇಶದಿಂದಲೇ ಪೂರ್ವದ ಶ್ರೀಗಳವರು ಇವರನ್ನು ನಿಯಮಿಸಿರುವದು ಅತ್ಯಂತ ಸ್ತೋತ್ರಾರ್ಹವಾಗಿದೆ. ಪಂಡಿತ ಶ್ರೀವೀರಭದ್ರಶಾಸ್ತ್ರಿಗಳವರು ಕಾಶೀಜಗದ್ಗುರು ಪೀಠಕ್ಕೆ ಅಧಿಪತಿಗಳಾಗುವರೆಂಬ ವಿಷಯವನ್ನು ತಿಳಿದು ಕರ್ಣಾಟಕಾಂಧ್ರಮಹಾರಾಷ್ಟ್ರದೇಶಗಳಲ್ಲಿರುವ ಗುರುಭಕ್ತರೆಲ್ಲರೂ ಸಂತೋಷಸಾಗರದಲ್ಲಿ ಮುಳುಗಿರುವರು. ಪಟ್ಟಾಭಿಷೇಕಸಮಾರಂಭವು ಬರುವ ಆಶ್ವಯುಜ ಶುದ್ಧದಲ್ಲಿ ನೆರವೇರತಕ್ಕದ್ದಾಗಿದೆ. ಆ ಕಾಲಕ್ಕೆ ಅನೇಕಜನ ಗುರುಭಕ್ತರು ನಾನಾ ದೇಶಗಳಿಂದ ಆಗಮಿಸತಕ್ಕವರಾಗಿದ್ದಾರೆ. ಅಗ್ಗೆ ಆಗಮಿಸುವವರೆಲ್ಲರೂ ಆ ಮಹಾಪೀಠದ ಜೀರ್ಣೋದ್ಧಾರದ ಬಗ್ಗೆ ತಮ್ಮ ಶಕ್ತಿಮೀರಿ ಸೇವೆಯನ್ನು ಸಲ್ಲಿಸಿ ನೂತನ ಪೀಠಾಧಿಪತಿಗಳ ಮನಸ್ಸನ್ನು ಸಂತೋಷಪಡಿಸಬೇಕೆಂದೂ, ಶ್ರೀಜಗದ್ಗುರು ವಿಶ್ವಾರಾಧ್ಯರ ಅನುಗ್ರಹಬಲದಿಂದ ಈ ನೂತನಾಧಿಪತಿಗಳ ಕಾಲದಲ್ಲಿ ಆ ಮಹಾಪೀಠವು ಸರ್ವತೋಮುಖವಾಗಿ ಪ್ರಕಾಶಿಸುವಂತಾಗಲೆಂದೂ ಆ ಪೂಜ್ಯಪಾದರನ್ನು ಅನನ್ಯಸಾಧಾರಣಭಕ್ತಿಭಾವದಿಂದ ಭಜಿಸುತೇವೆ.

ಯುದ್ಧವಾರ್ತೆ.

ವಿಮಾನ ಬಾಂಬ್ ದಾಳಿ ನಿಲ್ಲಿಸಲು ಹಿಟ್ಲರನ ಷರತ್ತು

ಈಗ ದಕ್ಷಿಣ ಬ್ರಿಟನ್ನಿನ ಮೇಲೆ ಹಾರಿಬರುತ್ತಿರುವ ವಿಮಾನ ಬಾಂಬುಗಳ ದಾಳಿಯನ್ನು ಒಂದು ಕರಾರಿನ ಮೇಲೆ ನಿಲ್ಲಿಸುವನಂತೆ. ಜರ್ಮನರು ಮಧ್ಯಸ್ಥರ ಮುಖಾಂತರ ಹೇಳಿಕೆಯನ್ನು ಹೊರಡಿಸಿರುವರು. ಜರ್ಮನಿಯ ಮೇಲೆ ಅವ್ಯಾಹತವಾಗಿ ನಡೆಯುತ್ತಿರುವ ಮಿತ್ರವಿಮಾನ ದಾಳಿಗಳು ನಿಲ್ಲಬೇಕೆಂಬುದೇ ಈ ಕರಾರಿನ ವಿಷಯವಾಗಿದೆ. ಆದರೆ ಬ್ರಿಟಿಷ್ ವೃತ್ತಗಳಲ್ಲಿ ಈ ಬಗ್ಗೆ ಯಾವ ಸಂದೇಶಗಳೂ ಇರುವುದಿಲ್ಲ. ಈಗಾಗಲೇ ಈ ವಿಮಾನ ಬಾಂಬುಗಳ ದಾಳಿಯನ್ನು ತಡೆಯಲು ಸಿದ್ಧವಾಗಿರುವುದರಿಂದ ಜರ್ಮನಿಯ ಮೇಲೆ ದಾಳಿ ನಿಲ್ಲಿಸುವ ಪ್ರಶ್ನೆ ಇಲ್ಲವೆಂದು ಚರ್ಚಿಲ್ಲರು ಖಚಿತವಾಗಿ ತಿಳಿಸಿರುವರು.

ಜರ್ಮನಿ ಶರಣಾಗಬಾರದೆಂದು ಹಿಟ್ಲರನ ಸೂಚನೆ

ಜರ್ಮನಿಯಲ್ಲಿ ಯುದ್ಧದ ಸಲಕರಣೆಗಳ ತಯಾರಿಕೆಯನ್ನು ಅಧಿಕಗೊಳಿಸುವಂತೆ ಶಸ್ತ್ರ ತಯಾರಿಕಾ ಶಾಲೆಗೆ ಸ್ಫೂರ್ತಿಕೊಡುವ ನಿಮಿತ್ತ ಹಿಟ್ಲರನು ಪ್ರಮುಖರನ್ನು ಬರಮಾಡಿಕೊಂಡು ಅವರಿಗೆ ಉಪದೇಶ ಮಾಡಿದನು. ಆತನು ಅವರನ್ನು ಕುರಿತು— ಇಂದಿನ ಯುಗವನ್ನು ಹಿಗ್ಗುತ್ತಿರುವ ಘಟನೆಗಳ ದೃಷ್ಟಿಯಿಂದ ನೋಡಿ ಪ್ರಪಂಚವು ಇಂಥ ಮಹಾಸಂಗ್ರಾಮವನ್ನು ತಾತ್ಕಾಲಿಕ ಜಯಾಪಜಯಗಳು ಯುದ್ಧವನ್ನು ನಿರ್ಣಯಿಸತಕ್ಕವಲ್ಲ. ಮಹಾಸಂಗ್ರಾಮಗಳೆಲ್ಲ ಮಹತ್ತರ ಯುದ್ಧದಲ್ಲಿ ಪ್ರತಿಯೊಬ್ಬ ಜರ್ಮನ್ ಪ್ರಜೆಯೂ ಅಧಿಕಾರಿಗಳನ್ನು ನಂಬಿಸದ ವಿಜಯ ಸಾಧಿಸಲು ವರ್ಷವೂ ಹೆಚ್ಚಿನ ಶ್ರಮವಹಿಸಬೇಕು. ಇದು ಅವರ ಕರ್ತವ್ಯ. ನಾವು ಶರಣಾಗತರಾಗಲು ಏನೇನೂ ಒಪ್ಪಲಾರದು. ಈಗ ನಾಲ್ಕು ವರ್ಷಗಳಿಂದ ವಿಷಯದ ಮೇಲೆ ವಿಜಯವನ್ನು ಸಾಧಿಸಿರುವ ನಾವುಗಳು ಈಗ ಸೋಲುತ್ತಿದ್ದೇವೆಂದು ಯಾರಾದರೂ ನಂಬುತ್ತಾರೆಯೇ? ಇಲ್ಲ. ನಾವು ಎಷ್ಟು ಕಷ್ಟವಾದರೂ ಹೋರಾಡಿ ವಿಜಯ ಸಾಧಿಸುತ್ತೇವೆ. ಇದು ಕೇವಲ ಸಿಪಾಯಿಯ ಸಂಗ್ರಾಮವಲ್ಲ, ವಿಜ್ಞಾನವೇತ್ತರೂ ಭಾಗವಹಿಸಬೇಕಾದ ಯುದ್ಧ. ನಮ್ಮ ಶತ್ರುಗಳು ಅನೇಕ ಉದ್ಯಮಗಳಲ್ಲಿ ನಮ್ಮೊಡನೆ ಸಮಾನತೆ ಸಾಧಿಸಿಕೊಂಡಿದ್ದಾರೆ. ಅವರು ನಮ್ಮನ್ನು ಪರಾಭವಗೊಳಿಸಲು ನಾವು ಆಸ್ಪದ ಕೊಡಬಾರದು ಎಂದು ಹೇಳಿದನು.

ತಿರಸ್ಕೃತವಾದ ಶಾಂತಿಸಲಹೆಗಳು

ಜರ್ಮನ್ ವಿದೇಶಾಂಗ ಕಚೇರಿಯಿಂದ ಶಾಂತಿ ಒಪ್ಪಂದ ಮಾಡಿಸುವುದರಲ್ಲಿ ನಿಪುಣರಾದ ೫ ಮಂದಿ ಅಧಿಕಾರಿಗಳು ಸೆವಿಲ್‌ನಲ್ಲಿದ್ದಾರೆಂಬ ಸುದ್ದಿ ನಿನ್ನೆ ರಾಜಕೀಯ ವೃತ್ತಗಳಿಗೆ ತಿಳಿದುಬಂದಾಗ ಅಲ್ಲೆಲ್ಲ ಆಶ್ಚರ್ಯಚಕಿತರಾದರು. ಬಹು ಪ್ರಾಮುಖ್ಯದ ಚರ್ಚೆಗಳನ್ನು ನಡೆಸುವುದಕ್ಕಾಗಿ ಪೋರ್ಚುಗೀಸ್ ಪ್ರಧಾನಿ ಡಾ|| ಸಾಲಾಜಾರ್‌ರವರೂ ಸಹ ಸೆವಿಲ್ ಪ್ರಯಾಣಮಾಡಿದರೆಂಬ ಸುದ್ದಿ ಕೇಳಿ ಇನ್ನೂ ಕುತೂಹಲವುಂಟಾಗಿದೆ. ಈ ಘಟನೆಗಳಿಗೆ ತಕ್ಕಂತೆ ಲಿಸಬನ್ನಿನಲ್ಲಿರುವ ಬ್ರಿಟಿಷ್ ಅಧಿಕಾರಿ ಮಿ|| ಹೆಚ್ ಎಲ್ ಹಾಪ್ಕಿನ್‌ಸನ್‌ರವರು ಇದ್ದಕ್ಕಿದ್ದಂತೆಯೇ ಲಂಡನ್ನಿಗೆ ವಾಪಸು ಬಂದಿರುವುದು ಈ ಸುದ್ದಿಗೆ ಇನ್ನೂ ಪ್ರಾಮುಖ್ಯತೆಯನ್ನು ಕೊಡುತ್ತಿದೆ. ಸೆವಿಲ್‌ಗೆ ಸಾಲಾಜಾರರವರು ಒಂದವೇಳೆ ಅವರು ಬ್ರಿಟನ್ನಿ ಪೋರ್ಚುಗೀಸ್ ರಾಯಭಾರಿಯಾಗಿರುವ ಪಾಲ್ಮೆಲ ಡ್ಯೂಕ್‌ರನ್ನು ಲಂಡನ್ನಿಗೆ ಕಳುಹಿಸಿದರೆಂದು ತಿಳಿದುಬಂದಾಗಿದೆ.

ಪ್ರೋಚುಗಲ್ಲಿನಲ್ಲಿ ದೀರ್ಘಕಾಲವಿದ್ದ ಫಾಲ್ಸ ಲ್ಲಿ ಡ್ಯೂಕರು, ಈಗ ಲಂಡನ್ನಿನಲ್ಲಿ ವಿದೇಶೀಯರಾಯಭಾರಿಗಳ ವ [illegible] ಕಲ ಗಿದ್ದ ನಿರ್ಧಾರವನ್ನು ತಗದುಹಾಕು ವುದರಿಂದ ಅಲ್ಲಿ [illegible] ಇರುವುದಾಗಿ ಪ್ರೋಚುಗೀಸ್ ರಾಯಭಾರಿ [illegible] ವಿಧಾರಿಸಿದ್ದರಿಂದ [illegible] ಬಂದಿದ ಮಿ| [illegible] ಸಹ [illegible] ಯನ್ನು ಪಡೆದುಕೊಳ್ಳಲು [illegible] ಹೇಳಲ್ಪಡು ತ್ತಿದೆ [illegible] ಶ್ಯಂಬಾ [illegible] "ಶಿಷ್ಟರನು [illegible] ಜನು [illegible] ಸ್ವಾತಂತ್ರ್ಯ [illegible] ನಿಂ [illegible] ಸ್ವತಂತ್ರವಿರಬೇಕು [illegible] ಬಂದಿದ

ಜರ್ಮನರ ಹೊಸ ಯುಬೋಟುಗಳ ನಡೆ

[illegible]

[illegible] ಅಮೇರಿಕನರು [illegible]

[illegible] ನಗರವನ್ನು ಹಿಡಿಯಲು [illegible] ಪಟ್ಟಣ [illegible] ಪಡೆಗ [illegible] ಶತ್ರು ಪ್ರತಿಭಟನೆಯು ತೀವ್ರ [illegible] ಯಿಂ [illegible] ಬ್ರಾಡ್ಲೆಯವ [illegible] ತ್ವದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಅಮೇರಿಕ ಪಡೆಗಳಲ್ಲಿ ಕೆಲವು ಲಾ ಹೇ ನಗರವನ್ನು ಬಳಸಿಕೊಂಡು ಎರಡು ಮೈಲಿ ಪ್ರದೇಶವನ್ನು ಹಿಡಿದಿವೆ ಕರಂಟಾನ್ ಲಾ ಹೇ ಮಾರ್ಗದಲ್ಲಿ ಇತರ ಅಮೇರಿಕ ಪಡೆಗಳು ರಸ್ತೆಯಲ್ಲಿ ಇನ್ನೂ ೧೫೦೦ ಗಜದೂರ ಮುನ್ನುಗ್ಗಿವೆ ಈ ಪ್ರದೇಶ ದಲ್ಲಿ ಜರ್ಮನರ ಫಿರಂಗಿಗಳ ದಾಳಿಯು ಭಯಂಕರ ವಾಗಿದೆ ಆದರೂ ಕ್ರಮವಾಗಿ ಅಮೇರಿಕನ್ ಒತ್ತಡಕ್ಕೆ ಹಿಂದೆ ಹಿಂದಕ್ಕೆ ಸರಿಯುತ್ತಿರುವರು ಕೇನ್ ಬಳಿ ಕ್ರಿಕ್ ಹಳ್ಳಿಯನ್ನು ಹಿಡಿದ ಕೆನಡಾ ಪಡೆಗಳು ಆ ಹಳ್ಳಿಯ ಬಳಿ ಇರುವ ವಿಮಾನ ನೆಲೆಯನ್ನು ಹಿಡಿಯಲು ಪ್ರಯತ್ನಿಸಿದವು ವಿಮಾನ ನೆಲೆಯ ಉತ್ತರ ಪಾರ್ಶ್ವ ದಲ್ಲಿ ಕೆನಡಾ ಸೈನ್ಯಗಳು ಬೇರೂರಿರುವುವು ಇತರ ದಿಗ್ಭಾಗಗಳಲ್ಲಿ ಜರ್ಮನರು ನಲೆಸಿರುವರು [illegible] ಶೀದಿಯ ವರದಿ ಪ್ರಕಾರ ಜರ್ಮನರು ಕೆನಡಾ ಪಡೆಗಳು ನೆಲೆಸಿರುವ ಜಾಗದ ಮೇಲೆ ಕೇ ನಗರದಿಂದ ಟ್ಯಾಂಕು ಗಳನ್ನೂ ಇತರ ವಿಧ ಯುದ್ಧ ಸಲಕರಣೆಗಳನ್ನೂ ತರಿಸಿ ಕೊಂಡು ನುಗ್ಗಿದರು ಕೆನಡಾ ಪಡೆಗಳು ಆಕ್ರಮಿಸಿದ ಜಾಗಗಳನ್ನು ಪುನಃ ವಶಪಡಿಸಿಕೊಂಡರು ಕೆನಡಾ ಪಡೆಗಳಿಗೆ ಮೂರು ಪಟ್ಟಿತೆಂದು ಹೇಳಲಾಗಿದೆ ಆದರೆ ಮಿತ್ರ ಅಧಿಕಾರಿಗಳು ಹೇಳುವಂತೆ ಕೆನಡಾ ಪಡೆಗಳು ದಕ್ಷಿಣ ಪಡೆಯಲು ಯಂತುಗಿರುವ ಕಾರಣ ಜರ್ಮನ ದಿಗ್ಭಂಧಪಟ್ಟಿನ ಜಯ ದೊರೆತಿಲ್ಲವೆಂದು ಹೇಳಬೇಕಾಗಿದೆ

ಇದುವರವಿಗೂ ಮಿತ್ರ ಪಡೆಗಳು ೧೬೦೩ ಚ ಮೈಲಿ ಪ್ರದೇಶವನ್ನು ಹಿಡಿದಿರುವುವು, ಕಳೆದ ಮೂರು ದಿನ ಗಳಿಂದ ನಡೆದ ಮಿತ್ರ ದಾಳಿಯ ಪರಿಣಾಮ [illegible] ಜರ್ಮನರ ನೂರಾರು [illegible]

ಬಾಲ್ಟಿಕ್ ರಾಷ್ಟ್ರಗಳನ್ನು ಹಿಡಿಯಲು ರಷ್ಯದ ಪ್ರಯತ್ನ

[illegible]

ನಿಟ್ಟಿನಿಂದೋಡಲು ಶತ್ರು ಪ್ರಯತ್ನ

[illegible]

೧೨೦ ಜರ್ಮನ ವಿಮಾನಗಳು ರಷ್ಯನರ ವಶ

[illegible] ತ್ತಿದ ರಷ್ಯನ [illegible] ಸರಾಬಿಯಾವು ತ್ತಿಯವ [illegible] ೧೦೦ ವಿಮಾನಗಳನ್ನು ರಷ್ಯನರು ಸ್ವಾಧೀನಪಡಿಸಿಕೊಂಡಿದ್ದಾರೆ

ಇಟಲಿಯಲ್ಲಿ ತೀವ್ರ ಶತ್ರು ಪ್ರತಿಭಟನೆ

ಇಟಲಿಯ ಎಲ್ಲಾ ಕ್ಷೇತ್ರಗಳಲ್ಲಿ ಶತ್ರು ಪ್ರತಿಭಟನೆ ತೀವ್ರವಾಗಿದೆ ಲೆಗ್ಹಾರ್ನ್ ರೇವನ್ನು ಎಲ್ಲಾ ವಿಧ ದಿಂದಲೂ ಮಿತ್ರರ ವಶವಾಗದಂತೆ ರಕ್ಷಿಸಲು ಜರ್ಮ ನರು ಪ್ರತಿಭಟಿಸುತ್ತಿರುವರು ಶತ್ರು ಪ್ರತಿಭಟನೆಯ ತೀವ್ರತೆಯು ಈ ರೇವಿನ ಕಡೆ ಮುನ್ನುಗ್ಗುತ್ತಿರುವ ಅಮೇರಿಕನ್ ಪಡೆಗಳ ವೇಗವನ್ನು ತಡೆಗಟ್ಟಿದೆ ಆದರೂ ಅಮೇರಿಕನ್ ಸೇನೆಗಳು ಈ ರೇವಿಗೆ ೧೬ ಮೈಲಿ ದೂರದವರೆವಿಗೂ ಬಂದಿವೆ ಸೀನ್ [illegible] ನಗರಕ್ಕೆ ನೈರುತ್ಯ ವಾಯುವ್ಯ ಪ್ರದೇಶಗಳಲ್ಲಿ ಮಿತ್ರ ಸೈನ್ಯಗಳು ಮುಂದುವರಿದಿವೆ ಫ್ಲಾರೆನ್ಸ್ ಕಡೆ ಮುನ್ನುಗ್ಗುತ್ತಿರುವ ಮಿತ್ರರ [illegible] ಸೈನ್ಯದ ಮುಂಚೂಣಿ ಪಡೆಗಳು ಮುಂದೆ ಮುಂದೆ ಓಡುತ್ತಿವೆ ಅರಸ್ಸೊ ನಗರಕ್ಕೆ ಪೂರ್ವದಲ್ಲಿರುವ ಕಣಿವೆಯಲ್ಲಿ ಈ ಮುಂದೋಟವು ನಡೆಯುತ್ತಿರುವುದು ಎಂದು ಮಿತ್ರ ಕಚೇರಿಯ ಪ್ರಕಟನೆ ತಿಳಿಸಿದೆ

ಭಾರತೀಯ ಪಡೆಗಳ ಪ್ರಶಂಸೆ

ಮಿತ್ರರ [illegible] ಸೈನ್ಯದಲ್ಲಿ ಕಾರ್ಯಕರ್ತ ನಡೆಸು ತ್ತಿರುವ ಭಾರತೀಯ ಪಡೆಗಳ ವಿಷಯದಲ್ಲಿ [illegible] ಸೈನ್ಯದ ಪತ್ರಿಕೆ ಬಹಳ ಪ್ರಶಂಸೆಯನ್ನು ಮಾಡಿದೆ " ನಾರ

[illegible] ಸಾಹಸ [illegible] ಬರೆದಿದೆ

ವಿಮಾನ ಬಾಂಬುಗಳ ವಿಷಯವಾಗಿ ಕಾಮನ್ಸ್ ಸಭೆಯಲ್ಲಿ ಚರ್ಚಿಲ್ಲರ ವಿವರಣೆ

[illegible] ಸಮಿತಿಯ ಪ್ರಧಾನ [illegible] ಇರುವರು ಈ ಸಮಿತಿಯ ಪ್ರಧಾನ [illegible] ನಮ್ಮ ನಿರ್ಧಾರ [illegible] ಗಳನ್ನು ತಡೆಯುವ ಪ್ರಯತ್ನ ನಡೆಸುವ [illegible] ನಾವು ಇದಿಯಲ್ಲಿ ನಡೆಯುತ್ತಿರುವ ಕಾರ್ಯಕ್ರಮ [illegible] ಯಾದದು ಎಂದು ತಿಳಿಸಿರುತ್ತಾರೆ

ಸ್ವೀಕಾರ

[illegible] ತಾ| ವೃಂದಾವನ ಹಳ್ಳಿ [illegible] ಮನೆ ಚೈಕೇಗೌಡರ ಪುತ್ರಿ ಚಿ|| ಸೌ|| ಸಿದ್ದಮ್ಮನನ್ನು ಸದರಿ ವೃಂದಾವನ ಹಳ್ಳಿ ರಾ|| ವರುಳಗೌಡರ ಪುತ್ರ ಚಿ|| ಮರುಳಸಿದ್ದೇಗೌಡನಿಗೆ ಕೊಟ್ಟು ನಡೆಸಿದ ವಿವಾಹ ಮಹೋತ್ಸವ ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ ಸವ ರ್ಪಿಸಲ್ಪಟ್ಟ 1 ರೂಪಾಯಿಯು ಮ|| ರಾ|| ಎ ಚನ್ನಪ್ಪ ಸ್ಕೂಲ್‌ಮಾಸ್ಟರ್ ಇವರ ದ್ವಾರಾ ತಲ್ಪಿರು ತ್ತದೆ

[illegible] ತಾ|| ಬಿಸ್ಲಹಳ್ಳಿ ಗ್ರಾಮದ ಮ|| ರಾ|| ಕಲ್ಲಪ್ಪನವರ ತಾಯಿ ಸಿದ್ದಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ಮತ್ತು [illegible] ಹೊಂಪ್ರಾ [illegible] ಗ್ರಾಮದ ಮ|| ರಾ|| ಬಸವೇಗೌಡರು ತಮ್ಮ ಸ್ವಗೃಹ ದಲ್ಲಿ ನಡೆಸಿದ ಶ್ರೀವಿವಾಹ [illegible] ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿ ಒಟ್ಟು 3 ರೂಪಾಯಿಗಳು [illegible] ಬಸವೇಗೌಡರ ದ್ವಾರಾ ತಲ್ಪಿರುತ್ತವೆ

ಈ ಸೇವೆಯಿಂದ ಸುಪ್ರಸನ್ನರಾದ ಶ್ರೀ ಜಗದ್ಗುರು ಪಂಚಾಚಾರ್ಯರು [illegible] ನಿತ್ಯಮಂಗಳವನ್ನೀಯುವರೆಂದು ಪ್ರಾರ್ಥಿಸುತ್ತೇವೆ

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಮನೋಹರವಾದ ಫೋಟೋಗಳು.

ಶ್ರೀ [illegible] ಸೈಜು ೨೦ × ೧೪ ಬೆಲೆ ಒಕ್ಕೆ	೦—೬—೦
